
ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

೧೨ ನೇ ಶತಮಾನದ

# ಶರಣ ಸ್ಮಾರಕಗಳು

## ಬಸವಕಲ್ಯಾಣದಿಂದ ಕೂಡಲಸಂಗಮದವರೆಗೆ

ಡಾ. ಜಯಶ್ರೀ ದಂಡೆ, ಡಾ. ವೀರಣ್ಣ ದಂಡೆ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬

# ಭಾಗ-೧

# ಬಸವಕಲ್ಯಾಣ ಪರಿಸರದ ಶರಣ ಸ್ಮಾರಕಗಳು

ವ್ಯಾಳೆಯ ಬಂದರ ಯಾರಿಗಿ ನೆನೆಯಲಿ
ಕಲ್ಯಾಣ ನಗರದ ಶರಣರ । ನೆನೆದರ
ಬಂದ ಸಂಕಷ್ಟ ಬಯಲಾಗಿ

## ಕಲ್ಯಾಣದಣ್ಣ ನೀ ಬಾರೊ ಬಸವಣ್ಣ

ಕಲ್ಯಾಣದಣ್ಣ ನೀ ಬಾರೊ ಬಸವಣ್ಣ
ನೀ ಬರದಿರಲು ಜಗಕೆಲ್ಲ ಅಳಿಗಾಲವಣ್ಣ ಬಾ ಬಸವಣ್ಣ ॥ ಪ ॥

ಸತ್ಯ ಸಹಧರ್ಮ ಶೀಲವು ಕ್ಷಯವಾಗಿದೆ
ಮಿಥ್ಯ ಮರೆ ಮೋಸಗಳಿಗೆಲ್ಲ ಜಯವಾಗಿದೆ
ಭಕ್ತಿ ಭಂಡಾರವು ಮುಕ್ತಿ ಮಂದಿರವು
ನಿತ್ಯ ಜೀವನ ಸಾರವು ಬರಿದಾಗಿದೆ ॥ ೧ ॥

ನೀತಿ ನಿಜತತ್ತ್ವ ನಿಧಿಸಾರ ಹೊಲಸಾಗಿದೆ
ಪ್ರೀತಿ ವಾತ್ಸಲ್ಯ ನಿಧಿಪೂರ ಕಲಕಾಗಿದೆ
ಮರ್ತ್ಯ ಮಸಣಾಗಿದೆ ಮೃತ್ಯು ಮನೆ ಮಾಡಿದೆ
ಸತ್ಯ ಹುಸಿಯಾಗಿ ಸುಜನರಿಗೆ ಹಗೆಯಾಗಿದೆ ॥ ೨ ॥

ಪುಣ್ಯ ಕಾರ್ಯಕ್ಕೆ ಕೈ ಮುಗಿದು ಬೋಳಾಗಿದೆ
ದೀನ ಮಾನವ ಕುಲಕೋಟಿ ಹಾಳಾಗಿದೆ
ಕರುಣೆ ಕಳೆಗುಂದಿದೆ ಧರೆಯೊಳು ಬರಿ ನಿಂತಿದೆ
ಶರಣ ಕುಲಕೋಟಿ ಮಾಯಕ್ಕೆ ಬಲಿಯಾಗಿದೆ ॥ ೩ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

# ಜ್ಯೋತಿ ಜಗವ ಬೆಳಗೆ

ಜ್ಯೋತಿ ಜಗವ ಬೆಳಗೆ । ಬಸವನ
ಜ್ಯೋತಿ ಜಗವ ಬೆಳಗೆ ॥ ಪ ॥

ಭಾಗ್ಯವಾಡಿಯೊಳು ಜನಸಿದ ಜ್ಯೋತಿ
ಮಾತಾಪಿತರನು ತ್ಯಜಿಸಿದ ಜ್ಯೋತಿ
ಅರುಹಿನ ಮನೆಯ ಗುರುಕುಲ ಜ್ಯೋತಿ
ಕೂಡಲ ಸಂಗನ ಕರುಣೆಯ ಜ್ಯೋತಿ ॥ ೧ ॥

ನಾಗಲಾಂಬಿಕೆಯ ಮಮತೆಯ ಜ್ಯೋತಿ
ಮಹಾದೇವಿ ಅಕ್ಕನ ಅರವಿನ ಜ್ಯೋತಿ
ಚನ್ನಬಸವನ ಚಿನ್ಮಯ ಜ್ಯೋತಿ
ಸಿದ್ಧರಾಮನ ಶ್ರದ್ಧೆಯ ಜ್ಯೋತಿ ॥ ೨ ॥

ಗಂಗಾಂಬಿಕೆಯ ಕಂಗಳ ಜ್ಯೋತಿ
ನೀಲಾಂಬಿಕೆಯ ನಿರ್ಮಲ ಜ್ಯೋತಿ
ಬಲದೇವರಸರ ಒಲವಿನ ಜ್ಯೋತಿ
ಬಿಜ್ಜಳ ರಾಜನ ಬಲಗೈ ಜ್ಯೋತಿ ॥ ೩ ॥

ಅಲ್ಲಮಪ್ರಭುಗಳ ಪ್ರೀತಿಯ ಜ್ಯೋತಿ
ಶರಣ ಶರಣೆಯರ ಮಂಗಲ ಜ್ಯೋತಿ
ಕಲ್ಯಾಣಪುರದ ಕ್ರಾಂತಿಯ ಜ್ಯೋತಿ
ಸಮತೆಯ ಸಾರಿದ ಶಾಂತಿಯ ಜ್ಯೋತಿ ॥ ೪ ॥

ಕಾಯಕ ಮಹಿಮೆಯ ಕಲಿಸಿದ ಜ್ಯೋತಿ
ಆಯಕೆ ಮಿತಿಯನು ಹಾಕಿದ ಜ್ಯೋತಿ
ಮೂಢ ರೂಢಿಗಳ ಅಳಿಸಿದ ಜ್ಯೋತಿ
ಕೂಡಲ ಸಂಗನ ಕರುಣೆಯ ಜ್ಯೋತಿ ॥ ೫ ॥

– ಶ್ರೀಮತಿ ರೇಖಾ ರಾಮಶೆಟ್ಟಿ ಕಾಡಾದಿ
– ಶ್ರೀಮತಿ ಸುಭದ್ರಾ ಗಟಾಟೆ ಹಾಗೂ
ದ್ರೌಪತಿ ಗಟಾಟೆ, ಮಹಾದೇವಿ ಬೋರುಟಿ

***

# ಪ್ರವೇಶಿಕೆ

ಕರುಣ ಬಂದರ ಕಾಯೋ ಮರಣ ಬಂದರ ಒಯ್ಯೋ
ಕರುಣಿ ಕಲ್ಯಾಣ ಬಸವಣ್ಣ । ಕಾಶಿಲಿಂಗ
ಕಡೆತನಕ ಕಾಯೋ ಅಭಿಮಾನ

೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದ ಸ್ಮಾರಕ–ಸ್ಥಳಗಳನ್ನು ಒಟ್ಟಿಗೆ ಮೂರು ಭಾಗಗಳಲ್ಲಿ ಗುರುತಿಸಿಕೊಳ್ಳುವುದು ಹೆಚ್ಚು ಉಚಿತವೆನಿಸುತ್ತದೆ. ಒಂದು : 'ಬಸವಕಲ್ಯಾಣ ಪರಿಸರದ (ಬೀದರ ಜಿಲ್ಲೆಯ) ಶರಣ ಸ್ಮಾರಕಗಳು'. ಎರಡನೆಯದು: 'ಕಲ್ಯಾಣ ಪರಿಸರದಿಂದ (ಬೀದರ ಜಿಲ್ಲೆಯಿಂದ) ಹೊರಗಡೆ (ಕರ್ನಾಟಕದಲ್ಲಿ) ಇರುವ ಶರಣ ಸ್ಮಾರಕಗಳು'. ಮೂರನೆಯದಾಗಿ: 'ಹೊರರಾಜ್ಯಗಳಲ್ಲಿರುವ ಶರಣ ಸ್ಮಾರಕಗಳು'. ಎರಡು ಮತ್ತು ಮೂರನೆಯ ಭಾಗಗಳನ್ನು ಮತ್ತೆ ಜಿಲ್ಲಾವಾರು ಗುರುತಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ ಗುಲಬರ್ಗಾ ಜಿಲ್ಲೆಯ ಶರಣ ಸ್ಮಾರಕಗಳು, ರಾಯಚೂರು ಜಿಲ್ಲೆಯ ಶರಣ ಸ್ಮಾರಕಗಳು ಹೀಗೆ.

ಇವುಗಳಲ್ಲಿ ಅತ್ಯಂತ ಮಹತ್ವದ ಗುಂಪೆಂದರೆ 'ಬಸವಕಲ್ಯಾಣ ಪರಿಸರದ(ಬೀದರ ಜಿಲ್ಲೆಯ) ಸ್ಮಾರಕಗಳು' ಎಂಬುದು. ಇಲ್ಲಿಯ ಶರಣ ಸ್ಮಾರಕಗಳ ವೈಶಿಷ್ಟ್ಯವೆಂದರೆ, ಬೇರೆ ಬೇರೆ ಕಡೆಗಳಿಂದ ಕಲ್ಯಾಣಕ್ಕೆ ಬಂದ ಕಲ್ಯಾಣಕ್ಕೆ ಆಗಮಿಸಿದ ಶರಣರು ಜೀವಿಸಿದ, ಬದುಕಿದ ಸ್ಮಾರಕಗಳು. ಉಳಿದ ಹೊರಗಿನ ಸ್ಮಾರಕಗಳಲ್ಲಿ ಬಹುತೇಕ ಸ್ಮಾರಕಗಳು ಕಲ್ಯಾಣದ ಕ್ರಾಂತಿಯ ನಂತರ ಚೆಲ್ಲಾಪಿಲ್ಲಿಯಾದ ಶರಣರು ಅಲ್ಲಲ್ಲಿ ನೆಲೆನಿಂತು ಲಿಂಗೈಕ್ಯರಾದ ಸ್ಮಾರಕಗಳು ಇರುವುದೇ ಜಾಸ್ತಿ. ಇಲ್ಲವೆ ಶರಣರು ತಮ್ಮ ತಮ್ಮ ಗ್ರಾಮಗಳಲ್ಲಿ ಪೂಜಿಸಿದ, ತಮ್ಮ ಆರಾಧ್ಯ ದೈವವೆಂದು ಸ್ವೀಕರಿಸಿದ, ತಮ್ಮ ವಚನಗಳಿಗೆ ಅಂಕಿತ ಹಾಕಿಕೊಂಡ ದೈವಗಳ ಸ್ಮಾರಕಗಳು ಉಳಿದುಕೊಂಡು ಬಂದಿವೆ. ಕಲ್ಯಾಣ ಕ್ರಾಂತಿಯ ನಂತರ ಮತ್ತೆ ಅವರು ತಮ್ಮ ಈ ಮೂಲ ಸ್ಥಳಗಳಿಗೆ ತೆರಳಿ, ಅಲ್ಲಿಯೇ ಲಿಂಗೈಕ್ಯರಾದವರ ಸಮಾಧಿಗಳೂ ಕೆಲವಿವೆ. ಅದಕ್ಕಾಗಿ ಕಲ್ಯಾಣದಲ್ಲಿ ಶರಣರು ಕ್ರಿಯಾಶೀಲರಾಗಿದ್ದಾಗ ಅವರ ಬದುಕು ಹೇಗಿತ್ತು ಎಂದು ತಿಳಿದುಕೊಳ್ಳಲು ಸಹಾಯವಾಗುವ ಮಹತ್ವದ ಸ್ಮಾರಕಗಳಾಗಿ ಕಲ್ಯಾಣ ಪರಿಸರದ ಶರಣಸ್ಮಾರಕಗಳು ಮಹತ್ವದ ಆಕರಗಳಾಗಿ ನಮಗೆ ಕಾಣಿಸುತ್ತವೆ.

ಕಲ್ಯಾಣ ಪರಿಸರದಿಂದ ಹೊರಗಿರುವ ಸ್ಮಾರಕಗಳಲ್ಲಿ ಇನ್ನೊಂದು ಬಗೆಯ ಸ್ಮಾರಕಗಳನ್ನೂ ಗುರುತಿಸುವುದು ಅವಶ್ಯವಿದೆ. ಕೆಲ ಶರಣರು ತಮ್ಮ ಪ್ರಸಿದ್ಧವಾದ

ಆರಾಧ್ಯದೈವ ಇರುವ ಊರಲ್ಲಿಯೇ ಜೀವಿಸಿದ್ದು, ಕಲ್ಯಾಣದ ಸಂಪರ್ಕ, ಪ್ರಭಾವ ಪಡೆದಿರುವುದು. ಉದಾಹರಣೆಗೆ ಸೊನ್ನಲಾಪುರದ ಸಿದ್ಧರಾಮೇಶ್ವರ, ಮುದನೂರಿನ ಜೇಡರ ದಾಸಿಮಯ್ಯ, ಕೆಂಭಾವಿಯ ಭೋಗಣ್ಣ ಇಂಥವರು. ಈ ಎಲ್ಲವುಗಳನ್ನು ಸೇರಿಸಿ ಒಂದು ಸಾಮಾನ್ಯ ವಿಭಾಗೀಕ್ರಮವನ್ನು ಹೀಗೆ ಮಾಡಿಕೊಳ್ಳಬಹುದಾಗಿದೆ.

೧. ಬಸವಕಲ್ಯಾಣ ಪರಿಸರದ ಶರಣ ಸ್ಮಾರಕಗಳು(ಬೀದರ ಜಿಲ್ಲೆಯ ಸ್ಮಾರಕಗಳು)

೨. ಬಸವಕಲ್ಯಾಣ ಪರಿಸರದಿಂದ (ಬೀದರ ಜಿಲ್ಲೆಯಿಂದ) ಹೊರಗಡೆ (ಕರ್ನಾಟಕದಲ್ಲಿ) ಸೃಷ್ಟಿಗೊಂಡಿರುವ ಶರಣ ಸ್ಮಾರಕಗಳು.

೩. ಹೊರರಾಜ್ಯದಲ್ಲಿರುವ ಶರಣಸ್ಮಾರಕಗಳು

ಬಸವ ಕಲ್ಯಾಣ ಪರಿಸರದ ಅರ್ಥಾತ್ ಬೀದರ ಜಿಲ್ಲೆಯ ಶರಣ ಸ್ಮಾರಕಗಳು ಅತ್ಯಂತ ಮಹತ್ವದ ಸ್ಮಾರಕಗಳೆನಿಸುತ್ತವೆ. ಇಲ್ಲಿ ಹೊರಗಿನಿಂದ ಬಸವಕಲ್ಯಾಣಕ್ಕೆ ಆಗಮಿಸಿದ ಶರಣರು ನೆಲೆನಿಂತ ಸ್ಥಳಗಳದೇ ಒಂದು ದೊಡ್ಡ ಗುಂಪನ್ನಾಗಿ ಗುರುತಿಸಿಕೊಳ್ಳಬಹುದಾಗಿದೆ. ಈ ಪರಿಸರದ ಶರಣಸ್ಮಾರಕಗಳ ವಿಶೇಷವೆಂದರೆ, ಇವು ಶರಣರ ಬದುಕಿನ ಪರಿಯನ್ನು ಹೇಳುತ್ತವೆ ಎಂಬುದು. ಇಲ್ಲಿ ಬಸವಕಲ್ಯಾಣ ಪಟ್ಟಣದಲ್ಲಿರುವ ಶರಣ ಸ್ಮಾರಕಗಳ ಗುಂಪು ಒಂದಾದರೆ, ಬಸವಕಲ್ಯಾಣ ಪಟ್ಟಣದ ಸುತ್ತಮುತ್ತ ೨ ರಿಂದ ೫ ಕಿ.ಮೀ. ದೂರದಲ್ಲಿರುವ ಶರಣ ಸ್ಮಾರಕಗಳದು ಇನ್ನೊಂದು ಗುಂಪು. ಬಸವಕಲ್ಯಾಣ ಪಟ್ಟಣ ದಾಟಿದ ನಂತರ ಬರುವ ರಾಷ್ಟ್ರೀಯ ಹೆದ್ದಾರಿ ಗುಂಟ, ಸರಿಯಾಗಿ ಬಸವಕಲ್ಯಾಣದಿಂದ ಹುಮ್ನಾಬಾದ ಮತ್ತು ಮುಂದಕ್ಕೆ ಚಿಟಗುಪ್ಪ ಗ್ರಾಮದವರೆಗೆ ಮುಂದುವರೆಯುವ, ಅಂದರೆ ಪಶ್ಚಿಮ ದಿಕ್ಕಿನಿಂದ ಪೂರ್ವಕ್ಕೆ ಹೋಗುವ ಮುಖ್ಯರಸ್ತೆಯ ಎಡ-ಬಲ ಮಗ್ಗುಲುಗಳಲ್ಲಿಯೇ ಇರುವ ಶರಣ ಸ್ಮಾರಕಗಳ ಗುಂಪು ಮತ್ತೊಂದು ಬಗೆಯದು. ಇವುಗಳನ್ನು ಹೊರತು ಪಡಿಸಿ ಬಸವಕಲ್ಯಾಣದ ಸುತ್ತಮುತ್ತಲಿನ ದೂರದ ಊರುಗಳಲ್ಲಿ, ಅಂದರೆ ಸುಮಾರು ಎಂಟ್ಹತ್ತು ಕಿ.ಮೀ. ಅಂತರದಿಂದ ೪೦ ಕಿ.ಮೀ. ದೂರದವರೆಗೆ ಹರಡಿಕೊಂಡಿರುವ ಶರಣ ಸ್ಮಾರಕಗಳದು ಮತ್ತೆ ಒಂದು ಗುಂಪಾಗಿ ಇಟ್ಟುಕೊಳ್ಳಬಹುದಾಗಿದೆ. ಅವುಗಳನ್ನು ವಿವರವಾಗಿ ಹೀಗೆ ವಿಭಾಗಿಸಿಕೊಳ್ಳಬಹುದಾಗಿದೆ.

೧. ಬಸವಕಲ್ಯಾಣ ಪಟ್ಟಣದಲ್ಲಿರುವ ಶರಣ ಸ್ಮಾರಕಗಳು

೨. ಬಸವಕಲ್ಯಾಣದ ಸುತ್ತ ನಾಲ್ಕೂ ದಿಕ್ಕುಗಳಲ್ಲಿ (೨-೫ ಕಿ.ಮೀ. ದೂರದಲ್ಲಿ) ಹಬ್ಬಿಕೊಂಡಿರುವ ಶರಣಸ್ಮಾರಕಗಳು.

**ಅ. ಪಶ್ಚಿಮ ದಿಕ್ಕು :** ತ್ರಿಪುರಾಂತ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಶರಣಸ್ಮಾರಕಗಳು

**ಬ. ದಕ್ಷಿಣ ದಿಕ್ಕು :** ತ್ರಿಪುರಾಂತ ಕೆರೆಯ ಹರಿಯಗುಂಟ ಮತ್ತು ಬಂದವರ ಓಣಿ ಪರಿಸರದಲ್ಲಿರುವ ಶರಣಸ್ಮಾರಕಗಳು

**ಕ. ಪೂರ್ವ ದಿಕ್ಕು :** ಶಿವಪುರ ಮತ್ತು ನಾರಾಯಣಪುರಗಳಲ್ಲಿರುವ ಶರಣಸ್ಮಾರಕಗಳು

**ಡ. ಉತ್ತರ ದಿಕ್ಕು :** ಬೆಟ್ಟಬಲಕುಂದ ಊರು, ಬೆಟ್ಟ ಮತ್ತು ಗುಡ್ಡದ ವಾರೆಗಳಲ್ಲಿರುವ ಶರಣಸ್ಮಾರಕಗಳು

೩. ಅನುಭವ ಮಂಟಪದ ಸುಳುಹುಕೊಡುವ ಹಂದ್ರಾಳದಿಂದ ಚಿಟಗುಪ್ಪ ಗ್ರಾಮದವರೆಗೆ ರಾಷ್ಟ್ರೀಯ ಹೆದ್ದಾರಿ ೯ರ ಸುತ್ತಮುತ್ತ ಇರುವ ಶರಣಸ್ಮಾರಕಗಳು.

೪. ಬಸವಕಲ್ಯಾಣದಿಂದ ದೂರದ ಎಂಟ್ಹತ್ತು ಕಿ.ಮೀ. ದಿಂದ ೪೫ ಕಿ.ಮೀ. ವ್ಯಾಪ್ತಿಯಲ್ಲಿ ಹಬ್ಬಿಕೊಂಡಿರುವ (ಬೀದರ ಜಿಲ್ಲೆಯ) ಊರುಗಳಲ್ಲಿರುವ ಶರಣ ಸ್ಮಾರಕಗಳು.

*

# ೧

# ಬಸವಕಲ್ಯಾಣ ಪಟ್ಟಣದಲ್ಲಿರುವ ಶರಣ ಸ್ಮಾರಕಗಳು

ನಂದಿಪಟ ಹಾರಾಡಿ ಮಂದಿರಕೆ ಮೆರೆಯುವವು
ಸಂದು ಸಾಲುಗಳ ಮನೆ ಮಾರು । ಕಲ್ಯಾಣ
ಚಂದಾದ ಬೀಡು ಶರಣರಿಗೆ

ಬಸವಕಲ್ಯಾಣ ಪರಿಸರದಲ್ಲಿ (ಬೀದರ ಜಲ್ಲೆಯಲ್ಲಿ) ಈಗ ಗುರುತಿಸಿರುವಂತೆ ೭೦ಕ್ಕೂ ಮೇಲ್ಪಟ್ಟು ಶರಣ ಸ್ಥಳಗಳಿವೆ. ಇಷ್ಟೊಂದು ಪ್ರಮಾಣದ ಶರಣ ಸ್ಮಾರಕಗಳು ಉಳಿದ ಬೇರೊಂದು ಜಿಲ್ಲೆಯಲ್ಲಿ ಇಲ್ಲ. ಇದಕ್ಕೆ ಕಾರಣ ಸ್ಪಷ್ಟವಾಗಿದೆ. ಬಸವಣ್ಣನವರ ವ್ಯಕ್ತಿತ್ವದ ಪ್ರಭಾವಕ್ಕೆ ಕಲ್ಯಾಣವನ್ನು ಹುಡುಕಿಕೊಂಡು ಬಂದ ಶರಣರು ಅನೇಕ. ಆವರೆಲ್ಲ ತಂಡತಂಡವಾಗಿ ನೆಲೆ ನಿಂತುದು ಬಸವಕಲ್ಯಾಣ ಪರಿಸರದಲ್ಲಿಯೇ. ಇದಕ್ಕೆ ಕಾರಣ ಸ್ಪಷ್ಟವಾಗಿದೆ. ಬಸವಣ್ಣನವರ ಆಂದೋಲನದ ಜೊತೆ ಗುರುತಿಸಿಕೊಂಡ ಶರಣರು, ಕಾಯಕ–ದಾಸೋಹ, ಅನುಭವ ಮಂಟಪದ ಸಂವಾದ ಇವುಗಳಲ್ಲಿ ವಿಶೇಷವಾಗಿ ನಿರತರಾಗಿದ್ದಾರೆ. ದಿನದಿನವೂ ಆಗುವ ಬೆಳವಣಿಗೆಗಳು ಶರಣರನ್ನು ಕಲ್ಯಾಣ ಹಿಡಿದಿಟ್ಟಿದೆ. ಹೀಗಾಗಿ ಅವರೆಲ್ಲ ತಮ್ಮ ನೆಲೆಗಳನ್ನು ಗುರುತಿಸಿಕೊಂಡುದು ಬಸವಕಲ್ಯಾಣದ ಸುತ್ತಮುತ್ತಲಿನ ಪ್ರದೇಶದಲ್ಲಿಯೇ. ಅದೂ ಅತೀ ದೂರವೆಂದರೆ ೪೦ ಕಿ.ಮೀ. ಇದಕ್ಕಿಂತ ದೂರದ ಶರಣ ನೆಲೆಗಳು ಬೆರಳೆಣಿಕೆಯಲ್ಲಿವೆ. ಬಸವಕಲ್ಯಾಣ ಪಟ್ಟಣದಲ್ಲಿ ಮತ್ತು ಬಸವಕಲ್ಯಾಣಕ್ಕೆ ಹತ್ತಿಕೊಂಡು ಸುತ್ತಮುತ್ತಲೂ ನಾಲ್ಕೂ ದಿಕ್ಕುಗಳಲ್ಲಿ ೨ ರಿಂದ ೫ ಕಿ.ಮೀ. ದೂರದ ಪ್ರದೇಶಗಳಲ್ಲಿ ಹೆಚ್ಚಿನ ಶರಣಸ್ಥಳಗಳು ಇರುವುದು ಕಂಡುಬರುತ್ತದೆ. ಅತ್ಯಂತ ದಟ್ಟವಾದ ಶರಣನೆಲೆಗಳು ಇರುವುದು ಬಸವಕಲ್ಯಾಣದ ಸುತ್ತಮುತ್ತ ೧೫ ರಿಂದ ೨೦ ಕಿ.ಮೀ. ವ್ಯಾಪ್ತಿಯಲ್ಲಿಯೇ.

ಬಸವಕಲ್ಯಾಣ ಪರಿಸರದಲ್ಲಿ, ಅಂದರೆ ಬೀದರ ಜಿಲ್ಲೆಯ ವ್ಯಾಪ್ತಿಯಲ್ಲಿ ದೊರೆಯುವ ಶರಣರ ನೆಲೆಗಳು ಕೇವಲ ಸ್ಮಾರಕಗಳಲ್ಲ, ಇವು ಶರಣರ ಬದುಕನ್ನು ತಮ್ಮಲ್ಲಿ ಹುದುಗಿಸಿಕೊಂಡಿರುವ ಮಹತ್ವದ ಆಕರಗಳಾಗಿವೆ. ಶರಣರ ಬಗೆಗಿನ ಪುರಾಣ ಮತ್ತು ಜನಪದಕಾವ್ಯಗಳು ಏನನ್ನು ಹೇಳುತ್ತವೆಯೋ ಅವುಗಳಿಗಿಂತ ಮಹತ್ವದ ಸಂಗತಿಗಳನ್ನು ಈ ಸ್ಮಾರಕಗಳು–ಸ್ಥಳಗಳು ತಮ್ಮಲ್ಲಿ ಹುದುಗಿಸಿಕೊಂಡಿವೆ. ಇವುಗಳನ್ನು ಶೋಧದ ಕಣ್ಣಿನಿಂದ, ಮನಸ್ಸಿನಿಂದ ನೋಡುವ, ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕಾಗಿದೆ. ಇವುಗಳ ಜೊತೆಗೆ ಉಳಿದೆಡೆ ಇರುವ ಶರಣಸ್ಮಾಕಗಳ

ಅಧ್ಯನವೂ ನಡೆದರೆ ಶರಣರ ಬದುಕಿನ ಮಹತ್ವದ ಸಂಗತಿಗಳನ್ನು ನಾವು ಶೋಧಿಸಿಕೊಳ್ಳಲು, ಅರಿತುಕೊಳ್ಳಲು, ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ.

'ಬಸವಕಲ್ಯಾಣ ಪಟ್ಟಣ' ಒಂದರಲ್ಲಿ ಈಗಿರುವ ಸ್ಮಾರಕಗಳನ್ನು ಗಮನಿಸಿದರೆ, ಬಸವಣ್ಣನವರ ದೇವಸ್ಥಾನ, ಪರುಷಕಟ್ಟೆ, ಪೀರಪಾಶಾ ಬಂಗ್ಲಾ ಮತ್ತು ಕೋಟೆ ಇಂತಹ ಸ್ಮಾರಕಗಳು ಮಾತ್ರ ಕಾಣುತ್ತವೆ. ಇವೆಲ್ಲ ವಾಸಸ್ಥಾನಗಳಾಗಿರದೆ, ಕಾರ್ಯಸ್ಥಾನಗಳಾಗಿವೆ. ಆದರೆ ಈಗ ನಮಗೆ ನೋಡಲು ದೊರೆಯುವ ತ್ರಿಪುರಾಂತ ಕೆರೆ, ಬೆಟ್ಟಬಲಕುಂದ, ಬಂದವರ ಓಣಿ ಹಾಗೂ ನಾರಾಯಣಪುರ-ಶಿವಪುರಗಳಲ್ಲಿರುವ ಶರಣ ಸ್ಮಾರಕಗಳನ್ನು ಗಮನಿಸಿದರೆ, ಅವೆಲ್ಲ ಇರುವುದು ಕಲ್ಯಾಣ ಪಟ್ಟಣದಲ್ಲಿ ಅಲ್ಲ, ಕಲ್ಯಾಣ ಪಟ್ಟಣದ ಸುತ್ತಮುತ್ತಲಿನ ಸ್ಥಳಗಳಲ್ಲಿ ಎಂಬುದು ಗಮನಾರ್ಹ ಸಂಗತಿಯಾಗಿ ತೋರುತ್ತದೆ. ಈ ಎಲ್ಲ ಶರಣ ಸ್ಥಳಗಳು ಅವರ ವಾಸದ ನೆಲೆಗಳಾಗಿವೆ. ಶರಣರ ಓಣಿಗಳಾಗಿವೆ. ಅಂದರೆ ಅವರೆಲ್ಲ ಒಂದೆಡೆ ಇದ್ದು, ಸಹಕಾರದ ಸಾಮೂಹಿಕ ಬದುಕನ್ನು ಸಾಗಿಸಿದ್ದಾರೆ ಎಂಬುದು ಈ ನೆನೆಗಳಿಂದ ಸ್ಪಷ್ಟವಾಗುತ್ತದೆ.

ಬಸವಕಲ್ಯಾಣ ಪಟ್ಟಣದಲ್ಲಿ ಉಳಿದಿರುವುದು ಏನೂ ಇಲ್ಲ ಎನಿಸುತ್ತದೆ. ನೂರರಲ್ಲಿ ಒಂದಂಶವೂ ಅಲ್ಲಿಲ್ಲ. ಇರುವುದರಲ್ಲಿ ಬಹುಮುಖ್ಯವಾದ ಸ್ಥಳವೆಂದರೆ ಪರುಷಕಟ್ಟೆ ಒಂದು ಮಾತ್ರ. ಉಳಿದ ಸ್ಮಾರಕಗಳು ಏನು, ಹೇಗೆ ಎಂಬ ಬಗ್ಗೆ ನಾವು ಊಹಿಸಿಕೊಳ್ಳಬೇಕು, ಅನುಮಾನಿಸಿಕೊಳ್ಳಬೇಕು, ಹೆಸರಿಸಿಕೊಳ್ಳಬೇಕು. ಕಲ್ಯಾಣದಲ್ಲಿರುವದೆಲ್ಲ ಸಂಪೂರ್ಣವಾಗಿ ನೆಲಸಮವಾಗಿದೆ. ನೆಲದಲ್ಲಿ ಸಮಾಧಿಯಾಗಿದೆ. ಈಗ ಉಳಿದಿರುವ ಎಳೆ ಹಿಡಿದು ಕ್ರಮಿಸುವ ಅನಿವಾರ್ಯತೆ ಮಾತ್ರ ಉಳಿದುಕೊಂಡಿದೆ.

ಬಸವಕಲ್ಯಾಣದಲ್ಲಿ ಇರುವ ಬಸವಣ್ಣನವರ ದೇವಸ್ಥಾನ, ಪರುಷ ಕಟ್ಟೆ, ಪೀರಪಾಶಾ ಬಂಗಲಾ ಹಾಗೂ ಕೋಟೆ ಈ ನಾಲ್ಕು ಸ್ಥಳಗಳನ್ನು ಬಿಟ್ಟರೆ ವೈಯಕ್ತಿಕವಾಗಿ ಒಬ್ಬೊಬ್ಬ ಶರಣರಿಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಲು ಈಗ ಸಾಧ್ಯವಾಗಿರುವುದು ಐದು ಸ್ಮಾರಕಗಳನ್ನು ಮಾತ್ರ. ಜೇಡರ ದಾಸಿಮಯ್ಯ ಮಠ, ಶಂಕರದಾಸಿಮಯ್ಯನ ಮಠ, ಅಂಬಿಗರ ಚೌಡಯ್ಯನ ಮಠ, ಕಂಬಳಿ ನಾಗಿದೇವನ ಮಠ ಹಾಗೂ ಉರಲಿಂಗ ಪೆದ್ದಿ ಮಠ. ಈ ಐದು ಸ್ಮಾರಕಗಳು ಮಾತ್ರ ಇಂದು ಬಸವಕಲ್ಯಾಣ ನಗರದಲ್ಲಿ ಕಾಣುತ್ತಿವೆ. ಈ ಸ್ಮಾರಕಗಳನ್ನು ಗಮನಿಸಿದರೆ, ಮೂರು ಮಠಗಳು ಹಿಂದುಳಿದ ಜನಾಂಗಕ್ಕೆ ಸೇರಿದ ಶರಣರ ಗುಡಿ-ಮಠಗಳಾದರೆ, ಇನ್ನೆರಡು ಅಸ್ಪೃಶ್ಯ ಶರಣರಿಗೆ ಸಂಬಂಧಿಸಿದ ಮಠಗಳಿರುವುದು ಗಮನಾರ್ಹ ಸಂಗತಿ ಎನಿಸುತ್ತದೆ. ಈ ಮಟ್ಟದಲ್ಲಿ ಬಸವಣ್ಣನವರು ಜನಮನವನ್ನು ಗೆದ್ದಿದ್ದರು ಎಂಬುದಕ್ಕೆ ಈ ಮಠಗಳು ನಮಗಿಂದು ಸಾಕ್ಷಿಯಾಗಿ ದೊರೆಯುತ್ತವೆ.

ಬಸವಣ್ಣನವರಾದಿಯಾಗಿ ಅವರ ಮನೆಯವರೆಲ್ಲರ ಸ್ಮಾರಕಗಳು ಇಂದು ಉಳಿದಿರುವುದು ತ್ರಿಪುರಾಂತ ಕೆರೆಯ ಸುತ್ತಮುತ್ತಲೇ. ಘಟ್ಟಿವಾಳಯ್ಯ, ಕಿನ್ನರಿ

ಬ್ರಹ್ಮಯ್ಯ ಅವರಂತಹ ಕಟ್ಟಾ ಅಭಿಮಾನಿಗಳನ್ನು ಬಸವಣ್ಣನವರೇ ನೀವು ಇಲ್ಲಿರುವುದು ಬೇಡವೆಂದು ನಾರಾಯಣಪುರ, ಹಳ್ಳಿಖೇಡದಂತಹ ಗ್ರಾಮಗಳಿಗೆ ಕಳಿಸಿದರೆಂಬ ಸಂಗತಿಗಳು ಉಳಿದುಕೊಂಡು ಬಂದಿವೆ. ಹಳ್ಳಿಖೇಡ, ಹಂದ್ರಾಳಗಳಂತೂ ಆಗ ಗ್ರಾಮಗಳೇ ಆಗಿರಲಿಲ್ಲ. ಕಿನ್ನರಯ್ಯ, ಘಟ್ಟಿವಾಳಯ್ಯ ಈ ಶರಣರು ನೆಲೆಸಿದ ನಂತರ ಅಲ್ಲಿ ಜನವಸತಿ ಉಂಟಾಗಿ ಗ್ರಾಮಗಳು ನಿರ್ಮಾಣವಾದಂತೆ ತೋರುತ್ತದೆ.

ಬಸವಕಲ್ಯಾಣದಲ್ಲಿರುವ ಸ್ಮಾರಕಗಳು ಹಾಳಾಗಿವೆ ಎಂದರೂ ಉಳಿದಿರುವವು ಹೇಗಿವೆ ಎಂಬುದು ಕೂಡ ಗಮನಿಸಬೇಕಾದ ಮಾತೇ ಆಗುತ್ತದೆ.

***

# ೧. ಬಸವಣ್ಣನವರ ದೇವಾಲಯ

ಕಲ್ಯಾಣದಯ್ಯ ಬಂದ ಕಾಲಿಗಿ ನೀರ ಕೊಡು
ನೀಲಗದ್ದಿಗಿ ಹೊರಗಿಡು । ಹಡದವ್ವ
ಶರಣೆ ನಿನ ಮನಿಗಿ ಶಿವ ಬಂದ

ಬಸವಕಲ್ಯಾಣದಲ್ಲಿ ಶರಣರಿಗೆ ಸಂಬಂಧಿಸಿದಂತೆ ಉಳಿದುಕೊಂಡು ಬಂದ ಒಂದೇ ಒಂದು ಸ್ಥಳವೆಂದರೆ ಅದು ಪರುಷಕಟ್ಟೆ. ಬಸವಣ್ಣನವರ ಮಂದಿರ ಮೂಲತಃ ಒಂದು ಮಠವಂತೆ. ಅದನ್ನು **'ಬಸವನ ಮಠ'** ಎಂದು ಕರೆಯಲಾಗುತ್ತಿತ್ತು. ಈ ಮಠದ ಗದ್ದುಗೆ ಮೇಲೆ ಇರುವುದು ನಂದಿ ಮೂರ್ತಿ. ಬಹುಶಃ ಈ ಮಠ ಬಸವಣ್ಣನವರಿಗೆ ಸಂಬಂಧಿಸಿರಬೇಕೆನಿಸುತ್ತದೆ. ಏಕೆಂದರೆ ಈ ಮಠ ಇರುವುದು ಪರುಷಕಟ್ಟೆಯ ಸಮೀಪದಲ್ಲಿಯೇ. ಮತ್ತು ಈ ಮಠದ ಹಿಂದೆಯೇ ಈಗ ಪೀರಪಾಶಾ ಬಂಗಲಾ ಎಂದು ಪ್ರಸಿದ್ಧವಾಗಿರುವ, ಅನುಭವ ಮಂಟಪವಾಗಿದ್ದಿರಬಹುದೆಂಬ ಸಂಗತಿ ತಲೆಮಾರುಗಳಿಂದ ಉಳಿದುಕೊಂಡು ಬಂದಿರುವ ಕಟ್ಟಡ ಇದು. ಬಸವಣ್ಣನವರು ದಿನವೂ ಈ ಮಠಕ್ಕೆ ಭೇಟಿಕೊಡುತ್ತಿದ್ದರು ಎಂದೂ ಇಲ್ಲಿ ಬಂದು ನಂತರ ಪರುಷ ಕಟ್ಟೆಗೆ ಹೋಗುತ್ತಿದ್ದರೆಂದೂ ಈಗಿನ ಬಸವೇಶ್ವರ ದೇವಸ್ಥಾನ ಕಮಿಟಿಯವರು ವಿವರಿಸುತ್ತಾರೆ.

**'ಬಸವನ ಮಠ'** ದ ಅಧಿಪತಿ ಸ್ವಾಮಿಗಳು ಇಂಗಳೇಶ್ವರ ಗ್ರಾಮದವರಾಗಿದ್ದರು. ಇಂಗಳೇಶ್ವರ ಬಸವಣ್ಣನವರ ತಾಯಿಯ ತವರು ಮನೆ ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು. ಈ ಇಂಗಳೇಶ್ವರ ಸ್ವಾಮಿಗಳ ಮನೆತನದವರೇ **'ಬಸವನ ಮಠ'**ದ ಅಧಿಪತಿಗಳಾಗುತ್ತ ಬಂದಿದ್ದರಂತೆ. ಪೋಲಿಸ್ ಕಾರ್ಯಾಚರಣೆ (ಸೆಪ್ಟಂಬರ್ ೧೯೪೮) ನಂತರ ಮಾನ್ಯರಾದ ಬಾಬಾಸಾಹೇಬ ವಾರದ ಅವರು ಸೋಲಾಪುರದಿಂದ ಬಂದು ಬಸವಕಲ್ಯಾಣದಲ್ಲಿಯೆ ಉಳಿದು, ಬಸವಕಲ್ಯಾಣವು ಮತ್ತೆ ಶರಣರ ನೆನಪು ಬರುವಂತೆ ಸಮಗ್ರ ಅಭಿವೃದ್ಧಿ ಹೊಂದಬೇಕು ಎಂದು ಯೋಜನೆಯನ್ನು ರೂಪಿಸಿದರು. ಅವರು ಮಾಡಿದ ಮೊದಲ ಕೆಲಸವೆಂದರೆ, **'ಬಸವನ ಮಠ'** ದ ಸ್ವಾಮಿಗಳ ಮನ ಒಲಿಸಿ, ಅವರಿಗೆ ಬೇರೆ ಕಡೆ ಇರಲು ವ್ಯವಸ್ಥೆಮಾಡಿ, **'ಬಸವನ ಮಠ'** ದಲ್ಲಿ ಒಂದು ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಅದನ್ನು **'ಬಸವೇಶ್ವರ ದೇವಸ್ಥಾನ'** ವೆಂದು ನಾಮಕರಣ ಮಾಡಿದ್ದು. ಅಂದಿನಿಂದ ಅದು ಬಸವಣ್ಣನವರ ದೇವಸ್ಥಾನವೆಂದು ಪ್ರಸಿದ್ಧವಾಗಿದೆ. ನಂತರ ಬರಬರುತ್ತ ದೇವಸ್ಥಾನದ ಕಟ್ಟಡವೂ ವಿಸ್ತಾರವಾಗುತ್ತ ಬಂದಿದೆ.




ಶ್ರೀ ಬಸವೇಶ್ವರ ದೇವಸ್ಥಾನ, ಬಸವಕಲ್ಯಾಣ

ಬಸವೇಶ್ವರ ದೇವಸ್ಥಾನದ ವ್ಯವಸ್ಥೆಯಾದ ಕೂಡಲೇ ಬಸವೇಶ್ವರ ಜಾತ್ರೆಯನ್ನು ಪ್ರಾರಂಭಿಸುವ ಯೋಜನೆಯನ್ನು ಬಾಬಾಸಾಹೇಬ ವಾರದ ಅವರು ಹಾಕಿದರಂತೆ. ಅದನ್ನು ಬಸವಜಯಂತಿಯಂದು ಆಚರಿಸಲು ನಿರ್ಧರಿಸಿದರು. ಜಾತ್ರೆಯಲ್ಲಿ ಮೆರವಣಿಗೆ ಮಾಡಲು ನಂದಿಕೋಲುಗಳನ್ನು ಕೂಡ ಅವರು ಸೊಲ್ಲಾಪುರದಿಂದಲೇ ತಂದರಂತೆ.

ಬಸವಣ್ಣನವರ ಜಾತ್ರೆಯ ಸಂಪ್ರದಾಯ, ಉತ್ಸವಗಳೆಲ್ಲ ಬಸವ ಜಯಂತಿಯಂದು ಪ್ರಾರಂಭವಾಗುತ್ತವೆ. ಬಸವಜಯಂತಿಯಂದು ಬೆಳಿಗ್ಗೆ ಆರು ಗಂಟೆಗೆ ತೊಟ್ಟಿಲನ್ನು ಪೂಜೆ ಮಾಡಿ, ಮೆರವಣಿಗೆ ಮಾಡುತ್ತಾರೆ. ಅಂದು ಸಂಜೆ ಆರು ಗಂಟೆಗೆ ಮುತ್ತೈದೆಯರೆಲ್ಲ ಸೇರಿ ತೊಟ್ಟಿಲು ಕಾರ್ಯಕ್ರಮ ಮಾಡುತ್ತಾರೆ. ಬಸವಣ್ಣನವರನ್ನು ತೊಟ್ಟಿಲಲ್ಲಿ ಹಾಕಿ ಹೆಸರಿಟ್ಟು ತೂಗುತ್ತಾರೆ. ಎರಡನೆಯ ದಿನ ಬಸವೇಶ್ವರರ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇಟ್ಟು, ಆ ಪಲ್ಲಕ್ಕಿಯನ್ನು ಶೃಂಗರಿಸಿದ ವಾಹನದ (ಲಾರಿ) ಮೇಲೆ ಇಟ್ಟು ಮೆರವಣಿಗೆ ಮಾಡುತ್ತಾರೆ. ಇಲ್ಲಿ ಜನರ ಸಂಭ್ರಮಕ್ಕೆ ಪಾರವೇ ಇರುವುದಿಲ್ಲ. ಭಜನಾ ಮೇಳ, ಡೊಳ್ಳುಕುಣಿತ, ನಾನಾ ತರದ ಜಾನಪದ ಕಲಾ ತಂಡಗಳು ಇಲ್ಲಿ ಕೂಡಿರುತ್ತವೆ. ಸುಮಂಗಲೆಯರು ಆರತಿ ಹಿಡಿದು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿರುತ್ತಾರೆ. ಈ ಮೆರವಣಿಗೆ ಸಂಭ್ರಮದೊಡನೆ ಮೊದಲು ಕೋಟೆಗೆ ಹೋಗುತ್ತದೆ. ಆ ಮೇಲೆ ಅಲ್ಲಮಪ್ರಭುದೇವರ ಗುಡಿಗೆ ಬರುತ್ತದೆ. ಆ ಮೇಲೆ ರಥ ಮೈದಾನಕ್ಕೆ ಹೋಗಿ ತಿರುಗಿ ಬಸವಣ್ಣನವರ ಗುಡಿಗೆ ಬರುತ್ತದೆ.


ಮೂರನೆಯ ದಿನ ರಥೋತ್ಸವ ಇರುತ್ತದೆ. ಅಂದು ಬೆಳಿಗ್ಗೆ ನೂರಾರು ಎತ್ತುಗಳನ್ನು ಶೃಂಗರಿಸಿ ಬೃಹತ್ ಪ್ರಮಾಣದಲ್ಲಿ ಪ್ರದರ್ಶನ ಏರ್ಪಡಿಸಲಾಗುತ್ತದೆ. ಈ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಎತ್ತುಗಳನ್ನು ಸಂಜೆ ನಂದಿಕೋಲ ಜೊತೆಗೆ ಮೆರವಣಿಗೆಯಲ್ಲಿ ಹೊಡೆದೊಯ್ಯಲಾಗುತ್ತದೆ. ಈ ಮೆರವಣಿಗೆಯೂ ಮೊದಲು ಹೋಗುವುದು ಕೋಟೆಗೆ. ಅಲ್ಲಿ ನಂದಿಕೋಲ ಪೂಜೆಯಾದ ನಂತರ ಮೆರವಣಿಗೆ ಪ್ರಭುದೇವರ ಗುಡಿಗೆ ಬಂದು, ಅಲ್ಲಿ ಪೂಜೆಮುಗಿಸಿ, ತೇರ ಎಳೆಯುವ ಸ್ಥಳಕ್ಕೆ ಮೆರವಣಿಗೆ ಬರುತ್ತದೆ. ಆ ಮೇಲೆ ರಥೋತ್ಸವ ನಡೆಯುತ್ತದೆ. ಲಕ್ಷಾನುಗಟ್ಟಲೆ ಭಕ್ತರು ತೇರಿಗೆ ಕೂಡಿರುತ್ತಾರೆ. ರಥ ಎಳೆದ ನಂತರ ಮದ್ದು ಸುಡುವ ವಿಶೇಷ ಕಾರ್ಯಕ್ರಮ ನಡೆಯುತ್ತದೆ. ಇಷ್ಟೆಲ್ಲ ಆದ ಮೇಲೆ ನಂದಿಕೋಲನ್ನು ಮರಳಿ ಬಸವೇಶ್ವರ ದೇವಸ್ಥಾನಕ್ಕೆ ಒಯ್ಯಲಾಗುತ್ತದೆ.

ಬಸವಣ್ಣನವರ ಗುಡಿಯಲ್ಲಿ ನಿತ್ಯವೂ ಪೂಜೆ ನಡೆಯುತ್ತದೆ. ಇಡೀ ಊರಜನ ಬಸವಣ್ಣನವರನ್ನು ಅತ್ಯಂತ ಶ್ರದ್ಧೆ ಭಕ್ತಿಯಿಂದ ಪೂಜಿಸುತ್ತಾರೆ. ಬಸವಣ್ಣ ಬಸವಕಲ್ಯಾಣದ ಗ್ರಾಮದೇವತೆಯಾಗಿ ಶರಣಸಮುದಾಯದ ಸಂಕೇತಿಕ ಪ್ರತಿನಿಧಿಯಾಗಿ ಪೂಜಿಸಲ್ಪಡುತ್ತಾರೆ. ಸೋಮವಾರಕ್ಕೊಮ್ಮೆ ಭಜನೆ ನಡೆಯುತ್ತದೆ. ಶ್ರಾವಣ ಮಾಸದಲ್ಲಿ ಒಂದು ತಿಂಗಳ ಪೂರ್ತಿ ಭಜನೆ ಇರುತ್ತದೆ. ಜೊತೆಗೆ ಬಸವೇಶ್ವರ ಪುರಾಣವನ್ನೂ ಹಚ್ಚಿರುತ್ತಾರೆ.

ಬಸವಣ್ಣನವರ ದೇವಸ್ಥಾನವೊಂದನ್ನು ಸ್ಥಾಪಿಸಿದ ನಂತರ ಬಾಬಾಸಾಹೇಬ ವಾರದ ಅವರು ಜನರಲ್ಲಿ ಶರಣರ ಬಗೆಗೆ ಅರಿವು ಮೂಡಿಸುವಂತಹ ಇಂತಹ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ನಮಗೆ ತಿಳಿದುಬರುತ್ತದೆ. ಬಾಬಾಸಾಹೇಬ ಅವರು ಕಲ್ಯಾಣದ ಪ್ರಮುಖ ಜನರನ್ನು ಒಗ್ಗೂಡಿಸಿ, **'ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ'** ಎಂಬ ಹೆಸರಿನ ಒಂದು ಸಂಘಟನೆಯನ್ನು ಹುಟ್ಟುಹಾಕಿದರು. ತಮ್ಮ ಜೀವಿತಾವಧಿಯಲ್ಲಿ ಕೊನೆಯವರೆಗೂ ಆ ಕಮಿಟಿಯ ಅಧ್ಯಕ್ಷರಾಗಿದ್ದುಕೊಂಡು ಬಸವಕಲ್ಯಾಣದ ಸಮಗ್ರ ಅಭಿವೃದ್ಧಿಗಾಗಿ ದುಡಿದರು. ಆ ಸಂಘಟನೆ ಇವತ್ತಿಗೂ ಬಸವೇಶ್ವರ ದೇವಸ್ಥಾನದ ಕಟ್ಟಡದಲ್ಲಿಯೇ ತನ್ನ ಕಾರ್ಯಾಲಯವನ್ನು ಹೊಂದಿದ್ದು, ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ.

ಮೂಲತಃ ಸೋಲಾಪುರದವರಾದ ಶ್ರೀ ಬಾಬಾಸಾಹೇಬ ವಾರದ ಅವರು ಬಸವಕಲ್ಯಾಣದಲ್ಲಿ ನೆಲೆನಿಂತು, **'ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ'** ಮೂಲಕ ಸಂಪೂರ್ಣವಾಗಿ ಬಸವಕಲ್ಯಾಣದ ಸರ್ವತೋಮುಖ ಅಭಿವೃದ್ಧಿ ಯಾಗಬೇಕು ಎಂದು ಯೋಜನೆಗಳನ್ನು ರೂಪಿಸಿ, ಕಾರ್ಯತತ್ಪರರಾದರು. ಹೀಗಾಗಿ ಬಸವಕಲ್ಯಾಣದಲ್ಲಿ ಮತ್ತೆ ಅಲ್ಪಪ್ರಮಾಣದಲ್ಲಿ ಶರಣರ ಸುಳಿಗಾಳಿ ಬೀಸತೊಡಗಿತು. ಬಸವಕಲ್ಯಾಣದ ಭೌತಿಕ ಅಭಿವೃದ್ಧಿಯೂ ಆಗತೊಡಗಿತು.

೧೯೪೪ ರಲ್ಲಿ ಅಸ್ತಿತ್ವಕ್ಕೆ ಬಂದ **'ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ'** ಸುಮಾರು ಹತ್ತಿಪ್ಪತ್ತು ವರ್ಷಗಳ ಅವಧಿಯಲ್ಲಿ ಬಸವಕಲ್ಯಾಣವನ್ನು ಪರಿವರ್ತನೆ



ಶ್ರೀ ಬಸವೇಶ್ವರ ದೇವಸ್ಥಾನದ ಗರ್ಭಗೃಹದಲ್ಲಿರುವ
ಶ್ರೀ ಬಸಣ್ಣನವರ ಮೂರ್ತಿ

ಮಾಡಿದ ರೀತಿ ಅದ್ಭುತ ಎನ್ನುವಂತಿದೆ. ಇದಕ್ಕೆಲ್ಲ ಮುಖ್ಯಕೇಂದ್ರ ಬಸವೇಶ್ವರ ದೇವಸ್ಥಾನವೇ ಆಯಿತು ಎಂಬುದು ಮಹತ್ವದ ಸಂಗತಿ ಎನಿಸುತ್ತದೆ. **'ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ'** ಅವರು ಹಾಕಿಕೊಂಡ ಎಷ್ಟೋ ಯೋಜನೆಗಳನ್ನು ಇಂದು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಪೂರೈಸಲು ಪ್ರಯತ್ನಿಸುತ್ತಿದೆ. ಆಗ ಹಾಕಿಕೊಂಡ ಯೋಜನೆಗಳ ನೀಲನಕ್ಷೆ ಕೆಲ ಪ್ರಮುಖ ಅಂಶಗಳು ಹೀಗಿವೆ :

೧. ಕಿಲ್ಲೆ ಕಲ್ಯಾಣಿ ನಗರವನ್ನು 'ಬಸವಕಲ್ಯಾಣ' ವನ್ನಾಗಿ ಮಾರ್ಪಡಿಸಿದುದು: 'ಕಿಲ್ಲೆ ಕಲ್ಯಾಣ' ಎಂಬ ಹೆಸರಿನ ಬದಲಾಗಿ ಈ ನಗರಕ್ಕೆ 'ಬಸವಕಲ್ಯಾಣ' ಎಂಬ ಹೆಸರು ಇಡಬೇಕೆಂದು ಮೊದಲು ಸೂಚನೆಯನ್ನು ಇಟ್ಟವರು ಸೋಲಾಪುರ ಸಂಚಾರ ಪತ್ರಿಕೆಯ ಸಂಪಾದಕರಾದ ಶ್ರೀಕುಮಾರ ಕೋಠಾವಳೆ ಅವರು. ಈ ಸೂಚನೆಯನ್ನು ಸ್ವೀಕರಿಸಿ, 'ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ' ಅವರು ನಿರಂತರವಾಗಿ ಸರ್ಕಾರದೊಂದಿಗೆ ಹೋರಾಟ ಮಾಡಿ, ಕೊನೆಗೂ ಹೆಸರನ್ನು ಬದಲಾಯಿಸುವಲ್ಲಿ ಯಶಸ್ವಿಯಾದುದು (೧೯೫೮) ಒಂದು ಐತಿಹಾಸಿಕ ಮಹತ್ವದ ಸಂಗತಿಯೇ ಆಗಿದೆ.

೨. ಬಸವಕಲ್ಯಾಣವನ್ನು ತಾಲೂಕಾ ಸ್ಥಳವನ್ನಾಗಿ ಪರಿವರ್ತಿಸುವ ಯೋಜನೆ: ದಿನಾಂಕ ೧೫-೧೧-೧೯೬೫ ರಂದು ಸರಕಾರದಿಂದ ಬಸವಕಲ್ಯಾಣವು ತಾಲೂಕಾ ಸ್ಥಳವೆಂದು ಸಾರಲ್ಪಟ್ಟಿತು.

೩. ಶ್ರೀ ಬಸವ ಜಯಂತಿಯ ಶುಭದಿನದ ನಿಮಿತ್ಯವಾಗಿ ಸರಕಾರವು ಸಾರ್ವತ್ರಿಕ ಸೂಟಿಯನ್ನಾಗಿ ಘೋಷಿಸಬೇಕು: ಮೈಸೂರು ಸರ್ಕಾರದವರು ಬಸವ ಜಯಂತಿಯಂದು ಐಚ್ಛಿಕ ಸರಕಾರಿ ಸೂಟಿಯನ್ನು ಕೊಡಬೇಕೆಂದು ಮಂಜೂರಿ ದೊರೆತು ಕಾರ್ಯರೂಪದಲ್ಲಿ ಬರುವುದಿತ್ತು(೧೯೬೬).

೪. ಅಶ್ವಾರೂಢ ಶ್ರೀ ಬಸವೇಶ್ವರರ ಭವ್ಯವಾದ ಪ್ರತಿಮೆಯನ್ನು ಸ್ಥಾಪಿಸುವ ಯೋಜನೆ.

೫. ಬಸವಕಲ್ಯಾಣದಲ್ಲಿ 'ಕಾಯಕ ವಿದ್ಯಾನಿಲಯ' ದ ಸ್ಥಾಪನೆ.

೬. ಯಾತ್ರಿಕರ ಅನುಕೂಲತೆಗಾಗಿ ಧರ್ಮಶಾಲೆಯನ್ನು ಕಟ್ಟಿಸುವ ಯೋಜನೆ.

೭. ಪ್ರಾಚೀನ ಮಾದರಿಯ ಭವ್ಯವಾದ ಅಗಸೆ(ಕಮಾನು)ಯನ್ನು ತಯಾರಿಸುವುದು.

೮. ಸಕ್ಕರೆಯ ಕಾರಖಾನೆಯನ್ನು ಪ್ರಾರಂಭಿಸುವ ಯೋಜನೆ. ೧೯೬೭ರ ಸುಮಾರಿಗೆ ಕಾರ್ಖಾನೆಗಾಗಿ ಹುಮನಾಬಾದ ಸಮೀಪ ಸ್ಥಳ ಕೂಡಾ ಮಂಜೂರಾಗಿತ್ತು.

೯. ಪ್ರಾಚ್ಯವಸ್ತು ಸಂಶೋಧನ ಶಾಖೆ ಮತ್ತು ವಸ್ತುಸಂಗ್ರಹಾಲಯದ ಕಟ್ಟಡದ ಯೋಜನೆ.

೧೦. ಐತಿಹಾಸಿಕ ದೇವಾಲಯ ಮತ್ತು ಗವಿಗಳ ಜೀರ್ಣೋದ್ಧಾರ ಹಾಗೂ ಪ್ರಾಚೀನ ಶಿಲ್ಪಕಲೆಯ ಮಾದರಿಗಳ ಸಂರಕ್ಷಣೆ.

೧೧. ಪರುಷಕಟ್ಟೆ ಮತ್ತು ಶ್ರೀ ಅಕ್ಕಮಹಾದೇವಿಯ ಪ್ರಾಥಮಿಕಶಾಲಾ ಕಟ್ಟಡಗಳನ್ನು ಕಟ್ಟಿಸುವ ಯೋಜನೆ : ೧೯೪೮ರಿಂದ ಈ ಕಟ್ಟೆ ದೇವಸ್ಥಾನದ ವಶದಲ್ಲಿದ್ದರೂ ಮುಸಲ್ಮಾನ ಸಮಾಜದವರು ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿದ್ದು, ೧೯೬೭ರ ವರೆಗೂ ಕೋರ್ಟಿನ ತೀರ್ಮಾನ ಬಂದಿರಲಿಲ್ಲ. ಅದಕ್ಕಾಗಿ ಶಾಲಾಕಟ್ಟಡ ಕಟ್ಟುವುದನ್ನು ಸ್ಥಗಿತಗೊಳಿಸಲಾಗಿದೆ.

೧೨. ಶ್ರೀ ಬಸವೇಶ್ವರ ಫ್ರೀ ಬೋರ್ಡಿಂಗಿನ ಸಲುವಾಗಿ ಕಟ್ಟಡದ ಅವಶ್ಯಕತೆ.

೧೩. ಸಾರ್ವಜನಿಕ ಆಸ್ಪತ್ರೆ.

೧೪. ಶಾಲೆಯ ಶೈಕ್ಷಣಿಕ ಪಠ್ಯಪುಸ್ತಕಗಳಲ್ಲಿ ಶ್ರೀ ಬಸವೇಶ್ವರ ಚರಿತ್ರೆ ಮತ್ತು ವಚನ ಸಾಹಿತ್ಯವನ್ನು ಸೇರಿಸುವಂತೆ ಮಾಡುವುದು.

೧೫. ರಾಜ್ಯದ ಪ್ರಮುಖ ರೇಡಿಯೋ ಕೇಂದ್ರಗಳಿಂದ ಶ್ರೀ ಬಸವೇಶ್ವರ ಮತ್ತು ಶಿವಶರಣರ ಚರಿತ್ರೆ ಹಾಗೂ ವಚನಗಳ ಪ್ರಸಾರ.

೧೬. ಇತಿಹಾಸ ಪ್ರಸಿದ್ಧವಾದ ತ್ರಿಪುರಾಂತಕೇಶ್ವರ ಕೆರೆಯನ್ನು ದುರಸ್ತಿಗೊಳಿಸುವುದು.

೧೭. ಬಸ್‌ಸ್ಟ್ಯಾಂಡ್ ಕಟ್ಟಿಸುವ ಯೋಜನೆ : ಈ ಯೋಜನೆಯನ್ನು ಮೈಸೂರು ಸರಕಾರವು ಮಂಜೂರು ಮಾಡಿ, ಸಣ್ಣ ಪ್ರಮಾಣದ ಒಂದು ಸುಂದರವಾದ ಬಸ್ ಸ್ಟ್ಯಾಂಡನ್ನು ಕಟ್ಟಿಸಿರುವರು. ಇದರಿಂದ ಜನತೆಗೆ ಬಹಳೇ ಅನುಕೂಲವಾಗಿದೆ.



ಶ್ರೀ ಬಸವೇಶ್ವರ ದೇವಸ್ಥಾನದ ಗರ್ಭಗೃಹದಲ್ಲಿರುವ ಮೂಲ ನಂದಿಮೂರ್ತಿ

೧೮. ಶ್ರೀ ಬಸವೇಶ್ವರ ಮಹಾಯಾತ್ರೆಯು ಐತಿಹಾಸಿಕ ಘಟನೆಯಾಗಿದೆ: ಪ್ರತಿವರುಷ ಬಸವಜಯಂತಿಯ ಶುಭ ಸಮಯದಲ್ಲಿ, ಜರುಗುವ ಶ್ರೀ ಬಸವೇಶ್ವರ ಮಹಾಯಾತ್ರೆಯು, ಹೈದರಾಬಾದ ಪೋಲಿಸ ಕ್ರಮದ ನಂತರ ಪ್ರಾರಂಭವಾಗಿದೆ. ...ಪೋಲಿಸ ಕ್ರಮದ ನಂತರ ಬಸವಕಲ್ಯಾಣ ಮತ್ತು ಇನ್ನಿತರ ಗ್ರಾಮಗಳ ಪ್ರಮುಖರು, ಶುದ್ಧ ಸಾತ್ವಿಕ ಜೀವಿಗಳಾದ ದೇಶಭಕ್ತ ಮಾನನೀಯ ಶ್ರೀ ಬಾಬಾಸಾಹೇಬ ವಾರದ ಸೋಲಾಪೂರ ಅವರ ಹಿರಿಯತನದಲ್ಲಿ ಕೂಡಿ, ಶ್ರೀ ಬಸವೇಶ್ವರ ಮಹಾಯಾತ್ರೆಯನ್ನು ಪ್ರಾರಂಭ ಮಾಡುವುದಾಗಿ ನಿರ್ಣಯಿಸಿದರು. ...ಶ್ರೀ ಬಸವೇಶ್ವರ ರಥೋತ್ಸವವು ಪ್ರಾರಂಭವಾಯಿತು. ... ಇದೇ ಸುವರ್ಣಸಂಧಿಯಲ್ಲಿ ಶ್ರೀ ಬಸವೇಶ್ವರ ದೇವಸ್ಥಾನ ಸಂಸ್ಥೆಯು ಜನ್ಮತಾಳಿ ತಮ್ಮೆಲ್ಲರ ಸೇವೆ ಮಾಡಲು ಸದಾ ನಿರತವಾಗಿ ನಿಂತಿದೆ.

೧೯. ಬಸವಕಲ್ಯಾಣವನ್ನು ಪ್ರವಾಸಿಕೇಂದ್ರವನ್ನಾಗಿ ಮಾಡುವುದು.

೨೦. ಶ್ರೀ ಬಸವೇಶ್ವರ ದೇವಸ್ಥಾನ ಮತ್ತು ಪರುಷಗಟ್ಟೆಯ ಪಕ್ಕದಲ್ಲಿ ವಾಸಮಾಡಿ ಕೊಂಡಿದ್ದ, ಘೋರ ಮತ್ತು ಕಟುಕ ಜನರ ಮನೆಗಳ ವಿಷಯ: ಕಾಲಾಯ ತಸ್ಮೈನಮಃ. ದಯವೇ ಧರ್ಮದ ಮೂಲವೆಂದು ಪ್ರಪಂಚಕ್ಕೆ ಸಾರಿರುವ ಬಸವಣ್ಣನವರ ದೇವಸ್ಥಾನ ಮತ್ತು ಪರುಷಗಟ್ಟೆಯ ಸಮೀಪದಲ್ಲಿಯೇ ಪ್ರತಿ

ನಿತ್ಯ ಗೋವುಗಳನ್ನು ಕಡಿಯುವುದು, ಅನಂತ ಜೀವರಾಸಿಗಳ ಬಲಿ ತೆಗೆದುಕೊಳ್ಳುವುದು, ಮಾಂಸವನ್ನು ಮಾರುವುದು, ಅಸಹನೀಯ ಹಿಂಸೆಯನ್ನು ನೋಡುತ್ತಿರುವ ಈ ಪಾಪಕಣ್ಣುಗಳ ದುರ್ದೈವಕ್ಕಿಂತ ಹೀನವಾದುದು ಇನ್ನಾವುದಾದರೂ ಇದೆಯೇ? ಈ ಬಗ್ಗೆ ದೇವಸ್ಥಾನ ಸಂಸ್ಥೆಯು ಕಳೆದ ೨೦ ವರ್ಷಗಳಿಂದ ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಆದರೆ ಈ ವಿಷಯದಲ್ಲಿ ಮೈಸೂರು ಸರಕಾರವೂ ಮತ್ತು ಬಸವಕಲ್ಯಾಣದ ನಗರ ಪಾಲಿಕೆಯೂ ಮೌನವನ್ನು ತಾಳಿರುವುದು ಪರಮಾಶ್ಚರ್ಯ.

(**ಆಧಾರ :** ಶ್ರೀ ಬಸವೇಶ್ವರ ದೇವಸ್ಥಾನ ಬಸವಕಲ್ಯಾಣ, ವಾರ್ಷಿಕ ವರದಿ : ೧೯೫೫-೫೬ ರಿಂದ ೧೯೬೫-೬೬ರ ವರೆಗೆ. ಪ್ರಕಟನೆ ೧೯೬೭).

'ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ'ಯನ್ನು ಹುಟ್ಟುಹಾಕಿ, ನಿರಂತರವಾಗಿ ಹೋರಾಟ ಮಾಡುತ್ತ ಬಂದವರು ಶ್ರೀ ಬಾಬಾಸಾಹೇಬ ವಾರದ ಮತ್ತು ಬಸವಕಲ್ಯಾಣದ ಗಣ್ಯನಾಗರಿಕರು. ಈ ಕಮಿಟಿ ಇಂದಿಗೂ ದೇವಸ್ಥಾನದ ಕಟ್ಟಡದಲ್ಲಿಯೆ ತನ್ನ ಕಾರ್ಯಾಲಯವನ್ನು ಹೊಂದಿದೆ. ಹೀಗೆ ಒಂದು ದೇವಸ್ಥಾನ ಕಮಿಟಿ ಒಂದು ನಗರದ ಸಮಗ್ರ ಅಭಿವೃದ್ಧಿಗೆ ರೂಪುರೇಷೆಗಳನ್ನು ಹಾಕಿಕೊಂಡು ನಿರಂತರವಾಗಿ ಪ್ರಯತ್ನಮಾಡುತ್ತ ಬಂದು, ಸರ್ಕಾರ ಮತ್ತು ಸಾರ್ವಜನಿಕರ ಸಹಕಾರದಿಂದ ಒಂದು ನಗರವನ್ನು ಅಭಿವೃದ್ಧಿಪಥದಲ್ಲಿ ಕೊಂಡೊಯ್ದುದು ಅಪರೂಪದ ಉದಾಹರಣೆಯಾಗಿದೆ. ಈ ದೇವಸ್ಥಾನ ಕಮಿಟಿಯ ಎಷ್ಟೋ ಮಹದುದ್ದೇಶಗಳು ಈಗ ಈಡೇರುತ್ತಿರುವುದು ಸೋಜಿಗದ ಸಂಗತಿಯೇ. ಉದಾಹರಣೆಗಾಗಿ ಎಲ್ಲ ಶರಣರ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದು, ಅವುಗಳಿಗೆ ಹೋಗಿ ಬರಲು ರಸ್ತೆಗಳನ್ನು ನಿರ್ಮಿಸುವುದು, ಬಸವಕಲ್ಯಾಣದ ಹೊರವಲಯದಲ್ಲಿ ಸಸ್ತಾಪುರ ಬಂಗ್ಲಾ ಹತ್ತಿರ ದೊಡ್ಡ ಅಗಸೆಯನ್ನು ನಿರ್ಮಿಸುವುದು, ಬಸವ ಜಯಂತಿಯಂದು ಸಾರ್ವತ್ರಿಕ ರಜೆಯ ಘೋಷಣೆ- ಇವೆಲ್ಲವನ್ನು ಸರ್ಕಾರ ಈಗ ಕೈಗೆತ್ತಿಕೊಂಡಿದೆ. ಪರುಷಕಟ್ಟೆಯ ಸುತ್ತಲು ನಡೆಯುವ ಪ್ರಾಣಿ ಹಿಂಸೆಯನ್ನು ನಿಲ್ಲಿಸಿ, ಆ ಜನಗಳಿಗೆ ಬೇರೆಡೆ ಆಶ್ರಯಸ್ಥಾನಗಳನ್ನು ನಿರ್ಮಿಸಿಕೊಡುವ ಕೆಲಸವನ್ನು ಈಗ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಕೈಗೊಂಡಿದೆ ಎಂದು ತಿಳಿದುಬರುತ್ತದೆ. ಅದು ಆದಷ್ಟು ಬೇಗ ಈಡೇರಿದರೆ, ಪರುಷಕಟ್ಟೆಯ ಅಭಿವೃದ್ಧಿಗೆ ಸಹಾಯವಾಗುತ್ತದೆ. ಮತ್ತು ೬೦-೬೫ ವರ್ಷಗಳ ಹಿಂದಿನ 'ಶ್ರೀ ಬಸವೇಶ್ವರ ದೇವಸ್ಥಾನ ಕಮಿಟಿ'ಯ ಕನಸು ನನಸಾದಂತಾಗುತ್ತದೆ. ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಬಸವಕಲ್ಯಾಣ ಪಟ್ಟಣದ ಪರಿಸರ ಸುಧಾರಿಸುತ್ತದೆ. ಬಸವಕಲ್ಯಾಣ ಮತ್ತೆ ಶರಣರ ಸ್ಮಾರಕವಾಗಿ ನಿಲ್ಲುತ್ತದೆ.

ಮಾಹಿತಿ : ಸಿದ್ರಮಪ್ಪ ಬಿಜಾಪುರೆ, ಪರುಷಕಟ್ಟಾ ಶಾಲೆಯ ಮೊದಲ ಶಿಕ್ಷಕರು.

***



ಗರ್ಭಗೃಹದ ನೋಟ

# ೨. ಪರುಷಕಟ್ಟೆ

**ಕರುಣ ಬಂದರ ಕಾಯೋ ಮರಣ ಬಂದರ ಒಯ್ಯೋ**
**ಕರುಣಿ ಕಲ್ಯಾಣ ಬಸವಣ್ಣ । ಕಾಶಿಲಿಂಗ**
**ಕಡೆತನಕ ಕಾಯೋ ಅಭಿಮಾನ**

ಬಸವಣ್ಣನವರು ದಿನನಿತ್ಯವೂ ಸಾರ್ವಜನಿಕರ ಸಂಪರ್ಕಪಡೆಯುವ, ಜನಸಾಮಾನ್ಯರ ಕುಂದುಕೊರೆತುಗಳನ್ನು ಆಲಿಸುವ ಉದ್ದೇಶದಿಂದ, ತಮ್ಮ ಅಧಿಕೃತ ಕಾರ್ಯಕ್ರಮಗಳನ್ನು ಮುಗಿಸಿಕೊಂಡು, ಕೋಟೆಯಿಂದ ಹೊರಟು, ನೇರವಾಗಿ ಬಂದು ಕುಳಿತುಕೊಳ್ಳುತ್ತಿದ್ದ ಸ್ಥಳ ಪರುಷಕಟ್ಟೆಯಾಗಿದೆ. ಈಗಿರುವ ಪರುಷ ಕಟ್ಟೆಯ ಮೇಲೆ ಕಟ್ಟಿದ ಒಂದು ಜಗಲಿಯ ಕೆಳಗೆ ಆಗ ಬಸವಣ್ಣನವರು ಕುಳಿತುಕೊಳ್ಳುತ್ತಿದ್ದ ಒಂದು ಗದ್ದುಗೆ ಇದೆಯಂತೆ. ಗದ್ದುಗೆಯ ಒಂದು ಮಗ್ಗುಲಿಗೆ ಪರುಷ ಬಟ್ಟಲು ಇದೆಯಂತೆ. ಅದರ ಒಂದು ಮಗ್ಗುಲಿಗೆ ಕರಿಮಲ್ಲಿಗೆಯ ಗಿಡ ಇತ್ತೆಂದೂ ಹೇಳಲಾಗುತ್ತದೆ.

ಪರುಷಬಟ್ಟಲು ಎಂದರೆ 'ಒರಳು ಮಾದರಿಯ ಒಂದು ಕಲ್ಲುಬಟ್ಟಲು'. ಅದನ್ನು ನೋಡಿದ ಜನರೂ ಇದ್ದಾರೆ. ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಓಲೆ ಓದಿ, ನಿಧಿಯ ಬಗ್ಗೆ ಹೇಳಿದಾಗ, ಬಿಜ್ಜಳನು ಖುಷಿಯಾಗಿ ಬಸವಣ್ಣನವರಿಗೆ ಏನಾದರೂ ಬಹುಮಾನ ಕೊಡಲು ಯೋಚಿಸಿ, ಏನು ಕೊಡಲಿ? ಎಂದು ಬಸವಣ್ಣನವರನ್ನೇ ಕೇಳಿದರಂತೆ. ನಿಧಿಗಾಗಿ ಅಗಳುವಾಗ ಹೊರ ಬಂದ ಒಂದು ಒರಳಿನ ಆಕಾರದ ಕಲ್ಲುಬಟ್ಟಲನ್ನು ಬಸವಣ್ಣನವರು ಬೇಡಿ ಪಡೆದರಂತೆ. ಅದುವೇ ಪರುಷಬಟ್ಟಲಾಗಿತ್ತು ಎಂದು ಹೇಳಲಾಗುತ್ತದೆ.

ಬಸವಣ್ಣನವರು ಗದ್ದುಗೆ ಮೇಲೆ ಕುಳಿತು ಬಡವರಿಗೆ ಧನ ದಾಸೋಹ ಮಾಡುವಾಗ ಈ ಕಲ್ಲುಬಟ್ಟಲಿನಿಂದ ಧನವನ್ನು ಎತ್ತಿ ಕೊಡುತ್ತಿದ್ದರೆಂದು ಗೊತ್ತಾಗುತ್ತದೆ. ಬೇಕಾದಷ್ಟು ದಾಸೋಹ ಮಾಡಿದರೂ ಅದರಲ್ಲಿಯ ಹಣ ಸವೆಯದೇ ಇದ್ದುದರಿಂದ ಅದನ್ನು ಪರುಷಬಟ್ಟಲು ಎಂದು ಕರೆಯುತ್ತಿದ್ದರೆಂದು ಹೇಳಲಾಗುತ್ತದೆ.

ಮೂಲದಲ್ಲಿ ಪರುಷಕಟ್ಟೆ ಬಹುದೊಡ್ಡ ಮಂಟಪವಾಗಿತ್ತು. ಆ ಮಂಟಪದಿಂದ ಕಿತ್ತು ಬಿದ್ದ, ಕಲಾಕೃತಿಗಳಿಂದ ಕೂಡಿದ ಕಲ್ಲಿನ ಕಂಬಗಳ ಅವಶೇಷಗಳು ಇನ್ನೂ ಪರುಷಕಟ್ಟೆಯ ಸುತ್ತಮುತ್ತ ಬಿದ್ದುಕೊಂಡಿವೆ. ಕಂಬಗಳನ್ನು ನೆಟ್ಟಿದ್ದ ತಳಪಾಯದ




ಪರುಷಕಟ್ಟೆಯ ಮೇಲೆ ಸ್ಥಾಪಿಸಲಾಗಿರುವ ನಂದಿ

ಗುರುತುಗಳನ್ನು ಇವತ್ತಿಗೂ ನೋಡಬಹುದಾಗಿದೆ. ಆದರೆ ಪರುಷ ಕಟ್ಟೆಯ ಸುತ್ತಮುತ್ತ ಈಗ ಮುಸ್ಲೀಮ, ಡೋರ, ಕಟುಗ ಜನಾಂಗ ವಾಸಿಸುತ್ತಿದ್ದು, ಈಗ ಸಧ್ಯ ೧೭೫ ಮನೆಗಳಿವೆ ಎಂದು ತಿಳಿದುಬರುತ್ತದೆ. ಪರುಷಕಟ್ಟೆಯ ಮುಗ್ಗುಲಿಗೇ ದೊಡ್ಡ ಮಸೀದೆಯೊಂದರ ನಿರ್ಮಾಣವಾಗಿದೆ. ಪರುಷಕಟ್ಟೆಯ ಮೇಲೆ ಅನೇಕ ವರ್ಷಗಳವರೆಗೆ ಮಾಂಸವನ್ನು ಕಡಿದು ಮಾರಲಾಗುತ್ತಿತ್ತೆಂದು ಹಿರಿಯರು ಹೇಳುತ್ತಾರೆ. ಮಾಂಸವನ್ನು ಪರುಷ ಕಟ್ಟೆಯ ಮೇಲೆ ಇಟ್ಟು ಮಾರಿದರೆ ಅದು ದ್ವಿಗುಣವಾಗುತ್ತಿತ್ತೆಂಬ ಪ್ರತೀತಿ ಇವತ್ತಿಗೂ ಇದೆ. ಹೀಗೆ ಪರುಷಕಟ್ಟೆ ಮಾಂಸದ ಮಾರುಕಟ್ಟೆಯಾಗಿ ಪರಿಣಮಿಸಲು, ಮತ್ತು ಕಲ್ಯಾಣವು ಕಟುಗರ ಊರಾಗಲು ಕಾರಣವೆಂದರೆ, ಶರಣರ ಕಗ್ಗೊಲೆಯಾದುದನ್ನು ಕಂಡ ಬಸವವಣ್ಣನವರು, **'ಈ ಊರು ಕಟುಗರ ಕೇರಿಯಾಗಲಿ'** ಎಂದುದರ ಕಾರಣವೆಂದು ಜನ ನೆನಸಿಕೊಳ್ಳುತ್ತಾರೆ.

೧೯೪೮ರ ಪೋಲಿಸ್ ಕಾರ್ಯಾಚಣೆ ನಂತರ ನ್ಯಾಯಾಲಯದಲ್ಲಿ ದಾವೆ ನಡೆದು, ಪರುಷ ಕಟ್ಟೆಯನ್ನು ಮುಸ್ಲೀಮರು ಬಿಟ್ಟುಕೊಟ್ಟರು. ಇದಕ್ಕೆಲ್ಲ ಮುಖ್ಯಕಾರಣ ಬಾಬಾಸಾಹೇಬ ವಾರದ ಅವರು. ಅವರು ಬಸವಕಲ್ಯಾಣದ ಸಮಗ್ರ ಅಭಿವೃದ್ಧಿ ಯಾಗಬೇಕೆಂದು ಜೀವಮಾನವಿಡೀ ಹೋರಾಡಿದವರು. ಶರಣರ ಸ್ಥಳಗಳನ್ನು ಉಳಿಸಬೇಕೆಂದು ಚಿಂತಿಸಿದವರು. ಆಗ ಈ ಪರುಷಕಟ್ಟೆಯನ್ನು ಅಭಿವೃದ್ಧಿಪಡಿಸಿ ಒಂದು ದೊಡ್ಡ ಕಟ್ಟೆಯನ್ನು ಕಟ್ಟಿಸಿದರು. ಅಕ್ಕಮಹಾದೇವಿ ಗವಿಯಲ್ಲಿ ದೊರೆತ

ಒಂದು ಗದ್ದುಗೆ ಆಕಾರದ ಕೆತ್ತನೆಯುಳ್ಳ ಶಿಲ್ಪವನ್ನು ತಂದು ಇಟ್ಟು, ಅದರ ಮೇಲೆ ಒಂದು ನಂದಿವಿಗ್ರಹವನ್ನು ಸ್ಥಾಪನೆ ಮಾಡಿದರು.

ಪರುಷಕಟ್ಟೆ ಹತ್ತಿರ ಭೂಮಿಯಲ್ಲಿ ಒಂದು ದೇವಿಯ ವಿಗ್ರಹ ದೊರೆಕಿತ್ತು. ಅದನ್ನು ಈಗ ದೇಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ ಇಟ್ಟಿದ್ದಾರೆ. ಈ ವಿಗ್ರಹವು ಯೋಗಮುದ್ರೆಯಲ್ಲಿದ್ದು, ಎಡಗೈಯಲ್ಲಿ ಲಿಂಗವನ್ನು ಹಿಡಿದಿರುವುದೆಂದೂ ಹೇಳಲಾಗುತ್ತದೆ.

**'ಶ್ರೀ ಪರುಷಕಟ್ಟಾ ಕನ್ನಡ ಪ್ರಾಥಮಿಕ ಶಾಲೆ'** ಎಂಬ ಹೆಸರಿನಲ್ಲಿ ಸುಮಾರು ೧೯೫೨ರಲ್ಲಿ ಒಂದು ಕನ್ನಡ ಶಾಲೆಯನ್ನು ಪ್ರಾರಂಭಿಸಿದರು. ಏಳನೇ ಈಯತ್ತೆ ವರೆಗೆ ಶಿಕ್ಷಣ ಕೊಡಲಾಗುತ್ತಿತ್ತು. ಇದು ಬಸವಕಲ್ಯಾಣದಲ್ಲಿ ಪ್ರಾರಂಭವಾದ ಮೊದಲ ಕನ್ನಡ ಶಾಲೆಯಾಗಿದೆ. ಇಂತಹ ಒಂದು ಕನ್ನಡ ಶಾಲೆ ಪ್ರಾರಂಭವಾಗಲು ಶರಣರ ಪ್ರಭಾವವೇ ಕಾರಣವೆಂಬುದು ಬಹುಮುಖ್ಯ ಸಂಗತಿಯಾಗುತ್ತದೆ. ಈ ಕನ್ನಡ ಶಾಲೆ ಪ್ರಾರಂಭವಾಗಲು ಮುಖ್ಯ ಕಾರಣರು ಶ್ರೀ ಬಾಬಾಸಾಹೇಬ ವಾರದ ಅವರು. ಶ್ರೀ ಸಿದ್ರಾಮಪ್ಪ ಬಿಜಾಪುರೆ, ಶ್ರೀ ಗದಿಗಯ್ಯ ಸ್ವಾಮಿ ಮತ್ತು ಮಡಿವಾಳಪ್ಪ ಬುಡಗೆ ಅವರು ಶಿಕ್ಷಕರಾಗಿ ಬಹುವಾಗಿ ಶ್ರಮಿಸಿದ್ದಾರೆ. ಆದರೆ ಶಾಲೆ ಈಗ ಬೇರೆಡೆ ಸ್ಥಳಾಂತರವಾಗಿದೆ.

ಮುಸ್ಲೀಮರಿಂದ ಪರುಷಕಟ್ಟೆಯನ್ನು ವಶಪಡಿಸಿಕೊಂಡ ನಂತರ, ಸುಮಾರು ೧೯೪೮ರಿಂದ ಇರಬಹುದು, ಪರುಷಕಟ್ಟೆ ಪೂಜೆ ನಿರಂತರವಾಗಿ ನಡೆದಿದೆ. ಶ್ರಾವಣ ಮಾಸದಲ್ಲಿ ಒಂದು ತಿಂಗಳ ಕಾಲ ಭಜನೆ ನಡೆಯುತ್ತದೆ.

ಈಗ ಹಿಂದೂ ಮತ್ತು ಮುಸ್ಲೀಮರ ನಡುವೆ ಯಾವುದೇ ತಕರಾರಿಲ್ಲ. ಸೌಹಾರ್ದ ಸಂಬಂಧ ಏರ್ಪಟ್ಟಿದೆ. ಬಸವಕಲ್ಯಾಣ ಪ್ರಾಧಿಕಾರದವರ ಪ್ರಯತ್ನದಿಂದ ಪರುಷಕಟ್ಟೆಯ ಸುತ್ತಲಿನ ಪ್ರದೇಶವನ್ನು ಬಿಟ್ಟುಕೊಟ್ಟು, ಮುಸ್ಲೀಮರು ಬೇರೆಡೆಗೆ ಹೋಗಲು ಒಪ್ಪಿಕೊಂಡಿದ್ದಾರಂತೆ. ಇನ್ನುಮುಂದೆ ಪರುಷಕಟ್ಟೆಯ ಅಭಿವೃದ್ಧಿ ಸುಗಮವಾಗಿ ಆಗಬಹುದಾಗಿದೆ.

***

## ಪರುಷ ಕಟ್ಟೆ

ಕಲ್ಯಾಣ ಊರಾಗ ಪರುಷಕಟ್ಟಿ ಪವಿತ್ರ
ಬಸವಣ್ಣ ಮೆರೆದಂತ ಜಾಗದು । ಕೋಲೆನ್ನ ಕೋಲೆ ॥ ೧ ॥

ಬಸವಣ್ಣ ಕುಂತಾರ ಸುತ್ತೆಲ್ಲಾ ಭಕುತರು
ಕಷ್ಟಸುಖ ಬಸವಗ ಹೇಳ್ಯಾರ । ಕೋಲೆನ್ನ ಕೋಲೆ ॥ ೨ ॥




**ಪರುಷಕಟ್ಟೆ, ಮಗ್ಗುಲಿಗೆ ಮಸೀದೆ ಇರುವುದನ್ನು ಕಾಣಬಹುದು**

ದರಬಾರಕ ನಡದಾರ ಧರಿಮಗ ಬಸವಣ್ಣ
ದಾರ್‍ಯಾಗ ಇಳಿದು ಕುಂತ ನೆಲ ಅದು । ಕೋಲೆನ್ನ ಕೋಲೆ ॥ ೩ ॥

ಬೇಡಿದ ಜನರಿಗಿ ಬೇಡಿದ್ದು ಕೊಟ್ಟಾರಲ್ಲಿ
ಬೇಡ್ಯಾರ ಭಕುತರು ಬಸವಗ । ಕೋಲೆನ್ನ ಕೋಲೆ ॥ ೪ ॥

ಬೇಡ್ಯಾರ ಭಕುತರು ಬಸವಗ ತಾವಾಗಿ
ಉಡಿತುಂಬಿ ಖಳುವ್ಯಾರ ಬಸವಣ್ಣ । ಕೋಲೆನ್ನ ಕೋಲೆ ॥ ೫ ॥

ಹತ್ತು ಬಡಿಲಾಕ ದರಬಾರಕ ಹೊಂಟಾರ
ಒಂದ ಗಂಟಿ ಮೊದಲ ಇಲ್ಲಿ ತಾ ಕುಂತಾರ । ಕೋಲೆನ್ನ ಕೋಲೆ ॥ ೬ ॥

ಒಂಭತ್ತು ಬಡಿಲಾಕ ಅಲ್ಲಿಗಿ ಬರತಾರ
ಇಲ್ಲದ ಕತೆಯ ಕೇಳ್ಯಾರ ಅಲ್ಲಿ । ಕೋಲೆನ್ನ ಕೋಲೆ ॥ ೭ ॥

ಕಾಲಜ್ಞಾನ ಮಾತೆಲ್ಲ ಅಲ್ಲಿ ನಿಂತು ನುಡಿತಾರ
ಜನರೆಲ್ಲ ಕೇಳಿ ಕೈಯ ಮುಗಿತಾರ । ಕೋಲೆನ್ನ ಕೋಲೆ ॥ ೮ ॥

ಬಸವನ ನುಡಿಯೆಂಬುದ ಹುಸಿಹ್ಯಾಂಗ ಆಗ್ಯಾತು
ಧರಣೀಯ ಮ್ಯಾಲ ನಡದಾದ ಸೋಜಿಗ । ಕೋಲೆನ್ನ ಕೋಲೆ ॥ ೯ ॥

**– ಶ್ರೀಮತಿ ಗೌರವ್ವ ಕಾಡಾದಿ**

***


# ೩. ಪೀರಪಾಶಾ ಬಂಗಲಾ

ಬಸವಸಾರಿದನಂದು ಕುಶಲದಲಿ ವಚನಗಳ
ಮುಸುಕಿರುಳು ಹರಿದು ನಸುಕಾತು। ಜಗದೊಳಗೆ
ಹೊಸಮತದ ಸೂರ್ಯನುದಿಸಿದನು

**'ಪೀರಪಾಶಾ ಬಂಗಲಾ'** ಖಂಡಿತವಾಗಿ ಇದೊಂದು ಶೈವಪರಂಪರೆಯ ಸ್ಮಾರಕವಾಗಿದೆ. ಬಸವಣ್ಣನವರ ಗುಡಿಯ ಹಿಂದೆಯೇ ಇರುವ ಈ ಸ್ಥಳ ತನ್ನ ಪುರಾತನ ಲಕ್ಷಣಗಳಿಂದ ಮತ್ತು ವಾಸ್ತುಶಿಲ್ಪದ ಲಕ್ಷಣಗಳಿಂದ ಗಮನ ಸೆಳೆಯುತ್ತದೆ. ಊರಿನ ಮಧ್ಯದಲ್ಲಿರುವ ಸ್ಥಳವಿದು. ತುಂಬಾ ವಿಸ್ತಾರವಾಗಿದೆ. ಸುಮಾರು ನಾಲ್ಕೈದು ಎಕರೆಯಷ್ಟು ಸ್ಥಳವಿದೆ. ಸುತ್ತಲೂ ದೊಡ್ಡ ಆವಾರ ಗೋಡೆ ಇದೆ. ಅಲ್ಲಲ್ಲಿ ನಂದಿಮೂರ್ತಿಗಳು ಇದ್ದವೆಂದು ಹೇಳುತ್ತಾರೆ. ಆವಾರದಲ್ಲಿ ಒಳಗಡೆ ಬಹುದೊಡ್ಡದಾದ ಒಂದು ಬಾವಿಯೂ ಇದೆ.



ಪೀರಪಾಶಾ ಬಂಗಲಾದ ಹೊರನೋಟ



ಪೀರಪಾಶಾ ಬಂಗಲಾದ ಒಳಗಡೆ ಇರುವ ಕಲ್ಲಿನ ಮಂಟಪ

ಶರಣ ವ್ಹಿ. ಸಿದ್ಧರಾಮಣ್ಣನವರ ನೇತೃತ್ವದಲ್ಲಿ ಈ ಮಸೀದಿಯನ್ನು ಪ್ರವೇಶಿಸಲು ಮತ್ತು ಈಕ್ಷಿಸಲು ನಮಗೆ ಸಾಧ್ಯವಾಯಿತು. ಯಾರಿಗೂ ಒಳಗಡೆ ಬಿಡುತ್ತಿರಲಿಲ್ಲವಂತೆ. ಛಾಯಾಚಿತ್ರಗಳನ್ನಂತೂ ತೆಗೆಯಲು ಸಾಧ್ಯವೇ ಇರಲಿಲ್ಲವಂತೆ. ಆದರೆ ಸಿದ್ಧರಾಮಣ್ಣನವರು ಮುಂದಾಗಿ ಬಾಗಿಲು ತೆರೆದು ಒಳನಡೆದರು. ಯಾರೂ ಪ್ರಶ್ನಿಸಲಿಲ್ಲ. ಹೀಗಾಗಿ ನಮಗೆ ಅಲ್ಲಿ ಪ್ರವೇಶಿಸಿ ಪರಿಶೀಲಿಸಲು ಸಾಧ್ಯವಾಯಿತು.

ಪೀರಪಾಶಾ ಬಂಗಲಾದ ದ್ವಾರಬಾಗಿಲು ಪ್ರವೇಶಿಸುವ ಮೊದಲೇ ಗೋಡೆಯಲ್ಲಿ ಎಡಕ್ಕೆ ನಂದಿವಿಗ್ರಹ ಇತ್ತು, ಅದನ್ನೀಗ ಮುಚ್ಚಿಹಾಕಲಾಗಿದೆ ಎಂದು ಹೇಳುತ್ತಾರೆ. ಒಳಗೆ ಪ್ರವೇಶಿಸುತ್ತಲೇ ಎದುರಿಗೆ ವಿಶಾಲವಾದ ಕಟ್ಟೆಯ ಮೇಲೆ ಒಂದು ದೊಡ್ಡ ಕಲ್ಲಿನ ಮಂಟಪವಿದ್ದು, ನಡುವೆ ನಂದಿ ವಿಗ್ರಹ ಇರುವಂತೆ ತೋರುತ್ತದೆ. ನಂದಿವಿಗ್ರಹವನ್ನು ಹಸಿರುಗಲ್ಲೀಪ ಹೊದಿಸಿ ಮಜೇರಿಯಂತೆ ಮಾಡಲಾಗಿದೆ. ನಂದಿಯ ಸುತ್ತಲೂ ಒಂದು ಅಂಕಣ ಪೂರ್ತಿ ಚೌಕಾಕಾರವಾಗಿ ಕಟ್ಟಿಗೆಯ ಪಳಿಗಳನ್ನು ಜೋಡಿಸಿ, ಒಳಗಡೆ ಯಾರನ್ನೂ ಬಿಡದಂತೆ ಮಾಡಲಾಗಿದೆ. ಈ ಮಜೇರಿಯ ಸುತ್ತಲೂ ನೆಲಕ್ಕೆ ಹಾಸಿದ ಕಲ್ಲುಗಳ ಮೇಲೆ ೧ ರಿಂದ ೧೦ರ ವರೆಗೆ ಕನ್ನಡದ ಅಂಕಿ ಕೆತ್ತಿರುವುದು ಕಟ್ಟಿಗೆಯ ಸಂದುಗಳಿಂದ ಈಕ್ಷಿಸಿದಾಗ ಸ್ಪಷ್ಟವಾಗಿ ಕಾಣುತ್ತದೆ.

ಮಂಟಪದ ರಚನೆ **ಚಾಲುಕ್ಯ** ಮಾದರಿಯಲ್ಲಿಯೇ ಇದೆ. ಇದು ಶರಣರಕ್ಕಿಂತ ಪೂರ್ವದ ಕಟ್ಟಡವೆನಿಸುತ್ತದೆ. ಈ ಮಂಟಪದ ಎದುರಿಗೆ ಒಂದು ನೀರಿನ ಪುಷ್ಕರಣಿ ಇದ್ದು ಅದನ್ನು ಕಲ್ಲಿನಿಂದ ಸುಂದರವಾಗಿ ರಚಿಸಲಾಗಿದೆ.

ಪೀರಪಾಶಾ ಬಂಗಲಾ ಮಹಾದ್ವಾರದ ಎದುರಿಗೆ ಇರುವ ವಿಸ್ತಾರವಾದ ಕಲ್ಲಿನ ಮಂಟಪದ ಒಳಗಡೆ ಈಗ ಮಜೇರಿಯಂತೆ ಕಾಣುವಲ್ಲಿ, ಒಳಗಡೆ ನಂದಿ ಹುದುಗಿರುವುದೇ ನಿಜವಾದರೆ ಇದು ಬಹುಶಃ ನಂದಿಮಂಟಪವೇ ಆಗಿರಬೇಕೆನಿಸುತ್ತದೆ. ಈ ಆವಾರದ ಹಲವಾರು ಕಡೆ ನಂದಿವಿಗ್ರಹಗಳಿದ್ದವೆಂದು ಸ್ಥಳೀಯರು ಹೇಳುತ್ತಾರೆ. ಯಾವುದೋ ಉತ್ಸವದ ಸಂದರ್ಭದಲ್ಲಿ ಅರಸನು ಸಾರ್ವಜನಿಕರೊಡನೆ ಭಾಗವಹಿಸುವ, ಬಹುದೊಡ್ಡ ಕಾರ್ಯಕ್ರಮ ನಡೆಯುವ ಸ್ಥಳ ಇದಾಗಿರಬೇಕೆನಿಸುತ್ತದೆ.

ಕೋಟೆಯಲ್ಲಿ ಅಧಿಕಾರಿಗಳಿಗೆ ಮಾತ್ರ ಪ್ರವೇಶ ಇರುವುದರಿಂದ ಸಾರ್ವಜನಿಕರೊಂದಿಗೆ ಆಗಾಗ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಿರ್ಮಿಸಿದ ಸ್ಮಾರಕ ನಂದಿ ಮಂಟಪ ಅದಾಗಿರಬಹುದಾಗಿದೆ. ಇದನ್ನು ಅನುಭವ ಮಂಟಪವಾಗಿರಬಹುದಾದ ಸ್ಮಾರಕ ಎಂದು ಕಲ್ಯಾಣದ ಹಿರಿಯರು ಭಾವಿಸುತ್ತಾರೆ. ಮತ್ತು ಮೊದಲಿನಿಂದಲೂ ಹಾಗೇ ಹೇಳುತ್ತ ಬರಲಾಗಿದೆ. ೧೨ನೇ ಶತಮಾನದಲ್ಲಿ ಅದು ಹಾಗೆ ಬಳಕೆಯಾಗಿರಲೂ ಬಹುದಾಗಿದೆ.

ಅತ್ಯಂತ ವಿಶಾಲವಾದ ಸ್ಥಳ ಹೊಂದಿರುವ ಪೀರಪಾಶಾ ಬಂಗಲಾದಲ್ಲಿ ನಂದಿ ಮಂಟಪಕ್ಕೆ ಹತ್ತಿಕೊಂಡು ಕೃತಕ ಗೋರಿಗಳ ನಿರ್ಮಾಣವಾಗಿರುವಂತೆ ತೋರುತ್ತದೆ. ವಿಶಾಲವಾದ ಕಟ್ಟೆಯ ಮೇಲೆ ದೊಡ್ಡ ಡೇರೆ ಹಾಕಲು ಅನುವಾಗುವಂತೆ



ಪೀರಪಾಶಾ ಬಂಗಲಾದ ಒಗಳಡೆ ಇರುವ ಸಣ್ಣ ಮಂಟಪ



ಪೀರಪಾಶಾ ಬಂಗಲಾ ಒಳಗಡೆ ಕಲ್ಲಿನ ಮಂಟಪದ ಹಿಂದೆ ಇರುವ ಮಹಲು

ನಾಲ್ಕೂ ಕಡೆ ನಡುನಡುವೆ ಹುಕ್ಕುಗಳು ಇವೆ. ಈ ಆವಾರದ ಒಳಗಡೆಯೆ ಮುಸ್ಲೀಮ ಜನಾಂಗದ ಒಂದು ಕುಟುಂಬ ಮಾತ್ರ ವಾಸವಾಗಿದೆ.

ಮಂಟಪಕ್ಕೆ ಹೊಂದಿಕೊಂಡೇ ಕಟ್ಟೆಯ ಕೆಳಗೆ ಒಂದು ದೊಡ್ಡ ಶಾಸನಬರಹವುಳ್ಳ ಕಲ್ಲಿದೆ. ಇದು ಚಾಲುಕ್ಯ ಜಗದೇಕಮಲ್ಲನಿಗೆ ಸಂಬಂಧಿಸಿದ ಶಾಸನವಾಗಿದೆ ಎಂದು ತಿಳಿದುಬರುತ್ತದೆ. ಅದನ್ನು ಜಾರುಬಂಡಿಯಂತೆ ಮಕ್ಕಳು ಬಳಸಿ ಬಳಸಿ ನುಣುಪು ಕಲ್ಲಂತಾಗಿದೆ. ಅಕ್ಷರಗಳು ಸಂಪೂರ್ಣವಾಗಿ ಸವೆದುಹೋಗಿವೆ. ಶಾಸನ ಬಿದ್ದಲ್ಲಿಂದ ಎದುರಿಗೆ ಒಂದು ಚಿಕ್ಕ ಅರಮನೆಯಂತಿರುವ ಕಟ್ಟಡವಿದೆ. ಮತ್ತೆ ಒಂದು ಸಣ್ಣ ಮಂಟಪವಿದೆ. ಇವೆಲ್ಲ ಅರಸರು ಬಳಸುವ ಸ್ಥಳಗಳು ಎಂಬುದನ್ನು ಸಾರಿ ಹೇಳುತ್ತವೆ.


ಆರನೇ ವಿಕ್ರಮಾದಿತ್ಯ, ಕೊಂಡಗುಳಿ ಕೇಶಿರಾಜ ಇಂಥವರು ಇದನ್ನು ರಚಿಸಿ, ಬಳಸಿರಬಹುದಾಗಿದೆ. ಇಂತಹ ಸ್ಥಳವನ್ನು ಶರಣರು ಹೇಗೆ ಬಳಸಿಕೊಂಡರು ಎಂಬುದರ ಕುರಿತು ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆ ಇದೆ.

ಮಾಹಿತಿ : ಶರಣ ವಿ. ಸಿದ್ಧರಾಮಣ್ಣ

***

# ೪. ಬಸವಕಲ್ಯಾಣ ಕೋಟೆ

ಚಾಲುಕ್ಯ ವಂಶದ ೧ನೇ ಸೋಮೇಶ್ವರನು ೧೧ನೇ ಶತಮಾನದಲ್ಲಿ ಬಸವಕಲ್ಯಾಣವನ್ನು ರಾಜ್ಯಧಾನಿಯನ್ನಾಗಿಸಿಕೊಂಡನು. ಬಹುಶಃ ಈತನೇ ಕಟ್ಟಿರಬಹುದಾಗಿದ್ದ ಕಲ್ಯಾಣದ ಮೊದಲಿನ ಕೋಟೆ ೧೦೫೦ ರಲ್ಲಿ ಚೋಳರ ದಾಳಿಗೆ ತುತ್ತಾಗಿ ಸಂಪೂರ್ಣವಾಗಿ ಭಸ್ಮವಾಯಿತು. ಮುಂದೆ ೧೦೮೦ರಲ್ಲಿ ಇಲ್ಲಿ ಸುಂದರವಾದ, ಭದ್ರವಾದ ಕೋಟೆ ಇದ್ದ ಬಗ್ಗೆ ಶಾಸನಗಳು ಉಲ್ಲೇಖ ಮಾಡುವುದರಿಂದ ೧೦೫೦-೧೦೮೦ ಈ ೩೦ ವರ್ಷಗಳ ಅವಧಿಯಲ್ಲಿ, ಅಂದರೆ ೧ನೇ ಸೋಮೇಶ್ವರ ಮತ್ತು ಅವನ ಮಗ ೬ನೇ ವಿಕ್ರಮಾದಿತ್ಯನ ಪ್ರಾರಂಭದ ವರ್ಷಗಳಲ್ಲಿ ಈಗಿರುವ ಪ್ರಾಚೀನ ಭಾಗದ ಕೋಟೆ ನಿರ್ಮಾಣವಾಗಿರುವ ಸಾಧ್ಯತೆ ಇದೆ. ೧೦೪೦ರ ಸುಮಾರಿಗೆ ಕಲ್ಯಾಣಕ್ಕೆ ಬಂದ ಚಾಲುಕ್ಯರು ಮುಂದೆ ಒಂದು ನೂರು ವರ್ಷ ಆಳಿದರೆಂದು ಗೊತ್ತಾಗುತ್ತದೆ. ಕೊನೆಯಲ್ಲಿ ಆಳಿದವರು ಬಿಜ್ಜಳ ಮತ್ತು ಅವನ ವಂಶಜರಾದ ಕಲಚುರಿ ಮನೆತನದವರು.



ಬಸವಕಲ್ಯಾಣ ಕೋಟೆಯ ಪ್ರವೇಶ ದ್ವಾರ



ಇಲ್ಲಿಂದ ಚಾಲುಕ್ಯರ ಕಾಲದ ಕೋಟೆ ಭಾಗ ಪ್ರಾರಂಭವಾಗುತ್ತದೆ

ಒಂದನೇ ಸೋಮೇಶ್ವರನ ಮಗನೇ ೬ನೇ ವಿಕ್ರಮಾದಿತ್ಯ. ಈತ ೧೦೭೬-೧೧೨೭ರ ವರೆಗೆ ಆಳಿದನೆಂದು ಗೊತ್ತಾಗುತ್ತದೆ. ಬಿಜ್ಜಳನ ತಾಯಿ ಆರನೇ ವಿಕ್ರಮಾದಿತ್ಯನ ಮಗಳು. ಹೀಗಾಗಿ ಬಾಲ್ಯದಿಂದಲೂ ಮಹತ್ವಾಕಾಂಕ್ಷಿಯಾದ ಬಿಜ್ಜಳನು, ಮಂಗಳವೇಡೆಯ ಮಾಂಡಲಿಕನಾಗಿದ್ದವನು, ಒಮ್ಮೆಗೇ ಕಲ್ಯಾಣದ ಸಾಮ್ರಾಟನಾಗಲು ಸಾಧ್ಯವಾಯಿತು. ಕಲ್ಯಾಣ ಕೋಟೆ ಯಾರ ವಶದಲ್ಲಿರುತ್ತದೋ ಅವರು ದಕ್ಷಿಣ ಭಾರತವನ್ನು ಆಳುತ್ತಾರೆಂಬ ನಂಬುಗೆ ಆಗಿನ ಕಾಲದಲ್ಲಿತ್ತಂತೆ. ಹೀಗಾಗಿ ಚಾಲುಕ್ಯರು ಅನೇಕ ಯುದ್ಧಗಳನ್ನು ಎದುರಿಸಬೇಕಾಯಿತೆಂದು ತೋರುತ್ತದೆ.


ಈಗಿರುವ ಬಸವಕಲ್ಯಾಣದ ಕೋಟೆ ತುಂಬಾ ಸುಸ್ಥಿತಿಯಲ್ಲಿದೆ. ಹಳೆಯ ಕೋಟೆಯನ್ನು ಆಗಾಗ ಪುನರುಜ್ಜೀವನಗೊಳಿಸುವ, ವಿಸ್ತರಿಸುವ ಕೆಲಸ ನಡೆದಿದೆ ಎಂಬುದು ಕೋಟೆ ನೋಡಿದ ಯಾರಿಗಾದರೂ ಸಹಜವಾಗಿ ಕಂಡುಬರುಬ ಸಂಗತಿಯಾಗಿದೆ. ಮೂಲ ಕೋಟೆ ಗೋಲಾಕಾರವಾಗಿಯೇ ಇದೆ. ಅದರಲ್ಲಿಯೇ ಅರಸರ ವಾಸಸ್ತಾನದ ಮನೆ, ಕಛೇರಿ ಭಾಗ, ಹಾಗೂ ಸಭಾಮಂಟಪದ ಭಾಗ ಹೀಗೆ ಮೂರು ಮುಖ್ಯ ಭಾಗಗಳಿದ್ದು, ಮತ್ತೆ ಅವಶ್ಯವಾದ ಭಾಗಗಳೂ ಇವೆ.

ಬಸವಣ್ಣನವರು ಬಿಜ್ಜಳನ ಪ್ರಧಾನಿಯಾಗಿ ಕೆಲಸಮಾಡಿದ ಸ್ಥಳ ಬಸವಕಲ್ಯಾಣ ಕೋಟೆ. ಇಲ್ಲಿ ಕಛೇರಿ ಇರುವ ಆವರಣದಲ್ಲಿ ಒಂದು ಮಂದಿರದ ಸ್ಥಳವಿದ್ದು, ಅದು ಕಾಲಕಾಲಕ್ಕೆ ಆಯಾ ಅರಸರು ತಮ್ಮ ತಮ್ಮ ಆರಾಧ್ಯ ದೈವದ ಹೆಸರಿನಿಂದ ಕರೆಯುತ್ತ ಬಂದಂತೆ ತೋರುತ್ತದೆ. ಮಂದಿರದ ಬಾಗಿಲಿನ ತೋಳುಗಳು

ಕಲ್ಲಿನಿಂದ ನಿರ್ಮಿತವಾಗಿದ್ದು, ಚಾಲುಕ್ಯಶೈಲಿಯಲ್ಲಿದೆ. ಭೀಮೇಶ ಮಂದಿರ ಎಂದೂ ಲಕ್ಷ್ಮಿ ಮಂದಿರ ಎಂದೂ ಉಲ್ಲೇಖಗಳೂ ದೊರೆಯುತ್ತವೆ; ಮೌಖಿಕ ಮಾಹಿತಿಯೂ ದೊರೆಯುತ್ತದೆ. ಆದರೆ ಇತ್ತೀನವರೆಗೆ ಸುಮಾರು ೫೦ ವರ್ಷಗಳ ಹಿಂದಿನವರೆಗೆ ಆ ಮಂದಿರದಲ್ಲಿ ಶಿವಲಿಂಗವಿತ್ತೆಂದೂ, ಅದನ್ನು ನಂತರ ಕಿತ್ತಿಹಾಕಲಾಗಿದೆ ಎಂದೂ ನೋಡಿದ ಹಿರಿಯರು ಹೇಳುತ್ತ ಬಂದಿರುವ ಒಂದು ಗಮನಾರ್ಹ ಮಾಹಿತಿ ನಮಗೆ ದೊರೆಯುತ್ತದೆ. ಆರನೇ ವಿಕ್ರಮಾದಿತ್ಯನಂತಹ ದೊರೆ, ಕೊಂಡಗುಳಿ ಕೇಶಿರಾಜನಂತಹ ಮಂತ್ರಿಗಳು ಕೆಲಸ ಮಾಡಿದ, ವಾಸವಾಗಿದ್ದ ಕೋಟೆ ಅದಾಗಿರುವುದರಿಂದ ಆ ಮಂದಿರದಲ್ಲಿ ಶಿವಲಿಂಗವಿರುವ ಸಾಧ್ಯತೆ ಇದೆ. ಎದುರಿನಲ್ಲಿ ಒಂದು ಸಣ್ಣ ನೀರಿನ ಕಲ್ಯಾಣಿಯೂ ಇದೆ. ಹೀಗಾಗಿ ಇಲ್ಲಿಯ ಮಂದಿರದಲ್ಲಿ ಬಸವಣ್ಣನವರು ಪೂಜೆ ಮಾಡಿಕೊಳ್ಳುತ್ತಿದ್ದಿರಬಹುದೆಂದೂ ಕಲ್ಯಾಣಿಯ ನೀರನ್ನು ಪೂಜೆಗೆ ಬಳಸಿರಬಹುದೆಂದೂ ಶರಣ ವ್ಹಿ. ಸಿದ್ಧರಾಮಣ್ಣನವರು ವಿವರಿಸುತ್ತಾರೆ. ಇಷ್ಟೊಂದು ಎತ್ತರದಲ್ಲಿ ನೀರು ಇರುವುದು ಇಂದಿಗೂ ಆಶ್ಚರ್ಯದ ಸಂಗತಿಯೇ ಆಗಿದೆ. ಈ ಕೋಟೆಯ ಇನ್ನೂ ಎತ್ತರದ ಸ್ಥಳದಲ್ಲಿ ಒಂದು ಬಾವಿ ಇದ್ದು, ಅದರಲ್ಲಿ ಇಂದಿಗೂ ನೀರು ಇದೆ. ಬಾವಿಯ ಕಟ್ಟಡ ಗಟ್ಟಿಯಾಗಿದ್ದು, ಅಲ್ಲಿ ಸೇದಿ ಮಂತಣಿಗೆ ಬಿದ್ದನೀರು ಹರಿದು ಹೋಗಲು ಎಡಕ್ಕೆ ಮತ್ತು ಬಲಕ್ಕೆ ಮಾರ್ಗಗಳಿವೆ. ಅಂದರೆ ಕೋಟೆಯಲ್ಲಿ ನೀರಿನ ಸರಬರಾಜು ವ್ಯವಸ್ಥೆ ಈ ಬಾವಿಯಿಂದ ಆಗುತ್ತಿತ್ತು ಎಂದು ತೋರುತ್ತದೆ.



ಕಛೇರಿಯ ಅಂಗಳ, ಎಡಕ್ಕೆ ಮೂಲೆಯಲ್ಲಿರುವ ಕೋಣೆಯೇ ದೇವರ ಕೋಣೆ
ಅಂಗಳದಲ್ಲಿ ಕಾಣುವ ಕಲ್ಯಾಣಿಯ ನೀರು ಸಂಪೂರ್ಣ ಬತ್ತುವುದಿಲ್ಲ



ಕಛೇರಿಯ ಒಳಾಂಗಣದ ಒಂದು ಸಾಲು


ಕೋಟೆಯ ತೀರ ಮೇಲ್ತುದಿಯಲ್ಲಿ ಅರಸರು ಮಂತ್ರಿಗಳೊಂದಿಗೆ ನಡೆಸುವ ಸಮಾಲೋಚನಾ ಸಭಾಗೃಹವಿದೆ. ಇಲ್ಲಿ ಅರಸನ ಸಿಂಹಾಸನ ಇಡುವ ಸ್ಥಳ, ಮಂತ್ರಿಮಾನ್ಯರು ಕುಳಿತುಕೊಳ್ಳುವ ಸ್ಥಳದೊಂದಿಗೆ ಬಸವಣ್ಣನವರು ಓಲೆ ಓದಿ ನಿಧಿಯನ್ನು ತೋರಿಸಿದ ಸ್ಥಳ ಈ ಸಭಾಂಗಣದ ನಡುವೆಯೇ ಇರಬೇಕೆನ್ನುತ್ತಾರೆ ಶರಣ ಸಿದ್ಧರಾಮಣ್ಣನವರು. ಆದರೆ ಈ ಸಭಾಂಗಣದ ಸ್ಥಳವನ್ನು ಆಗಾಗ ತಮಗೆ ಸರಿಕಂಡಂತೆ ನವೀನ ರೀತಿಯಲ್ಲಿ ಬದಲಾಯಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಆದರೆ ಬಹುಶಃ ಸಿಂಹಾಸನ ಇರುವ ಸ್ಥಳ, ಸಭೆ ನಡೆಯುವ ಸ್ಥಳ ಇದೆ ಆಗಿರುವ ಸಾಧ್ಯತೆ ಇದೆ. ಏಕೆಂದರೆ ಕಛೇರಿ ಸ್ಥಳ ಬಿಟ್ಟರೆ ಈ ಕೋಟೆಯಲ್ಲಿ ಬೇರೊಂದು ವಿಸ್ತಾರವಾದ ಸ್ಥಳ ಇಲ್ಲ. ಹೀಗಾಗಿ ತೀರ ಆಧುನಿಕ ರೀತಿಯಲ್ಲಿ ಬದಲಾವಣೆ ಮಾಡಿದ್ದು ಕಂಡುಬಂದರೂ ಪ್ರಾಚೀನ ಕಾಲದಲ್ಲೂ ಅರಸರ ಸಭಾಮಂಟಪದ ಸ್ಥಳ, ಸಿಂಹಾಸನ ಇರಬಹುದಾದ ಸ್ಥಳ ಇದೇ ಆಗಿರುವ ಸಾಧ್ಯತೆಯೇ ಹೆಚ್ಚು.

ಈ ಸಭಾಭವನದ ಹಿಂದಿನ ಕಟ್ಟಡದ ರಚನೆಯನ್ನು ಗಮನಿಸಿದರೆ, ಅರಸನು ಕಛೇರಿಯಿಂದ, ಅರಭಾಗದಿಂದ ನೇರವಾಗಿ ಸಿಂಹಾಸನದ ಇರುವ ಸ್ಥಳಕ್ಕೆ ಬರುವ ಮಾರ್ಗಗಳಿವೆ. ಹಿಂದೆಯೇ ವಿಶ್ರಾಂತಿ ಕೋಣೆಗಳಿವೆ. ಹೀಗಾಗಿ ಈಗ ನೃತ್ಯ ಮಹಲ್ ಎಂದು ಕರೆಯುವ ಸಭಾಭವನವೇ ಅರಮನೆಯ ಸಭಾಭವನ ಆಗಿರುವ ಹೆಚ್ಚಿನ ಸಾಧ್ಯತೆ ಇದೆ.

ಈ ಕಿಲ್ಲೆಯನ್ನು ಈಗ ಜನವಸತಿಯಿಂದ ಖಾಲಿ ಮಾಡಿಸಿದ್ದು, ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರವು ತನ್ನ ಅಧೀನಕ್ಕೆ ತೆಗೆದುಕೊಂಡಿದೆ. ಪ್ರಾಧಿಕಾರವು ಇವನ್ನು ಇನ್ನಷ್ಟು ಸುಂದರಗೊಳಿಸಿದರೆ, ಇದು ಐತಿಹಾಸಿಕ ಸ್ಥಳದ ಜೊತೆಗೆ ಶರಣ ಸ್ಥಳವೂ ಆಗಿ ಪ್ರಸಿದ್ಧಿ ಹೊಂದುವುದರಲ್ಲಿ ಆಶ್ಚರ್ಯವಿಲ್ಲ.

***

ಮಾಹಿತಿ : ಶರಣ ವ್ಹಿ. ಸಿದ್ಧರಾಮಣ್ಣ



**ಕಲ್ಯಾಣಿ ಇರುವುದು ಕಛೇರಿಯ ಅಂಗಳದಲ್ಲಿ, ಸುತ್ತಲೂ ಕಛೇರಿಯ ಕೋಣೆಗಳಿವೆ**




ಕೋಟೆಯ ಒಳಗೆ ಇರುವ ಮಂದಿರ, ಇದರ ಎದುರೇ ಕಲ್ಯಾಣಿ ಇರುವುದು



ಮಂದಿರದ ಶಿಲಾ ದ್ವಾರ, ಒಳಗಡೆ ಎದುರಿಗೇ ಶಿವಲಿಂಗ ವಿತ್ತಂತೆ



ದರ್ಬಾರ ಪಡಸಾಲೆ, ಸ್ಥಳ ಹಳೆಯದು, ಕಟ್ಟಡ ಆಗಾಗ ಬದಲಾಗಿದೆ



ಕೋಟೆಯ ತುದಿಯಲ್ಲಿರುವ ಸೇದು ಬಾವಿ. ಈಗಲೂ ನೀರಿದೆ
ಕೋಟೆಯ ಒಳಗಡೆ ನೀರು ಸರಬರಾಜು ಇಲ್ಲಿಂದಲೇ ಆಗುತ್ತಿತ್ತು




ದರ್ಬಾರ ಪಡಸಾಲೆಯಲ್ಲಿ ಸಿಂಹಾಸನದ ಎದುರಿನ ಸ್ಥಳ

# ೫. ಜೇಡರ ದಾಸಿಮಯ್ಯ-ದುಗ್ಗಳೆ

ಬಸವಕಲ್ಯಾಣದ ಶಹಪೂರ ಓಣಿಯಲ್ಲಿ ಜೇಡರ ದಾಸಿಮಯ್ಯನ ಸ್ಮಾರಕವಾಗಿ ಒಂದು ಮಠ ಉಳಿದುಕೊಂಡು ಬಂದಿದೆ. ಆದ್ಯ ವಚನಕಾರನಾದ ಜೇಡರ ದಾಸಿಮಯ್ಯ ಬಸವಣ್ಣನವರ ಕಾಲಕ್ಕೆ ಬಸವಕಲ್ಯಾಣಕ್ಕೆ ಬಂದಿದ್ದರೆಂಬ ಬಗ್ಗೆ ಲಿಖಿತವಾದ ಖಚಿತಮಾಹಿತಿಗಳು ಲಭ್ಯವಿಲ್ಲ. ಜೇಡರ ದಾಸಿಮಯ್ಯ ಶರಣರನ್ನು ಸ್ಮರಿಸುವದಿಲ್ಲ, ಆದರೆ ಪ್ರಮಥರು, ಪುರಾತನರನ್ನು ನೆನೆಯುತ್ತಾನೆ. ದುಗ್ಗಳೆ ಮಾತ್ರ ಬಸವಾದಿ ಶರಣರನ್ನು ಸ್ಮರಿಸುತ್ತಾಳೆ.

೧. ಬಸವಣ್ಣನಿಂದ ಗುರುಪ್ರಸಾದಿಯಾದೆನು
ಚೆನ್ನಬಸವಣ್ಣನಿಂದ ಲಿಂಗಪ್ರಸಾದಿಯಾದೆನು
ಪ್ರಭುದೇವರಿಂದ ಜಂಗಮ ಪ್ರಸಾದಿಯಾದೆನು
ಮರುಳ ಶಂಕರದೇವರಿಂದ ಮಹಾಪ್ರಸಾದಿಯಾದೆನು.
ಇಂತೀ ಚತುರ್ವಿಧವು ಏಕೀಭವಿಸಿ ಪ್ರಾಣಲಿಂಗವಾದ
ಮಹಾಮಹಿಮಂಗೆ ಶರಣೆಂದು ಬದುಕಿದೆನಯ್ಯಾ
ದಾಸಯ್ಯಪ್ರಿಯ ರಾಮನಾಥಾ

೨. ಭಕ್ತನಾದಡೆ ಬಸವಣ್ಣನಂತಾಗಬೇಕು
ಜಂಗಮವಾದಡೆ ಪ್ರಭುದೇವರಂತಾಗಬೇಕು
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು
ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು.
ಐಕ್ಯನಾದಡೆ ಅಜಗಣ್ಣನಂತಾಗಬೇಕು
ಇಂತಿವರ ಕಾರುಣ್ಯ ಪ್ರಸಾದವಕೊಂಡು
ಸತ್ತಹಾಗಿರಬೇಕಲ್ಲದೆ ತತ್ತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥ

**'ದಾಸಯ್ಯಪ್ರಿಯ ರಾಮನಾಥ'** ಅಂಕಿತದಲ್ಲಿ ದುಗ್ಗಳೆಯ ಎರಡು ವಚನಗಳು ಲಭ್ಯ ಇವೆ. ಎರಡೂ ವಚನಗಳಲ್ಲೂ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮರುಳಶಂಕರದೇವರು, ಸಿದ್ಧರಾಮಯ್ಯ, ಅಜಗಣ್ಣ ಅವರನ್ನು ಮನದುಂಬಿ ಸ್ಮರಿಸುತ್ತಾಳೆ. ಅವರ ವಿಶೇಷ ಸಾಧನೆಯಂತೆ ತಾನು ಬದುಕಬೇಕೆಂದು ಆಶಿಸುತ್ತಾಳೆ. ಹೀಗಾಗಿ

ಬಸವಾದಿ ಶರಣರ ಹಿರಿಯ ಸಮಕಾಲೀನರಾಗಿಯೇ ಈ ದಂಪತಿಗಳು ಬದುಕಿದವರೆಂದೂ ಬಸವಕಲ್ಯಾಣಕ್ಕೆ ಬಂದು ಹೋಗಿರಬಹುದೆಂದೂ ಇಟ್ಟುಕೊಳ್ಳಬಹುದಾಗಿದೆ. ಇದಕ್ಕೆ ಇನ್ನೊಂದು ಸಾಕ್ಷಿ ಎಂದರೆ, ಬಸವಕಲ್ಯಾಣದಲ್ಲಿ ಉಳಿದುಕೊಂಡು ಬಂದಿರುವುದು ಜೇಡರ ದಾಸಿಮಯ್ಯನ ಸ್ಮಾರಕ.

ಬಸವ ಕಲ್ಯಾಣದ ಶಹಪೂರ ಓಣಿಯಲ್ಲಿ ಹುಲಿಕಂತಿ ಮಠದ ಪಕ್ಕಕ್ಕೆ ಇರುವುದೇ ಜೇಡರದಾಸಿಮಯ್ಯನ ಮಠ. ಮಠದ ಜೀರ್ಣೋದ್ಧಾರ ನಡೆದ ಕಾರಣ ಮಠದೊಳಗಿನ ಜೋಡಿ ಲಿಂಗಗಳನ್ನು ಹೊರಗಡೆ ಇಟ್ಟಿದ್ದಾರೆ. ಒಂದು ಪಿಂಡ ಜೇಡರ ದಾಸಿಮಯ್ಯ, ಇನ್ನೊಂದು ದುಗ್ಗಳೆ ಎಂದು ಜನ ಹೇಳುತ್ತಾರೆ. ಸುತ್ತಮುತ್ತ ಮನೆಗಳಿವೆ. ಈ ಲಿಂಗಗಳೂ ಒಂದು ಮನೆಯಲ್ಲಿಯೇ ಇದ್ದವು. ಈ ಮನೆಯನ್ನು ಮಂದಿರವಾಗಿ ಮಾರ್ಪಡಿಸಲಾಗುತ್ತಿದೆ.

ಈ ಗುಡಿಯ ಪಕ್ಕಕ್ಕೆ ಇರುವ ಹುಲಿಕಂತಿ ಮಠಕ್ಕೂ ಜೇಡರ ದಾಸಿಮಯ್ಯನ ಗುಡಿಗೂ ಯಾವ ಸಂಬಂಧವಿಲ್ಲವೆಂದು ಹೇಳುತ್ತಾರೆ. ಹರಿಯಾಣ ರಾಜ್ಯದ ಹಾಂಸಿ ಊರಿನಿಂದ ಬಂದ ಶರಣ ಶಿವಯೋಗಿ ಅವರಿಗೆ ಸಂಬಂಧಿಸಿದ ಮಠ ಇದು ಎಂದು ಈಗ ಮಠದಲ್ಲಿರುವ ಸ್ವಾಮಿಗಳು ಹೇಳುತ್ತಾರೆ. ಆದರೆ ಈ ಮಠವನ್ನು



ಜೇಡರ ದಾಸಿಮಯ್ಯ –ದುಗ್ಗಳೆ ಸ್ಮಾರಕ

ಜೇಡರ ದಾಸಿಮಯ್ಯನ ಮಠ (ಗುಡಿ) ಎಂದು ಕರೆಯುವ ವಾಡಿಕೆ ಮೊದಲಿನಿಂದಲೂ ಇದೆ ಎಂದು ತಿಳಿದುಬರುತ್ತದೆ. ಜೇಡರ ದಾಸಿಮಯ್ಯ ದುಗ್ಗಳೆ ಇಲ್ಲಿ ಬಂದು ಹೋಗಿರಬಹುದು ಎಂಬ ಕಾರಣಕ್ಕೆ ಅದನ್ನು ಜೇಡರ ದಾಸಿಮಯ್ಯನ ಮಠ(ಗುಡಿ) ಎಂದು ಕರೆಯುತ್ತಾರೆಂದು ತೋರುತ್ತದೆ. ಬಸವಕಲ್ಯಾಣಕ್ಕೆ ಬರುವ ಮಾರ್ಗದಲ್ಲಿರುವ ಘಾಟಬೋರಾಳದಲ್ಲಿಯೂ ಜೇಡರ ದಾಸಿಮಯ್ಯ ಅನುಷ್ಠಾನ ಮಾಡಿದ ಸ್ಮಾರಕ-ಗವಿ ಇದೆ.

ದುಗ್ಗಳೆ :
ವಚನಗಳು : ೨
ವಚನಾಂಕಿತ : 'ದಾಸಯ್ಯಪ್ರಿಯ ರಾಮನಾಥ'
ದೇವರ ದಾಸಿಮಯ್ಯ :
ವಚನಗಳು : ೧೭೬
ವಚನಾಂಕಿತ : ರಾಮನಾಥ

***



**ಜೇಡರ ದಾಸಿಮಯ್ಯ-ದುಗ್ಗಳೆಯ ಜೋಡಿ ಲಿಂಗಗಳು**

## ೬. ಶಂಕರ ದಾಸಿಮಯ್ಯ

ಬಸವಕಲ್ಯಾಣ ಪಟ್ಟಣದ ಸುಭಾಶಚೌಕ ಗಲ್ಲಿಯಲ್ಲಿ ಶಂಕರದಾಸಿಮಯ್ಯನ ಗುಡಿ ಇದೆ. ಬಹುಶಃ ಇದು ಶಂಕರದಾಸಿಮಯ್ಯನ ಮಠವಾಗಿರಬೇಕು. ಜನ ಹಾಗಲೂ ಅನ್ನುತ್ತಾರೆ. ಕರಿಕಲ್ಲಿನ ಕಟ್ಟಡ ಇದಾಗಿದೆ. ಗರ್ಭಗುಡಿಯ ಎದುರಿನ ಗುಡಿಯ ಪಡಸಾಲೆಯ ಒಂದನೇ ಥರದಲ್ಲಿಯೇ ಒಂದು ಕಲ್ಲಿನ ಮೇಲೆ ಕತ್ತರಿಯ ಉಬ್ಬು ಚಿತ್ರ ಇರುವುದು ಕಾಣುತ್ತದೆ. ಬಟ್ಟೆ, ನೂಲು ಕತ್ತರಿಸಲು ಬಳಸುವ ಒಂದು ಸಾಧನ ಕತ್ತರಿ. ಇದು ಶಂಕರದಾಸಿಮಯ್ಯನವರ ಕಾಯಕಕ್ಕೆ ಸಂಬಂಧಿಸಿದ ಒಂದು ಸಾಧನ.

ಶಂಕರದಾಸಿಮಯ್ಯ ಅವರನ್ನು ಬಣಗಾರ ಸಮಾಜದವರು ಆರಾಧಿಸುತ್ತಾರೆ. ಹೀಗಾಗಿ ಇಲ್ಲಿ ವೀರಶೈವ ಬಣಗಾರ (ನಾಗಲೀಕ)ಸಮಾಜದ ಬಾಂಧವರು ಶಂಕರ




ಶಂಕರ ದಾಸಿಮಯ್ಯನವರ ಗುಡಿ



ಶಂಕರ ದಾಸಿಮಯ್ಯನವರ ಗುಡಿಯ ಗರ್ಭಗೃಹದ ನೋಟ

ದಾಸಿಮಯ್ಯನವರ ಗುಡಿಯಲ್ಲಿ ಒಂದು ಸಮಿತಿಯನ್ನು ಮಾಡಿಕೊಂಡು ನಾನಾ ತರದ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾಡುತ್ತ ಬರುತ್ತಿದ್ದಾರೆ.


ನೂಲಿನ ಕೆಲಸಕ್ಕೆ ಸಂಬಂಧಿಸಿದಂತೆ ಅನೇಕ ಕಾಯಕಗಳು ಹುಟ್ಟಿಕೊಂಡಿವೆ. ನೂಲು ತಯಾರಿಸುವ ಮತ್ತು ಬಟ್ಟೆ ನೇಯುವ ಕಾಯಕ ಜಾಡರದು. ಇವರನ್ನು ನೇಕಾರರೆಂದೂ ಕರೆಯುತ್ತಾರೆ. ಇವರು ಜೇಡರ ದಾಸಿಮಯ್ಯನ ಭಕ್ತರು ಎಂದು ಹೇಳಿಕೊಳ್ಳುತ್ತಾರೆ. ನೂಲಿಗೆ ಬಣ್ಣ ಕೊಡುವವರು ಬಣಗಾರರು. ಇವರು ಶಂಕರದಾಸಿಮಯ್ಯನವರ ಭಕ್ತರೆನ್ನುತ್ತಾರೆ. ಬಟ್ಟೆಗಳನ್ನು ಮಾರಾಟ ಮಾಡುವವರು ಚೆಟ್ಟೇರು. ಇವರು ಶಿವದಾಸಿಮಯ್ಯನ ಭಕ್ತರೆನ್ನುತ್ತಾರೆ. ಮತ್ತೆ ಇವರಲ್ಲಿ ಬಟ್ಟೆ ಹೊಲಿಯುವ ಕಾಯಕದವರು ಸಿಂಪಿಗರು. ಹೀಗೆ ಮೂಲತಃ ನೂಲಿನ ಕಾಯಕದವರೇ ಆದ ಈ ಸಮಾಜದ ಜನ ಒಂದೊಂದು ಸಣ್ಣ ಸಣ್ಣ ಉದ್ಯೋಗವನ್ನು ಅವಲಂಬಿಸಿ ಭಿನ್ನಭಿನ್ನವಾಗಿ ಕಾಣುವಂತೆ ಕರೆದುಕೊಳ್ಳುತ್ತಾರೆ. ಬಸವಕಲ್ಯಾಣದ ಶಂಕರದಾಸಿಮಯ್ಯನ ಭಕ್ತರು ಶ್ರಾವಣದಲ್ಲಿ ಭಜನೆ ಮಾಡುತ್ತಾರೆ. ಕೊನೆಯಲ್ಲಿ ಖಾಂಡ ಮಾಡುತ್ತಾರೆ. ಯುಗಾದಿಯಂದು ವಿಶೇಷ ಉತ್ಸವ ನೆರವೇರಿಸಿ, ಹೊಸ ನಂದಿಧ್ವಜವನ್ನು ಏರಿಸುತ್ತಾರೆ.

ಈ ಗುಡಿಗೆ ಜಡೆಶಂಕರಲಿಂಗನ ಗುಡಿ ಎನ್ನುತ್ತಾರೆ. ಶಂಕರಲಿಂಗನ ಹಿಂದೆ ಇರುವ ಜಡೆ ಎಂಬ ಪದದ ಅರ್ಥವೇನು? ಎಂದರೆ, ಜಡೆ ಎನ್ನುವುದು ಜೇಡರ

ದಾಸಿಮಯ್ಯನ ಹೆಸರಿನ ಸಂಕ್ಷಿಪ್ತ ಹೆಸರಾಗಿದೆ ಎನ್ನುತ್ತಾರೆ. ಜೇಡರ ದಾಸಿಮಯ್ಯ ಮತ್ತು ಶಂಕರದಾಸಿಮಯ್ಯ ಇಬ್ಬರು ಕೂಡಿಯೇ ಬಸವಕಲ್ಯಾಣಕ್ಕೆ ಬಂದರು. ಇಬ್ಬರು ಕೂಡಿಯೇ ಘಾಟಬೋರಾಳದ ಗವಿಯಲ್ಲಿ ತಪಸ್ಸು ಮಾಡಿದರು. ಹೀಗಾಗಿಯೇ ಶಂಕರದಾಸಿಮಯ್ಯನ ಗುಡಿಗಳನ್ನು ಜಡೆಶಂಕರಲಿಂಗ ದೇವಸ್ಥಾನಗಳೆಂದು ಕರೆಯಲ್ಪಡುತ್ತವೆ ಎನ್ನುತ್ತಾರೆ.

ಘಾಟಬೋರಾಳದ ಗವಿಯನ್ನು 'ಶಂಕರತಳ' ಎಂದು ಕರೆಯುತ್ತಾರೆ. ಈ ಪದವನ್ನು ಗಮನಿಸಿದರೆ, ಘಾಟಬೋರಾಳದ ಗವಿಯಲ್ಲಿ ಈ ಇಬ್ಬರು ಶರಣರು ಬಹುದಿನಗಳವರೆಗೆ ಇದ್ದಿರಬಹುದೆಂದು ತೋರುತ್ತದೆ. ಶಂಕರದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಇಬ್ಬರೂ ಅಡ್ಡಾಡಿದ ಸ್ಥಳಗಳೆಂದರೆ– ಈ ಮೇಲೆ ಸೂಚಿಸಿದ ಬಸವಕಲ್ಯಾಣ, ಘಾಟಬೋರಾಳ, ದುಬಲಗುಂಡಿ, ಕಲಬುರ್ಗಿ ಈ ನಾಲ್ಕು ಸ್ಥಳಗಳು ಜಡೆಶಂಕರಲಿಂಗ ಗವಿ–ಗುಡಿಗಳೆಂದೇ ಪ್ರಸಿದ್ಧವಾಗಿವೆ.

***



ಶಂಕರದಾಸಿಮಯ್ಯನ ಗುಡಿಯ ಕಟ್ಟಡದ ಮೊದಲಿನ ತರದಲ್ಲಿಯಯೇ ಇರುವ ಕತ್ತರಿ ಚಿತ್ರ

## ೭. ಅಂಬಿಗರ ಚೌಡಯ್ಯನವರ ಸ್ಮಾರಕ

ಬಸವಕಲ್ಯಾಣದ ಬಸವಣ್ಣನವರ ಗುಡಿಯ ಬಲಮಗ್ಗಲು  ಕೋಳಿಗಲ್ಲಿ ಇದೆ. ಅಲ್ಲಿ  ಒಂದು ಬಯಲು ಸ್ಥಳದ ಮೂಲೆಯಲ್ಲಿ ಹಳೆಯದೆನ್ನಬಹುದಾದ ಜಗಲಿ-ಕಟ್ಟೆಯೊಂದಿದೆ. ಅದರ ಮೇಲೆ ಒಂದು ದೊಡ್ಡ, ಇನ್ನೊಂದು ಸಣ್ಣ ಲಿಂಗ ಇದೆ. ಎರಡು ನಮೂನೆಯ ಪಾದಗಳಿವೆ. ಅವು ಅಂಬಿಗರ ಚೌಡಯ್ಯನ ಪಾದವೆಂದು ಹೇಳುತ್ತಾರೆ. ಎದುರು ನಂದಿ ಇದೆ. ಇವುಗಳ ಮುಂದೆ ಸ್ವಲ್ಪ ಅಂತರದಲ್ಲಿ ಆ ಸ್ಥಳದ ಸುತ್ತಲೂ ಭಗ್ನಗೊಂಡ ಮೂರ್ತಿಗಳಿವೆ.  ಅಂಬಿಗರ ಚೌಡಯ್ಯ ವಾಸವಾಗಿದ್ದರೆಂಬ ನಂಬಿಕೆ ಜನರ ಮನದಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.




ಅಂಬಿಗರ ಚೌಡಯ್ಯನವರ ಮಠದೊಳಗಣ ಜಗಲಿ

ಅಲ್ಲಿ ಇತ್ತೀಚೆಗೆ ಕ್ರಿ.ಶ. ೨೦೧೦ ರಲ್ಲಿ ಅಂಬಿಗರ ಚೌಡಯ್ಯನವರ ಮೂರ್ತಿಯೊಂದನ್ನು ಪ್ರತಿಷ್ಠಾಪನೆ ಮಾಡಿದ್ದಾರೆ.

ಶ್ರಾವಣಮಾಸ ಪೂರ್ತಿ ಭಜನಿ ಹಚ್ಚುತ್ತಾರೆ. ನಾಗರ ಅಮವಾಸ್ಯೆ ಮರುದಿನದಿಂದ ಎಲ್ಲ ಕಾರ್ಯಕ್ರಮಗಳು ಪ್ರಾರಂಭ ಆಗುತ್ತವೆ. ಶ್ರಾವಣದ ಕೊನೆಯ ಸೋಮವಾರದಂದು ವಿಜೃಂಭಣೆಯಿಂದ ಪಲ್ಲಕ್ಕಿ ಉತ್ಸವ ಜರುಗುತ್ತದೆ. ಅಂಬಿಗರ ಚೌಡಯ್ಯನವರ ಮೂಲಸ್ಥಳ ಇದು ಆಗಿರುವದರಿಂದ ಇಲ್ಲಿಂದ ಪಲ್ಲಕ್ಕಿ ಉತ್ಸವ ಪ್ರಾರಂಭ ಆಗಿ, ಈಗ ಅಭಿವೃದ್ಧಿಗೊಂಡ ತ್ರಿಪುರಾಂತ ಕೆರೆಯ ನೀರಿನ ಹರಿಯಗುಂಟ ಇರುವ ಅಂಬಿಗರ ಚೌಡಯ್ಯನವರ ಸ್ಮಾರಕದವರೆಗೆ ಪಲ್ಲಕ್ಕಿ ಉತ್ಸವ ಹೋಗಿ ಬರುತ್ತದೆ. ಅವತ್ತು ಅಂಬಿಗರ ಚೌಡಯ್ಯನವರ ಹೆಸರಿನಲ್ಲಿ ಖಾಂಡ ನಡೆಯುತ್ತದೆ. ಪ್ರಸಾದಕ್ಕಾಗಿ ಹುಗ್ಗಿ ಅನ್ನ-ಸಾರು ಮಾಡಿಸುತ್ತಾರೆ. ಎಲ್ಲರೂ ಪ್ರಸಾದ ಸ್ವೀಕರಿಸುತ್ತಾರೆ.

ವಚನಗಳು : ೨೭೮

ವಚನಾಂಕಿತ : ಅಂಬಿಗರ ಚೌಡಯ್ಯ

ಮಾಹಿತಿ : ಈರಪ್ಪ ರಾಮಚಂದ್ರ ಜಮಾದಾರ, ಬಸವಕಲ್ಯಾಣ

# ೮. ಕಂಬಳಿ ನಾಗಿದೇವನ ಮಠ

ಕಂಬಳಿ ನಾಗಿದೇವನ ಇನ್ನೊಂದು ಹೆಸರು ಶಿವನಾಗಮಯ್ಯ. ಈತ ಅಸ್ಪೃಶ್ಯ ಶರಣನೆಂಬುದು ಸ್ಪಷ್ಟ. ಈತನು ವಾಸವಾಗಿರುವ ಸ್ಥಳವೇ ಕಂಬಳಿ ಮಠ. ಈತ ಬಸವಸಮಕಾಲೀನ ಹಿರಿಯ ಮಾಹೇಶ್ವರನೆಂದೇ ಪ್ರಸಿದ್ಧನಾಗಿದ್ದಾನೆ. ಬಸವಣ್ಣನವರು ನಾಗಿದೇವನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದರು ಎಂಬುದನ್ನು ಈತನನ್ನು ಉಲ್ಲೇಖಿಸುವ ಕನ್ನಡದ ಕಾವ್ಯಗಳೆಲ್ಲ ಹೇಳುತ್ತವೆ. ಇದರಿಂದ ಚಾಡಿಕೋರರಿಗೆ ಬಿಜ್ಜಳನ ಮನಸ್ಸು ಕೆಡಿಸಲು ಒಂದು ಅವಕಾಶ ದೊರೆಯಿತು. ಬಿಜ್ಜಳನು ನಾಗಿದೇವನನ್ನು ಕರೆದುಕೊಂಡು ಬರಲು ಬಸವಣ್ಣನವರಿಗೆ ಹೇಳಿದರೆ, ಅವರು ಅವನನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಹೋದರೆಂದೂ ಆತನ ಹೆಬ್ಬೆರಳಿನಿಂದ ಹಾಲಹಳ್ಳ ಹರಿಸಿದರೆಂದೂ ಕಾವ್ಯಗಳು ಒರೆಯುತ್ತವೆ. ಈ ಘಟನೆಯಿಂದ ಸಂಬೋಳಿ ನಾಗಿದೇವ ಶಿವನಾಗಮಯ್ಯ ಎಂದು ಹೆಸರಾಗಿರಲೂ ಬಹುದು ಎಂದು ಹಿರಿಯರಾದ ಶ್ರೀ ಶರಣ ವ್ಹಿ. ಸಿದ್ಧರಾಮಣ್ಣನವರು ಹೇಳುತ್ತಾರೆ.

ಶಿವಭಕ್ತನಾಗಿ ಶಿವನಾಗಮಯ್ಯ ಎನಿಸಿಕೊಂಡಂತೆ ಕಂಬಳಿ ತಯಾರಿಕೆಯಿಂದ ಕಂಬಳಿ ನಾಗಿದೇವ ಎಂದೂ ಕರೆಸಿಕೊಂಡಿರುವ ಸಾಧ್ಯತೆ ಇದೆ. ಹೀಗೆ ಕರೆಯಲು ಒಂದು ಘಟನೆ ಕಾರಣವಾಗಿರಬಹುದು. ಅದನ್ನು ಜನಪದರು ಕಥೆಮಾಡಿ ಹೇಳುತ್ತಾರೆ. ಶಿವನಾಗಮಯ್ಯ ಕುರಿ ಉಣ್ಣಿಯಿಂದ ಕಂಬಳಿಯನ್ನು ನೇಯುತಿದ್ದನಂತೆ. ಶಿವಭಕ್ತಿಯಿಂದ ನೇಯ್ದ ಕಂಬಳಿಯನ್ನು ಶಿವಭಕ್ತರಿಗೆ ಮಾತ್ರ ಮಾರುವ ನೇಮ ಅವನದು. ಹೀಗೆ ಒಂದು ಸಾರೆ ಕಂಬಳಿಯನ್ನು ಮಾರಲು ಹೋದಾಗ, ಆ ಕಂಬಳಿ ಕೊಂಡಿ ಮಂಚಣ್ಣನ ಕಣ್ಣಿಗೆ ಬಿದ್ದು, ಅದನ್ನು ತನಗೆ ಕೊಡಬೇಕೆಂದು ಹಟ ಮಾಡುತ್ತಾನೆ. ಆಗ ನಾಗಿದೇವ ಶಿವಭಕ್ತನಲ್ಲದವನಿಗೆ ಕೊಡಲು ನಿರಾಕರಿಸುತ್ತಾನೆ. ಆದರು ಮಂಚಣ್ಣ ಒತ್ತಾಯಪೂರ್ವಕವಾಗಿ ಆ ಕಂಬಳಿಯನ್ನು ಪಡೆದುಕೊಳ್ಳುತ್ತಾನೆ. ಮನೆಗೆ ಹೋಗಿ ಅದನ್ನು ಹಾಸಿ ಅದರ ಮೇಲೆ ಪತ್ನಿಯೊಂದಿಗೆ ಕುಳಿತುಕೊಳ್ಳುತ್ತಾನೆ. ಆಗ ದಂಪತಿಗಳ ಮೈಯುರಿ ಪ್ರಾರಂಭವಾಗುತ್ತದೆ. ಹೆಂಡತಿಗೆ ಗಂಡನ ಮೇಲೆ ಅನುಮಾನ ಬರುತ್ತದೆ. ಸತ್ಯ ತಿಳಿದು, ನಾಗಿದೇವನಿಗೆ ಕಂಬಳಿಯನ್ನು ತಿರುಗಿ ಕೊಟ್ಟು, ತಮ್ಮ ತಪ್ಪನ್ನು ಕ್ಷಮಿಸಲು ಪ್ರಾರ್ಥಿಸಿಕೊಳ್ಳುತ್ತಾಳೆ. ಆಗ ಅವರ ಮೈಯುರಿ ಶಮನವಾಗುತ್ತದೆ. ಅಂದಿನಿಂದ ಶಿವನಾಗಮಯ್ಯ ಎಂಬ ಹೆಸರಿನಂತೆ, ಕಂಬಳಿ ನಾಗಿದೇವ ಎಂಬ ಹೆಸರು ಪ್ರಚಾರಕ್ಕೆ ಬಂತೆಂದೂ ಅವನು ವಾಸಿಸುವ ಸ್ಥಳವೂ ಕಂಬಳಿ ಮಠ, ಕಂಬಳಿ ನಾಗಿದೇವನ ಮಠವೆಂದು ಪ್ರಸಿದ್ಧಿಗೆ ಬಂದಿತೆಂದೂ ಹೇಳುತ್ತಾರೆ.



ಕಂಬಳಿ ನಾಗಿದೇವನ ಮಠ

'ಕಂಬಳಿ ಮಠ' ಬಸವಕಲ್ಯಾಣದ ನಡು ಊರಿನಲ್ಲಿಯೇ ಇದೆ. ಮತ್ತು ಹೆಚ್ಚು ಸುರಕ್ಷಿತವಾಗಿದೆ. ಅಸ್ಪೃಶ್ಯ ಶರಣನ ಮಠವೊಂದು ಊರಮಧ್ಯದಲ್ಲಿರುವುದು ಹೆಚ್ಚು ಮಹತ್ವಪಡೆಯುತ್ತದೆ. ಚೆನ್ನಬಸವಣ್ಣನವರು ಹೇಳುವಂತೆ ಎಲ್ಲ ಶರಣರ ಮನೆಗಳು ಮಠಗಳೆಂದು ಕರೆಯಲ್ಪಡುತ್ತಿದ್ದವು. ಹಾಗೆ ಕಂಬಳಿ ನಾಗಿದೇವನ ಮನೆಯೂ ಮಠವಾಗಿರುವ ಸಾಧ್ಯತೆ ಹೆಚ್ಚು. ಹೀಗಾಗಿ ಅದೇ ಹೆಸರು ಈಗಲೂ ಉಳಿದುಕೊಂಡು ಬಂದಿದೆ. ಈ ಮಠ ಇವತ್ತಿಗೂ ಉತ್ತಮ ಸ್ಥಿತಿಯಲ್ಲಿದೆ. ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದವರು ಇದರ ಜೀರ್ಣೋದ್ಧಾರ ಕೈಕೊಂಡಿದ್ದಾರೆ.

ಕಂಬಳಿ ನಾಗಿದೇವ ಈ ಮಠದಲ್ಲಿಯೇ ಇರುತ್ತಿದ್ದರೆಂದು ಹೇಳಲಾಗುತ್ತದೆ. ಇದರ ರಚನೆ ಪುರಾತನ ಮಾದರಿಯಲ್ಲಿರುವುದೂ ಗಮನಾರ್ಹ ಸಂಗತಿ. ಮಠ ಒಳಗಡೆ ತುಂಬಾ ವಿಶಾಲವಾದ ಅಂಗಣವನ್ನು ಹೊಂದಿದೆ. ಮಠದಲ್ಲಿ ಒಂದು ಗದ್ದುಗೆ ಇದೆ. ಒಂದು ಕೋಣೆಯಲ್ಲಿ ಲಿಂಗ, ಎದುರಿಗೆ ನಂದಿ, ಒಂದು ಜೋಡು ಪಾದುಕೆಗಳಿವೆ. ಹರಿಹರ, ಪಾಲ್ಕುರಿಕೆ ಸೋಮನಾಥ, ಭೀಮಕವಿ ಇವರೆಲ್ಲ ನಾಗಿದೇವನ ಬಗ್ಗೆ ಬರೆದಿದ್ದಾರೆ.

ವಚನಗಳು : ೩

ವಚನಾಂಕಿತ : 'ನಾಗಪ್ರಿಯ ಚೆನ್ನರಾಮೇಶ್ವರ'

*

## ಕಂಬಳಿ ನಾಗಿದೇವ

ಕಲ್ಯಾಣ ಊರಾಗ ಕಂಬಳಿ ಮಠದಾಗ
ಕಂಬಳಿ ನಾಗಿದೇವ ಶರಣರು । ಶಿವಲಿಂಗಬನ್ನಿರೆ ॥ ೧ ॥

ಕಂಬಳಿ ನಾಗಿದೇವ ಅವರೆಂತ ಶರಣರು
ಧರುಮದ ಮೂರುತಿ ಎನಿಸ್ಯಾರೆ । ಶಿವಲಿಂಗ ಬನ್ನಿರೆ ॥ ೨ ॥

ಹೊತ್ತ ಹೊಂಡಾಕ ಎದ್ದಾರ ಜಳಕವ ಮಾಡ್ಯಾರ
ಲಿಂಗದ ಪೂಜೆ ನಡಸ್ಯಾರ । ಶಿವಲಿಂಗ ಬನ್ನಿರೆ ॥ ೩ ॥
ಲಿಂಗದ ಪೂಜೆಯು ನಡಸ್ಯಾರ ನಾಗಿದೇವ

ಪೂಜೆ ನೋಡಲಾಕ ಶಿವ ಬಂದ । ಶಿವಲಿಂಗ ಬನ್ನಿರೆ ॥ ೪ ॥
ಪೂಜೆಯ ಮುಗಸ್ಯಾರ ಕಾಯಕ ನಡಸ್ಯಾರ
ಕುರಿ ಉಣ್ಣಿಲಿ ಕಂಬಳಿ ನೇಯ್ದಾರ । ಶಿವಲಿಂಗ ಬನ್ನಿರೆ ॥ ೫ ॥

ಎರಡದಿನಕ್ಕೊಂದು ಕಂಬಳಿ ನೇಯ್ದಾರ
ಭಕ್ತರ ಓಣ್ಯಾಗ ಮಾರ್‍ಯಾರ । ಶಿವಲಿಂಗ ಬನ್ನಿರೆ ॥ ೬ ॥

ಕೊಂಡಿಯ ಮಂಚಣ್ಣ ಕಂಬಳಿ ಕೇಳುತ್ತಾರೆ
ಉಂಬಳಿ ಕೊಡುತಿವಿ ಕಂಬಳಿಗೆ । ಶಿವಲಿಂಗಬನ್ನಿರೆ ॥ ೭ ॥

ಉಂಬಳಿ ನನಗ್ಯಾಕ ಸಿಂಬಳ ಸುರದ್ಹಾಂಗ
ಕಾಯಕ ನನಗ ಎದುರಲಿ । ಶಿವಲಿಂಗ ಬನ್ನಿರೆ ॥ ೮ ॥

ಕಸಕೊಂಡು ಹೊಂಟಾರ ಕೈಯಾನ ಕಂಬಳಿ
ಪರಿಯಿಂದ ಹೇಳ್ಯಾರ ಕೇಳಿಲ್ಲ । ಶಿವಲಿಂಗ ಬನ್ನಿರೆ ॥ ೯ ॥

ಮನಿಗರ ಒಯ್ದಾರ ಕಂಬಳಿ ಹಾಸ್ಯಾರ
ಮಡದಿಗಿ ಕರೆದು ತೋರ್‍ಯಾರ । ಶಿವಲಿಂಗ ಬನ್ನಿರೆ ॥ ೧೦ ॥

ಈಟು ಚಂದ ಕಂಬಳಿ ನಿಮಗೆಲ್ಲಿ ಸಿಕ್ಕಾದ
ಏಟು ದುಡ್ಡ ಕೊಟ್ಟರಿ ನೀವಿದಕ । ಶಿವಲಿಂಗ ಬನ್ನಿರೆ ॥ ೧೧ ॥

ದುಡ್ಡಿನ ಮಾತೆಲ್ಲಾ ಆಮ್ಯಾಲ ಇರಲೇಳ
ಕೂಡೋಣ ಬಾರಾ ಇದರಮ್ಯಾಲ । ಶಿವಲಿಂಗ ಬನ್ನಿರೆ ॥ ೧೨ ॥

ಗಂಡಹೆಂಡತಿ ಇಬ್ಬರು ಅದರ ಮ್ಯಾಲ ಕೂಡಟಗೆ
ಮೈಯೆಲ್ಲಾ ಬೆಂಕಿ ಹತ್ತಿದ್ಹಾಂಗ । ಶಿವಲಿಂಗ ಬನ್ನಿರೆ ॥ ೧೩ ॥

ಮಡದಿಯು ಅನತಾಳ ಖರೆ ಖರೇ ಹೇಳಬೇಕರಿ
ಯಾರದು ಕಂಬಳಿ ಕದ್ದೀರಿ । ಶಿವಲಿಂಗ ಬನ್ನಿರೆ ॥ ೧೪ ॥

ತೊದಲುತಾ ತೊದಲುತಾ ಮಂಚಣ್ಣ ನುಡಿತಾನ
ಕಂಬಳಿ ನಾಗಿದೇವನ ಹೆಸರದು । ಶಿವಲಿಂಗ ಬನ್ನಿರೆ ॥ ೧೫ ॥

ತಡಮಾಡಿಲ್ಲ ಮಡದಿಯು ಕೈಯಾಗ ಹಿಡದಾಳ
ಓಡುತ್ತಾ ಮಠಕ ನಡದಾಳ । ಶಿವಲಿಂಗ ಬನ್ನಿರೆ ॥ ೧೬ ॥

ಶರಣರ ಕಾಲಮುಂದ ಕಂಬಳಿ ಇಟ್ಟಾಳ
ಕೈಜೋಡಿಸಿ ತಪ್ಪಾಯ್ತು ಅನತಾಳ । ಶಿವಲಿಂಗಬನ್ನಿರೆ ॥ ೧೭ ॥


ತಪ್ಪಾಯ್ತು ಅನ್ನಟಗೆ ಮೈಯಾನ ಉರಿನಿಂತು
ಗಂಡಗ ತಂದು ನಿಲಸ್ಯಾಳ । ಶಿವಲಿಂಗ ಬನ್ನಿರೆ ॥ ೧೮ ॥

ಮುಂದಿನ ದಿನಮಾನಕ ಪತಿ ಪತ್ನಿ ಇಬ್ಬರು
ಅವರಿಗೆ ತಿಳದಾರ ಗುರುಯೆಂದು । ಶಿವಲಿಂಗ ಬನ್ನಿರೆ ॥ ೧೯ ॥

ಶಿವಲಿಂಗ ಬನ್ನಿರಿ ಶಿವಶಿವ ಎನ್ನಿರಿ
ಶಿವಶರಣರ ಕೊಂಡಾಡಿರೆ । ಶಿವಲಿಂಗ ಬನ್ನಿರೆ ॥ ೨೦ ॥

– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ

***



ಕಂಬಳಿ ನಾಗಿದೇವನ ಮಠದ ಗರ್ಭಗೃಹ

# ೯. ಉರಿಲಿಂಗಪೆದ್ದಿ ಮಠ

ಬಸವಕಲ್ಯಾಣದ ಹರಿಜನ ಓಣಿಯಲ್ಲಿ ಉರಿಲಿಂಪೆದ್ದಿ ಶರಣರ ಗವಿ ಇದೆ. ಈ ಗವಿಯನ್ನು ಜನ ಮಠವೆಂದೇ ಕರೆಯುತ್ತಾರೆ. ಉರಿಲಿಂಗ ಪೆದ್ದಿ ಹಾಗೂ ಕಾಳವ್ವೆ ದಂಪತಿಗಳು ಉರಿಲಿಂಗದೇವ ಎಂಬ ಗುರುವಿನಿಂದ ಲಿಂಗದೀಕ್ಷೆ ಸಂಸ್ಕಾರ ಪಡೆದುಕೊಂಡವರು. ಉರಲಿಂಗಪೆದ್ದಿ ಮೂಲಗದ್ದುಗೆ ನಂದವಾಡಗಿಯ ಮಹಾಂತ ಮಠದಲ್ಲಿದೆ. ಈ ದಂಪತಿಗಳ ಹೆಸರಿನಲ್ಲಿ ಇತ್ತೀಚೆಗೆ ಶಿವಯೋಗಿ ಸ್ವಾಮಿ ಎನ್ನುವವರು ಹಲವಾರು ಮಠಗಳನ್ನು ಬೇರೆ ಬೇರೆ ಭಾಗಗಳಲ್ಲಿ ಸ್ಥಾಪಿಸಿರುವುದು ತಿಳಿದುಬರುತ್ತದೆ. ಬಸವಕಲ್ಯಾಣದಲ್ಲಿ ಉರಿಲಿಂಗಪೆದ್ದಿ ಅವರು ವಾಸವಾಗಿದ್ದ ಗವಿಯನ್ನು ಈಗ ಅಭಿವೃದ್ಧಿ ಪಡಿಸಲಾಗುತ್ತಿದೆ. ಬಸವಕಲ್ಯಾಣದಲ್ಲಿ ಶ್ರಂಗಾರೆ ಮನೆತನಕ್ಕೆ ಸಂಬಂಧಿಸಿದವರು ಉರಿಲಿಂಗಪೆದ್ದಿ ಸ್ಮಾರಕದ ಶಿವಲಿಂಗವನ್ನು ಪೂಜಿಸುತ್ತ ಬಂದಿದ್ದಾರೆ. ಶ್ರೀ ತೀರ್ಥಪ್ಪ ಶ್ರಂಗಾರೆ ಮತ್ತವರ ಪತ್ನಿ ಶ್ರೀಮತಿ ತೇಜಾಬಾಯಿ ಅವರು ಉರಿಲಿಂಗಪೆದ್ದಿಯ ಸ್ಮಾರಕದಲ್ಲಿ ನಿರಂತರವಾಗಿ ಪೂಜಾದಿಗಳನ್ನು ನೆರವೇರಿಸುತ್ತ ಬರುತ್ತಿದ್ದಾರೆ. ಪ್ರತಿ



ಉರಿಲಿಂಗಪೆದ್ದಿ ಮಠ



ಉರಿಲಿಂಗಪೆದ್ದಿ ಮಠದ ಗರ್ಭಗೃಹದಲ್ಲಿದ್ದ ಶಿವಲಿಂಗ

ಸೋಮವಾರ, ಅಮವಾಸಿ, ಹುಣ್ಣಿವೆ, ಶ್ರಾವಣ ಮಾಸದಲ್ಲಿ ತಪ್ಪದೆ ಪೂಜೆ ಸಲ್ಲಿಸುತ್ತೇವೆ ಎನ್ನುತ್ತಾರೆ. ಮೊದಲು ಜಾತ್ರೆಯನ್ನೂ ಮಾಡುತ್ತಿದ್ದರಂತೆ. ಈಗ ಬಸವಣ್ಣನವರ ತೇರು ಎಳೆಯುವ ಬಸವಜಯಂತಿಯ ದಿನ ಉರಲಿಂಗಪೆದ್ದಿಯ ಖಾಂಡ ಮಾಡುತ್ತಾರಂತೆ. ತಮ್ಮ ಕೈಲಾದಷ್ಟು ಧನಧಾನ್ಯ ಹಾಕಿ, ಒಂದಿಷ್ಟು ಚಂದಾ ಎತ್ತಿ ಕೇರಿಯವರಿಗೆಲ್ಲ ತಮ್ಮ ಮನೆಯಲ್ಲಿಯೇ ಪ್ರಸಾದ ವಿತರಣೆ ಮಾಡುತ್ತಾರೆ. ದಸರಾ ಹಬ್ಬದ ದಿನ ನಂದಿಧ್ವಜವನ್ನು ಏರಿಸುವ ವಿಶೇಷ ಕಾರ್ಯಕ್ರಮವನ್ನು ಪ್ರತಿವರ್ಷ ಮಾಡುತ್ತ ಬಂದಿದ್ದಾರೆ. ಅಂದು ಹೊಸ ನಂದಿಧ್ವಜವನ್ನು ಶಂಖ, ಗಂಟೆ, ಜಾಗಟೆ ಬಾರಿಸುತ್ತ ಉರಿಲಿಂಗ ಪೆದ್ದಿ ಸ್ಮಾರಕಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ಏರಿಸುತ್ತಾರೆ.

ಇತ್ತೀಚೆಗೆ ೧೯೦೦ರ ನಂತರ ಉರಿಲಿಂಗಪೆದ್ದಿ ಅವರ ಅನೇಕ ಮಠಗಳನ್ನು ಸ್ಥಾಪಿಸುವ ಕೆಲಸವನ್ನು ಶ್ರೀ ಶಿವಯೋಗಿ ಸ್ವಾಮಿ ಅವರು ಮಾಡುತ್ತ ಬಂದಿರುವುದು ಗಮನಾರ್ಹ ಸಂಗತಿ.

ವಚನಗಳು : ೩೬೩,
ವಚನಾಂಕಿತ : ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ
ಮಾಹಿತಿ : ಶ್ರೀಮತಿ ತೇಜಾಬಾಯಿ ತೀರ್ಥಪ್ಪ ಶ್ರಂಗಾರೆ
ನೋಡಿ : ಕೋಡ್ಲಿ, ತಾ. ಸೇಡಂ, ಜಿ. ಕಲಬುರ್ಗಿ

***

# ೨

# ಬಸವಕಲ್ಯಾಣದ ಸುತ್ತ ನಾಲ್ಕೂ ದಿಕ್ಕುಗಳಲ್ಲಿ ಹಬ್ಬಿಕೊಂಡಿರುವ ಶರಣಸ್ಮಾರಕಗಳು

ನಾವು ಗಮನಿಸಿದಂತೆ ಬಸವಕಲ್ಯಾಣ ಪಟ್ಟಣದಲ್ಲಿ ಶರಣರಿಗೆ ಸಂಬಂಧಿಸಿದ ಹೆಚ್ಚಿನ ಸ್ಮಾರಕಗಳಿಲ್ಲ. ಪ್ರಮುಖ ವಚನಕಾರರ ಮತ್ತು ಬಸವಣ್ಣ ಹಾಗೂ ಬಸವಣ್ಣನವರ ಸಂಬಧಿಗಳಾದ ಶರಣರ ಸ್ಮಾರಕಗಳೆಲ್ಲ ಕಾಣುವುದು ಬಸವಕಲ್ಯಾಣ ಪಟ್ಟಣದ ಸುತ್ತಮುತ್ತ ೨ ರಿಂದ ೫ ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಸ್ಥಳಗಳಲ್ಲಿ. ಮುಖ್ಯವಾಗಿ ಕಲ್ಯಾಣ ಪಟ್ಟಣದ ಪಶ್ಚಿಮಕ್ಕಿರುವ ತ್ರಿಪುರಾಂತ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ, ಅಲ್ಲಿಂದ ದಕ್ಷಿಣಕ್ಕೆ ಹರಿಯುವ ತ್ರಿಪುರಾಂತ ಕರೆಯ ಹರಿಯಗುಂಟ ಮತ್ತು ಬಂದವರ ಓಣಿ ಪ್ರದೇಶದಲ್ಲಿ, ಮತ್ತೆ ಮುಂದಕ್ಕೆ ಪೂರ್ವಕ್ಕೆ ಶಿವಪುರ ಮತ್ತು ನಾರಾಯಣಪುರ ಗ್ರಾಮ ಮತ್ತು ಕೆರೆಗಳ ದಂಡೆಗಳಲ್ಲಿ, ಅಲ್ಲಿಂದ ಮತ್ತೆ ಉತ್ತರಕ್ಕೆ ಬಂದರೆ ಅಲ್ಲಿ ಬೆಟ್ಟಬಲಕುಂದ ಗ್ರಾಮದ ಬೆಟ್ಟ ಮತ್ತು ಗುಡ್ಡದ ವಾರೆಗಳಲ್ಲಿ ಶರಣರ ಪ್ರಮುಖ ನೆಲೆಗಳು ಕಾಣುತ್ತವೆ. ಇವೆಲ್ಲ ನೀರಿನ ದೊಡ್ಡ ಸಂಗ್ರಹಗಳಿರುವ ಕಾಡಿನ ಪ್ರದೇಶಗಳೇ ಆಗಿದ್ದವು ಎಂಬುದು ಗಮನಾರ್ಹ ಸಂಗತಿಯಾಗುತ್ತದೆ. ಆ ಸ್ಥಳಗಳನ್ನು ಸರಿಯಾಗಿ ಹೀಗೆ ಗುರುತಿಸಬಹುದಾಗಿದೆ.

ಅ. ಪಶ್ಚಿಮ ದಿಕ್ಕು : ತ್ರಿಪುರಾಂತ ಕೆರೆಯ ಸುತ್ತಮುತ್ತಲಿನ ಪ್ರದೇಶದ ಶರಣಸ್ಮಾರಕಗಳು

ಬ. ದಕ್ಷಿಣ ದಿಕ್ಕು : ತ್ರಿಪುರಾಂತ ಕೆರೆಯ ಹರಿಯಗುಂಟ ಮತ್ತು ಬಂದವರ ಓಣಿ ಪರಿಸರದಲ್ಲಿರುವ ಶರಣಸ್ಮಾರಕಗಳು


ಕ. ಪೂರ್ವ ದಿಕ್ಕು : ನಾರಾಯಣಪುರ ಮತ್ತು ಶಿವಪುರಗಳಲ್ಲಿರುವ ಶರಣಸ್ಮಾರಕಗಳು

ಡ. ಉತ್ತರ ದಿಕ್ಕು : ಬೆಟ್ಟಬಲಕುಂದ ಗುಡ್ಡ ಮತ್ತು ಗುಡ್ಡದ ವಾರೆಯಲ್ಲಿರುವ ಶರಣಸ್ಮಾರಕಗಳು

ಶರಣರು ವಾಸವಾಗಿರುವ ಈ ನೆಲೆಗಳನ್ನು ಗಮನಿಸಿದರೆ ಅವರೆಲ್ಲ

ತಮ್ಮ ಚಟುವಟಿಕೆಗಳನ್ನು ನಡೆಸಿದ್ದು, ಬಸವಕಲ್ಯಾಣ ಪಟ್ಟಣದಲ್ಲಿ ಆಗಿರದೆ ಪಟ್ಟಣದ ಹೊರಗಡೆಯ ಪ್ರದೇಶಗಳಲ್ಲಿ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣವೆಂದರೆ ಬಿಜ್ಜಳನ ಮತ್ತು ಬಸವಣ್ಣನವರ ಆಡಳಿತಕ್ಕೆ ಯಾವುದೇ ಬಗೆಯ ಅಡತಡೆಗಳು ತಮ್ಮಿಂದ ಒದಗಬಾರದು, ಬಸವಣ್ಣನವರಿಗೆ ಯಾವುದೇ ಬಗೆಯ ಮುಜುಗರ ಉಂಟಾಗಬಾರದು, ಅನ್ಯಮತೀಯರಿಗೆ ಇಲ್ಲದ ಆರೋಪ ಹೊರಿಸಲು ಅವಕಾಶ ಆಗಬಾರದು– ಇಂತಹ ಪ್ರಮುಖ ಚಿಂತನೆಗಳು ಕಾರಣವಾಗಿ ಶರಣರು ತಮ್ಮ ನೆಲೆಗಳನ್ನು ಕಲ್ಯಾಣ ಪಟ್ಟಣದ ಹೊರಗಡೆ ಆಯ್ದುಕೊಂಡಿರಬೇಕೆನಿಸುತ್ತದೆ.

ಬಸವಕಲ್ಯಾಣದ ಸುತ್ತಮುತ್ತಲು ಇರುವ ಪ್ರಕೃತಿರಮ್ಯ ತಾಣಗಳನ್ನೇ ಶರಣರು ತಮ್ಮ ನೆಲೆಗಳನ್ನಾಗಿ ಆರಿಸಿಕೊಂಡಿರುವುದು ಗಮನಾರ್ಹ. ಅವೆಲ್ಲ ಪ್ರಕೃತಿದತ್ತವಾದ ಸುಂದರ ತಾಣಗಳು, ಬೆಟ್ಟಗಳು, ಕೆರೆಗಳು, ಕಾಡುಗಳು ಎಂಬುದನ್ನು ಗಮನಿಸಬೇಕು. ಶರಣರು ನೆಲೆಸಿದ ಸ್ಥಳಗಳಲ್ಲಿ ನಾರಾಯಣಪುರ ಮತ್ತು ಶಿವಪುರ ಈ ಎರಡು ಊರುಗಳು ಆಗ ಶೈವಸಂಪ್ರದಾಯದ ನೆಲೆಗಳಾಗಿದ್ದವು. ಕಲ್ಯಾಣಬಿಟ್ಟು ಎರಡ್ಮೂರು ಕಿ.ಮೀ. ಅಂತರದಲ್ಲಿರುವ, ಜೊತೆಗೆ ಶರಣರೆಲ್ಲ ನೆಲೆಸಿರುವುದು ಪುನಃ ಈ ಊರುಗಳ ಎರಡು ಕೆರೆಗಳ ದಂಡೆಗಳಲ್ಲಿಯೇ ಎಂಬುದನ್ನೂ ಗಮನಿಸಬೇಕು. ಇಲ್ಲಿಂದ ಮತ್ತೆ ದೂರದೂರಕ್ಕೆ ಶರಣರು ನೆಲೆಸಿದ್ದಾರೆ. ಈಗ ದೊರೆಯುವ ಶರಣರ ನೆಲೆಗಳನ್ನು ಗಮನಿಸಿ ಈ ಮಾತನ್ನು ಗಟ್ಟಿಯಾಗಿ ಹೇಳಬಹುದಾಗಿದೆ. ಕಲ್ಯಾಣದಲ್ಲಿ ಏನಿತ್ತೋ ನಮಗೀಗ ಊಹಿಸಿಕೊಳ್ಳಲೂ ಅಸಾಧ್ಯವಾಗಿದೆ.



ಬಸವಕಲ್ಯಾಣದ ಪೂರ್ವಕ್ಕೆ ನಾರಾಯಣಪುರ ಮತ್ತು ಶಿವಪುರ ಈ ಗ್ರಾಮಗಳ ಕೆರೆಗಳು ಸಂಪೂರ್ಣವಾಗಿ ಆವರಿಸಿಕೊಂಡಿದ್ದರೆ, ಪಶ್ಚಿಮದಿಕ್ಕನ್ನು ಸಂಪೂರ್ಣವಾಗಿ ತ್ರಿಪುರಾಂತ ಕೆರೆ ಆವರಿಸಿಕೊಂಡಿದೆ. ಹಾಗೆ ನೋಡಿದರೆ ದಕ್ಷಿಣದಿಕ್ಕಿನಲ್ಲಿರುವ ಬಂದವರ ಓಣಿಯೂ ನೀರಿನ ಮಡುಗಳ ತಾಣವೇ ಆಗಿದ್ದು, ಉತ್ತರ ದಿಕ್ಕಿನ ಬೆಟ್ಟಬಲಕುಂದ ಗ್ರಾಮದ ಗಂಜಿಕೆರೆ ಮತ್ತು ಖಪರಾಳ ಕೆರೆಗಳು ಮುಖ್ಯವಾಗಿ ಶರಣರ ಬೀಡುಗಳಾಗಿ ಕಾಣುತ್ತವೆ. ಈ ಕೆರೆಗಳ ದಂಡೆಯಲ್ಲಿ ಬಸವಣ್ಣನ ಗುಡ್ಡವನ್ನು ನೋಡಬಹುದಾಗಿದೆ. ಹೀಗಾಗಿ ಬಸವಕಲ್ಯಾಣ ಸುತ್ತಲೂ ನೀರಿನ ಕೆರೆಗಳು, ಮಡುಗಳು, ಕಾಡು ಮತ್ತು ಬೆಟ್ಟಗಳು ಆವರಿಸಿಕೊಂಡಿವೆ ಎಂಬುದನ್ನು ಗಮನಿಸಿದರೆ, ೧೨ನೇ ಶತಮಾನದ ಬಸವಕಲ್ಯಾಣದ ಪರಿಸರ ವರ್ಣನೆಯನ್ನು ನಾವು ಊಹಿಸಿಕೊಳ್ಳಲೂ ಸಾಧ್ಯವಾಗದೆಂದು ತೋರುತ್ತದೆ.

ಶರಣರು ನೆಲೆಸಿರುವ ಈ ಮೇಲೆ ಉಲ್ಲೇಖಿಸಿದ ನೆಲೆಗಳನ್ನು ಖುದ್ದಾಗಿ ನೋಡಿದರೆ ಅವರೆಲ್ಲ ಹೇಗೆ ಜೀವನ ಸಾಗಿಸಿದರು ಎಂಬುದು ನಮ್ಮ ಅರಿವಿಗೆ ಬರುತ್ತದೆ. ತ್ರಿಪುರಾಂತ ಕೆರೆಯ ಸುತ್ತಮುತ್ತಲೂ ಈಗ ಕೆಲವು ಗವಿಗಳು ನೋಡಲು ದೊರೆಯುತ್ತವೆ. ಕೆಲವು ಸವೆದ ಸ್ಥಿತಿಯಲ್ಲಿ ಇದ್ದು, ಇನ್ನೂ ಕೆಲವು ಸಂಪೂರ್ಣ ಸವೆದು ಹೋಗಿರುವ ಸಾಧ್ಯತೆಯೂ ಇದೆ. ಅಂದರೆ ಸುಮಾರು ನೂರಾರು ಸಂಖ್ಯೆಯಲ್ಲಿ ತ್ರಿಪುರಾಂತ ಕೆರೆಯ ಸುತ್ತಮುತ್ತ ಶರಣರು ವಾಸವಾಗಿದ್ದರು ಎಂಬುದು ಇದರಿಂದ ವೇದ್ಯವಾಗುತ್ತದೆ. ಅವರೆಲ್ಲ ಸ್ವತಂತ್ರವಾದ ಕಾಯಕ ಕೈಕೊಂಡವರು. ದಾಸೋಹ ಮಾಡುವವರು. ಜೊತೆಗೆ ದಿನವೂ ಕೆಲಹೊತ್ತು ಅನುಭಾವಗಳನ್ನು ವಿನಿಮಯ ಮಾಡಿಕೊಳ್ಳಲು ಮರೆಯದವರು. ಅವರು ಹೀಗೆ ಕೂಡಿ ಇರುವುದು ಅವರ ಪರಸ್ಪರ ಅನುಭಾವ ವಿನಿಮಯಕ್ಕೆ ಹೆಚ್ಚು ಅನುಕೂಲವಾಗಿದೆ ಎಂದೆನಿಸುತ್ತದೆ.

ತ್ರಿಪುರಾಂತ ಕೆರೆಯ ಶರಣರ ಜೀವನವನ್ನೇ ಇನ್ನುಳಿದ ನೆಲೆಗಳಲ್ಲಿ ಕಾಣುತ್ತೇವೆ. ಬಂದವರ ಓಣಿ ಪುನಃ ಇಂತಹ ಮತ್ತೊಂದು ನೆಲೆ. ಅಲ್ಲೂ ಶರಣರು ನೆಲೆಸಿದ್ದರು ಎಂಬುದಕ್ಕೆ ಅಲ್ಲಿ ಕೊರೆದ ಗವಿಗಳ ಗುರುತುಗಳು ಕಾಣುತ್ತವೆ. ಅಕ್ಕಮಹಾದೇವಿಯ ಗವಿಯಂತೂ ಈಗ ಇನ್ನೂ ಸುಸ್ಥಿತಿಯಲ್ಲಿದೆ. ವೀರ ಗೊಲ್ಲಾಳನ ಗವಿಯೂ ಅಲ್ಲಿದೆ. ದಟ್ಟವಾದ ಕಾಡಿನ ವಾತಾವರಣ. ಈ ಪ್ರಕೃತಿರಮ್ಯ ತಾಣದಲ್ಲಿ ಮತ್ತೆ ಅವರು ತಮ್ಮ ಅನುಭಾವ ವಿನಿಮಯ ಮಾಡಿಕೊಳ್ಳಲು ಆ ಪ್ರದೇಶದಲ್ಲಿ ವಾಸವಾಗಿರುವ ಶರಣರೆಲ್ಲ ಒಂದೆಡೆ ಸೇರುತ್ತಿದ್ದರು ಎಂಬುದು ನಮ್ಮ ಅನುಭವಕ್ಕೆ ಸಹಜವಾಗಿ ಬರುತ್ತದೆ.

ಉತ್ತರದ ಬೆಟ್ಟಬಲಕುಂದ ಬೆಟ್ಟ ಮತ್ತು ಬೆಟ್ಟದ ವಾರೆಗಳಲ್ಲಿ ಮತ್ತೆ ಬಸವಣ್ಣನವರ ಹೆಸರಿಗೆ ಒಂದು ಗವಿ ಇರುವುದು ನಮಗೆ ಕಾಣುತ್ತದೆ. ಗೋಲಾಕಾರದಲ್ಲಿರುವ ಗುಡ್ಡದ ಹೊಟ್ಟೆಯಲ್ಲಿ ಹಲವಾರು ಸಣ್ಣ ಸಣ್ಣ ಗವಿಗಳಿರುವುದು ಇಂದಿಗೂ ಕಂಡುಬರುತ್ತವೆ. ಸವೆದು ಹೋದ ಗವಿಗಳೆಷ್ಟೋ! ನಡುವೆ ಇರುವ ವಿಸ್ತಾರವಾದ ತಗ್ಗು ಪ್ರದೇಶದಲ್ಲಿ ಬಾವಿ ಇದೆ. ನೀರಿನ ಅನುಕೂಲವಿದೆ. ಮತ್ತೆ ಇಲ್ಲೂ ಹೆಚ್ಚಿನ

ಸಂಖ್ಯೆಯಲ್ಲಿ ಶರಣರು ವಾಸವಾಗಿದ್ದರು ಎಂಬುದು ನಮ್ಮ ಅನುಭವಕ್ಕೆ ಸಹಜವಾಗಿ ಬರುವ ಸಂಗತಿ. ಮತ್ತೆ ಕಾಯಕ, ದಾಸೋಹ, ಅನುಭಾವ ಗೋಷ್ಠಿ ಇಲ್ಲಿಯೂ ನಡೆದಿರುವ ಸಾಧ್ಯತೆ ಇದೆ.

ಇಂತಹದೇ ಕುರುಹುಗಳು ನಮಗೆ ನಾರಾಯಣಪುರ ಮತ್ತು ಶಿವಪುರದ ಕೆರೆಗಳ ಸುತ್ತ ಕಾಣಿಸುತ್ತವೆ. ಅಲ್ಲೂ ಶರಣರೆಲ್ಲ ಸಾಗಿಸಿದುದು ಸಾಮೂಹಿಕ ಜೀವನವೇ ಆಗಿದೆ. ಮತ್ತೆ ಕಾಯಕ–ದಾಸೋಹ, ಅನುಭಾವದ ವಿನಿಮಯ.

ಈ ನಾಲ್ಕೂ ನೆಲೆಗಳನ್ನು ಗಮನಿಸಿದರೆ, ಅವರು ಕಾಯಕ–ದಾಸೋಹಗಳ ಜೊತೆಗೆ ಅನುಭಾವದ ವಿನಿಮಯಕ್ಕೆ ಬಹುಸಹಜವಾಗಿ ಸೇರುತ್ತಿದ್ದರು ಎನಿಸುತ್ತದೆ. ಹೀಗೆ ಕೂಡಿ ಬಾಳುವ, ಕೂಡಿ ಚಿಂತಿಸುವ ಕ್ರಮದಲ್ಲಿಯೇ 'ಅನುಭಾವ ಮಂಟಪ' ಜನ್ಮ ತಾಳಿರಬಹುದು ಎಂಬ ಕಲ್ಪನೆ ಚಿಗುರೊಡೆಯುತ್ತದೆ.

ಬಸವಕಲ್ಯಾಣದ ಸುತ್ತಲಿನ ನೀರಿನ ಸ್ಥಾನಗಳು, ಕೆರೆಗಳು, ಕಾಡುಗಳು, ಬೆಟ್ಟ, ಬೆಟ್ಟದ ವಾರೆಗಳು, ಹೇಗೆ ಶರಣರ ನೆಲೆಗಳಾಗಿ ಅನುಭಾವ ನಡೆಸಲು, ಪರಸ್ಪರ ಸಹಜವಾಗಿ ಸೇರಲು ಅನುಕೂಲವಾದವೋ ಹಾಗೆಯೇ ಬಸವಕಲ್ಯಾಣ ಬಿಟ್ಟು ಸ್ವಲ್ಪ ದೂರ ಇರುವ ದೊಡ್ಡ ಗವಿಗಳು ನಮಗೆ ಪುನಃ ಹೀಗೆ ಶರಣರ ಬದುಕನ್ನು ಅನುಮಾನಿಸಿಕೊಳ್ಳಲು ಸಹಾಯಮಾಡುತ್ತವೆ. ಈ ಮೇಲಿನ ಪ್ರಕೃತಿದತ್ತ ನೆಲೆಗಳಲ್ಲಿ ಸಣ್ಣ ಸಣ್ಣ ಗವಿಗಳೇ ನಮಗೆ ಕಾಣುತ್ತವೆ. ಅವೆಲ್ಲ ವೈಯಕ್ತಿಕವಾದ ವಾಸಸ್ಥಾನಗಳು. ಆದರೆ ಬಸವಕಲ್ಯಾಣ ಬಿಟ್ಟು ಸ್ವಲ್ಪ ದೂರಕ್ಕೆ ಇರುವ ಐದಾರು ಊರುಗಳಲ್ಲಿ ದೊಡ್ಡ ದೊಡ್ಡ ಗವಿಗಳು ನಮಗೆ ಇಂದು ನೋಡಲು ದೊರೆಯುತ್ತವೆ. ಹಂದ್ರಾಳ, ರಾಜೇಶ್ವರ, ಮೋಳ್ಕೇರಾ, ಗಡವಂತಿ, ಚಿಟಗುಪ್ಪ ಹಾಗೂ ಬೆಮಳಖೇಡ ಈ ಊರುಗಳಲ್ಲಿ ಸುಮಾರು ೧೫ ರಿಂದ ೨೦ ಜನ ವಾಸವಾಗಬಹುದಾದಷ್ಟು ದೊಡ್ಡ ಗವಿಗಳಿರುವುದು ನಮ್ಮ ಅನುಭವವನ್ನು–ಅನುಮಾನವನ್ನು ವಿಸ್ತರಿಸಿಕೊಳ್ಳಲು ಅನುಕೂಲಮಾಡಿಕೊಡುತ್ತವೆ. ಅವು ಇವತ್ತಿಗೂ ಸುಸ್ಥಿತಿಯಲ್ಲಿದ್ದು, ನೋಡಲು ನಮಗೆ ಲಭ್ಯವಿರುವುದು ಒಂದು ಸುದೈವವೇ ಸರಿ. ಅದರಲ್ಲೂ ರಾಜೇಶ್ವರ ಮತ್ತು ಚಿಟಗುಪ್ಪಾಗಳಲ್ಲಿ ಅತ್ಯಂತ ದೊಡ್ಡ ಮಾದರಿಯ ಗವಿಗಳು ಒಂದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುವುದು ಮತ್ತೆ ಶರಣರ ನೆಲೆಗಳ ಬಗ್ಗೆ, ಅವರ ಸಹಕಾರ ಬದುಕಿನ ಬಗ್ಗೆ, ಸಮೀಪವಿದ್ದು ಸತ್ಸಂಗ, ಸಹಚಿಂತನೆಗಳನ್ನು ನಡೆಸಿರುವ ಬಗ್ಗೆ ಇವತ್ತಿಗೂ ಸಾಕ್ಷಿಗಳಾಗಿ ನಿಲ್ಲುತ್ತವೆ.

ಹೀಗೆ ಬೇರೆಬೇರೆ ಕಡೆ ನೆಲೆನಿಂತು ಪೂಜೆ–ಧ್ಯಾನ, ಸತ್ಸಂಗ, ಸಂವಾದ, ಕಾಯಕ–ದಾಸೋಹಗಳಲ್ಲಿ ನಿರತರಾದ ಶರಣರು ಪರಸ್ಪರ ಅನುಭಾವದ ವಿನಿಮಯ ಮಾಡಿಕೊಳ್ಳುತ್ತಿದ್ದರು ಎಂದು ಅನುಮಾನಿಸಿಕೊಳ್ಳಲು ಯಾವ ಅಡ್ಡಿಯೂ ಕಾಣದು. ಹೀಗೆ ದಿನವೂ ಅನುಭಾವದ ವಿನಿಮಯ ಮಾಡಿಕೊಳ್ಳುವ ಶರಣರು ವಿಶೇಷ ಸಂದರ್ಭಗಳಲ್ಲಿ ಎಲ್ಲರೂ ಒಂದೆಡೆ ಕೂಡಬೇಕು, ಅನುಭಾವದ ವಿನಿಮಯ

ಮಾಡಿಕೊಳ್ಳಬೇಕು ಎಂಬ ಚಿಂತನೆಯ ಹಿನ್ನೆಲೆಯಲ್ಲಿಯೇ 'ಅನುಭವ ಮಂಟಪ'ದ ಕಲ್ಪನೆ ಅಡಗಿದೆ.

ವಿಶೇಷವಾಗಿ ಎಲ್ಲರೂ ಸೇರಬೇಕೆಂದ ದಿನ, ನಡೆದು ಹೋಗಲು ಸಾಧ್ಯವಿರುವಷ್ಟು ದೂರ ಮಾತ್ರ ಆ ನಿಗದಿತ ಸ್ಥಳ ಇರಬೇಕಾಗಿರುವುದು ಅನಿವಾರ್ಯ. ಇದು ಬಹು ಸಹಜವಾಗಿ ಕಲ್ಪಿಸಿಕೊಳ್ಳಬಹುದಾದ ಸಂಗತಿಯಾಗಿದೆ. ಅದು ಬಸವಕಲ್ಯಾಣದಲ್ಲಿ ಇರುವ ಪೀರಪಾಶಾ ಬಂಗಲಾ ಆಗಿರಬಹುದು, ಅಥವಾ ಬೇರೆ ಸ್ಥಳ ಆಗಿರಬಹುದು. ಅದನ್ನು ಕಲ್ಪಿಸಿಕೊಳ್ಳಲು ಇಂದು ನಮಗೆ ಸಾಧ್ಯವಿಲ್ಲದ ಪರಿಸ್ಥಿತಿ ಬಸವಕಲ್ಯಾಣದಲ್ಲಿದೆ. ಒಂದು ವೇಳೆ ಬಸವಕಲ್ಯಾಣದ ಹೊರಗಡೆ ಇನ್ನೊಂದು ಸ್ಥಳ ಇದ್ದಿರಬಹುದಾದರೆ ಅದು ತುಂಬಾ ವಿಸ್ತಾರವಾದ, ಕನಿಷ್ಠ ೫೦೦ ರಿಂದ ೧೦೦೦ ಜನ ಸೇರಲು ಅವಕಾಶವಿರುವ ಸ್ಥಳ ಅದಾಗಿರಬೇಕು. ಎಲ್ಲ ಶರಣರು ತಮ್ಮ ತಮ್ಮ ವಾಸಸ್ಥಳಗಳಿಂದ ನಡೆದು ಹೋಗಿ ಸೇರಲು ಅನುಕೂಲವಾದ ದೂರದಲ್ಲಿರಬೇಕು. ಅಂತಹ ಸ್ಥಳಗಳನ್ನು ಅನುಮಾನಿಸಿಕೊಳ್ಳಲು ನಮಗೆ ಈಗ ನೋಡಲು ದೊರೆಯುವ ಸ್ಥಳಗಳು ಅನುಕೂಲ ಮಾಡಿಕೊಡುತ್ತವೆ. ಬಸವಕಲ್ಯಾಣದಿಂದ ಸುಮಾರು ೪೫ ಕಿ.ಮೀ. ಅಂತರದಲ್ಲಿರುವ ಪುರಾತನ ಗ್ರಾಮ ಚಿಟಗುಪ್ಪ. ಅಲ್ಲಿ ಅಲ್ಲಮಪ್ರಭು ವಾಸವಾಗಿರುವ ಒಂದು ವಿಶಾಲಾದ ಗವಿ ಇದೆ. ಜೊತೆಗೆ ಆ ಊರಿನಲ್ಲಿ ಸಿದ್ಧರಾಮನ ಹೆಸರಿಗೆ ಒಂದು ಗವಿ ಇದೆ. ಅಲ್ಲಮಪ್ರಭುಗಳ ಜೊತೆಗೆ ಸಿದ್ಧರಾಮ ಕಲ್ಯಾಣಕ್ಕೆ ಬಂದು ಕೆಲ ದಿನ ಇಬ್ಬರೂ ಜೊತೆಗೆ ಇದ್ದಿರಬಹುದಾದ ಸಾಧ್ಯತೆಯನ್ನು ಈ ಗವಿ ಅನುಮಾನಿಸಿಕೊಳ್ಳಲು ದಾರಿ ಮಾಡಿಕೊಡುತ್ತದೆ. ಜೊತೆಗೆ ಸುಮಾರು ಏಳೆಂಟು ನೂರು ಜನ ಸೇರಬಹುದಾದ ಅಂಗಳ ಹೊಂದಿದ ಒಂದು ದೊಡ್ಡ ಗವಿಯೂ ಚಿಟಗುಪ್ಪಾದಲ್ಲಿದೆ. ಅದು ಇತ್ತೀಚಿನ ಒಬ್ಬ ಶರಣ ಮಡಿವಾಳಪ್ಪನ ಹೆಸರಿಗೆ ಪ್ರಸಿದ್ಧವಾಗಿದೆ. ಜೊತೆಗೆ ಶರಣರ ಅನುಯಾಯಿಗಳಾಗಿರಬಹುದಾದ, ಉತ್ತರ ಭಾರತದಿಂದ ಬಂದಿರುವ ಮಹಾದೇವನ ಭಕ್ತರಾದ ಗೋಸಾಯಿಗಳ ೩೬೦ ಮನೆಗಳು ಈ ಊರಿನಲ್ಲಿವೆ. ಹೀಗಾಗಿ ಅನುಭವ ಮಂಟಪದ ಕಲ್ಪನೆಯೊಂದು ಈ ಊರಿನ ಪರಿಸರದಲ್ಲಿ ಪಡೆಯಲು ಸಾಧ್ಯವಿದೆ. ಶರಣರು ದೊಡ್ಡ ಪ್ರಮಾಣದಲ್ಲಿ ಸೇರಲು ಆರಿಸಿಕೊಂಡ ಸ್ಥಳ ಅದು ಬಸವಕಲ್ಯಾಣ ಬಿಟ್ಟು ಹೊರಗೆ ಇರಬಹುದು ಎನ್ನುವುದಾದರೆ ಅದು ಚಿಟಗುಪ್ಪ ಗ್ರಾಮದ ಶರಣರ ನೆಲೆಯೇ ಆಗಿರಬಹುದು ಎನಿಸುತ್ತದೆ.

***

# ಅ. ಪಶ್ಚಿಮ ದಿಕ್ಕು : ತ್ರಿಪುರಾಂತ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಶರಣಸ್ಮಾರಕಗಳು

ಈಗ ಬಸವಕಲ್ಯಾಣದ ಭಾಗವೇ ಆಗಿಹೋಗಿರುವ ತ್ರಿಪುರಾಂತ ಗ್ರಾಮದ ತ್ರಿಪುರಾಂತ ಕೆರೆಯ ಸುತ್ತಮುತ್ತಲೇ ಹೆಚ್ಚಿನ ಶರಣ ಸ್ಮಾರಕಗಳಿರುವುದು ಗಮನಾರ್ಹ ಸಂಗತಿ. ಹನ್ನೆರಡನೇ ಶತಮಾನದಲ್ಲಿ ಕೆರೆಯ ಸುತ್ತಮುತ್ತಲ ಪ್ರದೇಶವೆಲ್ಲ ದಟ್ಟವಾದ ಅರಣ್ಯಪ್ರದೇಶವಾಗಿತ್ತು ಎಂದು ಹೇಳಲಾಗುತ್ತದೆ. ಈ ಅರಣ್ಯದಲ್ಲಿ, ನೀರಿನ ಸ್ಥಳಗಳ ದಂಡೆಯ ಮೇಲೆಯೇ ಶರಣಸ್ಥಳಗಳೆಲ್ಲ ಇರುವುದು ವಿಶೇಷವೆನಿಸುತ್ತದೆ. ಶರಣರೆಲ್ಲ ಸ್ವತಂತ್ರ ಜೀವಿಗಳು, ತಮ್ಮ ಬದುಕಿಗಾಗಿ ಇನ್ನೊಬ್ಬರನ್ನು ಅವಲಂಬಿಸಿದವರಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮುಖ್ಯವಾಗಿ ಕಲ್ಯಾಣ ಪಟ್ಟಣದಲ್ಲಿ ಅವರೆಲ್ಲ ಉಳಿದು ಬಿಜ್ಜಳನ, ವಿಶೇಷವಾಗಿ ಬಸವಣ್ಣನವರ ಆಡಳಿತಕ್ಕೆ ಯಾವುದೇ ಬಗೆಯ ಅಡಚಣಿ ಆದಂತೆ ತೋರುವುದಿಲ್ಲ. ಹೀಗೆ ಅಡಚಣಿ ಆಗಬಾರದು ಎಂಬ ಉದ್ದೇಶಕ್ಕಾಗಿಯೇ ಅವರೆಲ್ಲ ವಾಸಿಸಲು ಆಯ್ದುಕೊಂಡದ್ದು ಬಸವಕಲ್ಯಾಣ ಪಟ್ಟಣದ ಹೊರಗಡೆ ಇರುವ ಪ್ರದೇಶಗಳನ್ನು ಎಂಬುದನ್ನು ನಾವು ಗಮನಿಸಬೇಕಾಗುತ್ತದೆ.

ಅವರು ವಾಸಿಸಲು ಆಯ್ದುಕೊಂಡದ್ದು ಊರುಗಳನ್ನಲ್ಲ, ಪ್ರಕೃತಿ ಸಂಪತ್ತಿನಿಂದ ಕೂಡಿದ ಅರಣ್ಯ ಮತ್ತು ನೀರಿನ ಸ್ಥಳಗಳನ್ನು. ಈ ಮಾತು ತ್ರಿಪುರಾಂತ ಕೆರೆಯಗುಂಟ ಇರುವ ಶರಣರಿಗೂ ಮತ್ತು ಬಸವಕಲ್ಯಾಣದಿಂದ ದೂರದಲ್ಲಿ ಬೆಟ್ಟಬಲಕುಂದ, ಶಿವಪುರ–ನಾರಾಯಣಪುರ, ಘಾಟಬೋರಾಳ, ವಿಶೇಷವಾಗಿ ಈಗ ಹುಮ್ನಾಬಾದ ತಾಲೂಕಿಗೆ ಸೇರಿದ ಶರಣ ಸ್ಥಳಗಳನ್ನು ಗಮನಿಸಿಯೂ ಈ ಮಾತನ್ನು ಹೇಳಬಹುದಾಗಿದೆ. ಅವರು ಮುಖ್ಯವಾಗಿ ಅನುಭಾವಿಗಳು. ಅವರ ತತ್ತ್ವ ಕಾಯಕ –ದಾಸೋಹ. ಹೀಗಾಗಿ ಊರು ಬಿಟ್ಟು ದೂರದ ಪ್ರದೇಶಗಳಲ್ಲಿ ಸ್ವತಂತ್ರವಾಗಿ ವಾಸವಾಗಿದ್ದರೂ ಅವರೆಲ್ಲ ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಕಾಯಕವನ್ನು ಅವಲಂಬಿಸಿದ್ದು ಇನ್ನೂ ಮುಖ್ಯವಾದ ಸಂಗತಿ ಎನಿಸುತ್ತದೆ. ಒಬ್ಬೊಬ್ಬರ ಹೆಸರಿನ ಮೇಲೆ ಒಂದೊಂದು ಗವಿ ಪ್ರಸಿದ್ಧವಾಗಿದ್ದರೂ ಅವರೆಲ್ಲ ಸಂಘಜೀವಿಗಳಾದ್ದರಿಂದ ಹಲವಾರು ಜನ ಕೂಡಿಯೇ ವಾಸಿಸುತ್ತಿದ್ದರೆಂದು ತೋರುತ್ತದೆ.

ತ್ರಿಪುರಾಂತ ಕೆರೆಯ ಸುತ್ತಮುತ್ತಲಿರುವ ಶರಣರ ಗವಿಗಳನ್ನು ಗಮನಿಸಿದರೆ ಅಕ್ಕನಾಗಮ್ಮನ ಗವಿಮಾತ್ರ ತಕ್ಕಮಟ್ಟಿಗೆ ದೊಡ್ಡದಿದೆ. ಉಳಿದವೆಲ್ಲ ಸಣ್ಣ ಸಣ್ಣ

ಗವಿಗಳಾಗಿವೆ. ಆದರೆ ಅಲ್ಲಮಪ್ರಭುಗಳ ಮಠ ಮಾತ್ರ ದೊಡ್ಡ ಕಟ್ಟಡವಾಗಿದೆ. ಆದರೆ ಇದರ ಹೆಸರು ***'ಅಲ್ಲಮ ಪ್ರಭುಗಳ ಗವಿ'*** ಎಂದು ಇರುವುದು ಲಕ್ಷಿಸಬೇಕಾದ ಸಂಗತಿ. ಅದಕ್ಕಾಗಿ ಇದನ್ನು ನಂತರದ ಭಕ್ತರು ಅಲ್ಲಮನ ಗವಿಯ ಮೇಲೆ ಕಟ್ಟಡ ಕಟ್ಟಿಸಿರುವ ಸಾಧ್ಯತೆ ಇದೆ.

ಶರಣರು ಇರಲು ಆಶ್ರಯ ಸ್ಥಾನವಾಗಿ ಮಾಡಿಕೊಂಡದ್ದು ಮನೆಗಳನ್ನು ಅಲ್ಲ, ಬದಲಾಗಿ ಸ್ವತಂತ್ರವಾಗಿ ಕೊರೆದುಕೊಂಡ ಗವಿಗಳನ್ನು. ತ್ರಿಪುರಾಂತ ಕೆರೆಯ ಸುತ್ತಮುತ್ತಲಿರುವ ಗವಿಗಳು ತುಂಬಾ ಚಿಕ್ಕವಾಗಿವೆ. ಬಸವಕಲ್ಯಾಣದ ಹೊರಗಿರುವ ಹಂದ್ರಾಳ, ರಾಜೇಶ್ವರ, ಮೋರ್ಖೇರಾ, ಗಡವಂತಿ, ಚಿಟಗುಪ್ಪ, ಬೆಮಳಖೇಡ ಈ ಊರುಗಳಲ್ಲಿರುವ ಗವಿಗಳನ್ನು ಗಮನಿಸಿದರೆ ಇವು ತುಂಬಾ ದೊಡ್ಡ ಗವಿಗಳಾಗಿವೆ. ಸಣ್ಣ ಗವಿಗಳಾಗಿದ್ದರೆ ಅವು ಶರಣರೇ ಕೊರೆದುಕೊಂಡಿರಬೇಕು. ಆದರೆ ಬಸವಕಲ್ಯಾಣದಿಂದ ದೂರವಿರುವ ಗವಿಗಳು ಮಾತ್ರ ದೊಡ್ಡ ಗವಿಗಳಾಗಿವೆ. ಈ ದೊಡ್ಡ ಗವಿಗಳನ್ನು ಗಮನಿಸಿದರೆ ಅವುಗಳನ್ನು ಕೊರೆಯುವ ಶರಣರ ವಿಶೇಷ ತಂಡಗಳೇ ಇದ್ದಂತೆ ತೋರುತ್ತದೆ.

ತ್ರಿಪುರಾಂತ ಕೆರೆಯ ಸುತ್ತಲಿರುವ ಶರಣ ಸ್ಮಾರಕಗಳೆಂದರೆ ಅನುಭವ ಮಂಟಪದ ಹತ್ತಿರ ಇರುವ ರೇವಣಸಿದ್ಧ-ಘನಲಿಂಗ ರುದ್ರಮುನಿಗಳ ಗವಿ. ಈ ಗವಿಗೆ ಅಂಟಿಕೊಂಡೆ ಹಲವಾರು ಗವಿಗಳಿವೆ. ಇವೆಲ್ಲ ಸುತ್ತಲಿನ ಬೆಟ್ಟದ ಹೊಟ್ಟೆಯಲ್ಲಿ ಕೊರೆಯಲ್ಪಟ್ಟಿವೆ. ಕೆಲವೊಂದು ಗವಿಗಳು ಇವತ್ತಿಗೂ ಒಂದು ಆಕಾರದಲ್ಲಿದ್ದು, ಸ್ಪಷ್ಟವಾಗಿ ಕಂಡುಬಂದರೆ ಇನ್ನು ಕೆಲವು ಸವೆದು ಹೋದ ಸ್ಥಿತಿಯಲ್ಲಿವೆ. ಇನ್ನೊಂದು ಮಗ್ಗುಲಿಗೆ ಪತ್ರಿಯ ವನ ಇದ್ದು, ಅಲ್ಲಿ ಹೂಪತ್ರಿಗಳನ್ನು ಬೆಳೆಯಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಈ ಪತ್ರಿವನದ ಸುತ್ತಮುತ್ತಲೂ ಹಲವಾರು ಗವಿಗಳಿದ್ದ ಕುರುಹುಗಳಿದ್ದು, ಕಾಲ ಕ್ರಮೇಣ ಅವೆಲ್ಲ ಸವೆದು ಹೋಗಿವೆ. ಹೂಗಾರ ಮಾದಣ್ಣನ ಗವಿ ಇಲ್ಲಿಯೇ ಇರಬಹುದು ಎಂದೂ ಹೇಳಲಾಗುತ್ತದೆ. ಆದರೆ ಇಂಥವರು ಇಲ್ಲಿಯೇ ಇದ್ದರು ಎಂದು ಸಮರ್ಥಿಸಲು ಯಾವ ಆಧಾರಗಳೂ ನಮಗೆ ಸಿಗುವುದಿಲ್ಲ.

ಶರಣರ ದೊಡ್ಡ ದಂಡು ಇಲ್ಲಿ ಇದ್ದಂತೆ ತೋರುತ್ತದೆ ಎಂದು ಮಾತ್ರ ಹೇಳಬಹುದು. ತ್ರಿಪುರಾಂತ ಕೆರೆಯ ಸುತ್ತಮುತ್ತಲೂ ಘನಲಿಂಗ ರುದ್ರಮುನಿಗಳ ಗವಿ, ಅಲ್ಲಮಪ್ರಭು, ಅಕ್ಕನಾಗಮ್ಮ, ಚೆನ್ನಬಸವಣ್ಣ, ಹರಳಯ್ಯನವರ ಗವಿ, ಬಸವಣ್ಣನವರ ಅರಿವಿನ ಮನೆ, ನೀಲಾಂಬಿಕೆ ಮತ್ತು ಗಂಗಾಂಬಿಕೆಯರ ಗವಿ ಇವೆಲ್ಲ ಒಂದೆಡೆ ಇವೆ.

ಗವಿಗಳಲ್ಲಿ ಅಕ್ಕನಾಗಮ್ಮನ ಗವಿ ಒಂದನ್ನು ಬಿಟ್ಟರೆ ಉಳಿದವೆಲ್ಲ ತುಂಬಾ ಚಿಕ್ಕ ಚಿಕ್ಕ ಗವಿಗಳಾಗಿವೆ. ಹರಳಯ್ಯನ ಗವಿ, ಅರಿವಿನ ಮನೆ, ನೀಲಮ್ಮನ ಗವಿ, ಗಂಗಾಂಬಿಕೆ ಗವಿ ಇವೆಲ್ಲ ಒಂದೇ ಸಾಲಿನಲ್ಲಿ ಇರುವುದು ಕಂಡುಬರುತ್ತವೆ. ಇವುಗಳ ಮುಂದೆ ಇರುವ ವಿಸ್ತಾರವಾದ ಅಂಗಣದಿಂದ ಸ್ವಲ್ಪ ಮುಂದುಗಡೆ ಗಂಜಿಕೆರೆ ಇದೆ. ಈ ಕೆರೆ

ಈ ಮೇಲೆ ಸೂಚಿಸಿದ ಗವಿಗಳ ಅಂಗಣದ ಭಾಗವೇ ಎಂಬಂತಿದೆ. ಸರಿಯಾಗಿ ತ್ರಿಪುರಾಂತ ಗ್ರಾಮದ ಮುಂದಿನ ಭಾಗದಲ್ಲಿ ನುಲಿಯ ಚಂದಯ್ಯಗಳ ಗವಿ ಇದೆ. ಇವೆಲ್ಲ ತ್ರಿಪುರಾಂತ ಕರೆಯ ಪೂರ್ವದ ದಂಡೆಯ ಮೇಲೆ, ತ್ರಿಪುರಾಂತ ಗ್ರಾಮದ ದಡದಲ್ಲಿ ಇರುವುದು ಕಂಡುಬರುತ್ತದೆ. ತ್ರಿಪುರಾಂತ ಕೆರೆಯಿಂದ ಹರಿಯುವ ನಾಲೆಯಗುಂಟ, ತ್ರಿಪುರಾಂತ ಗ್ರಾಮದಿಂದ ಸ್ವಲ್ಪ ದೂರದಲ್ಲಿ, ಮುಂದೆ ಅಂಬಿಗರ ಚೌಡಯ್ಯ ಮತ್ತು ಅಕ್ಕಮಹಾದೇವಿಯ ಗವಿಗಳು ಇವೆ. ಇವು ತ್ರಿಪುರಾಂತ ಕೆರೆಯ ಹರಿಯಗುಂಟ ಪಶ್ಚಿಮ ದಿಕ್ಕಿಗೆ ಇರುವುದು ಕಂಡುಬರುತ್ತದೆ. ಮೊದಲು ಅಂಬಿಗರ ಚೌಡಯ್ಯನ ಗವಿ ಒಂದನ್ನೇ ಗುರುತಿಸಲಾಗಿತ್ತು. ಆದರೆ ಬಸವಕಲ್ಯಾಣ ಪ್ರಾಧಿಕಾರದವರು ಈ ಗವಿಯ ಅಭಿವೃದ್ಧಿಗಾಗಿ ಅದರ ಮಗ್ಗುಲಿನ ಪ್ರದೇಶದಲ್ಲಿ ದನಗಳ ಕೊಟ್ಟಿಗೆಯನ್ನು ಕಿತ್ತಿಸಿ ತೆಗೆಸಿದಾಗ, ಮತ್ತೆ ಅಲ್ಲೊಂದು ಗವಿ ಕಾಣಿಸಿದೆ. ಅದನ್ನೂ ಅಭಿವೃದ್ಧಿ ಪಡಿಸಲಾಗಿದೆ. ಈಗ ಸಧ್ಯಕ್ಕೆ ಆ ಗವಿಗೆ ಬೇರೆ ಹೆಸರನ್ನು ಕೊಟ್ಟಿಲ್ಲ. ಅದನ್ನೂ ಅಂಬಿಗರ ಚೌಡಯ್ಯನ ಗವಿ ಎಂದೇ ಕರೆಯಲಾಗುತ್ತಿದೆ.

ತ್ರಿಪುರಾಂತ ಕರೆಯ ಸುತ್ತಮುತ್ತಲಿರುವ ಶರಣ ಸ್ಥಳಗಳಲ್ಲಿ ಮೊದಲಿನಿಂದಲೂ ಪ್ರಸಿದ್ಧವಾದವುಗಳೆಂದರೆ ಮೂರು ಸ್ಥಳಗಳಾಗಿವೆ. ಇವುಗಳನ್ನು ಜಾಗೃತ ಸ್ಥಳಗಳೆಂದು ಅಲ್ಲಿಯ ಜನಸಾಮಾನ್ಯರು ಕರೆಯುತ್ತಾರೆ. ಅವುಗಳೆಂದರೆ– ಬಸವಣ್ಣನವರ ದೇವಸ್ಥಾನ, ಮಡಿವಾಳ ಮಾಚಿದೇವನ ಹೊಂಡ ಮತ್ತು ಅಲ್ಲಮ ಪ್ರಭುಗಳ ಗದ್ದುಗೆ. ಬಸವಕಲ್ಯಾಣದಲ್ಲಿ ಶರಣರಿಗೆ ಸಂಬಂಧಿಸಿದಂತೆ ಪ್ರಮುಖವಾದ ಉತ್ಸವಗಳು ನಡೆಯುವುದು ಈ ಮೂರು ಸ್ಥಳಗಳಿಗೆ ಸಂಬಂಧಿಸಿವೆ. ಬಸವಣ್ಣನವರ ಜಯಂತಿಗೆ ನಡೆಯುವ ಬಸವಣ್ಣನವರ ಜಾತ್ರೆ, ಬಸವಕಲ್ಯಾಣದಲ್ಲಿ ನಡೆಯುವ ಪ್ರಮುಖವಾದ ಉತ್ಸವ. ಮೊದಲದಿನ ತೊಟ್ಟಿಲು. ಎರಡನೆಯ ದಿನ ನಂದಿಕೋಲ ಮೆರವಣಿಗೆ. ಇದು ಬಸವಣ್ಣನವರ ಗುಡಿಯಿಂದ ಹೊರಟು ಅಲ್ಲಮಪ್ರಭುಗಳ ಗದ್ದುಗೆವರೆಗೆ ಬರುತ್ತದೆ. ಅತ್ಯಂತ ವಿಜೃಂಭಣೆಯಿಂದ ನಡೆಯುವ ಮೆರವಣಿಗೆ ಇದು. ಮಾರನೆಯ ದಿನ ರಥೋತ್ಸವ. ಅದು ರಥದ ಬೀದಿಯಲ್ಲಿ ನಡೆಯುತ್ತದೆ. ಮಡಿವಾಳ ಮಾಚಿದೇವರ ಜಾತ್ರೆಯಂದು ಮೆರವಣಿಗೆಯಲ್ಲಿ ಹೊರಟು ಅದು ತ್ರಿಪುರಾಂತ ಕೆರೆಯಿಂದ ಪೂರ್ವಕ್ಕೆ ಸ್ವಲ್ಪ ದೂರದಲ್ಲಿರುವ ಮಡಿವಾಳ ಮಾಚಿದೇವರ ಹೊಂಡಕ್ಕೆ ಬಂದು ಪೂಜೆ ಸಲ್ಲಿಸಿ ಹೋಗುತ್ತದೆ.

***

# ೧. ಹರಳಯ್ಯನವರ ದಿಬ್ಬ

ಕಿರಿಕುಲದ ಹರಳಯ್ಯ ವರಶರಣ ತಾನಾದ
ಪರಮತವ ಜಯಿಸಿ ಹರಸಿದನು । ಹರಳನಿಗೆ
ಹರ ಮೆಚ್ಚಿ ಮೆರಿಸಿ ಕರೆದೊಯ್ದು

ಬಸವಣ್ಣನವರ ಅನುಯಾಯಿ ಶರಣರಲ್ಲಿ ಹರಳಯ್ಯನವರು ಅಗ್ರಗಣ್ಯರಾಗಿದ್ದಾರೆ. ಅವರು ಸಂಚಾರ ಮಾಡಿ ಬಸವಾದಿ ಶರಣರ ತತ್ತ್ವಗಳನ್ನು ನಾಡಿನ ತುಂಬಾ ಪ್ರಚಾರ ಮಾಡಿದವರು. ಹೀಗಾಗಿ ಹರಳಯ್ಯನವರ ಸ್ಮಾರಕಗಳು ಕರ್ನಾಟಕದಾದ್ಯಂತ ದೊರಯುತ್ತವೆ. ಅವರು ಎಲ್ಲೆಲ್ಲಿ ಪ್ರಯಾಣ ಬೆಳೆಸಿದರೋ ಅಲ್ಲೆಲ್ಲ ಅವರ ಕುರುಹುಗಳು ನಮಗೆ ಇಂದು ಕಾಣಸಿಗುತ್ತವೆ.

೧. ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಬಿಜನಳ್ಳಿಯಲ್ಲಿ ಹರಳಯ್ಯ ದಂಪತಿಗಳ ತೊಡೆಯ ಚರ್ಮದಿಂದ ಮಾಡಿದ ಪಾದುಕೆಗಳಿವೆ. ಇಂದಿಗೂ ಅವುಗಳನ್ನು ಕಾಪಾಡಿಕೊಂಡು ಬರಲಾಗಿದ್ದು, ನಿತ್ಯ ಪೂಜೆ ನಡೆಯುತ್ತದೆ.

೨. ಬೀದರ ಜಿಲ್ಲೆ ಬಸವಕಲ್ಯಾಣದಲ್ಲಿ ಹರಳಯ್ಯನವರ ದಿಬ್ಬ ಇದೆ. ಇಲ್ಲಿಯೇ ಎಳೆಹೂಟಿ ಶಿಕ್ಷೆ ಆಗುತ್ತದೆ. ಬಸವಕಲ್ಯಾಣದಲ್ಲಿಯೇ ಹರಳಯ್ಯನವರ ಗವಿ ಇದೆ.

೩. ಬಸವಕಲ್ಯಾಣ ತಾಲೂಕಿನ ಹಳ್ಳಿಗ್ರಾಮದ ಹೊಲವೊಂದರಲ್ಲಿ ಹರಳಯ್ಯನವರ ಗುಡಿ ಮತ್ತು ನೀರಿನ ಹೊಂಡಗಳಿವೆ.

೪. ಬಿಜಾಪೂರ ತಾಲೂಕಾ ಮತ್ತು ಜಿಲ್ಲೆಗೆ ಸೇರಿದ ಸೀಗುಣಸಿಯಲ್ಲಿ ಕ್ರಾಂತಿನಂತರ ಚದುರಿದ ದಂಡೊಂದು ಬಂದಿರುತ್ತದೆ. ಹರಳಯ್ಯನವರ ಶಿಕ್ಷೆ ಕೇಳಿ, ಜನ ಕೈಯಲ್ಲಿದ್ದ ದಂಡವನ್ನು ನೆಲಕ್ಕೆ ತಿವಿಯಲು ನೀರಿನ ಬರವಿದ್ದ ಆ ಊರಿಗೆ ನೀರಿನ ಚಿಲುಮೆ ಕಾಣಿಸುತ್ತದೆ. ಹೀಗಾಗಿ ಅದಕ್ಕೆ ಹರಳಯ್ಯನವರ ಚಿಲುಮೆ ಎಂದು ಕರೆಯಲಾಗುತ್ತದೆ.


೫. ಬೆಳಗಾಂ ಜಿಲ್ಲೆಯ ತಿಗಡಿಯಲ್ಲಿ ಕಲ್ಯಾಣಮ್ಮ ಲಿಂಗೈಕ್ಯಳಾದಳೆಂದು ಹೇಳಲಾಗುತ್ತದೆ. ಅಲ್ಲಿ ಕಲ್ಯಾಣಮ್ಮಳ ಹೆಸರಿನ ದೇವಾಲಯವಿದ್ದು ಪ್ರತಿವರ್ಷ ಅವಳ ಜಾತ್ರೆ ನಡೆಯುತ್ತದೆ.

೬. ಕಾರವಾರ ಜಿಲ್ಲೆ ಉಳವಿಯಲ್ಲಿ ಹರಳಯ್ಯನವರ ಚಿಲುಮೆ ಇದೆ.

೭. ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನಲ್ಲಿ ಹರಳೆ ಗ್ರಾಮವೆಂಬ ಊರಿದೆ. ಅಲ್ಲಿ ಹರಳಯ್ಯನವರ ದೇವಸ್ಥಾನವಿದೆ.

೮. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಕಗ್ಗುಂಡಿಯಲ್ಲಿ ಹರಳಯ್ಯನವರು ತಂಗಿದ್ದರೆಂದು ಹೇಳುವ ಮನೆಯೊಂದಿದೆ.

ಅನುಭವ ಮಂಟಪಕ್ಕೆ ಹೋಗುವ ದಾರಿಯ ಎಡಕ್ಕೆ ದೊಡ್ಡದಾದ ಬಯಲ ಬೆಟ್ಟ ಇದೆ. ಇದಕ್ಕೆ ಹರಳಯ್ಯನ ದಿಬ್ಬ ಎಂದು ಕರೆಯುತ್ತಾರೆ. ಕಲ್ಯಾಣ ಕ್ರಾಂತಿಗೆ ಹರಳಯ್ಯ ಮತ್ತು ಮಧುವಯ್ಯ ಇವರ ಮಕ್ಕಳ ವೈವಾಹಿಕ ಸಂಬಂಧವೇ ಕಾರಣ ಎಂದು ಹೇಳುತ್ತಾರೆ. ಈ ನೆಪವನ್ನು ಬಳಸಿಕೊಂಡು ಕೆಲಜನ ಬಿಜ್ಜಳನ ತಲೆಯಲ್ಲಿ ಇಲ್ಲಸಲ್ಲದ ಸಂಗತಿಗಳನ್ನೆಲ್ಲ ತುಂಬಿ, ಶರಣರ ವಿರುದ್ಧ ಬಂಡೇಳುವಂತೆ ಪ್ರಚೋದಿಸುತ್ತಾರೆ. ಇದರ ಪರಿಣಾಮವೆಂಬಂತೆ ಶರಣರಾದ ಹರಳಯ್ಯ ಮಧುವಯ್ಯನವರಿಗೆ ಘನಘೋರ ಶಿಕ್ಷೆ ಆಗುತ್ತದೆ. ಎಳೆಹೂಟಿ ಶಿಕ್ಷೆಯನ್ನು ಈ ದಿಬ್ಬದ ಮೇಲೆ ಕೊಡಿಸಿದುದರ ಪರಿಣಾಮವಾಗಿ ಈ ದಿಬ್ಬಕ್ಕೆ 'ಹರಳಯ್ಯನ ದಿಬ್ಬ' ಎಂದು ಹೆಸರಾಯಿತು. ಪ್ರತಿವರ್ಷ ಇಲ್ಲಿ 'ಮರಣವೇ ಮಹಾನವಮಿ' ಎಂಬ ಹೆಸರಿನಲ್ಲಿ ಒಂದು ಉತ್ಸವವನ್ನು ಆಚರಿಸಲಾಗುತ್ತದೆ.



ಹರಳಯ್ಯನವರಿಗೆ ಎಳೆಹೂಟಿ ಶಿಕ್ಷೆ ವಿಧಿಸಿದ್ದೆಂದು ಗುರುತಿಸಿದ ಸ್ಥಳ

## ಶರಣ ಹರಳಯ್ಯ

ಕಲ್ಯಾಣ ಕೇರಿಯೊಳು ಬಲ್ಲಿದನು ಬಸವೇಶ
ಸಲ್ಲಿಸುತ ಶರಣು ಶರಣರಿಗೆ । ಬರುವಾಗ
ಅಲ್ಲೆ ಶರಣೆಂದ ಹರಳಯ್ಯ

ಶರಣು ಶರಣೆಲೆ ಹರಳ ಕರುಣೆರಲಿ ನನ್ನಲ್ಲಿ
ಮರೆಯಬೇಡೆಂದು ಸಾಗಿದನು । ಹರಳಯ್ಯ
ಮರಳಿ ಚಿಂತಿಸುತ ಮನೆಕಡೆಗೆ

ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಚಮ್ಮ
ಹರನೆಂದು ಮಡದಿಯೆಡದೊಡೆಯ । ತಾ ಕೊಯ್ದು
ಭರನೆ ಹದಮಾಡಿ ಒಣಗಿಸಿದ

ಮಿಸುಣಿಯದೆ ಜರಹಚ್ಚಿ ಹೊಸ ಮುತ್ತು ಪೋಣಿಸಿದ
ಕುಸುರ್ಥಣದ ರನ್ನ ಮಾಣಿಕದ । ಜೋಡುಗಳು
ಮಸಗಿದವು ಚಂದ್ರ ರವಿಯಂತೆ

ತಂದೆ ಬಸವನೆ ಕೇಳು ತಂದಿರುವೆನೀ ಜೋಡ
ಹೊಂದುವವು ನಿಮ್ಮ ಅಡಿಗಳಿಗೆ । ಸಲ್ಲಿಸಿವ
ಎಂದು ಕೊಡಹೋದ ಬಸವನಿಗೆ

ಶಿವಕಳೆಯ ಈ ಜೋಡು ಜವನ ದಾಡೆಗಳಯ್ಯ
ಭವದೊಳಗೆ ಮೆಡುವ ಜನವುಂಟೆ । ಹರಳಯ್ಯ
ಶಿವಗೊಪ್ಪಿಸೆನ್ನ ಕ್ಷಮಿಸೆಂದ

ಹರಳ ಕೇಳೀ ನುಡಿಯ ಮರಳಿದನು ಮನೆಕಡೆಗೆ
ಶರಣೆಂದು ತಿರುಗಿ ಬಸವನಿಗೆ । ಹಾದಿಯಲಿ
ತರುಬಿ ಕೇಳಿದನು ಮಧುವರಸ

ಹರಳ ಮಾಡಿದ ಜೋಡು ನರಪಾಪಿ ಮಧುವರಸ
ಜರೆದು ಶರಣರಿಗೆ ತಾ ಮೆಡಲು । ಮೈತುಂಬ
ಉರಿತಾಪವೆದ್ದು ಕೂಗಾಡಿ

ಹೊತ್ತು ಮುಣಗಿತು ಶಿವನೆ ಕತ್ತಲಾಯಿತು ನೀರ
ಎತ್ತ ದೂರ್‍ಹೋಗಿ ನಾ ತರಲಿ । ಮಾದೇವಿ
ಹತ್ತಿರದ ಗುಂಡಿ ಬಚ್ಚಲಕೆ

ಕಳೆಬಂತು ಮೈತುಂಬ ಮಳೆಯಾದ ಬೆಳೆಯಂತೆ
ಅಳಿಯಲುರಿತಾಪ ಮಧುವರಸ । ಕರೆಕಳಿಸಿ
ಅಳುಕದಲೆ ಹೇಳು ಮಾದೇವಿ

ಇಂದು ತಂದಿರು ನೀರು ಮಿಂದಲಳಿಯಿತು ತಾಪ
ತಂದ ಕೆರೆಭಾವಿ ಹೇಳೆನಗೆ । ಹೇಳಿದಳು
ತಂದೆ ಹರಳಯ್ಯ ಗುಂಡಿಯಲಿ

ಎನ್ನುತಲಿ ಮಧುವರಸ ಎನ್ನುತಾ ರಾಗದಲಿ
ಭಿನ್ನಭೇದಳಿದು ನಡೆತಂದು ಹರಳಯ್ಯ
ನಿನ್ನ ಮಗವರಗೆ ಮಗಳೀವೆ

ಹಿರಿಕುಲದ ಮಧುವರಸ ಕಿರಿಕುಲಕೆ ಬೀಗಾದ
ಸರಿ ಏನು ಪಾಪ ಮಾಡಿದನು । ಕೊಂಡಿಗಳು
ಜರೆದು ಅರಸನಿಗೆ ದೂರಿದರು

ಓಲಗದಿ ಬಿಜ್ಜಳನು ನಾಳೆ ಅನ್ನದೆ ಕರೆಸಿ
ಕೀಳಿಸರಿ ಕಣ್ಣ ನಿಂತಲ್ಲಿ । ಕೇಡಿಗಳು
ಬಾಳುವದು ತರವೆ ನಾಡೊಳಗೆ

ಚರರು ನಡೆದರು ಬೇಗ ಹರನ ಶರಣರ ಬಳಿಗೆ।
ಕರೆದಿರುವ ದೊರೆಯು ಮಧುವರಸ । ಹರಳಯ್ಯ
ಬರಬೇಕು ಬೇಗ ಅರಮನೆಗೆ

ಖೂಳ ಬಿಜ್ಜಳರಾಯ ತಾಳಲಾರದೆ ಕೋಪ
ಕೀಳಿಸಿದ ಕಣ್ಣ ನಿಂತಲ್ಲೆ । ನಿಲ್ಲದಲೆ
ಗಾಳಕವರನ್ನು ಎಳಿಸೆಂದ

ಹೂವಿನಾ ಮಳೆಯಾಗಿ ಹೂವಿನಾ ತೇರೇರಿ
ಹೂವಾದರವರು ಶಿವಪದಕೆ । ಶಿವಶರಣ
ಪಾವನದ ಮಾಲೆ ಸೇರಿದರು

***

## ೨. ಅನುಭವ ಮಂಟಪ

ಅನುಭಾವ ಮಂಟಪಕೆ ಅನುಭಾವಿ ಬಸವಣ್ಣ
ಅನುನಯದಿ ಮೂಲ ಚಾಲಕನು । ಶಿವಮತಕೆ
ತನುಮನವ ಧನವನೆರೆದಿದ್ದ

ರಾಷ್ಟ್ರೀಯ ಹೆದ್ದಾರಿ ೯ರ ಮೇಲಿರುವ ಬಸವಕಲ್ಯಾಣ ಮಹಾದ್ವಾರ ಪ್ರವೇಶಿಸಿದ ಮೇಲೆ ಎರಡು ಕಿ.ಮೀ. ನಂತರ ನಮಗೆ ಮೊದಲು ಎದುರಾಗುವವು, ಬಲಕ್ಕೆ ತಿರುಗಿದರೆ ಬಂದವರ ಓಣಿ, ಎಡಕ್ಕೆ ತಿರುಗಿದರೆ ಅನುಭವಮಂಟಪ. ಅನುಭವ ಮಂಟಪಕ್ಕೆ ಹೊರಟರೆ ಮೊದಲು ಹತ್ತುವುದು ಹರಳಯ್ಯನವರ ದಿಬ್ಬ. ನಂತರ ಅನುಭವ ಮಂಟಪ. ಇವೆಲ್ಲ ತ್ರಿಪುರಾಂತ ಕೆರೆಯ ದಂಡೆಯ ಮೇಲೆ ಇರುವ ಮೊದಲ ಸ್ಮಾರಕಗಳು. ಅನುಭವ ಮಂಟಪದ ಮುಂದೆ ತ್ರಿಪುರಾಂತ ಕೆರೆಯ ದಂಡೆಯ ಮೇಲೆ ಇರುವುದು ಪತ್ರಿವನ. ಇವುಗಳ ಮಗ್ಗುಲಿಗೇ ಕಾಣುತ್ತದೆ ರೇವಣಸಿದ್ಧ ಹಾಗೂ ಘನಲಿಂಗ ರುದ್ರಮುನಿಗಳ ಗದ್ದಿಗೆ. ಈಎಲ್ಲ ಸ್ಮಾರಕಗಳಿರುವ ಗುಡ್ಡದ ಬಾಗವನ್ನು **'ಮರಿದೇವರ ಗುಡ್ಡ'** ಎಂದು ಕರೆಯಲಾಗುತ್ತದೆ.

ಈಗ ಹೊಸದಾಗಿ ಕಟ್ಟಲಾಗಿರುವ ಅನುಭವ ಮಂಟಪ ತುಂಬಾ ದೊಡ್ಡದಾಗಿದೆ. ಇಡೀ ಕಟ್ಟಡದ ರಚನೆ ಲಿಂಗಾಕಾರದಲ್ಲಿ ಕಾಣುತ್ತದೆ. ಸುತ್ತಲೂ ಗೋಡೆಗಳ ಮಗ್ಗಲುಗಳ ಮೇಲೆ ಶರಣರ ಭಾವಚಿತ್ರಗಳು, ಆಯ್ದ ಮಹತ್ವದ ವಚನಗಳು ರಾರಾಜಿಸುತ್ತಿವೆ. ಅನುಭವ ಮಂಟಪದ ಮುಖ್ಯ ಗದ್ದುಗೆ ಮೇಲೆ ಅಲ್ಲಮಪ್ರಭುದೇವರು ಶೂನ್ಯಪೀಠದ ಮೇಲೆ ಕುಳಿತುಕೊಂಡಿದ್ದಾರೆ.

ಶರಣರು ತಮ್ಮ ತಮ್ಮ ಕಾಯಕ ಮುಗಿಸಿಕೊಂಡು ವೈಚಾರಿಕ ಚಿಂತನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಒಂದೆಡೆ ಸೇರುತ್ತಿದ್ದರು. ಇದು ದಿನನಿತ್ಯದ ಸತ್ಸಂಗ, ಅನುಭಾವ ವಿನಿಮಯ. ವಿಶೇಷವಾಗಿ ಎಲ್ಲ ಶರಣರು ಒಂದೆಡೆ ಸೇರಿ ಅನುಭಾವ ವಿನಿಮಯ ನಡೆಸುವ ಸಂಸ್ಥೆ **ಅನುಭವ ಮಂಟಪ.** ಜಾತಿ, ಲಿಂಗ ಮತ್ತಿತರ ಯಾವುದೇ ಬೇಧಭಾವವಿಲ್ಲದೆ ಎಲ್ಲರೂ ಸೇರಿ ಚರ್ಚಿಸುವ ಒಂದು ಸಂಘಟನೆಗೆ **ಅನುಭವ ಮಂಟಪ** ಎಂದು ಶರಣರು ಕರೆದರು. ತಮ್ಮ ತಮ್ಮ ಅನುಭವಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದು ಇಲ್ಲಿಯ ವಿಶೇಷ. ಹೀಗಾಗಿ ಅನುಭವ ಮಂಟಪಕ್ಕೆ ಕೊರಡನ್ನು ಕೊನರಿಸುವ ಅದಮ್ಯ ಶಕ್ತಿ ಪ್ರಾಪ್ತವಾಯಿತು. ಇಲ್ಲಿ ಬರೀ ಏಳ್ನೂರಾ

ಎಪ್ಪತ್ತು ಅಮರ ಗಣಂಗಳು ಅಷ್ಟೆ ಅಲ್ಲ ಸಾಮಾನ್ಯವಾಗಿ ಎಲ್ಲ ಶರಣರು ಬಸವಣ್ಣನವರ **ಅನುಭವ ಮಂಟಪ** ದಲ್ಲಿ ಭಾಗಿಯಾದರು. ಈಗಲೂ ಅದೇ ಉದ್ದೇಶದಿಂದಲೇ ಈಗಿನ ಹೊಸ **ಅನುಭವ ಮಂಟಪ** ಕಟ್ಟಡ ತಲೆ ಎತ್ತಿ ನಿಂತಿದೆ.

**ಅನುಭವ ಮಂಟಪ** ಕಟ್ಟಡವೊಂದು ಕಲ್ಯಾಣದಲ್ಲಿ ನಿರ್ಮಾಣವಾಗಬೇಕೆಂದು ನಿರ್ಣಯಿಸಿ, ೧೯೫೫ರಲ್ಲಿ ಜರುಗಿದ ಅ.ಭಾ.ವೀರಶೈವ ಮಹಾಸಭೆಯ ಕಾಲಕ್ಕೆ ಮೈಸೂರು ರಾಜ್ಯದ ಹಿಂದಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ ಅವರ ಅಮೃತ ಹಸ್ತದಿಂದ ಅನುಭವಮಂಟಪ ಕಟ್ಟಡದ ಶಂಕುಸ್ಥಾಪನೆಯ ಕೆಲಸ ನಡೆಯಿತು. ಬಸವ ಸಮಿತಿಯ ಸಂಚಾಲಕರಾದ ಶ್ರೀ ಬಿ. ಡಿ. ಜತ್ತಿ ಮತ್ತು ಯಾದಗಿರಿಯ ಗಣ್ಯರಾದ ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ ಅವರು ಹಂಪಿಯಿಂದ ಬಸವಕಲ್ಯಾಣದ ವರೆಗೆ ದಿನಾಂಕ ೧-೪-೧೯೬೬ ರಂದು ಪಾದ ಯಾತ್ರೆ ಹೊರಟರು. ೨೧ ದಿನಗಳವರೆಗೆ ಈ ಯಾತ್ರೆ ಸಾಗಿತು. ಈ ಫಲವಾಗಿ ೧,೫೯,೩೮೨ ರೂಪಾಯಿಗಳನ್ನು ಕೂಡಿಸಿದ್ದರಿಂದ ಅನುಭವ ಮಂಟಪದ ಕಟ್ಟಡ ಭರದಿಂದ ಸಾಗಲು ಸಾಧ್ಯವಾಯಿತು. ಮುಂದೆ ಭಾಲ್ಕಿ ಚನ್ನಬಸವ ಪಟ್ಟದ್ದೇವರ ಸಂಕಲ್ಪದಿಂದ **ಅನುಭವ ಮಂಟಪ** ಕಟ್ಟಡ ಪೂರ್ತಿಯಾಯಿತು.

ಮಾಹಿತಿ : ಶರಣ ವಿ. ಸಿದ್ಧರಾಮಣ್ಣನವರು



ಅನುಭವ ಮಂಟಪದ ಪ್ರವೇಶದ್ವಾರ

# ಅನುಭವ ಮಂಟಪ

ಇದೆ ಅನುಭವ ಮಂಟಪವ
ಇದು ಘನತರ ಮೋಕ್ಷ ಉನ್ಮನಿಯ ಸಾಧನವ ॥ ಪ ॥

ಓಂ ಇದೆ ಗುರುಸ್ಥಲ ಲಿಂಗ ಶೇಷವು
ಇದೆ ಕರಸ್ಥಲ ಇಷ್ಟ ಪ್ರಾಣವು
ಇದೆ ಷಡಕ್ಷರಿ ಬ್ರಹ್ಮ ಜ್ಞಾನವು
ಇದೆ ಪರಂಜ್ಯೋತಿ ಪ್ರಾಣ ಘೋಷವು
ಇದೆ ಅನುಭವ ಮಂಟಪವ ॥ಅ.ಪ ॥

ಓಂ ಗುರುತಾದ ಶರಣರನ ಕರೆಸಿ
ಅಲ್ಲಿ ಪರಮಾತ್ಮ ಗುಹೆದೊಳು ಮಂಟಪ ರಚಿಸಿ
ಓಂ ಕರಡಿ ಕೌಶಿಕ ಉರಿಯ ಜ್ಯೋತಿಯೋ
ಮೆರಿವ ಜಾಗಟಿ ತಾಳ ಮದ್ದಲಿ
ಸೂರಗಾನದಿ ಆಡಿ ಪಾಡುವ ಮೆರಿವದ ಬಿಡಸಿ
ಘಂಟೆ ಘೋಷಿತ ಇದೆ ಅನುಭವ ಮಂಟಪವ ॥ ೧ ॥

ಓಂ ಒಡಬಾಗ್ನಿ ಮಂಟಪದೊಳಗ
ಮೃಡ ಜಗದೊಳಗೊಲಿದನು ಅನುಭವಿತವಗ
ಪೊಡವಿಯೊಳ್ ಶರಣ ಸಂತತಿಗೆ
ಪ್ರಭು ಕೂಡಿ ಬಾ ಷಡಕ್ಷರಿ ಲಿಂಗ ಭಕ್ತರಿಗೆ
ಒಡಬಾಗ್ನಿ ಮಂಟಪದೊಳಗ
ಓಂ ಕಡಲ ಉಕ್ಕಿತು ಗಿರಿಯ ನಡುಗಿತು
ಷಟಸ್ಥಲಗಳು ತುಂಬಿ ತುಳಿಕಿತು
ಗುಡುಗುಡೆನಿಸಿತು ಸಿಡಲ ತೋರಿತು
ಮಿಡಿದ ಜ್ಞಾನವ ಜ್ಯೋತಿ ಉರಿಯಿತು ॥ ೨ ॥

ಓಂ ಬಸವನ ಶಿಖರದೊಳಲ್ಲೇ
ನಾಲ್ಕು ದೇಶದ ಭಕ್ತರು ಕೂಡಿ ಲಯ ಸತ್ಯದಲ್ಲಿ
ಭಸಿತ ರುದ್ರಾಕ್ಷಿ ಮಾಲೆಯಲ್ಲೇ
ಓಂ ವಿಜಯ ಪಾಣಿನೋಡ ಅಂಗ ಭಾವದಲಿ
ಬಸವನ ಶಿಖರದೋಳಲ್ಲೇ
ಓಂ ಹಸಿದ ಜಂಗಮ ಮನೆಗೆ ಬಾರಲು
ತೃಪ್ತಿ ಅಡಗಿತು ಸ್ವಯಂ ಮಧ್ಯದಿ
ಬಸವ ಸಂತತಿ ಆದ ಭಕ್ತರಿಗೆ
ವಸುಧೆಯೊಳಾಗಿ ಪಿಡಿಸಿಕೊಂಬರೊ ॥ ೩ ॥

ಓಂ ಮುನ್ನಾ ಕಲ್ಯಾಣ ಪಟ್ಟಣವ



ಅನುಭವ ಮಂಟಪದ ಸಭಾಗೃಹದ ದೃಶ್ಯ

ಚೆನ್ನಬಸವನಾ ನೋಡಲು ಬಾ ವಿಸ್ತರವ
ರನ್ನ ಕೆತ್ತಿಸಿದ ಸಿಂಹಾಸನವ
ಓಂ ರನ್ನ ಕರಗಿತು ಹೊನ್ನ ಅಡಗಿತು
ಇನ್ನ ಕಳಸವ ಮಣ್ಣುಗೂಡಿತು
ಧನ್ಯವಾಯಿತು ರನ್ನ ಇಳಿಯಿತು
ಚೆನ್ನಬಸವನ ಬಯಲ ನುಂಗಿತು ॥ ೪ ॥

ಪೈಲು ಗಳಿದವರೆಲ್ಲ ಬೈಲೊ
ನಿರ್ಬೈಲೊಳು ಮತಕಟಿಸಿ ಪಿಡಿದರೆಮ್ಮವರು
ಸಾವು ಜಪವುಳ್ಳವರೋ
ಇದರ ನ್ಯಾಯವ ಕೇಳುತಾರ ಸತ್ಯವುಳ್ಳವರು
ಪೈಲು ಅಳಿದವರೆಲ್ಲ ಬೈಲೋ
ಓಂ ಕಾಯ ಕಲ್ಪಿತ ಮಾಯಗಾರನು
ತೋರಿದರೀಶನ ದ್ಯಾಯಗಾರನು
ಭೇರತುರೇಶನು ಮಾಡಿದ ಕವಿಯೋ
ಆಯಿತು ಅನುಭವ ನುಡಿಯೋ ॥ ೫ ॥

– ಶ್ರೀ ಬೀರಲಿಂಗ ಪೂಜಾರಿ

***

# ೩. ರೇವಣಸಿದ್ಧ-ಘನಲಿಂಗ ರುದ್ರಮುನಿಗಳ ಮಠ-ಗವಿ

ಗುಡ್ಡದ ವಾರ್‍ಯಾಗ ಪತ್ತೂರಿ ಬನದಾಗ
ಒಬ್ಬನೆ ಹ್ಯಾಂಗಿದ್ಯೋ ಘನಲಿಂಗ। ನಿನಮುಂದ
ಅಬ್ಬರಸಿ ಗಂಗಿ ಹರದಾಳ

ತ್ರಿಪುರಾಂತ ಕೆರೆಯ ದಡದ ಮೇಲಿರುವ ಈಗಿನ ಹೊಸ ಅನುಭವ ಮಂಟಪ ಕಟ್ಟಡದಿಂದ ಸ್ವಲ್ಪಮುಂದಕ್ಕೆ, ದಾಸೋಹ ಮಂದಿರದ ಹಿಂದೆ, ಪತ್ರಿವನದ ಎಡಕ್ಕೆ, ತ್ರಿಪುರಾಂತ ಕೆರೆಯ ದಂಡೆಯ ಮೇಲೆ ಒಂದು ದೊಡ್ಡ ಮಠವಿದೆ. ರೇವಣಸಿದ್ಧರು, ಅವರ ಮಗ ರುದ್ರಮುನಿ (ಘನಲಿಂಗ ರುದ್ರಮುನಿ) ಇವರು ಬಹಳ ದಿನ ಇಲ್ಲಿಯೇ ವಾಸಿಸಿದ್ದರು ಎಂದು ಹೇಳುವ ಗವಿ ಇದಾಗಿದೆ. ಬಹಳ ವಿಶಾಲವಾದ ಸ್ಥಳವಿರುವ ಈ ಸ್ಮಾರಕಕ್ಕೆ ಇಂದು **ಗವಿಮಠ** ಎಂದು ಕರೆಯುತ್ತಾರೆ. ಇದರ ಹೊರವಲಯದಲ್ಲಿ ಸುತ್ತಲೂ ಸಣ್ಣ ದೊಡ್ಡ ಗವಿಗಳಿವೆ. ಇಲ್ಲೆಲ್ಲ ಶರಣರು ವಾಸವಾಗಿರಬಹುದು. ಪೂಜೆ ಧ್ಯಾನಗಳಲ್ಲಿ ತೊಡಗಿರಬಹುದು. ಈಗೆಲ್ಲ ಅವು ಕಸಕಳೆಯಿಂದ ಮುಚ್ಚಿಹೋಗಿವೆ. ಒಳಗೆ ಪ್ರವೇಶಿಸಲು ಆಗದ ಸ್ಥಿತಿಯಲ್ಲಿವೆ. ಈ ಗವಿಯ ಮಗ್ಗುಲಿಗೆ, ತ್ರಿಪುರಾಂತ ಕೆರೆಯ ದಂಡೆಯಲ್ಲಿ ಕೊರೆಯಲಾದ ಒಂದು ಗವಿಗೆ ಮರ್ತೂರಿನ **ವಿಜ್ಞಾನೇಶ್ವರ ಗವಿ** ಎಂದು ಕರೆಯುತ್ತ ಬರಲಾಗಿದೆ.



ರೇವಣಸಿದ್ಧರ ಹೆಂಡಂದಿರಲ್ಲಿ ರಾಜೇಂದ್ರ ಚೋಳನ ಮಗಳು ಸೌಂದರಿಯೂ ಒಬ್ಬಳು. ರೇವಣಸಿದ್ಧರಿಗೆ ಮಂಗಳವೇಡೆ ಸಮೀಪ ಒಂದು ತಟಾಕ ನಿರ್ಮಿಸುವ ಆಸೆ ಆಗುತ್ತದೆ. ಆ ತಟಾಕದ



ಘನಲಿಂಗ ರುದ್ರಮುನಿ ಮಠ-ಗವಿ

ಕೆಲಸಕ್ಕೆ ಮಣ್ಣು ಹೊರಲು ಬೇರೆ ಆಳುಗಳನ್ನು ಹಚ್ಚದೆ ತನ್ನ ಹೆಂಡತಿಯರನ್ನೇ ಮಣ್ಣು ಹೊರಲು ಹಚ್ಚುತ್ತಾನೆ. ಆ ಸಮಯದಲ್ಲಿ ರೇವಣಸಿದ್ಧನ ಹೆಂಡತಿ ಚೋಳರಾಜಕುಮಾರಿ ಸೌಂದರಿಯು ಗರ್ಭಿಣಿ ಆಗಿರುತ್ತಾಳೆ. ಆಯಾಸದಿಂದ ಮಣ್ಣು ಹೊರಲಾಗದೆ ಸುಸ್ತಾಗಿ ಕುಳಿತುಕೊಳ್ಳುತ್ತಾಳೆ. ಸಿದ್ಧಿಪುರುಷನಾದ ರೇವಣಸಿದ್ಧರು ಸೌಂದರಿಯ ಹೊಟ್ಟೆ ಸವರಲು, ಗರ್ಭವೆ ಆತನ ಕೈಗೆ ಬಂದಿತಂತೆ. ಆ ಗರ್ಭವನ್ನು ಒಂದು ತೊಟ್ಟಿಲಲ್ಲಿ ಇಟ್ಟು, ಕಟ್ಟೆಯ ಅಗ್ರಭಾಗದಲ್ಲಿ ಮುಚ್ಚಿಟ್ಟನಂತೆ. ಹೆಂಡತಿಯನ್ನು ಕೈಲಾಸಕ್ಕೆ ಕಳಿಸಿದನಂತೆ. ಆರುತಿಂಗಳ ನಂತರ ಅದನ್ನು ತೆಗೆದು ನೋಡಲು ತೊಟ್ಟಿಲಲ್ಲಿಟ್ಟ ಭ್ರೂಣ ಮಗುವಾಗಿತ್ತಂತೆ. ಆ ಮಗುವಿಗೆ ರುದ್ರಮುನಿ ಎಂದು ಹೆಸರನ್ನು ಇಟ್ಟನಂತೆ. ಪುಣ್ಯವತಿ ಎಂಬ ರೇವಣಸಿದ್ಧರ ಇನ್ನೊಬ್ಬ ಹೆಂಡತಿ ಈ ಮಗುವನ್ನು ಪ್ರೀತಿಯಿಂದ ಬೆಳೆಸಿದಳು ಎಂದು ಹೇಳಲಾಗುತ್ತದೆ. ತಂದೆಯಿಂದಲೇ ಮಗ ರುದ್ರಮುನಿ ಲಿಂಗ ದೀಕ್ಷೆ ಪಡೆಯುತ್ತಾನೆಂದು ತಿಳುದುಬರುತ್ತದೆ.

ಬಸವಣ್ಣನವರ ಹಿರಿಯ ಸಮಕಾಲೀನರಾದ ರೇವಣಸಿದ್ಧರು ತಮ್ಮ ಮಗ ರುದ್ರಮುನಿಯನ್ನು ತನ್ನಂತೆಯೆ ಸಿದ್ಧಿಪುರುಷನನ್ನಾಗಿ ತರಬೇತುಗೊಳಿಸುತ್ತಾರೆ. ಧರ್ಮದಲ್ಲಿ ನಿಷ್ಠಾವಂತನಾಗಿರಲು ಹೇಳುತ್ತಾರೆ. ತಾವು ಅತ್ತಿತ್ತ ಪ್ರಯಾಣಕ್ಕೆ ಹೋದರೆ ಮಗ ರುದ್ರಮುನಿಯೆ ಮಠದ ಜವಾಬ್ದಾರಿ ವಹಿಸಿಕೊಳ್ಳುವ ಜೊತೆಗೆ ಲಿಂಗದೀಕ್ಷೆ ಮುಂತಾದವನ್ನು ಮಾಡಲು ಅರ್ಹನನ್ನಾಗಿ ಮಾಡುತ್ತಾರೆ. ರುದ್ರಮುನಿ ಗಂಗಾಂಬಿಕೆಗೆ ಲಿಂಗ ದೀಕ್ಷೆಯನ್ನು, ಅಕ್ಷರಭ್ಯಾಸವನ್ನು ಹೇಳಿಕೊಟ್ಟ ಗುರು. ಹಾವಿನಹಾಳ ಕಲ್ಲಯ್ಯನಿಗೆ

ತಂದೆ ರೇವಣಸಿದ್ಧರ ಅಪ್ಪಣೆಯಂತೆ ಕ್ರಿಯಾದೀಕ್ಷೆ ಕೊಟ್ಟವರು ರುದ್ರಮುನಿ. ಈ ಶಿಷ್ಯನಿಗೆ ತಂದೆ ರೇವಣಸಿದ್ಧರೆ ಶಿವತತ್ವವನ್ನು ಬೋಧಿಸಿದವರು.

ರೇವಣಸಿದ್ಧರು ಸದಾ ಸಂಚಾರಿಯಾಗಿದ್ದರೆಂದು ತಿಳಿದುಬರುತ್ತದೆ. ಅವರು ಅಡ್ಡಾಡಿದ್ದು ಮಂಗಳವೇಡೆಯಿಂದ ಬಸವಕಲ್ಯಾಣದವರೆಗೆ. ಈ ಪರಿಸರದಲ್ಲಿ ಹಲವಾರು ಮಠಗಳು ಮಂದಿರಗಳು ದೊರೆಯುತ್ತವೆ. ಶಿಷ್ಯೆ ಗಂಗಾಂಬಿಕೆಗೆ ಚನ್ನಬಸವಣ್ಣನವ ರೊಂದಿಗೆ ಉಳವಿಗೆ ಹೋಗಲು, ವಚನ ಸಾಹಿತ್ಯ ಸಂರಕ್ಷಿಸಲು ರುದ್ರಮುನಿ ಒಪ್ಪಿಗೆ ಕೊಡುತ್ತಾರೆ. ತಾನೂ ಇವರೊಂದಿಗೆ ಹೋಗಿದ್ದರ ಕುರುಹಾಗಿ ರುದ್ರಮುನಿಯ ದೇವಸ್ಥಾನ ಉಳವಿ ಹಾದಿಯಲ್ಲಿ ಬರುವ ನಾಗಳಾಪುರದಲ್ಲಿದೆ. ಶರಣರ ನಂತರ ಮರಳಿ ಬಸವಕಲ್ಯಾಣಕ್ಕೆ ಬಂದು ಗುಪ್ತದಲ್ಲಿಯೆ ಶರಣರ ವಚನಸಂದೇಶ ಎಲ್ಲಡೆ ಬಿತ್ತರಿಸಲು ಪ್ರಯತ್ನಿಸಿದವರಲ್ಲಿ ರುದ್ರಮುನಿಗಳೂ ಒಬ್ಬರು.

ಮಾಹಿತಿ : ವ್ಹಿ. ಸಿದ್ರಾಮಣ್ಣ

***



ಘನಲಿಂಗ ರುದ್ರಮುನಿ ಮಠದ ಗವಿಯಲ್ಲಿರುವ ರುದ್ರಮುನಿಯ ಗದ್ದುಗೆ

## ೪. ಪತ್ರಿವನದ ಗವಿಗಳು

**ಹೂಗಾರ ಮಾದಯ್ಯ :**

ಬೂದನಿಗೆ ಭಾಸಿಂಗ ಭೂಮಿತಾಯಿಗೆ ದಂಡೆ
ಸಾಲ ಶರಣರಿಗೆ ಸರಮಾಲೆ । ಕಟಿಗೊಂಡು
ಮಾದಯ್ಯ ಗೆದ್ದ ಕೈಲಾಸ

ಮರಿದೇವರ ಗುಡ್ಡದ ಮೇಲೆ ಹುಟ್ಟಿಕೊಂಡಿರುವ ಅನುಭವ ಮಂಟಪದ ಮುಂದೆ, ತ್ರಿಪುರಾಂತ ಕೆರೆಯ ದಂಡೆಯ ಮೇಲೆ, ರುದ್ರಮುನಿ ಮಠದ ಮಗ್ಗುಲಿಗೇ ಪತ್ರಿವನ ಇದೆ. ಈ ಪತ್ರಿವನದಲ್ಲಿ ಶರಣರು ವಾಸವಾಗಿರುವ ಅನೇಕ ಗವಿಗಳು ಕಾಣಸಿಗುತ್ತವೆ. ಅವುಗಳಲ್ಲಿಯೇ ಹೂಗಾರ ಮಾದಯ್ಯನವರು ಒಂದು ಗವಿಯಲ್ಲಿ




ಪತ್ರಿವನ, ಇಲ್ಲಿ ಅನೇಕ ಶರಣರ ಗವಿಗಳಿವೆ

ವಾಸವಾಗಿರಬಹುದೆಂದು ಹೇಳಲಾಗುತ್ತದೆ. ಇಲ್ಲಿ ಹೂ ಪತ್ರಿ ಲಿಂಗ ಪೂಜೆಗೆ ಒಪ್ಪಿಸುವ ನೇಮದವರೆಲ್ಲ ಇದ್ದಿರಬಹುದೆಂದು ಈಗ ಅನುಭವ ಮಂಟಪದ ಪರಿಸರದಲ್ಲಿಯೇ ವಾಸವಾಗಿರುವ ಶರಣ ವ್ಹಿ. ಸಿದ್ದರಾಮಣ್ಣ ಅವರು ಹೇಳುತ್ತಾರೆ.

**ದಸರಯ್ಯ- ವೀರಮ್ಮ :**

ದಸರಯ್ಯ-ವೀರಮ್ಮ ಈ ದಂಪತಿಗಳು ಪ್ರಕೃತಿಯಲ್ಲೂ ದಯೆಯನ್ನು ತೋರಿಸುವ ಪ್ರಯತ್ನ ಮಾಡಿದವರು. ಇವರು ಕೂಡಾ ಪತ್ರಿವನದ ಪರಿಸರದಲ್ಲಿಯೇ ಇದ್ದಿರಬಹುದೆಂದು ಹೇಳಲಾಗುತ್ತದೆ. ಆದರೆ ಇವರು ಪತ್ರಿ ತರಲು ಹೋಗುವ ಇನ್ನೊಂದು ಸ್ಥಳವನ್ನು ಜನ ತೋರಿಸುತ್ತಾರೆ.

ಗೋರ್ಟಾದಿಂದ ದಕ್ಷಿಣಕ್ಕೆ ಘಾಟಬೋರಾಳ ಎಂಬ ಗ್ರಾಮವಿದೆ. ಘಾಟಬೋರಾಳದ ಉತ್ತರಕ್ಕೆ ಶಂಕರಲಿಂಗ (ಶಂಕರದಾಸಿಮಯ್ಯ) ಮತ್ತು ಜೇಡರ ದಾಸಿಮಯ್ಯನ ಗದ್ದಿಗೆಗಳಿವೆ. ಗೋರ್ಟಾ, ರಾಯಪಟ್ಟಿ ಮತ್ತು ಘಾಟಬೋರಾಳ ಈ ಮೂರು ಊರುಗಳ ಸೀಮೆಯಲ್ಲಿ ಸಂಗಮೇಶ್ವರ ದೇವಾಲಯ ಇದೆ. ಗೋರ್ಟಾದ ಹತ್ತಿರ ನಗರೇಶ್ವರ ದೇವಾಲಯದಿಂದ ಉತ್ತರಕ್ಕೆ ಅಕ್ಕಣ್ಣನವರ ಹೊಲವಿದೆ. ಅಲ್ಲಿ ದೊಡ್ಡ ಪತ್ರಿಗಿಡವಿದೆ. ಮೊದಲು ಈ ಪ್ರದೇಶ ಪತ್ರಿಗಿಡಗಳಿಂದ ತುಂಬಿತ್ತೆಂದೂ ಹೇಳುತ್ತಾರೆ. ಮೋಟಮಲ್ಲ ಇಲ್ಲಿಯೇ ವಾಸಿಸುತ್ತಿದ್ದನಂತೆ. ದಸರಯ್ಯ ದಂಪತಿಗಳು



ಪಂಚಸೂತ್ರ ಗವಿಲ್ಲಿರುವ ಪಂಚಲಿಂಗಗಳು



ಪಂಚಸೂತ್ರ ಗವಿ

ಈ ಪತ್ರಿವನದಿಂದಲೇ ಪತ್ರಿಯನ್ನು ಒಯ್ಯುತ್ತಿದ್ದರೆಂದೂ ಈ ಶರಣರು ಇಲ್ಲಿಯ ಪತ್ರಿಯಿಂದಲೇ ಲಿಂಗಪೂಜೆ ಮಾಡುತ್ತಿದ್ದರೆಂದೂ ಹೇಳುವ ಪ್ರತೀತಿ ಉಳಿದುಕೊಂಡು ಬಂದಿದೆ.

**ಪಂಚಸೂತ್ರ ಗವಿ :**

ಪಂಚಸೂತ್ರ ಗವಿ ತ್ರಿಪುರಾಂತ ಕೆರೆಯ ದಡದಲ್ಲಿರುವ ಪತ್ರಿವನದಲ್ಲಿರುವ ಒಂದು ಪ್ರಮುಖವಾದ ಗವಿ. ಇಲ್ಲಿಯ ಉಳಿದ ಸಣ್ಣ ಪುಟ್ಟ ಗವಿಗಳೆಲ್ಲ ಹಾಳಾಗಿ ಹೋಗಿವೆ. ಆದರೆ ಇದೊಂದು ಗವಿ ಮಾತ್ರ ಇಲ್ಲಿ ಸುರಕ್ಷಿತವಾಗಿ ಉಳಿದಿದೆ. ಈ ಗವಿಯಲ್ಲಿ ಚೆನ್ನಬಸವಣ್ಣನವರು ಐದು ಜನರಿಗೆ ಲಿಂಗದೀಕ್ಷೆ ಕೊಟ್ಟರೆಂದು ತಿಳಿದುಬರುತ್ತದೆ. ಮತ್ತೆ ಉಳಿದಂತೆ ಯಾವ ವಿಷಯಗಳೂ ತಿಳಿದುಬರುವುದಿಲ್ಲ.

ಮಾಹಿತಿ : ಶರಣ ವ್ಹಿ. ಸಿದ್ಧರಾಮಣ್ಣ ಅವರು

***

# ೫. ಮಡಿವಾಳ ಮಾಚಿದೇವರ ಹೊಂಡ

ಶಿವಭಕ್ತರರಿವೆಗಳ ತವಕದಲಿ ತೊಳೆ ತರುವ
ಭವಿ ಜನರ ಬಟ್ಟೆ ಮುಟ್ಟುವನೆ । ಮಾಚಯ್ಯ
ಜವನ ದವಡ್ಯಾದ ಕೂಮತಕೆ

ಬಸವಕಲ್ಯಾಣದಲ್ಲಿ ತ್ರಿಪುರಾಂತ ಕೆರೆಯಿಂದ ಸ್ವಲ್ಪದೂರಕ್ಕೆ ಪಶ್ಚಿಮ ದಿಕ್ಕಿನಲ್ಲಿ ಮಡವಾಳ ಮಾಚಿದೇವನ ಹೆಸರಿನ ಒಂದು ದೊಡ್ಡದಾದ-ವಿಸ್ತಾರವಾದ ನೀರಿನ ಹೊಂಡವಿದೆ. ಈ ಹೊಂಡದ ಮಧ್ಯದಲ್ಲಿಯೆ ಮಾಡಿವಾಳ ಮಾಚಿದೇವನಿಗೆ ಸಂಬಂಧಿಸಿದ ಒಂದು ಸ್ಮಾರಕವಿದ್ದದ್ದನ್ನು ಈಗ ಪ್ರಾಧಿಕಾರದವರು ಬಿಚ್ಚಿಹಾಕಿ, ಆ ಸ್ಥಳದಲ್ಲಿ ನೂತನವಾಗಿ ಸ್ಮಾರಕವನ್ನು ನಿರ್ಮಿಸುತ್ತಿದ್ದಾರೆ. ಅಲ್ಲಿಯೇ ಎದುರಿಗೆ ಒಂದು ಬಾವಿಯಿದೆ. ಮಡಿವಾಳನ ದರ್ಶನಕ್ಕೆ ಹೋಗುವವರು ಈ ಬಾವಿಯಲ್ಲಿ ಸ್ನಾನಮಾಡಿ ಮಡಿಯಿಂದಲೇ ದರ್ಶನ ಪಡೆಯುತ್ತಿದ್ದರೆಂದು ಹೇಳಲಾಗುತ್ತದೆ.

ಮಡಿವಾಳ ಮಾಚಿದೇವ ಮೂಲತಃ ಬಿಜಾಪೂರ ಜಿಲ್ಲೆಯ ದೇವರ ಹಿಪ್ಪರಗಿಯವರು. ಅಲ್ಲಿಯೂ ಮಡಿವಾಳ ಮಾಚಿದೇವರ ಹೆಸರಿನ ದೊಡ್ಡ ಗುಡಿ ಇದೆ. ಈ ಗುಡಿಯ ಬಲಕ್ಕೆ ಬಹು ಪುರಾತನವಾದ ಮಲ್ಲಯ್ಯನ ಮಂದಿರ ಇದ್ದರೆ, ಎಡಕ್ಕೆ ಊರಿನಲ್ಲಿ ಮಡಿವಾಳನ ಆರಾಧ್ಯ ದೈವ ಕಲ್ಮೇಶ್ವರನ ಮಂದಿರವಿದೆ. ಮಡಿವಾಳನ ತಂದೆ ಪರ್ವತಯ್ಯ. ಗುರುಗಳು ಇಬ್ಬರು; ಒಬ್ಬರು ಮಲ್ಲಿಕಾರ್ಜುನ ಇನ್ನೊಬ್ಬರು ಲಿಂಗಣಾರ್ಯ. ಬಸವಣ್ಣನವರ ಕೀರ್ತಿವಾರ್ತೆ ಕೇಳಿ ಮಡಿವಾಳರು ಬಸವಕಲ್ಯಾಣಕ್ಕೆ ಬಂದರೆಂದು ಹೇಳಲಾಗುತ್ತದೆ. ಕಲ್ಯಾಣಕ್ಕೆ ಅಡಿಯಿಡುವುದರಿಂದಲೇ ಅವರ ವ್ಯಕ್ತಿತ್ವದ ದಿವ್ಯದರ್ಶನ ಎಲ್ಲರಿಗೆ ಆಗುತ್ತದೆ. ತುಂಬಿ ಹರಿಯುತ್ತಿರುವ ಭೀಮಾನದಿಯನ್ನು ಯಾರ ಸಹಾಯವಿಲ್ಲದೆ ಈಜಿ ದಾಟಿದ ಭಕ್ತನೀತ ಎಂಬ ಖ್ಯಾತಿ ಅವನೊಂದಿಗಿದೆ.

ಬಸವಕಲ್ಯಾಣದಲ್ಲಿ ಹೊಂಡದ ತಡಿಯಲ್ಲಿ ಮಾಚಯ್ಯ ವಾಸಿಸಲು ಪ್ರಾರಂಭಿಸಿದ ನಂತರ ಶರಣರು ನೇರವಾಗಿ ಹೊಂಡಕ್ಕೆ ಬಂದು ಸ್ನಾನ ಮಾಡುತ್ತಿದ್ದರೆಂದೂ ಶರಣರ ಬಟ್ಟೆಗಳನ್ನು ಮಾಚಯ್ಯನು ಕಾಲಿಗೆ ವೀರಗಂಟೆಯನ್ನು ಕಟ್ಟಿಕೊಂಡು ಮಡಿಮಾಡುತ್ತಿದ್ದನೆಂದೂ ಪ್ರತೀತಿ ಇದೆ.

ಶರಣರ ಬಟ್ಟೆಗಳನ್ನು ಮಾತ್ರ ಮಡಿ ಮಾಡುವ ನೇಮದವನು ಮಾಚಿದೇವನಾಗಿದ್ದನು. ಮಡಿ ಮಾಡಿದ ಶರಣರ ಬಟ್ಟೆಗಳನ್ನು ಭವಿಗಳಾದವರು ಮುಟ್ಟುವಂತಿರಲಿಲ್ಲ. ಗೊತ್ತಿದ್ದೂ ಮುಟ್ಟಲು ಪ್ರಯತ್ನಿಸಿದವರು ಯಾರೇ ಆಗಿರಲಿ ಅವರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಅದಕ್ಕಾಗಿ ಯಾವಾಗಲೂ ಒಂದು ಕೈಯಲ್ಲಿ



ಮಡಿವಾಳ ಮಾಚಿದೇವರ ಹೊಂಡದ ಪಾರ್ಶ್ವನೋಟ, ಸುತ್ತಲೂ ನೀರಿದೆ

ಖಡ್ಗ, ಇನ್ನೊಂದು ಕೈಯಲ್ಲಿ ವೀರಗಂಟೆ ಹಿಡಿದುಕೊಂಡೇ ತಿರುಗಾಡುತ್ತಿದ್ದನಂತೆ. ಅಂದರೆ ತಾನು ಬರುತ್ತಿರುವ ಸೂಚನೆಯನ್ನು ಗಂಟೆಯ ಸಪ್ಪಳದೊಂದಿಗೆ ಜನರಿಗೆ ಮುಟ್ಟಿಸುತ್ತಿದ್ದನು. ಅವನ ನೇಮವನ್ನು ಬಿಜ್ಜಳನು ತಾನು ರಾಜನೆಂಬ ಅಧಿಕಾರವನ್ನು ತೋರಿಸುವ ಮೂಲಕ ಮುರಿದು ಹಾಕಲು ಪ್ರಯತ್ನಿಸಿದನು ಎಂದು ಹೇಳುವ ಘಟನೆಯೊಂದು ಇಂದಿಗೂ ಜನರ ಬಾಯಿಯಲ್ಲಿ ಉಳಿದುಕೊಂಡು ಬಂದಿದೆ.

ಬಸವಣ್ಣನವರ ಮೈಮೇಲಿನ ಬಟ್ಟೆಗಳ ಥಳಥಳ ಹೊಳಪನ್ನು ನೋಡಿದ ಬಿಜ್ಜಳನಿಗೆ ಆಶ್ಚರ್ಯ. ತಾನೂ ಬಸವಣ್ಣನ ಬಟ್ಟೆ ಶುಚಿ ಮಾಡುವವನಿಂದಲೇ ತನ್ನ ಬಟ್ಟೆಗಳನ್ನು ಶುಚಿ ಮಾಡಿಸಬೇಕೆಂದು ಆಪೇಕ್ಷಿಸುತ್ತಾನೆ. ಬಸವಣ್ಣನವರಿಗೆ ಈ ಸಂಗತಿ ತಿಳಿಸುತ್ತಾನೆ. ಆಗ ಬಸವಣ್ಣ ಇದ್ದ ಸಂಗತಿಯನ್ನು ಇದ್ದಂತೆ ತಿಳಿಸುತ್ತಾರೆ. ಅವನೊಬ್ಬ ಶರಣ. ಅವನ ಕಾಯಕ ಶರಣರ ಬಟ್ಟೆಗಳನ್ನು ಮಡಿ ಮಾಡುವುದು. ಅವನು ಊರ ಬಟ್ಟೆ ಒಗೆಯುವ ಅಗಸನಲ್ಲ ಎಂದು ಬಸವಣ್ಣನವರು ಬಿಜ್ಜಳನಿಗೆ ಹೇಳಿದಾಗಲೂ ಬಿಜ್ಜಳ ದುಡುಕಿದನು. ತನ್ನ ಬಟ್ಟೆಗಳನ್ನು ಮಡಿವಾಳಯ್ಯನಲ್ಲಿ ಕಳಿಸಿದಾಗ ಅವು ಉರಿದು ಸುಟ್ಟು ಹೋದವಂತೆ. ಹೀಗಾಗಿ ಸಿಟ್ಟಿಗೆದ್ದ ಬಿಜ್ಜಳ ಮಡಿವಾಳ ಮಾಚಿದೇವನಿಗೆ ಆನೆ ಕಾಲಿನಿಂದ ತುಳಿಸಲು ಆಜ್ಞೆ ಮಾಡಿದಾಗ, ಆ ಆನೆಯನ್ನು ಇರಿದು ಆಕಾಶಕ್ಕೆ ಎಸೆದನೆಂದೂ, ಮಾವುತನೂ ಅದರೊಂದಿಗೆ ಸತ್ತನೆಂದೂ ನಂತರ ಬಿಜ್ಜಳ ಪಶ್ಚಾಪ ವ್ಯಕ್ತಪಡಿಸಲು ಭಸ್ಮ ಲೇಪನದಿಂದ ಆನೆ, ಮಾವುತ ಇಬ್ಬರನ್ನು ಬದುಕಿಸಿದನೆಂದೂ ಹೇಳಲಾಗುತ್ತದೆ. ಒಂದುಬಗೆಯ ಅಸಾಧಾರಣಶಕ್ತಿ ಮಡಿವಾಳ ಮಾಚಿದೇವನಲ್ಲಿತ್ತೆಂದೂ

ಇಂಥ ಎಷ್ಟೋ ಘಟನೆಗಳು ಅವನ ಜೀವನದಲ್ಲಿ ನಡೆದಿವೆ ಎಂದೂ ಜನ ಹೇಳುತ್ತಾರೆ. ಮೇದರ ಕೇತಯ್ಯ ಬಾಹೂರ ಬ್ರಹ್ಮಯ್ಯ ಅವರಿಗೂ ಪ್ರಾಣ ಬರಿಸಿದ ಶರಣ ಎನ್ನುತ್ತಾರೆ. ಕಲ್ಲಿನ ಬಸವಣ್ಣನಿಗೆ ಕಬ್ಬು ತಿನಿಸಿದನೆಂದೂ ಹೇಳುತ್ತಾರೆ.

ಈ ರೀತಿಯ ರುದ್ರಾವತಾರದಿಂದಾಗಿ ಇವನನ್ನು ವೀರಭದ್ರನ ಅವತಾರವೆಂದೇ ಜನ ಭಾವಿಸಿದ್ದರು. ಬಸವಕಲ್ಯಾಣ ಭಾಗದ ಹುಮನಾಬಾದ, ಗಡವಂತಿ, ಬಸವತೀರ್ಥ, ಚಾಂಗಲೇರ ಮತ್ತು ಬೀದರ ಜಿಲ್ಲೆಯ ಹಲವು ಗ್ರಾಮಗಳಲ್ಲಿ ವಿಶೇಷವಾದ ವೀರಭದ್ರನ ಮೂರ್ತಿಗಳಿರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಇಲ್ಲೆಲ್ಲ ವೀರಭದ್ರ ದೇವರ ಕೊರಳಲ್ಲಿ ಲಿಂಗ, ಗುಡಿಯ ಪಕ್ಕದಲ್ಲಿ ಹೊಂಡ, ಎದುರಿನಲ್ಲಿ ನಂದಿ ಇರುವುದರಿಂದ ಇವೆಲ್ಲ ಮಡಿವಾಳ ಮಾಚಿದೇವ ಬಂದು ಕೆಲದಿನ ನೆಲೆನಿಂತುಹೋದ ಸ್ಮಾರಕಗಳೆಂದು ಜನರು ಹೇಳುತ್ತಾರೆ.

ಬಸವಕಲ್ಯಾಣದಲ್ಲಿರುವ ಮಾಚಿದೇವನ ಹೊಂಡಕ್ಕೆ ತನ್ನದೇ ಆದ ವಿಶೇಷತೆ ಇದೆ. ಕಲ್ಯಾಣದಲ್ಲಿ ನಾವು ನೋಡಿದ ಎಲ್ಲ ಸ್ಥಳಗಳಿಗಿಂತ ಇದು ವಿಶೇಷವೆನಿಸುತ್ತದೆ. ವಿಸ್ತಾರವಾದ ನೀರಿನ ತಾಣ ಇದು. ಮಾಚಿದೇವ ಸ್ವಲ್ಪ ರೌದ್ರಾವತಾರಿ ಎನ್ನುವ ಭಾವದಿಂದ ಬಂದ ಭಕ್ತರೆಲ್ಲ, ಮಡಿಯಿಂದಲೇ ಅವರ ದರ್ಶನ ಪಡೆಯುವ ಪದ್ಧತಿ ಇದೆ. ಮೊದಲು ಮಡಿವಾಳನ ದರ್ಶನಕ್ಕೆ ಬರಬೇಕಾದರೆ, ಹೊಂಡದಲ್ಲಿ ಇಳಿದು ನಡೆಯುತ್ತಲೇ ಬರಬೇಕಾಗಿತ್ತಂತೆ. ಎದಿಮಟ ಟೊಂಕಮಟ ನೀರು ಇರುವುದು



ಮಡಿವಾಳ ಮಾಚಿದೇವರ ಹೊಂಡದ ಮಧ್ಯದಲ್ಲಿದ್ದ ಹಳೆಯ ಗುಡಿಯ ಗರ್ಭಗೃಹದಲ್ಲಿದ್ದ ಜೋಡಿ ಗೋಳಕವುಳ್ಳ ಶಿವಲಿಂಗ



ಮಡಿವಾಳ ಮಾಚಿದೇವರ ಹೊಂಡದ ಮಧ್ಯದಲ್ಲಿದ್ದ
ಹಳೆಯ ಗುಡಿಯನ್ನು ತೆಗೆದು ಹೊಸ ಗುಡಿಯ ರಚನೆ ನಡೆದಿದೆ

ಸಾಮಾನ್ಯವಾಗಿತ್ತಂತೆ. ಹೊಂಡದಾಟಿ ಬಂದು, ಮೊದಲು ಬಾವಿಕಟ್ಟೆ ಹತ್ತಿರ ನಿಂತು, ನೀರು ಹಾಕಿಕೊಂಡೇ ಮಡಿವಾಳ ಮಾಚಿದೇವರ ದರ್ಶನ ಮಾಡುತ್ತಿದ್ದರು.

ದೂರದೂರದ ಜನ ಬಂದು ವಿಶೇಷವಾದ ಹರಕೆಗಳನ್ನು ಹೊರವುದು. ಮದುವೆ ಮಾಡುವುದು, ಜಡಿ ತೆಗೆವುದು ಮುಂತಾದವುಗಳಂತೂ ಸಾಮಾನ್ಯ. ಹರಕೆ ಹೊತ್ತವರು ಕಂಟ್ಲೆ ಬಿಡುವುದು, ತೊಟ್ಟಿಲ ಕಟ್ಟುವುದು, ನೂರೊಂದು ಸ್ವಾಮಿಗಳಿಗೆ ದಾಸೋಹ ನಡೆಸುವುದು ಈ ಮುಂತಾದ ಪದ್ಧತಿಗಳನ್ನೂ ಇಲ್ಲಿ ಕಾಣಬಹುದಾಗಿದೆ. ಪ್ರತಿ ಅಮವಾಸ್ಯೆಗೆ ಜನ ಇಲ್ಲಿಗೆ ಬಂದು ಹೋಗುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಅದು ಇಂದಿಗೂ ಮುಂದುವರಿದುಕೊಂಡು ಹೊರಟಿದೆ. ಹೊಂಡದಲ್ಲಿ ಮಿಂದು, ಲಿಂಗಕ್ಕೆ ತೆಂಗು ಒಡೆದುಕೊಂಡು ಹೋದರೆ ಅಪೇಕ್ಷೆಗಳು ಈಡೇರುತ್ತವೆ ಎಂಬ ನಂಬಿಕೆ ಜನರಲ್ಲಿದೆ.

ಮಡಿವಾಳನ ಹೊಂಡದ ಜೀರ್ಣೋದ್ಧಾರ ಮಾಡುವಾಗ ಎಷ್ಟೋ ಮೂರ್ತಿಗಳಿರುವ ಕಲ್ಲುಗಳು ಸಿಕ್ಕಿವೆ. ಕೆರೆಯೊಳಗೂ ಒಂದು ಗುಡಿ ಇತ್ತು, ಅದರ ಅವಶೇಷಗಳಿವು ಎಂದೂ ಹೇಳುತ್ತಾರೆ. ಪ್ರತಿವರ್ಷ ಸಂಕ್ರಮಣದಂದು ತ್ರಿಪುರಾಂತ ಗ್ರಾಮದಲ್ಲಿ ಈ ಶರಣರ ಹೆಸರಿನಲ್ಲಿ ಜಾತ್ರೆ ನಡೆಯುತ್ತದೆ.

ಮಾಹಿತಿ : ಸಿದ್ರಾಮಯ್ಯ ಗುಂಡಯ್ಯ ಮಠಪತಿ.

***

## ಹಿಪ್ಪರಗಿ ಮಾಚಯ್ಯ

ಹಿಪ್ಪರಿಗಿ ಮಾಚಯ್ಯ ಬಲು ಸಿಟ್ಟಿನ ಶರಣ
ಸಾಕ್ಷಾತ ವೀರಭದ್ರನ ಅವತರಣ ॥ ॥ ಪ ॥

ಹುಟ್ಟೂರು ತಾ ಬಿಟ್ಟು ಕಲ್ಯಾಣಕ ತಾ ಬಂದು
ಶರಣರ ಬಟ್ಟೆಯ ಮಡಿಮಾಡ್ಯಾರ ಮಾಚಣ್ಣ ॥ ॥ ೧ ॥

ಹೊಂಡಕ ಬರತಾರ ಬಟ್ಟೆಯು ಒಗಿತಾರ
ದಂಡಿಯ ಮ್ಯಾಲ ಕುಂತು ಪೂಜೆಯು ನಡೆಸ್ಯಾರ ॥ ॥ ೨ ॥

ಶರಣರ ವಸಗಳು ಮಡಿ ಮಾಡಿ ತರತಾರ
ಮರೆತರ ಭವಿಗಳ ನೆರಳರ ಬೀಳಲಿಲ್ಲ ॥ ॥ ೩ ॥

ಹೀಂಗೊಮ್ಮೆ ಮಾಚಯ್ಯ ಮಡಿವಸ್ತ ತರಮುಂದ
ಕೊಂಡೆಯರು ತಾ ಹೋಗಿ ಮುಟ್ಟ್ಯಾರ ವಸ್ತ್ರಗಳ ॥ ॥ ೪ ॥



ಮಡಿವಾಳ ಮಾಚಿದೇವರ ಹೊಂಡದ ಹೂಳೆತ್ತಿದ್ದಾಗ
ಇಂತಹ ಕೆತ್ತನೆ ಕಲ್ಲುಗಳ ಅಪಾರ ರಾಶಿಯೇ ಹೊರಬಂದಿದೆ



ಮಡಿವಾಳ ಮಾಚಿದೇವರ ಹೊಂಡದ ಮಧ್ಯದಲ್ಲಿದ್ದ ಹಳೆಯ ಗುಡಿಯ
ಗರ್ಭಗೃಹದಲ್ಲಿದ್ದ ಶಿವಲಿಂಗ ನಂದಿ, ಹಳೆಯ ಬಾವಿಕಟ್ಟೆಯ ಮೇಲೆ ಇಡಲಾಗಿದೆ

ಸಿಟ್ಟಿಲಿ ಮಾಚಯ್ಯ ಖಡ್ಗವ ಸೆಳೆದಾನ
ರುಂಡ ಮುಂಡ ಬೇರೆ ಮಾಡಿ ನೆಲಕ ಒಗಿತಾನ ॥ ॥ ೫ ॥

ಆ ಸುದ್ದಿಯು ತಿಳಿಯಲು ಬಿಜ್ಜಳ ಓಡಿ ಬಂದ
ಮಾಚಯ್ಯನಿಗೆ ಶಿಕ್ಷೆ ಕೊಡಬೇಕೆಂತಂದ ॥ ॥ ೬ ॥

ಬಸವಣ್ಣ ಬಂದಾರ ಬುದ್ಧಿಯ ಹೇಳ್ಯಾರ
ಶರಣರ ಜೊತೆಯಲ್ಲಿ ಸರಸವು ಯಾಕೆಂದಾರ ॥ ॥ ೭ ॥

ಬಿಜ್ಜಳ ರಾಜ ಹೋಗ್ಯಾನ ಆವಾಗ
ಮುಂಡಗಳು ಎದ್ದು ನಿಂತಾವ ಗಳಿಗ್ಯಾಗ ॥ ॥ ೮ ॥

ಮಾಚನ ಮಹಿಮೆಯು ಹರಿಯಲಿ ನಾಡಾಗ
ಮಡಿವಸ್ತ್ರದಾಂಗ ಮಡಿಯಾಗಲಿ ಜನುಮ ॥ ॥ ೯ ॥

– ಶ್ರೀಮತಿ ಕಾಡಾದಿ ಗೌರವ್ವ

***

# ೬. ಅಲ್ಲಮ ಪ್ರಭುಗಳ ಗದ್ದುಗೆಮಠ

ಬನವಾಸಿ ಕುಂತಳಕೆ ಮನೆಮಾತು ಅಲ್ಲಮನು
ಮನವೊಪ್ಪಿ ಲೋಕ ಕೈಮುಗಿದು । ಕೇಳುತಲಿ
ಜನಕೆ ಊದಿದನು ಶಿವಮಂತ್ರ

ಅಲ್ಲಮ ಪ್ರಭುಗಳ ಗದ್ದುಗೆಯನ್ನು ಗದ್ದುಗೆಮಠ ಅಥವಾ ಅಲ್ಲಮಪ್ರಭುಗಳ ಗವಿ ಎಂದೇ ಕರೆಯಲಾಗುತ್ತದೆ. ಕರಿಕಲ್ಲಿನಿಂದ ನಿರ್ಮಾಣವಾದ ಈ ಮಠ ತುಂಬ ದೊಡ್ಡದಾಗಿದೆ. ಉತ್ತರ ದಿಕ್ಕಿಗೆ ತೆರೆದುಕೊಂಡಿರುವ ದ್ವಾರಬಾಗಿಲ ದಾಟಿ ಒಳಗಡೆ ಹೋದರೆ, ಬಲಮಗ್ಗಲು ಮುಖ್ಯಗದ್ದುಗೆ ಇದೆ. ಅಲ್ಲಮಪ್ರಭುಗಳು ಇಲ್ಲಿ ಕುಳಿತು ಪೂಜೆ ಮಾಡಿಕೊಳ್ಳುತ್ತಿದ್ದರು ಎಂದು ಹೇಳಲಾಗುತ್ತದೆ. ಬಹುಶಃ ಕಲ್ಯಾಣದಲ್ಲಿದ್ದಾಗ ಪ್ರಭುಗಳು ವಾಸಮಾಡಿದ ಸ್ಥಳ ಇದಾಗಿರಬಹುದಾಗಿದೆ. ಅಲ್ಲಮಪ್ರಭುಗಳ ಜಾಗ್ರತಸ್ಥಾನ ಇದು ಎಂದು ಕೂಡ ಹೇಳುತ್ತಾರೆ.



ಅಲ್ಲಮ ಪ್ರಭುಗಳ ಗದ್ದುಗೆಮಠ

## ೭. ಹರಳಯ್ಯನವರ ಗವಿ

ಅಣ್ಣನ ಮಠದಾಗ ಆಳಮಟ ಮಲ್ಲೀಗಿ
ಶಿವಶಿವನೆಂಬೋ ಗಿಳಿಹಿಂಡು । ಕೊಯ್ದ ಹೂ
ಹರಳಯ್ಯನ ಕೆಂಜೆಡೆಗೆ ಹೊಸ ಹೂ

ಅಲ್ಲಮಪ್ರಭುಗಳ ಗದ್ದುಗೆಮಠದಿಂದ ಹಾಗೇ ತ್ರಿಪುರಾಂತ ಕೆರೆಯ



ಹರಳಯ್ಯನವರ ಗವಿ

ತೆಲಿಯ ಮ್ಯಾಲೆ ಪರಶಿವನಿಗೆ ಹೊತ್ತಿಕೊಂಡು ಮನೀಗ ಹೊಂಟಿದರಾ
ದುಷ್ಟ ಜೈನರು ರಕ್ತ ನೋಡಿ ಹಾಸ್ಯ ಮಾಡಿ ನಗತಿದರಾ
ದುಖಾಂಡ ಶರೀರ ಅಖಂಡ ಆಗಲೆಂದು ಪಾದೋದಕ ಹಾಕಿದರಾ
ಪ್ರತ್ಯಕ್ಷ ರೂಪ ಹೊಂದಿದರಾ ಭಕ್ತನ ಭಾವಕ ಒಲತಿದರಾ ॥ ೪ ॥

ದೇಶದೊಳಗೆ ಸಣ್ಣಳ್ಳಿ ಎನಿಸಿತರಿ ಕರ್ಲಿಗಿ ಊರ
ಭಕ್ತಿಮಾಡಿ ನಿಜ ಮುಕ್ತಿ ಬೇಡಿರೆಂದು ಹೇಳಿದ ಕವಿಗಾರ
ನಾಮಸ್ಮರಣೆ ಮಾಡವರೀಗೆ ಅದ ನಮದು ನಮಸ್ಕಾರ
ನರಜನ್ಮ ಉದ್ಧಾರ ಭಾವಿಕ ಭಕ್ತಿ ಪರೀಕ್ಷೆಗಾಗಿ ಬಂದಿದ ಶಂಕರ ॥೫॥

-ಶ್ರೀಮತಿ ವಿಮಲಬಾಯಿ ಕಾಶಪ್ಪ
- ಪ್ರಭು ಮೈಲಾರ ಹಾಗೂ ಶರಣಪ್ಪ ಗುರುಲಿಂಗಪ್ಪ.
- ಕವಿ : ಶರಣಪ್ಪ ಕರಹರಿ

***

# ೮. ಗಂಜಿಕೆರೆ-ದಾಸೋಹ ಕೇಂದ್ರ

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡಕಂಡಲ್ಲಿ ದಾಸೋಹ । ಕಾಯಕದ
ಕಂಡ ಜೀವನದ ಶಿವ ಮಾತು

ಬಸವಣ್ಣನವರ ಅರಿವಿನ ಮನೆಯ ಮುಂದೆ ಇರುವ ವಿಶಾಲವಾದ ತಗ್ಗು ಪ್ರದೇಶಕ್ಕೆ ಗಂಜಿಕೆರೆ ಎಂದು ಕರೆಯಲಾಗುತ್ತದೆ. ಬಸವಣ್ಣನವರ ಮಹಾಮನೆಗೆ ನಾಡಿನ, ದೇಶದ, ಹೊರದೇಶದ ನಾನಾ ಭಾಗಗಳಿಂದ ಜನಸಾಗರ ಹರಿದು ಬರುತ್ತಿತ್ತು. ಹರಿಹರ ಕವಿ ಹೇಳುವ ಹಾಗೆ 'ಚೋಳದೇಶದ ಮಹಾಗಣಗಳು, ಪಾಂಡ್ಯ ಮಹಾಗಣಕುಲ, ವಂಗ ಬಂಗಾಳ ಲಾಳದೇಶದ ಗಣ, ಕಳಿಂಗ, ಮಹಾರಾಷ್ಟ್ರದೇಶದ ಗಣ, ತುಳುವ, ಮಲೆಯಾಳ ದೇಶದ ಶರಣಗಣ, ತೆಲುಂಗಂ ತಿಗುಳ, ಬರ್ಬರ ದೇಶಗಳ ಮಹಾಶರಣರು, ಸಿಂಗಣದ್ವೀಪದ ಗಣ, ಕಾಶ್ಮೀರದೇಶದ ಶರಣ ಜಾತರು"(ಹರಿಹರನ ಬಸವರಾಜ ದೇವರ ರಗಳೆಯ ೫ ಹಾಗೂ ೯ನೇ ಸ್ಥಲ) ಮೇಲಿಂದಮೇಲೆ ಬರುತ್ತಿದ್ದರೆಂದು ದಾಖಲೆಗಳು ಸಿಗುತ್ತವೆ. ಇವರಲ್ಲದೆ ನಾಡಿನ ಬೇರೆಬೇರೆ ಭಾಗದಿಂದ ಕಾಯಕ ಜೀವಿಗಳು, ಸೃಜನಶೀಲರು, ಕ್ರಿಯಾಶೀಲರು ಬಸವಕಲ್ಯಾಣಕ್ಕೆ ಬರುತ್ತಿದ್ದರು. ಬಂದವರ ಸಂಖ್ಯೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ. ಬಂದವರಿಗೆ ಬಸವಣ್ಣನವರ ಮಹಾಮನೆಯಲ್ಲಿ ದಾಸೋಹ ವ್ಯವಸ್ಥೆ ಇತ್ತು. ಹೀಗಾಗಿ ನಿತ್ಯ ಇಷ್ಟು ಜನರಿಗೆ ತಯಾರಿಸಿದ ಅನ್ನವನ್ನು ಬಸಿದ ಗಂಜಿ ಹರಿದು ಬಂದು ಸೇರಿದ ಸ್ಥಳವನ್ನು ಗಂಜಿಕೆರೆ ಎಂದು ಜನ ಗುರುತಿಸುತ್ತಾರೆ. ಈ ಭೂಮಿ ಫಲವತ್ತಾಗಿದೆ ಎಂದೂ ಹೇಳುತ್ತಾರೆ.

ಈ ಪ್ರದೇಶ ಇಂದಿಗೂ ಜನರ ಮನಸ್ಸಿನಲ್ಲಿ 'ಮಹಾಮನೆ ಎದುರಿನ ಗಂಜಿಕೆರೆ' ಎಂದೆ ಉಳಿದುಬಂದಿದೆ. ಶರಣರಿಗೆ ನಡೆಯುವ ದಾಸೋಹದ ಮನೆಯ ಮುಂದಿನ ಭಾಗ ಇದಾಗಿರಬೇಕೆಂದು ಹೇಳಲಾಗುತ್ತದೆ. ಹೀಗಾಗಿಯೇ ಅಲ್ಲಿ ದೊರೆಯುವ ಒಂದು ಗವಿಗೆ ಅರಿವಿನ ಮನೆ ಎಂದು ಕರೆಯಲಾಗಿದೆ. ಶರಣರ ದಾಸೋಹಕ್ಕಾಗಿ ತಯಾರಿಸಿದ ಅನ್ನದ ಗಂಜಿ ಜಾನಿದಾಗ ಇಲ್ಲೆಲ್ಲ ಅದರ ಗಂಜಿ ನಿಲ್ಲುತ್ತಿತ್ತೆಂದೂ ಅದು ಹರಿದು ಮುಂದೆ ಭತ್ತದ ತೋಟಕ್ಕೆ ಹೋಗುತ್ತಿತ್ತೆಂದೂ ಈ ಕೆರೆಯ ಮುಂದಿರುವ ಹೊಲಗಳನ್ನು ಈಗಲೂ ತೋರಿಸುತ್ತಾರೆ.

ಬಾಬಾ ಸಾಹೇಬ ವಾರದ ಅವರು ಪೋಲಿಸ ಕಾರ್ಯಾಚರಣೆಯ ನಂತರ, ಅಂದರೆ ಸೆಪ್ಟೆಂಬರ್ ೧೯೪೮ರ ನಂತರ, ಬಸವಕಲ್ಯಾಣದ ಸಮಗ್ರ ಅಭಿವೃದ್ಧಿಗೆ ಚಾಲನೆ ನೀಡಿದ ಗಣ್ಯರು. ಬಸವಕಲ್ಯಾಣವನ್ನು ಶರಣರ ಸ್ಮರಣೆಯಾಗುವಂತೆ ಮಾಡಲು ತಮ್ಮ ಜೀವಮಾನವಿಡೀ ದುಡಿದವರು. ಅವರ ಸಮಾಧಿ ಅರಿವಿನ ಮನೆಯ ಮುಂಭಾಗದಲ್ಲಿ, ಗಂಜಿಕೆರೆಯಲ್ಲಿಯೇ ಇದೆ.

ದೊಡ್ಡ ಸಮೂಹಕ್ಕೆ ಪ್ರಸಾದ ವ್ಯವಸ್ಥೆ ಮಾಡುವ ಮನೆ ದಾಸೋಹ ಮನೆ, ಮಹಾಮನೆ. ಅದುವೇ ಬಸವಣ್ಣನವರು ಇರುವ ಮನೆ. ಮಹಾಮನೆಯ ಮುಂದಿನ ಸ್ಥಳದಲ್ಲಿ ಶರಣರಿಗೆ ಪ್ರಸಾದ ವಿತರಣೆಯ ಕೆಲಸ ನಡೆದುದರಿಂದ ಆಗಿನ 'ಗಂಜಿಕೇಂದ್ರ'ದ ಸ್ಥಳ 'ಗಂಜಿಕೆರೆ' ಆಗಿರಬಹುದೇ? ಇದೇ ಹೆಸರಿನ ಇನ್ನೊಂದು ಸ್ಥಳ ಬೆಟ್ಟಬಲಕುಂದ ಗುಡ್ಡದ ನಡುವಿನ ಒಂದು ವಿಶಾಲ ಸ್ಥಳಕ್ಕೂ ಗಂಜಿಕೆರೆ ಎಂದು ಕರೆಯಲಾಗುತ್ತದೆ. ಬಹುಶಃ ಅದೂ ದಾಸೋಹದ ಸ್ಥಳವೇ ಆಗಿರಬೇಕೆನಿಸುತ್ತದೆ.

***




ಗಂಜಿಕೆರೆ, ಅದರಲ್ಲಿ ಕಾಣುವುದು ಬಾಬಾಸಾಹೇಬ ವಾರದ ಅವರ ಸಮಾಧಿ

# ೯. ಬಸವಣ್ಣನವರ ಮಹಾಮನೆ
## (ಅರಿವಿನ ಮನೆ)

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ಬೀಜ
ಬಸವ ಕಾಯಕದ ಗುರುಬೀಜ। ಶಿವಮತಕೆ
ಬಸವ ಓಂಕಾರ ಶಿವನಾಮೊ

ಹರಳಯ್ಯನವರ ಗವಿ ನಂತರ ಇರುವುದು ವಿಸ್ತಾರವಾದ ಬಯಲು ಪ್ರದೇಶ. ಇದನ್ನು ಗಂಜಿಕೆರೆ ಎಂದು ಕರೆಯಲಾಗುತ್ತದೆ. ಗಂಜಿಕೆರೆಯ ಅಂಗಣದ ಒಂದು ದಕ್ಷಿಣದ ಅಂಚಿನಲ್ಲಿ ಹರಳಯ್ಯನವರ ಗವಿ ಇದ್ದರೆ, ಇನ್ನೊಂದು ಕಡೆ ಮೂರು ಗವಿಗಳ ಒಂದು ಸಂಕೀರ್ಣವೇ ಇದೆ. ಇದರಲ್ಲಿ ಒಂದನ್ನು ಬಸವಣ್ಣನವರ




ಬಸವಣ್ಣನವರ ಅರವಿನ ಮನೆ

ಮನವಿಚ್ಚದ ಮಾತ ಆಡ್ಯಾರೇ ದೇವ ।
ಆರ ಸಾವಿರ ಹುಂಡ ಆರ ತೊಲಿ ಬಂಗಾರ
ಅರಗಿಲ್ಲದ ಖಡ್ಯಾ ಅಳಿಯಾಗ ದೇವ ।
ಅರಗನಿಲ್ಲದ ಖಡ್ಯಾ ಅಳಿಯಾಗ ಇಡಬೇಕಂದು
ನಿಚ್ಚಯ ಮಾಡ್ಯಾರ ನಾಗಮ್ಮನ ದೇವ । ೨೦
ನಿಚ್ಚಯ ಮಾಡ್ಯಾರ ನಾಗಮ್ಮಗ ಸಾವ್ಕಾರ ಮಗ
ಉಂಗರಿಟ್ಟಾರ ನಾಗಮ್ಮಗ ದೇವ ।
ಮನಿಮಾರ ಸಾರಸ್ಯಾರಿ ಸುಣ್ಣ ಬಣ್ಣ ಹಚ್ಯಾರಿ
ಮನಿಯಾಗ ಲಗ್ಗಣ ತಯ್ಯಾರಾಗಿ ದೇವ ।
ಮನಿಯಾಗ ಲಗ್ಗಣ ತಯಾರಾಗಿ ಸಾವ್ಕಾರ ಮಗ
ಆಯ್ತಾರದಿನ ಕೂಕಮ ಹಚ್ಚಿ ದೇವ ।
ಆಯ್ತಾರದಿನ ಕೂಕಮ ಹಚ್ಚಿ ಸಾವ್ಕಾರ ಮಗ
ಸ್ವಾಮಾರದಿನ ಕರದೊಯ್ದ ದೇವ । ೩೦
ಸ್ವಾಮಾರ ದಿನ ಕರದೊಯ್ದು ನಾಗಮ್ಮನ
ಮಂಗಳಾರ ದಿನ ನಂದಿಮಕ ದೇವ ।
ಮಂಗಳಾರ ದಿನ ನಂದಿಮಕ ಸಾವ್ಕಾರ ಮಗ
ಬುಧವಾರ ದಿನ ಅಕ್ಕಿಕಾಳ ದೇವ ।
ಭುಧವಾರ ದಿನ ಅಕ್ಕಿಕಾಳ ನಾಗಮ್ಮನ
ಸೀರಿ ಮನಸೀಗಿ ಬರಲಿಲ್ಲ ದೇವ ।
ಬೀಗರು ಬೀಗರು ಹೆಂತ ಬುದ್ಧಿವಂತರು
ಕದನ ಹೂಡ್ಯಾರೆ ಕೆಡಗಾಲ ದೇವ ।
ಕದನ ಹೂಡ್ಯಾರೆ ಬೀಗರು ಅಕ್ಕನಾಗಮ್ಮ
ತಾಯಿ ಹೊಟ್ಟಿ ಸೀರಿ ಮನಸಿಗಿಲ್ಲ ದೇವ ।
ರೊಕ್ಕ ಕೊಟ್ಟೀದನಂತ ಸೊಕ್ಕಿ ಮಾತಾಡಲಿ ಬ್ಯಾಡ
ಹಿಂತವೇಸ ರೊಕ್ಕ ತರಲೆಂದ ದೇವ । ೪೦
ಹೆಣ್ಣ ಕೊಟ್ಟಿದನಂತ ಹಮ್ಮಿಲಿ ಮಾತಾಡಬ್ಯಾಡ
ಹಿಂತವೇಸ ಹೆಣ್ಣ ತರಲೆಂದ ದೇವ ।
ಹಿಂತವೇಸ ಹೆಣ್ಣ ತರಲೆಂದ ಸಾವ್ಕಾರ
ಇದ್ದಾಳು ಮಗಳು ಮನಿಯಾಗ ದೇವ ।
ಹತ್ತು ಮಂದಿ ದೈವ ನೆರದೆಲ್ಲ ಕುಂತಿರಿ ನೀವು
ಕಟ್ಟಿದ ಕರಿಮಣಿ ಕಡಿಯಿರಿ ದೇವ ।
ಕಟ್ಟಿದ ಕರಿಮಣಿ ಕಡಿಯರೆಂದರ ಸಾವ್ಕಾರ
ಹಚ್ಚಿದ ಅರಿಷಿಣ ತೊಳಿರೆಂದ ದೇವ
ಹಚ್ಚಿದ ಅರಿಷಿಣ ತೊಳಿರೆಂದ ಸಾವ್ಕಾರ

ಗಪ್ಪಂತೆ ಜನರು ಬಾಯಿ ಮುಚ್ಚಿ ದೇವ ।
ಇಷ್ಟು ವಿದ್ಯವ ಕಲಿಸಿ ಇಷ್ಟು ಬುದ್ಧಿಯ ಬಂತ
ಮಡದೆಂಬ ಶಬ್ದ ಮರಿ ಮಗನೆ ದೇವ
ಆರಸಾವಿರ ಕೊಟ್ಟು ಆರತೊಲಿ ಬಂಗಾರಿಟ್ಟು
ಪುರುಷೆಂಬ ಶಬ್ದ ಮರಿಮಗಳೆ ದೇವ ।
ಪುರುಷೆಂಬ ಶಬ್ದ ಮರಿ ಮಗಳೆ ನಾಗಮ್ಮನ
ತಮ್ಮ ತವರೀನ ಕರದೊಯ್ದು ದೇವ ।

ನಾಗಮ್ಮನ ಮನಿಯಾಗ ಏಳಮಂದಿ ಅತ್ತಿಗಿದೇರು
ಅತ್ತಿಗಿದೇರ ಕಾಟ ಹೆಚ್ಚನಾಗಿ ದೇವ ।
ಅತ್ತಿಗಿದೇರ ಕಾಟ ಹೆಚ್ಚನಾಗಿ ಅಕ್ಕನಾಗಮ್ಮ
ಚಿಂತಿ ಮಾಡ್ಯಾಳ ಮನದಾಗ ದೇವ ।
ಚಿಂತಿನೆ ಮಾಡ್ಯಾಳ ಮನದಾಗ ಅಕ್ಕನಾಗಮ್ಮ
ಅಳುತ ಮ್ಯಾಳಿಗಿ ಏರ್ಯಾಳ ದೇವ ।
ಅಳುತ ಮ್ಯಾಳಿಗಿ ಏರ್ಯಾಳ ಅಕ್ಕನಾಗಮ್ಮ ।
ನಮ್ಮ ಪುರುಷ ನಮಗ್ಯಾಂಗ ದೊರದಾನ ದೇವ ।
ಶೆಟ್ಟಿ ಸಾವ್ಕಾರ ಮಗ ಬಾವಿ ನೀರಿಗೆ ಬಂದು



ಅಕ್ಕನಾಗಮ್ಮನ ಗವಿಯ ಮುಖ್ಯಪ್ರವೇಶ ದ್ವಾರ

ಮಡದಳುವ ಶಬುದ ಕೇಳ್ಯಾರಲ್ಲ ದೇವ ।
ನನ್ನ ಮದವಿಯ ಆಗಿ ಹನ್ನೆರಡು ವರುಷನಾಯ್ತು
ಇಂದ್ಯಾಕ ಸತಿಯಳ ನನ್ನ ನೆನಪ ದೇವ ।
ಇಂದ್ಯಾಕ ಸತಿಯಳ ನನ್ನ ನೆನಪ ಕೇಳಿದರ
ಬಂದೋಗರಿ ನಮ್ಮ ಮನಿಗರ ದೇವ ।
ಬಂದಾನೆ ಹೋಗರೆಂತ ಮನಿಗಾರೆ ಹೇಳಿದಾಳೆ
ತಂದೀಗ ಕೇಳ ಮನಿಯಾಗ ದೇವ ।
ತಂದೀಗ ಕೇಳ ಮನಿಯಾಗ ಸವ್ಕಾರ ಮಗ
ಬರತೀನಂತವರು ಹೇಳಿದಾರ ದೇವ ।

ಪುರುಷಾಡೋ ನುಡಿಯವ ಕೇಳಿ ಮನಸಿಗಿ ಹರುಷವ ತಾಳಿ
ನಗುತ ಮ್ಯಾಳಿಗಿ ಇಳದಾಳ ದೇವ
ನಗುತಾನೆ ಮ್ಯಾಳಿಗಿ ಇಳದಾಳ ನಾಗಮ್ಮ
ಹೊರಗಿರ ತಂದೀನ ಕರದಾಳ ದೇವ ।
ತಾಯಿ ತಂದೀನ ಕರದು ಹೇಳುತಾಳಕ್ಕನಾಗಮ್ಮ
ಕದ್ದುಡಿ ತುಂಬಿ ಕುಡರೆಂದ ದೇವ
ಸೋಬಾನ ಕಾರಣ ಮಾಡರಿ ದೇವ ।
ಮಗಳಾಡ ನುಡಿಯವ ಕೇಳಿ ತಂದಿ ಗಾಬರ್ಯಾಗಿ
ಹಿಂತ ಮಾತ್ಯಾಕೆ ಎನ್ನ ಮಗಳೆ ದೇವ ।
ಹಿಂತ ಮತ್ಯಾಕೆ ಎನ್ನ ಮಗಳೆ ಅಕ್ಕನಾಗಮ್ಮ
ಅವಮಾನಾಯ್ತಲ್ಲೆ ಜನದಾಗೆ ದೇವ ।
ಕದ್ದನೆ ಉಡಿ ತುಂಬಿ ಕುಡರೆಂತ ಹೇಳಿದಾಳೆ
ಯಾಕಾಗಲಂತ ಹೇಳಿದಾರ ದೇವ ।
ಎರಡ ಬಾಗಿಲ ಮುಚ್ಚಿ ನಾಲ್ಕು ಕಿಡಕಿ ಮುಚ್ಚಿ
ಕದ್ದುಡಿ ತುಂಬಿ ಕೊಟ್ಟಿದಾರ ದೇವ ।
ಕದ್ದುಡಿ ತುಂಬಿ ಕೊಟ್ಟಿದಾರ ನಾಗಮ್ಮನ
ನಡುಮನಿ ಸೆಳಮಂಚ ಎಳದಾರ ದೇವ ।

ಮುಟ್ಟಾದ ಮೂರ ತಿಂಗಳಿಗಿ ಮಾರಿಲಿಟ್ಟಾವರಿ ಹಸರ
ಹೋಗ್ಯಾಳ ತಮ್ಮ ಮನಿಗರ ದೇವ ।
ತನ್ನನೆ ಮನಿಗ ಹೋಗ್ಯಾಳ ನಾಗಮ್ಮ
ಅತ್ತಿ ಪಾದಕ್ಕೆ ಶರಣಂದ ದೇವ ।
ಅತ್ತೀನೆ ಪಾದಕ ಶರಣಂದ ನಾಗಮ್ಮ
ಮಾವನ ಪಾದಕ ವಂದನೆ ದೇವ ।



ಅಕ್ಕನಾಗಮ್ಮನ ಗವಿಯ ಎದುರಿಗಿರುವ ಅಕ್ಕನಾಗಮ್ಮನ ಮೂರ್ತಿಶಿಲ್ಪ

ಮಾರಿ ಆಗ್ಯಾದ ಹಸರ ಯಾರಿಗಾಗಿದೆ ಬಸರ
ಖರೆ ಹೇಳಿ ಬಾರೆ ಮನಿಯಾಗ ದೇವ ।
ಯಾರ ಮಾಡಿದ ಬಸರ ಯಾರ ಹೆಸರ ಹೇಳತಿ
ಹೆಸರ್ಹೇಳಿ ದುಡ್ಡ ತಗಿನಡಿಯೇ ದೇವ ।
ಗಂಡ ಮಾಡಿದ ಬಸರ ನನಗ್ಯಾತರ ನಾಚಿಕಿ
ಹೆಸರ್ಹೇಳಿ ದುಡ್ಡ ತಗಿತೀನೆ ದೇವ ।
ಒಲಿಮ್ಯಾಲ ಹಂಚಿಟ್ಟು ಅದರಾಗ ಎಣ್ಣಿ ಹಾಕಿ
ಎಣ್ಣ್ಯಾನ ದುಡ್ಡ ತಗಿ ನಡಿಯ ದೇವ ।
ಗಂಡ ಮಾಡಿದ ಪಾಪ ಇಂದಿಗಿ ಹೊರಗಾಯ್ತು
ಇರಬಾರದು ನಾನು ಮರ್ತ್ಯದೊಳಗ ದೇವ ।
ಇರಬಾರದು ನಾನು ಮರ್ತ್ಯದೊಳಗ ಜನರೆ
ಗಂಡನ ಹೊರತ ಬೇರಿಲ್ಲ ದೇವ ।
ಗಂಡನ ಹೊರತ ಬೇರಿಲ್ಲ ಜನರೆಂದು
ಶಿವ ಶಿವ ಅಂದು ಕೈ ಹಾಕಿ ದೇವ ।
ಕೈಹಾಕಿ ದುಡ್ಡ ತಗುದಾಳ ಅಕ್ಕನಾಗಮ್ಮ
ಮುತ್ತೈದಿ ಬೆರಳ ಸುಡಲಿಲ್ಲ ದೇವ ।

ಬಸುರ್ಹೆಣತಿ ನಾಗಮ್ಮ ಉಸುರೆಂದೆನು ಜನದಾಗ
ಉಸುರೆಂದೆನು ಬಾಲಿ ಜನದಾಗ ದೇವ ।
ಉಸುರೆಂದೆನು ಬಾಲಿ ಜನದಾಗ ಅಕ್ಕನಾಗಮ್ಮ
ನಿಂದೆ ಆಡಿದವರ ಮನಿ ಸುಟ್ಟು ದೇವ ।
ನಿಂದೆನ ಆಡಿದವರ ಮನಿಸುಟ್ಟು ಅಕ್ಕನಾಗಮ್ಮ
ಹಿಂದೆ ಆಡಿದವರ ಮನಸುಟ್ಟು ದೇವ ।
ಕಟ್ಟಿ ಮ್ಯಾಲ ಕುಂತ ಸೆಟ್ಟೀನೆ ಸಾವ್ಕಾರ
ಎದ್ದು ಬಂದು ಸೊಸಿಯ ಕೈಯ ಮುಗದು ದೇವ ।
ಎದ್ದನೆ ಬಂದು ಸವ್ಕಾರ ಸೊಸಿಗೆ ಕೈಯ ಮುಗದು
ಶಲ್ಯಾ ಮರಿಮಾಡಿ ಕರದೊಯ್ದು ದೇವ ।
ಶಲ್ಯಾ ಮರಿಮಾಡಿ ಕರದೊಯ್ದು ಸಾವ್ಕಾರ
ತೂಗ ಮಂಚದಲಿ ಇಟ್ಟಾರೊ ದೇವ ।
ಒಳಗಿದ್ದ ಸವ್ಕಾರ ಮಗ ಎದ್ದು ಹೊರೆಯಾಕೆ ಬಂದು
ಮಡದೀಗಿ ನೋಡಿ ದುಃಖ ಮಾಡಿ ದೇವ ।
ಮಡದೀಗಿ ನೋಡಿ ದುಃಖ ಮಾಡಿ ಸಾವ್ಕಾರ ಮಗ
ಉಸರೆಂದೆನು ಬಾಲಿ ಪುರುಷಗ ದೇವ ।
ಉಸರೆಂದನು ಬಾಲಿ ಪುರುಷಗ ಸತಿಯಳ
ಕಳಕಳಂದೇನ ಜನರೀಗಿ ದೇವ ।
ಮಗ ಅಳುವ ಶಬ್ದವ ಕೇಳಿ ತಂದಿಯು ಒಳಿಯಕೆ ಬಂದು
ದುಃಖ ಯಾತಕ್ಕೆ ಎನ್ನ ಬಾಲ ದೇವ ।
ದುಃಖ ಯಾತಕ್ಕೆ ಎನ್ನ ಬಾಲ ನಿಮ್ಮಗ
ಕಂದನ ಕಾಣೋ ದೊರಿಮಗನೆ ದೇವ ।

– ಶ್ರೀಮತಿ ಸರೂಬಾಯಿ ಶಾಬಾದಿ

***

**ಈ ಕಥನಕಾವ್ಯ ಅಪರೂಪದ ಸಂಗತಿಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆ :**

೧. ಅಕ್ಕನಾಗಮ್ಮ ಬಸವಣ್ಣನವರ ತಂಗಿ.

೨. ಆಕೆಯದು ಬಾಲ್ಯವಿವಾಹ. ಮದುವೆಯಲ್ಲಿ ಬೀಗರಿಗೆ ಜಗಳ ಬಂದಿತು.

೩. ಮದುವೆಯಲ್ಲಿ ಹುಟ್ಟಿಕೊಂಡ ವೈಮನಸ್ಸಿನಿಂದ, ಬೀಗರ ಸಂಬಂಧಗಳಲ್ಲಿ ಸರಿ ಇರಲಿಲ್ಲ. ಹೀಗಾಗಿ ಮಯಸ್ಸಿಗೆ ಬಂದ ಅಳಿಯ ಮನೆಗೆ ಬಂದಾಗ, ಕದ್ದುಡಿ ತುಂಬಿಕೊಡುತ್ತಾರೆ. ಕದ್ದುಡಿ ತುಂಬಿಕೊಡುವುದು, ಕಳ್ಳಕುಬಸ ಮಾಡುವುದು ನಮ್ಮಲ್ಲಿ ಇರುವ ಸಂಪ್ರದಾಯಗಳಾಗಿವೆ.

೫. ಅಕ್ಕನಾಗಮ್ಮ ಹೀಗೆ ಕದ್ದುಡಿ ತುಂಬಿ ಕೊಟ್ಟುದರಿಂದ ಆಕೆ ಬಸುರೆಯ ಸಮಸ್ಯೆ ಸಹಜವಾಗಿ ಪ್ರಾರಂಭದಲ್ಲಿ ಸಾಮಾಜಿಕರಿಗೆ ಪ್ರಶ್ನೆಯಾಗಿ ಕಾಡಿದೆ. ಆ ವಿಷಯ ಮೌಖಿಕ ಪರಂಪರೆಯಲ್ಲಿ ಜೀವಂತವಾಗಿ ಉಳಿದುಕೊಂಡು ಬಂದಿದೆ.

೬. ನಂತರ ನಿಜಸಂಗತಿ ತಿಳಿದ ಶಿವದೇವನ ತಂದೆ ತಾಯಿಗಳು ಅಕ್ಕನಾಗಮ್ಮನನ್ನು ಕ್ಷಮೆಕೋರಿ, ಸ್ವೀಕರಿಸಿದ್ದಾರೆ.

೭. ಬಹುಶಃ ಈ ಘಟನೆಯಿಂದಾಗಿ ನೊಂದುಕೊಂಡ ಅಕ್ಕನಾಗಮ್ಮನನ್ನು ಬಸವಣ್ಣನವರು ತಮ್ಮ ಜೊತೆಗೆ ಕೂಡಲಸಂಗಮಕ್ಕೆ ಕರೆದುಕೊಂಡು ಹೋಗಿರುವ ಸಾಧ್ಯತೆಯೇ ಹೆಚ್ಚು.

೮. ಚೆನ್ನಬಸವಣ್ಣನವರ ಜನನ ಕೂಡಲಸಂಗಮದಲ್ಲಿ ಆಗಿರುವುದು ಸಹಜ. ಹೀಗಾಗಿಯೇ ಕಲ್ಯಾಣಕ್ಕೆ ಪ್ರವೇಶ ಪಡೆದಾಗ, ಅಲ್ಲಿ ಉಂಟಾದ ಧಾರ್ಮಿಕ ಪರಿಸರದಲ್ಲಿ ಜ್ಞಾನಿಯಾದ ಚೆನ್ನಬಸವಣ್ಣನವರು ಶರಣರನ್ನು ಸಂಘಟಿಸುವ, ಧಾರ್ಮಿಕವಾಗಿ ಅವರನ್ನು ಒಂದು ಗೂಡಿಸುವ, ಅನುಭವ ಮಂಟಪ ಸಂಘಟನೆಯ ಜವಾಬ್ದಾರಿಯನ್ನು ನಿಭಾಯಿಸುವ ಮಹತ್ವದ ಕೆಲಸಗಳನ್ನು ಮಾಡಲು ಸಾಧ್ಯವಾಗಿದೆ.

***



ಅಕ್ಕನಾಗಮ್ಮನ ಗವಿಯ ಇನ್ನೊಂದು ಮೂಲದ್ವಾರ

## ೧೧. ತ್ರಿಪುರಾಂತಕೇಶ್ವರ ಗುಡಿ

ತ್ರಿಪುರಾಂತ ಶಿವಲಿಂಗ ಶಿವಭಕ್ತ ಬೊಮ್ಮನಿಗೆ
ಅವಸರದಿ ಕುರಿಯ ಸಲುಹೆಂದು । ನುಡಿಯುವದಕೆ
ಹವಣಿಸುತ ಹಿಡಿವ ವಿಟಗೆಂದ

ಅಕ್ಕನಾಗಮ್ಮನ ಗವಿಯ ಬೆನ್ನಿಗೆ ಹತ್ತಿಕೊಂಡು, ತ್ರಿಪುರಾಂತ ಕೆರೆಯ ದಂಡೆಯ ಮೇಲೆ ತ್ರಿಪುರಾಂತಕೇಶ್ವರನ ಗುಡಿ ಇದೆ. ಈ ಗುಡಿಯ ಕೆಳಗಡೆ, ಕೆರೆಯ ಮಗ್ಗುಲು ಒಂದು ಗವಿ ಇರುವುದನ್ನು ತೋರಿಸುತ್ತಾರೆ. ಗುಡಿಯ ಹೊರಮಗ್ಗಲು, ಕೆರೆಯೆಡೆಗೆ ಇಳಿದು ಬಂದು ನೋಡಿದರೆ ಅಲ್ಲಿ ಗವಿ ಇರುವುದು ಸ್ಪಷ್ಟವಾಗುತ್ತದೆ. ಕಿನ್ನರಯ್ಯನು




ತ್ರಿಪುರಾಂತಕೇಶ್ವರ ಗುಡಿಯ ಹೊರಭಾಗದಲ್ಲಿರುವ ಗುಡಿಯ ಕೆಳಗಿನ ಗವಿಯ ದ್ವಾರ
ಕಿನ್ನರಿ ಬ್ರಹ್ಮಯ್ಯ ವಾಸವಾಗಿರಬಹುದಾದ ಗವಿ

ಕುರಿಗೆ ರಕ್ಷಿಸಿದ ಸ್ಥಳ ತ್ರಿಪುರಾಂತಕೇಶ್ವರ ಗುಡಿ. ಹೀಗಾಗಿ ಕಿನ್ನರಯ್ಯನ ಗವಿ ಅದಾಗಿರುವ ಸಾಧ್ಯತೆ ಇದೆ. ಬಹುಶಃ ಈ ಘಟನೆಯ ನಂತರವೇ ಕಿನ್ನರಯ್ಯನು ಹಳ್ಳಿಖೇಡ (ಕೆ) ಗ್ರಾಮದ ಈಗಿನ ಸ್ಥಳಕ್ಕೆ ಹೋಗಿರಬೇಕೆನಿಸುತ್ತದೆ.

ಜೀರ್ಣಾವಸ್ಥೆಯಲ್ಲಿರುವ ಈ ಮಂದಿರವನ್ನು, ಇದರ ಮುಂದಿರುವ ವಿಶಾಲವಾದ ಸ್ಥಳವನ್ನು ಬಸವಕಲ್ಯಾಣ ಪ್ರಾಧಿಕಾರದವರು ತುಂಬಾ ಸುಂದರವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಈಗಂತೂ ತ್ರಿಪುರಾಂತಕೇಶ್ವರ ದೇವಾಲಯದ ಹೊರಗಿನ ಮತ್ತು ಒಳಗಿನ ಆವರಣ ತುಂಬಾ ಸುಂದರವಾಗಿ ತೋರುತ್ತದೆ.

ಈ ಸ್ಥಳದ ಇನ್ನೊಂದು ವಿಶೇಷವೆಂದರೆ, ತ್ರಿಪುರಾಂತಕೇಶ್ವರನ ಗುಡಿ ಮತ್ತು ಅಕ್ಕನಾಗಮ್ಮನ ಗವಿಯ ನಡುವಿನಲ್ಲಿರುವ ಎತ್ತರದ ಸ್ಥಳದಲ್ಲಿಯೇ ಬಸವಣ್ಣನವರ ಮಹಾಮನೆ ಇರಬೇಕೆಂದು ಜನ ಭಾವಿಸುವುದು ನಿಜವಿರಬೇಕೆನಿಸುತ್ತದೆ. ಈ ದಿಬ್ಬದ ಮೇಲೆ ನಿಂತು ಸುತ್ತೆಲ್ಲ ನೋಡಿದರೆ ತ್ರಿಪುರಾಂತ ಕೆರೆ, ಮತ್ತು ಅದರ ಸುತ್ತಮುತ್ತಲಿರುವ ಎಲ್ಲ ಸ್ಮಾರಕಗಳು ಸಹಜವಾಗಿ ತೋರುತ್ತವೆ. ಮಡಿವಾಳ ಮಾಚಯ್ಯನ ಹೊಂಡ ಕೂಡ ಇಲ್ಲಿಂದ ನೇರವಾಗಿ ಪಶ್ಚಿಮ ದಿಕ್ಕಿನಲ್ಲಿ ಇರುವುದು ಸ್ಪಷ್ಟವಾಗಿ ಕಾಣುತ್ತದೆ.

***



ತ್ರಿಪುರಾಂತಕೇಶ್ವರ ಗುಡಿ



ತ್ರಿಪುರಾಂತಕೇಶ್ವರ ಗುಡಿಯ ಹೊರಭಾಗ-ತ್ರಿಪುರಾಂತ ಕೆರೆ

## ಬ. ದಕ್ಷಿಣ ದಿಕ್ಕು :

### ತ್ರಿಪುರಾಂತ ಕೆರೆಯ ಹರಿಯಗುಂಟ ಮತ್ತು ಬಂದವರ ಓಣಿ ಪರಿಸರದಲ್ಲಿರುವ ಶರಣಸ್ಮಾರಕಗಳು

ತ್ರಿಪುರಾಂತ ಕೆರೆಯಿಂದ ಹರಿದುಬರುವ ನೀರಿನ ಹರಿಯಗುಂಟ ಬಲಮಗ್ಗಲು ದಂಡೆಯ ಮೇಲೆ ಪೂರ್ವಕ್ಕೆ ಮುಖಮಾಡಿ ಶರಣರ ಗವಿಗಳು ಕಾಣಸಿಗುತ್ತವೆ. ಇಲ್ಲೆಲ್ಲ ಶರಣರು ವಾಸವಾಗಿರುವುದು ಸಹಜವಾಗಿದೆ. ನುಲಿಯ ಚಂದಯ್ಯನ ಗವಿಯನ್ನು ದಾಟಿಕೊಂಡು ನೀರಿನ ಹರಿಯಗುಂಟ ಹೊರಟರೆ ಅಂಬಿಗರ ಚೌಡಯ್ಯನ ಗವಿಯೆಂದು ಗುರುತಿಸುವ ಗವಿ ಕಾಣಿಸುತ್ತದೆ. ಅಭಿವೃದ್ಧಿ ಪ್ರಾಧಿಕಾರದವರು ಸುತ್ತಮುತ್ತಲಿನ ಪ್ರದೇಶ ಅಗೆಯುವ ಕಾಲದಲ್ಲಿ ಅಲ್ಲಿ ಮತ್ತೊಂದು ಗವಿ ಕಾಣಿಸಿಕೊಂಡಿದೆ. ಇದನ್ನು ಗಮನಿಸಿದರೆ, ಈ ನೀರಿನ ಹರಿಯಗುಂಟ ಶರಣರ ವಾಸಸ್ಥಾನಗಳಿರುವ ಸಾಧ್ಯತೆ ಹೆಚ್ಚು.



ನುಲಿಯ ಚಂದಯ್ಯನವರ ಗವಿಗೆ ಇಳಿದುಬರುವ ಮೆಟ್ಟಲುಗಳು

# ೧. ನುಲಿಯ ಚಂದಯ್ಯನವರ ಗವಿ

ಅಕ್ಕನಾಗಮ್ಮನ ಗವಿಯ ನಂತರ ತ್ರಿಪುರಾಂತಕೇಶ್ವರ ಗುಡಿ ದಾಟಿ, ಹಾಗೆಯೇ ತ್ರಿಪುರಾಂತ ಕೆರೆಯಗುಂಟ ತ್ರಿಪುರಾಂತ ಊರು ದಾಟುವಾಗ ಬಲಮಗ್ಗಲು ಹತ್ತುವುದು ನುಲಿಯ ಚಂದಯ್ಯನವರ ಗವಿ. ಇವರ ಹುಟ್ಟೂರು ಬಿಜಾಪೂರ ಜಿಲ್ಲೆಯ ಶಿವಣಗಿ. ಅಲ್ಲೂ ಇವರಿಗೆ ಸಂಬಂಧಿಸಿದ ಸ್ಮಾರಕ ಇದೆ. ನುಲಿಯ ಚಂದಯ್ಯನವರ ಇನ್ನೊಂದು ಸ್ಮಾರಕ ಗಡವಂತಿಯಲ್ಲೂ ಇದೆ. ಗಡವಂತಿಯ ಊರ ಪ್ರಾರಂಭದಲ್ಲಿ ನುಲಿಯ ಚಂದಯ್ಯನವರ ಗವಿ ಇದ್ದರೆ, ಊರು ದಾಟಿ ಮುಗ್ಧಸಂಗಯ್ಯನವರ ಗವಿ ಇರುವುದು ವಿಶೇಷ.

ತ್ರಿಪುರಾಂತ ಕೆರೆಯ ದಂಡೆಯ ಮೇಲಿರುವ ನುಲಿಯ ಚಂದಯ್ಯನ ಗವಿಯಲ್ಲಿ ಚನ್ನಮಲ್ಲಿಕಾರ್ಜುನ ಎಂದು ಹೇಳುವ ಲಿಂಗವಿದೆ. ಇದು ಮೂಲದಲ್ಲಿ ಸಣ್ಣ ಗವಿ. ತ್ರಿಪುರಾಂತ ಕೆರೆಯೆಡೆಗೆ ಮುಖಮಾಡಿರುವ ಈ ಗವಿಯ ಅಂಗಳದಲ್ಲಿ ಒಂದು



ನುಲಿಯ ಚಂದಯ್ಯನವರ ಗವಿ ಜೀರ್ಣೋದ್ಧಾರ

ಬಾವಿ ಇದೆ. ಅದರ ನೀರನ್ನು ಚಂದಯ್ಯನವರು ಪೂಜೆಗಾಗಿ, ಕುಡಿಯಲು ಬಳಸುತ್ತಿದ್ದರೆಂದು ಹೇಳಲಾಗುತ್ತದೆ. ಗವಿಯ ಪಕ್ಕಕ್ಕೆ ಇನ್ನೊಂದು ದೊಡ್ಡ ಬಾವಿ ಇದ್ದು, ಅದಕ್ಕೆ ಚಂದಯ್ಯನ ಬಾವಿ ಎಂದು ಕರೆಯಲಾಗುತ್ತದೆ. ಚಂದಯ್ಯನವರು ನುಲಿಯನ್ನು ತಯಾರಿಸಲು ಈ ಬಾವಿಯ ನೀರನ್ನೇ ಬಳಸುತ್ತಿದ್ದರು ಎನ್ನುತ್ತಾರೆ.

ನುಲಿಯ ಚಂದಯ್ಯನನ್ನು ಸ್ಥಳೀಯರು 'ನುಲ್ಕಿಯ ಚಂದಯ್ಯ' ಎಂತಲೇ ಕರೆಯುತ್ತಾರೆ. ನುಲಿಯ ಚಂದಯ್ಯ ಎನ್ನುವುದು ಬರಹಮೂಲದ ಮಾಹಿತಿಗಳಲ್ಲಿ ಮಾತ್ರ ದೊರೆಯುತ್ತದೆ. ನುಲಿಯ ಚಂದಯ್ಯ ಒಬ್ಬ ಗುಪ್ತಭಕ್ತ. ಇವನ ಬಕ್ತಿಯನ್ನು ಬಯಲು ಮಾಡಲು ಚನ್ನಮಲ್ಲಿಕಾರ್ಜುನ ಬಂದು, ತನ್ನ ಹೆಂಡತಿಗೆ ಗೋವಿನ ರಕ್ತಬೇಕು ಎಂದು ಕೇಳಿದನು. ಆಗ ನುಲಿಯ ಚಂದಯ್ಯನವರು ಆಕಳ ರಕ್ತ ಬೇಡ ಬದಲಾಗಿ ನನ್ನ ರಕ್ತವನ್ನೇ ಕೊಡುವೆ ಎಂದು ಹೇಳುತ್ತಾನೆ. ಆಗ ಮಲ್ಲಿಕಾರ್ಜುನನು ಚಂದಯ್ಯನವರ ಪ್ರಾಣಿದಯೆಯನ್ನು ಕಂಡು ಒಲಿದು, ಪ್ರತ್ಯಕ್ಷನಾಗುತ್ತಾನೆ ಎಂಬ ಕಥೆ ಇದೆ. ಇದನ್ನು ಸ್ಥಳೀಯರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.

ನುಲಿಯ ಚಂದಯ್ಯನಿಗೆ ಸಂಬಂಧಿಸಿದಂತೆ ಇನ್ನೊಂದು ಕಥೆ ಉಳಿದುಕೊಂಡು ಬಂದಿದೆ. ಆ ಸಂಗತಿಯನ್ನು ಮುಖ್ಯವಾಗಿಟ್ಟುಕೊಂಡು ಶೂನ್ಯಸಂಪಾದನಾಕಾರರು ಒಂದು ಪ್ರಸಂಗವನ್ನು ವಚನಗಳನ್ನಾಧರಿಸಿಯೇ ರೂಪಿಸಿಕೊಟ್ಟದ್ದನ್ನು ಕಾಣುತ್ತೇವೆ. ಕೆರೆಯಲ್ಲಿ ನುಲಿಯನ್ನು ಹದಗೊಳಿಸುವ ಸಂದರ್ಭದಲ್ಲಿ ಲಿಂಗಜಾರಿ ನೀರಿಗೆ ಬೀಳುತ್ತದೆ.



ನುಲಿಯ ಚಂದಯ್ಯನವರ ಗವಿಯ ಗರ್ಭಗೃಹದ ನೋಟ

ಆಗ ಲಿಂಗಕ್ಕೆ ಸವಾಲನ್ನು ಹಾಕಿ, ಅದುವೆ ಬೆನ್ನುಹತ್ತಿ ಬರುವಂತೆ ಮಾಡುತ್ತಾನೆ. ಲಿಂಗವೇ ಭಕ್ತನನ್ನು ಪ್ರಾರ್ಥಿಸಿಕೊಂಡು, ಭಕ್ತನ ಮನೆಯಲ್ಲಿ ಕಾಯಕವನ್ನು ಮಾಡಿಕೊಂಡಿರಬೇಕಾಗುತ್ತದೆ. ಭಕ್ತನಿಗೆ ಸಹಾಯ ಮಾಡುವ ಉದಾರತೆಯಿಂದ ಹೆಚ್ಚಿನ ಧನವನ್ನು ಲಿಂಗವು ತಂದರೆ ಅದನ್ನೂ ನಿರಾಕರಿಸಿ ಪ್ರಾಮಾಣಿಕತೆ ಉಳಿಸಿಕೊಂಡವನು ಶರಣ ನುಲಿಯ ಚಂದಯ್ಯ. ಈ ವಿಷಯ ಇಂದಿಗೂ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬಂದಿದೆ.

ಈ ಪ್ರಸಂಗ ಶಿವಣಗಿಯಲ್ಲಿ ನಡೆದಿದೆ ಎಂದೂ ನಂತರ ಮಡಿವಾಳ ಮಾಚಯ್ಯ ನುಲಿಯ ಚಂದಯ್ಯ ಇಬ್ಬರೂ ಕೂಡಿಕೊಂಡು ಕಲ್ಯಾಣಕ್ಕೆ ಬಂದರೆಂದೂ ಶಿವಣಗಿ ಗ್ರಾಮದ ಜನ ಹೇಳುತ್ತಾರೆ.

ಪ್ರತಿವರ್ಷ ಬಸವಕಲ್ಯಾಣದಲ್ಲಿ ಬಸವಜಯಂತಿಯಂದು ಬಸವಣ್ಣನವರ ಜಾತ್ರೆ ಆಗುತ್ತದೆ. ಬಸವಣ್ಣನವರ ಜಾತ್ರೆಯ ಮರುದಿನವೇ ನುಲಿಯ ಚಂದಯ್ಯನವರ ಜಾತ್ರೆ ಆಗುತ್ತದೆ. ಮೆರವಣಿಗೆಯಲ್ಲಿ ನುಲಿಯ ಚಂದಯ್ಯನವರ ಪಲ್ಲಕ್ಕಿ ಮುಂದೆ ಇರುತ್ತದೆ, ಬಸವಣ್ಣನವರ ಪಲ್ಲಕ್ಕಿ ಹಿಂದೆ ಇರುತ್ತದೆ. ಎರಡೂ ಪಲ್ಲಕ್ಕಿಗಳು ಕೋಟೆಗೆ ಹೋಗಿ ಬರುತ್ತವೆ. ಪಲ್ಲಕ್ಕಿ ಹೊರುವ ಚಾಜ ಅದೇ  ಗವಿಯವರಿಗೆ ಸಂಬಂಧಿಸಿರುತ್ತದೆ.

ನುಲಿಯ ಚಂದಯ್ಯನವರ ಗವಿಯನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದಿಂದ ಬಹು ಅದ್ಭುತವಾದ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಈಗ ತುಂಬಾ ವಿಸ್ತಾರವಾದ ಅಂಗಣ, ಸಂಪೂರ್ಣ ದಿಬ್ಬವನ್ನು ಬಳಸಿಕೊಂಡು ಮೆಟ್ಟಲುಗಳನ್ನು ನಿರ್ಮಿಸಿದ್ದಾರೆ. ಸುಂದರವಾದ ಹೂದೋಟವನ್ನು ಬೆಳೆಸುತ್ತಿದ್ದಾರೆ. ತಿಪರಂತ ಊರಿಗೆ ಹತ್ತಿಕೊಂಡಿರುವ, ತ್ರಿಪುರಾಂತ ಕೆರೆಯ ಮೇಲಿರುವ ಸ್ಮಾರಕಗಳಲ್ಲಿ ಇದು ಅಪೂರ್ವವೆನ್ನುವ ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತಿದೆ.

ವಚನಗಳು : ೪೮
ವಚನಾಂಕಿತ : ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗ
ನೋಡಿ : ಗಡವಂತಿ – ನುಲಿಯಚಂದಯ್ಯನ ಗವಿ

***

## ೨ . ಅಂಬಿಗರ ಚೌಡಯ್ಯನವರ ಗವಿ

ತ್ರಿಪುರಾಂತ ಕೆರೆಯ ನೀರು ಹರಿದುಬರುವ ಹಳ್ಳದ ಗುಂಟ ಪ್ರಾರಂಭದಲ್ಲಿರುವುದೇ ನುಲಿಯ ಚಂದಯ್ಯನ ಗವಿ. ಅಲ್ಲಿಂದ ಕೆಳಗಡೆ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳನ್ನು ಸೀಳಿಕೊಂಡು ದಕ್ಷಿಣಕ್ಕೆ ನೀರು ಹರಿಯುತ್ತದೆ. ಈ ನೀರಿನ ಹಳ್ಳದ ಗುಂಟ, ಬಲಮಗ್ಗಲು ಅಂದರೆ ಪಶ್ಚಿಮ ದಿಕ್ಕಿಗೆ, ಪೂರ್ವಕ್ಕೆ ಮುಖಮಾಡಿಕೊಂಡು ಹಲವಾರು ಗವಿಗಳು ಕಾಣಸಿಗುತ್ತವೆ. ಇಲ್ಲೆಲ್ಲ ಶರಣರು ವಾಸವಾಗಿರುವುದು ಸಹಜವಾಗಿ ಗಮನಕ್ಕೆ ಬರುತ್ತದೆ. ನುಲಿಯ ಚಂದಯ್ಯನ ಗವಿಯಿಂದ ಹೊರಡುವ ಈ ನೀರಿನ ಹರಿಗುಂಟ ಹೊರಟರೆ ಮೊದಲಿಗೆ ನಮಗೆ ದೊರೆಯುವುದು ಅಂಬಿಗರ ಚೌಡಯ್ಯನದೆಂದು ಗುರುತಿಸಿದ ಒಂದು ದೊಡ್ಡ ಗವಿ. ಮಡಿವಾಳ ಮಾಚಿದೇವನಲ್ಲಿಗೆ ಬರುವ ಶರಣರನ್ನು ನಾವೆಯ ಮೂಲಕ ಅಂಬಿಗರ



ಅಂಬಿಗರ ಚೌಡಯ್ಯನವರ ಗವಿಯ ಜೀರ್ಣೋದ್ಧಾರ



ಚಿಕ್ಕಮಠದ ಅಂಗಳದಲ್ಲಿರುವ ಸಂಗಯ್ಯನ ಸಮಾಧಿಸ್ಥಳ



ಚಿಕ್ಕಮಠದ ಅಂಗಳದಲ್ಲಿರುವ ಸಂಗಯ್ಯನ ಸಮಾಧಿ ಒಳಚಿತ್ರ



ಚಿಕ್ಕಮಠದಲ್ಲಿರುವ ಸಂಗಯ್ಯನವರು ಬಳಸಿದ ಬೆತ್ತ
ಸಮಾಧಿ ಅಗೆದಾಗ ದೊರೆತ ವಿಭೂತಿ ಹುಡಿ

ಆಗುತ್ತವೆಂಬ ನಂಬುಗೆ ಇವತ್ತಿಗೂ ನಾರಾಯಣಪುರದ ಜನರಲ್ಲಿ ಉಳಿದುಕೊಂಡು ಬಂದಿದೆ.

ಮಾಹಿತಿ : ಸಿದ್ರಾಮಯ್ಯ ಚಿಕ್ಕಮಠ
ನೋಡಿ : ಶಿವಪುರ : ಮುಗ್ಧಸಂಗಯ್ಯನವರ ಹುಟ್ಟೂರು

***

## ನಾರಾಯಣಪುರ :

### ೨. ಸಕಲೇಶ ಮಾದರಸನ ಸಮಾಧಿ

ನಾರಾಯಣಪುರದ ವಿಸ್ತಾರವಾದ ಕೆರೆಯ ದಂಡೆಯ ಮೇಲೆ ಊರಿಗೆ ಹತ್ತಿಕೊಂಡಂತೆ ಸಕಲೇಶ ಮಾದರಸನ ಗುಡಿ ಇದೆ. ಎದುರಿಗೆ ದೀಪಸ್ತಂಭವಿದೆ. ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ತೃಟಿತ ಕಂಬಗಳು, ಶಿಲ್ಪಗಳು ಅಲ್ಲಲ್ಲಿ ಇರುವುದು, ಅರ್ಧಮರ್ಧ ಹೂತಿರುವುದು ಕಾಣುತ್ತದೆ. ಇಲ್ಲಿಯ ದೀಪಸ್ತಂಭದ ಮೇಲೆ ದೀಪ ಹಚ್ಚಿದರೆ ಅದು ಅಮೃತಕುಂಡದವರೆಗೂ ಕಾಣಿಸುತ್ತಿತ್ತು ಎಂಬುದನ್ನು ಜನ ನೆನಪಿಸಿಕೊಳ್ಳುತ್ತಾರೆ. ಉಮರ್ಗಾದ ಮಹಾದೇವನ ಗುಡಿಯ ಮುಂದೆ ಇಂತಹದೇ ಒಂದು ದೀಪಸ್ತಂಭ ಇದ್ದು, ಅದು ಈ ದೀಪಸ್ತಂಭದ ನೇರ ಸಾಲಿಗೆ ಇತ್ತೆಂದು, ಈಗ ಅದೆಲ್ಲ ಹಾಳಾಗಿ ಹೋಗಿದೆ ಎಂದೂ ಹೇಳಲಾಗುತ್ತದೆ. ಮಾದರಸನ ಗುಡಿಯನ್ನು ಈಗ 'ಸಕಸಪೀರ' ಎಂಬ ಹೆಸರಿನಿಂದ ಕರೆಯುತ್ತಿದ್ದಾರೆ. ಹಿಂದೂ ಮಾದರಿಯ ಈ ಕಟ್ಟಡ ಪರಿವರ್ತನೆ ಹೊಂದಿ ಮಸೀದೆ ಆಗಿದೆ. ಒಳಗಡೆ ಮಜೇರಿಗಳ ಆಕಾರಗಳನ್ನು ನಿರ್ಮಿಸಿ, ಹಸಿರು ಗಲ್ಲೀಪದಿಂದ ಹೊದಿಸಿದ್ದಾರೆ.



ಕೆರೆಯ ದಿನ್ನೆಯ ಮೇಲಿರುವ ಸಕಲೇಶ ಮಾದರಸನ ಸಮಾಧಿ



ಸಕಲೇಶ ಮಾದರಸನ ಸಮಾಧಿ–ಸಮೀಪದ ನೋಟ

ನಾರಾಯಣಪುರದಲ್ಲಿರುವ ಇಂತಹ ಇನ್ನೂ ಕೆಲವು ಶರಣರ ಸ್ಮಾರಕಗಳು ಹೀಗೆಯೇ ಪರಿವರ್ತನೆಯಾಗಿರುವುದು ಕಂಡುಬರುತ್ತದೆ. ಆದರೆ ಇಲ್ಲಿಯ ಹಿಂದೂ ಮುಸ್ಲಿಮ ಬಾಂಧವರ ಜಾತ್ಯಾತೀತಭಾವನೆಗಳನ್ನು ನಾವು ಅವಶ್ಯವಾಗಿ ಗಮನಿಸಬೇಕು. ಸಕಲೇಶ ಮಾದರಸನ ಸ್ಮಾರಕದಲ್ಲಿ ಲಿಂಗವಂತರು ಆಷಾಢಮಾಸದಲ್ಲಿ ಖಾಂಡ ಹೆಸರಿನಲ್ಲಿ ಅದ್ದೂರಿಯಾಗಿ ಒಂದು ಉತ್ಸವವನ್ನು ಮಾಡುತ್ತಾರೆ. ಇದೇ ಮಂದಿರದಲ್ಲಿ ಮುಸ್ಲೀಮರು 'ಸಕಸಪೀರ'ನ ಹೆಸರಿನಲ್ಲಿ ರಂಜಾನ ತಿಂಗಳಲ್ಲಿ ಉತ್ಸವ ಮಾಡುತ್ತಾರೆ. ಮುಸ್ಲೀಮರೊಂದಿಗೆ ಎಲ್ಲ ಸಮಾಜದವರೂ ಈ ಮಂದಿರಕ್ಕೆ ನಡೆದುಕೊಳ್ಳುತ್ತಾರೆ. ಯಾವುದೇ ಸಂಘರ್ಷಗಳು ನಡೆದಿಲ್ಲವೆಂದು ಗೊತ್ತಾಗುತ್ತದೆ.

ಇಲ್ಲಿ ದೊರೆಯುವ ಅನೇಕ ಶಿಲ್ಪಗಳನ್ನು ಆಗಾಗ ಮಣ್ಣಿನಲ್ಲಿ ಮುಚ್ಚುತ್ತ ನಡೆದಿದ್ದಾರೆಂದು ಜನ ನೊಂದು ನುಡಿಯುತ್ತಾರೆ. ಕೆರೆಯ ಒಳಗೆ ಒಂದು ಕಲ್ಲಿನ ಮಂಟಪವಿದ್ದು, ಅದನ್ನು ಸಂಗಮೇಶ್ವರ ಮಂಟಪ ಎಂದು ಕೆಲವರು, ಸಕಲೇಶ ಮಾದರಸನ ಮಂಟಪವೆಂದು ಕೆಲವರು ಕರೆಯುತ್ತಾರೆ. ಇದು ಸರಿಯಾಗಿ ಸಕಲೇಶ ಮಾದರಸರ ಮಂದಿರದ ಎದುರಿಗೆ ಕೆರೆಯ ದಂಡೆಯ ಮೇಲಿದೆ. ಕೆರೆಯ ಇನ್ನೊಂದು ದಂಡೆಗೆ ಮಲಕಣ್ಣನ ಗುಡಿ (ಮಲ್ಲಿಕಾರ್ಜುನನ ಮಂದಿರ) ಇದೆ. ಕರಸ್ಥಲದಲ್ಲಿ ಲಿಂಗವನ್ನು ಹಿಡಿದುಕೊಂಡ ಅನೇಕ ಭಗ್ನ ಮೂರ್ತಿಗಳು ಬಹಳಷ್ಟು ಕಾಣಿಸುತ್ತವೆ. ಕೈಯಲ್ಲಿ ಜಪಮಣಿಯೂ ಇರುತ್ತದೆ.

ವಚನಗಳು : ೧೩೩, ವಚನಾಂಕಿತ : ಸಕಲೇಶ್ವರ, ಸಕಲೇಶ್ವರದೇವ
ಮಾಹಿತಿ : ಶ್ರೀ ಸಿದ್ದಯ್ಯ ಬುದ್ದಯ್ಯ ಪೂಜಾರಿ


***

ನಾರಾಯಣಪುರ :

## ೩. ಒಕ್ಕಲಿಗ ಮುದ್ದಯ್ಯ

ಒಕ್ಕಲಿಗ ಮುದ್ದಣ್ಣ ಹುಟ್ಟಿದ ಊರು ವಿಜಾಪೂರ ಜಿಲ್ಲೆಯ ಜೋಳದಹಾಳ ಗ್ರಾಮ. ಇವನ ಕಾಯಕ ಒಕ್ಕಲುತನ. ೧೮ ವಿಧದ ಧಾನ್ಯಗಳನ್ನು ಈತ ಬೆಳೆಯುತ್ತಿದ್ದನೆಂದು ತಿಳಿದುಬರುತ್ತದೆ. ಅವನಲ್ಲಿ ಪ್ರಾಮಾಣಿಕತೆ ಇತ್ತು. ತಾನು ಬೆಳೆದುದರಲ್ಲಿ ರಾಜನಿಗೆ ಎಷ್ಟು ಸುಂಕವನ್ನು ಕೊಡಬೇಕಾಗಿತ್ತೊ ಅಷ್ಟು ಸುಂಕವನ್ನು ಮತ್ತು ರಾಜಪಾಲೆಂದು ಕೊಡುವ ಕೋರನ್ನು ತಪ್ಪದೆ ಕೊಡುತ್ತಿದ್ದನು.

ಹಗಲಿರುಳೆನ್ನದೆ ಅವನ ಮನಸ್ಸು ಯಾವಾಗಲೂ ಲಿಂಗದಲ್ಲಿ ಮಗ್ನವಾಗಿರುತ್ತಿತ್ತು. ತಾನು ಲಿಂಗದೀಕ್ಷೆಯ ಸಂಸ್ಕಾರಕ್ಕೆ ಒಳಗಾಗಬೇಕೆಂಬ ಉತ್ಕಟೇಚ್ಛೆ ಅವನಲ್ಲಿತ್ತು.



ಮೃತ್ಯುಂಜಯ ಗುಡಿಯ ಮುಖ್ಯದ್ವಾರ
ಹಿಂದೆ ಒಕ್ಕಲಿಗ ಮುದ್ದಯ್ಯ ಮಂದಿರ ದ್ವಾರ



ಮೃತ್ಯುಂಜಯನ ಸಮಾಧಿ–ಗುಡಿ ಹಿಂದೆ ಇರುವುದು ಮುದ್ದಯ್ಯನ ಸಮಾಧಿ

ಅದೇ ಧ್ಯಾನದಲ್ಲಿಯೆ ಒಂದು ದಿನ ತನ್ನ ಹೊಲವನ್ನು ಹಸನುಮಾಡಿ ಬಿತ್ತುವುದಕ್ಕೆ ಹದಗೊಳಿಸಬೇಕೆಂದು ನೇಗಿಲನ್ನು ಹೊಡೆಯುತ್ತಿದ್ದನು. ಹೊಲದ ನೇಗಿಲನ್ನು ಹೊಡೆಯುವುದರೊಳಗೆ ಸ್ವಲ್ಪದರಲ್ಲಿ ಆ ನೇಗಿಲು ಮುಂದೆ ಚಲಿಸದೆ ನಿಂತು ಬಿಟ್ಟಿತು. ನೇಗಿಲಿಗೆ ಏನು ತಾಗಿತೊ ನೋಡಬೇಕೆಂಬ ಕೌತುಕದಿಂದ ಮುದ್ದಯ್ಯ ಮಣ್ಣನ್ನು ಕೃಷಿ ಸಲಕರಣೆಯಿಂದ ಸರಿಸತೊಡಗಿದನು. ಆಗ ನೆಲದ ಮರೆಯ ನಿಧಾನದಂತೆ ಅಡಗಿಕೊಂಡಿದ್ದ ಲಿಂಗಯ್ಯ ಮುದ್ದಯ್ಯನ ಜೊತೆ ಮಾತನಾಡತೊಡಗಿತಂತೆ. "ಮುದ್ದಯ್ಯ ನಾನು ಆದಿನಾಥ ಲಿಂಗಯ್ಯ. ನನಗೆ ನೋವಾಗದಂತೆ ಮೆಲ್ಲಗೆ ತಗೆ" ಎಂದು ಹೇಳಿದಂತೆ ಆಯಿತಂತೆ. ಮುದ್ದಯ್ಯನು ಲಿಂಗದ ಚಿಂತೆಯಲ್ಲಿಯೆ ಇದ್ದವನಾದ್ದರಿಂದ ಆ ಮಾತನ್ನು ಕೇಳಿ ಒಂದು ಕ್ಷಣ ವಿಚಲಿತನಾದನು. ನಾಜೂಕಾಗಿ ಆ ಲಿಂಗವನ್ನು ತೆಗೆಯುವ ಪ್ರಯತ್ನದಲ್ಲಿ ಮುಂದಾದನು. ಒಳಗೆ ಒಂದು ಸ್ವಯಂಭುಲಿಂಗ ಕಾಣಿಸಿತು. ಅವನ ಸಂತೊಷಕ್ಕೆ ಪಾರವೆ ಇಲ್ಲದಂತಾಯಿತು. ಲಿಂಗವನ್ನು ಹೊರತೆಗೆದು, ಅಲ್ಲಿಯೆ ಪ್ರತಿಷ್ಠಾಪಿಸಿ, ಭಕ್ತಿ ಶ್ರದ್ಧೆಯಿಂದ ಪೂಜಿಸಿದನು. ಆ ಲಿಂಗಕ್ಕೆ ಜೋಳದಂಬಲಿಯನ್ನು ಎಡೆ ಮಾಡಿ ಅದನ್ನು ಸ್ವೀಕರಿಸಲು ಹೇಳಿದನು.

ದೈಹಿಕ ಶ್ರಮದಿಂದಾಗಿ ನಿದ್ರೆ ಆವರಿಸಿತು. ಹಾಗೇ ನಿದ್ರೆಗೆ ಹೋಗಿಬಿಟ್ಟನು. ಎಚ್ಚರಾದಾಗ ಅವನಿಗೆ ಇನ್ನೊಂದು ಆಶ್ಚರ್ಯ ಕಾದಿತ್ತು. ತನ್ನೆದುರು ಜಂಗಮನೊಬ್ಬ ಇದ್ದನು. ಮುದ್ದಯ್ಯನ ಮನದ ಲಿಂಗ ಚಿಂತೆಯನ್ನು ಬಿಡಿಸುವ ವಿಚಾರವನ್ನು ಅವನೆದುರಿಗೆ ಇಟ್ಟನು. ಲಿಂಗದೀಕ್ಷೆಗೆ ಬೇಕಾದ ಎಲ್ಲ ಸಿದ್ಧತೆ ಮಾಡಿಕೊಂಡು, ಮುದ್ದಯ್ಯನಿಗೆ ಲಿಂಗದೀಕ್ಷೆ ಕರುಣಿಸಿದನು. ಮುದ್ದಯ್ಯನ ಆಸೆ ಈಡೇರಲು ಗುರು ಲಿಂಗ ಜಂಗಮ ಸ್ವರೂಪಿ ಆದ ಆ ಗುರು ಆ ಲಿಂಗದಲ್ಲಿಯೆ ಐಕ್ಯನಾದನು. ಗುರು



ಮೃತ್ಯುಂಜಯ ಗುಡಿ, ಎದುರಿಗೆ ದೀಪಸ್ಥಂಬವಿದೆ


ಹೇಳಿದಂತೆ ಕಾಯಕ ದಾಸೋಹ ಮಾಡಿಕೊಂಡು ಪ್ರಾಮಾಣಿಕ ಜೀವನವನ್ನು ನಡೆಸತೊಡಗಿದನು.

ಹೀಗಿರುವಾಗ ಒಂದು ದಿನ ಒಂದು ಘಟನೆ ನಡೆಯುತ್ತದೆ. ಒಕ್ಕಲು ಮುದ್ದಯ್ಯ ತಾನು ಬೆಳೆದ ಬೆಳೆಯ ಮೇಲಿನ ಕರವನ್ನು ಪ್ರಾಮಾಣಿಕವಾಗಿ, ಸಮಯಕ್ಕೆ ಸರಿಯಾಗಿ ಮುಟ್ಟಿಸುವವನಾಗಿದ್ದನು. ಹಾಗೇ ರಾಜನ ಸೇವಕರಿಗೆ ಕೊಡಬೇಕಾದ ತೆರಿಗೆಯನ್ನು ಕೊಟ್ಟಾಗಿತ್ತು. ಆದರೂ ಆ ಸೇವಕರು ಮತ್ತೆ ಕರ ಕೊಡಲು ಪೀಡಿಸುವರು. ಕೊಡದೆ ಹೋದಾಗ ಬಂಧಿಸಲು ಪ್ರಯತ್ನಿಸಿದರು. ಮುದ್ದಯ್ಯ ನೇರವಾಗಿ ರಾಜನಲ್ಲಿಗೆ ತಾನೆ ಬರುತ್ತಾನೆ. ಕೊಡಬೇಕಾದ ತೆರಿಗೆಯನ್ನು ತಾನು ಈಗಾಗಲೆ ಕೊಟ್ಟಾಗಿದೆ, ಆದರು ಸೇವಕರು ಪೀಡಿಸುತ್ತಿದ್ದಾರೆಂಬ ಸತ್ಯ ಸಂಗತಿಯನ್ನು ಬಿಚ್ಚಿಡುತ್ತಾನೆ. ರಾಜ ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಅವನ ಮೌನ, ಉದಾಸೀನಗಳು ಮುದ್ದಯ್ಯನಿಗೆ ಬೇಸರ ತರಿಸುತ್ತವೆ. ಗ್ರಾಮದ ಮುಖ್ಯಸ್ಥರಲ್ಲಿ ತನ್ನ ಸಮಸ್ಯೆಯನ್ನು ಪ್ರಸ್ತಾಪಿಸುತ್ತಾನೆ. ತಾನು ಕರ ಕೊಟ್ಟುದರ ಬಗ್ಗೆ ಮತ್ತು ರಾಜನ ನಿಯಮ ವಿಧಿಯಂತೆ ನಡೆದುಕೊಂಡಿದ್ದರ ಬಗ್ಗೆ ಬರೆಯಿಸಿಕೊಂಡನು. ಆದರೆ ರಾಜ ಸಾರ್ವಜನಿಕರು ಹೆಚ್ಚಿನ ಪಟ್ಟಿಯನ್ನು ಕೊಡಬೇಕೆಂದು ಒತ್ತಡ ಹೇರಿದನು. ಈ ಅನ್ಯಾಯವನ್ನು ಜನರ ಹತ್ತಿರ ನಿವೇದಿಸಿಕೊಂಡರೆ ಏನೂ ಪ್ರಯೋಜನ ಇಲ್ಲ ಎನಿಸುತ್ತದೆ ಎಂದುಕೊಂಡ ಮುದ್ದಯ್ಯ ತನ್ನ ಇಷ್ಟ ಲಿಂಗದಲ್ಲಿ ಹೇಳಿಕೊಳ್ಳುತ್ತಾನೆ.

ಮೂರಡಿ ಮಣ್ಣಿಗೆ ಆರು ಹೊನ್ನ ತೆತ್ತು,
ಮೀರಿ ಹದಿಕೆಯ ಬೇಡೆನೆಂದು, ಈ ಗ್ರಾಮದವರ ಮುಂದಿಟ್ಟು
ಮೀರಲಿಲ್ಲಾಯೆಂದು ಪಟ್ಟೆಯ ಕೊಟ್ಟು,
ಮತ್ತೂರು ಗೂಡಿ ಹದಿಕೆಯ ಬೇಡಿದಡೆ, ನಾ ಕೊಡಲಿಲ್ಲ.
ನೀ ಕೊಟ್ಟ ಪಟ್ಟೆ
ನಮ್ಮ ನಟ್ಟನಡುಮನೆಯ ಐದು ಕಾಲ ನೆಲಹಿನಲ್ಲಿ ಕಟ್ಟಿಯದೆಕೋ!

ಈ ಘಟನೆಯನ್ನು ವಚನದ ಮೂಲಕ ಮುದ್ದಯ್ಯ (೧೭೪೨) ದಾಖಲಿಸಿದ್ದಾನೆ. ಒಕ್ಕಲು ಮುದ್ದಯ್ಯ ಕೃಷಿ ಕಾಯಕವನ್ನು ಮಾಡಿಕೊಂಡು, ಲಿಂಗಪೂಜಾನಿಷ್ಠನಾಗಿ ಕಾಯಕ-ದಾಸೋಹ ಮಾಡುತ್ತ ಪ್ರಮಾಣಿಕ ಜೀವನವನ್ನು ನಡೆಸಿಕೊಂಡು ಹೋಗಹತ್ತಿದನು. "ಕಾಮಭೀಮ ಜೀವಧನದೊಡೆಯ" ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ.


ನಾರಾಯಣಪುರ ಕೆರೆಯ ದಂಡೆಯ ಮೇಲೆ, ಸಕಲೇಶ ಮಾದರಸರ ಮಂದಿರದಿಂದ ಸ್ವಲ್ಪೇ ಅಂತರದಲ್ಲಿ ಕೆರೆಯ ದಂಡೆಯ ಮೇಲೆ ಒಕ್ಕಲಿಗ ಮುದ್ದಣ್ಣನದೆಂದು ಹೇಳುವ ಒಂದು ದೊಡ್ಡ ಗುಡಿ ಇದೆ. ಕೆರೆಯ ನೀರು ತುಂಬಿ ಬಂದರೂ ಯಾವುದೇ ಹಾನಿಯಾಗದಂತೆ ಈ ಗುಡಿಯನ್ನು ಎತ್ತರದಲ್ಲಿ ಕಟ್ಟಲಾಗಿದೆ.



ಮೃತ್ಯುಂಜಯ ಗುಡಿಯ ಗರ್ಭಗೃಹದಲ್ಲಿ ಮಜೇರಿ




ಒಕ್ಕಲಿಗ ಮುದ್ದಯ್ಯನ ಗುಡಿ



ಒಕ್ಕಲಿಗ ಮುದ್ದಯ್ಯನ ಸಮಾಧಿ ಎದುರಿನ ಭಾಗದಲ್ಲಿರುವ ಮೃತ್ಯುಂಜಯನ ಸಮಾಧಿ



ಒಕ್ಕಲಿಗ ಮುದ್ದಯ್ಯನ ಸಮಾಧಿ



ಒಕ್ಕಲಿಗ ಮುದ್ದಯ್ಯನ ಸಮಾಧಿ ಕೋಣೆಯ ಮೂಲೆಯಲ್ಲಿರುವ ಸುರಂಗ ಮಾರ್ಗ



ಒಕ್ಕಲಿಗ ಮುದ್ದಯ್ಯನ ಪೂಜಾರಿಗಳ ಮನೆತನದ ಹಿರಿಯಜ್ಜಿ, ಲಿಂಗಧಾರಿ ಗೋಸಾಯಿ

ಈ ಗುಡಿಯ ಆವಾರವನ್ನು ಹೊಕ್ಕು ನೋಡಿದರೆ ಇಲ್ಲಿ ಎರಡು ಪ್ರತ್ಯೇಕ ಮಂದಿರಗಳಿರುವುದು ಗಮನಕ್ಕೆ ಬರುತ್ತದೆ. ಅವುಗಳ ಬಗ್ಗೆ ವಿಚಾರಿಸಿ ನೊಡಿದಾಗ ಸಂಪೂರ್ಣವಾಗಿ ಗುಡಿಯ ಆಕಾರದಲ್ಲಿರುವ ಮಂದಿರ. ಅದು ಮೃತ್ಯುಂಜಯನ ಗುಡಿ ಎಂದೂ, ಅದರ ಮಗ್ಗುಲಲ್ಲಿ ಕಾಣುವ ಮಂದಿರ ಅದು ಒಕ್ಕಲಿಗ ಮುದ್ದಣನದೆಂದೂ ಗೊತ್ತಾಗುತ್ತದೆ. ಸರಿಯಾಗಿ ಗಮನಿಸಿದರೆ, ಎರಡಕ್ಕೂ ಪ್ರತ್ಯೇಕ ದ್ವಾರಬಾಗಿಲುಗಳಿವೆ. ಮೃತ್ಯುಂಜಯನ ಮಂದಿರ ಕೆರೆಗೆ ಹತ್ತಿಕೊಂಡಿದೆ. ಈ ಮಂದಿರದ ಆವಾರಕ್ಕೆ ಹತ್ತಿ ಊರೆಡೆಗೆ ಮುದ್ದಯ್ಯನ ಮಂದಿರವಿದೆ. ಇದಕ್ಕೆ ಮುದ್ದಯ್ಯನ ಮಠವೆಂತಲೂ ಅನ್ನುತ್ತಾರೆ. ಮುದ್ದಯ್ಯನ ಸಮಾಧಿ ಇರುವ ಸ್ಥಳಕ್ಕೆ ಹೋಗಲು ಎರಡು ದಾರಿಗಳಿವೆ. ಒಂದು ಮುದ್ದಯ್ಯನ ಸಮಾಧಿಗೆಂದೇ ಇರುವ ಮಹಾದ್ವಾರದಿಂದ ಒಳಗೆ ಪ್ರವೇಶಿಸಿದರೆ, ಎಡಗಡೆ ಮುದ್ದಯ್ಯನ ಗದ್ದಿಗೆಗೆ ಪ್ರವೇಶದ್ವಾರವಿದೆ. ಇನ್ನೊಂದು ಮೃತ್ಯಂಜಯನ ಮಂದಿರದ ಭಾಗದಲ್ಲಿಯೇ ಗೋಡೆಗೆ ಒಂದು ಬಾಗಿಲು ಇದೆ.

ಮುದ್ದಯ್ಯನ ಸಮಾಧಿ ಇರುವಲ್ಲಿ ಎರಡು ಪ್ರತ್ಯೇಕವಾದ ಸಮಾಧಿಗಳಿವೆ. ಪಶ್ಚಿಮಕ್ಕಿರುವ ಸಮಾಧಿಯನ್ನು ಒಕ್ಕಲಿಗರ ಮುದ್ದಣದೆಂದು ಹೇಳಲಾಗುತ್ತದೆ. ಈ ಸಮಾಧಿಯ ಎದುರುಗಡೆ ಇರುವುದು ಮೃತ್ಯುಂಜಯನ ಸಮಾಧಿಯಾಗಿದೆ. ಎನ್ನುತ್ತಾರೆ. ಈ ಮುದ್ದಣ್ಣನ ಮಠದ ಆವಾರದಲ್ಲಿ ಮುದ್ದಣ್ಣನ ಪೂಜೆ ಮಾಡುವ ಗೋಸಾಯಿಗಳ ಒಂದು ಕುಟುಂಬವಿದೆ. ಈ ಗೋಸಾಯಿಗಳಾದ ಮೋಟೆ

ಮನೆತನದವರು ಮೃತ್ಯುಂಜಯ ಮತ್ತು ಮುದ್ದಯ್ಯನದು ಎಂದು ಹೇಳುವ ಸಮಾಧಿಗಳನ್ನು ದಿನವೂ ಪೂಜೆ ಮಾಡುತ್ತಾರೆ.

ಒಕ್ಕಲು ಮುದ್ದಯ್ಯನ ಸಮಾಧಿ ಇದ್ದ ಕೋಣೆಗೆ ಎರಡು ಬಾಗಿಲಿವೆ. ಒಂದನ್ನು ಮುಚ್ಚಿಹಾಕಿದ್ದಾರೆ. ಸಮಾಧಿ ಇರುವ ಕೋಣೆಯಲ್ಲಿ ದಕ್ಷಿಣದ ಗೋಡೆಗೆ ತಾಗಿಕೊಂಡು ಒಂದು ಸುರಂಗ ಮಾರ್ಗದ ಬಾಗಿಲು ಈಗಲೂ ಕಾಣುತ್ತದೆ. ಅದರೊಳಗಿಂದ ಬಸವಕಲ್ಯಾಣದ ಸದಾನಂದ ಮಠದವರೆಗೆ ಹೋಗಬಹುದು ಎಂದು ಹೇಳಲಾಗುತ್ತದೆ. ಅದು ಬಹುಶಃ ಮಂದಿರದ ಕೆಳಗಡೆ, ಅಥವಾ ಈ ಸಮಾಧಿಗಳಿರುವ ಕೆಳಗೆ ಗವಿ ಇರಬಹುದೆಂದು ಊಹಿಸಲು ಸೂಚನೆಯನ್ನು ಕೊಡುತ್ತದೆ.

ಮುದ್ದಯ್ಯ ಮತ್ತು ಮೃತ್ಯುಂಜಯ ಈ ಎರಡೂ ಸಮಾಧಿಗಳ ಮೇಲೆ ಹಸಿರು ಗಲ್ಲೀಪವನ್ನು ಹೊದಿಸಿದ್ದಾರೆ. ಈ ಮೃತ್ಯುಂಜಯನು ಒಕ್ಕಲಿಗರ ಮುದ್ದಣ್ಣನ ಶಿಷ್ಯನೆಂದು ಹೇಳುತ್ತಾರೆ. ಮಹಾರಾಷ್ಟ್ರದ ಉಂದರಖೇಡಗಾಂವದಿಂದ ಒಬ್ಬ ಭಕ್ತೆ ಬಂದು ತನಗೆ ಬಹುದಿನಗಳಿಂದ ಮಕ್ಕಳಿಲ್ಲ ಎಂಬ ನೋವನ್ನು ಮುದ್ದಯ್ಯನಲ್ಲಿ ತೋಡಿಕೊಳ್ಳುತ್ತಾಳೆ. ಆಗ ಮುದ್ದಯ್ಯ ಆಕೆಗೆ ಹರಸಿ, ಮಕ್ಕಳ ವರವನ್ನು ದಯಪಾಲಿಸುತ್ತಾರೆ. ಮತ್ತು ನಿಮಗೆ ಜನಿಸುವ ಎರಡನೇ ಮಗುವನ್ನು ತಮ್ಮ



ಒಕ್ಕಲಿಗ ಮುದ್ದಯ್ಯನ ಪೂಜಾರಿಗಳಾದ
ಲಿಂಗಾಯತ ಗೋಸಾಯಿ ಮನೆತನದ ಇಬ್ಬರು ಲಿಂಗಧಾರಿ ಸೊಸೆಯಂದಿರು

ಜೋಳಿಗೆಗೆ ಹಾಕಬೇಕೆಂದು ಕೇಳಿಕೊಳ್ಳುತ್ತಾರೆ. ಅದಕ್ಕೆ ಒಪ್ಪಿದ ಆ ಭಕ್ತೆಯು ತನಗೆ ಮಕ್ಕಳಾದ ನಂತರ ಎರಡನೇ ಮಗುವನ್ನು ಮುದ್ದಯ್ಯನವರ ಜೋಳಿಗೆಗೆ ಹಾಕುತ್ತಾಳೆ. ಈ ಮಗುವೇ ಮೃತ್ಯುಂಜಯ. ಈ ಮಗುವಿನ ಸಂತತಿಯೇ ಗೋಸಾಯಿ ಮೋಟೆ ಮನೆತನವೆಂದು ಹೆಸರು ಪಡೆಯುತ್ತದೆ. ಹೀಗಾಗಿ ಮುದ್ದಯ್ಯನ ಪೂಜೆಯನ್ನು ಈ ಗೋಸಾಯಿ ಮನೆತನದವರು ತಲೆತಲಾಂತರದಿಂದ ಮಾಡುತ್ತ ಬರುತ್ತಿದ್ದಾರೆ. ಮುದ್ದಯ್ಯನದು ಎಂದು ಹೇಳುವ ೬೦ ಎಕರೆ ಜಮೀನನ್ನು ಇವರೇ ಉತ್ತಿಬಿತ್ತಿ ಬೆಳೆಯುತ್ತಾರೆ. ಮುದ್ದಯ್ಯನ ಗುರು ಸದಾನಂದ ಸ್ವಾಮಿ. ಅವನೇ ಇವನಿಗೆ ೬೦ ಎಕರೆ ಜಮೀನನ್ನು ದಾನ ರೂಪದಲ್ಲಿ ಕೊಟ್ಟಿದ್ದನೆಂದು ಹೇಳುತ್ತಾರೆ. ಇಲ್ಲಿ ಇನ್ನೊಂದು ವಿಶೇಷವೆಂದರೆ ಮುದ್ದಯ್ಯನ ಸಮಾಧಿ ಪೂಜಿಸುವ ಈ ಗೋಸಾಯಿಗಳು ಲಿಂಗಾಯತ ಗೋಸಾಯಿಗಳು. ತಮ್ಮ ಮನೆಯಲ್ಲಿ ಎಲ್ಲರ ಕೊರಳಲ್ಲಿ ಲಿಂಗ ಇರುವುದನ್ನು ಅವರು ತೋರಿಸುತ್ತಾರೆ.

ಸಕಲೇಶ ಮಾದರಸನ ಸ್ಥಿತಿಯೇ ಇಲ್ಲಿಯೂ ಆಗಿದೆ. ಈ ಮೃತ್ಯುಂಜಯ ಹೆಸರಿನ ಗುಡಿಯನ್ನು ಮುಸ್ಲಿಮ ಧರ್ಮೀಯರು ಯಾವಾಗಲೋ ದರ್ಗಾವನ್ನಾಗಿ ಮಾಡಿದ್ದಾರೆ. ಎಲ್ಲೆಡೆ ಹಸಿರು ಬಣ್ಣವನ್ನು ಬಳದಿದ್ದಾರೆ. ಸಮಾಧಿಗಳನ್ನು ಮಜೇರಿಗಳ ಆಕಾರಕ್ಕೆ ತಿರುಗಿಸಿ, ಮೇಲೆ ಹಸಿರು ಗಲ್ಲೀಪ ಹೊದಿಸಿದ್ದಾರೆ, ನವಿಲು ಗರಿಗಳನ್ನು ಇಟ್ಟಿದ್ದಾರೆ. ಗುಡಿಯ ಹಿಂದೆ ಇರುವ ಎರಡು ಪ್ರತ್ಯೇಕ ಸಮಾಧಿಗಳನ್ನೂ ಮಜೇರಿಗಳನ್ನಾಗಿ ಮಾಡಿದ್ದಾರೆ. ಗುಡಿಯ ಅಂಗಳದಲ್ಲಿ ಒಂದು ಮಜೇರಿ ಇದೆ. ಅದೂ ಮಜೇರಿಯಾಗಿದೆ. ಸಹಜವಾಗಿ ಗಮನಿಸಿದರೆ ಅದರ ಒಳಗಡೆ ನಂದಿ ಇರಬೇಕೆಂದು ಅನಿಸುತ್ತದೆ.

ಇಷ್ಟೆಲ್ಲ ಆದರೂ ಇಲ್ಲಿಯ ಜನರ ಸೌಹಾರ್ದ ಬದುಕಿಗೆ ಈ ಮಂದಿರವೂ ಒಂದು ಸಾಕ್ಷಿಯಾಗಿದೆ. ಲಿಂಗವಂತರು ಇದನ್ನು ಮೃತ್ಯುಂಜಯ ಮಂದಿರವೆಂದರೆ, ಮುಸ್ಲಿಮರು ಇದನ್ನು ಮರ್ತುಜಾ ದರ್ಗಾ ಎನ್ನುತ್ತಾರೆ. ಎರಡೂ ಧರ್ಮದ ಪೂಜೆಗಳು ದಿನಾಲೂ ನಡೆಯುತ್ತವೆ. ಎರಡೂ ಸಮಾಜದವರು ಪ್ರತ್ಯೇಕವಾಗಿ ಜಾತ್ರೆಗಳನ್ನು ಮಾಡುತ್ತಾರೆ. ಲಿಂಗವಂತರು ಜಾತ್ರೆಯಲ್ಲಿ ಬರುವ ನೈವೇದ್ಯ, ಹಣ್ಣುಕಾಯಿ, ಹಣ ಇತ್ಯಾದಿಗಳನ್ನು ಮುಸ್ಲಿಮರಿಗೆ ಅರ್ಧ ಹಂಚಿಕೊಡುತ್ತಾರೆ. ಹಾಗೆಯೇ ಮುಸ್ಲಿಮರು ಜಾತ್ರೆಮಾಡುವಾಗ ಬಂದ ನೈವೇದ್ಯ, ಹಣ್ಣುಕಾಯಿ, ಹಣವನ್ನು ಲಿಂಗಾಯತ ಗೋಸಾಯಿ ಪೂಜಾರಿಗಳಿಗೆ ಹಂಚಿಕೊಡುತ್ತಾರೆ.

ಈ ದೇವರು ನಮ್ಮವರು ತಮ್ಮವರು ಎಂದು ನ್ಯಾಯಾಲಯದ ಮೆಟ್ಟಿಲು ಏರಿದ ಬಗ್ಗೆ ಕಾಗದ ಪತ್ರಗಳೂ ನಮಗೆ ಲಭ್ಯವಾಗಿವೆ. ಆ ಕಾಗದಗಳಿಂದಲೇ ಈ ಮೇಲಿನ ವಿಷಯಗಳೆಲ್ಲ ತಿಳಿದುಬರುತ್ತವೆ. ಈ ಮಂದಿರಕ್ಕೆ ಹತ್ತಿಕೊಂಡು ಹಿಂದೆ ಇರುವ ಗೋಸಾಯಿಗಳು ಈ ಮಂದಿರದ ಹಕ್ಕನ್ನು ಪಡೆದಿರುತ್ತಾರೆ. ಒಕ್ಕಲಿಗರ ಮುದ್ದಯ್ಯ ತಮ್ಮ ಮನೆಗೆ ಸಂಬಂಧಿಸಿದವರೆಂದು ಅವರು ಅಭಿಮಾನದಿಂದ

ಹೇಳಿಕೊಳ್ಳುತ್ತಾರೆ. ಅವರ ಮನೆಯವರೆಲ್ಲ ಲಿಂಗ ಧರಿಸುತ್ತಾರೆ. ತಾವು ಲಿಂಗವಂತರು ಎಂದೆ ಕರೆದುಕೊಳ್ಳುವುದಾಗಿ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಲಿಂಗ ಧರಿಸುವ ಗೋಸಾಯಿಗಳ ಮಧ್ಯ ಮಾತ್ರ ನಮ್ಮ ಸಂಬಂಧಗಳು ಏರ್ಪಡುತ್ತವೆ ಎಂದು ಹೇಳುತ್ತಾರೆ. ಅವರಲ್ಲಿ ಈ ಮಂದಿರಕ್ಕೆ ಸಂಬಂಧಿಸಿದಂತೆ ಆ ಮನೆತನದ ಹಿರಿಯರು ನ್ಯಾಯಾಲಯದ ಮೊರೆ ಹೊಕ್ಕಿರುವುದು, ಅದೇನೇ ವ್ಯಾಜ್ಯಗಳಿದ್ದರೂ ಎರಡೂ ಧರ್ಮದವರು ತಲೆತಲಾಂತರದಿಂದ ಮಂದಿರದ ಪೂಜೆ ಮಾಡಿಕೊಂಡು ಬಂದಿರುವುದು, ಹೀಗೆಯೇ ಮುಂದುವರೆದಿದೆ.

***

ವಚನಗಳು : ೧೨,

ವಚನಾಂಕಿತ : ಕಾಮಭೀಮ ಜೀವಧನದೊಡೆಯ

ಮಾಹಿತಿ : ಸುಮನ್ ಜಗನ್ನಾಥ ಮೋಟೆ, ನೇತಾಜಿ ನರಸಿಂಗರಾವ್ ಹಣಗೋಜಿ

## ನಾರಾಯಣಪುರ :

## ೪. ಗೋಟಾಳೇಶ್ವರ ದೇವಾಲಯ

ನಾರಾಯಣಪುರದಲ್ಲಿ 'ಗೋಟಾಳೇಶ್ವರ' ಅಥವಾ ಗೋಟೇಶ್ವರ ಎಂಬ ಹೆಸರಿನ ಗುಡಿಯೊಂದಿದೆ. ಇದು ಶರಣ ಘಟ್ಟಿವಾಳಯ್ಯನಿಗೆ ಸಂಬಂಧಿಸಿದ ಸ್ಮಾರಕ ಎಂದು ಹೇಳಲಾಗುತ್ತದೆ. ಘಟ್ಟಿವಾಳಯ್ಯನ ಪೂರ್ವಾಶ್ರಮದ ಹೆಸರು ಮುದ್ದಣ್ಣ ಎಂದು. ಕಲ್ಯಾಣದಲ್ಲಿ ಜರುಗಿದ ಘಟನೆಯಿಂದಾಗಿ, ಅವನಿಗೆ ಘಟ್ಟಿವಾಳಯ್ಯ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ.

ಬಸವಣ್ಣನವರ ಮಹಾಮನೆಯ ದ್ವಾರಬಾಗಿಲಲ್ಲಿ ನಿಂತು, ದಿನವೂ ಬಂದು ಹೋಗುವವರ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿ ಘಟ್ಟಿವಾಳಯ್ಯನಿಗೆ ಇದ್ದಂತಿದೆ. ಆಗ ಈ ಶರಣ ಮಹಾಮನೆಗೆ ಬಂದವರು ಕಪಟಿಗಳೋ ಪ್ರಾಮಾಣಿಕರೋ ಎಂದು ಪರೀಕ್ಷಿಸಿ, ಒಳಗೆ ಬಿಡುತ್ತಿದ್ದನಂತೆ. ಇದು ಜಗಳಕ್ಕೆ ಕಾರಣವಾಗಿರುವುದು ಒಂದು ಸಂಗತಿ.



ಗೋಟಾಳೇಶ್ವರ ದೇವಾಲಯದ ಗರ್ಭಗೃಹದ ಶಿವಲಿಂಗ



**ಗೋಟಾಳೇಶ್ವರ ದೇವಾಲಯ**

ಈ ಮೇಲಿನ ಘಟನೆ ಕಾರಣವಾಗಿ ಬಸವಣ್ಣನವರ ಸಲಹೆಯ ಮೇರೆಗೆ ಘಟ್ಟಿವಾಳಯ್ಯ ನಾರಾಯಣಪುರದಲ್ಲಿ ಬಂದು ನೆಲೆಸಿದನೆಂದು ಹೇಳಲಾಗುತ್ತದೆ. ಘಟ್ಟಿವಾಳಯ್ಯನು ನಾರಾಯಣಪುರದ ಈ ಸ್ಥಳದಲ್ಲಿ ಕೆಲದಿನ ತಂಗಿ ಹೋಗಿದ್ದಾನೆಂಬ ಪ್ರತೀತಿ ಇದೆ. ಆದರೆ ದುರ್ದೈವವೆಂದರೆ, ಈ ಗುಡಿಯ ಅಂಗಳದಲ್ಲಿ ಈಗ ಮನೆಗಳಾಗಿವೆ. ಅಂಗಳದಲ್ಲಿ ಒಂದು ಬಾವಿ ಇದೆ. ಇದರ ನೀರು ಬತ್ತಿದ್ದೇ ಇಲ್ಲ ಎನ್ನುತ್ತಾರೆ. ಈ ಗುಡಿಯಲ್ಲಿಯ ಶಿವಲಿಂಗದ ಗೋಳಕದ ಎತ್ತರದ ಪ್ರಮಾಣ ಹೆಚ್ಚಿದ್ದು, ಬಹುಸುಂದರವಾಗಿ ಕಾಣುತ್ತದೆ. ದಿನವೂ ಲಿಂಗವನ್ನು ಪೂಜಿಸುವ ಸಂಪ್ರದಾಯವಿದೆ. ವಿಶೇಷ ಆಚರಣೆಗಳೇನೂ ಇಲ್ಲ.

***

ವಚನಗಳು : ೧೪೭
ವಚನಾಂಕಿತ : ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ
ಮಾಹಿತಿ : ಸಿದ್ದಯ್ಯ ಸ್ವಾಮಿ, ಶಿವದೇವಾಲಯದ ಪೂಜಾರಿಗಳು.

## ನಾರಾಯಣಪುರ :

## ೫. ಅಕ್ಕಮಹಾದೇವಿ ಮಠ

ನಾರಾಯಣಪುರದ ಪ್ರಾಚೀನ ಬೃಹತ್ ಶಿವದೇವಾಲಯದ ಎದುರುಗಡೆ ಒಂದು ದೊಡ್ಡ ಆವರಣವಿದೆ. ಅಲ್ಲೊಂದು ಮಠ ಇದೆ. ರೇಣಸಿದ್ಧೇಶ್ವರ ಗದ್ದಿಗೆ ಇದೆ. ಇದಕ್ಕೆ ಇಂದು ಹಿರೇಮಠ ಎಂದು ಕರೆಯುತ್ತಾರೆ. ಜನರು ಇಲ್ಲಿ ಅಕ್ಕಮಹಾದೇವಿಯ ಗುಡಿ ಇತ್ತು, ಈಗ ಮನೆ ಆಗಿದೆ ಎನ್ನುತ್ತಾರೆ. ಆವರಣದಲ್ಲಿ ಬಾವಿ ಇದೆ. ದೊಡ್ಡ ಗಿಡವಿದೆ. ಅದರ ಕೆಳಗೆ ಒಂದು ಕಟ್ಟೆ ಇದೆ. ಅಲ್ಲಿ ಅಕ್ಕಮಹಾದೇವಿಯ ಶಿಲೆಯ ಮೂರ್ತಿ ಇದೆ. ಮತ್ತೊಂದು ಸಾರೆ ಹೋಗಿ ನೋಡಲು ಅಲ್ಲಿ ಆ ಶಿಲೆಯ ಮೂರ್ತಿ ಇರಲಿಲ್ಲ. ಈ ಸ್ಥಳವನ್ನು ಹಿರೇಮಠ ಎಂದು ಕರೆಯುತ್ತಾರೆ. ಊರಜನರು



ಅಕ್ಕಮಹಾದೇವಿ ಮಠದ ಅಂಗಳದಲ್ಲಿರುವುದು ಅಕ್ಕನ ಕಟ್ಟೆ

ಅಕ್ಕಮಹಾದೇವಿಮಠ ಎಂದೇ ಹೇಳುತ್ತಾರೆ.

ಶಿವದೇವಾಲಯದ ಎಡಕ್ಕೆ ಸಣ್ಣದೇವಾಲಯ ಇದೆ. ಕಲ್ಲಿನ ಮಂಟಪ ಇದೆ. ಮದುವೆ ಮಂಟಪದ ಹಾಗೆ ಇರುವ ಈ ಸ್ಮಾರಕವನ್ನು ಸಣ್ಣ ಶಿವದೇವಾಲಯ ಎಂದು ಕರೆಯುತ್ತಾರೆ. ಇದಕ್ಕೆ ಕಲ್ಯಾಣಮಂಟಪವೆಂದೂ ಕರೆಯುತ್ತಾರೆ. ಏಕೆಂದರೆ ಹಿಂದಿನ ಕಾಲದಲ್ಲಿ ಇದೇ ಮಂಟಪದಲ್ಲಿಯೇ ಮದುವೆಗಳು ಆಗುತ್ತಿದ್ದವು ಎಂದು ಹೇಳುತ್ತಾರೆ. ಈ ಮಂಟಪದ ಮುಂದೆ ದೊಡ್ಡ ಶಿವಲಿಂಗವಿದೆ. ಈಗ ಇದೊಂದು ಹಾಳುಬಿದ್ದುಹೋದ ಮಂಟಪ ಇರುವ ಸ್ಥಳವಾಗಿದೆ.

ಮಾಹಿತಿ : ಸಿದ್ದಯ್ಯ ಸ್ವಾಮಿ, ಶಿವದೇವಾಲಯದ ಪೂಜಾರಿಗಳು.



ಅಕ್ಕನ ಕಟ್ಟೆಗೆ ಆನಿಸಿ ಇಟ್ಟಿಸಿರುವ ಶಿಲ್ಪ

## ನಾರಾಯಣಪುರ :

### ೬. ಗುಡ್ಡಾಪುರ ದಾನಮ್ಮನ ಸ್ಮಾರಕ

ದಾನಮ್ಮ ಈಗಿನ ಸಾಂಗ್ಲಿ ಜಿಲ್ಲೆಗೆ ಸೇರಿದ, ಜತ್ತ ತಾಲೂಕಿನ ಉಮ್ರಾಣಿ ಎಂಬ ಗ್ರಾಮದಾಕೆ. ಬಾಲ್ಯದಲ್ಲಿಯೇ ಅವಳ ಮನಸ್ಸು ಆಧ್ಯಾತ್ಮದ ಕಡೆಗೆ ವಾಲುತ್ತದೆ. ಹೀಗಾಗಿ ಕಲ್ಯಾಣದ ಬಸವಾದಿ ಶರಣರ ಪರಿಸರದಲ್ಲಿ ತಾನೂ ಬೆಳೆಯಬೇಕೆಂದು ದಾನಮ್ಮ ಯೋಚಿಸುತ್ತಾಳೆ. ಆಗ ಆಕೆಗೆ ಸುಮಾರು ೧೨ ರ ಸುತ್ತಮುತ್ತಲಿನ ವಯಸ್ಸು. ಆಗಿನ ಕಾಲದಲ್ಲಿ ವಾಹನ ಸೌಕರ್ಯವಿರಲಿಲ್ಲ. ಅಕ್ಕಮಹಾದೇವಿ ೧೬ ನೇ ವಯಸ್ಸಿನಲ್ಲಿ ಮನೆ ತೊರದದ್ದು, ಲಿಂಗಮ್ಮ ೧೨ ನೇ ವಯಸ್ಸಿನಲ್ಲಿ ಮನೆ ಬಿಟ್ಟದ್ದು, ಇವರೆಲ್ಲರಿಗಿಂತ ಚಿಕ್ಕವಯಸ್ಸಿನಲ್ಲಿ ಬಸವಣ್ಣ, ಅಕ್ಕನಾಗಮ್ಮ, ಶಿವದೇವ ಮನೆಬಿಟ್ಟದ್ದು, ಅತ್ತ ಕಾಶ್ಮೀರದಿಂದ ಬೊಂತಾದೇವಿ ಮನೆ ಬಿಟ್ಟು ಬಂದದ್ದು ಒಂದು ರೀತಿ ಆಶ್ಚರ್ಯವೆನಿಸುತ್ತದೆ. ಇಂಥ ಆಧ್ಯಾತ್ಮದ ಗಾಳಿಯೊಂದು ಆಗ ಬೀಸುತ್ತೇನೋ. ಅದು ಯಾರನ್ನು ಮುಟ್ಟಿದೆ ಅವರೆಲ್ಲ ಹೀಗೆ ಮನೆಬಿಟ್ಟು ಹೊರಟು, ತಮ್ಮ ಗುರಿ ತಲುಪಿದಂತಿದೆ. ಅಂಥ ಸಾಹಸ ಮಾಡಿದವರಲ್ಲಿ ದಾನಮ್ಮ ಒಬ್ಬಳು.

ದಾನಮ್ಮಳಿಗೆ ತಂದೆ ತಾಯಿಗಳು ಇಟ್ಟ ಹೆಸರು ಲಿಂಗಮ್ಮ ಎಂದು. ಅವಳು ಕಲ್ಯಾಣಕ್ಕೆ ಬಂದು ತಲುಪಿದಾಗ ಅವಳನ್ನು ಬರಮಾಡಿಕೊಂಡವಳು ಬಡವಿ ಮಹಾದೇವಿ. ಅಲ್ಲಿ ಆಕೆಯ ಉಪಚಾರ ಪಡೆದ ದಾನಮ್ಮ, ತಾನು ಉಟ್ಟ ಸೀರೆಯ ನಿಲಿಗೆ ಝಾಡಿಸಿ ಮಹಾದೇವಿಗೆ ಮುತ್ತು ರತ್ನಗಳನ್ನು ಕೊಟ್ಟಳೆಂದೂ ಆಕೆಯ ಗುಡಿಸಲು ಉಪ್ಪರಿಗೆ ಆಯಿತೆಂದೂ ಜನ ದಾನಮ್ಮಳ ಮಹಿಮೆಯನ್ನು ಇಂದಿಗೂ ಕೊಂಡಾಡುತ್ತಾರೆ.

ಕಲ್ಯಾಣದ ಸಮೀಪ ಇರುವ ನಾರಾಯಣಪುರದ ಬಾಳೆಯ ಬನದಲ್ಲಿ ದಾನಮ್ಮ ೨೧ ದಿನ ಅನುಷ್ಠಾನ ಗೈಯುತ್ತಾಳೆ. ಈ ಬನದಲ್ಲಿ ಒಂದು ಶಿವದೇವಾಲಯ ಇತ್ತಂತೆ. ಪಕ್ಕಕ್ಕೆ ಬಾವಿಯೂ ಇದೆ. ಅಲ್ಲಿಗೆ ಇಬ್ಬರು ಶರಣೆಯರು ಕಡುಬು ಅನ್ನದ ಬುಟ್ಟಿಯನ್ನು ತಂದು ಲಿಂಗಮ್ಮನ (ದಾನಮ್ಮ) ಲಿಂಗಕ್ಕೆ ಅರ್ಪಿಸುತ್ತಾರೆ. ಆಗ ಲಿಂಗಮ್ಮ ಜಂಗಮ ದಾಸೋಹ ಆಗದೆ ಪ್ರಸಾದ ಸ್ವೀಕರಿಸುವದಿಲ್ಲ ಎಂದಾಗ, ಹಾಗೇ ಮಾಡುತ್ತಾರೆ. ಜಂಗಮ ತೃಪ್ತಿ ನಂತರ ಅವರು ದಕ್ಷಿಣೆ ಕೇಳುತ್ತಾರೆ. ಆಗ




### ಗುಡ್ಡಾಪುರ ದಾನಮ್ಮನ ಸ್ಮಾರಕ

ದಾನಮ್ಮ ಅವರಿಗೆ ಕೊಟ್ಟ ಹರಳು ಹೊನ್ನಾದದ್ದು, ದುರಡಿ ಬುಟ್ಟಿಯ ಕಡಬು, ಅನ್ನ ಇವು ಸಾವಿರಾರು ಜನರ ಪ್ರಸಾದವಾದದ್ದು ಲಿಂಗಮ್ಮನ ಕೈಯ ಸ್ಪರ್ಶದಿಂದ ಎಂಬ ಸುದ್ದಿ ಕಲ್ಯಾಣವನ್ನು ವ್ಯಾಪಿಸುತ್ತದೆ. ಬಸವಣ್ಣ ಕುಟುಂಬ ಸಮೇತ ಬಂದು ಲಿಂಗಮ್ಮನನ್ನು ಕಂಡು, ಅವಳನ್ನು ಅನುಭವ ಮಂಟಪಕ್ಕೆ ಕರೆದೊಯ್ದು, ಲಿಂಗಮ್ಮಳಿಗೆ ದಾನಮ್ಮ ಎಂಬ ಹೊಸ ನಾಮಕರಣ ಮಾಡಿದರೆಂದು ಹೇಳುತ್ತಾರೆ.

ದಾನಮ್ಮ ಬಂದು ಅನುಷ್ಠಾನ ಮಾಡಿಹೋದ ಸ್ಮಾರಕವಾಗಿ ನಾರಾಯಣಪುರದ ಆ ತೋಟವನ್ನು ದಾನಮ್ಮನ ತೋಟವೆಂದೇ ಕರೆಯುವ ವಾಡಿಕೆ ಇದೆ. ಮೊದಲು ಗೌರಿ ಹುಣ್ಣಿವೆಗೆ ಹೆಣ್ಣುಮಕ್ಕಳು ಅಲ್ಲಿಗೆ ಹೋಗುತ್ತಿದ್ದರು. ಈಗ ಯಾವ ಸಂಪ್ರದಾಯಗಳು ಉಳಿದಿಲ್ಲ. ಈಗ ತೋಟದ ಮಾಲಿಕರಾದ ಗುರಪ್ಪ ಮಲೋದೆ ಅವರು ಪೂರ್ವಭಾಗದಲ್ಲಿದ್ದ ದಾನಮ್ಮನ ಗುಡಿಯನ್ನು ಕೆಡವಿ ಒಂದು ಗಿಡದ ಕೆಳಗೆ ಕಟ್ಟೆಯನ್ನು ಕಟ್ಟಿ ಅಲ್ಲಿ ಲಿಂಗವಿಟ್ಟಿದ್ದಾರೆ. ಅದರ ಮೇಲೆ ಗುಡಿಯಲ್ಲಿದ್ದ ಲಿಂಗವನ್ನೇ ಪ್ರತಿಷ್ಠಾಪಿಸಿದ್ದಾರೆ.

ಮಾಹಿತಿ : ಸಿದ್ದಯ್ಯ ಸ್ವಾಮಿ, ಶಿವದೇವಾಲಯದ ಪೂಜಾರಿಗಳು.

***

## ನಾರಾಯಣಪುರ :

### ೭. ಹಾಲಬಸವನ ಗುಡಿ

ನಾರಾಯಣಪುರ ಬಸವಕಲ್ಯಾಣದ ನಡುವೆ ಒಂದು ಹಾಲಬಸವನ ಗುಡಿ ಇದೆ. ಇದಕ್ಕೆ ಹಾಲಬಸವ ಎಂದು ಹೆಸರು ಬರಲು ಒಂದು ವಿಶೇಷ ಕಾರಣವಿದೆ. ಒಬ್ಬ ಶಿವಶರಣೆ ಹಾಲು ಮಾರುವುದಕ್ಕಾಗಿ ನಾರಾಯಣಪುರ ಮತ್ತು ಬಸವಕಲ್ಯಾಣದ ನಡುವೆ ದಿನವೂ ಓಡಾಡುತ್ತಿದ್ದಳಂತೆ. ಒಂದು ದಿನ ಕಾಲು ಎಡವಿದ ಕಾರಣವಾಗಿ ತಲೆಯ ಮೇಲಿನ ಹಾಲಿನ ಬುಟ್ಟಿ ಕೆಳಗೆ ಬೀಳುವುದರಲ್ಲಿತ್ತು. ಹಾಲು ನೆಲದ ಪಾಲಾದರೆ ಅಂದು ಇಡೀ ದಿನ ಆಕೆಯ ಕಾಯಕಕ್ಕೆ ಪ್ರತಿಫಲ ಸಿಗುತ್ತಿರಲಿಲ್ಲ.




ಹಾಲಬಸವ




ಹಾಲಬಸವನ ಗುಡಿ

ಪ್ರತಿಫಲವಿಲ್ಲವೆಂದಾದ ಮೇಲೆ ಅಂದಿನ ಗುರುಲಿಂಗ ಜಂಗಮ ದಸೋಹಕ್ಕೆ ಚ್ಯುತಿ. ಅಲ್ಲದೆ ಅಂದು ಎಲ್ಲರೂ ಉಪವಾಸ.

ಆ ಶರಣೆ 'ತನ್ನ ಹಾಲಿನ ಬುಟ್ಟಿ ನೆಲಕ್ಕೆ ಬೀಳದಿರಲಿ ಬಸವಾ' ಎಂದು ಬಸವಣ್ಣನವರನ್ನು ಭಕ್ತಿಯಿಂದ ಪ್ರಾರ್ಥಿಸಿಕೊಂಡಳಂತೆ. ಬಸವಣ್ಣನವರು ಕೈ ಮೇಲೆತ್ತಿ ಆ ಬುಟ್ಟಿ ನೆಲಕ್ಕೆ ಬೀಳದಂತೆ ಎತ್ತಿ ಹಿಡಿದರೆಂಬ ನಂಬುಗೆ ಇದೆ. ಅದರ ಸ್ಮಾರಕವಾಗಿ ಅಲ್ಲಿ ಒಂದು ಹಾಲಬಸವನ ಗುಡಿ ನಿರ್ಮಾಣವಾಗಿದೆ. ಈ ಹಾಲಬಸವನ ಗುಡಿಗೆ ಜನ ಇಂದಿಗೂ ನಡೆದುಕೊಳ್ಳುತ್ತಾರೆ. ತಮ್ಮ ಕಷ್ಟಗಳನ್ನು ಪರಿಹರಿಸಲು ಪ್ರಾರ್ಥಿಸಿಕೊಳ್ಳುತ್ತಾರೆ. ಹಾಲಬಸವನ ಗುಡಿ ಜಾಗ್ರತಸ್ಥಾನ ಎಂದು ಜನಮನದಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.

**ಮಾಹಿತಿ :** ಶ್ರೀ ಸಿದ್ದಯ್ಯ ಬೂದಯ್ಯ ಪೂಜಾರಿ. ಶಿವಮಂದಿರ ಪೂಜಾರಿ.

***

## ಜಾತಿ ಸೂತಕವಿಲ್ಲ

ಜಾತಿ ಸೂತಕವಿಲ್ಲ ಮುಟ್ಟು ಮೈಲಿಗೆಯಿಲ್ಲ
ಮುಡಿಚಟ್ಟು ಮೊದಲಿಗೆ ಇಲ್ಲೆಂದನವ್ವಾ । ಬಸವಣ್ಣನವ್ವಾ ॥ ಪ ॥

ಲಿಂಗಪೂಜೆಯ ಮಾಡಿ ಸಂಗಮನೊಳು ಕೂಡಿ
ಸಂಗಸತ್ಪುರುಷರ ಮಾಡೆಂದನವ್ವಾ । ಬಸವಣ್ಣನವ್ವಾ ॥ ೧ ॥

ಬಸವನ ನೆನೆಯುತ ಭಸಿತವ ಧರಿಸಲು
ಕುಸುಮ ಶರ ಹರನು ಒಲಿಯುನವ್ವಾ । ಬಸವಣ್ಣನವ್ವಾ ॥ ೨ ॥

**ಬೀಳುವ ಗೊಲ್ಲತಿಯ ಹಾಲಿನ ಕೊಡವನು**
**ಮೇಲಕೆ ದೂರ ಹಿಡಿದಾನವ್ವಾ । ಬಸವಣ್ಣನವ್ವಾ** ॥ ೩ ॥

ಅಕ್ಕನಾಗಮ್ಮನ ಚೊಕ್ಕ ಚೆನ್ನಯ್ಯನ
ತಕ್ಕ ಮಹಿಮೆಯನು ತೋರಿದನವ್ವಾ । ಬಸವಣ್ಣನವ್ವಾ ॥ ೪ ॥

ಯಾರಿಗೂ ತಿಳಿಯದ ಮಾರವೈರಿಯ ಲಿಪಿಯ
ಬಿಜ್ಜಳನ ಸಭೆಯೊಳಗೋದಿದನವ್ವಾ । ಬಸವಣ್ಣನವ್ವಾ ॥ ೫ ॥

ಬರಡು ಆಕಳ ಹಾಲ ಕರೆದು ಜಂಗಮರಿಗುಣಿಸಿ
ಮೆರೆದಾನು ಕಲ್ಯಾಣ ಬಸವೇಶನವ್ವಾ । ಬಸವಣ್ಣನವ್ವಾ ॥ ೬ ॥

ಬಸವನ ನಡೆ ಚಂದ ಬಸವನ ನುಡಿ ಚಂದ
ಬಸವನ ನಾಡು ಬಲು ಚಂದನವ್ವಾ । ಬಸವಣ್ಣನವ್ವಾ ॥ ೭ ॥

ಬಸವ ನಾಮವೆ ಮಂತ್ರ ಬಸವ ನಾಮವೆ ತಂತ್ರ
ಬಸವನೇ ಸೂತ್ರ ಧಾರಕನವ್ವಾ । ಬಸವಣ್ಣನವ್ವಾ ॥ ೮ ॥

ಅಲ್ಲಮನ ಗುರುತವನೆಲ್ಲರಿಗೆ ಮಾಡಿಸಿ
ನಿಲ್ಲದೆ ಜಗವ ಸಲುಹಿದನವ್ವಾ । ಬಸವಣ್ಣನವ್ವಾ ॥ ೯ ॥

ದಿಟ್ಟ ಜಂಗಮಕೆಲ್ಲ ಪೆಟ್ಟಿಗೆ ಹಣವನು
ಕೊಟ್ಟು ಮತ್ತದರಷ್ಟು ತೋರಿಸಿದನವ್ವಾ ಬಸವಣ್ಣನವ್ವಾ ॥ ೧೦ ॥

ರಾಟಿ ನೂಲಲು ಬೇಕು ಬಟ್ಟೆ ನೇಯಲು ಬೇಕು
ಕೋಟಿ ಜನರನು ಸಲುಹೆಂದನವ್ವಾ ಬಸವಣ್ಣನವ್ವಾ ॥ ೧೧ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ಶರಣರ ಬಳಗವು ನಮ್ಮದವ್ವಾ ಬಸವಣ್ಣನವ್ವಾ ॥ ೧೨ ॥

ಕಾವಿಯ ಧರಿಸ್ಯಾರ ಕುದುರೆಯನೇರ್‍ಯಾರ
ಶರಣರು ಹೊರಟಾರ ಉಳವಿಗಿಯವ್ವಾ ಬಸವಣ್ಣನವ್ವಾ ॥ ೧೩ ॥

ಈ ಪದ ಹಾಡುವ ಆ ಪುಣ್ಯವಂತರನು
ಕಾಪಾಡುವವನು ಬಸವೇಶನವ್ವಾ ಬಸವಣ್ಣನವ್ವಾ ॥ ೧೪ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

## ಡ. ಉತ್ತರ ದಿಕ್ಕು :

# ಬೆಟ್ಟಬಲಕುಂದ ಗ್ರಾಮ
# ಬೆಟ್ಟ, ಬೆಟ್ಟದ ವಾರೆಗಳಲ್ಲಿರುವ ಶರಣಸ್ಮಾರಕಗಳು

ಬಸವಕಲ್ಯಾಣದ ಸುತ್ತಲಿರುವ ಶರಣರ ನೆಲೆಗಳನ್ನು ವಿಶೇಷವಾಗಿ ಗಮನಿಸಿದರೆ ಅಲ್ಲೆಲ್ಲ ಶರಣರು ಸಾಮೂಹಿಕವಾಗಿ ನೆಲಸಿದರೆಂದು ಅನಿಸುತ್ತದೆ. ತ್ರಿಪುರಾಂತ ಕೆರೆ, ಬಂದವರ ಓಣಿ, ನಾರಾಯಣಪುರ-ಶಿವಪುರ ಹಾಗೂ ಬೆಟ್ಟಬಲಕುಂದ; ಈ ಕೇಂದ್ರಗಳಲ್ಲಿ ಗುಂಪುಗುಂಪಾಗಿ ಶರಣರು ವಾಸವಾಗಿರಬಹುದಾದ ಕುರುಹುಗಳಿವೆ. ಬಸವಕಲ್ಯಾಣದಿಂದ ಕೇವಲ ಐದು ಕಿ.ಮೀ.ಅಂತರದಲ್ಲಿರುವ ಬೆಟ್ಟಬಲಕುಂದ ಗ್ರಾಮವಂತೂ ಶರಣರ ನೆಲೆಯಾಗಿ ತೀರ ವಿಶೇಷವೆನಿಸುತ್ತದೆ. ಈ ಗ್ರಾಮಕ್ಕೆ



ಬಸವಣ್ಣನ ಗುಡ್ಡದ ಮೇಲಿರುವ ಗಣಮೇಳ ಮೈದಾನ



ಬಸವಣ್ಣನ ಗುಡ್ಡದ ಗಣಮೇಳ ಮೈದಾನದಲ್ಲಿರುವ ಬಾಲಸಂಗಯ್ಯನ ಸಮಾಧಿ

ಹತ್ತಿಕೊಂಡಂತೆ ಬೆಟ್ಟಗಳ ಮಾಲೆಯೇ ಇದೆ. ಹೀಗಾಗಿಯೆ ಈ ಊರಿಗೆ **ಬೆಟ್ಟಬಲಕುಂದ** ಎಂಬ ಹೆಸರು ಬಂದಂತೆ ತೋರುತ್ತದೆ. ಸಾಲುಬೆಟ್ಟಗಳ ಪೂರ್ವದ ಒಂದು ತುದಿಯಲ್ಲಿ **ಬೆಟ್ಟಬಲಕುಂದ** ಗ್ರಾಮವಿದೆ. ಈ ಊರಿನ ಬೆಟ್ಟವೊಂದಕ್ಕೆ **ಬಸವಣ್ಣನ ಬೆಟ್ಟ** ಎಂದು ಕರೆಯುತ್ತಾರೆ. ಈ ಬೆಟ್ಟದ ಎದುರು ದಕ್ಷಿಣಕ್ಕೆ ಎರಡ್ಮೂರು ಕಿ.ಮೀ.ಅಂತರದಲ್ಲಿ ಮುಕರ ಬೆಟ್ಟ ಇದೆ. ಎಡಕ್ಕೆ ಬೀರಾದೇವರ ಗುಡ್ಡ ಇದೆ. ಅದರ ಪಕ್ಕಕ್ಕೆ ಮೌಲಾಲಿ ಗುಡ್ಡ ಇದೆ. ಹೀಗೆ ಇಡೀ ಪ್ರದೇಶ ಗುಡ್ಡಬೆಟ್ಟಗಳಿಂದ ಆವೃತವಾದ ಪ್ರದೇಶವಾಗಿದೆ.

### ಗಣಮೇಳ ಮೈದಾನ :

ಬಸವಣ್ಣನ ಬೆಟ್ಟದ ಮೇಲೆ ತುಂಬಾ ವಿಸ್ತಾರವಾದ ಸಮತಟ್ಟಾದ ನೆಲ ಇದೆ. ಕಲ್ಲಿನ ಪದರುಗಳಿಂದ ಈ ಗುಡ್ಡದ ಮೈದಾನ ಆವರಸಿಕೊಂಡಿದೆ. ಇದನ್ನು **ಗಣಮೇಳ ಮೈದಾನ** ಎಂದು ಕರೆಯಲಾಗುತ್ತದೆ. ಬಸವಣ್ಣನ ಬೆಟ್ಟದ ಮೇಲಿರುವ ಗಣಮೇಳ ಮೈದಾನವನ್ನು ಪರಿಶೀಲಿಸಿದರೆ ಅದೊಂದು ಶರಣರ ವಾಸಸ್ಥಾನವಾಗಿರುವ ಕುರುಹುಗಳು ಕಂಡುಬರುತ್ತವೆ. ಡೇರೆ ಹಾಕಿದ ಗುರುತುಗಳಂತೆ ೧ ರಿಂದ ಒಂದುವರಿ ಇಂಚು ಅಗಲದ ತೂತುಗಳಿವೆ. ಇವೆಲ್ಲವನ್ನು ಒಂದೊಂದು ಆಕಾರದಲ್ಲಿ ಇಟ್ಟುಕೊಂಡು ಕೊರೆಯಲಾಗಿದೆ. ನೀರು ಹರಿದ ದಾರಿಗಳ ಗುರುತುಗಳೂ ಕಾಣಸಿಗುತ್ತವೆ. ಈ ಮೈದಾನದಲ್ಲಿಯೇ ಒಂದುಕಡೆ ಕಲ್ಲುಗುಂಪಿನ ಮೇಲೆ ಪಾದಗಳ ಕೆತ್ತನೆವುಳ್ಳ ಒಂದು ಶಿಲ್ಪವಿದೆ. ಇದು ಬಸವಣ್ಣನವರ ಮಗ ಬಾಲಸಂಗಯ್ಯನ ಸಮಾಧಿ ಇರಬೇಕೆಂದು ಹೇಳುತ್ತ ಬರಲಾಗಿದೆ.



ಗಣಮೇಳ ಮೈದಾನದಲ್ಲಿ ಕಾಣಿಸುವ ಸಣ್ಣ ಸಣ್ಣ ತೂತುಗಳು



ಬಸವಣ್ಣನ ಗುಡ್ಡದ ಪಶ್ಚಿಮಕ್ಕಿರುವ ಖಪರಾಳ ಕೆರೆ

## ಖಪರಾಳ ಕೆರೆ :

ಶರಣರಿಗೆ ಬಳಸಲು ಮುಚಳಂಬ ಎಂಬ ಗ್ರಾಮದಿಂದ ಮುಚ್ಚಳಗಳು ಬರುತ್ತಿದ್ದವಂತೆ. ಅಂಬಲಿ ಕುಡಿಯಲು, ಪ್ರಸಾದ ಸೇವಿಸಲು ಬಳಸುವ ಈ ಮುಚ್ಚಳಗಳು ಒಡೆದಾಗ, ಮುಚ್ಚಳದ ಚೂರುಗಳನ್ನು ಬೆಟ್ಟದ ಪಶ್ಚಿಮಕ್ಕಿರುವ ಒಂದು ಕೆರೆಯಲ್ಲಿ ಚೆಲ್ಲುತ್ತಿದ್ದರಂತೆ. ಹೀಗಾಗಿ ಈ ಕೆರೆಗೆ **'ಖಪರಾಳ ಕೆರೆ'** ಎಂದು ಹೆಸರು ಬಂದಿತೆಂದು ಹೇಳಲಾಗುತ್ತದೆ. ಖಪರಾಳ ಎಂದರೆ ಮಣ್ಣಿನ ಮಡಕೆಯ ಒಡೆದ ಚೂರುಗಳು ಎಂದು ಅರ್ಥವಾಗುತ್ತದೆ. ೧೯೭೨ರಲ್ಲಿ ಆವರಿಸಿದ ಬರಗಾಲದಲ್ಲಿ ಈ ಖಪರಾಳ ಕೆರೆಯಲ್ಲಿ ಮಾತ್ರ ನೀರು ಇತ್ತಂತೆ. ಬಸವಕಲ್ಯಾಣ, ಗೌರ, ಬೇಲೂರು, ಬೆಟ್ಟಬಲಕುಂದಾ ಈ ಊರುಗಳ ದನಕರುಗಳು ಅಲ್ಲಿಗೆ ಬಂದು ನೀರು ಕುಡಿದು ಹೋಗುತ್ತಿದ್ದವಂತೆ.

## ಗಂಜಿಕೆರೆ :

ಬಸವಣ್ಣನ ಬೆಟ್ಟದ ಮೇಲೆ, ಬೆಟ್ಟದ ವಾರೆಗಳಲ್ಲಿ ವಾಸವಾಗಿರುವ ಶರಣರಿಗೆ ದಾಸೋಹದ ವ್ಯವಸ್ಥೆ ಬಸವಣ್ಣನ ಬೆಟ್ಟದ ಮೇಲೆ ಆಗುತ್ತಿತ್ತೆಂದು ತೋರುತ್ತದೆ. ಅಲ್ಲಿಯ ಅನ್ನ ಜಾನಿದ ಗಂಜಿ ಬೆಟ್ಟದಿಂದ ಹರಿದು ಕೆಳಗಿನ ಪ್ರದೇಶಕ್ಕೆ (ದಕ್ಷಿಣಕ್ಕೆ) ಹೋಗುತ್ತಿತ್ತೆಂದೂ ಅದಕ್ಕಾಗಿ ಅದನ್ನು ಗಂಜಿಕೆರೆ ಎನ್ನುತ್ತಿದ್ದರೆಂದೂ ಹೇಳಲಾಗುತ್ತದೆ.



ಗುಡ್ಡದ ಕೆಳಗಿರುವ ಗಂಜಿಕೆ ದೃಶ್ಯ

**'ಗಂಜಿಕೆರೆ'** ಎಂಬ ಹೆಸರು ಎರಡು ಕಡೆ ಬಳಕೆಯಾಗಿರುವುದು ಗಮನಕ್ಕೆ ಬರುತ್ತದೆ. ಒಂದು ಬಸವಣ್ಣನವರ ಅರಿವಿನ ಮನೆಯ ಮುಂದಿರುವ ವಿಶಾಲವಾದ ತೆಗ್ಗು ಪ್ರದೇಶವನ್ನು ಗಂಜಿಕೆರೆ ಎಂದು ಕರೆಯಲಾಗುತ್ತದೆ. ಮತ್ತು ಇಲ್ಲಿ ಗುಡ್ಡದ ವಾರಿಯಲ್ಲಿ ಉಂಟಾಗಿರುವ ತಗ್ಗು ಪ್ರದೇಶಕ್ಕೂ ಗಂಜಿಕೆರೆ ಎಂದೇ ಕರೆಯಲಾಗುತ್ತದೆ. ಆದರೆ ಈ ಎರಡೂ ಕಡೆ ಶರಣರ ದಂಡು ಪ್ರಸಾದ ಸೇವನೆ ಮಾಡುತ್ತಿತ್ತು ಎಂಬುದನ್ನು ಗಮನಿಸಬೇಕು. ಬಸವಣ್ಣನವರ ಮಹಾಮನೆಯಲ್ಲಂತೂ ನಿರಂತರವಾಗಿ ದಾಸೋಹ ನಡೆದಿರುವುದು ಸತ್ಯ ಸಂಗತಿ. ಇಲ್ಲಿ ಬೆಟ್ಟಬಲಕುಂದ ಬೆಟ್ಟದ ಮೇಲಿನ ಮೈದಾನದಲ್ಲಿ, ಮತ್ತು ಬೆಟ್ಟಗಳ ವಾರಿಗಳಲ್ಲಿರುವ ಗವಿಗಳಲ್ಲಿ ಶರಣರು ವಾಸವಾಗಿರುವ ಖಚಿತ ಗುರುತುಗಳು, ಗವಿಗಳು ಇರುವುದರಿಂದ, ಮತ್ತು ಇಲ್ಲಿಯೂ ಬಸವಣ್ಣನವರ ಹೆಸರಿಗೆ ಒಂದು ದೊಡ್ಡ ಗವಿ ಇರುವುದರಿಂದ ಇಲ್ಲೂ ದಾಸೋಹದ ವ್ಯವಸ್ಥೆ ಇರಲು ಸಾಧ್ಯವಿದೆ. ಹೀಗೆ ಎರಡೂ ಕಡೆ ದಾಸೋಹದ ಕೇಂದ್ರಗಳು ಇರುವುದರಿಂದ ಈ ದಾಸೋಹದ ಕೇಂದ್ರಗಳಿಗೆ ಆಗ ಗಂಜಿಕೇಂದ್ರಗಳೆಂದು ಕರೆಯುವ ವಾಡಿಕೆ ಇದ್ದಿರಬಹುದಾಗಿದೆ. ಈ ಗಂಜೀಕೇಂದ್ರಗಳೇ ಗಂಜಿಕೆರೆಗಳೆಂದು ಜನರ ಬಾಯಿಯಲ್ಲಿ ಉಳಿದುಕೊಂಡು ಬಂದಿರುವ ಸಾಧ್ಯತೆ ಇದೆ. ಅಥವಾ ಕೆರೆಯ ದಡದಲ್ಲಿ ಈ ಗಂಜೀಕೇಂದ್ರಗಳು ಕೆಲಸ ಮಾಡಿರುವುದರಿಂದ ಈ ಕೆರೆಗಳಿಗೆ ಗಂಜಿಕೆರೆಗಳೆಂದು ಹೆಸರು ಬಂದಿರಲೂ ಬಹುದಾಗಿದೆ.



ಸುತ್ತಲೂ ಬೆಟ್ಟ ಸುತ್ತಿಕೊಂಡಿರುವ ಕೆರೆಯ ಮೈದಾನ, ಬಾವಿ



ಬಸವಣ್ಣನ ಗುಡ್ಡದ ವಾರೆಯಲ್ಲಿರುವ ಬಸವನ ಗವಿ



ಗವಿಯ ಒಂದು ಭಾಗದ ಒಳ ದೃಶ್ಯ

## ಪೂಜಾ ಬಾವಿ :

ಬಸವಣ್ಣನ ಬೆಟ್ಟವು ಬೆಟ್ಟಬಲಕುಂದ ಊರೆಡೆ ಇಂಗ್ಲೀಷ ಯು ಆಕಾರದಲ್ಲಿ ಹಬ್ಬಿಕೊಂಡಿದ್ದು, ದಕ್ಷಿಣಕ್ಕೆ ಮಾತ್ರ ಬೆಟ್ಟದ ಸಾಲು ಇಲ್ಲ. ಈ ಬೆಟ್ಟದ ಸಾಲಿನ ನಡುವೆ ಬಟ್ಟಲಾಕಾರದ ವಿಶಾಲವಾದ ತಗ್ಗು ಪ್ರದೇಶವಿದೆ. ಸುತ್ತಲೂ ಬೆಟ್ಟ ಹಬ್ಬಿಕೊಂಡಿದೆ. ಮಳೆಬಂದರೆ ಸುತ್ತಲಿರುವ ಬೆಟ್ಟದ ಮಗ್ಗಲುಗಳಿಂದ ಹರಿದು ಬರುವ ನೀರು ಇಲ್ಲಿಯೇ ಕೂಡಿ, ಮುಂದೆ ದಕ್ಷಿಣಕ್ಕೆ ಇರುವ ಒಂದೇ ಮಾರ್ಗದಿಂದ ಕಡೆಗಾಗುತ್ತದೆ. ೧೨ನೇ ಶತಮಾನದಲ್ಲಿ ಬಹುಶಃ ಇಲ್ಲಿ ನೀರು ಸಂಗ್ರಹವಾಗಿ ನಿಲ್ಲುತ್ತಿದ್ದಿರಬೇಕು. ಅದಕ್ಕಾಗಿಯೆ ಇದನ್ನು ಕೆರೆ ಎಂದು ಕರೆದಂತೆ ತೋರುತ್ತದೆ. ಈಗಲೂ ನೋಡಿದರೆ ದೃಶ್ಯ ಹಾಗೆಯೇ ಇದೆ. ಗುಡ್ಡದ ಹೊಟ್ಟೆಯಲ್ಲಿ, ಕೆರೆಯ ಅಂಗಳದಲ್ಲಿ ಒಂದು ಬಾವಿ ಇದೆ. ಬಹುಶಃ ಈ ಬಾವಿಯ ನೀರು ಕುಡಿಯಲು ಬಳಸುತ್ತಿದ್ದರೆಂದು ತೋರುತ್ತದೆ. ಬಸವಣ್ಣನವರು ಪೂಜೆಗಾಗಿ ಈ ಬಾವಿಯ ನೀರನ್ನು ಬಳಸುತ್ತಿದ್ದರೆಂದು ಹೇಳಲಾಗುತ್ತದೆ.



ಹಡಪದರ ಮನೆಯಲ್ಲಿರುವ ಹಡಪದ ಅಪ್ಪಣ್ಣನವರ ದೀವಟಿಗೆ

**ಬಸವಣ್ಣನ ಗವಿ :**

ಬೆಟ್ಟದ ನಡುವೆ ದಕ್ಷಿಣಕ್ಕೆ ಮುಖಮಾಡಿ, ಒಂದು ದೊಡ್ಡ ಗವಿ ಇದೆ. ಇದನ್ನು **ಬಸವಣ್ಣನ ಗವಿ** ಎಂದು ಕರೆಯಲಾಗುತ್ತದೆ. ಈ ಗವಿಯ ಎದುರಿಗೇ ಬೆಟ್ಟದ ಕೆಳಗೆ ಗಂಜಿಕರೆ ಇದೆ. ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಹಡಪದ ಅಪ್ಪಣ್ಣ ಇವರ ಹೆಸರಿನ ಗವಿಗಳೂ ಇವೆ. ಮತ್ತೆ ಗಂಜಿಕೆರೆಯ ಸುತ್ತಲೂ ಬೆಟ್ಟದ ಹೊಟ್ಟೆಯಲ್ಲಿ ಅನೇಕ ಗವಿಗಳಿರುವ ಕುರುಹುಗಳು ಕಾಣುತ್ತವೆ. ನಡುವೆ ವಿಶಾಲವಾದ ಕೆರೆ, ಸುತ್ತಲೂ ಆವರಿಸಿಕೊಂಡಿರುವ ಬೆಟ್ಟ, ಬೆಟ್ಟದ ಹೊಟ್ಟೆಯಲ್ಲಿರುವ ' ಗವಿಗಳು, ಇವೆಲ್ಲವನ್ನು ನೋಡಿದರೆ ಇದೊಂದು ಶರಣರ ದೊಡ್ಡ ನೆಲೆಯೇ ಆಗಿರುವ ಸಾಧ್ಯತೆ ಹೆಚ್ಚುತ್ತದೆ. ಗಿಡಗಂಟೆಗಳು ಆವರಿಸಿದ್ದು, ಶೋಧ ನಡೆದರೆ ಇಲ್ಲಿ ಇನ್ನೂ ಹೆಚ್ಚಿನ ಗವಿಗಳನ್ನು ಗುರುತಿಸಬಹುದಾಗಿದೆ.

**ಹಡಪದ ಅಪ್ಪಣ್ಣನವರ ದೀವಟಿಗೆ :**

ಬೆಟ್ಟಬಲಕುಂದ ಗ್ರಾಮದಲ್ಲಿ ಒಂದು ಬಸವಣ್ಣನವರ ಗುಡಿ ಇದೆ. ಶ್ರಾವಣಮಾಸದಲ್ಲಿ ಬಸವಣ್ಣನ ಜಾತ್ರೆ, ಪಲ್ಲಕ್ಕಿ ಉತ್ಸವ, ಖಾಂಡ ನಡೆಯುತ್ತವೆ. ಈ ಊರಿನ ಇಂಥ ಮಹತ್ವದ ಧಾರ್ಮಿಕಾಚರಣೆಯ ಕಾರ್ಯಕ್ರಮಗಳಲ್ಲಿ ಪುರವಂತಿಕೆ ಇಲ್ಲದಿದ್ದರೂ ನಡೆಯುತ್ತದೆ, ಆದರೆ ದೀವಟಿಗೆ ಇಲ್ಲದಿದ್ದರೆ ನಡೆಯುವುದಿಲ್ಲ.



ಬಸವೇಶ್ವರ ದೇವಸ್ಥಾನದ ಹೊರ ಮಂಟಪ



ಗರ್ಭಗೃಹದಲ್ಲಿರುವ ನಂದಿ

ಇದಕ್ಕೊಂದು ಬಲವಾದ ನಂಬಿಗೆ ಇದೆ. ಜಗದೇವ ಮಲ್ಲಿಬೊಮ್ಮರು ಕಲ್ಯಾಣ ಕ್ರಾಂತಿಸಂದರ್ಭದಲ್ಲಿ ಬಸವಣ್ಣನವರನ್ನು ರಾತ್ರಿ ದೀವಟಿಗೆ ಬೆಳಕಿನಲ್ಲಿ ಬೆಟ್ಟಬಲಕುಂದಕ್ಕೆ ಕರೆದುಕೊಂಡುಬಂದು ಬಿಟ್ಟು ಹೋದರೆಂದೂ ಹಡಪದ ಅಪ್ಪಣ್ಣನವರು ಬಸವಣ್ಣನವರ ಆಪ್ತ ಸಹಾಯಕರಾಗಿರುವುದದರಿಂದ ದೀವಟಿಗೆ ಹಿಡಿದು ಸ್ವಾಗತಿಸಿದರೆಂದೂ ನಂಬುಗೆ ಇದೆ. ಹೀಗಾಗಿ ಈ ಊರಿನಲ್ಲಿ ಶರಣರಿಗೆ ಸಂಬಂಧಪಟ್ಟ ಯಾವುದೇ ಉತ್ಸವಗಳು ನಡೆದರೂ ಇಂದಿಗೂ ದೀವಟಿಗೆಯನ್ನು ಹೊತ್ತಿಸಿ ಆ ಉತ್ಸವದಲ್ಲಿ ಹಿಡಿದಿರಲಾಗುತ್ತದೆ.

ಬೆಟ್ಟಬಲಕುಂದದಲ್ಲಿರುವ ಹಡಪದ ಸಮಾಜಕ್ಕೆ ಸೇರಿದ ಒಂದು ಮನೆಯಲ್ಲಿ ಈ ದೀವಟಿಗೆ ಹಿಡಿಯುವ ಚಾಜ ಇವತ್ತಿಗೂ ಇದೆ. ಇವರ ಮನೆಯಲ್ಲಿ ಚಂದನದ ಕಟ್ಟಿಗೆಯ ಒಂದು ದೀವಟಿಗೆ ಇದೆ. ದೀವಟಿಗೆಗೆ ಎಣ್ಣೆ ಹಾಕಿಡುವ ಒಂದು ವಿಶೇಷ ಪಾತ್ರೆಯೂ ಇದೆ. ಇವು ಹಡಪದ ಅಪ್ಪಣ್ಣನವರು ಬಳಸಿದ ದೀವಟಿಗೆ ಎಂದು ಹೇಳಲಾಗುತ್ತದೆ. ಆ ಮನೆತನದ ಹಿರಿಯ ಯಜಮಾನಿ ರತ್ನಮ್ಮ ರಾಚಪ್ಪ ಹಡಪದ ಎಂಬುವವರು ತಾವು ಅಪ್ಪಣ್ಣನವರ ಮನೆತನಕ್ಕೆ ಸಂಬಂದಿಸಿದವರು ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ಮನೆತನ ಲಿಂಗಾಯತ ಹಡಪದ ಮನೆತನವಾಗಿದೆ.

ರತ್ನಮ್ಮ ಹೇಳುತ್ತಾಳೆ– ಭದ್ರಪ್ಪ, ನರಸಪ್ಪ, ರಾಚಪ್ಪ, ಶರಣಪ್ಪ, ನಾಗನಾಥರು ಈ ದೀವಟಿಗೆ ಹಿಡಿಯುವ ಚಾಜದವರು. ಸ್ನಾನ ಪೂಜೆ ಮಾಡಿ ಹಜಾಮತಿ ಕಾಯಕ ಮಾಡುತ್ತಾರೆ. ಕಾಯಕ ಮುಗಿಸಿಕೊಂಡು ಮತ್ತೆ ಸ್ನಾನ ಮಾಡುತ್ತಾರೆ. ನಂತರ ಕ್ಷೌರದ ಹಡಪವನ್ನು ಅವರು ಮುಟ್ಟುವುದಿಲ್ಲ. ಮತ್ತೆ ಮುಂಜಾನೆ ಮಡಿಯಿಂದಲೇ ಅವುಗಳನ್ನು ಮುಟ್ಟುವುದು. ಹಡಪದಪ್ಪಣ್ಣ ಅವರ ದೀವಟಿಗೆಯಿಂದ ರತ್ನಮ್ಮ ಅವರ ಮನೆಗೆ ಒಂದು ವಿಶೇಷವಿದೆ. ಈ ಮನೆ ಬೆಟ್ಟಬಲಕುಂದಾದ ಕೆಳಗಿನ ಓಣಿಯಲ್ಲಿದೆ.

ಮಾಹಿತಿ : ಶ್ರೀ ಜಯಪ್ರಕಾಶ ಸದಾನಂದ

***



ಹಡಪದ ಅಪ್ಪಣ್ಣನವರ ಗವಿ ಎಂದು ಗುರುತಿಸಲಾಗಿದೆ



ಗಂಜಿಕೆರೆಯ ಸುತ್ತಲು ಹಬ್ಬಿಕೊಂಡಿರುವ ಬೆಟ್ಟದಲ್ಲಿ
ಇಂತಹ ಅನೇಕ ಗವಿಗಳು ಕಾಣಿಸುತ್ತವೆ

# ೩

# ಅನುಭವ ಮಂಟಪದ ಸುಳುಹು ಕೊಡುವ ಹಂದ್ರಾಳದಿಂದ ಚಿಟಗುಪ್ಪವರೆಗೆ ಇರುವ ಶರಣಸ್ಮಾರಕಗಳು

ಬಸಕಲ್ಯಾಣದ ಮುಖ್ಯದ್ವಾರದ ಎದುರಿಗೆ ಇರುವುದು ರಾಷ್ಟ್ರಿಯ ಹೆದ್ದಾರಿ ನಂ. ೯. ಶರಣರ ಬದುಕು ಹೇಗಿತ್ತು ಎಂದು ತಿಳಿದುಕೊಳ್ಳಲು ಈ ಹೆದ್ದಾರಿಯ ಗುಂಟ, ಪಶ್ಚಿಮದಿಂದ ಪೂರ್ವಕ್ಕೆ ಸ್ವಲ್ಪ ಆಚೆ ಈಚೆ ಇರುವ ಗ್ರಾಮಗಳಲ್ಲಿರುವ ಶರಣ ಸ್ಮಾರಕಗಳು ನಮಗೆ ಸಹಾಯ ಮಾಡುತ್ತವೆ. ಚಿಟ್ಟಾ (ಕೆ), ಹಳ್ಳಿ, ಮಂಠಾಳ, ಇಲ್ಯಾಳ, ಚಂಡಕಾಪುರ, ಹಂದ್ರಾಳ, ರಾಜೇಶ್ವರ, ಮೋಳ್ಕೇರಾ, ಗಡವಂತಿ, ಹುಮ್ನಾಬಾದಿಂದ ಬಲಗಡೆ ಕಲಬುರ್ಗಿ ದಾರಿಯಲ್ಲಿ ಹಳ್ಳಿಖೇಡ, ಹುಮ್ನಾಬಾದ ಪಟ್ಟದಿಂದ ದಕ್ಷಿಣಕ್ಕೆ ಬಸವ ತೀರ್ಥ, ಮತ್ತೆ ಹುಮ್ನಾಬಾದಿಂದ ಮುಂದೆ ಎಡಕ್ಕೆ ಹೋದರೆ ರೇಕುಳಕಿ, ಹುಮ್ನಾಬಾದ ದಾಟಿ ಮುಖ್ಯ ರಸ್ತೆಯಿಂದ ಬಲಗಡೆ ತಿರುಗಿ ಹೋದರೆ ಚಿಟಗುಪ್ಪ ಹೀಗೆ ಶರಣ ಸ್ಮಾರಕಗಳುಳ್ಳ ಊರುಗಳು ಒಂದೇ ರಸ್ತೆಯಗುಂಟ ಇರುವುದು ಅಭ್ಯಾಸಯೋಗ್ಯವಾಗಿದೆ. ಬಸವ ಕಲ್ಯಾಣದಿಂದ ಹುಮ್ನಾಬಾದ ನಗರದವರೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿಗುಂಟ ಸಾಲಾಗಿ ಇರುವ ಊರುಗಳು ಇವು. ಚಿಟ್ಟಾ (ಕೆ) ಗ್ರಾಮದಿಂದ ಪ್ರಾರಂಭವಾಗಿ, ಹುಮ್ನಾಬಾದದಿಂದ ಸ್ವಲ್ಪ ಮುಂದೆ ೧೫ ಕಿ.ಮಿ. ದೂರದಲ್ಲಿ ಇರುವ ಚಿಟಗುಪ್ಪ ಗ್ರಾಮದಲ್ಲಿರುವ ಗವಿಗಳು ಈ ಕ್ರಮದಲ್ಲಿ ಕೊನೆಯವು.

ಈ ರಸ್ತೆಯಗುಂಟ ಇರುವ ಹಳ್ಳಿಗಳನ್ನು ಅಲ್ಲಿರುವ ಸ್ಮಾರಕಗಳನ್ನು ಗಮನಿಸಿ ಎರಡು ಗುಂಪುಗಳನ್ನಾಗಿ ಮಾಡಿಕೊಳ್ಳಬಹುದಾಗಿದೆ. ಇವತ್ತಿಗೂ ಸುಸ್ಥಿತಿಯಲ್ಲಿರುವ ಶರಣರ ದೊಡ್ಡಗವಿಗಳಿರುವ ಊರುಗಳ ಒಂದು ಗುಂಪನ್ನು ನಾವು ಗುರುತಿಸಬಹುದಾಗಿದೆ. ಇದರಲ್ಲಿ ಕ್ರಮವಾಗಿ ಹಂದ್ರಾಳ, ರಾಜೇಶ್ವರ, ಮೋಳ್ಕೇರಾ, ಗಡವಂತಿ, ಚಿಟಗುಪ್ಪ ಮತ್ತು ಕೊನೆಯಲ್ಲಿ ಬೆಮಳಖೇಡ ಗ್ರಾಮವಿದೆ. ಈ ಆರು ಗ್ರಾಮಗಳಲ್ಲಿ ಈಗಲೂ ಸುಸ್ಥಿತಿಯಲ್ಲಿ ಇರುವ ಶರಣರ ವಿಸ್ತಾರವಾದ ಗವಿಗಳು, ನಮಗೆ ಶರಣರನ್ನು ಕುರಿತು ನಾನಾ ಬಗೆಯಲ್ಲಿ ಯೋಚಿಸಲು ಹಚ್ಚುತ್ತವೆ. ಇವು ಶರಣರ ಬದುಕಿನ ಬಗೆಗೆ ಅಭ್ಯಾಸ ಮಾಡಲು ಅನುಕೂಲವಾಗುವ ಅನೇಕ ಸೂಚನೆಗಳನ್ನು ತಮ್ಮ ಒಡಲಲ್ಲಿ ಹುದುಗಿಸಿಕೊಂಡಿವೆ.

ಬಸವಕಲ್ಯಾಣದಿಂದ ೧೨ ಕಿ.ಮೀ. ಅಂತರದಲ್ಲಿ ಇರುವ ಹಂದ್ರಾಳದಿಂದ ಹುಮ್ನಾಬಾದ ಕಡೆಗೆ ಹೊರಟರೆ, ಅಂದರೆ ಪೂರ್ವಕ್ಕೆ ಹೊರಟರೆ ಗವಿಗಳಿರುವ ಊರುಗಳು ಒಂದಾದ ನಂತರ ಒಂದರಂತೆ ಹತ್ತುತ್ತವೆ. ಹಂದ್ರಾಳ ನಂತರ ರಾಜೇಶ್ವರ, ಮೋಳ್ಕೇರಾ ಎರಡೂ ಊರೂಗಳು ರಾಷ್ಟ್ರೀಯ ಹೆದ್ದಾರಿ ಮೇಲೆಯೇ ಇವೆ. ನಂತರ ದೊರೆಯುವ ಊರು ಗಡವಂತಿ. ರಾಷ್ಟ್ರೀಯ ಹೆದ್ದಾರಿಯಿಂದ ಎಡಗಡೆ ಕೇವಲ ಎರಡು ಕಿ.ಮೀ. ಒಳಗಡೆ ಇದೆ. ನಂತರ ನಾವು ಇಂತಹ ಗವಿ ನೋಡಬೇಕೆಂದರೆ, ಹುಮ್ನಾಬಾದ ದಾಟಿ, ಮುಂದೆ ಬಲಗಡೆ ತಿರುಗಿ ಹೋದರೆ ಚಿಟಗುಪ್ಪ ಎಂಬ ಅತ್ಯಂತ ಪ್ರಾಚೀನ ಊರು ದೊರೆಯುತ್ತದೆ. ಇದು ರಾಷ್ಟ್ರೀಯ ಹೆದ್ದಾರಿಯಿಂದ ಬಲಗಡೆ ಸ್ವಲ್ಪ ಒಳಗಡೆ ಇದೆ. ಹುಮ್ನಾಬಾದದಿಂದ ೧೫ ಕಿ.ಮೀ. ಅಂತರದಲ್ಲಿದೆ. ಬಸವಕಲ್ಯಾಣದಿಂದ ಸುಮಾರು ೪೦ ಕಿ.ಮೀ. ದೂರದಲ್ಲಿದೆ. ಅಲ್ಲಿಂದ ಮತ್ತೆ ಮುಂದೆ ೨೫ ಕಿ.ಮೀ. ದೂರದಲ್ಲಿ ಬೆಮಳಖೇಡ ಗ್ರಾಮವಿದೆ. ಅಲ್ಲಿಗೆ ಈ ದೊಡ್ಡ ಗವಿಗಳ ಸಾಲು ಮುಕ್ತಾಯವಾಗುತ್ತದೆ. ಅಂದರೆ ಹಂದ್ರಾಳದಿಂದ ಸುಮಾರು ೩೦ ಕಿ.ಮೀ. ಅಂತರದಲ್ಲಿ ಈ ಗವಿಗಳ ಸಾಲು ಇದೆ. ಹುಮ್ನಾಬಾದದಿಂದ ಪಶ್ಚಿಮಕ್ಕೆ ಬಸವಕಲ್ಯಾಣಕ್ಕೆ ಹೊರಡುವ ರಸ್ತೆಗುಂಟ ೧೫ ಕಿ.ಮೀ.ಅಂತರದಲ್ಲಿ ನಾಲ್ಕು ಗವಿಗಳಿರುವ ಊರುಗಳು, ಮತ್ತೆ ಹುಮ್ನಾಬಾದಿಂದ ಪೂರ್ವಕ್ಕೆ ೧೫ ಕಿ.ಮೀ.ಅಂತರದಲ್ಲಿ ಚಿಟುಗುಪ್ಪ ಒಂದು ಗ್ರಾಮಮಾತ್ರ ಗವಿ ಇರುವ ಊರು ಆಗಿದೆ.

ಈ ಗವಿಗಳ ವಿಶೇಷತೆ ಎಂದರೆ, ಇವೆಲ್ಲ ಕನಿಷ್ಠವೆಂದರೆ ೪೦ ಅಡಿ ಅಗಲ ಮತ್ತು ೬೦ ಅಡಿ ಉದ್ದ ಈ ಅಳತೆಯನ್ನು ಹೊಂದಿರುವುದು. ಅಂದರೆ ಈ ಗವಿಗಳ ವಿಸ್ತಾರದಲ್ಲಿ ಸುಮಾರು ಹತ್ತಿಪ್ಪತ್ತು ಜನ ಸಹಜವಾಗಿ ವಾಸವಾಗಿರಬಹುದಾಗಿದೆ. ಶರಣರು ಸಾಮೂಹಿಕ ಪೂಜೆ ಮಾಡಿಕೊಳ್ಳುತ್ತಿದ್ದರು ಎಂಬುದಕ್ಕೆ ಅಲ್ಲೆಲ್ಲ ಇರುವ ಪ್ರತ್ಯೇಕ ಕಮಾನುಗಳಾಕಾರದ ರಚನೆಗಳನ್ನು ಗೋಡೆಗಳಲ್ಲಿರುವುದನ್ನು ಗಮನಿಸಬಹುದು. ಅಂದರೆ ಒಂದೇ ವೇಳೆಗೆ ಹತ್ತಿಪ್ಪತ್ತು ಜನ ಶರಣರು ಪೂಜೆಗೆ ಕುಳಿತುಕೊಳ್ಳಬಹುದಾದ ವ್ಯವಸ್ಥೆ ಈ ಗವಿಗಳಲ್ಲಿ ಕಾಣುತ್ತದೆ. ಪ್ರತಿ ಗವಿಯಲ್ಲಿ ಗರ್ಭಗೃಹಗಳಿದ್ದು, ಅಲ್ಲಿ ಶಿವಲಿಂಗಗಳಿವೆ. ಕುಡಿಯಲು, ಬಳಸಲು ಬೇಕಾದ ನೀರಿನ ವ್ಯವಸ್ಥೆಗಾಗಿ ಪ್ರತಿ ಗವಿಯ ಒಳಗೆ ಅಥವಾ ಗವಿಯ ಮುಂದೆ ನೀರಿನ ಬಾವಿಗಳಿರುವುದು ಸಾಮಾನ್ಯ. ಸ್ನಾನ ಮಾಡಲು ಅನುಕೂಲ ಸ್ಥಳವಿದೆ.

ಇದನ್ನು ಗಮನಿಸಿದರೆ, ಶರಣರು ಸಾಮೂಹಿಕವಾಗಿ ಜೀವನ ಸಾಗಿಸುತ್ತ, ಅನುಭಾವ ಹಂಚಿಕೊಳ್ಳಲು ಅನುವು ಮಾಡಿಕೊಡುವ ಸ್ಥಳಗಳು ಈ ಗವಿಗಳಾಗಿದ್ದವು ಎನಿಸುತ್ತದೆ. ಈ ಅನುಭಾವದ ವಿನಿಮಯ ರೂಪವೇ ಅನುಭವ ಮಂಟಪದ ಕಲ್ಪನೆ ಕೊಡುತ್ತದೆ. ಹೀಗಾಗಿ ಗುಂಪಾಗಿ ಜೀವಿಸುತ್ತ ಅನುಭವಗಳನ್ನು ಹಂಚಿಕೊಳ್ಳುತ್ತ, ಚರ್ಚಿಸುತ್ತ ಇರುವ ಶರಣರು ವಿಶೇಷ ಸಂದರ್ಭಗಳಲ್ಲಿ ಒಂದೆಡೆ ಸೇರುವ ಪರಿಪಾಠವೂ ಇರಬೇಕು. ಆದರೆ ಕಲ್ಯಾಣದಲ್ಲಿ ಇಂತಹ ಒಂದೂ ಸ್ಥಳ ನಮಗೀಗ ದೊರೆಯುವುದಿಲ್ಲ. ಇದ್ದರೆ ಪೀರಪಾಶಾ ಬಂಗಲಾ ಆಗಿರಬಹುದಾಗಿದೆ.

ಶರಣರು ಸಾಮೂಹಿಕವಾಗಿ ಇರುತ್ತಿದ್ದರು, ಅವರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು, ಹೀಗೆ ಹಂಚಿಕೊಂಡ ಅನುಭವಳನ್ನೇ ವಚನಗಳ ರೂಪದಲ್ಲಿ ಬರೆಯುತ್ತಿದ್ದರು ಎಂದು ಮುಂತಾಗಿ ಹೇಳಲಾಗುತ್ತದೆ. ಅವರು ಗುಂಪಾಗಿ ಇದ್ದುದು ಚರ್ಚೆ ಮಾಡಿದುದು ಅನುಭವ ಮಂಟಪದ ಕಲ್ಪನೆ ಕೊಡುವ ಸಂಗತಿಗಳಾಗುತ್ತವೆ. ಈ ಗ್ರಾಮಗಳಲ್ಲಿರುವ ಗವಿಗಳು ಅನುಭವ ಮಂಟಪದ ಕಲ್ಪನೆಯನ್ನು ಕೊಡುವ ಸಾಮರ್ಥ್ಯವನ್ನು ಹೊಂದಿವೆ. ಅದಕ್ಕಾಗಿ ಇವುಗಳ ಗುಂಪು ಒಂದು ಅಧ್ಯಯನಕ್ಕೆ ಅನುಕೂಲ ಮಾಡಿಕೊಡುತ್ತದೆ.

ಈಗ ಈ ಊರುಗವಿಗಳೆಲ್ಲ ಕೊಡುವ ಕಲ್ಪನೆಯ ಹಿನ್ನೆಲೆಯಲ್ಲಿ ಶರಣರ ಮುಖ್ಯ ಚಟುವಟಿಕೆಗಳು ಬಸವಕಲ್ಯಾಣ ಪಟ್ಟಣದಲ್ಲಿ ಇರದೆ, ಬಸವಕಲ್ಯಾಣದ ಹೊರವಲಯದಲ್ಲಿ ನಡೆಯುತ್ತಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ **'ಅನುಭವ ಮಂಟಪ'** ಕಟ್ಟಡ ಕಲ್ಯಾಣದಲ್ಲಿ ಇತ್ತು ಎಂಬುದಕ್ಕೆ ನಮಗೆ ಇಂದು ಸಾಕ್ಷಿಗಳು ಉಳಿದಿಲ್ಲ. ಆದರೆ ಈ ಗವಿಗಳು ಅನುಭವ ಮಂಟಪ ಅಸ್ತಿತ್ವದಲ್ಲಿ ಇತ್ತು ಎಂಬುದಕ್ಕೆ ಸ್ಪಷ್ಟವಾಗಿ ಸೂಚನೆಗಳನ್ನು ಒದಗಿಸುತ್ತವೆ. ಅದರ ಸ್ವರೂಪ ಹೇಗಿತ್ತು, ಚರ್ಚೆ ಹೇಗೆ ನಡೆಯುತ್ತಿತ್ತು ಎಂಬುದಕ್ಕೆ ಈ ಗವಿಗಳು ನಮಗೆ ಖಂಡಿತ ಒಂದು ಕಲ್ಪನೆಯನ್ನು ಕಟ್ಟಿಕೊಡುತ್ತವೆ.

ಗವಿಗಳಿರುವ ಊರುಗಳ ಶರಣರ ಗುಂಪುಗಳು ಒಂದುಬಗೆಯಾದರೆ, ಅನುಭವ ಮಂಟಪದಲ್ಲಿ ಪಾಲ್ಗೊಳ್ಳಲು ಹೋಗುವ ಶರಣರು ಕೂಡ ಗುಂಪಾಗಿ ವಾಸಿಸಿರಲು ಸಾಧ್ಯವಿದೆ. ಗವಿಗಳಲ್ಲಿ ಶರಣರು ಚರ್ಚೆಗಾಗಿ ಸೇರುತ್ತಿದ್ದರು ಎಂದು ಭಾವಿಸಿಕೊಳ್ಳಲು ಅದೇ ರಾಷ್ಟ್ರೀಯ ಹೆದ್ದಾರಿಗುಂಟ, ಸ್ವಲ್ಪ ಆಚೆ ಈಚೆ ಇರುವ ಊರುಗಳಲ್ಲಿ ಶರಣರು ವಾಸವಾಗಿದ್ದರು ಎಂಬುದಕ್ಕೆ ಇಂದು ಆ ಊರುಗಳಲ್ಲಿ ಉಳಿದು ಬಂದಿರುವ ಶರಣ ಸ್ಮಾರಕಗಳು ಸಾಕ್ಷಿಯಾಗಿವೆ.

ಹೀಗೆ ಒಂದೇ ದಾರಿಯ ಗುಂಟ ಇಷ್ಟೊಂದು ಊರುಗಳಲ್ಲಿ ಶರಣ ಸ್ಮಾರಕಗಳಿರುವುದು, ಶರಣರೆಲ್ಲ ಒಟ್ಟಾಗಿ ಅನುಭಾವದ ಚರ್ಚೆಗಳಲ್ಲಿ ಕಾಲಕಳೆಯುತ್ತಿದ್ದರು ಎಂಬುದನ್ನು ಗ್ರಹಿಸಿಕೊಳ್ಳಲು ನಮಗೆ ಸಾಧ್ಯವಿದೆ. ಇದನ್ನು ಬಿಟ್ಟರೆ ಇದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಶರಣರೆಲ್ಲ ವಾಸವಾಗಿರುವ ಸ್ಥಳಗಳ ಬಗ್ಗೆ ನಾವಿಲ್ಲಿಯೆ ಒಂದಿಷ್ಟು ಗಮನ ಹರಿಸಬಹುದಾಗಿದೆ. ಅವೆಂದರೆ ಕಲ್ಯಾಣದ ಸುತ್ತಲಿರುವ ತ್ರಿಪುರಾಂತ ಕೆರೆಯ ಸುತ್ತಮುತ್ತ, ಬೆಟ್ಟಬಲಕುಂದದ ಬೆಟ್ಟದ ವಾರೆ ಹಾಗು ಬಂದವರ ಓಣಿಯ ಕಾಡುಪ್ರದೇಶ, ನಾರಾಯಣಪುರ ಮತ್ತು ಶಿವಪುರ ಗ್ರಾಮಗಳು ಮತ್ತು ಈ ಗ್ರಾಮಗಳ ಕೆರೆಗಳು. ಇವೆಲ್ಲ ಬಹುದೊಡ್ಡ ಪ್ರಮಾಣದಲ್ಲಿ ಶರಣರ ಬಿಡಾರಗಳಿದ್ದವು (ನೆಲೆಗಳು)ಎಂಬುದನ್ನು ಕಲ್ಪಿಸಿಕೊಳ್ಳಲು ಅಲ್ಲಿ ಅನೇಕ ಕುರುಹುಗಳು ಇರುವುದರಿಂದ ಅವರು ಸಾಮೂಹಿಕವಾಗಿ ಬದುಕು ನಡೆಸಿರುವ ಸಾಧ್ಯತೆ ಹೆಚ್ಚು ಎಂಬುದನ್ನು ನಮಗೆ ದೃಢಪಡಿಸುತ್ತ ಹೋಗುತ್ತವೆ. ಹಗಲೆಲ್ಲ ಕಾಯಕ. ಸಾಯಂಕಾಲ ಸಮಯ ದೊರೆತಾಗ ಪರಸ್ಪರ ಅನುಭಾವದ ವಿನಿಮಯ. ವಿಶೇಷ ಸಂದರ್ಭದಲ್ಲಿ

ದೊಡ್ಡಸಮಾವೇಶಗಳಲ್ಲಿ ಅನುಭಾವದ ಚರ್ಚೆ. ಹೀಗೆ ನಡೆದಿರಲು ಸಾಧ್ಯವಿದೆ.

ಬಸವಕಲ್ಯಾಣದ ಸುತ್ತಮುತ್ತ ಇರುವ– ಬೆಟ್ಟಬಲಕುಂದ, ತ್ರಿಪುರಾಂತ ಕೆರೆ, ಅಲ್ಲಿಂದ ಮುಂದೆ ಬಂದವರಭಣಿ, ನಾರಾಯಣಪುರ ಮತ್ತು ಶಿವಪುರ ಹಿಡಿದುಕೊಂಡು ಬಂದರೂ ದೂರಮಾತ್ರ ಹುಮ್ನಾಬಾದ ಮತ್ತು ಚಿಟಗುಪ್ಪವರೆಗೆ ೩೫ ರಿಂದ ೪೫ ಕೀ.ಮೀ. ಒಳಗಡೆಯೇ ಇದೆ. ಈ ದಾರಿ ಸುಮಾರು ಆರೇಳು ತಾಸಿನ ಕಾಲ್ನಡಿಗೆಗೆ ಸಾಧ್ಯವಿರುವುದು. ಸಭೆಸೇರಬೇಕೆಂದು ಪ್ರಚಾರವಾದರೆ, ಮುಂಜಾನೆ ಬಿಟ್ಟರೆ ಸಂಜೆವೊಳಗಾಗಿ ಬಂದು ಸೇರುವ ದೂರ ೩೫ ರಿಂದ ೪೫ ಕಿ.ಮೀ. ಅಂತರ ಎಂಬುದನ್ನು ಗಮನಿಸಬೇಕು. ಕಲ್ಯಾಣ ಪಟ್ಟಣದ ಹೊರಗೆ ಇಷ್ಟೊಂದು ದೂರದಲ್ಲಿ, ಶರಣರ ಮುಖ್ಯ ಚಟುವಟಿಕೆಗಳು ನಡೆಯುತ್ತಿರಬೇಕೆಂದು ಗ್ರಹಿಸಿಕೊಳ್ಳಲು ಈಗಿನ ಮಟ್ಟಿಗೆ ನಮಗೆ ಸಾಧ್ಯವಾಗುತ್ತದೆ.

ಬಸವಣ್ಣನವರನ್ನು ಅರಿಸಿ ಬಂದ ಶರಣರು ಬಸವಣ್ಣನವರ ದರ್ಶನವಾದ ನಂತರ, ಅವರೆಲ್ಲ ಕಲ್ಯಾಣದ ಸುತ್ತಮುತ್ತ ಹತ್ತೆಂಟು ಮೈಲುಗಳ ಅಂತರದಲ್ಲಿ, ತಮ್ಮ ಅನುಯಾಯಿಗಳೊಂದಿಗೆ, ಸ್ನೇಹಿತರೊಂದಿಗೆ ವಾಸಿಸಲು ತೊಡಗುತ್ತಿದ್ದರೆಂದು ತೋರುತ್ತದೆ. ಬಸವಕಲ್ಯಾಣ ಮತ್ತು ಹುಮ್ನಾಬಾದ ತಾಲೂಕುಗಳಲ್ಲಿರುವ ಶರಣರ ವಾಸಸ್ಥಾನಗಳನ್ನು ಗಮನಿಸಿದರೆ ಈ ಸಂಗತಿ ನಮಗೆ ಮನವರಿಕೆಯಾಗುತ್ತದೆ.

ಕಲ್ಯಾಣದ ವಿಸ್ತಾರದಲ್ಲಿ ಬರುವ ಶರಣರ ವಾಸಸ್ಥಾನಗಳೆಲ್ಲ ಹೆಚ್ಚಾಗಿ ಗವಿಗಳೇ ಆಗಿವೆ. ಕೆಲವು ಸಣ್ಣ ಗವಿಗಳಾದರೆ ಇನ್ನು ಕೆಲವು ಬಹುದೊಡ್ಡ ಗವಿಗಳು. ಸಣ್ಣ ಗವಿಗಳಲ್ಲಿ ಒಬ್ಬೊಬ್ಬರು, ದೊಡ್ಡ ಗವಿಗಳಲ್ಲಿ ಹತ್ತಿಪ್ಪತ್ತು ಜನ ವಾಸಿಸಿರಬೇಕೆನಿಸುತ್ತದೆ. ವಿಸ್ತಾರವಾದ ದೊಡ್ಡ ಗವಿಗಳೆಲ್ಲ ಯೋಜನಾಬದ್ಧವಾಗಿ ಕೊರೆದ ಗವಿಗಳಾಗಿವೆ. ಪೂಜೆಗೆ, ಧ್ಯಾನಕ್ಕೆ ಅನುಕೂಲವಾದ ಸ್ಥಳಗಳು ಅವು. ಬಸವಕಲ್ಯಾಣದ ಅನುಭವ ಮಂಟಪದಲ್ಲಿ ೩೦ ವರ್ಷಗಳಿಂದ ವಾಸವಾಗಿರುವ ಶರಣಜೀವಿ ಶರಣ ಪ್ಹಿ. ಸಿದ್ಧರಾಮಣ್ಣನವರು ದಿನಾಂಕ ೧೮-೬-೨೦೧೦ ರಂದು ಹೇಳಿದ ಒಂದು ಘಟನೆಯನ್ನು ಇಲ್ಲಿ ದಾಖಲಿಸಬೇಕೆನಿಸುತ್ತದೆ.

ಒಂದು ಸಲ ಹೊರದೇಶದ ಇಬ್ಬರು ಸಾಧಕರನ್ನು ಕರೆದುಕೊಂಡು ಮಧುರಚೆನ್ನರ ಮಗ ಬಸವಕಲ್ಯಾಣಕ್ಕೆ ಬಂದರಂತೆ. ಅವರು ಪಾಂಡಿಚೇರಿಯ ಭಕ್ತರಾಗಿದ್ದರು. ಭಾರತದಲ್ಲಿ ಬೇರೆಡೆ ಇಂತಹ ಸಂತರು ಆಗಿಹೋಗಿದ್ದಾರೆಯೇ? ಎಂಬ ಪ್ರಶ್ನೆಗೆ ಮಧುರಚೆನ್ನರ ಮಗ, ಹೌದು, ಬಸವಕಲ್ಯಾಣದಲ್ಲಿ ೭೭೦ ಜನ ಶರಣರು ಆಗಿ ಹೋಗಿದ್ದಾರೆ ಎಂದು, ಅವರ ಸ್ಥಳಗಳನ್ನು ತೋರಿಸುತ್ತೇನೆಂದು ಕರೆದುಕೊಂಡು ಬಂದಿದ್ದರಂತೆ. ಅವರಿಗೆ ಸಿದ್ಧರಾಮಣ್ಣನವರು ತಿರುಗಾಡಿ ಕಲ್ಯಾಣದ ತ್ರಿಪುರಾಂತ ಕೆರೆಯ ದಡದಲ್ಲಿರುವ ಒಂದೆರಡು ಶರಣರ ಗವಿಗಳನ್ನು ತೋರಿಸಿದರಂತೆ. ಅವರು ಗವಿಯ ಒಳಗಡೆ ಹೋದವರು ೧೫-೨೦ ನಿಮಿಷದ ನಂತರ ಹೊರಗೆ ಬಂದು ತಮ್ಮ ಅನುಭವನ್ನು ಹೇಳಿಕೊಂಡರಂತೆ. ಅದೇನೆಂದರೆ, ಪಾಂಡಿಚೇರಿಯಲ್ಲಿ

ಪ್ರಾಣಾಯಾಮದ ಮೂಲಕ ಧ್ಯಾನಕ್ಕೆ ಕುಳಿತರೆ, ಏಕಾಗ್ರತೆಯ ಅಲೌಕಿಕ ಸ್ಪರ್ಶಕ್ಕೆ ತಾಸು ಗಟ್ಟಲೆ ಸಮಯ ಬೇಕಾಗುತ್ತದೆ. ಆದರೆ ಇಲ್ಲಿಯ ಗವಿಗಳಲ್ಲಿ ಒಂದೆರಡು ನಿಮಿಷಗಳಲ್ಲಿಯೇ ಏಕಾಗ್ರತೆಯ ಸ್ಪರ್ಶವುಂಟಾಗುತ್ತದೆ, ಇದು ಹೇಗೆ ಸಾಧ್ಯ? ಎಂದು ಉದ್ಗಾರ ತೆಗೆದರಂತೆ. ಸಿದ್ಧರಾಮಣ್ಣನವರು ಇದು ಈ ಭೂಮಿಯ ಗುಣವಾಗಿರಲು ಸಾಧ್ಯವೆಂದು ಉತ್ತರಿಸಿದರಂತೆ. ಶರಣರು ಗವಿಗಳನ್ನು ಬಳಸಿಕೊಂಡದ್ದು ಈ ಅನುಕೂಲಕ್ಕಾಗಿಯೂ ಇರಬೇಕು.

ದೊಡ್ಡ ಗವಿಗಳೆಲ್ಲ ಹೆಚ್ಚುಕಡಿಮೆ ಆಯತಾಕಾರದಲ್ಲಿ ಕೆತ್ತಲ್ಪಟ್ಟಿವೆ. ನಾವು ನೋಡಿದ ಸುಮಾರು ಗವಿಗಳ ಉದ್ದಗಲ ಸುಮಾರು ೪೦x೬೦ ಅಡಿಗಳಷ್ಟಿದೆ. ಪ್ರವೇಶ ದ್ವಾರಗಳು ಪೂರ್ವಕ್ಕೆ ಇವೆ. ಪ್ರವೇಶ ಬಾಗಿಲಿನ ಎದುರಿಗೆ, ಗವಿಯ ಅಂತರಂಗದಲ್ಲಿ ಕೊನೆಯ ಪರದೆಗೆ ಹತ್ತಿಕೊಂಡು ಒಂದು ಗರ್ಭಗೃಹ ಇರುತ್ತದೆ. ಅಲ್ಲಿ ಎಲ್ಲ ಕಡೆ ಇರುವುದು ಶಿವಲಿಂಗಗಳೆ. ಬಲಗಡೆ ಮತ್ತು ಎಡಗಡೆಯ ಆಳವಾದ ವಿಸ್ತಾರಗಳಲ್ಲಿ ಮತ್ತೆ ವಾಸಿಸಲು ಅನುಕೂಲವಾದ ಸ್ಥಳವಿರುತ್ತದೆ. ಪ್ರತಿ ಗವಿಯಲ್ಲಿ ಒಂದು ಸಣ್ಣ ಬಾವಿ ಇರುತ್ತದೆ. ಕೆಲವು ಕಡೆ ಗವಿಯ ಹೊರಗೂ ಬಾವಿಗಳಿವೆ. ಪೂಜೆ ಮಾಡಿಕೊಳ್ಳಲು ಅನುಕೂಲವಾದ ಸ್ಥಳಗಳನ್ನು ಮಾಡಿಕೊಂಡಿರುತ್ತಾರೆ. ಸಣ್ಣ ಬಚ್ಚಲುಗಳೂ ಇವೆ. ಇತ್ತೀಚೆಗೆ ಕೆಲವು ಗವಿಗಳಲ್ಲಿ– ಎಲ್ಲಿ ಗವಿಗಳ ಬಗ್ಗೆ ಆಸಕ್ತಿಗಳು ಬೆಳೆದಿವೆಯೋ ಅಲ್ಲಿ, ಒಳಗಡೆ ಗೋಡೆಗಳಿಗೆ ಪ್ಲ್ಯಾಸ್ಟರ್ ಮಾಡಿಸಿದ್ದಾರೆ. ನೆಲಕ್ಕೆ ಕಲ್ಲಿನ ಹಾಸಿಗೆ ಹಾಕಿಸಿದ್ದಾರೆ. ಇದರಿಂದ ಗವಿಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲೂ ಅನುಕೂಲವಾಗಿದೆ. ಗವಿಗಳೂ ಗಟ್ಟಿಮುಟ್ಟಾಗಿವೆ.

ಗವಿಗಳನ್ನು ಕೊರೆಯಲು ಬೀದರಿನ ಭೂಮಿ ಅನುಕೂಲವಾಗಿದೆ. ಕೆಂಪುಮಣ್ಣಿನ ಭೂಮಿ. ಆಳದಲ್ಲಿ ಒಂದು ಮೀಟರ್ ಒಳಗಡೆ ಕೊರೆದರೆ ಗಟ್ಟಿಯಾದ ಪದರು ಹತ್ತುತ್ತದೆ. ಹೀಗಾಗಿ ಗವಿಗಳನ್ನು ಸುಲಭವಾಗಿ ಕೊರೆಯಲು ಅನುಕೂಲವಾದ ಭೂಮಿ ಇಲ್ಲಿದೆ. ಗವಿಗಳನ್ನು ಕೊರೆಯಲು ಎರಡು ಬಗೆಯ ಭೂಮಿಯನ್ನು ಬಳಸಿಕೊಂಡಿದ್ದಾರೆ. ಒಂದು– ಸಮತಟ್ಟಾದ ಭೂಮಿಯ ಆಳದಲ್ಲಿ, ಇನ್ನೊಂದು ಗುಡ್ಡದ ವಾರೆಯಲ್ಲಿ (ಹೊಟ್ಟೆಯಲ್ಲಿ) ಗವಿಗಳನ್ನು ಕೊರೆದಿದ್ದಾರೆ.

ಪ್ರತಿಯೊಬ್ಬ ಶರಣನು ತಾನೇ ಈ ಗವಿಗಳನ್ನು ಕೊರೆದುಕೊಂಡನೆಂದು ಹೇಳುವ ಹಾಗಿಲ್ಲ. ಅದು ಸಾಧುವೂ ಅಲ್ಲವೆಂದು ತೋರುತ್ತದೆ. ಬಹುಶಃ ಗವಿಗಳನ್ನು ಕೊರದು ಕೊಡುವ ಕಾಯಕವುಳ್ಳ ಶರಣರ ಗುಂಪೊಂದು ಪ್ರತ್ಯೇಕವಾಗಿದ್ದಿರಬೇಕೆಂದು ತೋರುತ್ತದೆ. ತುಂಬಾ ವಿಸ್ತಾರವಾದ ಈ ಗವಿಗಳನ್ನು ಒಬ್ಬನು ಅಥವಾ ಮೂರ್ನಾಲ್ಕು ಜನರು, ಅದೂ ನೆಲವನ್ನು ಅಗೆಯುವ ಮತ್ತು ಕೊರೆಯುವ ಅಭ್ಯಾಸ ಇಲ್ಲದವರು ಈ ಗವಿಗಳನ್ನು ಕೊರೆಯಲು ಸಾಧ್ಯವಿಲ್ಲ ಎನಿಸುತ್ತದೆ. ಅವೆಲ್ಲ ೪೦x೬೦ ಅಥವಾ ಇದಕ್ಕಿಂತ ದೊಡ್ಡದಾದ ಉದ್ದಗಲವುಳ್ಳ ಗವಿಗಳು. ತುಂಬಾ ಅನುಭವಸ್ಥರು ಕೊರೆದ ಗವಿಗಳಾಗಿ ಇವು ಕಾಣಿಸುತ್ತವೆ.

ಇಂದಿನ ಸುಮಾರು ೨೦೦೦, ೨೫೦೦ ಚದುರ ಅಡಿಯ ಮನೆ ಕಟ್ಟಲು ಎಷ್ಟು ಪರಿಶ್ರಮ ಪಡಬೇಕೋ, ಅದಕ್ಕಿಂತ ಹತ್ತು ಪಟ್ಟು ಪರಿಶ್ರಮ ಮತ್ತು ಉತ್ತಮ ಯೋಜನೆ ಆ ಗವಿಗಳನ್ನು ಕೊರೆಯಲು ಅವಶ್ಯವೆಂದು ತೋರುತ್ತದೆ. ಗವಿಯ ಕಂಬಗಳನ್ನು ಚೌಕಾಕಾರವಾಗಿ ಕೊರೆದಿದ್ದು, ಒಂದೊಂದು ಮಗ್ಗಲು ಒಂದೊಂದು ಮೀಟರ ಅಗಲವಿದೆ. ಅಂತಹ ಎಂಟು-ಹತ್ತು ಕಂಬಗಳು ಒಂದೊಂದು ಗವಿಯಲ್ಲಿವೆ.ಗವಿಯ ಮಾಳಿಗೆಯ ಕೂಡ ಐದಾರು ಅಡಿ ದಪ್ಪಗೆ ಇವೆ. ಒಂದೆರಡು ಗವಿಗಳ ಮೇಲೆ ಹಲವಾರು ವರ್ಷಗಳ ಪೂರ್ವದಲ್ಲಿ ಇನ್ನೂ ಕೆಲವು ಗವಿಗಳ ಮೇಲೆ ಇತ್ತೀಚೆಗೆ ಮಂಟಪಗಳನ್ನು ನಿರ್ಮಿಸಿಕೊಂಡಿದ್ದಾರೆ. ಮಾಳಿಗೆಗಳು ಇಷ್ಟೊಂದು ಭಾರ ತಡೆಯುವಷ್ಟು ಗಟ್ಟಿಮುಟ್ಟಾಗಿವೆ.

ಪ್ರಸಿದ್ಧ ಶರಣರೆಲ್ಲ ಕಲ್ಯಾಣ ಬಿಟ್ಟು ದೂರ ದೂರದ ಪ್ರದೇಶಗಳಲ್ಲಿ ತಮ್ಮ ಅನುಯಾಯಿಗಳೊಂದಿಗೆ ನೆಲೆನಿಂತು, ಪೂಜೆ, ಧ್ಯಾನ, ಕಾಯಕ-ದಾಸೋಹಗಳಲ್ಲಿ ನಿರತರಾಗಿ, ಬಸವತತ್ವಗಳನ್ನು ಸಾರುತ್ತ, ತಮ್ಮ ಜೀವನ ಸಾಗಿಸಿರಬೇಕೆಂದು ತೋರುತ್ತದೆ. ಗೊತ್ತಾದ ದಿನಗಳಲ್ಲಿ, ಬಹುಶಃ ಬಸವಣ್ಣನವರ ಆಮಂತ್ರಣದ ಮೇರೆಗೆ ಆಗಾಗ ಅನುಭವ ಮಂಟಪಕ್ಕೆ ಹೋಗಿ, ಚರ್ಚೆಯಲ್ಲಿ ಭಾಗವಹಿಸುತ್ತಿರಬೇಕೆನಿಸುತ್ತದೆ. ಆದುದರಿಂದ ಎಲ್ಲ ಶರಣರು ಕೇವಲ ಬಸವಕಲ್ಯಾಣದಲ್ಲಿಯೇ ನೆಲೆನಿಂತಿಲ್ಲ ಎಂಬುದು ಮಹತ್ವದ ಸಂಗತಿ. ಅಂದರೆ ಶರಣರಿಂದ ಬಿಜ್ಜಳನಿಗೆ ದಿನವೂ ಬೇಸರವಾಗುವ ಸಂಗತಿಗಳೇನೂ ನಡೆದಿರಲಿಕ್ಕಿಲ್ಲ ಎನಿಸುತ್ತದೆ. ಬಹಳ ಜಾಣತನದಿಂದ ಶರಣರು ಈ ಅನುಕೂಲತೆಯನ್ನು ಮಾಡಿಕೊಂಡಿದ್ದಾರೆ.

ಇನ್ನೊಂದು ವಿಷಯವೆಂದರೆ, ಎಲ್ಲೆಲ್ಲಿ ಗವಿಗಳಿವೆಯೋ ಅಲ್ಲಲ್ಲಿ ಒಂದೊಂದು ಗ್ರಾಮ ಹುಟ್ಟಿಕೊಂಡಿದೆ. ಉದಾಹರಣೆಗೆ ಹಂದ್ರಾಳ, ಮೋಳ್ಕೇರಾ, ಗಡವಂತಿ ಗ್ರಾಮಗಳು ಹಾಗೆನಿಸುತ್ತವೆ. ಕೆಲವು ಪ್ರಾಚೀನ ಗ್ರಾಮಗಳ ಹೊರವಲಯದಲ್ಲಿ ಗವಿಗಳು ನಿರ್ಮಾಣಗೊಂಡಿವೆ. ರಾಜೇಶ್ವರ, ಚಿಟಗುಪ್ಪ ಇವು ಪುರಾತನ ಗ್ರಾಮಗಳಾಗಿವೆ. ಇದರಿಂದ ಶರಣರ ಪ್ರಭಾವ ಜನಸಾಮಾನ್ಯರ ಮೇಲೆ ಆಗಿನ ಕಾಲಕ್ಕೆ ಎಷ್ಟಾಗಿರಬೇಕೆಂದು ಊಹಿಸಬಹುದಾಗಿದೆ.

***

## ೧. ಹಂದ್ರಾಳ (ಕೆ):
## ಘಟ್ಟಿವಾಳಯ್ಯನವರ ಗವಿ

ಬಸವಕಲ್ಯಾಣದಿಂದ ೧೨ ಕಿ.ಮೀ. ದೂರದಲ್ಲಿ, ಹಂದ್ರಾಳ ಎಂಬ ಗ್ರಾಮವಿದೆ. ಕಲಬುರ್ಗಿಯಿಂದ ಬಸವಕಲ್ಯಾಣಕ್ಕೆ ಹೋಗುವ ದಾರಿಯಲ್ಲಿ, ರಾಜೇಶ್ವರ ಎಂಬ ಪುರಾತನ ಗ್ರಾಮದ ನಂತರ ತಡೋಳಾ ಎಂಬ ಗ್ರಾಮವಿದೆ. ಇವೆಲ್ಲ ರಾಷ್ಟ್ರೀಯ ಹೆದ್ದಾರಿ ೯ರ ಮೇಲೆ ಇರುವ ಗ್ರಾಮಗಳು. ತಡೊಳಾ ಗ್ರಾಮ ಬಲಕ್ಕಿದ್ದು, ಎಡಗಡೆ ಎರಡು ಕಿ.ಮೀ. ಅಂತರದಲ್ಲಿ ಹಂದ್ರಾಳ ಎಂಬ ಗ್ರಾಮವಿದೆ. ಇಲ್ಲಿ ಊರ ಹೊರಗೆ ಘಟ್ಟವಾಳಯ್ಯನ ಗವಿ ಎಂದು ಪ್ರಸಿದ್ಧಿಯನ್ನು ಪಡೆದ ಗವಿಯೊಂದಿದೆ. ಬಸವಕಲ್ಯಾಣ ದಾಟಿದ ನಂತರ ೧೨ ಕಿ.ಮೀ. ಮೇಲೆ ಸಿಗುವ ಈ ಗವಿಯೇ ಅತ್ಯಂತ ದೊಡ್ಡದಾದ ಮೊದಲನೆಯ ಗವಿ. ಇಂತಹ ದೊಡ್ಡ ಗವಿಗಳು ಇರುವುದೇ ಈ ರಾಷ್ಟ್ರೀಯ ಹೆದ್ದಾರಿಗುಂಟ ಇರುವ ಹಂದ್ರಾಳ ನಂತರ ಕ್ರಮವಾಗಿ ರಾಜೇಶ್ವರ, ಮೋಳ್ಕೇರಾ, ಗಡವಂತಿ, ಕೊನೆಯದಾಗಿ ಚಿಟಗುಪ್ಪ ಈ ಐದು ಊರುಗಳಲ್ಲಿ. ಹಂದ್ರಾಳದಿಂದ ಗಡವಂತಿ ವರೆಗಿನ ಊರುಗಳು ಹೆಚ್ಚೆಂದರೆ ನಾಲ್ಕು ನಾಲ್ಕು ಕಿ.ಮೀ. ಅಂತರದಲ್ಲಿವೆ. ಗಡವಂತಿ ಮುಗಿದ ನಂತರ ಒಮ್ಮೆಗೆ ಚಿಟಗುಪ್ಪ ಮಾತ್ರ ಸುಮಾರು ೧೭ ಕಿ,ಮೀ. ದೂರ ಆಗುತ್ತದೆ. ಅಲ್ಲಿಂದ ಸುಮಾರು ೨೮ ಕಿ.ಮೀ. ಅಂತರದಲ್ಲಿ ಬೆಮಳಖೇಡ ಎಂಬ ಗ್ರಾಮದಲ್ಲಿ ಒಂದು ದೊಡ್ಡ ಗವಿ ಇದೆ.

ಘಟ್ಟವಾಳಯ್ಯ ಅತ್ಯಂತ ನಿಷ್ಠೆವುಳ್ಳ, ಬಲಶಾಲಿಯಾದ ಪ್ರಾಮಾಣಿಕ ಗಣಾಚಾರವುಳ್ಳ ಶರಣ. ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಮೋಳಿಗೆಯ ಮಾರಯ್ಯ, ಆದಯ್ಯ, ಢಕ್ಕೆಯ್ಯ ಬೊಮ್ಮಣ್ಣ ಇಂತಹ ಶರಣರಿಂದ ಹೊಗಳಿಸಿಕೊಂಡ ಶರಣ. ಕೆಲ ಶರಣರ ಬಗ್ಗೆ ಇರುವ ಸಂಗತಿಗಳಲ್ಲಿ ಅವರೆಲ್ಲ ಭವಿಗಳನ್ನು ಹಿಂಸಿಸಿದ ಘಟನೆಗಳು ಜನಜನಿತವಾಗಿವೆ. ಆದರೆ ಶರಣರು ಅಹಿಂಸಾವಾದಿಗಳು, ಸತ್ಯಸಂಧರು. ಇಂಥವರು ಹಿಂಸೆ ಮಾಡಿದರು ಎಂಬುದು ಎಷ್ಟರ ಮಟ್ಟಿಗೆ ಸರಿಯಾದ ಸಮಾಚಾರ ಎಂಬುದನ್ನು ನಾವು ವಿಚಾರಿಸಬೇಕಾಗುತ್ತದೆ. ಹೀಗೆಂದ ಮಾತ್ರಕ್ಕೆ ಅವರೆಲ್ಲ ಹೇಡಿಗಳಲ್ಲ. ಅವರಲ್ಲಿ ಅನೇಕರು ವೀರರಾಗಿದ್ದರು ಎಂದು ತಿಳಿದುಬರುತ್ತದೆ. ಆ ವೀರತನ ಅವರು ಮೆರೆದುದು ಕೊನೆಯಲ್ಲಿ ಉಂಟಾದ ಕ್ರಾಂತಿಯಲ್ಲಿ. ತಮ್ಮವರನ್ನು ಕಾಪಾಡುವಲ್ಲಿ, ಮತ್ತು ವಚನಸಾಹಿತ್ಯವನ್ನು ರಕ್ಷಿಸುವಲ್ಲಿ. ಅಲ್ಲಲ್ಲಿ ಇರುವ ಹಿಂಸೆಯ ಸಮಾಚಾರಗಳು ನಂತರದ ಸೇರ್ಪಡೆಗಳಾಗಿರಬಹುದು.



ಘಟ್ಟಿವಾಳಯ್ಯನವರ ಗವಿಯ ಪ್ರವೇಶ ದ್ವಾರ

ಬೇರೆ ಗಂಡಸರೊಂದಿಗೆ ಸಂಬಂಧವನ್ನಿಟ್ಟುಕೊಂಡ ಘಟ್ಟಿವಾಳಯ್ಯಗಳ ಹೆಂಡತಿ, ಒಬ್ಬರಲ್ಲ ಇಬ್ಬರೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಿದ್ದಳೆಂದೂ ಇದನ್ನು ತಿಳಿದ ಘಟ್ಟಿವಾಳಯ್ಯ ಹೆಂಡತಿಯನ್ನು ಸೀಳಿ ಎರಡು ಭಾಗ ಮಾಡಿ, ಇಬ್ಬರಿಗೂ ಒಂದೊಂದು ಭಾಗವನ್ನು ಕೊಟ್ಟರೆಂದೂ  ಪ್ರತೀತಿ ಇದೆ. ಘಟ್ಟಿವಾಳಯ್ಯ ನಿಷ್ಠೆಯಿಲ್ಲದ ಹೆಂಡತಿಯನ್ನು ತೊರೆದನೆಂದು ಇಲ್ಲಿ ಇಟ್ಟುಕೊಳ್ಳಬಹುದು.

ಘಟ್ಟಿವಾಳಯ್ಯನ ಮೂಲ ಹೆಸರು ಮುದ್ದಣ್ಣ ಎಂದು ಇತ್ತೆಂದೂ ಈತನದು ಮದ್ದಳೆ ಕಾಯಕವಾಗಿತ್ತೆಂದೂ ಮಾಹಿತಿ ಇದೆ. ಈತ ಪ್ರತಿಭಾವಂತ ಕಲಾಕಾರ ನಾಗಿದ್ದುದನ್ನು ಗಮನಿಸಬೇಕು. ಅತ್ಯಂತ ಸ್ಥಿತಪ್ರಜ್ಞ, ಬಸವಣ್ಣನವರ ಕಟ್ಟಾ ಅನುಯಾಯಿ. ಹೀಗಾಗಿ ಸಂಸಾರವನ್ನು ತ್ಯಜಿಸಿ, ಸನ್ಯಾಸಿಯಾಗಿ ಕಲ್ಯಾಣಕ್ಕೆ ಬಂದು ತಲುಪಿದನು. ಮದ್ದಳೆ ಬಾರಿಸುತ್ತ ನೃತ್ಯ ಮಾಡುತ್ತ ಶರಣರ ತತ್ತ್ವಗಳನ್ನು ಸಾರುತ್ತ ಜೀವನ ಸಾಗಿಸಿದನು. ಬಸವಣ್ಣನವರ ಮಹಾಮನೆಯ ನಿಕಟಸಂಬಂಧ ಹೊಂದಿರಬೇಕೆನಿಸುತ್ತದೆ. ಹೀಗಾಗಿ ಅಲ್ಲಿಗೆ ಬರುವ ಉಂಡಾಡಿ ಜಂಗಮರನ್ನು 'ಮುಸುರೆ ಗಡಿಗೆಗೆ ಮುತ್ತುವ ನೊಣಗಳು' ಎಂದು ಟೀಕಿಸುವ ಧೈರ್ಯ ಮಾಡಿದ್ದಾನೆ. ಹೀಗೆ ಜಂಗಮರೊಂದಿಗೆ ಜಟಾಪಟಿಯಾದ ಘಟನೆಗಳು ಉಳಿದುಕೊಂಡು ಬಂದಿವೆ. ಈ ಘಟನೆಯಾದ ನಂತರ ಬಸವಣ್ಣನವರ ಸಲಹೆಯ ಮೇರೆಗೆ ಘಟ್ಟಿವಾಳಯ್ಯ ಬಸವಕಲ್ಯಾಣದಿಂದ ೩ ಕಿ.ಮೀ. ಸಮೀಪದ ನಾರಾಯಣಪುರಕ್ಕೆ ಹೋಗಿ ನೆಲೆಸಿದನೆಂದು ಜನಜನಿತ ಕಥೆ ಉಳಿದುಕೊಂಡು ಬಂದಿದೆ.  ನಾರಾಯಣಪುರದಲ್ಲಿ ಘಟ್ಟಿವಾಳಯ್ಯನ ಒಂದು

ಸ್ಮಾರಕ ಇದೆ. ಅವನು ನಾರಾಯಣಪುರಕ್ಕೆ ಬರಲು ಇದೇ ಘಟನೆಯೇ ಕಾರಣ ಎಂದು ಘಟ್ಟಿವಾಳಯ್ಯನ ಸ್ಮಾರಕ ಇರುವ ಮನೆಯಲ್ಲಿರುವವರು ಹೇಳುತ್ತಾರೆ.

ಬಸವಕಲ್ಯಾಣ ತಾಲೂಕಿಗೆ ಸೇರಿದ ಹಂದ್ರಾಳ ಎಂಬಗ್ರಾಮದ ಹೊರವಲಯದಲ್ಲಿ ಘಟ್ಟಿವಾಳಯ್ಯಗಳ ಗವಿ ಇದೆ. ಈ ಗವಿಯೂ ತುಂಬಾ ದೊಡ್ಡದಾದ ಗವಿಯೇ ಆಗಿದೆ. ಎಲ್ಲ ಗವಿಗಳಂತೆ ಇದನ್ನೂ ಭೂಮಿಯ ಒಳಗಡೆ ಆಳಕ್ಕೆ ಅಗೆದು, ಕೊರೆದು ತಯಾರಿಸಲಾಗಿದೆ. ಈ ಗವಿಯು ಒಳಗೆ ಇಳಿದು ಹೋಗಬೇಕು. ಹೀಗಾಗಿ ಮೇಲೆ ಪ್ರವೇಶದ್ವಾರವನ್ನು ನಿರ್ಮಿಸಲಾಗಿದೆ. ಭವ್ಯವಾದ ಈ ದ್ವಾರಬಾಗಿಲ ಒಳಗಡೆ ಹೋದರೆ, ಗವಿಯ ಬಾಗಿಲನ್ನು ಆವರಿಸಿಕೊಂಡು ಗವಿಯ ಬಾಗಿಲಿನ ಒಳಗಡೆ ಮಳೆ ಬಂದರೂ ನೀರು ಹೋಗದಂತೆ ಕಟ್ಟಡನ್ನು ನಿರ್ಮಿಸಲಾಗಿದೆ. ಇದು ನಂತರ ನಿರ್ಮಿಸಿದ ಭಾಗವಾಗಿದೆ. ಆದರೆ ದ್ವಾರಬಾಗಿಲಿನ ಈ ಭಾಗವು ತೀರ ಇತ್ತೀಚಿನದೇನಲ್ಲ. ಈ ಭಾಗವು ಏನಿಲ್ಲವೆಂದರೂ ಮೂರ್ನಾಲ್ಕು ನೂರು ವರ್ಷಗಳಷ್ಟು ಹಳೆಯ ಕಟ್ಟಡವೇ ಆಗಿದೆ. ಇದನ್ನು ಗಮನಿಸಿದರೆ ಶರಣರ ಈ ಸ್ಮಾರಕಗಳ ಜೊತೆಗೆ ಸಾಮಾನ್ಯ ಜನರ ಸಂಬಂಧ ಯಾವಾಗಲೂ ಇದೆ ಎಂದೇ ಅರ್ಥವಾಗುತ್ತದೆ. ಗವಿಯ ಮಾಳಿಗೆಯನ್ನು ಗಚ್ಚಿನಿಂದ ಗಿಲಾವ ಮಾಡಲಾಗಿದೆ. ಸುತ್ತಲೂ ಕುಂಬಿ ಕಟ್ಟಲಾಗಿದೆ. ಗವಿಯಲ್ಲಿ ಬೆಳಕಿನ ವ್ಯವಸ್ಥೆಯಾಗಿ ಇತ್ತೀಚೆಗೆ ವಿದ್ಯುತ್ ಜೋಡಿಸಲಾಗಿದೆ.




ಗವಿಯ ಗರ್ಭಗೃಹ, ನಂದಿಯ ಕಟ್ಟೆಯ ಹಿಂದೆ ಕಲ್ಲು ಮುಚ್ಚಿದಲ್ಲಿ ಒಂದು ಸುರಂಗಮಾರ್ಗ ಇದೆ, ಅದು ಬಸವಕಲ್ಯಾಣಕ್ಕೆ ಹೋಗುತ್ತದೆ ಎನ್ನುತ್ತಾರೆ

ಗವಿಯ ಗರ್ಭಗೃಹದಲ್ಲಿ ಜೋಡಿ ಲಿಂಗಗಳಿವೆ. ಬಾಬುರಾವ ಧನಶೆಟ್ಟಿ ಅವರಿಗೆ ಸೇರಿದ ಹೊಲದಲ್ಲಿ ಈ ಗವಿ ಇದೆ. ಇದರಲ್ಲಿ ೧೧ ಜನ ಕುಳಿತುಕೊಂಡು ಧ್ಯಾನ, ಪೂಜೆ ಮಾಡಿಕೊಳ್ಳಲು ವಿಶೇಷ ಸ್ಥಳಗಳನ್ನು ನಿರ್ಮಿಸಲಾಗಿದೆ. ಒಬ್ಬರ ಮುಂದೆ ಇನ್ನೊಬ್ಬರಂತೆ ಕುಳಿತುಕೊಳ್ಳಲು ಅನುಕೂಲವಿದೆ. ಘಟ್ಟಿವಾಳಯ್ಯ ಸ್ವತಃ ಈ ಗವಿಯನ್ನು ನಿರ್ಮಿಸಿಕೊಂಡನೆಂಬ ಮಾಹಿತಿ ಇಲ್ಲಿ ಉಳಿದುಕೊಂಡು ಬಂದಿದೆ. ಬ್ರಹ್ಮಚಾರಿಗಳು ಈ ಗವಿಯನ್ನು ನೋಡಿಕೊಂಡು ಹೋಗುವ ಪದ್ಧತಿ ಇದೆಯಂತೆ. ಸಂಸಾರಿಗಳು ಇಲ್ಲಿ ಇರುವಂತಿಲ್ಲ ಎಂಬುದನ್ನು ಇಲ್ಲಿಯ ಜನ ಹೇಳುತ್ತಾರೆ. ಬಹುಶಃ ಇದು ಘಟ್ಟಿವಾಳಯ್ಯನ ಬದುಕಿನಲ್ಲಿ ಸ್ತ್ರೀಯ ಸಂಬಂಧ ಸರಿಯಾಗಿರಲಿಲ್ಲ ಎಂಬ ಹಿನ್ನೆಲೆಯಲ್ಲಿ ಇಂತಹ ಪದ್ಧತಿ ಬೆಳೆದು ಬಂದಿರುವ ಸಾಧ್ಯತೆ ಇದೆ.

ಹಂದ್ರಾಳ ತೀರ ಸಣ್ಣ ಗ್ರಾಮ. ಸುಮಾರು ೧೫೦ ಮನೆಗಳಿವೆ. ಗವಿಯ ಸಮೀಪ ಜನವಸತಿ ಉಂಟಾಗಿ ಈ ಊರು ನಂತರವೇ ನಿರ್ಮಾಣವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಘಟ್ಟಿವಾಳಯ್ಯನ ಗವಿಯಲ್ಲಿ ಶ್ರಾವಣ ಮಾಸದಲ್ಲಿ ಭಜನೆ ನಡೆಯುತ್ತದೆ. ಅಕ್ಕನ ಬಳಗವೂ ಒಂದಿದ್ದು, ಅವರೂ ಭಜನೆ ಮಾಡುತ್ತಾರೆ. ಘಟ್ಟಿವಾಳಯ್ಯನ ಬಗೆಗೆ ನಾಟಕವೊಂದು ದೊರಕಿದ್ದು, ಅದರ ರಚನೆಯ ಕಾಲ ೧೯೦೧ ಎಂದು ಗೊತ್ತಾಗುತ್ತದೆ. ಈಗ ದೊರಕಿರುವ ಶರಣರ ನಾಟಕಗಳಲ್ಲಿ ಅತ್ಯಂತ ಹಳೆಯ ನಾಟಕವೆಂದರೆ ಘಟ್ಟಿವಾಳಯ್ಯನ ನಾಟಕವೇ ಆಗಿರುವುದು ಮಹತ್ವದ ಸಂಗತಿಯಾಗಿದೆ.

ವಚನಗಳು : ೧೪೭
ವಚನಾಂಕಿತ : ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ
ನೋಡಿ : ನಾರಾಯಣಪುರ



ಪೂಜೆ, ಧ್ಯಾನಕ್ಕೆ ಕುಳಿತುಕೊಳ್ಳಲು ಗೋಡೆಯಲ್ಲಿ ನಿರ್ಮಿಸಿರುವ ಸ್ಥಳಗಳು

## ೨. ರಾಜೇಶ್ವರ :
## ಬಾಚಿಕಾಯಕದ ಬಸವಣ್ಣ-ಕಾಳವ್ವೆಯರ ಗವಿ

ರಾಜೇಶ್ವರ ಬಸವಕಲ್ಯಾಣದಿಂದ ೧೫ ಕಿ.ಮೀ. ದೂರದಲ್ಲಿರುವ ಒಂದು ಪ್ರಾಚೀನ ಗ್ರಾಮ. ಇಲ್ಲಿ ಬಾಚಿಕಾಯಕದ ಬಸವಪ್ಪ-ಕಾಳಮ್ಮ ಇವರ ಗವಿ ಇದೆ. ಇಲ್ಲಿ ಶರಣರಿಗೆ ಸಂಬಂಧಿಸಿದಂತೆ ಹಲವಾರು ಗವಿಗಳಿರುವ ಸೂಚನೆಗಳು ಸಿಗುತ್ತವೆ. ಹೀಗಾಗಿ ರಾಜೇಶ್ವರ ಒಂದು ಶರಣರ ಮಹತ್ವದ ನೆಲೆಯಾಗಿಯೇ ಕಾಣುತ್ತದೆ. ಬಾಚಿಕಾಯಕದ ಬಸವಣ್ಣನವರ ವಚನಾಂಕಿತ **'ಬಸವ ಪ್ರಿಯ ವಿಶ್ವಕರ್ಮಟಕ್ಕೆ/ ಕಾಳಿಕಾವಿಮಲ ರಾಜೇಶ್ವರಲಿಂಗವು'** ಎಂದು ಬರುವುದರಿಂದ ಊರಿನ ಹೆಸರು ಸ್ಪಷ್ಟವಾಗಿ ಅಂಕಿತದಲ್ಲಿ ಬಂದಿದೆ. ಆ ಊರಿನಲ್ಲಿ ಮಲ್ಲಿಕಾರ್ಜುನ ಲಿಂಗ, ಸಂಗಮೇಶ್ವರಲಿಂಗ ಮತ್ತು ರಾಮಲಿಂಗ ಎಂಬ ಮೂರು ಲಿಂಗಗಳಿರುವ ಗುಡಿಗಳಿವೆ. ರಾಮಲಿಂಗನ ಗುಡಿ ಬಹು ಪ್ರಾಚೀನ ಎಂದು ಹೇಳಲಾಗುತ್ತದೆ. ಬಹುಶಃ ರಾಮಲಿಂಗವೇ ರಾಜೇಶ್ವರಲಿಂಗ ಇರಬೇಕೆಂದು ತೋರುತ್ತದೆ. ರಾಜೇಶ್ವರಲಿಂಗವೆ ಜನರ ಬಾಯಲ್ಲಿ ರಾಮಲಿಂಗ ಆಗಿರುವ ಸಾಧ್ಯತೆ ಇದೆ. ಶರಣರ ಸ್ಮಾರಕಗಳಿರುವ ಊರುಗಳು ನಂತರ ಹುಟ್ಟಿದವುಗಳಾಗಿದ್ದು, ಈ ರಾಜೇಶ್ವರ ಮಾತ್ರ ಪುರಾತನ ಊರು ಎನಿಸುತ್ತದೆ.

ಹಂದ್ರಾಳದಿಂದ ಹುಮ್ನಾಬಾದಗೆ ಬರುವ ರಸ್ತೆಯಲ್ಲಿ ಸುಮಾರು ನಾಲ್ಕು ಕಿ.ಮೀ. ಅಂತರದಲ್ಲಿ, ರಾಷ್ಟ್ರಿಯ ಹೆದ್ದಾರಿ ೯ರ ಮೇಲೆಯೇ ರಾಜೇಶ್ವರ ಇದೆ. ರಾಜೇಶ್ವರದ ದಕ್ಷಿಣಕ್ಕೆ ಊರ ಹೊರಗೆ ಒಂದು ಗವಿ ಇದೆ. ಅದು ಸುಮಾರು ೨೦೦೦ ಅಡಿ ಸುತ್ತಳತೆಯುಳ್ಳ ಒಂದು ದೊಡ್ಡ ಗವಿ. ಊರವರು ಅದಕ್ಕೆ ಮೂರ್‍ನಾಲ್ಕು ವರ್ಷಗಳ ಹಿಂದೆ ವಿದ್ಯುತ್‌ನ್ನೂ ಅಳವಡಿಸಿದ್ದರಂತೆ. ಜನ ಒಳಗಡೆ ಓಡಾಡುವುದು ಸಾಮಾನ್ಯವಾಗಿತ್ತಂತೆ. ಆದರೆ ಒಂದು ಸಲ ದೊಡ್ಡ ಹಾವೊಂದು ಆ ಗವಿಯಲ್ಲಿ ಕಾಣಿಸಿಕೊಂಡಿದ್ದರಿಂದ ಜನ ಸಂಚಾರ ನಿಂತು, ಈಗ ಮತ್ತೆ ಹಾಳುಬಿದ್ದಂತೆ ತೋರುತ್ತಿದೆ. ಗವಿಯ ಒಳಗಡೆ ಲಿಂಗವಿದೆಯೆಂದೂ, ಒಳಗಡೆ ಮೂರು ಕೋಣೆಗಳಿವೆ ಎಂದೂ ಅಲ್ಲಿ ನೆರೆದ ಜನರು ಹೇಳಿದರು. ವಿಚಾರಿಸಿ ನೋಡಲಾಗಿ ಇದು ಬಾಚಿಕಾಯಕದ ಬಸವಪ್ಪಗಳ ಗವಿ ಎಂದು ತಿಳಿದುಬಂದಿತು.

**'ಊರಿನಲ್ಲಿ ಇನ್ನೊಂದು ಗವಿ ಇದೆ, ನಾವು ಸಣ್ಣವರಿದ್ದಾಗ ಅದರಲ್ಲಿ ಆಡಿದ್ದೇವೆ. ಅದನ್ನು ತೋರಿಸುತ್ತೇನೆ'** ಎಂದು ಶ್ರೀ ಲಕ್ಷ್ಮಣ ದಾಂಡೆ ಅವರು ತುಂಬಾ ಉತ್ಸಾಹದಿಂದ ಕರೆದುಕೊಂಡು ಹೋದರು. ಆದರೆ ಆ ಗವಿಯನ್ನು ಹುಡುಕುವುದೇ



ಬಾಚಿಕಾಯಕದ ಬಸವಣ್ಣ-ಕಾಳವ್ವೆಯರ ಗವಿ

ತೊಂದರೆಯಾಯಿತು. ಕೊನೆಗೆ ಸ್ಥಳವನ್ನು ಗುರುತಿಸಿದ ಶ್ರೀ ಲಕ್ಷ್ಮಣ ದಾಂಡೆ ಅವರು, ಅದೆಲ್ಲವನ್ನು ಮುಚ್ಚಿಹಾಕಿದುದನ್ನು ಗಮನಿಸಿದರು. ಸುಮಾರು ೪೦x೬೦ ಅಡಿ ಅಳತೆಯ ಗವಿ ಇರುವ ಸ್ಥಳವನ್ನು ನಜೀರಸಾಬ ಹೂಗಾರ ಎನ್ನುವವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ಮನೆ ಕಟ್ಟಲು ಯೋಚಿಸಿ, ಗವಿ ಇರುವ ಸಂಪೂರ್ಣಸ್ಥಳವನ್ನು ತಮ್ಮದಾಗಿಸಿಕೊಂಡು, ಗವಿಯ ಪ್ರವೇಶ ಬಾಗಿಲನ್ನು ಕಲ್ಲುಚಪ್ಪಡಿಗಳಿಂದ ಮುಚ್ಚಿಹಾಕಿ, ಆ ನಿವೇಶನದ ಸುತ್ತಲೂ ಕಂಪೌಂಡ ಹಾಕಿಕೊಂಡಿದ್ದರು. ಲಕ್ಷ್ಮಣ ದಾಂಡೆ ಅವರು **'ಇಲ್ಲಿ ಗವಿ ಇತ್ತಲ್ಲ?'** ಎಂದು ಅಲ್ಲಿಯೇ ನೆರೆದಿದ್ದ ಮುಸ್ಲಿಮ ಸಮುದಾಯದವರನ್ನು ಕೇಳಿದರೆ, ಅದೆಲ್ಲ ಮುಚ್ಚಿಹಾಕಲಾಗಿದೆ ಎಂದು ಹೇಳಿದರು. ಸ್ಥಳವನ್ನು ಸ್ವಾಧೀನ ಪಡಿಸಿಕೊಂಡವರ ಬಗ್ಗೆ ಅಲ್ಲಿ ಸೇರಿದ್ದ ಮುಸ್ಲಿಮ ಜನಾಂಗವೇ ಒಂದು ರೀತಿಯಲ್ಲಿ ಶಪಿಸಿ ಮಾತನಾಡುವುದು ನಮ್ಮ ಕಿವಿಗೆ ಬಿದ್ದಿತು. ಈ ಮುಚ್ಚಿದ ಗವಿ ಮೋಳ್ಕೇರಾ ಮತ್ತು ಹಂದ್ರಾಳ ಗವಿಗಳಕ್ಕಿಂತ ದೊಡ್ಡದಾಗಿತ್ತೆಂದು ಅಲ್ಲಿ ನೆರೆದ ರಾಜೇಶ್ವರದ ಜನ ಹೇಳಿದರು. ಲಕ್ಷ್ಮಣ ದಾಂಡೆ ಅವರಂತೂ 'ನಾನು ಬಾಲ್ಯದಲ್ಲಿ ಆಡಿದ ಗವಿ ಇದು. ತುಂಬಾ ದೊಡ್ಡದು' ಎಂದು ಪೇಚಾಡಿದರು. ತಾವು ಆ ಸ್ಥಳದಲ್ಲಿ ನಿಂತು, ಫೋಟೊ ಹೊಡೆಸಿಕೊಂಡರು. ಯಾರು ಕೇಳಿದರೂ ತಾವು ಸಾಕ್ಷಿ ನುಡಿಯಲು ಸಿದ್ಧರಿರುವುದಾಗಿ ಸ್ವತಃ ಹೇಳಿಕೊಂಡರು. ಈ ಮಾತಿಗೆ ಅಲ್ಲಿ ನೆರೆದ ಜನಸಮುದಾಯ ದನಿಗೂಡಿಸಿತು. ಮುಚ್ಚಿಹೋದ ಈ ಗವಿ ಇರುವ ಸರಿಯಾದ ಸ್ಥಳದ ವಿವರ ಹೀಗಿದೆ: ರಾಜೇಶ್ವರದ ಹಿಮ್ಮತ ನಗರದಲ್ಲಿ, ರೇಷ್ಮೆ ಇಲಾಖೆ ಮಗ್ಗುಲು, ಸತ್ಯಶ್ರೀ ಕಾಲೇಜಿನ ಬಲಗಡೆ.




ಬಾಚಿಕಾಯಕದ ಬಸವಣ್ಣನವರ ಆರಾಧ್ಯ ದೈವ ರಾಮಲಿಂಗೇಶ್ವರ
(ರಾಜೇಶ್ವರಲಿಂಗ) ದೇವಾಲಯ



ಮುಚ್ಚಿ ಹಾಕಲಾಗಿರುವ ಗವಿಯ ಸ್ಥಳ
ನಿಂತು ಸಾಕ್ಷಿಯಾದವರು ಶರಣಾಭಿಮಾನಿ ಲಕ್ಷ್ಮಣ ದಾಂಡೆ

ರಾಜೇಶ್ವರದ ಎರಡೂ ಗವಿಗಳು ಬಾಚಿಕಾಯಕದ ಬಸವಪ್ಪಗಳಿಗೆ ಸಂಬಂಧಿಸಿವೆಯೆ? ಅಥವಾ ಬೇರೊಬ್ಬ ಶರಣನು ಇಲ್ಲಿ ಇದ್ದನೆ? ಎಂಬುದು ಶೋಧವಾಗಬೇಕಾಗಿದೆ. ಬಸವಪ್ಪಗಳ ಹೆಂಡತಿ ಕಾಳಮ್ಮನೂ ವಚನಗಳನ್ನು ಬರೆದಿದ್ದಾಳೆ. ಆದರೆ ಇಬ್ಬರೂ ಗಂಡಹೆಂಡತಿ ಬೇರೆಯಾಗಿರಲು ಸಾಧ್ಯವಿಲ್ಲ. ಮುಚ್ಚಿ ಹೋದ ಈ ಗವಿ ಇನ್ನೊಬ್ಬ ಬೇರೆ ಶರಣರಿಗೆ ಸಂಬಂಧಿಸಿರಬೇಕು. ಇಂತಹ ಗವಿಗಳು ಒಬ್ಬ ಶರಣನ ಹೆಸರಿನಿಂದ ಪ್ರಚಾರದಲ್ಲಿದ್ದರೂ ಅವರ ಜೊತೆ ಅನೇಕ ಜನ ಶರಣರು ವಾಸವಾಗಿರಬೇಕೆಂಬುದು ನಮ್ಮ ಬಲವಾದ ನಂಬುಗೆ. ಈ ಊರಿನಲ್ಲಿ ಮತ್ತೆ ಗವಿಗಳಿವೆ ಎಂಬ ಬಗ್ಗೆ ಜನ ಮಾತನಾಡಿದರು. ಆದರೆ ಅವನ್ನೆಲ್ಲ ತೋರಿಸಲು ಹಿಂದೇಟು ಹಾಕಿದರು. ಅವುಗಳನ್ನು ಮತ್ತೆ ವೈಯಕ್ತಿಕ ಆಸ್ತಿಗಳಂತೆ ಕೆಲವರು ಬಳಸುತ್ತಿದ್ದ ಬಗ್ಗೆ ಮಾತನಾಡಿದರು.

ಈ ಊರಿನಲ್ಲಿ ಶರಣರ ಬಗೆಗೆ ಅಭಿಮಾನವುಳ್ಳ ಬಸವತೀರ್ಥಪ್ಪ ಮಂಠಾಳೆ ಅವರನ್ನು ಸಂಪರ್ಕಿಸಲು ಊರಿನ ಜನ ಹೇಳಿದರು. ಅವರು ಅಂದು ಬೇರೆಡೆ ಹೋಗಿರುವುದರಿಂದ ನಮ್ಮ ಸಂಪರ್ಕಕ್ಕೆ ಅವರು ದೊರೆಯಲಿಲ್ಲ. ಅದರೆ ನಾನು ಕಲಬುರ್ಗಿಗೆ ಬಂದು ಪುನಃ ಪುನಃ ಅವರ ಮನೆಗೆ ಫೋನ್ ಮಾಡಿದಾಗ, ಒಂದು ಸಾರೆ ಬಸವತೀರ್ಥಪ್ಪ ಅವರ ಶ್ರೀಮತಿಯರಾದ ದ್ರೌಪದಿ ಅವರು ದೂರವಾಣಿ ತೆಗೆದುಕೊಂಡರು. ಅವರೊಂದಿಗೆ ಸಂಭಾಷಿಸುತ್ತ ಹೀಗೆ, ಶರಣರ ಬಗೆಗೆ ಒಂದಿಷ್ಟು ಮಾಹಿತಿ ಪಡೆಯಲು ರಾಜೇಶ್ವರಕ್ಕೆ ಬಂದಿದ್ದೆ ಎಂದ ಕೂಡಲೆ ಅವರು ನೇರವಾಗಿ



ರಾಮಲಿಂಗೇಶ್ವರ ಗರ್ಭಗೃಹ

ಹೇಳಿದ್ದು, ರಾಜೇಶ್ವರದ ಊರ ಹೊರಗೆ ಇರುವ ಗವಿ ಬಾಚಿಕಾಯಕದ ಬಸವಣ್ಣನ ಗವಿ ಎಂದು ಹೇಳುತ್ತಾರೆ ಎಂದು. ಅವರು ಹೇಳಿದ ಇನ್ನೊಂದು ಮಹತ್ವದ ಸಂಗತಿ ಎಂದರೆ, ಆ ಊರಿನ ಬಡಿಗೇರ ರಂಗಮ್ಮ ಎಂಬ ಹೆಣ್ಣುಮಗಳು ಬಾಚಿಕಾಯಕದ ಬಸವಣ್ಣನವರನ್ನು ಕುರಿತು ಹಾಡು ಹಾಡುತ್ತಿದ್ದಳೆಂದು. ದುರ್ದೈವವೆಂದರೆ ಆಕೆ ಈಗ ಶಿವಾಧೀನಳಾಗಿದ್ದಾಳೆ. ಮತ್ತೆ ಬೇರೆ ಯಾರಾದರು ಹಾಡುತ್ತಾರೆಯೇ ಎಂದಾಗ ರಂಗಮ್ಮನ ಸಂಬಂಧಿಕಳಾದ ಶಾರದಾ ಬಡಿಗೇರ ಎಂಬಾಕೆ ಹಾಡುತ್ತಿದ್ದಳು. ಆದರೆ ಆಕೆಗೆ ಕಿಟ್ಟಾ ಎಂಬ ಗ್ರಾಮಕ್ಕೆ ಕೊಟ್ಟಿದ್ದಾರೆ. ಅವರು ರಾಜೇಶ್ವರದಲ್ಲಿ ಇರುವುದಿಲ್ಲ ಎಂದರು. ನಮ್ಮ ಈ ಮಾತುಕತೆಯಿಂದ ಬಾಚಿಕಾಯಕದ ಬಸವಪ್ಪನು ರಾಜೇಶ್ವರದವನೆಂದೂ, ಊರ ಹೊರಗಿನ ಗವಿ ಅವನಿಗೆ ಸಂಬಂಧಿಸಿದ್ದೆಂದೂ, ಈ ಶರಣರ ಬಗ್ಗೆ ಬಡಿಗೇರ ಓಣಿಯಲ್ಲಿ ಹಾಡುಗಳಿದ್ದವೆಂದೂ ತಿಳಿದುಬರುವ ಮಹತ್ವದ ಸಂಗತಿಗಳೆನಿಸುತ್ತವೆ. ಆದರೆ ವಿಶೇಷವಾದ ಆಚರಣೆಗಳೇನೂ ಇದ್ದಂತೆ ತೋರುವುದಿಲ್ಲ.

ಬಾಚಿಕಯಾಕದ ಬಸವಣ್ಣ, ವಚನಗಳು : ೩೦

ಅಂಕಿತ : ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾ ವಿಮಲರಾಜೇಶ್ವರ ಲಿಂಗವು

ಕಾಳವ್ವೆ : ವಚನ : ೨, ವಚನಾಂಕಿತ : ಕರ್ಮಹರ ಕಾಳೇಶ್ವರಾ

ಮಾಹಿತಿ : ಶ್ರೀ ಲಕ್ಷ್ಮಣ ದಾಂಡೆ, ಶ್ರೀಮತಿ ಬಸವತೀರ್ಥಪ್ಪ ಮಂಠಾಳೆ

***

## ೩. ಮೋಳ್ಕೇರಾ :
## ಮೋಳಿಗೆ ಮಾರಯ್ಯ–ಮಹಾದೇವಮ್ಮನವರ ಗವಿ

ಮೋಳಿಗೆ ಮಾರಯ್ಯ ಮತ್ತು ಮಹಾದೇವಮ್ಮ ಅವರು ಕಾಶ್ಮೀರದಿಂದ ಬಂದವರು ಎಂದು ಹೇಳಲಾಗುತ್ತದೆ. ಇವರ ಮೂಲ ಹೆಸರು ಮಹಾದೇವ ಭೂಪಾಲ ಎಂದು. ಕಾಶ್ಮೀರದಲ್ಲಿ ಅರಸರಾಗಿದ್ದ ಮಹಾದೇವ ಭೂಪಾಲ ಅಷ್ಟು ದೂರದಿಂದ, ತಮ್ಮ ಅರಸೊತ್ತಿಗೆಯನ್ನು ಬಿಟ್ಟು ಬಂದರೆಂದರೆ ನಿಜವಾಗಿಯೂ ಇದೊಂದು ಅಪರೂಪದ ಸಂಗತಿಯೇ ಸರಿ. ಬುದ್ಧನಾದರೆ ನಡುರಾತ್ರಿಯಲ್ಲಿ ತನ್ನ ಹೆಂಡರು ಮಕ್ಕಳನ್ನು ಬಿಟ್ಟು ಬೋಧಿವೃಕ್ಷದೆಡೆ ಎದ್ದು ಹೋದವನು. ಆದರೆ ಕಲ್ಯಾಣದ ಕಡೆ, ಬಸವನೆಡೆ ಧಾವಿಸಿ ಬಂದವರು ಕುಟುಂಬ ಸಮೇತ ಬಂದರು. ಮಹಾದೇವ ಭೂಪಾಲ ಮತ್ತು ಅವರ ಧರ್ಮಪತ್ನಿ ಮಹಾದೇವಮ್ಮ ಇಬ್ಬರೂ ಕೂಡಿ ಬಂದರು. ಇದು ಬಸವ ತತ್ವಜ್ಞಾನದ ನಿಜವಾದ ಮಹತಿ.

ಕಾಶ್ಮೀರವು ಕಲ್ಯಾಣಕ್ಕೆ ಸಮೀಪದ ದಾರಿಯೇನಲ್ಲ. ಭಾರತದ ಒಂದು ತುದಿಯಲ್ಲಿ ಕಲ್ಯಾಣ, ಇನ್ನೊಂದು ತುದಿಯಲ್ಲಿ ಕಾಶ್ಮೀರ. ಅಷ್ಟುದೂರದಿಂದ ಈ ಶರಣ ದಂಪತಿಗಳು ಬಂದರು ಎಂಬುದು ನಿಜವಿದ್ದರೆ, ಆಗಿನ ಕಾಲದಲ್ಲಿ ಬಸವಣ್ಣನವರ ಮತ್ತು ಅವರ ಅನುಯಾಯಿಗಳ ತಾತ್ವಿಕ ಚಿಂತನೆಗಳು ಎಷ್ಟು ದೂರ ಪ್ರಚಾರವಾಗಿದ್ದವು ಎಂಬ ಸಂಗತಿ ನಮಗೆ ಗಾಬರಿ ಹುಟ್ಟಿಸುತ್ತದೆ.

ಬಸವಕಲ್ಯಾಣದಿಂದ ೨೫ ಕಿ.ಮೀ. ಅಂತರದಲ್ಲಿ, ಹುಮ್ನಾಬಾದ ಪಟ್ಟಣಕ್ಕೆ ೫ ಕಿ.ಮೀ. ಸಮೀಪದಲ್ಲಿ, ರಾಷ್ಟ್ರೀಯ ಹೆದ್ದಾರಿ ೯ರ ಮಗ್ಗುಲಿಗೆ ಇರುವ ಗವಿ ಎಂದರೆ ಮೋಳಿಗೆ ಮಾರಯ್ಯ ಮತ್ತು ಮಹಾದೇವಮ್ಮನವರ ಗವಿ. ಈ ಗವಿಯ ಸಮೀಪದಲ್ಲಿ ಬೆಳೆದ ಊರಿಗೆ ಬಹುಶಃ ಈ ಶರಣರ ಹೆಸರೇ ಕಾರಣವಾಗಿ ಮೋಳ್ಕೇರಾ ಎಂಬ ಹೆಸರು ಪ್ರಸಿದ್ಧವಾಗಿದೆ.

ಮೋಳ್ಕೇರಾ ಗ್ರಾಮದಲ್ಲಿ ಮಾಲಿಗೌಡ ಮನೆತನದವರು ಮೊದಲಿಂದಲೂ ಮೋಳಿಗಯ್ಯನ ಬಗ್ಗೆ ಭಕ್ತಿಯನ್ನು ಹೊಂದಿದ್ದಾರೆ. ಆ ಮನೆತನದ ಶರಣಮ್ಮ ಗೌಡತಿ ಎಂಬವರು ೩ ಎಕರೆ ಜಮೀನನ್ನು ಈ ಶರಣರ ಗವಿಯ ಅಧೀನಕ್ಕೆ ಕೊಟ್ಟು ದಾಸೋಹ ನಡೆಸಲು, ಜಾತ್ರೆ ಮಾಡಲು ನೆರವಾದರಂತೆ. ಈ ಜಮೀನಿನ ಜೊತೆ ಇನ್ನಷ್ಟು ಜಮೀನನ್ನು ಸರ್ಕಾರದಿಂದ ಪಡೆದು, ಒಟ್ಟಿಗೆ ೧೪.೨ ಎಕರೆ ಜಮೀನನ್ನು



ಮೋಳಿಗೆ ಮಾರಯ್ಯ-ಮಹಾದೇವಮ್ಮನವರ ಗವಿಯ ಪ್ರವೇಶ ದ್ವಾರ

ಈಗ ಬಸವಕಲ್ಯಾಣ ಪ್ರಾಧಿಕಾರದ ಅಧೀನಕ್ಕೆ ಹಸ್ತಾಂತರಿಸಿದ್ದಾರೆ. ಪ್ರಾಧಿಕಾರದವರು ಮುಂದಿನ ದಿನಗಳಲ್ಲಿ ಈ ಗವಿಯ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಿದ್ದಾರೆ.


೨೦೦೦ ಇಸ್ವಿಯಲ್ಲಿ ಈ ಗವಿಯ ಬಗ್ಗೆ ಆಸಕ್ತಿ ತಾಳಿದ ಊರಿನ ಜನ ತಮ್ಮೂರಿನಲ್ಲಿಯೇ ಒಬ್ಬ ಜಂಗಮನ ಕೈಗೆ ಜೋಳಿಗೆ ಹಾಕಿ, ಮನೆಮನೆಗೆ ಕಳುಹಿಸಿದರೆ ಊರಿನ ಜನರೆಲ್ಲ ತಮ್ಮ ತಮ್ಮ ಶಕ್ತ್ಯಾನುಸಾರ ಹಣ, ಬೆಳ್ಳಿ, ಬಂಗಾರ, ಒಡವೆ ಇತ್ಯಾದಿಗಳನ್ನು ಜೋಳಿಗೆಗೆ ಹಾಕಿದರಂತೆ. ಅದರಿಂದ ಬಂದ ಹಣದಲ್ಲಿ ಈಗ ಗವಿಯ ಮೇಲ್ಭಾವಣಿಯ ಮೇಲೆಯೇ ಸುಮಾರು ೧೦ ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ, ಒಂದು ಗರ್ಭಗೃಹ ಮತ್ತು ವಿಸ್ತಾರವಾದ ಮಂಟಪವನ್ನು ನಿರ್ಮಿಸಿದ್ದಾರೆ. ಈ ಮಂಟಪದ ಮಾಳಿಗೆ ಗವಿಯ ವಿಸ್ತಾರವನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ. ಕಲ್ಕತ್ತಾದಿಂದ ಮೋಳಿಗೆಯ್ಯನ ಮೂರ್ತಿಯನ್ನು ಸಂಗಮರಿ ಕಲ್ಲಿನಲ್ಲಿ ನಿರ್ಮಿಸಿ ಪ್ರತಿಷ್ಠಾಪಿಸಿದ್ದಾರೆ. ಬಹು ಅದ್ದೂರಿಯಾಗಿ ೨೦೦೪ರಲ್ಲಿ ಒಂದು ದೊಡ್ಡ ಸಮಾರಂಭ ಮಾಡಿ, ಗವಿಯ ಮೇಲೆ ನಿರ್ಮಿಸಿದ ಗುಡಿಯ ಲೋಕಾರ್ಪಣೆ ಮಾಡಿದ್ದಾರೆ. ಇಷ್ಟೆಲ್ಲ ಖರ್ಚು ಹೋಗಿಯೂ ಇನ್ನೂ ೨೫ ತೊಲೆ ಬೆಳ್ಳಿ, ಒಂದಿಷ್ಟು ಬಂಗಾರ ಉಳಿದಿದೆ ಎಂದು ದೇವಾಲಯ ಜೀರ್ಣೋದ್ಧಾರ ಸಮಿತಿಯವರು ಹೇಳುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಈ ಊರಿನ ಜನ ಮೋಳಿಗಯ್ಯನ ಗವಿಯ ಬಗ್ಗೆ ಆಸಕ್ತಿ ಹೊಂದಿದ್ದಾರೆ. ದಾಸೋಹ ಪ್ರಾರಂಭಿಸಿದ್ದಾರೆ. ಶ್ರಾವಣಮಾಸದಲ್ಲಿ ಭಜನೆ ಮಾಡುತ್ತಾರೆ. ಕೊನೆಯಲ್ಲಿ ಖಾಂಡ ಮಾಡುತ್ತಾರೆ. ಶ್ರಾವಣದ ನಾಲ್ಕೂ ಸೋಮವಾರಗಳಂದು ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಯುಗಾದಿಯಂದು ಊರಿನಲ್ಲಿ ಧ್ವಜವನ್ನು ಮೆರೆಸುತ್ತ ಬಂದು, ಗವಿಯ ಮುಂದಿರುವ ಗಿಡಕ್ಕೆ ಕಟ್ಟುತ್ತಾರೆ. ಅಂದು ಮೆರವಣಿಗೆಯಲ್ಲಿ ತಂದ ಒಂದು ಗಡಿಗೆಯನ್ನು, ಗರ್ಭಗೃಹದಲ್ಲಿರುವ ಲಿಂಗದ ಮೇಲೆ ಕಬ್ಬಿಣದ ಸಲಾಕೆಗಳಿಂದ ನಿರ್ಮಿಸಿದ ಅಡ್ಡಣಿಗೆ ಮೇಲೆ ಇಟ್ಟು, ಅದರಲ್ಲಿ ನೀರು ತುಂಬಿ ಲಿಂಗದ ಮೇಲೆ ಹನಿಹನಿಯಾಗಿ ಬೀಳುವಂತೆ ಮಾಡುತ್ತಾರೆ. ಇದು ಯುಗಾದಿಯಿಂದ ಕಾರ್ಹುಣವಿವರೆಗೆ ಇಡುತ್ತಾರಂತೆ. ನಾವು ಕಾರ್ಹುಣವಿ ಮರುದಿನವೇ ಈ ಗವಿಗೆ ಭೇಟಿ ಕೊಟ್ಟಿದ್ದೆವು(೨೭-೬-೨೦೧೦). ಈ ಗಡಿಗೆಯನ್ನು ನಿನ್ನೆಯೇ ತೆಗೆಯಬೇಕಾಗಿತ್ತು, ಸಂಬಂಧಿಸಿದ ಪೂಜಾರಿಗೆ ಅನಾರೋಗ್ಯ ಉಂಟಾಗಿರುವುದರಿಂದ ತೆಗೆದಿಲ್ಲವೆಂದು ತೋರುತ್ತದೆ. ಬಹುಶಃ ನಾಳೆ ನಾಡದ್ದು ತೆಗೆಯಬಹುದೆಂದು ಅಲ್ಲಿಯ ಜನ ಹೇಳಿದರು.

ಇಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದ ಒಂದು ಸಂಗತಿ ಎಂದರೆ, ಮೂರು ವರ್ಷಗಳಿಗೊಮ್ಮೆ ಬಹುದೊಡ್ಡ ಪ್ರಮಾಣದಲ್ಲಿ ಒಂದು ಖಾಂಡ ಮಾಡುವುದು. ೮-೧೦ ಕಡಾಯಿಗಳಷ್ಟು ಪ್ರಸಾದ ಮಾಡಲಾಗುತ್ತದೆ. ಅಷ್ಟೊಂದು ಜನರು ಬರುತ್ತಾರೆ.



ಗವಿಯ ಗರ್ಭಗೃಹದಲ್ಲಿರುವ ಲಿಂಗ



ಮೋಳಿಗೆ ಮಾರಯ್ಯನವರ ಸಂಗಮರಿ ಕಲ್ಲಿನ ಮೂರ್ತಿ
ಗವಿಯ ಮಂಟಪದಲ್ಲಿ ಇರುವುದು

ಎಂದು ಹೇಳುತ್ತಾರೆ. ಈಗಲೂ ಈ ಪದ್ಧತಿಯನ್ನು ಉಳಿಸಿಕೊಂಡು ಬಂದಿದ್ದು, ಮೊದಲಿನಷ್ಟು ಪ್ರಸಾದದ ವ್ಯವಸ್ಥೆ ಮಾಡಲು ಸಾಧ್ಯವಿಲ್ಲವಾದರೂ ಒಂದೆರಡು ಕಡಾಯಿಗಳಷ್ಟಾದರೂ ಪ್ರಸಾದದ ವ್ಯವಸ್ಥೆ ಆಗಿರುತ್ತದೆ. ಏಕೆಂದರೆ ಈಗ ಬರುವವರ ಸಂಖ್ಯೆ ಕಡಿಮೆಯಾಗಿದೆ.

ಗವಿಯ ಬಲಗಡೆ ದೂರದಲ್ಲಿ ಒಂದು ಗುಡ್ಡ ತೋರಿಸಿ, ಅದನ್ನು **'ಭಂಡಾರಗುತ್ತಿ'** ಎಂಬ ಹೆಸರಿನಿಂದ ಕರೆಯುವ ರೂಢಿ ಇರುವುದಾಗಿ ಹೇಳಿದರು. ಈ ಹೆಸರು ಬರಲು ಕಾರಣವೆಂದರೆ, ಮೋಳಿಗೆಯ್ಯನವರು ಇಲ್ಲದಾಗ, ಅವರ ಮನೆಗೆ ಆಗಮಿಸಿದ ಬಸವಣ್ಣನವರು, ಮಹಾದೇವಮ್ಮನವರ ಆತಿಥ್ಯ ಸ್ವೀಕರಸಿ, ಅವರ ಮನೆಯಲ್ಲಿ ಪ್ರಸಾದ ಸೇವಿಸಿದರು. ಬಸವಣ್ಣನವರು ತಾವು ಕುಳಿತ ಮಣೆಯ ಕೆಳಗೆ ಭಂಡಾರ ಬಿಟ್ಟು ಹೋದರಂತೆ. ನಂತರ ಬಂದ ಮೋಳಿಗೆಯ್ಯನವರು ತನ್ನ ಮನೆಯಲ್ಲಿ (ಬಹುಶಃ ಮೋಳ್ಕೇರಾದ ಗವಿಯಲ್ಲಿಯೇ) ಸಂಪತ್ತಿನ ವಾಸನೆ ಮೂಗಿಗೆ ಬಡಿದು, ಯಾರಾದರು ಬಂದಿದ್ದರೆ? ಎಂದು ಮಹಾದೇವಮ್ಮನವರನ್ನು ಮೋಳಿಗೆಯ್ಯ ಕೇಳಿ, ಬಸವಣ್ಣನವರು ಬಂದ ಸುದ್ದಿ ತಿಳಿದು, ಅವರು ಬಿಟ್ಟು ಹೋದ ಭಂಡಾರದ ಗಂಟನ್ನು ಗುರುತಿಸಿ, ಕೈಯಿಂದ ಮುಟ್ಟದೆ, ಕಟ್ಟಿಗೆಯಿಂದಲೇ ತಳ್ಳುತ್ತ ತಳ್ಳುತ್ತ ದೂರಕ್ಕೆ ಒಯ್ದು ಚೆಲ್ಲಿದರಂತೆ. ಅದುವೇ **ಭಂಡಾರಗುತ್ತಿ** ಎಂದು ಪ್ರಸಿದ್ಧವಾಗಿರುವ ಬಗ್ಗೆ ಊರವರು ಕಥೆಮಾಡಿ ಹೇಳುತ್ತಾರೆ.

ಇತ್ತೀಚೆಗೆ ರಸ್ತೆ ನಿರ್ಮಾಣಕ್ಕಾಗಿ ಭಂಡಾರಗುತ್ತಿಯಿಂದ ಮಣ್ಣೆತ್ತಲು ಬಂದ ಲಾರಿಗಳ ಚಾಲಕರಿಗೆ ಅನಾರೋಗ್ಯ ಉಂಟಾಗುತ್ತ ಹೋಯಿತಂತೆ. ಇದರಿಂದ ಇದೆಲ್ಲ ಶರಣರ ಮಹಿಮೆ ಎಂದು ಆ ಭಂಡಾರ ಗುತ್ತಿಯಿಂದ ಮಣ್ಣೆತ್ತುವುದನ್ನು ಬಿಟ್ಟುಬಿಟ್ಟರಂತೆ.

ಗವಿಯ ಬಲಗಡೆ, ರಾಷ್ಟ್ರೀಯ ಹೆದ್ದಾರಿಯ ಕಡೆಗೆ ಒಂದು ಮರ ಇದೆ. ಮೋಳಿಗೆಯ್ಯ ಚೆಲ್ಲಿದ ಕಟ್ಟಿಗೆಯ ಹೊರೆ ಚಿಗಿತು ಬೆಳೆದ ಮರ ಅದು ಎಂದು ಹೇಳುತ್ತಾರೆ. ಅದಕ್ಕೆ ನಾಲ್ಕೈದು ನಮೂನೆಯ ಎಲೆಗಳಾಗುತ್ತವೆಂದೂ, ಈ ಗಿಡ ಯಾವುದೆಂದು ಪತ್ತೆ ಹಚ್ಚಲು ಸಸ್ಯಶಾಸ್ತ್ರಜ್ಞರಿಗೂ ಇಲ್ಲಿಯವರೆಗೆ ಸಾಧ್ಯವಾಗಿಲ್ಲವೆಂದೂ ವಿವರಿಸುತ್ತಾರೆ.

ಈ ಊರಿನಲ್ಲಿ ಮೋಳಿಗೆಯ್ಯ ಎಂದು ಮಕ್ಕಳಿಗೆ ಹೆಸರಿಟ್ಟ ಉದಾಹರಣೆಗಳಿಲ್ಲ. ಆದರೆ ಈ ಶರಣರ ಮೂಲ ಹೆಸರುಗಳಾದ ಮಹಾದೇವ, ಮಹಾದೇವಮ್ಮ ಈ ಹೆಸರುಗಳನ್ನು ಮಕ್ಕಳಿಗೆ ಇಟ್ಟಿದ್ದಾರೆ ಎಂದು ತಿಳಿದುಬರುತ್ತದೆ. ಮೋಳಿಗೆಯ್ಯನವರ ಗವಿಯಲ್ಲಿ ಯಾವುದೇ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆಯುತ್ತಿರಲಿಲ್ಲವಂತೆ. ಮಕ್ಕಳಿಗೆ ಜಡೆ ತೆಗೆಸುವುದು, ಗವಿಯ ಮುಂದೆ ಮದುವೆಮಾಡುವುದು ಹೀಗೆ ಯಾವುದೇ ಕಾರ್ಯಕ್ರಮ ನಡೆಯುತ್ತಿರಲಿಲ್ಲವಂತೆ. ಆದರೆ ಈಗ ಮೂರ್‍ನಾಲ್ಕು ವರುಷಗಳಿಂದ ಜನರಿಗೆ ತಿಳಿಹೇಳಿ ಇವೆಲ್ಲ ಕಾರ್ಯಕ್ರಮಗಳು ನಡೆಯುವಂತೆ ಊರವರು ಪ್ರಯತ್ನ ಮಾಡಿದ್ದಾರೆ. ಈಗ ಮೂರು ವರುಷಗಳಿಂದ ದಾಸೋಹವೂ ನಡೆದಿದೆಯಂತೆ. ಒಬ್ಬ ಸ್ವಾಮಿ ಊರಲ್ಲಿ ಕಂತಿಭಿಕ್ಷೆ ಬೇಡಿ ತಂದು ದಾಸೋಹ ಮಾಡುತ್ತಾನೆ. ಹೆಚ್ಚಿನ ಪ್ರಸಾದ ಅವಶ್ಯವೆನಿಸಿದರೆ, ಗವಿಯ ಪಂಚಕಮಿಟಿಯವರು ಅದರ ವ್ಯವಸ್ಥೆಯನ್ನೂ ಮಾಡುತ್ತಾರೆ.

ಮೋಳಿಗೆ ಮಾರಯ್ಯ : ವಚನಗಳು : ೮೨೦

ವಚನಾಂಕಿತ : ನಿಃಕಳಂಕ ಮಲ್ಲಿಕಾರ್ಜುನಾ

ಮಹಾದೇವಮ್ಮ : ವಚನಗಳು : ೭೦

ವಚನಾಂಕಿತ : ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ

ಮಾಹಿತಿ : ಶಾಂತಕುಮಾರ ನಾವದಗಿ, ಶಿವರುದ್ರಯ್ಯ ಸ್ವಾಮಿ, ಮಲ್ಲಿಕಾರ್ಜುನ ಶಿವರಾಯ, ರೇವಣಸಿದ್ದಪ್ಪ ಕೋಳಾರ, ಶಿವರಾಜ ಡಾಂಗೆ, ಮಾಣಿಕಪ್ಪ ನಾವದಗಿ.

***



ಗವಿಯ ಒಂದು ಒಳ ದೃಶ್ಯ

## ಮೋಳಗೆ ಮಾರಯ್ಯ

ಮೋಳಗಿಯ ಮಾರಯ್ಯ ಭಕ್ತಾ
ಬಸವೇಶನ್ನ ಸೋಲಿಸಿದಾತಾ ॥ ಪ ॥

ನಿತ್ಯ ಅರಣ್ಯಕ್ಕೆ ಹೋಗತಿದ್ದ । ಕಟ್ಟಿಗಿ ತರತಿದ್ದ
ಶಿವಶರಣರಿಗೊಯ್ದು ಮಾರುತಿದ್ದ
ಸ್ವಂತ ಬಂದ ಹಣದಿಂದ ಧಾನ್ಯ ತರವೋತ ॥ ೧ ॥

ಅಂಬಲಿ ಕಾಸಿ ಆಗ ತುತ್ತಾನ್ನ
ಜಂಗಮರಿಗೆ ಉಣಸುತ ನಿಂತಾ
ಬಸವೇಶನ ದಾಸೋಗದೊಳಗಿಂದ
ಮೃಷ್ಟಾನ್ನ ಉಂಡು ಬಂದ
ಅಂಬಲಿ ಕುಡಕುಡದು ಹೋಗುವರು ಖಚಿತಾ
ಅಮೃತಕಿಂತ ರುಚಿ ಅಂತಾ ॥ ೨ ॥

ಬಸವಣ್ಣಗ ತಿಳದೀತ ಈ ಮಾತ
ವೇಷ ಬದಲಿಸ್ಯಾನ ಬೇಕಂತ
ಅಯ್ಯನವರ ರೂಪವನು ಧರಿಸಿ
ಹೋದ ಧಾವಿಸಿ
ಭಕ್ತಿ ಪರೀಕ್ಷಿಸಿ ನೋಡಬೇಕಂತಾ
ಹಸಿವ್ಯಾಗೇದ ಊಟಕ ಹಾಕಿರೆಂತಾ ॥ ೩ ॥

ಮಾರಯ್ಯನ ಹೆಂಡತಿ ಪತಿವ್ರತಾ
ಕರಕೊಂಡ ಹೋದ್ಲ ಮಾಡಿ ಮಮತಾ
ಒಳಗ ಉಚಿತ ಆಸನ ಹಾಸಿ
ಲಿಂಗಾರ್ಚನೆ ಮಾಡಿಸಿ
ಇದ್ದದ್ದ ಉಣಬಡಿಸಿ ತೃಪ್ತಿ ಪಡಿಸೂತಾ
ಸಂತೋಷ ದಿಟವಾಯ್ತು ಶಿಸ್ತಾ ॥ ೪ ॥

ಹೊರಗ ಬರುವಾಗ ತಗದಾನು ಬೇತಾ
ಚರಗಿ ಹತ್ತರ ಮಾಡಿ ಮಸಲತ್ತಾ
ಎರಡು ಸಾವಿರ ವರಹ ತುಂಬಿದ।



ಗವಿಯ ಮಗ್ಗಲು ಇರುವ ಮೋಳಿಗಯ್ಯ ಹಚ್ಚಿದ್ದೆಂದು ಹೇಳುವ ಗಿಡ

ಎರಡು ಚೀಲ ತಗದ
ಮರೆಗೆ ಇಟ್ಟು ನಡದ ಶರಣು ಶರಣಂತಾ
ಮಾರಯ್ಯನ ಮಡದಿಗೆ ತಿಳಿಯದಂತಾ ॥ ೫ ॥

ಮಾರಯ್ಯನು ಹೊರಗಿಂದ ಬರುತಾ
ಸ್ನಾನಮಾಡಿ ಪೂಜೆಗೆ ಕೂಡ್ರುತಾ
ನೀರಿನ ಪಾತ್ರೆಯ ಬದಿಲಿದ್ದ
ವರಹದ ಚೀಲ ತಗದು
ಮರಮರ ಮರುಗಿದ ಯಾರ ಇಟ್ಟಾರಂತ
ಸತಿಯಳನ ಕೇಳ್ಯಾನ ಏಕಾಂತ ॥ ೬ ॥

ಶರಣೊಬ್ಬ ಬಂದಿದ್ದ ಈ ಹೊತ್ತಾ
ಗರತಿ ಹೇಳ್ಯಾಳ ಗುರ್ತ ಹತ್ತಲಿಲ್ಲಂತಾ
ಹಣದ ಚೀಲ ತಾನೆ ಹೊರಗಿಟ್ಟ
ದಾನ ಕೊಟ್ಟುಬಿಟ್ಟ
ಜಾಣತನವೆಷ್ಟು ಜ್ಞಾನಿಗಿಲ್ಲ ಸ್ವಾರ್ಥ।
ಕಾಯಕವೆ ಕೈಲಾಸವೆನುತ । ॥ ೭ ॥

ಗುರುಗಳ ಪಾದೋದಕ ತೀರ್ಥಾ
ಹೊರಿ ಮೇಲೆ ಓದ ಚಿಮಕಿಸುತ।
ಬಂಗಾರಾತ ತುಣಕ ಮಾಡಿ ಮಾಡಿ
ಜಂಗಮರಿಗೆ ನೀಡಿ
ಮಂಗಳಾರತಿ ಹಾಡಿ ಹರುಷವಾಗಿರುತ
ಬಸವರಸನ್ನ ಕರಿಕಳಿಸುತ್ತಾ ॥ ೮ ॥

ಭಕ್ತಿ ಭಾಂಡಾರಿಗಾದಿತ ಗೊತ್ತ
ಮುಕ್ತಿ ಬೇಡಿಕೊಂಡ ಮುಂದ ಬಂದ ನಿಂತಾ
ಮಾಚಿದೇವನ ಮೊಮ್ಮಗ ಹಂಗಿಸಿದ
ವೃಷಭೇಶ ನಿನ್ನಿಂದ
ಬಡತನ್ಹೋತಂದ । ಅಂದ ನಗನಗುತಾ
ಹುಲಕುಂದ ಭೀಮಕವಿಯ ಮಾತಾ ॥ ೯ ॥

– ಕವಿ: ಹುಲಕುಂದ ಭೀಮಕವಿ

***

## ೪. ಗಡವಂತಿ :

## ೧. ಮುಗ್ಧ ಸಂಗಯ್ಯನವರ ಗವಿ

ಮುಗ್ಧ ಶರಣರ ಹಾಡು ಸಿದ್ಧಿಮಂತ್ರವು ನೋಡು
ಸಿದ್ಧಾಗು ಹಾಡ ಹಾಡೂದಕ । ಎಲೆ ಜೀವ
ಶುದ್ಧಾಗಿ ಹೊಂದು ಶಿವಪಥವ

ಹುಮ್ನಾಬಾದ ಸಮೀಪ ರಾಷ್ಟ್ರೀಯ ಹೆದ್ದಾರಿಯಿಂದ ಸ್ವಲ್ಪ ಒಳಗಡೆ ಮಾಣಿಕನಗರ ಎಂಬ ಪ್ರಸಿದ್ಧ ಊರಿದೆ. ಈ ಮಾಣಿಕನಗರವನ್ನು ದಾಟಿ ಸ್ವಲ್ಪ ಮುಂದೆ ಹೋದರೆ ಗಡವಂತಿ ಎಂಬ ಸಣ್ಣ ಗ್ರಾಮ ದೊರೆಯುತ್ತದೆ. ಮೋಳ್ಕೇರಾದಿಂದ ಸುಮಾರು ೫ ಕಿ.ಮೀ. ದೂರದಲ್ಲಿಗೆ ಈ ಊರು ದಾಟಿ ಮುಂದೆ ಒಂದು ಕಿ.ಮೀ.




ಮುಗ್ಧ ಸಂಗಯ್ಯನ ಗವಿ-ಹಳೆಯ ಪ್ರವೇಶ ದ್ವಾರ



ಮುಗ್ಧ ಸಂಗಯ್ಯನ ಗವಿ-ಜೀರ್ಣೋದ್ಧಾರದ ನಂತರ

ಅಂತರದಲ್ಲಿ ಶರಣ ಮುಗ್ಧಸಂಗಯ್ಯನ ಗವಿ ಇದೆ. ಇಲ್ಲಿ ಮುಗ್ಧ ಸಂಗಯ್ಯ ಅವರು ಅನುಷ್ಠಾನ ಮಾಡಿದರು ಎಂದು ಹೇಳಲಾಗುತ್ತದೆ. ಆದರೆ ಈ ಗವಿಯ ವಿಸ್ತಾರವನ್ನು ಗಮನಿಸಿದರೆ, ಮುಗ್ಧ ಸಂಗಯ್ಯ ಇಲ್ಲಿ ಬಹುಕಾಲ ಬಾಳಿರಬೇಕೆನಿಸುತ್ತದೆ.

ಮುಗ್ಧಸಂಗಯ್ಯನವರು ಮೂಲತಃ ಶಿವಪುರದವರು. ಅಲ್ಲಿಯ ಚಿಕ್ಕಮಠದ ಅಧಿಪತಿಯಾಗಿದ್ದವರು. ಅಲ್ಲಿಯೂ ಒಂದು ಗವಿ ಇದ್ದು, ಅಲ್ಲಿಯೇ ಸಂಗಯ್ಯನವರು ಪೂಜೆ ಧ್ಯಾನ ಅನುಷ್ಠಾನ ಮಾಡುತ್ತ ಇರುತ್ತಿದ್ದರು. ನಾರಾಯಣಪುರದಲ್ಲಿರುವ ಚಿಕ್ಕಮಠದ ಪ್ರವೇಶದ್ವಾರದ ಎದುರಿಗೆ, ಚಿಕ್ಕಮಠದ ಅಂಗಳದಲ್ಲಿ ಒಂದು ಸಮಾಧಿ ಇದೆ. ಇದನ್ನು ಮುಗ್ಧ ಸಂಗಯ್ಯನ ಸಮಾಧಿ ಎಂದು ಹೇಳುತ್ತಾರೆ. ಗಡವಂತಿಯಲ್ಲಿರುವ ಗವಿಯೂ ಮುಗ್ಧಸಂಗಯ್ಯನವರಿಗೆ ಸಂಬಂಧಿಸಿದ್ದು, ಇಲ್ಲಿ ಅವರು ತಪಸ್ಸು ಮಾಡಿದ್ದಾರೆ ಎಂದು ಹೇಳಲಾಗುತ್ತದೆ. ಬಿಜಾಪೂರ ತಾಲೂಕಿನ ಒಂದು ಗ್ರಾಮ ಉಪ್ಪಲದಿನ್ನಿ. ಅಲ್ಲಿ ಮುಗ್ಧ ಸಂಗಯ್ಯನವರಿಗೆ ಸಂಬಂಧಿಸಿದ ಒಂದು ಐಕ್ಯಮಂಟಪ ಹಾಗೂ ಒಂದು ದೊಡ್ಡ ಗುಡಿ, ಮತ್ತು ಸಂಗಯ್ಯ ಗಾಣ ಹೊಡೆದನೆಂದು ಹೇಳುವ ಒಂದು ಮನೆ ಇದೆ.

ಗಡವಂತಿಯಲ್ಲಿರುವ ಮುಗ್ಧ ಸಂಗಯ್ಯನವರ ಗವಿ ಸುಮಾರು ೨೦೦೦ ಚದುರ್ ಅಡಿಗಳಷ್ಟು ವಿಸ್ತಾರವಾದ ದೊಡ್ಡ ಗವಿಯಾಗಿದೆ. ನಾವು ನೋಡಿದ ಶರಣರಿಗೆ ಸಂಬಂಧಿಸಿದ ಇದರಂತಹ ಎಲ್ಲ ಗವಿಗಳ ಸ್ವರೂಪ ಹೆಚ್ಚು ಕಡಿಮೆ

ಒಂದೇ ಬಗೆಯಾಗಿದೆ. ನೆಲಕ್ಕೆ ಸಮನಾಗಿ ಗವಿಯ ಮಾಳಿಗೆ ಇದೆ. ಬೀದರಿನ ಕೆಂಪು ಭೂಮಿಯ ಗುಣವೆಂದರೆ ಸ್ವಲ್ಪ ಆಳಕ್ಕೆ ಸುಮಾರು ಮೂರು ಅಡಿ ನೆಲ ಅಗಿದರೆ ಭೂಮಿಯ ಗಟ್ಟಿ ಪದರು ಪ್ರಾರಂಭವಾಗುತ್ತದೆ. ಇಂತಹ ಕೆಂಪಾದ ಗಟ್ಟಿ ಪದರಿನಲ್ಲಿ ಕೆತ್ತಿದ ಇಟ್ಟಿಗೆ ಆಕಾರದ ದೊಡ್ಡ ತುಕಡಿಗಳಿಂದ ಮನೆಗಳನ್ನು ನಿರ್ಮಿಸಿಕೊಳ್ಳುವ ಪರಿಪಾಠ ಬೀದರ ಜಿಲ್ಲೆಯಲ್ಲಿ ಈಗಲೂ ಸಾಮಾನ್ಯವಾಗಿದೆ. ಹೀಗಾಗಿ ಗವಿಗಳ ನಿರ್ಮಾಣಕ್ಕೆ ಬಹು ಅನುಕೂಲವಾದ ಭೂಮಿ ಬೀದರ ಜಿಲ್ಲೆಯಲ್ಲಿದೆ. ಭೂಮಿಯ ಒಳಗಡೆ ಅಗೆಯುತ್ತ ಹೋದರೆ ಮಣ್ಣು ಉದುರಿ ಬೀಳುವುದಿಲ್ಲ. ಅದು ಕಲ್ಲಿನಂತೆ ಗಟ್ಟಿಯಾಗಿ ಇರುತ್ತದೆ.

ಮುಗ್ಧ ಸಂಗಯ್ಯನ ಈ ಗವಿ ಸುಮಾರು ೬೦x೬೦ ಉದ್ದಗಲ ಇದೆ. ಮೊದಲು ಸುರಂಗ ಮಾರ್ಗದಂತೆ ಕೊರೆಯಲು ಪ್ರಾರಂಭಿಸಿ, ಮೆಟ್ಟಲುಗಳನ್ನು ಮಾಡುತ್ತ ಒಳಗಡೆ ಕೊರೆಯುತ್ತ ಕೆತ್ತುತ್ತ ಹೋಗುವ ಪದ್ಧತಿಯಲ್ಲಿ ಈ ಗವಿಗಳೆಲ್ಲ ಇವೆ. ಅವುಗಳ ಮಾಳಿಗೆಯ ದಪ್ಪ ಸುಮಾರು ಒಂದು, ಒಂದುವರಿ ಮೀಟರಿನಷ್ಟಿದೆ. ಅಲ್ಲಲ್ಲಿ ಗಾಳಿ ಬೆಳಕುಗಳ ಅನುಕೂಲತೆಗಾಗಿ ಮಾಳಿಗೆಗೆ ಬೆಳಕಿಂಡಿಯನ್ನು ಕೊರೆದಿದ್ದಾರೆ. ದಪ್ಪ ದಪ್ಪವಾದ ಚೌಕಾಕಾರದ ಕಂಬಳನ್ನು ಕೆತ್ತಿದ್ದಾರೆ. ಒಳಗೆ ಪ್ರವೇಶಿಸುತ್ತಲೇ ಬಲಗಡೆ ಬಾವಿ ಇದೆ. ಎಡಗಡೆ ಗವಿಯ ಭಾಗ ಇದೆ. ನೇರವಾಗಿ ಗವಿಯ ಪ್ರವೇಶ ಭಾಗದ ಎದುರಿಗೆ ಗರ್ಭಗೃಹ ಇದೆ. ಅಲ್ಲಿ ಜೋಡು ಗೋಳಕವುಳ್ಳ ಶಿವಲಿಂಗವಿದೆ. ಮತ್ತೆ ಎಡಗಡೆ ಮತ್ತು ಬಲಗಡೆ ಅಗಲವಾದ ಸ್ಥಳಾವಕಾಶ ಇರುವಂತೆ ಗವಿಯ ನಿರ್ಮಾಣ ಇದೆ. ಸಹಜವಾಗಿ ನಲವತ್ತರಿಂದ ಐವತ್ತು ಜನ ಗರ್ಭಗೃಹದ ಎದುರಿಗೆ ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿದೆ.

ಗಂಗಾಧರಯ್ಯ ಎನ್ನುವವರು ಈಗ ಈ ಗವಿಯಲ್ಲಿ ವಾಸವಾಗಿದ್ದು, ಅವರು ಗವಿಯ ಗೋಡೆ ಮತ್ತು ಮಾಳಿಗೆಗಳನ್ನು ಸಿಮೆಂಟ ಮತ್ತು ಉಸುಕು ಬಳಸಿ ಪ್ಲ್ಯಾಸ್ಟರ್ ಮಾಡಿಸಿದ್ದಾರೆ. ನೆಲಕ್ಕೆ ಶಾಬಾದ ಬಂಡಿಗಳನ್ನು ಹೊದಿಸಿದ್ದಾರೆ. ಮೇಲ್ಮಾಳಿಗೆಗೂ ಶಾಬಾದಿ ಬಂಡಿಗಳನ್ನು ಹಾಕಿಸಿದ್ದಾರೆ. ಗವಿಯ ಮುಂದಿನ ಭಾಗದಲ್ಲಿ ಕೆಸರಾಗದಂತೆ, ಕಲ್ಲುಗಳನ್ನು ಹಾಕಿಸಿದ್ದಾರೆ. ಸುಮಾರು ನಾಲ್ಕು ಎಕರೆಯಷ್ಟು ಭೂಮಿಯಲ್ಲಿ ನಾನಾ ತರದ ಹಣ್ಣಿನ ಗಿಡಗಳನ್ನು ನೆಟ್ಟಿದ್ದಾರೆ. ಹೀಗಾಗಿ ಬರಹೋಗುವವರಿಗೆ ತುಂಬಾ ಆಕರ್ಷಕವಾಗಿ ಕಾಣುತ್ತದೆ ಈ ಗವಿ ಮತ್ತು ಗವಿಯ ಪರಿಸರ.

ಈ ಗವಿಯನ್ನು ಗಮನಿಸಿದರೆ ಇವೆಲ್ಲ ಶರಣರು ತಮಗಾಗಿ ಮತ್ತು ತಮ್ಮ ಅನುಯಾಯಿಗಳಿಗಾಗಿ ವಾಸ ಮಾಡಲು ಅನುಕೂಲವಾಗುವಂತೆ ನಿರ್ಮಿಸಿಕೊಂಡಿದ್ದಾರೆ ಎನಿಸುತ್ತದೆ. ಈ ಗವಿಗಳು ಪೂಜೆ ಮತ್ತು ಧ್ಯಾನಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸಿಕೊಡುತ್ತವೆ. ಹೀಗಾಗಿ ಶರಣರು ಮನೆಗಳನ್ನು ಅಥವಾ ಗುಡಿಗಳನ್ನು ಕಟ್ಟುವ ಬದಲಾಗಿ ಗವಿಗಳನ್ನು ನಿರ್ಮಿಸಿಕೊಂಡರೆಂದು ತೋರುತ್ತದೆ.




ಗವಿಯ ಬಲಪಾರ್ಶ್ವದ ನೋಟ

ಶ್ರಾವಣ ಮಾಸದಲ್ಲಿ ಭಜನೆ, ಕೊನೆಯಲ್ಲಿ ಖಾಂಡ ನಡೆಯುತ್ತದೆ. ಊರಿನ ಜನ ಮಕ್ಕಳ ಜಡಿ ಇಳಿಸುತ್ತಾರೆ, ಹೊಸದಾಗಿ ಮುದುವೆಯಾದ ಮದುಮಕ್ಕಳ ಬಾಸಿಂಗ ಬಿಡುತ್ತಾರೆ, ಸಣ್ಣಪುಟ್ಟ ಹರಕೆಗಳನ್ನು ಹೊರುತ್ತಾರೆ.

ಈ ಶರಣನ ಬಗೆಗೆ ಇಲ್ಲಿರುವವರಿಗೆ, ಮತ್ತು ಊರಿನಲ್ಲಿಯ ಜನಗಳಿಗೆ ಹೆಚ್ಚು ಮಾಹಿತಿ ತಿಳಿದಿಲ್ಲ. ಈತ ವಚನಕಾರನಲ್ಲ. ವಚನಗಳು ದೊರೆತಿಲ್ಲ. ಸ್ಥಳೀಯರಲ್ಲಿ ಮುಗ್ಧಸಂಗಯ್ಯನ ಬಗೆಗೆ ಎರಡು ಪ್ರಸಂಗಗಳು ಪ್ರಸಾರದಲ್ಲಿವೆ:

೧. ಮುಗ್ಧಸಂಗಯ್ಯನವರು ಒಮ್ಮೆ ಬಯಲುಕಡೆಗೆ ಹೋಗಿ ಕುಳಿತಲ್ಲಿಯೇ ಒಂದು ಕೈಯಲ್ಲಿ ಲಿಂಗವನ್ನು ಹಿಡಿದುಕೊಂಡು ಇನ್ನೊಂದು ಕೈಯಿಂದ ಲಿಂಗಪೂಜೆ ಮಾಡುತ್ತಿದ್ದರು. ಅದೇ ಹೊತ್ತಿಗೆ ಕಟ್ಟಿಗೆ ಕಾಯಕ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಮಾರಯ್ಯನವರು ಕಟ್ಟಿಗೆ ಹೊರೆಯನ್ನು ಹೊತ್ತುಕೊಂಡು ಮೋಳ್ಕೇರಾದೆಡೆ ಹೊರಟಿದ್ದರು. ಸಂಗಯ್ಯನವರು ಬಯಲುಕಡೆಗೆ ಕುಳಿತಲ್ಲಿಯೇ ಅಂಗೈಯಲ್ಲಿ ಲಿಂಗ ಹಿಡಿದು, ಪೂಜೆ ಮಾಡಿಕೊಳ್ಳುತ್ತಿದ್ದುದನ್ನು ಕಂಡು ಮಾರಯ್ಯನವರು ನಕ್ಕರಂತೆ. ಮಾರಯ್ಯನವರ ತಲೆಯ ಮೇಲೆ ಕಟ್ಟಿಗೆ ಹೊರೆ ಅಂತರಲೇ ನಡೆಯುತ್ತಿತ್ತಂತೆ. ಅದು ಕೂಡಲೇ ಮಾರಯ್ಯನವರ ತಲೆಯ ಮೇಲೆ ಕುಳಿತುಕೊಂಡಿತಂತೆ. ಇದನ್ನು ಗಮನಿಸಿದ ಮಾರಯ್ಯನವರು ತಾವು ಸಂಗಯ್ಯನವರ ಬಗ್ಗೆ ಹಾಗೆ ಭಾವಿಸಿದ್ದು ತಪ್ಪಾಯಿತೆಂದು, ಕೂಡಲೇ ಕಟ್ಟಿಗೆ ಹೊರೆಯನ್ನು ಕೆಳಗಿಳಿಸಿ, ಸಂಗಯ್ಯನವರು

ಬರುವ ತನಕ ಕಾದುಕೊಂಡಿದ್ದು, ಅವರು ಬಂದಕೂಡಲೇ ಮಾರಯ್ಯನವರು ಅವರ ಕಾಲಿಗೆ ಬಿದ್ದು, ತಮ್ಮ ತಪ್ಪನ್ನು ತೋಡಿಕೊಂಡರಂತೆ. ತಮ್ಮ ಮನದಲ್ಲಿ ಆದ ತಪ್ಪು ಕಲ್ಪನೆಗೆ ಕ್ಷಮೆಯಾಚಿಸಿದರಂತೆ. ನಂತರ ಮಾರಯ್ಯನವರು ತಮ್ಮ ಕಟ್ಟಿಗೆ ಹೊರೆಯನ್ನು ತಲೆಯ ಮೇಲಿರಿಸಿಕೊಂಡಾಗ, ಅದು ಮೊದಲಿನಂತೆ ಅಂತರಲೆ ನಡೆಯ ತೊಡಗಿತಂತೆ. ದೇವರ ಧ್ಯಾನಗೈಯಲು ಶಿವಪೂಜೆ ಮಾಡಲು ಮಾವುದೇ ಸ್ಥಳದ ಕಟ್ಟಳೆಗಳಿಲ್ಲ ಎಂಬುದನ್ನು ಈ ಪ್ರಸಂಗ ಧ್ವನಿಸುತ್ತದೆ.

೨. ಕಲ್ಯಾಣದಲ್ಲಿ ಬಹಳಷ್ಟು ಜನ ವೇಶ್ಯಯರ ಮನೆಗೆ ಹೋಗುವುದನ್ನು ಗಮನಿಸಿ, ಅವರೊಂದಿಗೆ ಅಲ್ಲಿಗೆ ಹೋದ ಮುಗ್ಧಸಂಗಯ್ಯ, ವೇಶ್ಯೆಯ ತೆರೆದೆದೆಯನ್ನೇ ಲಿಂಗವೆಂದು ಭಾವಿಸಿ ಪೂಜಿಸಿದರಂತೆ. ಇಂತಹ ಮುಗ್ಧಗುಣದ ಕಾರಣವಾಗಿಯೇ ಸಂಗಯ್ಯನ ಹೆಸರಿನ ಹಿಂದೆ ಮುಗ್ಧ ಎಂಬ ವಿಶೇಷಣ ಸೇರಿಕೊಂಡಿರಬಹುದು. ಜನರು ಹೇಳಿಕೊಂಡು ಬಂದಿರಬಹುದಾದ ಈ ವಿಷಯವೇ ಕನ್ನಡ ಕಾವ್ಯಗಳಲ್ಲಿ ಕಾಣಿಸಿಕೊಂಡಿದೆ.




ಮುಗ್ಧಸಂಗಯ್ಯನವರ ಗವಿಯ ಗರ್ಭಗೃಹ



ಮುಗ್ಧಸಂಗಯ್ಯನವರ ಗವಿಯ ಗರ್ಭಗೃಹದ ಜೋಡು ಗೋಳಕ ಶಿವಲಿಂಗ

ನೋಡಿ : ಮುಗ್ಧಸಂಗಯ್ಯನವರ ಮಠ–ಗವಿ, ಶಿವಪುರ, ತಾ. ಬಸವಕಲ್ಯಾಣ,
ಮುಗ್ಧಸಂಗಯ್ಯನವರ ಮಠ–ಸಮಾಧಿ, ನಾರಾಯಣಪುರ, ತಾ. ಬಸವಕಲ್ಯಾಣ
ಸಂಗಯ್ಯನ ಮಂದಿರ, ಉಪ್ಪಲದಿನ್ನಿ (ತಾ.ಜಿ. ಬಿಜಾಪೂರ)

***

ಗಡವಂತಿ :

## ೨. ನುಲಿಯ ಚಂದಯ್ಯನವರ ಗವಿ

ಗಡವಂತಿಯಲ್ಲಿ ನುಲಿಯ ಚಂದಯ್ಯನವರ ಒಂದು ಗವಿ ಇದೆ. ತ್ರಿಪುರಾಂತ ಕೆರೆಯ ದಂಡೆಯಲ್ಲಿರುವ ಚಂದಯ್ಯನ ಗವಿಯನ್ನು ಗಮನಿಸಿದರೆ, ಗಡವಂತಿಯಲ್ಲಿರುವ ಗವಿ ಅದಕ್ಕಿಂತಲೂ ದೊಡ್ಡದಾಗಿದೆ. ಇದು ಮಾದಿಗರ ಕೇರಿಯಲ್ಲಿದ್ದು, ನುಲಿಯ ಚಂದಯ್ಯನವರ ಗವಿಯಲ್ಲಿ ನೀರು ಹೋಗದಂತೆ ಮುಂದೆ ಬಾಗಿಲಿನ ಮೇಲೆ ಈಗ ಹೊಸದಾಗಿ ಸ್ವಲ್ಪ ಗೋಡೆ ಕಟ್ಟಿ ಆರ್‌ಸಿಸಿ ಹಾಕಿಸಿದ್ದಾರೆ. ಒಳಗಡೆ ಪ್ಲಾಸ್ಟರ್ ಮಾಡಿಸಿದ್ದಾರೆ. ಮಾದಿಗ ಸಮಾಜದವರು ಈಗ ನುಲಿಯ ಚಂದಯ್ಯನವರ ಗವಿಯ




ನುಲಿಯ ಚಂದಯ್ಯನ ಗವಿಯ ಗರ್ಭಗೃಹ




ನುಲಿಯ ಚಂದಯ್ಯನ ಗವಿ

ಅಭಿವೃದ್ಧಿ ಬಗ್ಗೆ ಆಸ್ಥೆವಹಿಸಿದ್ದಾರೆ. ನುಲಿಯ ಚಂದಯ್ಯ ಈ ಗವಿಯಲ್ಲಿ ಕೆಲದಿನ ಅನುಷ್ಠಾನ ಮಾಡಿ ಹೋಗಿದ್ದಾರೆ. ಅದರ ಸ್ಮಾರಕವಾಗಿ ಅವರ ಹೆಸರಿನಲ್ಲಿ ಈ ಗವಿ ಉಳಿದುಕೊಂಡು ಬಂದಿದೆ ಎಂದು ಹೇಳುತ್ತಾರೆ. ನಮ್ಮ ಸಮಾಜದ ಜನ ನುಲಿಯ ಚಂದಯ್ಯನವರಿಗೆ ನಡೆದುಕೊಳ್ಳುತ್ತೇವೆ, ಹರಕೆ ಹೊರುತ್ತೇವೆ, ಬಯಕೆ ಈಡೇರಿದ ನಂತರ ಇಲ್ಲಿಗೆ ಬಂದು ಹರಕೆ ಸಲ್ಲಿಸಿ ಹೋಗುತ್ತೇವೆ. ಈಂಥ ನಿಷ್ಠುರ ಶರಣ, ಲಿಂಗವೆ ಬೆನ್ನು ಹತ್ತಿದರೂ ಅವನನ್ನು ಪರೀಕ್ಷಿಸಿಯೇ ಒಪ್ಪಿಕೊಂಡ ಅಪರೂಪದ ಶರಣ ನಮ್ಮವನು ಎಂಬುದಕ್ಕೆ ನಮಗೆಲ್ಲ ಅಭಿಮಾನ ಇದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಶ್ರಾವಣಮಾಸದಲ್ಲಿ ಭಜನೆ ಮಾಡುತ್ತಾರೆ. ಕಡೆಯ ಸೋಮವಾರದಂದು ಖಾಂಡ ಮಾಡುತ್ತಾರೆ.

***

ನೋಡಿ : ನುಲಿಯ ಚಂದಯ್ಯನವರ ಗವಿ, ತ್ರಿಪುರಾಂತ ಕೆರೆಯ ಗುಂಟ, ಬಸವಕಲ್ಯಾಣ
ನುಲಿಯ ಚಂದಯ್ಯ ಹುಲ್ಲು ತರುವ ಸ್ಥಳ, ಶಿವಣಗಿ, ತಾ. ಜಿ. ಬಿಜಾಪೂರ

## ೫. ಚಿಟಗುಪ್ಪ :
## ಅನುಭವ ಮಂಟಪದ ಕಲ್ಪನೆ ಕೊಡುವ ಗವಿಗಳು

### ೧. ಮಡಿವಾಳಪ್ಪನ ಗವಿ

ಚಿಟಗುಪ್ಪ ಎಂಬುದು ಹುಮ್ನಾಬಾದ ತಾಲೂಕಿನ ಒಂದು ಪುರಾತನ ಗ್ರಾಮ. ಇಲ್ಲಿ ಊರ ದಕ್ಷಿಣಕ್ಕೆ ಹೊರವಲಯದಲ್ಲಿರುವ ಗುಡ್ಡದಲ್ಲಿ ಮಡಿವಾಳಪ್ಪನ ಗವಿ ಎಂದು ಪ್ರಸಿದ್ಧವಾದ ಒಂದು ಗವಿ ಇದೆ. ಈ ಗವಿಯ ವಿಶೇಷವೆಂದರೆ, ಮುಖ್ಯಗವಿಯ ಮುಂದೆ ವಿಸ್ತಾರವಾದ ಅಂಗಳ ಹೊಂದಿರುವುದು. ಈ ಅಂಗಳದ ವಿಶೇಷತೆ ಎಂದರೆ ಸುತ್ತಮುತ್ತಲೂ ಗುಡ್ಡವಿದ್ದು, ನಡುವೆ ಬಟ್ಟಲಾರಾದಲ್ಲಿ ತಗ್ಗುಪ್ರದೇಶವಿದೆ. ಈ ಪ್ರದೇಶವೇ ಮುಖ್ಯಗವಿಯ ಅಂಗಳದಂತೆ ದೊರಕಿದೆ. ಇದು ನೈಸರ್ಗಿಕವಾಗಿ ದೊರೆತ ಒಂದು ವಿಶೇಷ ಸ್ಥಳ. ಗವಿಯ ಎದುರಿಗೆ ದೊರೆತ ಈ ನೈಸರ್ಗಿಕ ಅಂಗಳದ ಸುತ್ತಲೂ ಗುಡ್ಡದ ವಾರಿ ಹಬ್ಬಿದೆ. ಹೀಗಾಗಿ ಮತ್ತೆ ಸುತ್ತಲೂ ವಾಸಕ್ಕೆ ಅನುಕೂಲವಾಗುವಂತೆ ಗುಡ್ಡದ ವಾರಿಯಲ್ಲಿ ಟಾಕುಗಳನ್ನು ಕೊರೆಯಲಾಗಿದೆ. ಇಲ್ಲಿಯ ಮತ್ತೊಂದು ವಿಶೇಷ ವೆಂದರೆ ಮುಖ್ಯಗವಿ ದಕ್ಷಿಣದ ಗುಡ್ಡದ ಭಾಗದಲ್ಲಿ ಕೊರೆದಿದ್ದು, ಅದರ ಎದುರಿಗೆ ಅಂಗಳ, ಅಂಗಳ ತುದಿಗೆ ಮುಖ್ಯಗವಿಯ ದ್ವಾರಕ್ಕೆ ಸಮನಾಗಿ ಮತ್ತೆ ಗುಡ್ಡ ಕೊರೆದು ಅಲ್ಲಿಂದ ಹೊರಬರಲು ಅನುಕೂಲವಾಗುವಂತೆ ಅಗಸೆ ಆಕರದ ಮಹಾದ್ವಾರವನ್ನು ಕೊರೆಯಲಾಗಿದೆ. ಮುಖ್ಯಗವಿಯ ಮುಂದಿನ ಅಂಗಳದ ವಿಸ್ತಾರ ಕನಿಷ್ಠ ಆರೇಳು ನೂರು ಜನ ಸರಳವಾಗಿ ಕೂಡಬಹುದಾದಷ್ಟು ವಿಸ್ತಾರವಾಗಿದೆ.

ಅಂಗಳದ ದಕ್ಷಿಣಕ್ಕೆ ಇರುವ ಮುಖ್ಯಗವಿಯ ವಿಸ್ತಾರ ನಾವು ಹಿಂದೆ ನೋಡಿದ ಹಂದ್ರಾಳ, ಮೋಳ್ಕೇರಾ ಗವಿಗಳಂತೆ ಸುಮಾರು ४೦x६೦ ಅಡಿ ಅಳತೆ ಉದ್ದಗಲವನ್ನು ಹೊಂದಿದೆ. ಅದನ್ನು ಇನ್ನೂ ಸರಿಯಾಗಿ ಹೇಳಬೇಕೆಂದರೆ ಮುಖ್ಯ ಗದ್ದುಗೆ ಇರುವ ಗರ್ಭಗೃಹದ ಅಳತೆ ३೫ ಅಡಿ ಉದ್ದದ ವರೆಗೆ ೧೬ ಅಡಿ ಅಗಲವಾಗಿದೆ. ಉಳಿದ ६೫ ಅಡಿ ಉದ್ದದ ಗವಿ ३೫ ಅಡಿ ಅಗಲವಾಗಿದೆ. ಅಂಗಳದ ಒಟ್ಟು ವಿಸ್ತೀರ್ಣ ಪೂರ್ವಪಶ್ಚಿಮ ಮುಖವಾಗಿ ೭೦ ಅಡಿ ಅಗಲ ಮತ್ತು ದಕ್ಷಿಣೋತ್ತರವಾಗಿ ६೫ ಅಡಿ ಉದ್ದವಿದೆ. ಇಷ್ಟೊಂದು ವಿಸ್ತಾರವಾದ ಅಂಗಳ ಹೊಂದಿದ ಇನ್ನೊಂದು ಗವಿ ಮತ್ತೆಲ್ಲಿಯೂ ಇಲ್ಲ.



ಮಡಿವಾಳಪ್ಪನ ಗವಿಯ ಅಂಗಳಕ್ಕೆ ಪ್ರವೇಶ ದ್ವಾರ

ಇಲ್ಲಿರುವ ಒಂದು ತೊಂದರೆ ಎಂದರೆ ಈ ಗವಿ ಮಡಿವಾಳಪ್ಪ ಎಂಬ ಒಬ್ಬ ಇತ್ತೀಚಿನ ಸಂತನ ಹೆಸರಿಗೆ ಪ್ರಸಿದ್ಧವಾಗಿರುವುದು. ಮಡಿವಾಳಪ್ಪ ಈ ಗವಿಯನ್ನು ಅಗೆಸಿದರೆಂಬ ಸಂಗತಿ ತೀರ ಪ್ರಚಲಿತವಾಗಿದೆ. ಮಡಿವಾಳಪ್ಪನೇ ಈ ಗವಿ ನಿರ್ಮಿಸಿದನೆಂದೂ ಕೆಲ ಜನಜನಿತ ಕತೆಗಳನ್ನು ಜನ ಹೇಳುತ್ತಾರೆ. ಆದರೆ ಗವಿಯನ್ನು ಗಮನಿಸಿದರೆ ಅದು ಖಂಡಿತ ೧೨ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿದೆ. ಅದರ ರಚನೆಯ ರೀತಿ, ಅದರ ಒಳಮಗ್ಗಲುಗಳನ್ನು ಗಮನಿಸಿದರೆ ನಾವು ನೋಡಿದ ೧೨ನೇ ಶತಮಾನಕ್ಕೆ ಸಂಬಂಧಿಸಿದ ಹಲವಾರು ಗವಿಗಳಂತೆಯೇ ಇದೆ ಈ ಗವಿ. ಆದುದರಿಂದ ಇದು ೧೨ನೇ ಶತಮಾನದ ಗವಿಯೇ ಆಗಿದೆ ಎಂದು ಹೇಳುವುದರಲ್ಲಿ ಎರಡು ಮಾತಿಲ್ಲ. ಈ ಮಾತಿಗೆ ಇನ್ನೊಂದು ಆಂತರಿಕ ಸಾಕ್ಷಿಯನ್ನು ಕೊಡಬಹುದಾಗಿದೆ. ಮಡಿವಾಳಪ್ಪನ ಗದ್ದುಗೆ ಇಲ್ಲಿಯ ಗವಿಯ ಮುಖ್ಯ ಗದ್ದುಗೆ ಅಲ್ಲ. ಅವರ ಗದ್ದುಗೆ ಇರುವುದು ಮುಖ್ಯಗವಿಯ ಬಾಗಿಲಿಗೆ ಹತ್ತಿಕೊಂಡು ಒಳಗಮಗ್ಗಲು ಬಲಕ್ಕೆ ಇದೆ. ಈ ಗವಿಯ ಮುಖ್ಯ ಗದ್ದುಗೆ ಯಾರದೆಂಬುದು ತಿಳಿದುಬರುವುದಿಲ್ಲ. ಅದಕ್ಕಾಗಿ ಈ ಗವಿ ಮಡಿವಾಳಪ್ಪನ ಹೆಸರಿಗೆ ನಂತರ ಪ್ರಸಿದ್ಧವಾಗಿರುವುದು ಖಚಿತವೆನಿಸುತ್ತದ.

ಮಡವಾಳಪ್ಪನ ಬಗ್ಗೆ ಮಾಹಿತಿ ಸಂಗ್ರಹಿಸಿದರೆ, ಇವರು ಬಹಳವೆಂದರೆ ೧೦೦ ಅಥವಾ ೧೧೦ ವರ್ಷಗಳ ಈಚೆಗೆ ಬಾಳಿಬದುಕಿದ ಒಬ್ಬ ಮಹಾತ್ಮರಾಗಿದ್ದಾರೆ. ಇವರ ಜೊತೆ ಹುಡುಗಿ ಗ್ರಾಮದ ಕರಬಸಪ್ಪ ಮತ್ತು ಯಂಕಮ್ಮತಾಯಿ ಎನ್ನುವವರ ಹೆಸರುಗಳು ಜೋಡಣೆಯಾಗುತ್ತವೆ. ಗುರು-ಶಿಷ್ಯರ ಸಂಬಂಧ ಇವರಲ್ಲಿದೆ. **'ಕರಬಸಪ್ಪ**




ಹಸಿರು ಬಣ್ಣವಿರುವುದು ಮುಖ್ಯ ಗವಿಯ ದ್ವಾರದ ಗೋಡೆ. ಈ ಬಾಗಿಲಿನ ಒಳಗಡೆ ಎದುರಿಗೆ ೪೦x೬೦ ಅಡಿ ಅಳತೆ ಉದ್ದಗಲವನ್ನು ಹೊಂದಿದ ವಿಸ್ತಾರವಾದ ಗವಿ ಇದೆ. ಗವಿಯ ಬಾಗಿಲಿನ ಎದುರು ವಿಸ್ತಾರವಾದ ಬಯಲು ಅಂಗಳ.
ಕೆಳಗಿನ ಚಿತ್ರ- ಇನ್ನರ್ಧ ಅಂಗಳದ ಚಿತ್ರ.
ಮಗ್ಗುಲಿಗೆ ಕಾಣುವವು ಜನ ಇಳಿದುಕೊಳ್ಳಲು ಕೊರೆದ ಟಾಕುಗಳು






ಎಡಪಾರ್ಶ್ವದ ಗವಿಯ ಭಾಗದ ಒಳ ಚಿತ್ರ

**ಮುತ್ಯಾ, ಮಡಿವಾಳಪ್ಪ ಸತ್ಯ, ಯಂಕಮ್ಮತಾಯಿ ಶಿವಶರಣೆ**' ಎಂಬ ಮಾತು ಈ ಕಡೆ ಪ್ರಸಿದ್ಧವಾಗಿವೆ. ಈ ಗವಿಯ ಬಗ್ಗೆ ನಮಗೆ ಸುಳುಹು ದೊರೆತುದು ಹಳ್ಳಿಖೇಡ(ಕೆ) ಗ್ರಾಮದಲ್ಲಿ. ಮಡಿವಾಳಪ್ಪ, ಕರಬಸಪ್ಪ ಮತ್ತು ಯಂಕಮ್ಮ ತಾಯಿಯವರ ಬಗ್ಗೆ ಒಂದಿಷ್ಟು ಮಾಹಿತಿ ನೀಡಿದ ಹಳ್ಳಿಖೇಡ(ಕೆ) ಗ್ರಾಮದ ತುಕಾರಾಮ ಭೀಮಣ್ಣ ಹಡಪದ (ವ. ೭೭) ಎನ್ನುವವರು, ತಮ್ಮ ತಂದೆಯವರು 'ಕರಬಸಪ್ಪ ಮುತ್ಯಾ ಅವರನ್ನು ತಾವು ನೋಡಿದ ಬಗ್ಗೆ ಹೇಳುತ್ತಿದ್ದರು' ಎಂದು ಸ್ಮರಿಸಿಕೊಂಡಿದ್ದರು (೨೦೧೦). ಮಡಿವಾಳಪ್ಪ ಮತ್ತು ಯಂಕಮ್ಮ ಕರಬಸಪ್ಪನಿಗಿಂತ ಸಣ್ಣವರು, ಈತನ ಶಿಷ್ಯರು. ಹೀಗಾಗಿ ಏನೇ ಹೇಳಿದರು ಇವರ ಕಾಲಮಾನ ೧೧೦ ವರ್ಷ ದಾಟಿ ಹಿಂದೆ ಹೋಗಲಾರದು. ಮಡಿವಾಳಪ್ಪ ಬಹುಶಃ ಈ ಗವಿಯಲ್ಲಿದ್ದು, ಪೂಜೆ, ಧ್ಯಾನ, ತಪಸ್ಸು ಇತ್ಯಾದಿಗಳನ್ನು ಮಾಡಿರಬೇಕು. ಆದರೆ ಗವಿಮಾತ್ರ ಇವರ ನಿರ್ಮಾಣವಲ್ಲ. ಅಂಗಳವಂತೂ ಅದು ನೈಸರ್ಗಿಕ ಕೊಡುಗೆಯೇ ಆಗಿದೆ. ಆದರೂ ಒಂದು ಮಾತನ್ನು ಇಲ್ಲಿ ಹೇಳಬೇಕು. ಪಶ್ಚಿಮದ ದಿಕ್ಕಿಗೆ ಇರುವ ಟಾಕುಗಳು ಈಗ ಸಂಪೂರ್ಣವಾಗಿ ಹಾಳಾಗಿ ಹೋಗಿದ್ದು, ಅವು ತೀರ ಪುರಾತನವೆನಿಸುತ್ತವೆ. ಈಗ ಆಸ್ಥಳದಲ್ಲಿ ಹೊಸದಾಗಿ ಕಟ್ಟಡ ಕಟ್ಟಿದ್ದಾರೆ. ಕೊರೆದ ಗವಿಯ ಯಾವುದೇ ಭಾಗ ನೂರಿಪ್ಪತ್ತು ವರ್ಷಗಳಲ್ಲಿ ಹಾಳಾಗಲು ಸಾಧ್ಯವಿಲ್ಲ.

ಉತ್ತರಕ್ಕೆ ತೆರೆದುಕೊಂಡಿರುವ ಮುಖ್ಯದ್ವಾರಬಾಗಿಲು ತುಂಬಾ ವಿಸ್ತಾರವಾಗಿದೆ. ಸುಮಾರು ಏಳು ಅಡಿ ಎತ್ತರವುಳ್ಳ ಈ ಬಾಗಿಲು, ಕೆಳಗಡೆ ಒಂಬತ್ತು ಅಡಿ

ಅಗಲವಾಗಿದ್ದು, ಮೇಲ್ಗಡೆ ಕಮಾನಿನ ಆಕಾರದಲ್ಲಿ ಕೊರೆಯಲಾಗಿದೆ. ಇದರ ಒಟ್ಟು ದಪ್ಪ ೨೫ ಅಡಿಗಳಷ್ಟಿದೆ.


ಮುಖ್ಯ ಪ್ರವೇಶ ದ್ವಾರಕ್ಕೆ ಹೊಂದಿಕೊಂಡು ಐದು ದೊಡ್ಡದಾದ ಟಾಕುಗಳಿವೆ. ಒಳಗೆ ಪ್ರವೇಶಿಸಿದರೆ ಮುಖ್ಯಗವಿಯ ಬಲಗಡೆ, ಅಂದರೆ ಗವಿಯ ದ್ವಾರ ಬಾಗಿಲು ಪ್ರವೇಶಿಸಿದವರ ಎಡಗಡೆ ದಕ್ಷಿಣಾಭಿಮುಖವಾಗಿ ಸುಮಾರು ವಿಸ್ತಾರವಾದ ೧೦ ಟಾಕುಗಳಿವೆ. ಇವುಗಳ ಎದುರು ಮಗ್ಗಲು ಕೂಡ ಇಷ್ಟೇ ಟಾಕುಗಳಿದ್ದು ಅವೆಲ್ಲ ಈಗ ಹಾಳಾಗಿ ಹೋಗಿವೆ. ಯು ಆಕಾರದಲ್ಲಿರುವ ಟಾಕುಗಳಲ್ಲಿಯೇ ಕನಿಷ್ಠ ೨೦೦ ಜನ ವಸತಿಮಾಡಬಹುದಾಗಿದೆ.

ಗವಿಯ ದ್ವಾರ ಮತ್ತು ಅದಕ್ಕೆ ಹತ್ತಿಕೊಂಡಿರುವ ಟಾಕುಗಳು, ಒಳಗಡೆ ಎಡಗಡೆ ಕೊರೆದ ಗವಿಯ ಹತ್ತು ಟಾಕುಗಳು ಮತ್ತು ಹಾಳಾಗಿ ಹೋದ ಪಶ್ಚಿಮದ ಟಾಕುಗಳೆಲ್ಲ ಗುಡ್ಡದವಾರೆಯಲ್ಲಿಯೆ ಕೊರೆದವುಗಳಾಗಿದ್ದು, ಅವೆಲ್ಲ ಅಂಗಳಕ್ಕೆ ಮುಖಮಾಡಿವೆ. ಒಟ್ಟು ಸುತ್ತಲೂ ಕೊರೆದ ಗವಿಯ ಭಾಗಗಳು, ನಡುವೆ ಬಹು ಸರಳವಾಗಿ ೫೦೦ ಜನ ( ಏಕೆ ಸಾವಿರ ಜನವೂ) ಕುಳಿತುಕೊಳ್ಳಬಹುದಾದ ವಿಸ್ತಾರವಾದ ಅಂಗಳ ದೊರೆತಿದೆ.

ಈಗ ಮುಖ್ಯ ಗವಿಯ ದ್ವಾರ ಪುನಃ ಪ್ರವೇಶ ದ್ವಾರದ ಎದುರಿಗೆ ಇದೆ. ಅಂದರೆ ಚೌಕಾಕಾರದಲ್ಲಿ ಈ ಗವಿಯ ರಚನೆ ಇದೆ. ಹಾಳಾಗಿ ಹೋಗಿರುವ



ಗವಿಯ ಗರ್ಭಗೃಹದ ಮುಖ್ಯ ಗದ್ದುಗೆ



ಮಡಿವಾಳಪ್ಪನ ಗದ್ದುಗೆ , ಮುಖ್ಯಗವಿಯ ಬಾಗಿಲಿನ ಒಳಗೆ ಬಲಮಗ್ಗಲು ಇದೆ

ಪಶ್ಚಿಮ ದಿಕ್ಕಿನ ಟಾಕುಗಳನ್ನು ಈಗ ಸಂಪೂರ್ಣವಾಗಿ ಅಗಲಿ ಹಾಕಿ, ಅಲ್ಲಿ ಹೊಸ ಮಂಟಪವೊಂದನ್ನು ನಿರ್ಮಿಸಿಕೊಂಡಿದ್ದಾರೆ. ಈಗ ಈ ಗವಿಯ ಅಂಗಳ ಮದುವೆ ಇತ್ಯಾದಿ ದೊಡ್ಡ ಕಾರ್ಯಕ್ರಮಗಳು ನಡೆಯಲು ಅನುಕೂಲವಾಗಿದೆ.

ಈ ಗವಿಯ ಒಟ್ಟು ರಚನೆಯನ್ನು ಗಮನಿಸಿದರೆ ಏನಿಲ್ಲವೆಂದರೂ ಕನಿಷ್ಠ ೫೦೦ ಜನ ಸರಳವಾಗಿ ಸೇರಬಹುದಾದ, ೨೦೦ ಜನ ಸರಳವಾಗಿ ವಾಸಿಸಲು ಅನುಕೂಲವಾಗಿರುವ ಬಹುದೊಡ್ಡ ಅಂಗಳವುಳ್ಳ ಗವಿ ಇದು ಎಂಬುದನ್ನು ಗಮನಿಸಬೇಕು. ಇಷ್ಟೊಂದು ದೊಡ್ಡದಾದ ಗವಿ ಈ ಬಸವಕಲ್ಯಾಣ ಪರಿಸರದಲ್ಲಿ ಬೇರೊಂದು ಇಲ್ಲ.

ಇಷ್ಟೊಂದು ದೊಡ್ಡದಾದ ಗವಿ. ಗವಿಯ ಅಂಗಳ ನಿರ್ಮಾಣ. ಸುತ್ತಲೂ ಬಂದ ಜನ ಉಳಿದುಕೊಳ್ಳಲು ಅನುಕೂಲವಾಗುವಂತೆ ಟಾಕುಗಳ ನಿರ್ಮಾಣ. ಇದು ಈ ಗವಿಯ ವಿಶೇಷತೆ. ಇದನ್ನು ಗಮನಿಸಿದರೆ ಈ ಗವಿ ಆಗಾಗ ದೊಡ್ಡ ಪ್ರಮಾಣದಲ್ಲಿ ಶರಣರು ಸೇರಲು ಉದ್ದೇಶಪೂರ್ವಕವಾಗಿ ನಿರ್ಮಿಸಿಕೊಂಡ ಸ್ಥಾನ

ಇರಬೇಕೆನಿಸುತ್ತದೆ. ಅದಕ್ಕಾಗಿ ಬಸವಕಲ್ಯಾಣದ ಹೊರಗಡೆ ಶರಣರೆಲ್ಲ ಸೇರಿ, ವಿಶೇಷವಾಗಿ ಚರ್ಚೆ ಮಾಡಿಕೊಳ್ಳಲು ಈ ಗವಿಯನ್ನೇನಾದರೂ ಬಳಸಿಕೊಳ್ಳುತ್ತಿದ್ದಿರ ಬಹುದು ಎಂದು ಸಹಜವಾದ ಊಹೆ ಮಾಡಿಕೊಳ್ಳಲು ಅವಕಾಶವಿದೆ. ಇಂತಹ ಅನುಭವ ಈ ಗವಿಯನ್ನು ನೋಡಿದ ಯಾರಿಗಾದರು ಆಗಲು ಸಾಧ್ಯವಿದೆ. ಕಲ್ಯಾಣದಲ್ಲಂತೂ ಇಂತಹ ಯಾವ ಮಹತ್ವದ ಸ್ಮಾರಕಗಳು ಉಳಿದಿಲ್ಲ. ಪೀರಪಾಶಾ ಬಂಗಲಾ ಕಲ್ಯಾಣದಲ್ಲಿ ಅನುಭವಮಂಟಪದಂತೆ ಬಳಕೆಯಾಗುತ್ತಿರಬಹುದೆಂದು ಇಟ್ಟುಕೊಂಡರೂ, ಶರಣರು ಕಲ್ಯಾಣಬಿಟ್ಟು ಹೊರಗಡೆ ಸೇರಲು ಬಯಸಿದಾಗ, ಚಿಟಗುಪ್ಪಾದ ಈ ಗವಿಯನ್ನು **'ಅನುಭವಮಂಟಪ'**ವಾಗಿ ಬಳಸಿಕೊಂಡಿರಬೇಕೆನಿಸುತ್ತದೆ.

ಚಿಟಗುಪ್ಪಾದ ಈ ಗವಿ **'ಅನುಭವಮಂಟಪ'** ಆಗಿರಬಹುದು ಎನ್ನುವುದಕ್ಕೆ ಈ ಗವಿಯ ರಚನೆಯ ರೀತಿ, ಅದರ ವಿಸ್ತಾರ, ಹೊರಗಿನಿಂದ ಬಂದವರಿಗೆ ಉಳಿದುಕೊಳ್ಳಲು ಅನುಕೂಲವಾದ ಸ್ಥಳಾವಕಾಶ, ಸಭೆ ಸೇರಲು ಬಹುದೊಡ್ಡದಾಗಿ ಇರುವ ಅಂಗಣ ಇವು ನಮ್ಮ ಸಹಾಯಕ್ಕೆ ಬರುತ್ತವೆ. ಇವುಗಳ ಜೊತೆಗೆ ಇನ್ನೂ ಒಂದೆರಡು ಸಂಗತಿಗಳು ಕಾರಣವಾಗಿ ನಮಗೆ ಇಲ್ಲಿ ದೊರೆಯುತ್ತವೆ.

೧. ಚಿಟಗುಪ್ಪದಲ್ಲಿ ಈ ಗವಿಯ ಸಮೀಪವೇ ಅಲ್ಲಮಪ್ರಭುಗಳ ಇನ್ನೊಂದು ದೊಡ್ಡಗವಿ ಇರುವುದು.

೨. ಅಲ್ಲಮಪ್ರಭುಗಳೊಂದಿಗೆ ಬಂದ ಸಿದ್ಧರಾಮಶಿವಯೋಗಿ ಹೆಸರಿಗೆ ಇನ್ನೊಂದು ಗವಿ ಇರುವುದು.

೩. ಚಿಟಗುಪ್ಪದಲ್ಲಿ ಸಣ್ಣಗುಡ್ಡ ಒಂದರಲ್ಲಿ ಅನೇಕ ಗವಿಗಳಿರುವ ಗುರುತುಗಳು ಕಾಣುವುದು.

೪. ಈ ಊರಿನಲ್ಲಿ ೩೬೦ ಗೋಸಾಯಿಗಳ ಮನೆ-ಮಠಗಳಿರುವುದು.

ಈ ಎಲ್ಲ ಕಾರಣಗಳಿಂದಾಗಿ ಈ ಊರು ಒಂದು ದೊಡ್ಡ ಶರಣರ ನೆಲೆಯಾಗಿರುವ ಸಾಧ್ಯತೆ ಹೆಚ್ಚು. ಅದರಲ್ಲೂ ಅಲ್ಲಮಪ್ರಭು ಇಲ್ಲಿಯೇ ವಾಸವಾಗಿರುವ ಸೂಚನೆಗಳು ಮಹತ್ವದ ಸಾಕ್ಷಿಗಳೆನಿಸುತ್ತವೆ. ಹೀಗಾಗಿ ಆಗಾಗ ಬಹುಸಂಖ್ಯೆಯ ಶರಣರು ಚಿಟಗುಪ್ಪ ಸೇರಿರುವ ಸಾಧ್ಯತೆ ಇದೆ. ಅದಕ್ಕೆ ಮಡಿವಾಳಪ್ಪನ ಹೆಸರಿನ ಗವಿ ಅನುಕೂಲವಾದ ಸ್ಥಳವೆನಿಸುತ್ತದೆ.

ಈ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡಿದರೆ ನಮಗೆ ಚಿಟಗುಪ್ಪದ ಪರಿಸರದ ಬಗ್ಗೆ ಹೆಚ್ಚಿನ ಶೋಧಗಳು ನಡೆಯಬೇಕಾದ ಅವಶ್ಯಕತೆ ಇದೆ ಎನಿಸುತ್ತದೆ. ಇದಕ್ಕೆ ಪುಷ್ಟಿದಾಯಕವಾಗಿರುವ ಸಂಗತಿಗಳ ಕಡೆ ಈಗ ಗಮನಹರಿಸಬಹುದಾಗಿದೆ.

***

**ಚಿಟಗುಪ್ಪ :**

## ೨. ಅಲ್ಲಮಪ್ರಭುಗಳ ಗವಿ-ಗುಡಿ

ಮಡಿವಾಳಪ್ಪನ ಗವಿ ಎಂದು ಪ್ರಸಿದ್ಧವಾಗಿರುವ ಗವಿಯ ಸಮೀಪದಲ್ಲಿ, ನಾಲ್ಕೈದು ಫರ್ಲಾಂಗುಗಳ ದೂರದಲ್ಲಿ (ಅರ್ಧ ಕಿ.ಮೀ. ಕೂಡ ಸರಿಯಾಗಿ ಇಲ್ಲ) ಪಶ್ಚಿಮಕ್ಕೆ ಅಲ್ಲಮಪ್ರಭುಗಳ ಹೆಸರಿನಲ್ಲಿ ಒಂದು ಗವಿ ಪ್ರಸಿದ್ಧವಾಗಿದೆ. ಈಗ ನಾವು ನೊಡಿರುವ ಹಂದ್ರಾಳ, ರಾಜೇಶ್ವರ, ಮೋಳ್ಕೇರಾ, ಗಡವಂತಿ, ಬೆಮಳಖೇಡ ಗ್ರಾಮಗಳ ಗವಿಗಳಂತೆ ಮಡಿವಾಳಪ್ಪನ ಹೆಸರಿನಲ್ಲಿರುವ ಮುಖ್ಯಗವಿಯ ರಚನೆ ಇದೆ. ಆದರೆ ಇವೆಲ್ಲವುಗಳಿಗಿಂತ ತೀರ ಭಿನ್ನವಾದ ರಚನೆ, ಮತ್ತು ಬಹುವಿಸ್ತಾರವನ್ನು ಅಲ್ಲಮಪ್ರಭುಗಳ ಗವಿ ಹೊಂದಿದೆ.



ಅಲ್ಲಮಪ್ರಭುಗಳ ಗವಿಯ ಪ್ರವೇಶ ದ್ವಾರ



ಅಲ್ಲಮಪ್ರಭುಗಳ ಗುಡಿ

ಈ ಗವಿ ಬಹುದೊಡ್ಡ ಗವಿಯೇ ಆಗಿದೆ. ಈಗ ನಮಗೆ ನೋಡಲು ಸಾಧ್ಯವಿರುವ ಗವಿಯ ಭಾಗ ದಕ್ಷಿಣೋತ್ತರವಾಗಿ ಸುಮಾರು ಒಂದು ನೂರು ಅಡಿಗಳಷ್ಟು ಉದ್ದವಾಗಿದೆ. ದಕ್ಷಿಣದ ಗೋಡೆಗೆ ಹತ್ತಿಕೊಂಡಂತೆ ವೇದಿಕೆ ಮತ್ತು ಅದರ ಮುಂಭಾಗದ ಸ್ಥಳ ಅಂದರೆ ಸುಮಾರು ೩೫ ಅಡಿ ಉದ್ದದ ಸ್ಥಳ ೧೫ ಅಡಿ ಅಗಲವಾಗಿದೆ. ಮುಂದಿನ ೬೫ ಅಡಿ ಉದ್ದದ ಗವಿ ೩೫ ಅಡಿಗಳಷ್ಟು ಅಗಲವಾಗಿದೆ. ಅಂದರೆ ಈ ಸ್ಥಳದಲ್ಲಿ ಸುಮಾರು ಎರಡು ನೂರು ಜನ ಸರಳವಾಗಿ ಕುಳಿತುಕೊಳ್ಳ ಬಹುದಾಗಿದೆ.

ದಕ್ಷಿಣದ ಗೋಡೆಗೆ ಹೊಂದಿ ಕೊಂಡು, ಉತ್ತರಕ್ಕೆ ಮುಖಮಾಡಿ ಒಂದು ದೊಡ್ಡ ಕಟ್ಟೆ ಇದೆ. ಅದರ ಎರಡೂ ಮಗ್ಗಲು ಒಂದೊಂದು ಕಡೆ ಸುಮಾರು ಎಂಟ್ಹತ್ತು ಜನ ಕುಳಿತುಕೊಳ್ಳಲು ಅನುಕೂಲಕರವಾದ ಕಟ್ಟೆಯ (ಜಗಲಿ) ಭಾಗಗಳಿವೆ. ಈ ಗವಿಯಿಂದ ಮಡಿವಾಳಪ್ಪನ ಗವಿಗೆ ಹೋಗಲು ದಾರಿ ಇದೆ ಎಂದು ಹೇಳುತ್ತಾರೆ. ಮಡಿವಾಳಪ್ಪನ ಗವಿ ಇತ್ತೀಚಿನದಾದರೆ ಅಲ್ಲಮಪ್ರಭುವಿನ ಗವಿಯಿಂದ ಮಡಿವಾಳಪ್ಪನ ಗವಿಗೆ ಹೋಗಲು ದಾರಿ ಇರುವ ಮೌಖಿಕ ಮಾಹಿತಿ ಉಳಿದುಕೊಂಡು ಬರುವ ಸಾಧ್ಯತೆ ಇರಲಿಲ್ಲ.

**'ಅನುಭವ ಮಂಟಪ'ವು** ಅಲ್ಲಮಪ್ರಭುಗಳ ನೇತೃತ್ವದಲ್ಲಿ ನಡೆಯುತ್ತಿತ್ತು ಎಂಬುದನ್ನು ನೆನಸಿಕೊಂಡರೆ ಈ ಅಲ್ಲಮಪ್ರಭುಗಳ ಗವಿ ಹಲವಾರು ಜನ ಕುಳಿತುಕೊಂಡು ಅನುಭವವನ್ನು ಆಲಿಸಲು ಅನುಕೂಲವಾದ ಸ್ಥಳವಾಗಿದೆ. ಹಾಗೆ ನೋಡಿದರೆ ಈ ಗವಿಯೂ ಅನುಭವಮಂಟಪವಾಗಿಯೇ ಉಪಯೋಗವಾಗಿರುವ ಸಾಧ್ಯತೆ ಇದೆ. **'ಅನುಭವ ಮಂಟಪ'** ದ ಚಟುವಟಿಕೆಗಳು, ಚರ್ಚೆಗಳು ಒಂದೇ ಕಡೆ ನಡೆಯುತ್ತಿದ್ದವು ಎಂದು ಖಂಡಿತ ಅರ್ಥ ಅಲ್ಲ.




ಅಲ್ಲಮಪ್ರಭುಗಳ ಗುಡಿಯ ಗರ್ಭದಲ್ಲಿರುವ ಗದ್ದಿಗೆ

ಅಲ್ಲಮಪ್ರಭುಗಳ ಈ ಗವಿಯಲ್ಲಿ ಉತ್ತರಕ್ಕೆ ಇರುವ ಕಟ್ಟೆ ಅಲ್ಲಮ ಪ್ರಭುಗಳು ಕುಳಿತುಕೊಳ್ಳಬಹುದಾದ ಕಟ್ಟೆ ಎಂದಾದರೆ, ಅದರ ಎರಡೂ ಮಗ್ಗಲು ಇರುವ ಕಟ್ಟೆಗಳ ಮೇಲೆ ಪ್ರಮುಖ ಹಿರಿಯ ಶರಣರು ಕುಳಿತುಕೊಳ್ಳುವ ಸ್ಥಳವೆಂದೂ ಊಹಿಸಬಹುದಾಗಿದೆ. ಅಲ್ಲಮಪ್ರಭುಗಳು ಇದ್ದೆಡೆಯಲ್ಲಿ ಆಧ್ಯಾತ್ಮದ ಚರ್ಚೆಗಳು ನಿರಂತರವಾಗಿ ನಡೆಯುತ್ತಿದ್ದಿರಬಹುದು ಎಂಬುದಕ್ಕೆ ಈ ಗವಿಯ ರಚನೆ ನಮಗೆ ಸಾಕ್ಷಿಯನ್ನು ಒದಗಿಸುತ್ತದೆ.

ಈ ಗವಿಯಿಂದ ಸ್ವಲ್ಪ ದೂರದಲ್ಲಿಯೇ ಹಿಂಬದಿಯಲ್ಲಿ, ಪಶ್ಚಿಮದ ಒಂದು ಮಗ್ಗಲು **'ಪ್ರಭುದೇವರ ಗುಡಿ'** ಎಂದು ಹೇಳಲಾಗುವ ಒಂದು ಸ್ಮಾರಕವಿದೆ. ಈಗ ಅದನ್ನು ಪುನರ್‌ನವೀಕರಣಗೊಳಿಸಲಾಗುತ್ತಿದೆ. ಅಲ್ಲಿ ಒಂದು ಲಿಂಗವಿದೆ. ಈ ಗುಡಿ ಇರುವ ಸ್ಥಳವನ್ನು ಪರಿಶೀಲಿಸಿದರೆ, ಸುತ್ತಮುತ್ತಲೂ ಸುಮಾರು ಒಂದು ನೂರು ಅಡಿ ಚದುರ್ ವಿಸ್ತಾರದಲ್ಲಿ ಅಡಿಪಾಯದಂತೆ ಕಾಣುವ ಕಲ್ಲಿನ ಕಟ್ಟಡದ ಗುರುತು ಕಾಣುತ್ತದೆ. ಇದನ್ನು ಗಮನಿಸಿದರೆ ಪ್ರಭುದೇವರ ಗುಡಿಯ ಕೆಳಗೆ ಇನ್ನೊಂದು ಗವಿ ಇರುವ ಸಾಧ್ಯತೆ ತೋರುತ್ತದೆ. ಈ ವಿಸ್ತಾರದಲ್ಲಿ ಗವಿ ಇದ್ದರೆ ಇದನ್ನು ಪ್ರಭುದೇವರು ವಾಸಿಸಲು ಬಳಸುತ್ತಿದ್ದರೆಂದು ಇಟ್ಟುಕೊಳ್ಳಬಹುದಾಗಿದೆ. ಅಂದರೆ ಈಗ ಪ್ರಭುದೇವರ ಹೆಸರಿನಲ್ಲಿರುವ ಗವಿ ಶರಣರು ಅನುಭಾವದ ಚರ್ಚೆಗಾಗಿ ಬಳಸುತ್ತಿದ್ದ ಗವಿ ಎಂದೇ ತೋರುತ್ತದೆ. **ಅದಕ್ಕಾಗಿ ಅಲ್ಲಮಪ್ರಭುಗಳ ಗವಿ ದಿನನಿತ್ಯವೂ ಅನುಭಾವದ ಚರ್ಚೆ ನಡೆಯುವ ಅನುಭವಮಂಟಪವೇ ಆಗುತ್ತದೆ.**




**ಅಲ್ಲಮಪ್ರಭುಗಳ ಗವಿಯ ನೋಟ**

ಇದೆಲ್ಲವನ್ನೂ ಗಮನಿಸಿದರೆ, ಕಲ್ಯಾಣದ ಹೊರಗಡೆ ಪ್ರಮುಖ ಶರಣರ ನೆಲೆಗಳಿದ್ದು, ಶರಣರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕೇಂದ್ರಗಳಾಗಿ ಈ ಗವಿಗಳು ತೋರುತ್ತವೆ. ಅಲ್ಲಮಪ್ರಭುಗಳು ಒಂದು ವೇಳೆ ಚಿಟಗುಪ್ಪದಲ್ಲಿಯೇ ವಾಸವಾಗಿರುವುದನ್ನು ನಾವು ಒಪ್ಪಬಹುದಾದರೆ, ಈಗ ಅಲ್ಲಿ ಮಡಿವಾಳಪ್ಪನ ಹೆಸರಿಗೆ ಇರುವ ಮುಖ್ಯವಾದ ಗವಿ, ಗವಿಯ ಅಂಗಳ ಸಾಕಷ್ಟು ವಿಸ್ತಾರವಾಗಿರುವುದರಿಂದ ವಿಶೇಷವಾಗಿ ಬಹುಸಂಖ್ಯೆಯ ಶರಣರೆಲ್ಲ ಸೇರಿ ಅನುಭಾವದ ಚರ್ಚೆ ನಡೆಸಲು ಬಳಕೆಯಾದ ಸ್ಥಳವೆಂದು ಇಟ್ಟುಕೊಳ್ಳಲು ಅಡ್ಡಿಯಿಲ್ಲ. ಹೀಗಾಗಿ ಮಡಿವಾಳಪ್ಪನ ಗವಿಯು **'ಅನುಭವ ಮಂಟಪ'** ಆಗಿರುವ ಸಾಧ್ಯತೆ ಹೆಚ್ಚುತ್ತದೆ. ಅಲ್ಲಮಪ್ರಭುಗಳ ಹೆಸರಿಗೆ ಪ್ರಸಿದ್ಧವಾಗಿರುವ ಗವಿ ಮತ್ತೊಂದು ಅಂತಹ ಉದ್ದೇಶದ ಗವಿಯೇ ಆಗುತ್ತದೆ. ಈ ಹಿನ್ನೆಲೆಯಲ್ಲಿ ಹಂದ್ರಾಳ, ರಾಜೇಶ್ವರ, ಮೋಳ್ಕೇರಾ, ಗಡವಂತಿ, ಬೆಮಳಖೇಡ ಈ ಮುಂತಾದ ಗವಿಗಳಲ್ಲೂ ದಿನನಿತ್ಯವೂ ಅನುಭಾವದ ವಿನಿಮಯ ನಡೆದಿರುವ ಸಾಧ್ಯತೆ ಇದೆ. ಮತ್ತು ಈ ಬಗೆಯಲ್ಲಿ ಹೆಚ್ಚು ಜನ ಶರಣರು ಒಂದೆಡೆ ಇರುವ ಸ್ಥಳಗಳಲ್ಲೂ ನಿತ್ಯವೂ ಈ ಬಗೆಯ ಚರ್ಚೆಗಳು ನಡೆಯುತ್ತಿದ್ದವೆಂದು ಗ್ರಹಿಸಲು ಅಡ್ಡಿಯಿಲ್ಲ. ಅದಕ್ಕಾಗಿ ದಿನನಿತ್ಯ ಚರ್ಚೆಗಳು ನಡೆಯುವ ಸ್ಥಳಗಳು, ಮತ್ತು ವಿಶೇಷವಾಗಿ ಚರ್ಚೆ ನಡೆಯುವ ಸ್ಥಳಗಳು ಬೇರೆಬೇರೆಯಾಗಿರಲು ಸಾಧ್ಯವಿದೆ. ಕಾರಣ ಅಲ್ಲಮರಿರುವ ಕಡೆ ವಿಶೇಷ ಸಮಾವೇಶಗಳು ನಡೆಯುತ್ತಿರಬೇಕೆಂದು ಗ್ರಹಿಸುವುದು ಸೂಕ್ತವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಚಿಟಗುಪ್ಪದ ಗವಿಗಳು ಅನುಭವ ಮಂಟಪದ ಕಲ್ಪನೆಯನ್ನು ಕೊಡುವುದರಿಂದ ಮಹತ್ವಪಡೆಯುತ್ತವೆ.




ಗವಿಯ ವೇದಿಕೆಯ ಭಾಗ
(ಎರಡು ಕಟ್ಟೆಗಳು ನಂತರದವು, ಸಭಾಂಗಣದ ಮಧ್ಯದಲ್ಲಿವೆ)

ಗವಿಯ ಇನ್ನರ್ಧ ಭಾಗ



**ಚಿಟಗುಪ್ಪ :**

## ೩. ಸಿದ್ಧರಾಮೇಶ್ವರ ಗವಿ

ಚಿಟಗುಪ್ಪ ತೀರ ಪುರಾತನವಾದ ಗ್ರಾಮವಾಗಿದ್ದು, ಈ ಊರು ಬಿಟ್ಟು ದೂರ ಇರುವ ಗುಡ್ಡದ ಮಗ್ಗುಲಿಗೆ ಮಡಿವಾಳಪ್ಪನ ಹೆಸರಿನ ಗವಿ ಇದೆ. ಈ ಗವಿಯಿಂದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಅಲ್ಲಮಪ್ರಭುಗಳ ಗವಿ ಮತ್ತು ಗುಡಿಗಳಿರುವುದು ಇಷ್ಟೆಲ್ಲ ಊಹೆಗೆ ಕಾರಣವಾಗಿದೆ. ಈ ಕಾರಣಕ್ಕೆ ಮತ್ತೆ ಒಂದು ಸಂಗತಿಯನ್ನು ಸೇರಿಸಬಹುದಾಗಿದೆ. ಈ ಊರಿನಲ್ಲಿ ಇನ್ನೊಂದು ಗವಿ ಇದೆ. ಅದು ಮುಖ್ಯಗವಿಯಿಂದ ಅಲ್ಲಮಪ್ರಭುಗಳ ಗವಿಯಷ್ಟೇ ದೂರವಿದ್ದು, ಉತ್ತರಕ್ಕೆ ಇದೆ. ಇದನ್ನು ಸಿದ್ಧರಾಮೇಶ್ವರ ಗವಿ ಎಂದು ಹೇಳಲಾಗುತ್ತದೆ. ಈಗ **ಮಾರ್ಖಂಡೇಯ ಗವಿ** ಎಂದು ಕರೆಯಲಾಗುತ್ತಿದ್ದು, ಮಾರ್ಖಂಡೇಯನ ಭಕ್ತರು ಇದನ್ನು ವಶಪಡಿಸಿಕೊಂಡಿದ್ದಾರೆ. ಈ ಊರಿನಲ್ಲಿ ಇನ್ನೊಂದು ಕಡೆ ಗವಿಗಳ ಸಂಕೀರ್ಣವೇ ಇದೆ.




ಸಿದ್ಧರಾಮೇಶ್ವರ ಗವಿ




ಸಿದ್ಧರಾಮೇಶ್ವರ ಗವಿಯ ಗರ್ಭಗೃಹ,

ಅಲ್ಲಮಪ್ರಭುಗಳಿಗೆ ಸಂಬಂಧಿಸಿದಂತೆ ಕಲ್ಯಾಣದಲ್ಲಿ ಒಂದು ಗವಿಮಠ ಬಿಟ್ಟರೆ, ಈಗ ಅಲ್ಲಿ ಬೇರೇನೂ ಇಲ್ಲ. ಬಸವಕಲ್ಯಾಣ ಪರಿಸರದಲ್ಲಿ ಈಗ ಅವರ ದೊಡ್ಡ ಸ್ಮಾರಕವೆಂದರೆ ಚಿಟಗುಪ್ಪದಲ್ಲಿರುವ ಗವಿ ಮತ್ತು ಗುಡಿಗಳೇ ಆಗುತ್ತವೆ. ಸಿದ್ಧರಾಮನಿಗೆ ಸಂಬಂಧಿಸಿದಂತೆ ಶಿವಪುರದಲ್ಲಿರುವ ಒಂದು ಗುಡಿ ಬಿಟ್ಟರೆ, ಚಿಟಗುಪ್ಪದಲ್ಲಿರುವ ಗವಿಯೇ ಅವರ ಸ್ಮಾರಕವೆನಿಸುತ್ತದೆ. ಆದರೆ ಅದನ್ನು ಮಾರ್ಕಂಡೇಯ ಗವಿಯಾಗಿ ಪರಿವರ್ತಿಸಲಾಗಿದೆ. ಈ ಎಲ್ಲದರ ನಡುವೆ ಆಶ್ಚರ್ಯದ ಸಂಗತಿಯೆಂದರೆ ಚಿಟಗುಪ್ಪದ ಜನರಿಗೆ ಈ ಎಲ್ಲ ಸ್ಮಾರಕಗಳ ಬಗ್ಗೆ ಅರಿವಿರದೇ ಇರುವುದು. ಅನುಭವ ಮಂಟಪವಾಗಿರಬಹುದಾದ ದೊಡ್ಡ ಗವಿಯನ್ನು ಮಡಿವಾಳಪ್ಪನ ಗವಿಯಾಗಿಸಿರುವುದು, ಸಿದ್ಧರಾಮನ ಗವಿಯನ್ನು ಮಾರ್ಕಂಡೇಯ ಗವಿಯಾಗಿಸಿರುವುದು, ಅಲ್ಲಮನ ಗವಿಯ ಮಗ್ಗಲು ತಯಾರಾಗಿರುವ ಒಂದು ಆಶ್ರಮದವರು ತಮ್ಮ ಸ್ವಂತ ಆಸ್ತಿ ಎಂಬಂತೆ ಅಲ್ಲಮಪ್ರಭುಗಳ ಗವಿ ಮತ್ತು ಗುಡಿಗಳ ಸ್ಥಳಗಳನ್ನು ಉಪಯೋಗಿಸಿಕೊಳ್ಳುತ್ತಿರುವುದು ಇವೆಲ್ಲ ಚಿಟಗುಪ್ಪದಲ್ಲಿ ೧೨ನೇ ಶತಮಾನದ ಶರಣರ ಬಗೆಗೆ ಆಸಕ್ತಿ ಉಳಿಯದೇ ಇರಲು ಕಾರಣವಾಗಿರುವಂತೆ ತೋರುತ್ತದೆ.

***

**ಚಿಟಗುಪ್ಪ :**

## ೪. ಗವಿಗಳ ಸಂಕೀರ್ಣ ದಿನ್ನೆ

ಚಿಟಗುಪ್ಪ ಗ್ರಾಮದಲ್ಲಿ ಊರಿನ ನಡುವೆ ಬಸ್‌ಸ್ಟ್ಯಾಂಡ್ ಹಿಂದುಗಡೆ ಒಂದು ಗುಡ್ಡದಂತಹ ದೊಡ್ಡ ದಿನ್ನೆ ಇದೆ. ಆ ದಿನ್ನೆಯ ಮೇಲೆ ಒಂದು ಗವಿ ಇದೆ. ಅದನ್ನು ಮುಸ್ಲೀಮ ಜನಾಂಗ ತಮ್ಮ ವಶಕ್ಕೆ ತೆಗೆದುಕೊಂಡು ಹಸಿರುಬಣ್ಣ ಬಳೆದಿದ್ದಾರೆ. ಹೆಸರು ಬೇರೆ ಇಟ್ಟಿದ್ದಾರೆ. ಆದರೆ ಸಮೀಪಕ್ಕೆ ಹೋಗಿ ನೋಡಿದರೆ, ಅದರ ಒಳಮೈಯನ್ನು ಗಮನಿಸಿದರೆ ಅದು ಖಂಡಿತ ಮತ್ತೊಂದು ದೊಡ್ಡ ಗವಿಯೇ ಇದೆ. ಈ ದಿನ್ನೆಯ ವಾರಿಯಲ್ಲಿ ಮತ್ತೆ ಗವಿಗಳ ಗುರುತುಗಳಿವೆ. ಹೀಗಾಗಿ ಈ ದಿನ್ನೆಯು ಗವಿಗಳ ಸಂಕೀರ್ಣವೇ ಹೊಂದಿದೆ. ಹಲವಾರು ಜನ ಶರಣರು ಇಲ್ಲಿ ವಾಸವಾಗಿರುವ ಸಾಧ್ಯತೆ ಇದೆ.




ಬಸ್ ನಿಲ್ದಾಣದ ಹಿಂದೆ ಇರುವ ದಿನ್ನೆಯ ಮೇಲಿರುವ ಗವಿ
ಈ ಗವಿ ಇರುವ ದಿನ್ನೆಯ ಸತ್ತಲೂ ಮತ್ತೆ ಸಣ್ಣ ಸಣ್ಣ ಗವಿಗಳಿರುವ ಗುರುತುಗಳಿವೆ.

**ಚಿಟಗುಪ್ಪ :**

## ೫. ಗೋಸಾಯಿಗಳ ೩೬೦ ಮಠಗಳು

ಈ ಊರಿನ ಇನ್ನೊಂದು ವಿಶೇಷವೆಂದರೆ, ಇಲ್ಲಿ ೩೬೦ ಗೋಸಾಯಿಗಳ ಮನೆಗಳಿರುವುದು. ಗೋಸಾಯಿಗಳು ಮೂಲತಃ ನಾಥಪಂಥೀಯರಾಗಿದ್ದು, ಶಿವನ ಆರಾಧಕರಾಗಿದ್ದಾರೆ. ಬಸವಣ್ಣನವರ ಅನುಯಾಯಿಗಳಾಗಿದ್ದವರಲ್ಲಿ ಈ ಗೋಸಾಯಿಗಳು ಪ್ರಮುಖರಾಗಿದ್ದಾರೆ ಎನಿಸುತ್ತದೆ. ಎಲ್ಲಿ ಶರಣರ ಸ್ಮಾರಕಗಳು ನಮಗೆ ಕಾಣುತ್ತಿವೆಯೋ ಅಲ್ಲೆಲ್ಲ ಈ ಗೋಸಾಯಿಗಳ ವಾಸ್ತವ್ಯ ಕಾಣುತ್ತಿದೆ. ಅದಕ್ಕಾಗಿ ಇಲ್ಲಿರುವ ಗವಿಗಳನ್ನು ಗಮನಿಸಿದರೆ, ಅಲ್ಲೆಲ್ಲ ಇವತ್ತಿಗೂ ಧುನಿಗಳು ಉರಿಯುತ್ತಿವೆ, ತ್ರಿಶೂಲ ನೆಟ್ಟಿರುವುದು ಕಾಣುತ್ತಿದೆ. ಇದನ್ನು ಗಮನಿಸಿದರೆ, ಪ್ರಮುಖವಾಗಿ ಗೋಸಾಯಿಗಳು ಶರಣರ ಅನುಯಾಯಿಗಳಾಗಿದ್ದು, ಧಾರ್ಮಿಕ ಮತ್ತು ಆಧ್ಯಾತ್ಮಿಕ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರೆಂದು ತೋರುತ್ತದೆ. ಅವರಲ್ಲಿ ಅನೇಕರು ಬಸವನ ಪ್ರಭಾವಕ್ಕೆ ಒಳಗಾಗಿ ಶರಣರಾಗಿರುವ ಸಾಧ್ಯತೆ ಇದೆ ಎನಿಸುತ್ತದೆ. ಕಾರಣ ಈ ಮಡಿವಾಳಪ್ಪನ ಹೆಸರಿಗೆ ಪ್ರಸಿದ್ಧವಾಗಿರುವ ವಿಸ್ತಾರವಾದ ಗವಿ **'ಅನುಭವಮಂಟಪ'**ವೇ ಆಗಿರುವ ಸಾಧ್ಯತೆ ಇದೆ.

ಈ ಗೋಸಾಯಿಗಳು ೧೨ನೇ ಶತಮಾನಕ್ಕಿಂತ ಮುಂಚೆ ಉತ್ತರಭಾರತದಿಂದ ಬಂದವರು. ಮಹಾದೇವನ ಬಕ್ತರಾದ ಗೋಸಾಯಿಗಳು ಕಲ್ಯಾಣದೆಡೆಗೆ ಬಂದಿರಲು ಮುಖ್ಯವಾದ ಕಾರಣವೆಂದರೆ, ಬಸವಣ್ಣನವರ ಶಿವನ ಭಕ್ತಿ, ಏಕದೇವೋಪಾಸನೆ ಈ ಸಂಗತಿಗಳಿಗಾಗಿಯೆ ವಿಶೇಷವಾಗಿ ಉತ್ತರ ಭಾರತದಿಂದ ಕೆಲ ಜನ ಗೋಸಾಯಿಗಳು ಬಂದಿರುವ ಸಾಧ್ಯತೆ ಇದೆ. ಬಹುಶಃ ಗೋಸಾಯಿಗಳೂ ಹಾಗೆ ಬಂದಿರಬೇಕು. ಕೆಲ ಗೋಸಾಯಿಗಳು ಲಿಂಗಧಾರಿಗಳಾಗಿರುವುದೂ ಮುಖ್ಯವಾಗಿದೆ. ವಿಶೇಷವಾಗಿ ನಾರಾಯಣಪುರದ ಒಕ್ಕಲಿಗ ಮುದ್ದಯ್ಯನ ಪೂಜೆ ಮಾಡುವವರು ಲಿಂಗಧಾರಿಗಳಾದ ಗೋಸಾಯಿಗಳು. ಅವರು ಮುದ್ದಯ್ಯನ ಸಂಬಂಧವನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಹಳ್ಳಿಖೇಡ(ಕೆ) ಗ್ರಾಮದಲ್ಲಿ ಕಿನ್ನರಯ್ಯನ ಗುಡಿಯ ಮಗ್ಗುಲಿಗೆ ಗೋಸಾಯಿಗಳ ಮಠವಿದೆ. ನಾವು ಗಮನಿಸಿದಂತೆ ಭಾಲ್ಕಿ, ಬಸವಕಲ್ಯಾಣ, ಚಿಟಗುಪ್ಪ, ನಾರಾಯಣಪುರ, ಹಾಲಹಳ್ಳಿ ಹೀಗೆ ಶರಣರ ಸ್ಮಾರಕಗಳಿರುವ ಕಡೆ ಗೋಸಾಯಿಮನೆ-ಮಠಗಳಿವೆ. ಬಸವಕಲ್ಯಾಣದಲ್ಲಿ ಒಂದು ಗೋಸಾಯಿಗಳ ದೊಡ್ಡ ಮಠಕ್ಕೆ ಮಹಾಂತಮಠ ಎಂದಿರುವುದು ಗಮನಿಸಬೇಕಾದ ಸಂಗತಿ.

ಗೋಸಾಯಿಗಳು ತಮ್ಮ ಮನೆಗಳನ್ನೇ ಮಠಗಳೆಂದು ಕರೆದುಕೊಳ್ಳುತ್ತಾರೆ. ಬಹುಶಃ ಗೋಸಾಯಿಗಳಲ್ಲಿ ಉಳಿದುಕೊಂಡು ಬಂದಿರುವ ಈ ಮಠಗಳ ಕಲ್ಪನೆಗೆ ಶರಣ ತತ್ತ್ವದ ಹಿನ್ನೆಲೆಯೇ ಇರಬೇಕು. ಚೆನ್ನಬಸವಣ್ಣನವರು ಕಲ್ಯಾಣದಲ್ಲಿರುವ ಮಠಗಳ ಲೆಕ್ಕ ಹೇಳುವ ಬಗೆಯನ್ನು ಗಮನಸಿದರೆ ಅಲ್ಲಿ ಮನೆಗಳನ್ನು ಮಠಗಳೆನ್ನುತ್ತಿದ್ದಾರೆ ಎನಿಸುತ್ತದೆ. ಗೋಸಾಯಿಗಳು ಮನೆಗಳನ್ನೇ ಮಠಗಳೆಂದು ಸ್ವೀಕರಿಸಿದ ಕಾರಣ ಶರಣತತ್ತ್ವವೇ ಆಗಿರಬಹುದಾಗಿದೆ.

ಗೋಸಾಯಿಗಳಲ್ಲಿ ದಾಸೋಹದ ಒಂದು ವಿಶೇಷ ಪದ್ಧತಿ ಉಳಿದುಕೊಂಡು ಬಂದಿದೆ. ಚಿಟಗುಪ್ಪದಲ್ಲಿದ್ದ ೩೬೦ ಮನೆಯ ಗೋಸಾಯಿಗಳು ಒಂದು ದಿನ ಒಬ್ಬರ ಮನೆಯಲ್ಲಿಯೇ ಎಲ್ಲರ ಊಟದ ವ್ಯವಸ್ಥೆ ಮಾಡುತ್ತಿದ್ದರಂತೆ. ಹೀಗಾಗಿ ವರ್ಷಕ್ಕೊಮ್ಮೆ ಮಾತ್ರ ಒಂದು ಮನೆಯ ಸರದಿ ಬರುತ್ತಿತ್ತಂತೆ. ಇದು ಈಗ ಕೆಲವುವರ್ಷಗಳ ಹಿಂದಿನವರೆಗೂ ನಡೆದುಕೊಂಡು ಬಂದಿತ್ತು ಎಂದು ಹೇಳಲಾಗುತ್ತದೆ. ಇವೆಲ್ಲ ಶರಣರ ಆಂದೋಲನದ ಫಲಶೃತಿಗಳೇ ಆಗಿರುವ ಸಾಧ್ಯತೆ ಇದೆ.

ಆದರೆ ಗೋಸಾಯಿಗಳು ಇತ್ತೀಚೆಗೆ ವೈದಿಕದ ಕಡೆಗೆ ವಾಲಿರುವುದು ಅವರ ಅನೇಕ ಮನೆಗಳನ್ನು ಗಮನಿಸಿದಾಗ ಕಂಡುಬರುವ ಒಂದು ಸಂಗತಿ. ಇತ್ತೀಚೆಗೆ, ಅಂದರೆ ಸುಮಾರು ಒಂದು ನೂರು ವರ್ಷದ ಒಳಗಡೆ ಯಾರೋ ಒಬ್ಬರು ಸಾಧು ದೇಹಲಿಯಿಂದ ಬಂದರು, ಅವರು ಇಲ್ಲಿಯ ಗೋಸಾಯಿಗಳನ್ನು ವೈದಿಕದೆಡೆ ಮನವೊಲಿಸಿದರು ಎಂದು ತಿಳಿದುಬರುತ್ತದೆ. ಆದರೆ ಗೋಸಾಯಿಗಳು ಮೂಲತಃ ಶಿವನ ಆರಾಧಕರಾಗಿದ್ದು, ಮುಖ್ಯವಾಗಿ **'ಮಹಾದೇವ'**ನ ಭಕ್ತರಾಗಿದ್ದಾರೆ. ಗೋಸಾಯಿಗಳ ಸ್ಮಶಾನದಲ್ಲಿ ಕಡ್ಡಾಯವಾಗಿ ಮಹಾದೇವನ ಗುಡಿಗಳಿರುವುದು ಕಂಡುಬರುತ್ತದೆ.

***

## ೬. ಬೆಮಳಖೇಡ :


## ೧. ದಶಮುಖ ಶರಣನ ಗವಿ

ಹುಮ್ನಾಬಾದದಿಂದ ೪೧ ಕಿ.ಮೀ. ದೂರದಲ್ಲಿ ಬೆಮಳಖೇಡ ಎಂಬ ಗ್ರಾಮವಿದೆ. ಈ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ, ಊರ ಹಳ್ಳದ ಎದುರಿನ ಗುಡ್ಡದ ಮಡ್ಡಿಯಲ್ಲಿ ಒಂದು ಪುರಾತನ ಗವಿ ಇದ್ದು, ಅದನ್ನು ದಶಮುಖ ಶರಣನ ಗವಿ ಎನ್ನುತ್ತಾರೆ. ಈ ಗವಿಯ ಕೆಳಗೆ ೧೨ ಎಕರೆ ಜಮೀನಿದೆ. ಈ ಗವಿಯಲ್ಲಿ ಪೂಜೆ ಮಾಡಲು ಇರುವ ಸ್ವಾಮಿಗಳು ಈ ಜಮೀನನ್ನು ಉತ್ತಿಬಿತ್ತಿ ಬೆಳೆ ಬೆಳೆದುಕೊಳ್ಳುತ್ತಾರೆ. ಗವಿಯ ಎದುರಿಗೆ ಒಂದು ದೊಡ್ಡ ಕಟ್ಟೆ ಇದ್ದು, ಈ ಗವಿಗೆ ಸಂಬಂಧಪಟ್ಟ ಶರಣರು ಜೀವಂತ ಸಮಾಧಿ ತೆಗೆದುಕೊಂಡಿದ್ದರ ಸಮಾಧಿ ಎನ್ನುತ್ತಾರೆ. ಸಮಾಧಿಯ ಎದುರಿಗೆ ಒಂದು ಬಾವಿಯೂ ಇದೆ.

ಈ ಗವಿಗೆ ಸಂಬಂಧಪಟ್ಟಂತೆ ಗವಿಯಿಂದ ಉತ್ತರದಿಕ್ಕಿಗೆ ಮತ್ತೊಂದು ಹಳೆಯ ಗವಿಯನ್ನು ತೋರಿಸುತ್ತಾರೆ. ಆದರೆ ನಿಜವಾಗಿ ಅದೊಂದು ಗವಿಯಲ್ಲ. ಅದು ಒಂದು ಸಣ್ಣ ಮಠದ ಕಟ್ಟಡವೆನಿಸುತ್ತದೆ. ಅದು ಗವಿಗಿಂತ ಪುರಾತನವಾದುದೆಂದೂ,



ಶರಣನ ಗವಿ, ಮುಂದಿರುವ ಕಟ್ಟೆ ಸಮಾಧಿ



ಶರಣನ ಗವಿಯಲ್ಲಿ ಪೂಜೆಗೊಳ್ಳುವ ಶಿವಲಿಂಗ

ಇಲ್ಲಿದ್ದ ಶರಣ ಪರಂಪರೆಯವರೇ ನಂತರ ಗವಿಯನ್ನು ತೋಡಿಸಿದ್ದಾರೆಂದೂ ಹೇಳಲಾಗುತ್ತದೆ. ವಚನಕಾರರ ಪಟ್ಟಿಯಲ್ಲಿ 'ದಶಮುಖ' ಎಂಬ ಶರಣನ ಹೆಸರು ಈ ವರೆಗೆ ಲಭ್ಯವಾಗಿಲ್ಲ. ಆದರೆ 'ದಶಮುಖ ರಾಮತಂದೆ' ಎಂಬ ಅಂಕಿತದ ಒಂದು ವಚನ ನಮ್ಮ ಗಮನಕ್ಕೆ ಬಂದಿದೆ.

ಎಂಟು ಹದಿನಾರೆಂಬ ಬಲೆಯನೊಡ್ಡಿ
ಚೆನ್ನಮೃಗವೆಂಬ ಕಂಗಳ ಬೇಟೆ ಎಸುವೆನಯ್ಯಾ
ವಿಂದ್ಯವನದೊಳಗೆ ಓ ಓ ಎಂದೆನುತಲಯಿದರೆ ಎಸುವೆನಯ್ಯಾ
ಎಯ್ದ ಬಾಣಕ್ಕೆ ಎಯ್ದ ಗುರಿಯಾಗದ ಮುನ್ನ ಎಯ್ದುವೆ
**ದಶಮುಖ ರಾಮತಂದೆ** ಎಸುವೆನಯ್ಯಾ (೨೮೪)

(ಸಮಗ್ರ ವಚನ ಸಂಪುಟ, ಸಂ.೪, ಸಿದ್ಧರಾಮೇಶ್ವರ ವಚನ ಸಂಪುಟ)

ಈ ವಚನ ಸಿದ್ಧರಾಮನದೆಂದು ಸಿದ್ಧರಾಮೇಶ್ವರ ವಚನ ಸಂಪುಟದಲ್ಲಿ ಸೇರಿದೆ. ಆದರೆ ಅವನ ವಚನಾಂಕಿತ 'ಕಪಿಲಸಿದ್ಧ ಮಲ್ಲಿಕಾರ್ಜುನಾ' ಎಂಬುದು ಇಲ್ಲಿ ಇಲ್ಲ. 'ದಶಮುಖ ರಾಮತಂದೆ' ಎಂಬ ವಚನಾಂಕಿತ ಇಲ್ಲಿ ಇರುವುದನ್ನು ಗಮನಿಸಬೇಕು. ಈ ವಚನಕಾರನಾರೆಂದು ನಮಗೆ ತಿಳಿದಿಲ್ಲ. ಬಹುಶಃ ಈ ವಚನಾಂಕಿತ ಬಳಸಿಕೊಂಡ ಶರಣನು ಬೆಮಳಖೇಡ ಗವಿಯಲ್ಲಿದ್ದ ಶರಣನಾಗಿರಬಹುದಾಗಿದೆ?

ಗವಿಯ ರಚನೆಯನ್ನು ಗಮನಿಸಿದರೆ, ಹಂದ್ರಾಳ, ಗಡವಂತಿ, ಮೋಳ್ಕೇರಿ ಈ ಗವಿಗಳ ಅಕಾರದಲ್ಲಿದೆ. ಮತ್ತು ಅಷ್ಟೇ ವಿಸ್ತಾರವಾಗಿಯೂ ಇದೆ. ಧ್ಯಾನಕ್ಕೆ ಕುಳಿತುಕೊಳ್ಳುವ ಸ್ಥಳಗಳನ್ನೂ ಗವಿ ಕೊರೆಯುವಾಗಲೇ ರಚಿಸಲಾಗಿದೆ. ಗವಿಯ ಒಳಗೆ ಬಲಗಡೆ ಧ್ಯಾನಕ್ಕಾಗಿ ಎಂಬಂತೆ ಒಂದು ಪ್ರತ್ಯೇಕ ಕೋಣೆ ಇದೆ. ಗವಿಯ

ಮುಂದಿನ ಭಾಗವನ್ನು ನಂತರ ಪುನರ್ ನವೀಕರಣ ಗೊಳಿಸಲಾಗಿದೆ. ಒಂದು ಹೇಳಿಕೆಯಂತೆ ಈ ಗವಿಯನ್ನು ದೆವ್ವಗಳೇ ಕೆದರಿ ನಿರ್ಮಿಸಿದವಂತೆ. ಇದನ್ನು ಗಮನಿಸಿದರೆ ಈ ಗವಿಯ ಬಗೆಗೆ ಸರಿಯಾದ ಮಾಹಿತಿಗಳು ಉಳಿದುಕೊಂಡಿಲ್ಲ ಎನಿಸುತ್ತದೆ. ಈ ಗ್ರಾಮವು ಚಿಟಗುಪ್ಪದಿಂದ ಪೂರ್ವಕ್ಕೆ ೨೮ ಕಿ.ಮೀ. ದೂರದಲ್ಲಿದೆ. ಹೀಗಾಗಿ ಇಲ್ಲಿಯೂ ಒಬ್ಬ ಪ್ರಮುಖ ಶರಣನೇ ವಾಸವಾಗಿರಬೇಕೆನಿಸುತ್ತದೆ.

ಶ್ರಾವಣ ಮಾಸದಲ್ಲಿ ಭಜನೆ ನಡೆಯುತ್ತದೆ. ಮತ್ತು ಇಡೀ ತಿಂಗಳು ಹಗಲೂ ರಾತ್ರಿ ಪಾಳಿಯ ಪ್ರಕಾರ ಒಬ್ಬರು ಏಕ್ತಾರಿ ನುಡಿಸುತ್ತ ಇರುತ್ತಾರೆ ಎಂದು ಹೇಳಲಾಗುತ್ತದೆ. ಶ್ರಾವಣದ ಕೊನೆಯಲ್ಲಿ ಖಾಂಡ ಮಾಡುತ್ತಾರಂತೆ. ಸುಮಾರು ೫೦-೬೦ ವರ್ಷಗಳ ಹಿಂದೆ ಈ ಗವಿಯ ಎದುರಿನಲ್ಲಿ ಪುರಾಣ ಹಚ್ಚುತ್ತಿದ್ದರಂತೆ. ಹೀಗಾಗಿ ಈ ಗವಿಗೆ ಹತ್ತಿಕೊಂಡು ಮುಂದೆ ಇರುವ ಒಂದು ಕಟ್ಟೆಗೆ 'ಪುರಾಣ ಕಟ್ಟೆ' ಎಂತಲೇ ಕರೆಯುತ್ತಾರೆ. ಗವಿ ಇರುವ ಸ್ಥಳವನ್ನು 'ಗವಿಗಡ್ಡಿ' ಎಂದೂ, ಮುಂದೆ ಹರಿಯುವ ನೀರಿನ ಹಳ್ಳವನ್ನು 'ಗವಿನಾಲಾ' ಎಂದೂ ಕರೆಯುತ್ತಾರೆ.

ಮಾಹಿತಿ : ವಿಶ್ವನಾಥಯ್ಯ ಸಂಗಯ್ಯ ಗವಿಮಠ, ಶ್ರೀಮತಿ ಶರಣಮ್ಮ ಸಾವಳಗಿ

***

### ೨. ಉರಿಲಿಂಗ ಪೆದ್ದಿಗಳ ಮಠ :

ಪ್ರಾಚೀನಕಾಲದ ಉರಿಲಿಂಗಪೆದ್ದಿ ಮಠಗಳೆಂದರೆ ಬಸವಕಲ್ಯಾಣದಲ್ಲಿರುವ ಮಠ ಒಂದೇ ಎಂದು ತೋರುತ್ತದೆ. ಹುನಗುಂದ ತಾಲೂಕಿನ ನಂದವಾಡಗಿಯಲ್ಲಿ ಉರಿಲಿಂಗ ಪೆದ್ದಿ ಸಮಾಧಿ ಇದೆ. ಆದರೆ ಆ ಮಠವನ್ನು ಸ್ಥಾಪಿಸಿದವರು ಪೆದ್ದಿಗಳ ಗುರುಗಳಾದ ಉರಿಲಿಂಗದೇವರು. ೧೯೦೦ ರ ನಂತರದಲ್ಲಿ ಉರಿಲಿಂಗ ಪೆದ್ದಿ



ಉರಿಲಿಂಗ ಪೆದ್ದಿಗಳ ಮಠ, ಶಿವಯೋಗಿ ಸ್ವಾಮಿ ಅವರು ಸ್ಥಾಪಿಸಿದ ಮೊದಲ ಮಠ



ಉರಿಲಿಂಗ ಪೆದ್ದಿಗಳ ಮಠದಲ್ಲಿರುವ ಶಿವಲಿಂಗ

ಅವರ ಮಠಗಳ ಒಂದು ದೊಡ್ಡ ಪರಂಪರೆಯೇ ಬೆಳೆದುಕೊಂಡು ಬಂದುದನ್ನು ನಾವು ಕಾಣುತ್ತೇವೆ. ಈ ಪರಂಪರೆಯನ್ನು ಪ್ರಾರಂಭಿಸಿದವರು ಶಿವಯೋಗಿ ಸ್ವಾಮಿ ಎನ್ನುವವರು. ತಮ್ಮ ೪೦ನೇ ವಯಸ್ಸಿನಲ್ಲಿ ಸುಮಾರು ೧೯೦೭ ರಲ್ಲಿ ಬೆಮಳಖೇಡ ಊರಿಗೆ ಬಂದು ಅಲ್ಲಿ ಪ್ರಪ್ರಥಮ ಉರಿಲಿಂಗಪೆದ್ದಿ ಮಠವನ್ನು ಸ್ಥಾಪಿಸಿದರೆಂದು ತಿಳಿದುಬರುತ್ತದೆ.

ಇವರು ಮೂಲತಃ ಬೀದರ ಜಿಲ್ಲೆಯ ಹುಮ್ನಾಬಾದ ತಾಲೂಕಿನ ಬೇವಿನ ಚಿಂಚೋಳಿ ಗ್ರಾಮದವರು. ನಿರಕ್ಷರಿಗಳಾದ ಶ್ರೀ ಶಿವಯೋಗಿ ಸ್ವಾಮಿಗಳು ತಾವು ಶರಣತತ್ತ್ವಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡು, ಉರಿಲಿಂಗಪೆದ್ದಿಗಳ ಮಠಗಳನ್ನು ಸ್ಥಾಪಿಸುವ ನಿರ್ಧಾರ ತೆಗೆದುಕೊಂಡ ನಂತರ ಅವರು ಮೊದಲು ಬಂದುದು ಬೆಮಳಖೇಡ ಎಂಬ ಗ್ರಾಮಕ್ಕೆ. ಅಲ್ಲಿಯೇ ಅವರು ಪ್ರಪಥಮ ಉರಿಲಿಂಗಪೆದ್ದಿ ಮಠವೊಂದನ್ನು ಸ್ಥಾಪಿಸಿದರು. ನಂತರ ಅವರು ಸ್ಥಾಪಿಸಿದುದು ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಕೋಡ್ಲಾ ಗ್ರಾಮದಲ್ಲಿರುವ ಉರಿಲಿಂಗ ಪೆದ್ದಿ ಮಠ. ಅವರು ಬೆಮಳಖೇಡದಿಂದ ಕೋಡ್ಲಾ ಗ್ರಾಮಕ್ಕೆ ಬರುವ ಹೊತ್ತಿಗೆ ಅವರ ಆಲೋಚನೆಗಳು ಬೆಳೆದಿವೆ. ಹೀಗಾಗಿ ಅವರು ಕೋಡ್ಲಾ ಮಠವನ್ನೇ ಮುಖ್ಯಮಠವಾಗಿ, ಉಳಿದೆಲ್ಲ ಮಠಗಳು ಅದರ ಶಾಖಾಮಠಗಳಾಗಿ ಇರಬೇಕೆಂದು ನಿರ್ಧರಿಸಿದರೆಂದು ತೋರುತ್ತದೆ. ಹೀಗಾಗಿ ಕೋಡ್ಲಾಮಠಕ್ಕೆ ಅವರು ಅಧಿಕೃತವಾಗಿ ಒಬ್ಬ ಸ್ವಾಮಿಯನ್ನು ನೇಮಿಸುತ್ತಾರೆ.

ಮಾಹಿತಿ : ಚಂದ್ರಪ್ಪ ಹೆಬ್ಬಾಳಕರ

ನೋಡಿ : ಕೋಡ್ಲಾ, ತಾ. ಸೇಡಂ, ಜಿ. ಕಲಬುರ್ಗಿ

***

# ೪

# ಬಸವಕಲ್ಯಾಣದಿಂದ ದೂರದ (ಬೀದರ ಜಿಲ್ಲೆಯ) ಊರುಗಳಲ್ಲಿರುವ ಶರಣ ಸ್ಮಾರಕಗಳು

ಇಲ್ಲಿಯವರೆಗೆ ಬಸವಕಲ್ಯಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಇರುವ ಶರಣ ಸ್ಮಾರಕಗಳನ್ನು ಗಮನಿಸಿ ಅವುಗಳ ಮಾಹಿತಿಗಳನ್ನು ಕೊಡುತ್ತ ಬರಲಾಯಿತು. ಅವೆಲ್ಲವನ್ನು ಹಾಗೆ ಪರಿಚಯಿಸುವಾಗ, ಅಲ್ಲಿ ಒಂದುಕ್ರಮ ಇರುವುದನ್ನು ಗಮನಿಸಬೇಕು. ಶರಣರು ಒಟ್ಟಾಗಿ ಇರುವಲ್ಲಿ ಅನುಸರಿಸಿದ ಜೀವನಕ್ರಮ ಏನು ಎಂಬುದು ನಮಗೆ ಅವರ ಇರುವಿಕೆಯ ರೀತಿಯೆ ಗ್ರಹಿಸಿಕೊಳ್ಳಲು ಸಹಾಯ ಮಾಡುತ್ತದೆ. ವಿಶೇಷವಾಗಿ ಬಸವಕಲ್ಯಾಣದಲ್ಲಿ ದೊರೆಯುವ ಸ್ಮಾರಕಗಳು ಹಾಳಾಗಿವೆ ಎಂದರೂ ಉಳಿದಿರುವ ಸ್ಮಾರಕಗಳು ಯಾವ ಶರಣರ ಸ್ಮಾರಕಗಳಾಗಿವೆ ಎಂಬುದನ್ನು ಗಮನಿಸಿದರೆ, ಅಲ್ಲೆಲ್ಲ ಕಂಬಳಿನಾಗಿದೇವ, ಉರಲಿಂಗಪೆದ್ದಿ, ಅಂಬಿಗರ ಚೌಡಯ್ಯ, ಜೇಡರ ದಾಸಿಮಯ್ಯ, ಶರಂಕರದಾಸಿಮಯ್ಯ ಇಂತಹ ಹಿರಿಯ ಶರಣರ ಸ್ಮಾರಕಗಳು ಉಳಿದಿವೆ. ಬಸವಣ್ಣನವರಾದಿಯಾಗಿ ಉಳಿದೆಲ್ಲ ಶರಣರ ಸ್ಮಾರಕಗಳು ಬಸವಕಲ್ಯಾಣ ಪಟ್ಟಣದಿಂದ ಹೊರಗೆ ದೊರೆಯುತ್ತಿವೆ ಎಂಬುದನ್ನು ಗಮನಿಸಬೇಕು.

ತ್ರಿಪುರಾಂತ ಕೆರೆ, ಬೆಟ್ಟಬಲಕುಂದದ ಬೆಟ್ಟದ ಸಾಲುಗಳು, ಬಂದವರ ಓಣಿಯ ಕಾಡು, ಶಿವಪುರ ನಾರಾಯಣಪುರಗಳ ಕೆರೆಗಳು– ಇಲ್ಲೆಲ್ಲ ಶರಣರು ಗುಂಪುಗುಂಪಾಗಿ ನೆಲೆಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗೆ ಗುಂಪಾಗಿ ಬದುಕು ಸಾಗಿಸುವಾಗ ಅವರೆಲ್ಲ ದಿನದ ಬಿಡುವಿನ ವೇಳೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಚರ್ಚೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎನಿಸುತ್ತದೆ. ಹೀಗಾಗಿ ಈ ಸಂವಾದದ ಸಮಯವೇ ಅದು ಅನುಭಾವ ವಿನಿಮಯದ ಸಮಯ. ಅವರೆಲ್ಲ ಸೇರಿದುದೇ ಅನುಭಾವ ಮಂಟಪದ ಕಲ್ಪನೆ ಕೊಡುತ್ತದೆ.

ಹಂದ್ರಾಳದಿಂದ ಚಿಟಗುಪ್ಪ ಗ್ರಾಮದವರೆಗೆ ಇರುವ ಗವಿಗಳಲ್ಲಿ ಪ್ರಮುಖ ವಚನಕಾರರ ಜೊತೆಗೆ ಕೆಲ ಶರಣರು ವಾಸವಾಗಿರಬೇಕೆನಿಸುತ್ತದೆ. ಹೀಗಾಗಿ ಈ ಗವಿಗಳಂತೂ **'ಅನುಭವ ಮಂಟಪ'**ದ ಸ್ಪಷ್ಟ ಕಲ್ಪನೆಯನ್ನು ಹೊಂದಿವೆ. ಚಿಟಗುಪ್ಪದಲ್ಲಿರುವ ಅಲ್ಲಮಪ್ರಭುದೇವರ ಗವಿ, ಮಡಿವಾಳಪ್ಪನ ಗವಿಗಳನ್ನು ಗಮನಿಸಿದರೆ ಶರಣರು ವಿಶೇಷವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಚರ್ಚಿಸಲು ಬಳಸಿಕೊಂಡ ಗವಿಗಳಾಗಿರಬೇಕೆನಿಸುತ್ತದೆ. ಈಗ ದೂರದ ಊರುಗಳಲ್ಲಿರುವ ಶರಣರ ಮಾಹಿತಿಗಳನ್ನು ಬಿಡಿಬಿಡಿಯಾಗಿ ಈ ಭಾಗದಲ್ಲಿ ಕೊಡಲಾಗುತ್ತಿದೆ.

ಬಸವಕಲ್ಯಾಣ ತಾಲೂಕು :

## ೧. ಚಿಟ್ಟಾ (ಕೆ) :
## ಹಾವಿನಹಾಳ ಕಲ್ಲಯ್ಯ-ಕಲ್ಲೇಶ್ವರ ದೇವಸ್ಥಾನ

ಚಿಟ್ಟಾ (ಕೆ) ಬಸವಕಲ್ಯಾಣ ತಾಲೂಕಿನ ಒಂದು ದೊಡ್ಡಗ್ರಾಮ. ಬಸವಕಲ್ಯಾಣದಿಂದ ಕೇವಲ ೪ ಕಿ.ಮೀ.ಅಂತರದಲ್ಲಿ ಇದ್ದರೂ ಈ ಊರಿನಲ್ಲಿ ಸಂಪೂರ್ಣವಾಗಿ ಮರಾಠಿ ವಾತಾವರಣವಿದೆ. ಇಲ್ಲಿಯವರೆಗೆ ಕನ್ನಡದ ಒಂದು ಹೈಸ್ಕೂಲ್ ತೆರೆಯಲು ಸಾಧ್ಯವಾಗಿಲ್ಲವೆಂಬುದು ಆಶ್ಚರ್ಯದ ಸಂಗತಿ.

ಈ ಗ್ರಾಮವನ್ನು ಹಾವಿನಹಾಳ ಕಲ್ಲಯ್ಯನ ಊರು ಎಂದು ಹೇಳಲಾಗುತ್ತದೆ. ಈ ಊರಿನ ಆರಾಧ್ಯದೈವ ಕಲ್ಲೇಶ್ವರ. ತುಂಬ ದೊಡ್ಡದಾದ ಗುಡಿ ಇದು. ಈ ಗುಡಿಯ ವಿಶೇಷವೆಂದರೆ ಈ ಊರಿನಲ್ಲಿರುವ ಎಲ್ಲ ಜಾತಿಯ ಜನ ಇಲ್ಲಿ ಸೇರುತ್ತಾರೆ.




ಕಲ್ಮೇಶ್ವರ ದೇವಾಲಯದ ತೆರೆದ ಮಂಟಪ



ಕಲ್ಮೇಶ್ವರ ದೇವಾಲಯದ ಗರ್ಭಗೃಹ ಶಿವಲಿಂಗ

ಹೀಗಾಗಿ ಈ ಗುಡಿಯ ಒಂದೊಂದು ಮೂಲೆಯಲ್ಲಿ ಒಂದೊಂದು ಬಗೆಯ ದೇವರುಗಳ ಪ್ರತಿಷ್ಠಾಪನೆ ನಡೆದಿದೆ. ಈ ಗುಡಿಯ ಗರ್ಭಗೃಹದ ಹಿಂಬದಿಯಲ್ಲಿ ಒಂದು ಉದ್ದನೆಯ ಕಟ್ಟೆಯ ಮೇಲೆ ೧೨ ಲಿಂಗಗಳನ್ನು ಇಟ್ಟಿದ್ದು, ಅವುಗಳನ್ನು ಈ ಊರಿನ ಪ್ರಮುಖರು ಹನ್ನೆರಡು ಜ್ಯೋತಿರ್ಲಿಂಗಗಳೆಂದು ಹೇಳುತ್ತಾರೆ. ಗುಡಿಯ ಒಂದು ಮೂಲೆಯ ಕೋಣೆಯಲ್ಲಿ ದತ್ತನ ಪಾದುಕೆಗಳ ಪೂಜೆಯೂ ನಡೆಯುತ್ತದೆ. ಅಲ್ಲಿಯೇ ಅನ್ನಪೂರ್ಣೇಶ್ವರಿ ದೇವಿ ಮಂದಿರವೂ ಇದೆ. ಅನ್ನಪೂರ್ಣೇಶ್ವರಿ ಕೋಣೆಯ ಎದುರೊಂದು ಶಿಲಾಶಾಸನ ಇದೆ. ಕಲ್ಲಿನಾಥನ ಮಂದಿರದ ಬಲಗಡೆ ಸಣ್ಣ ಗುಡಿಯಲ್ಲಿ ಮಹಾದೇವನ ಪಿಂಡ ಇದೆ. ಗಣಪತಿ ಮೂರ್ತಿಯೂ ಇದೆ. ವಿಠೋಬಾ ರುಕ್ಮಿಣಿ ಪ್ರತಿಷ್ಠಾಪನೆಯನ್ನೂ ಮಾಡಿದ್ದಾರೆ. ನಮ್ಮ ಜೊತೆಗೆ ಬಂದಿದ್ದ ಶರಣ ಸಿದ್ಧರಾಮಣ್ಣನವರು ಅಲ್ಲಿಯ ಜನಗಳಿಗೆಲ್ಲ ಹಾವಿನಹಾಳ ಕಲ್ಲಯ್ಯನ ಮಹತ್ವವನ್ನು ಹೇಳಿ, ಅವನ ಒಂದು ಮಹತ್ವದ ವಚನವನ್ನು ಹೇಳಿ, ಅದನ್ನು ಎಲ್ಲರಿಂದಲೂ ಹೇಳಿಸಿದರು. ಕಲ್ಲಯ್ಯನ ಬಗೆಗೆ ತಿಳಿದುಕೊಳ್ಳಲು ವಿನಂತಿಸಿಕೊಂಡರು.

ಗುಡಿಯ ಕಲ್ಲೇಶ್ವರ ದೇವರ ಮುಖ್ಯ ಪೂಜಾರಿಕಿ ಹೂಗಾರ ಜನಾಂಗದವರಿಗಿದೆ. ಅವರಿಗೆ ದೇವರ ಹೆಸರಿನಲ್ಲಿ ೧೨ ಎಕರೆ ಹೊಲ ಇದೆಯಂತೆ. ಹೀಗೆಯೇ ಎಣ್ಣೆ ಕೊಡುವವರಿಗೆ, ಹಲಗಿ ಬಡಿಯುವವರಿಗೆ, ನಗಾರಿ ಬಾರಿಸುವವರಿಗೆ, ಸೇವಾ ಮಾಡುವವರಿಗೆ ಉಪಜೀವನಕ್ಕೆ ಅನುಕೂಲವಾಗುವಂತೆ ಸ್ವಲ್ಪ ಸ್ವಲ್ಪ ಹೊಲ ಬಿಟ್ಟಿರುವುದು ಇಲ್ಲಿಯ ವಿಶೇಷವೆಂದೇ ಹೇಳಬೇಕು. ಇವತ್ತಿಗೂ ಈ ಚಾಜಾಗಳನ್ನು ಅವರವರು

ಭೋಗಿಸುತ್ತಾರೆ ಮತ್ತು ದೇವರ ಸೇವೆ ಮಾಡುತ್ತಾರೆ. ಈ ಊರಿನ ಜನಗಳ ಭಕ್ತಿಯನ್ನು ಪ್ರಶ್ನಿಸುವಂತಿಲ್ಲ. ದೇವಸ್ಥಾನಕ್ಕೆ ಸಂಬಂಧಿಸಿದ ಯಾವುದೇ ಕೆಲಸವಿದ್ದರೂ ಅದನ್ನು ಎಲ್ಲ ಸಮುದಾಯದ ಜನ ಭಕ್ತಿಯಿಂದ ಮಾಡುತ್ತಾರೆ. ಕೂಲಿ ಕೇಳುವುದಿಲ್ಲವಂತೆ. ಆ ಕೆಲಸವನ್ನು ದೇವರ ಕೆಲಸವೆಂದು ಮಾಡುತ್ತಾರೆ.

ಇಲ್ಲಿ ಯುಗಾದಿ ಅಮವಾಸ್ಯೆಯಿಂದ ಸುಮಾರು ಐದು ದಿನ ನಿರಂತರ ಜಾತ್ರೆ ನಡೆಯುತ್ತದೆ. ಕಲ್ಲಿನಾಥನಿಗೆ ಪ್ರಿಯವಾದ ಪ್ರಸಾದ ಅಂಬಲಿ. ಅಂಬಲಿಯನ್ನು ಮಾಡಿ ಆದ ಮೇಲೂ ಮಾಡುವ ಅಡಿಗೆ, ಅರ್ಪಿಸುವ ಪ್ರಸಾದವೂ ಜನಸಾಮಾನ್ಯರ ದಿನ ನಿತ್ಯದ ಅಡಿಗೆಯೆ ಆಗಿರುತ್ತದೆ. ಬ್ಯಾಳಿ, ರೊಟ್ಟಿ, ಉಳ್ಳಾಗಡ್ಡಿ ಚಟ್ನಿ ಮಾಡಿ ದೇವರಿಗೆ ಅರ್ಪಿಸುತ್ತಾರೆ. ಪ್ರತಿ ಜಾತ್ರೆಗೆ ೪ ಕ್ವಿಂಟಾಲ್ ಅಕ್ಕಿಯ ಅನ್ನ ಮಾಡುತ್ತಾರಂತೆ. ಹಾಗೆಯೇ ನಾಲ್ಕು ಕ್ವಿಂಟಾಲ ಬ್ಯಾಳಿ ಹಾಕಿ ಹೋಳಿಗೆ ಮಾಡುತ್ತಾರಂತೆ. ಒಂದುವರಿ ಕ್ವಿಂಟಾಲದಷ್ಟು ತುಪ್ಪ ಬಳಸುತ್ತಾರಂತೆ. ಈ ಜಾತ್ರೆಗೆ ಬರುವವರು, ಮತ್ತು ಇಲ್ಲಿ ಪ್ರಸಾದ ಸ್ವೀಕರಿಸುವವರು ಎಲ್ಲ ಸಮುದಾಯದವರಾಗಿರುತ್ತಾರೆಂಬುದು ಇಲ್ಲಿಯ ವಿಶೇಷ.

ಕಲ್ಲಿನಾಥನ ಜಾತ್ರೆಗೆ ಥೇರು ಎಳೆಯುತ್ತಾರೆ. ಗಾಡಿಯ ಮೇಲೆ ನಂದಿ ಇಟ್ಟು ತೇರು ಎಳೆಯುವುದು ಇಲ್ಲಿಯ ಸಂಪ್ರದಾಯ. ತೇರನ್ನು ಆಗಿಂದಾಗಲೇ ಸಿದ್ಧಪಡಿಸಿ ಎಳೆಯುವ ಈ ಸಂಪ್ರದಾಯ ಬಹಳ ವಿಶೇಷವೆನಿಸುತ್ತದೆ. ಯುಗಾದಿಯಂದು ಪಂಚಾಂಗ ನೋಡುತ್ತಾರೆ. ಎರಡನೇ ದಿನ ಪಲ್ಲಕ್ಕಿ ಮೆರವಣಿಗೆ, ಮೂರನೇ ದಿನ ತೇರು ಮತ್ತು ನಂದಿಕೋಲು ಮೆರಣಿಗೆ, ನಾಲ್ಕನೆಯ ದಿನ ಕುಸ್ತಿ, ಐದನೇ ದಿನ ಮುಕ್ತಾಯ.

ವಚನಗಳು : ೧೦೨
ವಚನಾಂಕಿತ : ಮಹಾಲಿಂಗ ಕಲ್ಲೇಶ್ವರ
ಮಾಹಿತಿ : ರಾಜಕುಮಾರ ದಿಗಂಬರರಾವ ಪೂಜಾರಿ

***

## ಬಸವಕಲ್ಯಾಣ ತಾಲೂಕು :

### ೨. ಹಳ್ಳಿ :

### ಹರಳಯ್ಯನವರ ಗುಡಿ

ಬಸವಕಲ್ಯಾಣದಿಂದ ರಾಷ್ಟ್ರೀಯ ಹೆದ್ದಾರಿ ಮೇಲೆ ಇರುವ ಒಂದು ಸಣ್ಣ ಗ್ರಾಮ ಈ ಹಳ್ಳಿ. ಈ ಗ್ರಾಮ ಪ್ರಸಿದ್ಧವಾಗಿರುವುದು ಶರಣ ಸಮಗಾರ ಹರಳಯ್ಯನ ಹೆಸರಿನಿಂದ. ಊರಿನಿಂದ ಸ್ವಲ್ಪ ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ಮೇಲೆ ಬಲಗಡೆ ರಸ್ತೆಗೆ ಹತ್ತಿಕೊಂಡಿರುವ ಒಂದು ಹೊಲದಲ್ಲಿ ಒಂದು ಸಣ್ಣ ಗುಡಿ ಇದೆ. ಇದನ್ನು ಹರಳಯ್ಯನ ಗುಡಿ ಎಂದೇ ಕರೆಯುತ್ತಾರೆ. ಗುಡಿಯ ಒಳಗಡೆ ಪಾದುಕೆಗಳನ್ನು



ಹರಳಯ್ಯನವರ ಗುಡಿ



ಹರಳಯ್ಯನವರ ಗುಡಿಯ ಮುಂದಿರುವ ಹೊಂಡ

ಕೆತ್ತಲಾದ ಒಂದು ಶಿಲೆ ಇದೆ. ಜೊತೆಗೆ ಒಂದು ಲಿಂಗದ ಗೋಳಕ ಇದೆ. ಉಳಿದಂತೆ ಈ ಸ್ಮಾರಕಕ್ಕೆ ಸಂಬಂಧಿಸದೆ ಇರುವ ಕೆಲವು ಶಿಲಾಮೂರ್ತಿಗಳನ್ನು ಇಡಲಾಗಿದೆ. ಈ ಗುಡಿಯ ಎದುರು ಮೂರು ಸಮಾಧಿಗಟ್ಟೆಗಳಿರುವುದು ಕಂಡುಬರುತ್ತದೆ. ಆದರೆ ಅವು ಯಾರ ಸಮಾಧಿಗಳೆಂಬ ಬಗ್ಗೆ ಸ್ಪಷ್ಟ ಮಾಹಿತಿ ದೊರಕುವುದಿಲ್ಲ. ಗುಡಿಯ ಎದುರಿಗೆ ಮತ್ತು ಮಗ್ಗುಲಿಗೆ ಎರಡು ಬಾವಿಗಳಿವೆ. ಎದುರಿಗೆ ಇರುವುದನ್ನು ಡೋಣಿ ಎಂದೂ, ಮಗ್ಗುಲಿಗೆ ಇರುವುದನ್ನು ಬಾವಿಯೆಂತಲೂ ಹೇಳಲಾಗುತ್ತದೆ.

ಈ ಹೊಲವನ್ನು **'ಹರಳಯ್ಯನ ಪಟ್ಟಿ'** ಎಂದೇ ಗುರುತಿಸಲಾಗುತ್ತದೆ. ಈ ಪಟ್ಟಿ ಮಂತಾಳದ ಸರ್ವೆ ನಂಬರಿನಲ್ಲಿದೆ. ಊರಲ್ಲಿ ಯಾವುದೇ ಸ್ಮಾರಕಗಳಿಲ್ಲವೆಂದು ಜನ ಹೇಳುತ್ತಾರೆ. ಆದರೆ ಕಲ್ಯಾಣದ ಶರಣರ ಸ್ಮಾರಕಗಳೆಲ್ಲ ಇರುವುದು ಈ ರಾಷ್ಟ್ರೀಯ 'ದ್ದಾರಿ ಒಂಬತ್ತರ ಮೇಲೆ ಇರುವ ಊರುಗಳಲ್ಲಿ. ಅಥವಾ ಈ ಸ್ಮಾರಕಗಳು ಇದ್ದೆಡೆ ಸುತ್ತಮುತ್ತ ಊರುಗಳು ಬೆಳೆದುಕೊಂಡು ಬಂದಂತೆ ತೋರುತ್ತದೆ. ಈ ಊರಿನಲ್ಲಿ ತೆಕ್ಕಿ ಸೋಮಣ್ಣನದೆಂದು ಹೇಳುವ ಒಂದು ಗುಡಿ ಇದೆ. ಒಳಗೆ ಲಿಂಗವಿದೆ. ಸುತ್ತಲೂ ಹೊಲ ಇದೆ. ಇದು ಶರಣರಿಗೆ ಸಂಬಂಧಿಸಿದ್ದೇ ಅಲ್ಲವೇ ಎಂಬ ಬಗ್ಗೆ ಖಚಿತವಾಗಿ ತಿಳಿದುಬರುವುದಿಲ್ಲ.

***



ಹರಳಯ್ಯನವರ ಗುಡಿಯ ಮುಂದಿರುವ ಇನ್ನೊಂದು ಹೊಂಡ




ಹರಳಯ್ಯನವರ ಗುಡಿಯಲ್ಲಿರುವ ಪಾದುಕೆ, ಲಿಂಗವಿರುವ ಶಿಲ್ಪ

## ಬಸವಕಲ್ಯಾಣ ತಾಲೂಕು :

### ೩. ಮೋರ್ಖಂಡಿ :
### ಸಿದ್ಧರಾಮೇಶ್ವರ ಮಂದಿರ

ಬಸವಕಲ್ಯಾಣದಿಂದ ೮ಕಿ.ಮೀ. ದೂರದಲ್ಲಿ, ೯ನೇ ರಾಷ್ಟ್ರೀಯ ಹೆದ್ದಾರಿಯಿಂದ ೩ಕಿ.ಮೀ ಒಳಗಡೆ ಮೋರ್ಖಂಡಿ ಇದೆ. 'ಮಯೂರ ಖಂಡಿ' ಎನ್ನುವುದು ಮಾರ್ಖಂಡಿ ಎಂದೂ ಮೋರ್ಖಂಡಿ ಎಂದೂ ಆಗಿದೆ ಎನ್ನುತ್ತಾರೆ. ಋಷಿ ಮುನಿಗಳ ಕಾಲದ ಪೌರಾಣಿಕ ಪರಿಸರದ ಜೀವನದಷ್ಟು ಪ್ರಾಚೀನತೆ ಈ ಊರಿಗಿದೆ. ಮೃಖಂಡ ಮುನಿಯೂ ಇಲ್ಲಿಗೆ ಬಂದು ಹೋಗಿರಬಹುದು. ಆ ಮುನಿಯ ಹೆಸರಿಂದಾಗಿಯೂ ಈ ಊರಿಗೆ ಮೋರ್ಖಂಡಿ ಎಂದು ಹೆಸರು ಬಂದಿರುವ ಸಾಧ್ಯತೆ ಇದೆ ಎಂಬ ವಿವರವನ್ನು ಆ ಊರವರು ನೀಡುತ್ತಾರೆ.



ಸಿದ್ಧರಾಮೇಶ್ವರ ಮಂದಿರ ಇರುವ ದಿಬ್ಬದ ಹೊಟ್ಟೆಯಲ್ಲಿ ಗವಿಗಳಿರುವುದು




ಸಿದ್ಧರಾಮೇಶ್ವರ ಮಂದಿರ

ಅಲ್ಲಮಪ್ರಭುಗಳು ಸಿದ್ಧರಾಮನನ್ನು ಸೊನ್ನಲಿಗೆಯಿಂದ ಕರೆದುಕೊಂಡು ಬಸವಕಲ್ಯಾಣಕ್ಕೆ ಹೊರಟಾಗ ಮೋರ್ಖಂಡಿಯಲ್ಲಿ ಕೆಲದಿನ ತಂಗಿ ಹೋದರು ಎಂದು ಹೇಳಲಾಗುತ್ತದೆ. ದೇವಸ್ಥಾನ ಒಂದು ಸಣ್ಣ ಗುಡ್ಡದ ಮೇಲೆ ಇದೆ. ಗುಡ್ಡದ ಹೊಟ್ಟೆಯಲ್ಲಿ ಒಂದು ದೊಡ್ಡ ಗವಿ ಇದೆ. ಮತ್ತೆ ಸುತ್ತಲೂ ಬಹಳಷ್ಟು ಗವಿಗಳಿವೆ. ದೊಡ್ಡ ಗವಿಯಲ್ಲಿ ಒಂದು ಸುರಂಗ ಮಾರ್ಗವಿದೆ. ಈ ದಾರಿ ಚಂಡಕಾಪುರದ ಅಂಬಲಿಗುಂಡಕ್ಕೆ ಹೋಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಗವಿಗೆ ಹೋಗುವ ಮುಂಚೆ ಮೆಟ್ಟಿಲುಗಳ ಒಂದು ಮಗ್ಗುಲಿಗೆ ಶರಣೆಯೊಬ್ಬಳು ಎಡಗೈಯಲ್ಲಿ ಇಷ್ಟಲಿಂಗ ಹಿಡಿದ ಮೂರ್ತಿ ಇದೆ. ಅದು ಯಾರದೆಂದು ಗೊತ್ತಾಗುವುದಿಲ್ಲ. ಹಾಗೇ ಮೆಟ್ಟಲೇರಿ ಮೇಲೆ ಹೋದರೆ ಗವಿ ಪ್ರವೇಶಿಸುವ ಮುಂಚೆ ಒಂದು ಮಗ್ಗಲು ಮತ್ತೆ ಇಂತಹ ಮೂರ್ತಿಗಳಿವೆ. ಪ್ರವೇಶ ದ್ವಾರದ ಗೋಡೆಗಂಟಿಕೊಂಡಂತೆಯೂ ಇಷ್ಟಲಿಂಗ ಹಿಡಿದು ಕುಳಿತ ಹೆಣ್ಣುಮಗಳ ಶಿಲ್ಪ ಇದೆ. ಗವಿಯ ಒಳಗೆ ಹೋಗುವುದಕ್ಕೆ ಆಗುವುದಿಲ್ಲ. ಇಲ್ಲಿ ಗವಿಗಳ ಸಂಕೀರ್ಣವೇ ಇರುವುದರಿಂದ ಮತ್ತೆ ಇದು ಒಂದು ಶರಣರ ನೆಲೆಯೇ ಆಗಿದೆ ಎನಿಸುತ್ತದೆ. ಈ ಸ್ಥಳದ ಬಗೆಗೆ ವಿಶೇಷವಾದ ಶೋಧಕಾರ್ಯ ನಡೆಯಬೇಕಾದ ಅವಶ್ಯಕತೆ ಇದೆ.

ಗವಿಯಲ್ಲಿರುವ ಲಿಂಗದ ಪೂಜೆಗೆ ೫೦೦ ವೀಳ್ಯದೆಲೆಗಳು ಬೇಕಾಗುತ್ತವೆಯಂತೆ. ಎಲಿ ಪೂಜೆ ಕಟ್ಟಿದ ಮೇಲೆ ಶುಭಕಾರ್ಯ ನಡೆಸಲು ಭಕ್ತರು ಕಾಯುತ್ತ ಕುಳಿತುಕೊಳ್ಳುತ್ತಾರೆ. ಪೂಜೆ ಕಟ್ಟಿದ ಎಲೆ ಕೆಳಗೆ ಬಗ್ಗಬೇಕು, ಇಲ್ಲವೆ ಕೆಳಗೆ ಬೀಳಬೇಕು. ಹಾಗೆ ಆದರೆ

ಅದನ್ನು ಶುಭಸೂಚನೆ ಎಂದು ನಂಬಿ, ಮುಂದಿನ ಕಾರ್ಯ ಪ್ರಾರಂಭಿಸುವ ನೇಮವನ್ನು ಇಲ್ಲಿ ತಪ್ಪದೆ ಪಾಲಿಸಿಕೊಂಡು ಬಂದಿದ್ದಾರಂತೆ. ಸೋಮವಾರ ಎಲ್ಲ ಜಾತಿಯವರು ಬಂದು ಇಲ್ಲಿಂದ ತೀರ್ಥ ಒಯ್ದು ಮೇಲೆ ಮುಂದಿನ ಕೆಲಸ ಪ್ರಾರಂಭ ಮಾಡುವ ಪದ್ಧತಿಯೂ ಇದೆ ಎಂದು ತಿಳಿದುಬರುತ್ತದೆ.

ಇಲ್ಲಿಯ ಸಿದ್ಧೇಶ್ವರ ದೇವಸ್ಥಾನವನ್ನು ಮಾರ್ಖಂಡೇಯ ದೇವಸ್ಥಾನ ಎಂದು ಕರೆಯುವ ವಾಡಿಕೆಯೂ ಇದೆ. ಹಾಗೇಕೆಂದು ಕೇಳಿದರೆ ಅವರಲ್ಲಿ ಉತ್ತರವಿಲ್ಲ. ಗರ್ಭಗೃಹದಲ್ಲಿ ಎರಡು ಲಿಂಗಗಳಿವೆ. ದೊಡ್ಡದಾದ ಮೂಲ ಲಿಂಗವನ್ನು ಸಿದ್ಧೇಶ್ವರ (ಸಿದ್ಧರಾಮೇಶ್ವರ) ಲಿಂಗವೆಂದೂ, ನಂತರ ಪ್ರತಿಷ್ಠಾಪನೆಗೊಂಡಿರುವ ಸಣ್ಣಲಿಂಗವನ್ನು ಮಾರ್ಖಂಡೇಶ್ವರ ಲಿಂಗವೆಂದೂ ಕರೆಯುತ್ತಾರೆ. ಸಿದ್ಧರಾಮನ ಸ್ಮಾರಕವಾಗಿರುವ ಚಿಟಗುಪ್ಪ ಗ್ರಾಮದ ಗವಿಯನ್ನೂ ಮಾರ್ಖಂಡೇಯ ಗವಿಯೆಂದೇ ಕರೆಯುವುದನ್ನು ಇಲ್ಲಿ ನೆನೆಸಿಕೊಳ್ಳಬಹುದು. ಇದು ಯೋಜಿತ ಕಾರ್ಯವೇನೂ ಇರಲಿಕ್ಕಿಲ್ಲ, ಆದರೆ ಮಾರ್ಖಂಡೇಯನ ಭಕ್ತರು ಆ ಮೇಲೆ ಶರಣರ ಸ್ಥಳಗಳಲ್ಲಿ ಮಾರ್ಖಂಡೇಯನನ್ನು ಸ್ಥಾಪಿಸಿ ಪೂಜಿಸುತ್ತ ಬಂದಿರುವ ಪರಿಣಾಮ ಇದಾಗಿರಬೇಕು.

ಗುಡಿಯ ಆವರಣದಲ್ಲಿ ಮೊದಲು ಕಾರಂಜಿ ಇತ್ತಂತೆ. ಈಗ ಅದನ್ನು ತೆಗೆದು ಹಾಕಲಾಗಿದೆ. ಬಾವಿ ಇದೆ. ಲಿಂಗದ ಪೂಜೆಗೆ ಈ ಬಾವಿಯ ನೀರನ್ನು



ಸಿದ್ಧರಾಮೇಶ್ವರ ಮಂದಿರದ ಗರ್ಭಗೃಹದಲ್ಲಿರುವ ಶಿವಲಿಂಗ

ಬಳಸುತ್ತಾರೆ. ಆಷಾಡ ಮಾಸದ ಕೊನೆಗೆ ಶ್ರಾವಣ ಬರುವ ಮುಂಚೆಯೆ ಇಲ್ಲಿ ಸಿದ್ಧೇಶ್ವರ ಜಾತ್ರೆ ಮಾಡುತ್ತಾರೆ. ಶರಣರ ದಾಸೋಹ ಪದ್ಧತಿಯನ್ನು ಜಾತ್ರೆಯ ಸಮಯದಲ್ಲಿ ಅನುಸರಿಸುತ್ತಾರೆ.

ಗುಡಿಯ ಕೆಳಗಡೆ ಒಂದು ಹೊಲದಲ್ಲಿ ಬಾವಿಯಿದೆ. ಆ ಬಾವಿಯ ನೀರನ್ನು ಕುರುಬ ಸಮಾಜಕ್ಕೆ ಸೇರಿದ ವಿಠೋಬಾ ಎನ್ನುವವರು ತಮ್ಮ ಹೊಲಗಳಿಗೆ ಉಪಯೋಗ ಮಾಡಿಕೊಳ್ಳುತ್ತಾರೆ. ಇದರ ಬದಲಿಗೆ ತಮ್ಮ ಸರ್ವೆನಂಬರಿನಲ್ಲಿರುವ ಸುಮಾರು ಐದು ಗುಂಟೆ ಭೂಮಿಯನ್ನು ದೇವರಿಗೆ ದಾನವಾಗಿ ಬಿಟ್ಟಿದ್ದಾರೆ. ಈ ಹೊಲವನ್ನು ಹೂ ಬೆಳೆಯಲು ಕೊಟ್ಟಿದ್ದಾರೆಂದೂ ಹೇಳುತ್ತಾರೆ. ಗುಡಿಯ ಬಲಕ್ಕೆ ಕುರುಬರ, ಎಡಕ್ಕೆ ಕಬ್ಬಲಿಗರ, ಮುಂದೆ ಲಿಂಗಾಯತರ ಹೊಲಗಳಿವೆ.

ಈ ಊರಿನಲ್ಲಿ ಮೂರು ಕೆರೆಗಳಿವೆ. ಕರಿಕೆರಿ, ಕೆಂಪಕೆರಿ, ಊರಕೆರಿ ಎಂದು. ಈ ಊರ ಕೆರಿಯ ಪಕ್ಕದಲ್ಲೂ ಒಂದು ಗವಿ ಇದೆ. ಅಲ್ಲಿ ನೀರಿದೆ. ಊರ ಕೆರಿ ಹತ್ತಿರವೆ ಸೋಮೇಶ್ವರ ಗುಡಿ ಇದೆ. ಸೋಮೇಶ್ವರ ಲಿಂಗವಿದ್ದ ಸ್ಥಳಕ್ಕೆ ಹಲಗುಂಡ ಸ್ಥಳವೆಂದೂ ಹೇಳುತ್ತಾರೆ. ಇಲ್ಲಿಯೂ ೩ ಗವಿಗಳಿವೆ.

ಮಾಹಿತಿ : ಶ್ರೀಮತಿ ಮಹಾದೇವಿ ನಿಂಗಪ್ಪ ಕಲ್ಯಾಣಿ



ಸಿದ್ಧರಾಮೇಶ್ವರ ಮಂದಿರ ಇರುವ ದಿಬ್ಬದಲ್ಲಿರುವ ಗವಿಗಳ ಸಂಕೀರ್ಣ

## ಬಸವಕಲ್ಯಾಣ ತಾಲೂಕು :

## ೪. ಇಲ್ಯಾಳ-೧ :

## ಬೊಮ್ಮಲಿಂಗೇಶ್ವರ ಗುಡಿ

ಹಂಡಬಂಡದ ಕುದರಿ ಗೊಂಡ್ಯಾದ ಲಗಾಮ
ದಂಡ ಬಂದಿತ್ತೊ ಧರಿಮ್ಯಾಲ। ಬೊಮ್ಮಯ್ಯ
ಚಂಡಾಡಿ ದಂಡ ತರವ್ಯಾನ

ಬಸವಕಲ್ಯಾಣದಿಂದ ೧೨ ಕೀ.ಮಿ. ಅಂತರದಲ್ಲಿ, ಬಸವಕಲ್ಯಾಣ ಮಹಾದ್ವಾರದಿಂದ ೭ ಕೀ.ಮೀ. ಅಂತರದಲ್ಲಿ ದಕ್ಷಿಣಕ್ಕೆ ಇಲ್ಲಾಳ (ಇಲ್ಯಾಳ, ಇಳಿಹಾಳ) ಇದೆ. ಬೊಮ್ಮಯ್ಯ ಎನ್ನುವ ಶರಣನ ಸ್ಮಾರಕವೊಂದು ಈ ಊರಿನಲ್ಲಿದೆ. ಬೊಮ್ಮಯ್ಯ ಮೂಲತಃ ಬಾಗಲಕೋಟ ಜಿಲ್ಲೆಯ ಇಳಿಹಾಳದವನು. ಅಲ್ಲಿ ಇವನು ಕೃಷಿಕಾಯಕ ಮಾಡಿಕೊಂಡಿದ್ದನಂತೆ.

ಒಮ್ಮೆ ಬರಗಾಲ ಬಿದ್ದಿತು. ಭಕ್ತರು ಕಾಲ್ನಡಿಗೆಯಿಂದ ಶ್ರೀಶೈಲಕ್ಕೆ ಹೊರಟಿದ್ದರು. ಅವರು ಹಸಿದಿರಬಹುದು ಎಂದುಕೊಂಡ ಬೊಮ್ಮಯ್ಯ, ಬಿತ್ತಲು ತಂದ ಬೀಜಗಳನ್ನೇ ದಾಸೋಹ ರೂಪದಲ್ಲಿ ಭಕ್ತಿಯಿಂದ ಅವರಿಗೆ ನೀಡಿದನಂತೆ. ಹೊಲದ ಪಾಲದಾರನಿಗೆ ಕೋಪ ಬಂದು, ತನ್ನ ಭಾಗದ ಬೆಳೆ ತನಗೆ ಮಾತ್ರ ಎಂದು ಹೇಳಿದನಂತೆ. ಸ್ವಲ್ಪ ಭಾಗ ಮಾತ್ರ ಬಿತ್ತಿದ್ದ ಬೊಮ್ಮಯ್ಯನ ಹೊಲದ ಬೆಳೆ ತುಂಬಿಕೊಂಡು ಬಂದು ನಿಂತಿತಂತೆ.

ಇನ್ನೊಂದು ಸಲ ಕಡಲೆ ಬಿತ್ತಬೇಕೆಂದು ಐದು ಖಂಡುಗ ಕಡಲೆ ಬೀಜ ತಂದಿದ್ದನಂತೆ. ಶಿವನ ಪರೀಕ್ಷೆಯಿಂದ, ಶಿವನು ಕೇಳಿದ ಬೀಜವನ್ನು ಬೊಮ್ಮಯ್ಯ ಕೊಟ್ಟುಬಿಟ್ಟಿದ್ದನಂತೆ. ಮೂರು ದಿನಗಳು ಕಳೆದಾದ ಮೇಲೆ ಹೊಲದ ತುಂಬ ಸಸಿಯ ನಾಟಿಗೆ ಕಾಣಿಸಿಕೊಂಡಿತಂತೆ. ಬೆಳೆ ಮತ್ತೂ ಹಲುಸಾಗಿಯೇ ಬಂದಿತಂತೆ. ಬೊಮ್ಮಯ್ಯ ಅದನ್ನೂ ದಾಸೋಹಕ್ಕೆ ವಿನಿಯೋಗಿಸಿದನು.

ಅವನು ಬಸವಕಲ್ಯಾಣಕ್ಕೆ ಬರುವ ಉದ್ದೇಶದಿಂದ ತನ್ನ ಮೂಲ ಊರನ್ನು ಬಿಟ್ಟು ಬಂದನೆಂದು ತೋರುತ್ತದೆ. ಇಲ್ಲಿ ಅವನು ವಾಸಿಸಲು ಆರಿಸಿಕೊಂಡ ಊರು



ಇಳಿಹಾಳ ಬೊಮ್ಮಯ್ಯನ ಗುಡಿ

ಬಸವಕಲ್ಯಾಣ ತಾಲೂಕಿನ ಇಳಿಹಾಳ ಎಂಬ ಗ್ರಾಮ. ಇಲ್ಲಿಯೂ ಬೊಮ್ಮಯ್ಯ ಕೃಷಿಕಾಯಕ ಮಾಡಿಕೊಂಡು ಇದ್ದಂತೆಯೇ ಮಾಹಿತಿಗಳು ಉಳಿದುಕೊಂಡು ಬಂದಿವೆ. ಇವನದು ನಾಲ್ಕೆತ್ತಿನ ಒಕ್ಕಲುತನ. ಒಂದು ಸಾರೆ ಹೊಲದಲ್ಲಿಯ ಜೋಡು ಎತ್ತಿನಲ್ಲಿ ಒಂದನ್ನು ಕಳ್ಳರು ಹೊಡೆದುಕೊಂಡು ಹೋದರಂತೆ. ಆಗ ಸ್ವತಃ ತಾನೇ ನೊಗಕ್ಕೆ ಹೆಗಲು ಕೊಟ್ಟು ಹೊಲವನ್ನು ಸಾಗು ಮಾಡಿದನು. ಆಗಲೂ ಬೆಳೆ ಹುಲುಸಾಗಿಯೇ ಬಂದಿತೆಂದು ಹೇಳಲಾಗುತ್ತದೆ. ಹೀಗೆ ಕೃಷಿಕಾಯಕ ಮಾಡಿಕೊಂಡಿದ್ದ ಶರಣನೀತ ಎಂಬುದು ಇಲ್ಲಿ ತಿಳಿದುಬರುವ ಮುಖ್ಯ ಸಂಗತಿ. ಹೀಗಾಗಿ ಕೃಷಿಯನ್ನು ನಂಬಿರುವ ಜನ ಇವತ್ತಿಗೂ ಈ ಶರಣನಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಇಲ್ಲಾಳದಲ್ಲಿರುವ ಬೊಮ್ಮಯ್ಯ (ಬ್ರಹ್ಮಯ್ಯ)ನ ಗುಡಿಗೆ ಬ್ರಹ್ಮಯ್ಯನ ಗುರುಸ್ಥಾನ ಮಠವೆಂದು ಕರೆಯುತ್ತಾರೆ. ಈ ಊರಿನವರು ಪ್ರತಿವರ್ಷ ಶಿವರಾತ್ರಿಯಂದು ಅದ್ದೂರಿಯಿಂದ ಜಾತ್ರೆ ನಡೆಸುತ್ತಾರೆ. ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಊರ ತುಂಬೆಲ್ಲ ಮೆರೆಸುತ್ತಾರೆ. ಊರ ಹೊರಗೆ ಸುಮಾರು ಒಂದು ಕಿ.ಮೀ. ಅಂತರದಲ್ಲಿರುವ ಬ್ರಹ್ಮಯ್ಯನದೆಂದು ಹೇಳುವ ಹೊಲದ ಸ್ಥಾನದ ವರೆಗೆ ಮೆರವಣಿಗೆ ಹೋಗುತ್ತದೆ. ಅಲ್ಲಿ ಬ್ರಹ್ಮಯ್ಯನ ಮೂರ್ತಿ ಇದೆ. ಈ ಉತ್ಸವದ ಮುಖ್ಯ ಆಚರಣೆ ಎಂದರೆ ಬೆಲ್ಲ ಹಂಚುವ ವಿಶೇಷ ಕಾರ್ಯಕ್ರಮ. ಬಹುಶಃ ಇದು ಆತನ ಕೃಷಿಕಾಯಕವನ್ನು ಹೇಳುತ್ತಿರಬೇಕು. ಬ್ರಹ್ಮಯ್ಯನ ಸ್ಮಾರಕಗಳು ಎಲ್ಲೆಲ್ಲಿ ಇವೆಯೋ ಅಲ್ಲಿ ನಡೆಯುವ ಉತ್ಸವಗಳಲ್ಲಿ ವಿಶೇಷವಾಗಿ ಈ ಬೆಲ್ಲವನ್ನು

ಹಂಚುವ ಕಾರ್ಯ ನಡೆಯುತ್ತದೆ ಎಂದು ತಿಳಿದುಬರುತ್ತದೆ. ಇದೊಂದು ವಿಶೇಷ ಸಂಗತಿಯೇ ಆಗಿದೆ. ಬೊಮ್ಮಯ್ಯನ ಜಾತ್ರೆ ಸತತ ಮೂರು ದಿನಗಳವರೆಗೆ ನಡೆಯುತ್ತದೆ.

ಬೊಮ್ಮಯ್ಯ ಬಹು ದೊಡ್ಡ ಚೇತನ. ಇದು ಜಾಗ್ರತ ಸ್ಥಳ. ಇಲ್ಲಿ ಸುಳ್ಳು ಮೋಸ ವಂಚನೆ ಯಾವುದೂ ನಡೆಯುವುದಿಲ್ಲ. ಪ್ರಾಮಾಣಿಕರ ಬೇಡಿಕೆಗಳು ಮಾತ್ರ ಈಡೇರುತ್ತವೆ ಎಂಬ ನಂಬುಗೆ ಊರವರಲ್ಲಿದೆ. ತಪ್ಪು ಮಾಡಿದವರು ಇಲ್ಲಿಗೆ ಬರಲು ಹೆದರುತ್ತಾರೆ. ಹೆದರದೇ ಬಂದವರಿಗೆ ಶಿಕ್ಷೆ ತಪ್ಪಿದ್ದಲ್ಲ ಎಂಬ ನಂಬುಗೆಯೂ ಇದೆ. ಹಾಗೆ ಆದ ಸಂಗತಿಗಳನ್ನೂ ಅಂಥವರ ಹೆಸರು ಹೇಳಿದರೆ ಜಗಳಕ್ಕೆ ಮೂಲ ಎಂದು ಸುಮ್ಮನಿರುತ್ತಾರೆ.

ಕಲ್ಯಾಣದಲ್ಲಿ ಒಂದು ಕೆರೆ ಕಟ್ಟುತ್ತಿದ್ದರಂತೆ. ಎಷ್ಟೆ ಗಟ್ಟಿಯಾಗಿ ಕಟ್ಟಿದರೂ ಅದು ನಿಲ್ಲುತ್ತಿರಲಿಲ್ಲವಂತೆ. ಹಗಲೆಲ್ಲ ಕಟ್ಟುವುದು ರಾತ್ರಿ ಬೀಳುವುದು ನಿರಂತರವಾಗಿ ನಡೆದಿತ್ತಂತೆ. ಎಲ್ಲಾ ಶರಣರನ್ನು, ದೇವತೆಗಳನ್ನು ಕರೆದು ಕೇಳಿದರಂತೆ. ಏನೂ ಉಪಯೋಗವಾಗಲಿಲ್ಲ. ಕೊನೆಗೆ ಬೊಮ್ಮಯ್ಯನನ್ನು ಕರೆದು ಕೇಳಿದರಂತೆ. ಆಗ ಬ್ರಹ್ಮಯ್ಯ ಸತತವಾಗಿ ಮೂರು ದಿನ ಸೂರ್ಯಾಸ್ತವಾಗದಂತೆ ಸೂರ್ಯನನ್ನೇ ತಡೆದು ನಿಲ್ಲಿಸಿದರಂತೆ. ಕೆರೆ ಕಟ್ಟುವ ಕೆಲಸ ಮುಗಿದ ನಂತರವೇ ಸೂರ್ಯನನ್ನು ಬಿಟ್ಟರೆಂದು



ಇಳಿಹಾಳ ಬೊಮ್ಮಯ್ಯನ ಗುಡಿಯ ಗರ್ಭಗೃಹ, ಬ್ರಹ್ಮಯ್ಯನ ನವೀನ ಶಿಲ್ಪ
ಹಳೆಯ ಮೂರ್ತಿ ಮೂಲೆಯಲ್ಲಿರುವದು

ಒಂದು ಕಥೆ ಉಳಿದುಕೊಂಡು ಬಂದಿದೆ. ಇದು ಕನಿಷ್ಠ ಬೊಮ್ಮಯ್ಯ ಕಲ್ಯಾಣಕ್ಕೆ ಹೋಗಿದ್ದರು ಎಂಬುದಕ್ಕೆ ನಮಗೆ ಸಾಕ್ಷಿಯಾಗುತ್ತದೆ. ಮತ್ತು ಆತ ಕೃಷಿ ಕಾಯಕದವರು ಎಂಬ ಸುಳುಹು ದೊರೆಯುತ್ತದೆ.

ಬೊಮ್ಮಯ್ಯ ಸಿದ್ಧರಾಮೇಶ್ವರರನ್ನು ಭೇಟಿಯಾಗಲು ಸೊನ್ನಲಾಪುರಕ್ಕೆ ಹೋಗಿದ್ದರೆಂದೂ ಹೇಳಲಾಗುತ್ತದೆ. ಬೊಮ್ಮಯ್ಯನನ್ನು ಸಿದ್ಧರಾಮನ ತಾಯಿತಂದೆಗಳು ಮಗನೆಂದು ಗೌರವಿಸಿದರೆ, ಸಿದ್ಧರಾಮ ಅಣ್ಣನೆಂದು ಪ್ರೀತಿಸಿದ್ದಾರೆ. ತನ್ನ ಸಮಾಜ ಕಲ್ಯಾಣ ಕಾರ್ಯದಲ್ಲಿ ಅವನನ್ನು ಬಳಸಿಕೊಂಡನೆಂದು ಹೇಳುತ್ತಾರೆ. ಕಾವ್ಯಗಳಲ್ಲೂ ಈ ಸಂಗತಿ ಬರುತ್ತದೆ.

ಇಳಿಹಾಳದಲ್ಲಿ ಕುರುಬರು, ರಡ್ಡೇರು, ಲಿಂಗಾಯತರು, ಮುಸ್ಲೀಮರು ಹೀಗೆ ಎಲ್ಲ ಕೋಮಿನ ಜನರೂ ವಾಸಿಸುತ್ತಾರೆ. ಸುಮಾರು ೩೦ ಸಾವಿರ ಜನಸಂಖ್ಯೆವುಳ್ಳ ದೊಡ್ಡ ಗ್ರಾಮ ಇದು. ಊರಿನ ಜನರೆಲ್ಲರೂ ಯಾವ ಭೇದ ಭಾವವಿಲ್ಲದೆ ಬೊಮ್ಮಯ್ಯನಿಗೆ ನಡೆದುಕೊಳ್ಳುತ್ತಾರೆ.

**ಮಾಹಿತಿ :** ಶ್ರೀಮತಿ ಗುರುಲಿಂಗಮ್ಮ ರೇವಣಯ್ಯ ಹಿರೇಮಠ
(ಬೊಮ್ಮಯ್ಯನ ಗುಡಿಯ ಪೂಜಾರಿಗಳು),
ನಾಗಯ್ಯ ರುದ್ರಯ್ಯಸ್ವಾಮಿ ಹಿರೇಮಠ, ವೆಂಕಟ ತುಕಾರಾಮ ಗುಂಡೆ.

ನೋಡಿ : ಇಳಿಹಾಳ-೨, ತಾ.ಜಿ. ಬಾಗಲಕೋಟ
ಇಳಿಹಾಳ-೩, ತಾ. ಹುನಗುಂದ ಜಿ. ಬಾಗಲಕೋಟ


***

### ಬಸವಕಲ್ಯಾಣ ತಾಲೂಕು :

## ೫. ಮಂಠಾಳ :
## ಮಠಗಳ ಊರು ಮಂಠಾಳ

ಕಲ್ಯಾಣ ಹಟ್ಟಾಗ ಎಲ್ಲಿದ್ದಿ ಬಸವಣ್ಣ
ಹಳ್ಳಿ ಮಂಠಾಳ ತಿಪರಂತ। ಕೆರಿಮ್ಯಾಗ
ಚೆನ್ನ ಮೂಡ್ಯಾನ ಬಸವಣ್ಣ

ಕಲ್ಯಾಣದ ಸುತ್ತಮುತ್ತಲೂ ಇರುವ ಹತ್ತಿಪ್ಪತ್ತು ಹಳ್ಳಿಗಳಲ್ಲಿ ಇವತ್ತು ಶರಣರ ಸ್ಮಾರಕಗಳು ಉಳಿದುಕೊಂಡಿವೆ. ಆ ಮೂಲಕ ಶರಣರ ಸ್ಮೃತಿಯನ್ನು ಮರೆಯದೆ ಉಳಿಸಿವೆ. ಈ ತ್ರಿಪದಿಯಲ್ಲಿ ನಮೂದಾಗಿರುವ ಊರುಗಳು ಪ್ರಮುಖವಾಗಿ ಮೂರಿವೆ. ಒಂದು ಶರಣರ ನಿಜವಾದ ವಾಸಸ್ಥಾನವಾಗಿದ್ದ ತ್ರಿಪುರಾಂತ ಕೆರೆ ಮತ್ತು ಅಲ್ಲಿಂದ



ಮಲ್ಲಿಕಾರ್ಜುನ ಮಠ, ಈಗ ಮನೆಯಾಗಿದೆ



ಈ ಮಠವನ್ನು ಮನೆಯಾಗಿಸಿಕೊಂಡಿರುವ ಕುಟುಂಬದ ಸದಸ್ಯರು
ಕಟ್ಟೆಯ ಮೇಲೆ ಕುಳಿತುಕೊಂಡಿರುವುದು ಕಾಣುತ್ತದೆ




ಮೇಲಿನ ಚಿತ್ರದಲ್ಲಿರುವ ಮಠದ ಪುರಾತನ ಬಾಗಿಲು

ಸುಮಾರು ೧೫ ಕಿ.ಮೀ. ಅಂತರದಲ್ಲಿ ನ್ಯಾಶನಲ್ ಹೈವೇ ಮೇಲೆ ಇರುವ ಹಳ್ಳಿ ಎಂಬ ಗ್ರಾಮ. ಅಲ್ಲಿಂದ ರಾಷ್ಟ್ರೀಯ ಹೆದ್ದಾರಿಗುಂಟ ಎರಡು ಕಿ. ಮೀ. ದೂರದಲ್ಲಿ ಒಳಗಡೆ ಇರುವ ಮಂತಾಳ. ಬಸವಣ್ಣನವರ ಹೆಸರನ್ನು ಒಳಗೊಂಡ ಈ ತ್ರಿಪದಿ ಬೀದರ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ತುಂಬಾ ಪ್ರಸಿದ್ಧವಾಗಿದೆ.

ಇಂದು ಶರಣ ಸಂಗತಿಗಳನ್ನು ಅರಿಯಲು ಅವರ ಸ್ಮಾರಕಗಳಿರುವ ಗ್ರಾಮಗಳಿಗೆ ಭೇಟಿಕೊಡುವ ಪ್ರಸಂಗ ಬಂದಾಗ, ಏನಿವೆ ಈ ಹಳ್ಳಿ ಮತ್ತು ಮಂತಾಳಗಳಲ್ಲಿ ಎಂದು ಯೋಚಿಸಿ ನೋಡಿದರೆ, ಹಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಮೇಲೆ ಬಲಗಡೆ ಒಂದು ಸಣ್ಣ ಗುಡಿ ಇದೆ. ಇದನ್ನು ಸಮಗಾರ ಹರಳಯ್ಯನ ಗುಡಿ ಎಂದು ಹೇಳುತ್ತಾರೆ. ಮಂತಾಳದಲ್ಲಿ ಏನಿದೆ ಎಂದು ವಿಚಾರಿಸಿದರೆ ಅದೊಂದು **'ಮಠಗಳ ಆಲಯ'** 'ಮಠಾಲಯ' ಆಗಿ ನಂತರ ಜನರ ಬಾಯಿಯಲ್ಲಿ **'ಮಂತಾಳ'** ಆಗಿದೆ.

ಈ ಊರಿನಲ್ಲಿ ನೇರವಾಗಿ ಯಾವುದೇ ಶರಣನ ಸ್ಮಾರಕ ಇಂದು ಉಳಿದುಬಂದಿರುವುದು ಕಾಣುವುದಿಲ್ಲ. ಆದರೆ ಊರ ತುಂಬ ಮಠಗಳಿವೆ. ಏನಿಲ್ಲವೆಂದರೂ ೨೫ಕ್ಕೂ ಹೆಚ್ಚಿಗೆ,ಸುಮಾರು ೫೦ರ ವರೆಗೂ ಮಠಗಳು



ಊರ ಹೊರಗಿರುವ ಒಂದು ಮಠಕ್ಕೆ ಸೇರಿದ ಗವಿ

ಇರಬಹುದೆನ್ನುತ್ತಾರೆ ಊರವರು. ಒಂದು ದಿನ ಇಡಿಯಾಗಿ ತಿರುಗಿದರೂ ಮಠಗಳ ಲೆಕ್ಕ ಮುಗಿಯಲಿಲ್ಲ. ಅವೆಲ್ಲ ಖಂಡಿತವಾಗಿ ಶರಣರ ತತ್ತ್ವಗಳನ್ನು ಪ್ರಸಾರ ಮಾಡಲು ಹುಟ್ಟಿಕೊಂಡ ಮಠಗಳೇ ಆಗಿವೆ. ೧. ಮಲ್ಲಿಕಾರ್ಜುನ ಮಠ, ೨. ಗುರುಲಿಂಗಸ್ವಾಮಿ ಮಠ, ೩. ಚೌಕಿಮಠ, ೪. ಲಿಂಗಯ್ಯ-ಚೆನ್ನಯ್ಯನಮಠ, ೫. ಕಾಶಿವಿಶ್ವನಾಥಮಠ, ೬. ಮೂಕಯ್ಯನಮಠ, ೭. ಹುಲ್ಲಯ್ಯನಮಠ, ೮. ಮರಿದೇವರಮಠ, ೯. ನಡುವಿನಮಠ, ೧೦. ಬಾಳಕೃಷ್ಣಮಠ (ಶೈವಬ್ರಾಹ್ಮಣರಮಠ). ೧೧. ನಡುವಿನ ಮಠ, ೧೨. ಮಾಚಯ್ಯನ ಮಠ, ೧೩. ಹಿರೇಮಠ, ೧೪. ಕಾಶಪ್ಪನ ಮಠ, ೧೫.ಸಿದ್ದಯ್ಯನ ಮಠ ಮುಂತಾಗಿ ಇವೆ. ಆದರೆ ದುರಂತವೆಂದರೆ ಎಲ್ಲ ಮಠಗಳು ಮನೆಗಳಾಗಿವೆ. ಮೂಲದ ಆಶಯಗಳನ್ನು ಇಲ್ಲಿಯ ಮಠಗಳೆಲ್ಲ ಮರೆತಿವೆ. ಖಾಸಗಿ ಮನೆಗಳಂತೆ ಮಾಡಿಕೊಂಡ ಜನ, ತಮ್ಮ ಮನೆಗಳೆಂದೇ ಹೇಳುತ್ತಾರೆ. ಇದು ಅತ್ಯಂತ ಖೇದದ ಸಂಗತಿ.

ಇವೆಲ್ಲ ಶರಣ ತತ್ವಗಳನ್ನು ಸಾರಲು ಹುಟ್ಟಿಕೊಂಡ ಮಠಗಳೆಂದು ತೋರುತ್ತದೆ. ಹರಳಯ್ಯನ ಸ್ಮಾರಕವಿರುವ 'ಹರಳಯ್ಯನ ಪಟ್ಟಿ' ಮಂಠಾಳ ಸರ್ವೆನಂಬರನಲ್ಲಿ ಬರುತ್ತದೆ ಎಂದು ತಿಳಿದುಬರುತ್ತದೆ. ಸುಮಾರು ೧೫ ಎಕರೆ ಜಮೀನು ಹರಳಯ್ಯನ ಹೆಸರಿಗೆ ಇದ್ದುದೂ ಖಾಸಗಿಯವರು ಮಾರಿಕೊಂಡ ಸಂಗತಿಯೂ ಇಲ್ಲಿ ತಿಳಿದುಬರುತ್ತದೆ.

***



೨೫ ವರ್ಷ ಶಾಲೆಯಾಗಿದ್ದ ಮಠ ಈಗ ತಿಪ್ಪೆಗುಂಡಿಯಾಗಿದೆ

## ಬಸವಕಲ್ಯಾಣ ತಾಲೂಕು :

### ೬. ಚಂಡಕಾಪುರ :

### ಮಾದಾರ ಚೆನ್ನಯ್ಯನ ಅಂಬಲಿಗುಂಡ

ಚಂಡಕಾಪುರ ಬಸವಕಲ್ಯಾಣದಿಂದ ಕೇವಲ ೧೫ ಕಿ.ಮೀ. ಅಂತರದಲ್ಲಿ, ರಾಷ್ಟ್ರೀಯ ಹೆದ್ದಾರಿ ೯ರ ಮೇಲೆ ಬರುತ್ತದೆ. ಈ ಊರಿನ ಗುಡ್ಡಬೆಟ್ಟಕ್ಕೆ ಹತ್ತಿಕೊಂಡು ಒಂದು ದೊಡ್ಡ ದೇವಾಲಯ ಇದೆ. ಅದನ್ನು ರಾಮನ ಗುಡಿಯೆಂದು ಕರೆಯುತ್ತಾರೆ. ಪುರಾತನವಾದ ಎರಡು ಗರ್ಭಗೃಹಗಳಿವೆ. ಎರಡರಲ್ಲೂ ಇರುವುದು ಲಿಂಗಗಳೇ. ಈ ಗುಡಿಯ ಮುಂದೆ ಅಮೃತಕುಂಡ ಇದೆ. ಇದನ್ನು ಅಂಬಲಿಗುಂಡ ಎಂದೂ ಕರೆಯಲಾಗುತ್ತದೆ. ಸುತ್ತಲೂ ಗುಡ್ಡವಿದ್ದು, ನಡುವೆ ತೆಗ್ಗಿನ ಪ್ರದೇಶ ಇದಾಗಿರುವುದರಿಂದ ನೀರಿನ ಹರಿ ನಿರಂತರವಾಗಿರುತ್ತದೆ.



ಅಂಬಲಿಗುಂಡ–ರಾಮಲಿಂಗೇಶ್ವರ ಗುಡಿ



ರಾಮಲಿಂಗೇಶ್ವರ ಗುಡಿಯ ಒಂದು ಗರ್ಭಗೃಹದ ಶಿವಲಿಂಗ
ಬೇರೆ ಚಿತ್ರಗಳನ್ನು ಇತ್ತೀಚೆಗೆ ಅಂಟಿಸಿರುವುದು ಕಾಣುತ್ತದೆ

ಅಂಬಲಿಗೆ ಪ್ರಸಿದ್ಧನಾದ ಮಾದಾರ ಚೆನ್ನಯ್ಯ ವಾಸವಾಗಿದ್ದ ಸ್ಥಳ ಇದು ಎಂದು ಹೇಳಲಾಗುತ್ತದೆ.

ಜಾತಿಯೊಳು ಮಾದಾರ ನೀತಿಯೊಳು ಶಿವಶರಣ
ಮಾತು ವಚನಗಳು ಚನ್ನಯ್ಯ । ಶಿವನುಂಡ
ಕೂತು ಎದೆಯೊಳಗೆ ಅಂಬಲಿಯ

ಚೆನ್ನಯ್ಯನು ಕಲ್ಯಾಣಕ್ಕೆ ಬಂದ ಮೇಲೆ ವಾಸಿಸಲು ಆರಿಸಿಕೊಂಡ ಸ್ಥಳ ಚಂಡಕಾಪುರದ ಈ ನಿಸರ್ಗ ರಮ್ಯ ತಾಣವನ್ನು. ಅವನ ವಚನಾಂಕಿತದ ಕೊನೆಯಲ್ಲಿ 'ನಿಜಾತ್ಮ ರಾಮರಾಮನ' ಎಂದು ಬರುವುದರಿಂದ ಅದು ಇಲ್ಲಿರುವ ರಾಮಲಿಂಗನ ಹೆಸರೇ ಆಗಿರುವ ಸಾಧ್ಯತೆಯಿದೆ. ಹೀಗಿರುವುದರಿಂದ ಚೆನ್ನಯ್ಯನ ಆರಾಧ್ಯ ದೈವ ಇಲ್ಲಿರುವ ರಾಮಲಿಂಗನೇ ಆಗುತ್ತಾನೆ. ಪ್ರಸಾದಿ ಲೆಂಕ ಬಂಕಣ್ಣ ಎಂಬ ಶರಣರ ವಚನಾಂಕಿತ 'ಚಂಡಿಕೇಶ್ವರ ಲಿಂಗ' ಎಂದಿರುವುದೂ ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ. ಈ ಅಂಕಿತದಲ್ಲಿ ಅವರ ೧೧ ಚನಗಳು ಪ್ರಕಟವಾಗಿವೆ.

ಚೆನ್ನಯ್ಯನು ಅಂಬಲಿಯ ಚೆನ್ನಯ್ಯನೆಂದು ಪ್ರಸಿದ್ಧನಾದ ಕಾರಣವಾಗಿ ಇಲ್ಲಿ ಮಡುಗಟ್ಟಿ ಹರಿಯುವ ನೀರಿನ ಗುಂಡವೇ ಅಂಬಲಿಗುಂಡ ಎಂದು ಪ್ರಸಿದ್ಧವಾಗಿರುವಂತೆ ಇದೆ. ಇದನ್ನೇ ತಿದ್ದಿ ನಂತರ ಅಮೃತಗುಂಡ ಎಂದು ಹೇಳುವ ಪರಿಪಾಠ ಬಿದ್ದಂತೆ ತೋರುತ್ತದೆ.

ಇಲ್ಲಿರುವ ಗುಡ್ಡದ ಹೊಟ್ಟೆಯಲ್ಲಿ ಮೂರು ಗವಿಗಳು ಸ್ಪಷ್ಟವಾಗಿ ಕಾಣುತ್ತವೆ. ನೀರು ಹರಿಯುವ ಸ್ಥಳದಲ್ಲಿಯೂ ಗವಿಗಳ ಹಾಗೆ ಕೊರೆದ ಸ್ಥಾನಗಳು ಗೋಚರಿಸುತ್ತವೆ. ಇದನ್ನು ಗಮನಿಸಿದರೆ, ಸುತ್ತಲೂ ಗುಡ್ಡದ ವಾರೆಗಳಲ್ಲಿ ಶರಣರು ವಾಸವಾಗಿರುವ ಸಾಧ್ಯತೆಯೇ ಹೆಚ್ಚು. ನಾವು ನೋಡಿದ ಅನೇಕ ಶರಣ ವಾಸಸ್ಥಳಗಳ ಮಾದರಿ ಹೀಗೆಯೇ ಇರುವುದು ಸ್ಪಷ್ಟವಾಗಿ ಗಮನಕ್ಕೆ ಬರುತ್ತದೆ. ಬೆಟ್ಟಬಲಕುಂದದ ಬೆಟ್ಟದ ವಾರಿ, ಬಂದವರ ಓಣಿ, ತ್ರಿಪುರಾಂತ ಕರೆ, ಘಾಟಬೋರಾಳ, ಹಳ್ಳಿಖೇಡ, ಚಿಟಗುಪ್ಪ ಮುಂತಾದ ಸ್ಥಳಗಳೆಲ್ಲ ಒಂದೇ ಮಾದರಿಯಲ್ಲಿಯೇ ಇರುವುದು ಗಮನಾರ್ಹ ಸಂಗತಿ. ಸುತ್ತಲೂ ಗುಡ್ಡ ಹಬ್ಬಿಕೊಂಡು, ನಡುವೆ ತೆಗ್ಗಾದ ಪ್ರದೇಶವಿದ್ದು, ಅಲ್ಲಿ ನೀರಿನ ಸ್ಥಳವಿರುವ ಸ್ಥಾನಗಳೇ ಇವೆಲ್ಲ ಆಗಿವೆ. ಇಂಥ ಗುಡ್ಡದ ವಾರೆಗಳಲ್ಲಿ ವಾಸಿಸಲು ಸಣ್ಣ ಸಣ್ಣ ಗವಿಗಳ ನಿರ್ಮಾಣ ಮಾಡಿಕೊಂಡು ಶರಣರು ವಾಸಿಸಿರುವ ಕುರುಹುಗಳು ಇಲ್ಲೆಲ್ಲ ಸಾಮಾನ್ಯವಾಗಿ ಗೋಚರಿಸುತ್ತವೆ. ಇಲ್ಲಿಗೆ ಹರಳಯ್ಯನೂ ಬಂದು ಹೋದನೆಂದು ಹೇಳಲಾಗುತ್ತದೆ.

ಇತ್ತೀಚೆಗೆ ಹಲವಾರು ಕಡೆ ಶರಣಸ್ಮಾರಕಗಳಲ್ಲಿ ವೈದಿಕ ಸಂಸ್ಕೃತಿಯ ಅತಿಕ್ರಮಣವಾಗಿರುವುದು ಕಂಡುಬರುತ್ತದೆ. ಚಿಟಗುಪ್ಪದ ಸಿದ್ಧರಾಮೇಶ್ವರ ಗವಿಯಲ್ಲಿ ಮತ್ತು ಮೋರ್ಖಂಡಿಯ ಸಿದ್ಧರಾಮೇಶ್ವರ ಗುಡಿಯಲ್ಲಿ ಮಾರ್ಖಂಡೇಯನ



ರಾಮಲಿಂಗೇಶ್ವರ ಗುಡಿಯ ಇನ್ನೊಂದು ಗರ್ಭಗೃಹದ ಶಿವ-ಲಿಂಗ
ಇವುಗಳ ರಚನೆಯೇ ಹಳಮೆಯನ್ನು ಹೇಳುತ್ತದೆ



ಈಗ ದತ್ತನ ಮಂದಿರವೆಂದು ಹೇಳುವ ಗರ್ಭಗೃಹದ ಶಿವಲಿಂಗ
ದತ್ತನ ಚಿತ್ರಗಳನ್ನು ಇತ್ತೀಚಿಗೆ ಗೋಡೆಗೆ ಮೆತ್ತಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ

ಸ್ಥಾಪನೆಯಾಗಿರುವುದು, ಮತ್ತು ಮಾರ್ಖಂಡೇಯನ ಗುಡಿಗಳೆಂದೇ ಕರೆಯುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಚಿಟ್ಟಾ (ಕೆ) ಗ್ರಾಮದ ಕಲ್ಮೇಶ್ವರ ದೇವಾಲಯದಲ್ಲಿ ದತ್ತನ ಪ್ರತಿಷ್ಠಾಪನೆಯಾಗಿದೆ. ಇಲ್ಲಿ ಚಂಡಕಾಪುರದಲ್ಲೂ ದತ್ತನ ಪಾದುಕೆಗಳನ್ನು ಒಂದೆಡೆ ಪ್ರತಿಷ್ಠಾಪಿಸಲಾಗಿದೆ. ರಾಮಲಿಂಗನ ಗುಡಿಯ ಎದುರಿಗೆ ಒಂದು ಚಿಕ್ಕ ಗುಡಿ ಇದೆ. ಅಲ್ಲಿರುವುದೂ ಶಿವಲಿಂಗವೇ. ಆದರೆ ಅದನ್ನೀಗ ದತ್ತಾತ್ರೆಯ ಗುಡಿ ಎಂದು ಹೇಳಲಾಗುತ್ತಿದೆ. ಪ್ರಮುಖ ಗೋಸಾಯಿಗಳ ಮನೆ-ಮಠಗಳಲ್ಲಿ ದತ್ತನ ಪ್ರತಿಷ್ಠಾಪನೆಯಾಗಿರುವುದು ಕಂಡು ಬರುತ್ತದೆ. ಇದು ನಂತರದ ಬೆಳವಣಿಗೆ ಎಂಬುದು ಸರಳವಾಗಿ ಗೋಚರಿಸುತ್ತದೆ.

ಚೆನ್ನಯ್ಯನು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ಚೋಳ ದೇಶದ ಕರಿಕಾಲ ಚೋಳನ ಕುದುರೆ ಲಾಯದಲ್ಲಿ ಹುಲ್ಲು ಕೊಯ್ದು ತರುವ ಕಾಯಕವನ್ನು ಮಾಡಿಕೊಂಡಿದ್ದನು. ಶ್ರದ್ಧೆ ನಿಷ್ಠೆಯಿಂದ ಲಿಂಗಪೂಜೆ ಮಾಡಿಕೊಂಡಿದ್ದನು. ಶಿವನು ಚೋಳರಾಜನ ಮೃಷ್ಟಾನ್ನವನ್ನು ಬಿಟ್ಟು ಚೆನ್ನಯ್ಯನ ಮನೆಯ ಅಂಬಲಿಯ ರುಚಿ ನೋಡಿದನೆಂಬ ಕಥೆ ಅವನೊಂದಿಗೆ ಉಳಿದುಕೊಂಡು ಬಂದಿದೆ.

ವಚನಗಳು : ೧೦
ವಚನಾಂಕಿತ : ಅರಿ ನಿಜಾ(ತ್ಮಾ)ರಾಮ ರಾಮನಾ


***

ಬಸವಕಲ್ಯಾಣ ತಾಲೂಕು :

## ೭. ತೊಗಲೂರು :

## ಡೋಹರ ಕಕ್ಕಯ್ಯನವರ ಮಂತಣೆಗಳು

ತೊಗಲೂರು ಗ್ರಾಮವು ಬಸವಕಲ್ಯಾಣ ತಾಲೂಕಿಗೆ ಸೇರಿದ, ತಾಲೂಕು ಸ್ಥಳದಿಂದ ೧೫ ಕಿ.ಮೀ. ದೂರದಲ್ಲಿರುವ ಒಂದು ಹಳ್ಳಿ. ಊರ ಹೆಸರನ್ನು ಕೇಳುತ್ತಿದ್ದಂತೆಯೇ ಏನೋ ವಿಶೇಷ ಅರ್ಥವನ್ನು ನಾವು ಅನುಭವಿಸುತ್ತೇವೆ. ಚರ್ಮದ ವಸ್ತುಗಳನ್ನು ತಯಾರಿಸುವ ಪ್ರಾಚೀನ ಊರು ಇದಾಗಿದೆ. ಹೀಗಾಗಿ ಆ ಹೆಸರು ಉಳಿದುಕೊಂಡು ಬಂದಿದೆ ಎಂಬುದು ಥಟ್ಟನೆ ಹೊಳೆಯುತ್ತದೆ. ಇದು ತೊಗಲಿನ ಕೆಲಸಕ್ಕೆ ಪ್ರಸಿದ್ಧವಾದ ಊರು. ಅದಕ್ಕಾಗಿ ತೊಗಲಿನ ಕೆಲಸ ಮಾಡುವವರು ಹೆಚ್ಚಾಗಿ ಇರುವ ಊರು ಇದಾಗಿದೆ ಎಂಬುದು ಊರವರ ಅನಿಸಿಕೆ.



ತೊಗಲು ಹದಮಾಡಲು ಬಳಸುವ ಮಂತಣೆ



ಶರಣರು ಕೂಡಿ ಚರ್ಚೆ ಮಾಡುತ್ತಿದ್ದ ಸಿದ್ದೇಶ್ವರ ಕಟ್ಟೆ

ಇತ್ತೀಚೆಗೆ ೨೦೦೪ರಲ್ಲಿ ಈ ಊರಿನಲ್ಲಿ ಅಗೆತದ ವೇಳೆಗೆ ಊರ ಹೊರಗೆ, ಊರ ಮುಂದೆ ಹರಿಯುವ ಚುಳುಕಿನಾಲಾ ಎಂಬ ನೀರಿನ ಹರಿಯ ಮುಂದೆ ಇರುವ ತಿಪ್ಪೆಗುಂಡೆಯಲ್ಲಿ, ಚರ್ಮ ಹದಮಾಡಲು ಬಳಸುತ್ತಿದ್ದ ಮೂರು ಮಂತಣಿಗಳು ದೊರಕಿವೆ. ಐದು ಅಡಿ ಆಳ, ೪ ಅಡಿ ಅಗಲವಾಗಿರುವ ಈ ಮಂತಣಿಯ ಕಂಕಣ (ಬಾಯಿಯ ಕಟ್ಟು) ಮೂರು ಇಂಚಿನಷ್ಟು ದಪ್ಪವಾಗಿದೆ. ಈ ಮಂತಣಿಗಳು ತಮ್ಮೂರಿನಲ್ಲಿ ವಾಸವಾಗಿದ್ದ ಶರಣ ಡೋಹರ ಕಕ್ಕಯ್ಯನಿಗೆ ಸಂಬಂಧಿಸಿದವುಗಳು ಎಂದು ಹೇಳಲಾಗುತ್ತದೆ. ಇವು ಹಳ್ಳದ ದಂಡೆಯ ಮೇಲೆಯೇ ಇರುವುದರಿಂದ ಮಳೆ ಬಂದರೆ ಈ ಮಂತಣಿಗಳೆಲ್ಲ ಮಣ್ಣಿನಲ್ಲಿ ಹೂತು ಹೋಗುತ್ತವಂತೆ. ಮತ್ತೆ ಅವುಗಳನ್ನು ಅಗೆದು ನೋಡಲು ಬರುವಂತೆ ಮಾಡುತ್ತಾರಂತೆ. ಅವುಗಳ ರಕ್ಷಣೆಯ ವ್ಯವಸ್ಥೆ ಆಗಿಲ್ಲ. ಆಗಬೇಕೆಂಬುದು ಊರವರ ಅಭಿಲಾಷೆ. ಅಲ್ಲಿ ಹಳ್ಳದ ದಂಡಿಗೆ ಇಳಿಜಾರು ಪ್ರದೇಶ ಇರುವುದರಿಂದ, ಮಂತಣಿಗಳು ದೊಡ್ಡವಾಗಿರುವುದರಿಂದ ಅಪಾಯವಿದೆ ಎಂದೂ ಹೇಳಲಾಗುತ್ತದೆ.

ಈ ಮಂತಣಿಗಳಿಂದ ಸ್ವಲ್ಪದೂರದಲ್ಲಿ ಒಂದು ಕಟ್ಟೆ ಇದೆ. ಈಗ ಅದರ ಮೇಲೆ ಸಣ್ಣದಾದ ಲಕ್ಷ್ಮಿ ಗುಡಿಯೊಂದನ್ನು ನಿರ್ಮಿಸಲಾಗಿದೆ. ಆದರೆ ಆ ಊರಿನ ಜನರೆಲ್ಲ ಹೇಳುವುದೆಂದರೆ, ಈ ಕಟ್ಟೆ ಶರಣ ಕಕ್ಕಯ್ಯನಿಗೆ ಸಂಬಂಧಿಸಿದ್ದು, ಆತ ಈ ಕಟ್ಟೆಯ ಮೇಲೆ ಶರಣರೊಡಗೂಡಿ ಚರ್ಚೆಯಲ್ಲಿ ತೊಡಗುತ್ತಿದ್ದ ಎಂದು ಹೇಳುತ್ತಾರೆ.

ತೊಗಲೂರಿನ ಸೀಮೆಯಲ್ಲಿ ಒಂದು ಕಟ್ಟೆ ಇದೆ. ಅದನ್ನು ಸಿದ್ಧೇವರ, ಸಿದ್ಧೇಶ್ವರ ಕಟ್ಟೆ ಎಂದು ಕರೆಯುತ್ತಾರೆ. ಬಹಳ ಹಳೆಯ ಕಾಲದ ಕಟ್ಟೆ ಇದಾಗಿದೆ. ಆ ಕಟ್ಟೆಯ ಮೇಲೆ ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಆ ಕಟ್ಟೆಯ ಮೇಲೆ ಶರಣರೆಲ್ಲ ಕುಳಿತು ಸಭೆ ನಡೆಸುತ್ತಿದ್ದರೆಂಬ ಸಂಗತಿ ತಲೆಮಾರಿನಿಂದ ಉಳಿದುಕೊಂಡು ಬಂದಿದೆ. ಶ್ರಾವಣ ಸೋಮವಾರದಂದು (ಯಾವುದಾದರೂ ಒಂದು ಸೋಮವಾರ) ಈ ಕಟ್ಟೆಯ ಮೇಲೆ ಬುಟ್ಟಿ ಜಾತ್ರೆ ನಡೆಯುತ್ತದಂತೆ. ಅದನ್ನು ಈಗಲೂ ನಡೆಸಿಕೊಂಡು ಬರುತ್ತಿದ್ದಾರೆ.

ತೊಗಲೂರಿನಲ್ಲಿ ಹಳೆಯದಾದ ಒಂದು ಮಹಾದೇವನ ಗುಡಿ ಇದೆ. ಗೋಸಾಯಿಗಳು ಈ ಗುಡಿಗೆ ನಡೆದುಕೊಳ್ಳುತ್ತಾರೆ. ಮರಾಠಾ ಜನ ಗೋಸಾಯಿಗಳನ್ನು ತಮ್ಮ ಗುರುಗಳು ಎಂದು ನಂಬಿ ನಡೆಯುತ್ತಾರೆ. ಮನೆಯಲ್ಲಿ ಯಾವುದೇ ಶುಭ ಕಾರಣವಿದ್ದರೂ ಅವರನ್ನೇ ಕರೆದುಕೊಂಡು ಬಂದು ಪೂಜೆ ಮಾಡಿಸಲಾಗುತ್ತದೆ. ಮಹಾದೇವನ ಗುಡಿಯ ಸುತ್ತಮುತ್ತ ಮೊದಲು ಯಾವುದೇ ಗುಡಿಗಳಿರಲಿಲ್ಲ. ಒಂದು ಬಾವಿ ಮಾತ್ರ ಇತ್ತು. ಈಗ ಗುಡಿಯ ಸುತ್ತಮುತ್ತ ಮನೆಗಳಾಗಿ, ಗುಡಿ ಊರೊಳಗಾಗಿದೆ. ಮಹಾದೇವನ ಗುಡಿಯ ಕೆಳಗೆ ಆರೇಳು ಗುಂಟೆ ಜಮೀನಿದೆ.



ಸಿದ್ದೇಶ್ವರ ಕಟ್ಟೆಯ ಗರ್ಭಗೃಹದ ಮೂರ್ತಿ

ಈ ಊರಿನ ವಿಶೇಷವೆಂದರೆ ಇಲ್ಲಿ ಹೆಣ್ಣುದೇವತೆಗಳ ಸಣ್ಣ ಸಣ್ಣ ಗುಡಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು. ಎರಡು ಲಕ್ಷ್ಮಿ ಗುಡಿಗಳು, ದುರ್ಗಮ್ಮ, ಮರಗೆಮ್ಮ, ಪೋಚಮ್ಮ, ಸೆಟಗೆವ್ವ ಇವರ ಗುಡಿಗಳಿವೆ. ಗಂಡುದೇವತೆಗಳಲ್ಲಿ ಮಹಾದೇವ, ಬಸವಣ್ಣ, ಹನುಮಂತ ಮಾತ್ರ ಇದ್ದಾರೆ.

ವಚನಗಳು : ೬

ವಚಾನಾಂಕಿತ : ಅಭಿನವ ಮಲ್ಲಿಕಾರ್ಜುನಾ

ಮಾಹಿತಿ : ಶ್ರೀ ರಾಜೇಂದ್ರ ಶೇರಿಕಾರ

ನೋಡಿ : ಕಕ್ಕೇರಿ, ತಾ. ಸುರಪುರ, ಜಿ. ಯಾದಗೀರ

***


ಬಸವಕಲ್ಯಾಣ ತಾಲೂಕು :

## ೮. ಗೋರ್ಟಾ :

## ಗೋರಕ್ಷನಾಥನ ಗುಡಿ

ಗೋರಕನಾಥನ ಗುಡಿಯ ಮ್ಯಾಲೆ ಬಂಗಾರ ಭಡಿಯೆ
ಯಾರ ಕಟುಸ್ಯಾರೆ ಇದೆ ಗುಡಿಯೆ । ಗೋರಟಿ
ನೀಲದುಂಗರದ ರೈತರೇ

ಅಲ್ಲಮನೊಂದಿಗೆ ವಾದಕ್ಕೆ ಇಳಿಯುವ ಗೋರಕ್ಷ ಶರಣನ ಸ್ಮಾರಕ ಪಟ್ಟದಕಲ್ಲು ಬಿಟ್ಟರೆ ಬಸವಕಲ್ಯಾಣ ತಾಲೂಕಿನ ಗೋರ್ಟಾ ಗ್ರಾಮದಲ್ಲಿ ಮಾತ್ರ ಉಳಿದಿದೆ. ಮೂಲದಲ್ಲಿ ಇದ್ದದ್ದು ಆ ಶರಣನ ಹೆಸರಿನ ಲಿಂಗ ಮಾತ್ರ. ಒಂದು ದೊಡ್ಡ




ಗೋರಕ್ಷನ ಗುಡಿ



ಗೋರಕ್ಷನ ಗುಡಿಯ ಗರ್ಭಗೃಹದ ಶಿವಲಿಂಗ

ಬೇವಿನ ಮರದ ಕೆಳಗೆ ಗೋರಕ್ಷನ ಹೆಸರಿನ ಲಿಂಗ ಇತ್ತಂತೆ. ಇತ್ತೀಚೆಗೆ ಆ ಊರಿನ ಭಕ್ತರೆಲ್ಲ ಕೂಡಿ ಗೋರಕ್ಷನ ಒಂದು ದೊಡ್ಡ ದೇವಾಲಯವನ್ನೇ ನಿರ್ಮಿಸಿದ್ದಾರೆ. ಗೋರಕ್ಷನು ಕೆಲದಿನ ಈ ಪ್ರದೇಶದಲ್ಲಿ ಬಂದು ತಪಸ್ಸು ಮಾಡಿದ್ದಾನೆಂದು ಹೇಳಲಾಗುತ್ತದೆ. ಹೀಗಾಗಿ ಅವನ ಸ್ಮಾರಕ ಇಲ್ಲಿ ಉಳಿದಿದೆ.

ಈಗ ಗೋರ್ಟಾ ಗ್ರಾಮಕ್ಕೆ ಗೋರಕ್ಷನೇ ಪ್ರಮುಖ ದೇವರಾಗಿದ್ದಾನೆ. ಊರವರೆಲ್ಲ ಅತ್ಯಂತ ಭಕ್ತಿಯಿಂದ ಗೋರಕ್ಷನಿಗೆ ನಡೆದುಕೊಳ್ಳುತ್ತಾರೆ. ತಮಗೆ ತೊಂದರೆಗಳು ಬಂದಾಗ, ಗೋರಕ್ಷನನ್ನು ಬೇಡಿಕೊಂಡರೆ ಅವೆಲ್ಲ ದೂರಾಗುತ್ತವೆ ಎಂಬ ಬಲವಾದ ನಂಬುಗೆ ಗೋರ್ಟಾದ ಜನರಲ್ಲಿ ಇದೆ. ಅವರೆಲ್ಲ ಹಾಗೆ ಹರಕೆ ಹೊರುತ್ತಾರೆ. ತಮ್ಮ ಬಯಕೆ ಈಡೇರಿದಾಗ ಅದನ್ನು ಗೋರಕ್ಷನಿಗೆ ಮುಟ್ಟಿಸುತ್ತಾರೆ. ಹಾಗೆಯೇ ಗೋರಕ್ಷನ ಹೆಸರು ಹೇಳಿ ತಪ್ಪು ಮಾಡಿದರೆ, ಅಪರಾಧ ಎಸಗಿದರೆ ಆ ತಪ್ಪಿತಸ್ತ ಅಪರಾಧಿಗೆ ಶಿಕ್ಷೆ ಆಗದೇ ತಮ್ಮ ಊರಿಗೆ ಹಾನಿಯಾಗುತ್ತದೆ, ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಾಗದೆಂಬುದು ಈ ಊರಿನವರ ನಂಬುಗೆಯಾಗಿದೆ.

ಈ ಊರಿನಲ್ಲಿರುವ ಇನ್ನೊಂದು ನಂಬುಗೆ ಎಂದರೆ, ೧೩ ದಿನಕ್ಕೆ ಅಮವಾಸ್ಯೆ ಅಥವಾ ಹುಣ್ಣಿಮೆ ಬಂದರೆ ಊರಿಗೆ ಒಳ್ಳೆಯದಾಗುವುದಿಲ್ಲ ಎಂಬುದು. ಮಾಘಶುದ್ಧ ಬಿದಿಗಿಯಂದು 'ದುರ್ಭಿನಾಥ ಬೀಜ' ಎಂಬ ಆಚರಣೆಯನ್ನು ಮಾಡುತ್ತಾರೆ. ಅಂದು ಊರವರೆಲ್ಲ ಹೋಳಿಗೆ ಮಾಡಿ ನೈವೇದ್ಯ ಮಾಡುತ್ತಾರೆ. ಕಾರ್ತಿಕ ಶುದ್ಧ ತ್ರಯೋದಶಿಯಂದು ಗೋರಕ್ಷನ ಜನ್ಮದಿನಾಚರಣೆ ಇರುತ್ತದೆ. ಎಲ್ಲರೂ ಸಂಭ್ರಮದಿಂದ ಆಚರಿಸುತ್ತಾರೆ.

ಗೋರ್ಟಾದಲ್ಲಿ ದೊಡ್ಡ ಮಹಾದೇವನ ಗುಡಿ ಇದೆ. ಈ ಗುಡಿಯ ಮುಂದೆ ದೊಡ್ಡದಾದ ಕಟ್ಟಿದ ಆವರಣ (ಒಂದರ್ಥದಲ್ಲಿ ಛತ್ತು ಹಾಕಿದ ಬಯಲು ಮಂದಿರ) ಇದೆ. ಆ ಸ್ಥಳದಲ್ಲಿ ಮೊದಲು ಗೋಸಾಯಿಗಳ ಮನೆಯಿತ್ತು ಎಂದು ಹೇಳಲಾಗುತ್ತದೆ. ಅದನ್ನು ಗೋಸಾಯಿ ಮಠ ಎಂದು ಕರೆಯುತ್ತಿದ್ದರಂತೆ. ಅಲ್ಲಿಯೆ ಒಂದು ದೊಡ್ಡದಾದ ಗೋಲ ಬಾವಿ ಇತ್ತು. ಈಗ ಅದನ್ನೂ ಮುಚ್ಚಿಹಾಕಲಾಗಿದೆ. ಆ ಸ್ಥಳದಲ್ಲಿ ಮೊದಲು ಮಠ ಇದ್ದದ್ದು ಈಗ ಶಾಲೆ ಆಯಿತು. ಶಾಲೆ ಹೋಗಿ ಈಗ ಮತ್ತೆ ಮಂದಿರ ಆಗಿದೆ ಎಂದು ಹೇಳುತ್ತಾರೆ.

ವಚನಗಳು : ೧೧

ವಚನಾಂಕಿತ : ಗೋರಕ್ಷಪಾಲಕ ಮಹಾಪ್ರಭುಸಿದ್ಧಸೋಮನಾಥಲಿಂಗ

ಮಾಹಿತಿ : ಶ್ರೀ ವಿರೂಪಾಕ್ಷಯ್ಯಸ್ವಾಮಿ, ವ. ೮೫.



ಗೋರಕ್ಷನ ಉತ್ಸವ ಮೂರ್ತಿ

***

## ದಯ ತೋರೋ ಮಹಾಮಹಿಮನೇ

### ದಯೆ ತೋರೊ ಶ್ರೀ ಗೋರಕ್ಷನೆ

ದಯೆ ತೋರೊ ಮಹಾಮಹಿಮನೆ
ದಯೆ ತೋರೊ ಮಹಾಮಹಿಮನೆ ಶ್ರೀ ಗೋರಕ್ಷನೆ॥ ಪ ॥

ಸದಾ ನಿಮ್ಮ ಧ್ಯಾನವ ಗೈಯುತಲಿರುವೆವು
ದಯ ತೋರೊ ಮಹಾಮಹಿಮನೇ
ದಯ ತೋರೊ ಮಹಾಮಹಿಮನೇ ಶ್ರೀ ಗೋರಕ್ಷನೆ ॥ ೧ ॥

ಗುರುವಿನ ತೃಪ್ತಿಗಾಗಿ ನೇತ್ರ ಕೊಟ್ಟವನೆ
ಗುರುಭಕ್ತಿ ಮಿಗಿಲಾಗಿ ಮಾಡಿದ ನಾಥನೆ
ದಯೆ ತೋರೊ ಮಹಾಮಹಿಮನೆ ಶ್ರೀ ಗೋರಕ್ಷನೆ॥ ೨ ॥

ಲೋಕದಿ ಸಾಬರಿ ಮಂತ್ರ ಪ್ರಕಟಿತನೇ
ಅನಂತ ಮಹಿಮೆಯ ತೋರಿದ ನಾಥನೆ
ದಯೆ ತೋರೋ ಮಹಾಮಹಿಮನೇ ಶ್ರೀ ಗೋರಕ್ಷನೆ ॥ ೩ ॥

ಬಂಗಾರ ಮಣ್ಣೆಂದು ಒಗೆದು ಬಿಟ್ಟವನೆ
ಗುರುವಿನ ಸಮಾಧಾನಕ್ಕಾಗಿ ಕನಕ ಗುಡ್ಡ ತೊರೆದವನೆ
ದಯೆ ತೋರೊ ಮಹಾಮಹಿಮನೆ ಶ್ರೀ ಗೋರಕ್ಷನೆ ॥ ೪ ॥

ಧರೆಯೊಳು ಗೋರಟಿಪುರ ಗೋರಕ್ಷನ ಜ್ಯೋತಿಯ ಪುರ
ಅವರದೇ ಆಧಾರ ವಿರೂಪಾಕ್ಷ ತಿಳಿಸ್ಯಾರ
ದಯೆ ತೋರೊ ಮಹಾಮಹಿಮನೆ ಶ್ರೀ ವಿರೂಪಾಕ್ಷನೆ ॥ ೫ ॥

–ಶ್ರೀ ಮಲ್ಲಿಕಾರ್ಜುನ ಹಡಪದ

***

## ೨. ದಸರಯ್ಯ-ಮೋಟಮಲ್ಲ :

ದಸರಯ್ಯ-ಮೋಟಮಲ್ಲ ಈ ಎರಡೂ ಹೆಸರುಗಳು ಜೊತೆಯಾಗಿಯೆ ಬರುತ್ತವೆ. ಇಬ್ಬರೂ ಶರಣರೆ. ದಸರಯ್ಯ ದಯಾಮಯನಾದ ಶರಣನಾಗಿದ್ದ ಎಂಬುದಕ್ಕೆ ಅವನ ವಚನಗಳು ಸಾಕ್ಷಿ ಆಗಿ ನಿಲ್ಲುತ್ತವೆ. ಡಾ. ಫ. ಗು. ಹಳಕಟ್ಟಿ ಅವರು ಹೇಳುವಂತೆ ದಸರಯ್ಯನ ಮೂಲ ಗ್ರಾಮ ರಾಮಗೊಡೆ. ಶಿವನ ಮೇಲೆ ನಿಷ್ಠೆಯುಳ್ಳ ಶರಣನೀತ. ಬಸವನ ಪ್ರಭಾವಕ್ಕೆ ಒಳಗಾದ ಈ ಶರಣ ಗೋರ್ಟಾ ಗ್ರಾಮದ ಪ್ರದೇಶಕ್ಕೆ ಬಂದು ನೆಲೆಸುತ್ತಾನೆ. ಈ ಊರಿನಲ್ಲಿಯೇ ಮೋಟಮಲ್ಲನೆಂಬ ವ್ಯಕ್ತಿ ಇರುತ್ತಾನೆ. ದಸರಯ್ಯ ದಯೆಯ, ಅಹಿಂಸಾ ವ್ರತದ ಸಾಕಾರವಾದರೆ, ಮೋಟಮಲ್ಲ ತದ್ವಿರುದ್ಧ ಸ್ವಭಾವವುಳ್ಳವನು; ಅವನೊಬ್ಬ ಕ್ರೂರಿ, ಕೊಲೆಗಡುಕ, ಹಿಂಸಾಪ್ರವೃತ್ತಿಗೆ ಹೆಸರಾದವನು.

ನಡೆ-ನುಡಿ ಒಂದಾಗಿ ಬದುಕಿನ ನೊಗ ಎಳೆಯುತ್ತಿರುವ ದಸರಯ್ಯ ವೀರಮ್ಮ ದಂಪತಿಗಳ ಬಗ್ಗೆ ಎಲ್ಲರಿಗೂ ಅಭಿಮಾನ. ಬಸವಣ್ಣನವರು ಹೇಳಿದಂತೆ 'ಸಕಲ ಜೀವಾತ್ಮರಿಗೆ ಲೇಸು ಬಯಸಿದವರು'. 'ದಯೆಯೆ ಧರ್ಮ' ಎಂದು ನಂಬಿ ಬದುಕಿದವರು ಈ ದಂಪತಿಗಳು. ಗಿಡದಲ್ಲಿ ಹೂ ಪತ್ರಿಗಳನ್ನು ಕೈಮುಟ್ಟಿ ಹರಿದುಕೊಂಡರೆ



ದಸರಯ್ಯ ತರುತ್ತಿದ್ದ ಪತ್ರಿಗಿಡ

ಆ ಸಸ್ಯಜೀವಕ್ಕೆ ನೋವಾಗುತ್ತದೆ ಎಂದು ನೊಂದುಕೊಳ್ಳುವ ಶರಣನೀತ. ಈ ಶರಣದಂಪತಿಗಳ ದಯೆಯ ಜೀವನದ ಬಗ್ಗೆ ಎಲ್ಲರೂ ಹೊಗಳುವವರೇ. ಎಲ್ಲರೂ ಹೀಗೆ ಇರಲು ಹೇಗೆ ಸಾಧ್ಯ?

ಈ ಶರಣದಂಪತಿಗಳ ಕುರಿತಾದ ಮೆಚ್ಚುಗೆ ಮಾತುಗಳನ್ನು ಸಹಿಸಿಕೊಳ್ಳಲಾಗದವರು ಅವನನ್ನು ಪರೀಕ್ಷೆಗೆ ಗುರಿಪಡಿಸಬೇಕೆಂದು ಯೋಚಿಸುತ್ತಾರೆ. ಅವನ ದಯಾಗುಣ ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ ನೋಡಿಯೇ ಬಿಡಬೇಕೆಂದು ದುಷ್ಟನೊಬ್ಬನನ್ನು ಜಂಗಮ ವೇಷ ತೊಡಿಸಿ ಅವನ ಮೇಲೆ ಬಿಡುತ್ತಾರೆ. ಅವನು ತಾನು ಮಾಡಿದ ಕಳ್ಳತನದ ಕೆಲಸಕ್ಕೆ ಕೈಯನ್ನು ಕಳೆದುಕೊಳ್ಳುವ ಶಿಕ್ಷೆಗೆ ಗುರಿಯಾಗಿದ್ದವನು. ಇವನೇ ಮೋಟಮಲ್ಲ. ಈ ಮೋಟನನ್ನು ದಸರಯ್ಯನ ವಿರುದ್ಧ ಎತ್ತಿಕಟ್ಟುತ್ತಾರೆ. ಅವನನ್ನು ನೋಯಿಸಲು ಕುಮ್ಮಕ್ಕು ಕೊಡುತ್ತಾರೆ. ಮೋಟನು ತನ್ನ ಮೋಟಗೈಯಿಂದ ದಸರಯ್ಯನಿಗೆ ತಿವಿತಿವಿದು ನೋಯಿಸುತ್ತಾನೆ. ದಸರಯ್ಯನ ಕರುಣೆ ಎಂತಹದ್ದೆಂದರೆ ಪ್ರತಿಕ್ರಿಯೆ ಇಲ್ಲದೆ ಇರುವುದು. ಇದನ್ನು ಅವನ ದೌರ್ಬಲ್ಯ ಎಂದುಕೊಂಡು ಮೋಟಮಲ್ಲ ಹಾಗೆ ನೋಯಿಸುತ್ತಲೇ ಹೋಗುತ್ತಾನೆ. ದಸರಯ್ಯನ ಮೈಯೆಲ್ಲ ಗಾಯವಾಗಿ ರಕ್ತ ಸೋರತೊಡಗುತ್ತದೆ. ಆದರೂ ಮೌನದಿಂದಲೇ ಇರುತ್ತಾನೆ.

ತನ್ನನ್ನು ನೋಯಿಸಿದವನ ಮೈ ಕೈಗಳನ್ನು ತಾನು ನೋಯುಸುತ್ತಿರಬೇಕೆಂದು ನೊಂದುಕೊಂಡ ದಸರಯ್ಯ ಅವನ ಮೈ ಕೈ ಒತ್ತಲು ಮುಂದಾಗುತ್ತಾನೆ. ಅಲ್ಲಿದ್ದವರಿಗೆಲ್ಲ ದಸರಯ್ಯನ ಗುಣ ನೋಡಿ ಆಶ್ಚರ್ಯ ಆಗುತ್ತದೆ. ದಸರಯ್ಯನ ಹಸ್ತ ಸ್ಪರ್ಶವಾಗಲೊಡನೆ ಮೋಟನು ಕಳೆದುಕೊಂಡ ಕೈಗಳು ಚಿಗಿತು ನಿಲ್ಲುತ್ತವೆ. ಆಗ ಮೋಟನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಪೀಡಕರು ತಮ್ಮ ತಪ್ಪನ್ನು ಕ್ಷಮಿಸಲು ಕೋರುತ್ತಾರೆ. ಈ ಘಟನೆಯಿಂದಾಗಿ ದಸರಯ್ಯನ ಕೀರ್ತಿ ಎಲ್ಲೆಡೆ ಹಬ್ಬುತ್ತದೆ. ಮೋಟಮಲ್ಲನೂ ಶರಣನಾಗಿ ಪರಿವರ್ತನೆ ಹೊಂದುತ್ತಾನೆ.

ಮೋಟಮಲ್ಲನು ದಸರಯ್ಯನ ಪ್ರಭಾವಕ್ಕೆ ಒಳಗಾಗಿ ಶರಣನಾದ ನಂತರ ಅವನೊಂದಿಗೆ ಲಿಂಗಪೂಜಾನಿಷ್ಠನಾಗುತ್ತಾನೆ. ಗೋರ್ಟಾದ ಹತ್ತಿರ ನಗರೇಶ್ವರ ದೇವಸ್ಥಾನದಿಂದ ಉತ್ತರಕ್ಕಿರುವ ಅಕ್ಕಣ್ಣನವರ ಹೊಲದಲ್ಲಿ ಒಂದು ಕಟ್ಟೆ ಇದೆ. ಈ ಹೊಲದಲ್ಲಿ ದೊಡ್ಡ ಬಿಲ್ವ ಪತ್ರಿಯ ವನವೆ ಇತ್ತಂತೆ. ಈಗಲೂ ಪತ್ರಿ ಗಿಡಗಳಿವೆ. ಈ ಹೊಲದ ಪತ್ರಿಯನ್ನು ತಂದು ದಸರಯ್ಯ-ಮೋಟಮಲ್ಲ ಪೂಜಿಸುತ್ತಿದ್ದರೆಂದು ಜನ ಹೇಳುತ್ತಾರೆ. ಪತ್ರಿವನದ ಈಶಾನ್ಯ ದಿಕ್ಕಿಗೆ ವಿಶ್ರಾಂತಿ ತಗೆದುಕೊಳ್ಳುತ್ತಿದ್ದರೆಂದು, ಅಕ್ಕಣ್ಣನವರ ಹೊಲದ ಬಿಲ್ವಪತ್ರಿಗಿಡದ ಕೆಳಗಿನ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಿದ್ದರೆಂದು ಜನ ಆ ಸ್ಥಳಗಳನ್ನೂ ಇವತ್ತಿಗೂ ತೋರಿಸುತ್ತಾರೆ.

ದಸರಯ್ಯ- ವಚನಗಳು : ೧೦, ವಚನಾಂಕಿತ : ದಸರೇಶ್ವರಲಿಂಗ
ವೀರಮ್ಮ- ವಚನಗಳು : ೫, ವಚನಾಂಕಿತ : ಗುರುಶಾಂತೇಶ್ವರಾ.
ಮಾಹಿತಿ : ವಿರೂಪಾಕ್ಷಯ್ಯ ಸ್ವಾಮಿ

***

ಬಸವಕಲ್ಯಾಣ ತಾಲೂಕು :

## ೯. ಬೇಲೂರು

## ಉರಿಲಿಂಗಪೆದ್ದಿ ಮಠ

ಬಸವಕಲ್ಯಾಣ ತಾಲೂಕಿಗೆ ಸೇರಿದ ಒಂದು ಹಳ್ಳಿ ಬೇಲೂರು. ಇಲ್ಲಿ ಶಿವಯೋಗಿ ಸ್ವಾಮಿ ಅವರು ಸ್ಥಾಪಿಸಿದ ಉರಿಲಿಂಗಪೆದ್ದಿ ಮಠ ಇದೆ. ಒಂದು ದೊಡ್ಡ ಕಟ್ಟೆಯ ಮೇಲೆ ಗದ್ದಿಗೆ ಇದೆ. ಅದರ ಮೇಲೆ ಲಿಂಗ ಇದೆ. ಅದನ್ನು ಉರಿಲಿಂಗಪೆದ್ದಿಗಳ ಹೆಸರಿರುವ ಲಿಂಗವೆಂದು ಹೇಳುತ್ತಾರೆ. ಗುಡಿಯ ಎದುರು ಒಂದು ಪ್ರಾಚೀನ ಬಾವಿ ಇದೆ. ಅದರೊಳಗೆ ನೀರಿಲ್ಲ. ಇದು ಊರು ಬಿಟ್ಟು ಸಾಕಷ್ಟು ದೂರ ಇದೆ.



ಉರಿಲಿಂಗಪೆದ್ದಿ ಮಠ



ಉರಿಲಿಂಗಪೆದ್ದಿ ಮಠದಲ್ಲಿರುವ ಗದ್ದಿಗೆ

ಸುತ್ತಲೂ ಹರಿಜನ ಸಮಾಜಕ್ಕೆ ಸೇರಿದ ಜನಗಳ ಮನೆಗಳಿವೆ. ಈ ಊರಿನಲ್ಲಿ ಜೋಗುಳಮಠ, ತೆಳಗಿನ ಮಠ, ವಿರಕ್ತಮಠಗಳೂ ಇವೆ.

ಮಾಹಿತಿ : ಶರಣ ವ್ಹಿ. ಸಿದ್ಧರಾಮಣ್ಣ

***

## ಬಸವಕಲ್ಯಾಣ ತಾಲೂಕು :

### ೧೦. ಹುಲಸೂರು :

### ಲದ್ದೆ ಸೋಮಣ್ಣನ ಸಮಾಧಿ ಗುಡಿ

ಲದ್ದಿದಾವ ಲದ್ದಿ ಸೋಮ । ಹುಲಸೂರಿನಲಿ ನಿತ್ತೆ ನೇಮ ।
ಹುಲ್ಲ ಮಾರಿ ಹೆಸರ ಪಡೆದಯ್ಯ । ಲದ್ದಿಯ ಸೊಮಣ್ಣ ।
ಹುಲ್ಲ ಮಾರಿ ಹೆಸರ ಪಡೆದಯ್ಯ ॥

ಬಸವ ಕಲ್ಯಾಣ ತಾಲೂಕಿಗೆ ಸೇರಿದ ಇನ್ನೊಂದು ಹಳೆಯ ಊರು ಈ ಹುಲುಸೂರು. ವಾರಕ್ಕೊಮ್ಮೆ ಹುಲಸೂರಿನಲ್ಲಿ ದನಗಳ ಜಾತ್ರೆ ನಡೆಯುತ್ತಿತ್ತು. ಲದ್ದಿಯ



ಲದ್ದೆ ಸೋಮಣ್ಣನ ಸಮಾಧಿ ಗುಡಿ



ಲದ್ದೆ ಸೋಮಣ್ಣನ ಸಮಾದಿ, ಗುಡಿಯ ಗರ್ಭಗೃಹದ ಶಿವಲಿಂಗ

ಸೋಮಣ್ಣ ಎಂಬ ಶರಣ ಲಾದಾ ಎಂಬ ಗ್ರಾಮದಿಂದ, ಮತ್ತು ಹುಲಸೂರಿನಿಂದ ಸುಮಾರು ಮೂರ್ನಾಲ್ಕು ಕಿ.ಮೀ.ದೂರದಲ್ಲಿರುವ ತೊರೆಯ ದಡದಿಂದ ಹುಲ್ಲನ್ನು ಹೊತ್ತು ತಂದು ಹುಲಸೂರಿನ ಸಂತೆಯಲ್ಲಿ ಮಾರುತ್ತಿದ್ದನಂತೆ. ಈ ಕಾರಣದಿಂದ ಮತ್ತು ಹುಲಸೂರಿನ ಅಡವಿಯಲ್ಲಿ ಹುಲ್ಲು ಸಾಕಷ್ಟು ಹುಲುಸಾಗಿ ಬೆಳೆಯುತ್ತಿದ್ದುದರಿಂದ ಈ ಊರಿಗೆ 'ಹುಲಸೂರು' ಎಂಬ ಹೆಸರು ಬಂದಿದೆ ಎಂಬುದು ಜನಜನಿತ ಸಂಗತಿ. ಸಮೃದ್ಧವಾಗಿ ಹುಲ್ಲು ಬೆಳೆಯುವ ಸ್ಥಳವನ್ನು 'ಹಡೋಳಿ' ಎಂದು ಕೂಡ ಕರೆಯುತ್ತಾರೆ. ಈ ಪ್ರದೇಶ ಹುಲಸೂರಿನ ಈಶಾನ್ಯಕ್ಕೆ ಇದೆ. ಸೋಮಣ್ಣ ಇಲ್ಲಿಂದಲೂ ಹುಲ್ಲು ತರುತ್ತಿದ್ದನಂತೆ. ಆದರೆ ಈಗ ಅಲ್ಲಿ ಹೊಲಗಳನ್ನು ಮಾಡಿಕೊಂಡು ಬೆಳೆಗಳನ್ನು ಬೆಳೆಯುತ್ತಿದ್ದಾರೆ.

ಊರಿಂದ ಮೂರ್ನಾಲ್ಕು ಕೀ.ಮೀ. ಅಂತರದ ತೊರಿದಂಡೆಯಿಂದ ಸೋಮಣ್ಣ ಹುಲ್ಲು ತರುವ ಸ್ಥಳದಲ್ಲಿ ತೊರಿಬಸವಣ್ಣ ಎಂದು ಹೇಳುವ ಒಂದು ವಿಶೇಷ ಸ್ಥಳವಿದೆ. ಅಲ್ಲೆಲ್ಲ ಕಟ್ಟಿಗೆಯ ಗೊಂಬೆಗಳು ತುಂಬಿಹೋಗಿವೆ. ಭಕ್ತರು ಹರಕೆ ಹೊತ್ತು, ಅವು ಫಲಿಸಲು ಹೀಗೆ ಗೊಂಬೆಗಳನ್ನು ಏರಿಸುವ ಪದ್ಧತಿ ಇಲ್ಲಿದೆ ಎಂದು ಹೇಳಲಾಗುತ್ತದೆ.

ಹುಲಸೂರಿನಲ್ಲಿ ಶರಣ ಸೋಮಣ್ಣನ ಸಮಾಧಿ ಎಂದು ಹೇಳುವ ಒಂದು ಗುಡಿ ಇದೆ. ಆದರೆ ಲದ್ದಿ ಗ್ರಾಮದ ಸೋಮೇಶ್ವರ ಗುಡಿಯಲ್ಲಿಯೂ ಸೋಮಣ್ಣನ



ಲದ್ದೆ ಸೋಮಣ್ಣ ಹುಲ್ಲು ಕೊಯ್ದು ತರುವ ಸ್ಥಳ, ತೊರಿಬಸವಣ್ಣ

ಸಮಾಧಿ ಇದೆ ಎಂದು ತೋರಿಸುತ್ತಾರೆ. ಹೀಗಾಗಿ ಹುಲ್ಲೂರಿನಲ್ಲಿರುವ ಈ ಗುಡಿ ಸೋಮಣ್ಣನ ಹೆಸರಿನಲ್ಲಿರುವುದು ಗಮನಾರ್ಹ ಸಂಗತಿಯಾಗಿದೆ. ಈ ಬಗೆಗೆ ಹೆಚ್ಚಿನ ಶೋಧ ನಡೆಯುವ ಅವಶ್ಯಕತೆ ಇದೆ. ಹಾಗೊಂದು ವೇಳೆ ಲದ್ದೆಯಲ್ಲಿದ್ದುದೇ ಸೋಮಣ್ಣನ ಸಮಾಧಿ ಎಂದಾದರೆ ಹಲ್ಲೂರಿನಲ್ಲಿರುವುದು ಸೋಮಣ್ಣನ ತೋರುಗದ್ದುಗೆ ಆಗುತ್ತದೆ. ಜನಪದ ಹಾಡಿನಲ್ಲಿ ಬರುವಂತೆ ಸೋಮೇಶ್ವರನು ಸೋಮಣ್ಣನ ಎದುರಿಗೆ ನೆನೆದನೆಂಬುದು ನಿಜವಾಗಿದ್ದರೆ, ಅದು ಲದ್ದೆಯಲ್ಲಿ ಸೋಮೇಶ್ವರನ ಗುಡಿಯಲ್ಲಿಯೇ ತೋರಿಸುವ ಸೋಮಣ್ಣನ ಸಮಾಧಿ ನಿಜವಿರಬಹುದು.

ಗುಡಿಯ ಗರ್ಭಗೃಹದಲ್ಲಿ ಎಲ್ಲಾಕಡೆಯಂತೆ ಲಿಂಗವಿದೆ, ಮುಂದೆ ನಂದಿ ಇದೆ. ಲಿಂಗದ ಹಿಂಭಾಗದಲ್ಲಿ ಶಿಲೆಯ ಮೇಲೆ ಕೆತ್ತಿದ ಒಂದು ಉಬ್ಬು ಚಿತ್ರವಿದೆ. ಇದನ್ನು ಶರಣ ಸೋಮಣ್ಣನ ಶಿಲ್ಪವೆಂದು ಹೇಳುತ್ತಾರೆ. ಆದರೆ ಇದು ವಿಷ್ಣುವಿನ ಶಿಲ್ಪವಾಗಿದೆ ಎಂದೂ, ಲದ್ದೆಯ ಸೋಮಣ್ಣನದೆಂದು ಹೇಳುವ ಶಿಲ್ಪವೊಂದು ಬನವಾಸಿಯ ಮದುಕೇಶ್ವರ ದೇವಾಲಯದಲ್ಲಿ ಇದೆ ಎಂದೂ ಎಚ್. ಚಂದ್ರಶೇಖರ ಅವರು ಗುರುತಿಸಿದ್ದಾರೆ (ಲದ್ದೆಯ ಸೋಮಣ್ಣ). ಗುಡಿಯ ಮುಂದೆ ಹಳೆಯ ಬಾವಿಯೊಂದಿದೆ. ಗುಡಿಯ ಹಿಂದೆ ಒಂದು ಮೂಲೆಯಲ್ಲಿ ದೀಪಸ್ಥಂಭವಿದೆ. ಇದನ್ನು ಮಾಲಗಂಬ ಎಂದೂ ಕರೆಯುತ್ತಾರೆ. ಇಲ್ಲಿ ಉಮಾಮಹೇಶ್ವರ ಶಿಲ್ಪ ಮೂರ್ತಿ ಇದ್ದು, ರಜಾಕಾರ ಹಾವಳಿಯಲ್ಲಿ ಬಿನ್ನವಾಗಿದೆ ಎನ್ನುತ್ತಾರೆ.

ವಚನ : ಒಂದು
ವಚನಾಂಕಿತ : ಭಾಪು ಲದ್ದೆಯ ಸೋಮ
ಮಾಹಿತಿ : ಮಲ್ಲಿಕಾರ್ಜುನ ಸ್ವಾಮಿ, ಮುಚಳಂಬಿ.
ನೋಡಿ : ಲದ್ದಿ, ತಾ. ಭಾಲ್ಕಿ, ಜಿ. ಬೀದರ

*



**ಲದ್ದೆ ಸೋಮಣ್ಣನ ಗುಡಿಯ ಹೊರಗೆ**
**ದೀಪಸ್ಥಂಭದ ಮುಂದೆ ಇರುವ ಉಮಾಮಹೇಶ್ವರ ಶಿಲ್ಪ**

## ಹುಮ್ನಾಬಾದ ತಾಲೂಕು

# ೧. ಹಳ್ಳಿಖೇಡ (ಕೆ) :
# ಕಿನ್ನರಿ ಬೊಮ್ಮಯ್ಯನ ಗುಡಿ

ಕಿನ್ನರಿ ಬೊಮ್ಮಯ್ಯ ಸನ್ನುತದ ತಂದ್ಯಾದ
ಚೆನ್ನಬಸವಾದಿ ಗಣಗಳಿಗೆ । ಕಲ್ಯಾಣ
ಹೊನ್ನಗಳಸಾದ ಶಿವಗುಡಿಗೆ

ಹಳ್ಳಿಖೇಡ (ಕೆ) ಎಂಬುದು ಬೀದರ ಜಿಲ್ಲೆಯ ಹುಮ್ನಾಬಾದ ತಾಲೂಕಿಗೆ ಸೇರಿದ ಒಂದು ಸಣ್ಣ ಹಳ್ಳಿ. ಈ ಊರಿನ ಗುಡ್ಡದ ಮೇಲೆ **ಕಿನ್ನರಿ ಬ್ರಹ್ಮಯ್ಯ** ಎಂಬ ಶರಣನ ಗುಡಿ ಇದೆ. ಇಲ್ಲಿ ಮೊದಲಿಗೆ ಇದ್ದದ್ದು ಒಂದು ಸಣ್ಣ ಗುಡಿ. ಏರಿ ಹೋಗಲು ೪೫ ಮೆಟ್ಟಲುಗಳಿದ್ದವು. ಈಗ ಬಹುದೊಡ್ಡ ಪ್ರಮಾಣದಲ್ಲಿ ಊರವರೆಲ್ಲ ಕೂಡಿ ೧೦ ಲಕ್ಷ ರೂ.ಗಳನ್ನು ಖರ್ಚು ಮಾಡಿ ಗುಡಿಯನ್ನು ವಿಸ್ತರಿಸಿದ್ದಾರೆ. ಈಗ ೫೫ ಮೆಟ್ಟಲುಗಳನ್ನು ಏರಿ ಗುಡಿಗೆ ಹೋಗಬೇಕು. ಆದರೆ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರವು ಮುಂದಿನ ಕೆಲಸ ಎತ್ತಿಕೊಳ್ಳಲಿದೆ ಎಂಬ ಭರವಸೆಯಿಂದ ಊರವರು ಗುಡಿಯ ಅಭಿವೃದ್ಧಿಯ ಕೆಲಸವನ್ನು ಅರ್ಧಕ್ಕೆ ಸ್ಥಗಿತಗೊಳಿಸಿದ್ದಾರೆ.

ಗರ್ಭಗುಡಿಯಲ್ಲಿ ಹಳೆಯವಾದ ಮೂರು ಮೂರ್ತಿಗಳಿವೆ. ಅವುಗಳ ಮೇಲೆ ಎಣ್ಣೆ ಸುರಿಯುತ್ತ ಬಂದುದರಿಂದ ಸ್ಪಷ್ಟವಾಗಿ ಅವೇನಿವೆಯೆಂದು ತಿಳಿಯುವುದಿಲ್ಲ. ಆದರೆ ಇವನ್ನು ಈಗ ಹಿಂಬದಿ ಗೋಡೆಗೆ ಆನಿಸಿಟ್ಟಿದ್ದು, ಹಿತ್ತಾಳಿ ಮೂರ್ತಿಯೊಂದನ್ನು ಮುಂದುಗಡೆ ಪ್ರತಿಷ್ಠಾಪಿಸಲಾಗಿದೆ. ಈಗ ವಿಶೇಷವಾಗಿ ಈ ಮೂರ್ತಿಯ ಪೂಜೆಯೇ ನಡೆಯುತ್ತದೆ.

ಈ ಗುಡಿಯ ಮೂಲ ಕಟ್ಟಡಕ್ಕೆ ಕಳಸ ಇರಲಿಲ್ಲ. ಆದರೆ ಊರವರು ಹೊಸದಾಗಿ ಅಭಿವೃದ್ಧಿಗೊಳಿಸುತ್ತಲಿರುವ ಗುಡಿಗೆ ಕಳಸ ಇಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಶರಣರು ಗುಡಿಯ ಸಂಸ್ಕೃತಿಯವರಲ್ಲ. ಅವರು ವಾಸಿಸಿರುವುದು ಹೆಚ್ಚಾಗಿ ಗವಿಗಳಲ್ಲಿ. ಬಹುಶಃ ಧ್ಯಾನಕ್ಕಾಗಿ, ಪೂಜೆಗಾಗಿ ಮತ್ತು ವಾಸಕ್ಕಾಗಿ ಈ ಗವಿಗಳು ಪೂರಕವಾಗಿವೆ ಎನಿಸುತ್ತದೆ. ಹೀಗಾಗಿ ಕಿನ್ನರಿಬೊಮ್ಮಯ್ಯ ಅವರದು ಕೂಡ ಗವಿಯೇ ಇರಬೇಕೆನಿಸುತ್ತದೆ. ಬಹುಶಃ ಈ ಗವಿಯನ್ನು ನಂತರ ಗುಡಿಯಾಗಿ ಪರಿವರ್ತನೆ ಮಾಡಿರಬೇಕು.




ಬೆಟ್ಟದ ಮೇಲಿರುವ ಕಿನ್ನರಿ ಬೊಮ್ಮಯ್ಯನ ಜಾತ್ರೆ-ರಥೋತ್ಸವ

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿ ಇದೆ. ಗುಡಿಯಿಂದ ಸುಮಾರು ೧೫೦ ಮೀಟರ್ ಅಂತರದಲ್ಲಿ ಕಿನ್ನರಿ ಬ್ರಹ್ಮಯ್ಯನ ಗವಿಯೊಂದು ಇದೆ ಎಂದು, ಈಗ ಅದರ ಬಾಗಿಲು ಮುಚ್ಚಿದೆ ಎಂದು ಸ್ಥಳೀಯರು ಹೇಳುತ್ತಾರೆ. ಆ ಗವಿಯಿರುವ ಸ್ಥಳವನ್ನು ಖುದ್ದಾಗಿ ಪರಿಶೀಲಿಸಿದಾಗ, ಬಹುಕಾಲದಿಂದಲೂ ಆ ಗವಿಯ ಬಾಗಿಲು ಮುಚ್ಚಿದಂತೆ ತೋರುವ ಒಂದು ಬಂಡೆಗಲ್ಲು ಬಾಗಿಲಿಗೆ ಇದೆ ಎಂದು ತೋರಿಸಿದರು. ಜನ ಈಗಲೂ ಆ ಗವಿಯ ಸ್ಥಳದ ಮುಂದೆ ದೀಪ ಹಚ್ಚುತ್ತಾರೆ. ಅಲ್ಲಿ ಹಣತೆಗಳೆಲ್ಲ ಇದ್ದವು. ತೆಂಗು ಒಡೆಯುವ ಗುರುತುಗಳಿದ್ದವು. ಅಲ್ಲಿಯ ಬಂಡೆಗಳಿಗೆ ಜಾತ್ರೆಯ ಸಂದರ್ಭದಲ್ಲಿ ಸುಣ್ಣದ ಪಟ್ಟಿಗಳನ್ನು ಬಳಿಯುವ ಸಂಪ್ರದಾಯವಿದೆ. ಹೀಗೆ ಒಂದು ಸಂದರ್ಭದಲ್ಲಿ ಕಿನ್ನರಯ್ಯ ಅಲ್ಲಿಯ ಗುಡ್ಡದ ಬಂಡೆಗಳಿಗೆ ಸುಣ್ಣದ ಪಟ್ಟಿಗಳನ್ನು ಬಳೆದ ಒಂದು ಘಟನೆಯನ್ನು ಊರವರು ಹೇಳುತ್ತಾರೆ. ಒಂದು ಸಲ ಬೊಮ್ಮಯ್ಯನನ್ನು ಸೋಲಿಸಲು ವೈರಿಯ ದಂಡು ಬಂದಿತಂತೆ. ಆಗ ಬೊಮ್ಮಯ್ಯನು ತಾನಿರುವ ಗುಡ್ಡದ ಬಂಡೆಗಲ್ಲುಗಳಿಗೆಲ್ಲ ಸುಣ್ಣದ ಪಟ್ಟಿಗಳನ್ನು ಹಾಕಿದನಂತೆ. ಆಗ ರಾತ್ರಿ ಬೆಳದಿಂಗಳಲ್ಲಿ ವೈರಿಗಳು ಸುಣ್ಣದ ಪಟ್ಟಿಗಳನ್ನು ಬೊಮ್ಮಯ್ಯನ ಸಂಗಡ ಇದ್ದ ಜನರೆಂದು ತಿಳಿದು ಹಿಂತಿರುಗಿ ಹೋದರಂತೆ. ಬೊಮ್ಮಯ್ಯನ ಜಾತ್ರೆಯ ಸಮಯದಲ್ಲಿ ಅವನ ಗವಿ ಇರುವುದೆಂದು ಹೇಳುವ ಗುಡ್ಡದ ಭಾಗದಲ್ಲಿ ಬಂಡೆಗಳಿಗೆ ಸುಣ್ಣದ ಪಟ್ಟಿಗಳನ್ನು ಬಳಿಯುವ ರೂಢಿ ಈಗಲೂ ಇದೆ. ಬಹುಶಃ ಕಿನ್ನರಯ್ಯ ಆಗ ವೈರಿಗಳನ್ನು ಎದುರಿಸಲು ಬಳಿದ ಸುಣ್ಣದ ಪಟ್ಟಿಯ ದ್ಯೋತಕವಾಗಿಯೇ ಈಗಲೂ ಸುಣ್ಣದ ಪಟ್ಟಿಗಳನ್ನು ಬಳಿಯುವ ರೂಢಿ ಇರಬೇಕೆನಿಸುತ್ತದೆ.

ಜಾತ್ರೆಯ ಸಂದರ್ಭದಲ್ಲಿ ಗುಡಿಯಿಂದ ಗವಿಯವರೆಗೆ ತೇರನ್ನು ಎಳೆಯುತ್ತಾರೆ. ಗವಿಯ ಸಮೀಪದವರೆಗೆ ಥೇರು ಎಳೆಯಲು ಅನುಕೂಲವಾಗುವಂತೆ ಸಿಮೆಂಟ್ ರಸ್ತೆಯನ್ನು ನಿರ್ಮಿಸಿದ್ದಾರೆ. ಆದರೆ ಗವಿ ಇನ್ನೂ ಸ್ವಲ್ಪ ಮುಂದಿರುವಂತೆ ಗುಡ್ಡದ ಸ್ಥಳ ಸ್ವಲ್ಪ ಕಡಿದಾಗಿರುವುದರಿಂದ ಎಂಟ್ಹತ್ತು ಮೀಟರ ಅಂತರದಲ್ಲಿ ಸಿಮೆಂಟ ರಸ್ತೆ ನಿಂತಿದೆ. ಅಂದರೆ ಥೇರಿನ ಪಾದಗಟ್ಟೆ ಗವಿಯೇ ಆಗಿದೆ. ಆ ಸ್ಥಳವನ್ನು ಅಗೆದು ನೋಡಿದರೆ ಅಲ್ಲಿ ಗವಿ ದೊರೆಯಬಹುದಾಗಿದೆ. ನಿಜವಾಗಿ ಕಿನ್ನರಿ ಬ್ರಹ್ಮಯ್ಯನು ವಾಸವಾಗಿದ್ದ ಗವಿ ಈಗ ಮುಚ್ಚಿಹೋಗಿರುವ ಗವಿಯೇ ಆಗಿದ್ದಿತೆಂದೂ, ಈಗ ಗುಡಿ ಇರುವ ಸ್ಥಳ, ಕಿನ್ನರಯ್ಯ ತಿರುಗಾಡುತ್ತ ಬಂದು ಕುಳಿತುಕೊಳ್ಳುತ್ತಿದ್ದ ಸ್ಥಳವೆಂದೂ ಕೆಲವರು ಹೇಳುತ್ತಾರೆ.

ಗವಿ ಇರುವ ಸ್ಥಳದಿಂದ ಪೂರ್ವಕ್ಕಿರುವ ಎದುರಿನ ಗುಡ್ಡ ತೋರಿಸಿ ಅದು **'ತಂಗಿಯ ಗುಡ್ಡ'** ಎಂದು ಹೇಳುತ್ತಾರೆ. ಅಲ್ಲಿ ತಂಗಿಯ ಪಾದಗಳನ್ನು ಇಟ್ಟಿದ್ದು, ಜನ ಪೂಜೆ ಮಾಡುತ್ತಾರಂತೆ. ಆಕೆ ಬ್ರಹ್ಮಯ್ಯನ ತಂಗಿಯೇ ಆಗಿರಬೇಕೆಂದು ತೋರುತ್ತದೆ ಎನ್ನುತ್ತಾರೆ ಊರವರು. ಆದರೆ ಬ್ರಹ್ಮಯ್ಯನು ಅಕ್ಕಮಹಾದೇವಿಯನ್ನು ಪರೀಕ್ಷಿಸಿದನೆಂದು ಒಂದು ಕಥೆ ಮೊದಲಿನಿಂದಲೂ ಉಳಿದುಕೊಂಡು ಬಂದಿದೆ. **'ಕಿನ್ನರನಂತಪ್ಪ ಸೋದರನೆನಗೆ'** ಎನ್ನುವ ಮಹಾದೇವಿಯಕ್ಕನ ಮಾತನ್ನು ಗಮನಿಸಿದರೆ, ಬಹುಶಃ ಆ ಗುಡ್ಡದಲ್ಲಿ ಅಕ್ಕಮಹಾದೇವಿ ಏನಾದರೂ ಕೆಲದಿನ ತಂಗಿಹೋದ ಸಾಧ್ಯತೆ ಇರಬಹುದು. ಅದಕ್ಕಾಗಿಯೇ ಅದನ್ನು **'ತಂಗಿಯ ಗುಡ್ಡ'** ಎಂದಿರಬೇಕೆನಿಸುತ್ತದೆ.

ಅಕ್ಕಮಹಾದೇವಿ ಬಂದದ್ದು ಮಹಾಗಾಂವ ಮಾರ್ಗವಾಗಿ. ಕಲಬುರ್ಗಿ ಜಿಲ್ಲೆಗೆ ಸೇರಿದ ಮಹಾಗಾಂವದಿಂದ ಬೀದರಿನ ದಾರಿಯಲ್ಲಿ ಹಳ್ಳಿಖೇಡ ಇಪ್ಪತ್ತೈದು ಕಿ.ಮೀ. ಅಂತರದಲ್ಲಿದೆ. ಮಹಾಗಾಂವದಲ್ಲಿ ಅಕ್ಕಮಹಾದೇವಿಗೆ ಸಂಬಂಧಿಸಿದ ಒಂದು ಗುಡಿ ಇದ್ದು, ಅಕ್ಕಮಹಾದೇವಿ ಇದೇ ಊರಿನವಳು ಎಂದು ಆ ಊರಿನ ಜನ ಹೇಳುತ್ತಾರೆ. ಈಗ ಆ ಗುಡಿಯನ್ನು ಬಹುದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ್ದಾರೆ. ಹೀಗಾಗಿ ನಮಗೆ ಕಲಬುರ್ಗಿಯಿಂದ ಬಸವಕಲ್ಯಾಣ ಕಡೆ ಹೊರಟರೆ ಮೊದಲು ಶರಣರ ಸ್ಥಳ-ಸ್ಮಾರಕ ಇರುವ ಊರು ದೊರೆಯುವುದು ಮಹಾಗಾಂವ. ಎರಡನೇ ಊರು ಹಳ್ಳಿಖೇಡ.

ಕಿನ್ನರಿ ಬೊಮ್ಮಯ್ಯ ನೆಲಿಸಿದ ಹಳ್ಳಿಖೇಡ ಗ್ರಾಮದ ಭೂಮಿಯಲ್ಲಿ ನೀರಿನ ಅನುಕೂಲ ಬಹುವಾಗಿ ಇದೆ. ಗುಡಿಯ ಗುಡ್ಡದ ಎದುರಿಗೆ, ಗುಡ್ಡಕ್ಕೆ ಹತ್ತಿಕೊಂಡು ಊರು ಬೆಳೆದಿದೆ. ಊರಿನ ಎದುರಿಗೆ ಫಲವತ್ತಾದ ಹೊಲಗಳಿವೆ. ಹಳ್ಳಿಖೇಡದಿಂದ ಹುಮ್ನಾಬಾದ ರಸ್ತೆಯಲ್ಲಿ ಸ್ವಲ್ಪ ಮೇಲಕ್ಕೆ ಏರುತ್ತಲೇ ಒಂದು ದೊಡ್ಡ ಕೆರೆ ಇದೆ. ಈಗ ಅದನ್ನು ಬ್ರಹ್ಮಯ್ಯನ ಕೆರೆ ಎನ್ನುತ್ತಾರೆ. ಆದರೆ ಈ ಕೆರೆ ಇತ್ತೀಚೆಗೆ ನಿರ್ಮಾಣಮಾಡಿದ್ದು ಎಂದು ತಿಳಿದುಬರುತ್ತದೆ. ೧೯೭೭ ರಲ್ಲಿ ಊರಿನ ಮುಂದೆ



ಬೊಮ್ಮಯ್ಯನ ಗರ್ಭಗುಡಿಯ ಮೂರ್ತಿ

ಒಂದು ಕೊಳವೆಬಾವಿ ಹಾಕಿದಾಗ ನೀರು ಅದರಿಂದ ತಾನಾಗಿಯೇ ಪುಟಿಯುತ್ತಿತ್ತು. ಹತ್ತೆಂಟು ವರ್ಷಗಳವರೆಗೆ ಈ ಕೊಳವೆಬಾವಿ ನೀರನ್ನು ಕೆಳಗಿನ ಹೊಲದವರು ತಮ್ಮ ಬೆಳೆಗಳಿಗೆ ಉಪಯೋಗಿಸಿಕೊಂಡದ್ದುಂಟು. ಬೊಮ್ಮಯ್ಯನ ಗುಡಿಯ ಹಿಂದೆ, ಗುಡ್ಡದ ಮೇಲೆ ಒಂದು ಕೊಳವೆಬಾವಿ ಹಾಕಿದ್ದು, ಅಷ್ಟು ಎತ್ತರದ ಮೇಲೆ ೪ ಇಂಚಿನಷ್ಟು ನೀರು ಹತ್ತಿದೆ. ಇದಕ್ಕಿಂತಲೂ ಎತ್ತರದಲ್ಲಿ, ಗುಡ್ಡದ ಮೇಲೆ ಕೊಳವೆಬಾವಿ ಹಾಕಿದ್ದು, ಅಲ್ಲೂ ಸಾಕಷ್ಟು ನೀರು ಬಿದ್ದಿದೆಯಂತೆ.

ಕಿನ್ನರಿ ಬೊಮ್ಮಯ್ಯನ ಸ್ಮಾರಕ ಹುಟ್ಟಿಕೊಂಡ ನಂತರ ಈ ಊರು ಬೆಳೆದಿರಬೇಕೆನಿಸುತ್ತದೆ. ಈಗಿರುವ ಗುಡಿಯ ಬಲಗಡೆ ಹಳೆಯದಾದ ಒಂದು ಗೋಸಾಯಿ ಮಠವಿದೆ. ಗೋವುಗಳನ್ನು ಸಾಕಿಕೊಂಡಿದ್ದ ಗೋಸಾಯಿ ಸನ್ಯಾಸಿಗಳ ವೃತ್ತಾಂತಗಳನ್ನು ಊರವರು ಹೇಳುತ್ತಾರೆ. ಹಳ್ಳಿಖೇಡ ಗ್ರಾಮಕ್ಕೆ ಮೊದಲು **'ಗೋಸಾಯಿ ಹಳ್ಳಿಖೇಡ'** ಎಂತಲೇ ಕರೆಯಲಾಗುತ್ತಿತ್ತಂತೆ. ಬಹುಶಃ ಮುಸ್ಲಿಮ ಆಳಿಕೆಯ ಕಾಲದಲ್ಲಿ ಹಳ್ಳಿಖೇಡ(ಕೆ) (ಕೆ=ಖುರ್ದ= ಸಣ್ಣದು) ಎಂದು ಹೆಸರು ಬಂದಿರಬೇಕು. ಹುಮ್ನಾಬಾದ ತಾಲ್ಲೂಕಿನಲ್ಲಿ ಹಳ್ಳಿಖೇಡ(ಬಿ) (ಬಿ=ಬಡಾ=ದೊಡ್ಡದು) ಎಂಬ ಇನ್ನೊಂದು ಊರಿದೆ. ಬಹುಶಃ ಒಂದೇ ತಾಲೂಕಿಗೆ ಸೇರಿದ ಒಂದೇ ಹೆಸರಿನ ಈ ಹಳ್ಳಿಖೇಡಗಳನ್ನು ಗುರುತಿಸಲು ಹೀಗೆ ಸಣ್ಣ ಮತ್ತು ದೊಡ್ಡ ಎಂಬ ಕನ್ನಡದ ವಿಶೇಷಣಗಳಿಗೆ ಉರ್ದುಭಾಷೆಯ ವಿಶೇಷಣಗಳನ್ನು ಮುಸ್ಲಿಮರ ಆಳ್ವಿಕೆಯಲ್ಲಿ ಸೇರಿಸಿರಬೇಕೆನಿಸುತ್ತದೆ.

ಗೋಸಾಯಿಮತ ನಾಥಪಂಥಕ್ಕೆ ಸೇರಿದ ಮಠವೆಂಬುದು ಸ್ಪಷ್ಟವಾಗಿದೆ. ಮಠದ ಬಾಗಿಲು ತುಂಬಾ ಹಳೆಯದಾಗಿದೆ. ಅದರ ಹಳೆಯ ಕಟ್ಟಡದ ಭಾಗಗಳು ಬಿದ್ದು ಹೋಗಿವೆ. ಸುಮಾರು ೧೫೦ ರಿಂದ ೨೦೦ ಅಡಿ ಚೌರಸ್ ಸುತ್ತಳತೆ ಹೊಂದಿದ ಈ ಮಠದ ಬಾಗಿಲಿನ ಬಲಗಡೆ ಒಂದು ಕೋಣೆಯಲ್ಲಿ ಯಾವಾಗಲೂ ಧುನಿ ಇರುತ್ತಿತ್ತಂತೆ. ಮಠದ ಮುಂದಿನ ಭಾಗದಲ್ಲಿ ಒಂದು ದೊಡ್ಡ ಬೂದಿ ದಿಬ್ಬವಿದೆ. ಅದನ್ನು ಅಗೆದು ಹಾಕಿದಾಗ ಹತ್ತಾರು ಬಂಡಿ ಬೂದಿ ಬಂದಿತೆಂದು ಊರವರು ಹೇಳುತ್ತಾರೆ. ಅದನ್ನು ಅಗೆಯುವಾಗ ಬೂದಿಯಲ್ಲಿ ತಂಬಾಕು ಸೇದುವ ಚಿಲುಮೆ ಮತ್ತು ಸಣ್ಣ ಮಡಕೆಯ ಕುಳ್ಳಿಗಳು ಇದ್ದವಂತೆ. ನಾಥಪಂಥಕ್ಕೆ ಸೇರಿದ ಸನ್ಯಾಸಿಗಳು ಗಾಂಜಾಬುಕ್ಕಿಗಳಾಗಿರುವುದು, ಧುನಿಯಲ್ಲಿ ತುಂಬುವ ಬೂದಿಯುನ್ನು ಹೊರಚಲ್ಲಿದ್ದರಿಂದ ಒಂದು ದೊಡ್ಡ ಗುಡ್ಡೆಯೇ ಆಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಊರ ಎದುರಿಗೆ ಇರುವ ನೂರಾರು ಎಕರೆ ಫಲವತ್ತಾದ ಜಮೀನು ಈ ಗೋಸಾಯಿ ಮಠಕ್ಕೆ ಸೇರಿದುದಾಗಿದೆ. ಈಗ ಕೆರೆ ಇರುವ ಸ್ಥಳವೂ ಈ ಮಠದ ಹೊಲವೇ ಆಗಿತ್ತಂತೆ. ಈಗ ಅರವತ್ತು ವರ್ಷಗಳ ಹಿಂದೆ (೨೦೨೦) ಅಲ್ಲಿ ಮಾವಿನ ತೋಪು ಇತ್ತು. ಬಹಳ ಹಳೆಯ ಮರಗಳು ಅಲ್ಲಿದ್ದವು ಎಂದು ಹಳ್ಳಿಖೇಡ ಊರಿನ ಹಿರಿಯರು ಸ್ಮರಿಸಿಕೊಳ್ಳುತ್ತಾರೆ. ಗೋಸಾಯಿಮಠದ ಸನ್ಯಾಸಿಗಳ ಸಮಾಧಿಗಳು ಈ ತೋಪಿನಲ್ಲಿ ಇದ್ದವಂತೆ. ಗೋಸಾಯಿಗಳು ಶೈವ ಧರ್ಮಕ್ಕೆ ಸಂಬಂಧಿಸಿದವರು. ಇವರಿಗೆ ಸಂಬಂಧಿಸಿದ ಹೊಲದಲ್ಲಿ ಈಗಲೂ ಒಂದು ಮಹಾದೇವ ಮಂದಿರವಿದೆ.

ಗೋಸಾಯಿ ಮಠದ ಬಾಗಿಲಿಗೆ ಸರಿಯಾಗಿ ಎದುರುಗಡೆಯೇ ಸ್ವಲ್ಪ ದೂರದಲ್ಲಿ ಅಂದರೆ ಸುಮಾರು ಒಂದು ನೂರು ಮೀಟರ ಅಳತೆಯಲ್ಲಿಯೇ ಕಿನ್ನರಿಬ್ರಹ್ಮಯ್ಯನ ಗುಡಿ ಇದೆ. ಇದರಿಂದ ಕಿನ್ನರಿ ಬ್ರಹ್ಮಯ್ಯನಿಗೂ ಈ ಮಠಕ್ಕೂ ಸಂಬಂಧ ಕಲ್ಪಿಸಲು ಸಾಧ್ಯವಾಗುತ್ತದೆ. ಹೀಗಾಗಿ ಬಹುಶಃ ಕಿನ್ನರಿ ಬ್ರಹ್ಮಯ್ಯ ನಾಥಪಂಥಕ್ಕೆ ಸಂಬಂಧಿಸಿದವನಿರಬೇಕೆಂದು ತೋರುತ್ತದೆ. ಮಠದ ಸಮೀಪದಲ್ಲಿಯೇ ಬ್ರಹ್ಮಯ್ಯನ ವಾಸಸ್ಥಾನವಿರುವುದು ಒಂದು ಕಾರಣವಾದರೆ, ಇದಕ್ಕೆ ಇನ್ನೆರಡು ಕಾರಣಗಳನ್ನು ಕೊಡಬಹುದಾಗಿದೆ:

೧. ಕಿನ್ನರಿ ಬ್ರಹ್ಮಯ್ಯನಿಗೆ **ರಕ್ಷಕ ಬ್ರಹ್ಮಯ್ಯ** ಎಂಬ ಹೆಸರಿತ್ತು ಎಂಬುದನ್ನು ಹಳ್ಳಿಖೇಡ ಗ್ರಾಮಸ್ಥರು ಹೇಳುತ್ತಾರೆ. ಮೊದಲಿಗೆ 'ರಕ್ಷಕ ಬ್ರಹ್ಮಯ್ಯ ಮಹಾರಾಜಕಿ ಜೈ' ಎಂತಲೇ ಜಯಘೋಷ ಮಾಡುತ್ತಿದ್ದರಂತೆ. ವಚನಗಳನ್ನು ರಕ್ಷಿಸಿದ್ದಕ್ಕೆ ಈ ಹೆಸರು ಬರಲು ಕಾರಣ ಎಂಬುದು ಅವರ ಊಹೆ. ಅದು ಹಾಗೂ ಇರಬಹುದು. ಜೊತೆಗೆ ನಾಥಪಂಥ ಎಂಬುದರಲ್ಲಿಯ **ನಾಥ** ಪದದ ಅರ್ಥ **ರಕ್ಷಕ** ಎಂದಾಗುತ್ತದೆ ಎಂದು ತಿಳಿದುಬರುತ್ತದೆ. 'ನಾಥ ಶಬ್ದ ರಕ್ಷಕ ಇಲ್ಲವೆ ಆಶ್ರಯದಾತ ಎಂಬ ಅರ್ಥದಲ್ಲಿ ಅಥರ್ವವೇದ ಹಾಗೂ ತೈತ್ತರೀಯ ಬ್ರಾಹ್ಮಣದಲ್ಲಿ ದೊರೆಯುತ್ತದೆ'. (ಸಿದ್ಧಸಾಹಿತ್ಯ, ಪು.೧೪೯). ಹೀಗಾಗಿ ಕಿನ್ನರಯ್ಯ ನಾಥ ಪಂಥಕ್ಕೆ ಸೇರಿದವನು ಎಂದು ಊಹಿಸಬಹುದಾಗಿದೆ.

೨. ಗೋಸಾಯಿಗಳು ಮೂಲತಃ ಗೋವುಗಳನ್ನು ಸಾಕುವವರು. ಕಿನ್ನರಯ್ಯನಿಗೆ ಸಂಬಂಧಿಸಿದಂತೆ ಗೂಳಿ ಬಿಡುವ ಸಂಪ್ರದಾಯ ಈಗಲೂ ಹಳ್ಳಿಖೇಡ ಗ್ರಾಮದಲ್ಲಿ ಇದೆ. ಜೊತೆಗೆ ಗೂಳಿಗಳಿಗೆ ಸಂಬಂಧಿಸಿದಂತೆ ಅನೇಕ ಜನಜನಿತ ಕಥೆಗಳು ಇವತ್ತಿಗೂ ಹಳ್ಳಿಖೇಡ ಗ್ರಾಮದಲ್ಲಿ ಉಳಿದುಕೊಂಡು ಬಂದಿವೆ. (ಅವನ್ನು ಮುಂದೆ ವಿವರಿಸಲಾಗಿದೆ). ಇವನ್ನೆಲ್ಲ ಗಮನಿಸಿದರೆ ಕಿನ್ನರಿ ಬ್ರಹ್ಮಯ್ಯ ಮೂಲತಃ ನಾಥ ಪಂಥಕ್ಕೆ ಸೇರಿದದವನಾಗಿದ್ದು, ಕಲ್ಯಾಣಕ್ಕೆ ಬಂದು ಬಸವಣ್ಣನವರ ಅನುಯಾಯಿಯಾಗಿ, ಲಿಂಗಧರಿಸಿ, ಲಿಂಗಾಯತನಾಗಿರಬೇಕೆನಿಸುತ್ತದೆ. ಈ ಕಾರಣವಾಗಿ ಕಿನ್ನರಯ್ಯನ ಜೊತೆಗೆ ಹಳ್ಳಿಖೇಡ ಗ್ರಾಮಕ್ಕೆ ಬಂದವರು ಉಳಿದುಕೊಂಡ ಸ್ಥಳ ಗೋಸಾಯಿಮಠವಾಗಿ ಉಳಿದುಕೊಂಡಿರುವ ಸಾಧ್ಯತೆ ಇದೆ.

ಬೊಮ್ಮಯ್ಯನವರು ಆಂದ್ರದ ಪಡೂರು ಎಂಬ ಊರಿನಿಂದ ಬಂದವರು. ಅಕ್ಕಸಾಲಿ ಕಾಯಕದವರು. ಕಲ್ಯಾಣಕ್ಕೆ ಬಂದು ದ್ವಾರಪಾಲಕರಾಗಿ ಸೇವೆಸಲ್ಲಿಸಿದರೆಂದು ಹೇಳುತ್ತಾರೆ. ಕಿನ್ನರಿ ಬೊಮ್ಮಯ್ಯ ಎಂಬ ಹೆಸರನ್ನು ಗಮನಿಸಿದರೆ, ಕಿನ್ನರಿ ವಾದ್ಯ ಆಂದ್ರದಲ್ಲಿ ಹೆಚ್ಚು ಬಳಕೆಯಾಗುವಂಥದ್ದು. ಈತನೊಬ್ಬ ಜನಪದ ಕಲಾವಿದನಾಗಿದ್ದನೆಂಬುದನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ.

ನಿಜವಾಗಿ ಕಲ್ಯಾಣದ ಪ್ರವೇಶವಾಗುವುದು ಹಳ್ಳಿಖೇಡದಿಂದಲೆ. ಬಹುಶಃ ಕಲ್ಯಾಣಕ್ಕೆ ಬರುವ ಶರಣರನ್ನು ಸ್ವಾಗತಿಸುವ, ಪರೀಕ್ಷಿಸಿ ಕಲ್ಯಾಣ ಪ್ರದೇಶಕ್ಕೆ ಪ್ರವೇಶಿಸಲು ಬಿಡುವ ಕಾಯಕವನ್ನು ಬೊಮ್ಮಯ್ಯ ಮಾಡಿರಬೇಕೆನಿಸು ತ್ತದೆ. ಈ ಮಾತನ್ನು



ಬೆಟ್ಟದ ಮೇಲಿರುವ ಕಿನ್ನರಿ ಬೊಮ್ಮಯ್ಯನ ಗುಡಿ

ಊಹಿಸಿಕೊಳ್ಳಲು ನಮಗೆ ಕಲ್ಯಾಣ ಪ್ರವೇಶಿಸುವ ಮೊದಲು ಅಕ್ಕಮಹಾದೇವಿಯನ್ನು ಪರೀಕ್ಷಿಸಿದ ಒಂದು ಘಟನೆ ಜನಜನಿತವಾಗಿ ಮತ್ತು ಲಿಖಿತರೂಪದಲ್ಲಿ ಉಳಿದುಕೊಂಡು ಬಂದಿರುವುದು ಒಂದು ಸಾಕ್ಷಿಯಾಗಿ ತೋರುತ್ತದೆ. ಈ ಪ್ರದೇಶವೂ ಜನ ಇಳಿದುಕೊಳ್ಳಲು ಅನುಕೂಲ ಪ್ರದೇಶವಾಗಿರುವಂತಿದೆ. ನೀರಿನ ಅನುಕೂಲ ನೈಸರ್ಗಿಕವಾಗಿಯೇ ಒಂದು ಕೊಡುಗೆ ರೂಪದಲ್ಲಿ ಇಲ್ಲಿ ಇದೆ.

ಬೊಮ್ಮಯ್ಯನ ಬಗ್ಗೆ ಊರವರಿಗೆ ಅತ್ಯಂತ ಭಕ್ತಿ ಇದೆ. ಸುಮಾರು ನೂರಿನ್ನೂರು ವರ್ಷಗಳಿಂದಲೇ ಪ್ರತಿದಿನವೂ ಭಜನೆ ನಡೆಯುತ್ತದಂತೆ. ಶ್ರಾವಣ ಮಾಸದಲ್ಲಂತೂ ಸರಿಯೇ ಸರಿ. ಪ್ರತಿ ಅಮವಾಸೆಯ ಹಿಂದಿನ ದಿನ ಅಂದರೆ ಚತುರ್ದಶಿಯ ದಿನ ರಾತ್ರಿಯೆಲ್ಲ ಭಜನೆ ನಡೆಯುತ್ತದಂತೆ. ಸಂಕ್ರಾಂತಿ, ಶಿವರಾತ್ರಿ ಮತ್ತು ನವರಾತ್ರಿಗಳಂದು ಕೂಡ ರಾತ್ರಿ ಇಡೀ ಭಜನೆ ನಡೆಯುತ್ತದೆ. ಹೀಗಾಗಿ ಇಲ್ಲಿ ಒಳ್ಳೆಯ ಭಜನೆಯ ಮೇಳ ಇದೆ. ಅಕ್ಕನ ಬಳಗವೊಂದು ಹುಟ್ಟಿಕೊಂಡಿದೆ. ಹೆಣ್ಣುಮಕ್ಕಳೂ ಭಜನೆ ಮಾಡುತ್ತಾರೆ. ಶ್ರಾವಣ ಮಾಸದ ಕೊನೆಯಲ್ಲಿ ಊರಿಗೆಲ್ಲ ಊಟ ಹಾಕಿ ಖಾಂಡ ಮಾಡುತ್ತಾರೆ. ಊರಲ್ಲಿ ಪಲ್ಲಕ್ಕಿ ಮೆರವಣಿಗೆ ಇತ್ಯಾದಿಗಳೆಲ್ಲ ನಡೆಯುತ್ತವೆ. ಊರಿನ ಎಲ್ಲ ಕೇರಿಯ ಜನ ಜಾತಿಮತ ಭೇದ-ಭಾವವಿಲ್ಲದೆ ಭಜನೆಯಲ್ಲಿ ಪಾಲ್ಗೊಳ್ಳುತ್ತಾರೆ.

ಶ್ರಾವಣ ಮಾಸದ ನಡುವಿನ ಸೋಮವಾರ ಜಾತ್ರೆ ನಡೆಯುತ್ತದೆ. ರವಿವಾರ ಪಾದಪೂಜೆ, ಸೋಮವಾರ ರಥೋತ್ಸವ, ಮಂಗಳವಾರ ಕುಸ್ತಿ, ಗೀಗೀಪದ ಮುಂತಾದ ಸಾಂಸ್ಕೃತಿಕ ಪ್ರದರ್ಶನಗಳು ನಡೆಯುತ್ತವೆ. ಪ್ರಸಿದ್ಧ ಕುಸ್ತಿಪಟುಗಳು ಕುಸ್ತಿ ಆಡಲು ಬರುತ್ತಾರಂತೆ. ಐದಾರು ಗೀಗೀ ಮೇಳಗಳನ್ನು ಆಮಂತ್ರಿಸುತ್ತಾರಂತೆ. ಬೊಮ್ಮಯ್ಯನ ಜಾತ್ರೆಗೆ ಸಂಬಂಧಿಸಿ ಈ ಊರಿನ ಜನ ಒಂದು ವಿಶೇಷ ಸಂಗತಿಯನ್ನು ಹೇಳುತ್ತಾರೆ. ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳು ತವರುಮನೆಗೆ ಬರುವುದು ಪಂಚಮಿ ಹಬ್ಬಕ್ಕೆ. ಆದರೆ ಇಲ್ಲಿ ಪಂಚಮಿ ಹಬ್ಬದ ಬದಲಾಗಿ ಬ್ರಹ್ಮಯ್ಯನ ಜಾತ್ರೆಗೆ ಬರುವುದು ರೂಢಿಯಿದೆಯಂತೆ. ಈ ಜಾತ್ರೆ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ಹಳ್ಳಿಖೇಡ ಊರಿನ ಜನ ಉಪಜೀವನಕ್ಕಾಗಿ ಹೊರಗಡೆ ಎಲ್ಲಿಯೇ ಹೋಗಿರಲಿ ಅವರೆಲ್ಲ ಜಾತ್ರೆಗೆ ತಪ್ಪದೇ ಹಾಜರಾಗುವ ರೂಢಿ ಇದೆಯಂತೆ. ಇದೆಲ್ಲವನ್ನು ಗಮನಿಸಿದರೆ ಮೊದಲಿನಿಂದಲೂ ಈ ಶರಣನ ಬಗೆಗೆ ಜನರಲ್ಲಿ ಭಕ್ತಿಭಾವ ಬೆಳೆದುಕೊಂಡು ಬಂದಿದೆ.

ಯುಗಾದಿ ಹಬ್ಬದ ದಿನ ಗ್ರಾಮಪಂಚಾಯತ ಕಟ್ಟಡದಲ್ಲಿ ಮುಂದಿನ ಮಳೆಬೆಳೆಗಳನ್ನು ಕುರಿತು ಪಂಚಾಂಗ ನೋಡುವ, ಓದುವ ಕೆಲಸ ಮುಗಿದ ನಂತರ ಊರವರೆಲ್ಲ ಕಿನ್ನರಯ್ಯನ ಗುಡಿಗೆ ಹೊರಡುತ್ತಾರೆ. ಹೀಗೆ ಹೋಗುವಾಗ ಎಲ್ಲ ಅಂಗಡಿಯವರು ತಮ್ಮ ತಮ್ಮ ಅಂಗಡಿಗಳಿಂದ ಬೆಲ್ಲದ ಕಣ್ಣಿಗಳನ್ನು ಕಿನ್ನರಯ್ಯನಿಗಾಗಿ ಒಯ್ಯುತ್ತಾರೆ. ಹೀಗೆ ಬೆಲ್ಲದ ಕಣ್ಣಿಗಳನ್ನು ಒಯ್ಯುವಾಗ ಹೆಣ್ಣುಮಕ್ಕಳು ವಿಶೇಷವಾಗಿ ಹಾಡುಗಳನ್ನು ಹಾಡುತ್ತಾರೆ. ಬೆಲ್ಲವನ್ನು ಕಿನ್ನರಯ್ಯನಿಗೆ ಏರಿಸಿ, ದೇವರಿಗೆ ನಮಸ್ಕರಿಸಿ ಮನೆಗಳಿಗೆ ಹೋಗುತ್ತಾರೆ. ಈ ಬೆಲ್ಲ ಏರಿಸುವುದು ಏಕೆ ಎಂಬುದು ಕುತೂಹಲದ ಪ್ರಶ್ನೆ. ಆ ಊರಿನಲ್ಲಿ ಕಬ್ಬು ಹೆಚ್ಚಾಗಿ ಬೆಳೆಯುತ್ತಾರೆಯೇ? ಬೆಲ್ಲದ ಗಾಣಗಳೇನಾದರೂ



ಬೆಟ್ಟದ ಮೇಲಿರುವ ಕಿನ್ನರಿ ಬೊಮ್ಮಯ್ಯನ ಗುಡಿಯ ತೆರೆದ ಮಂಟಪ

ನಡೆಯುತ್ತವೆಯೇ? ಎಂದು ಕೇಳಿದರೆ, ಆ ಊರಿನಲ್ಲಿ ತೋಟಪಟ್ಟಿಗಳೂ ಬಹಳಷ್ಟು ಇಲ್ಲ, ಮತ್ತು ಬೆಲ್ಲ ತಯಾರಿಸುವುದೂ ಇಲ್ಲ ಎಂದು ತಿಳಿದುಬಂದಿತು. ಇದು ಮೊದಲಿನಿಂದಲೂ ಬೆಳೆದುಕೊಂಡುಬಂದ ಸಂಪ್ರದಾಯ ಎಂದು ಊರಿನ ಜನ ಹೇಳುತ್ತಾರೆ. ಇಳಿಹಾಳ ಬ್ರಹ್ಮಯ್ಯನ ಜಾತ್ರೆಯಲ್ಲಿಯೂ ಈ ಬೆಲ್ಲ ಅರ್ಪಿಸುವ ಪದ್ಧತಿ ಇದೆಯೆಂದು ತಿಳಿದುಬರುತ್ತದೆ. ಬ್ರಹ್ಮಯ್ಯ ಹೆಸರಿನ ಶರಣರಿಗೂ ಬೆಲ್ಲ ಏರಿಸುವ ಸಂಪ್ರದಾಯಕ್ಕೂ ಇರುವ ಸಂಬಂಧದ ಬಗ್ಗೆ ವಿಚಾರಿಸಬೇಕು.

ಈ ಶರಣನಿಗೆ ಊರಿನ ಎಲ್ಲ ಜನ ಹರಕೆ ಹೊರುವುದು ಸಾಮಾನ್ಯವಾಗಿದೆ. ಗುಡಿಯ ಮುಂದೆ ಮದುವೆ ಮಾಡುವುದು, ಜಡೆ ತೆಗೆಯುವುದು, ಬೇಡಿಕೊಂಡ ಕೆಲಸ ಕೈಗೂಡಿದ ನಂತರ ಹರಕೆ ಸಲ್ಲಿಸುವುದು, ಸಾಷ್ಟಾಂಗ ನಮಸ್ಕಾರ ಹಾಕುವುದು ಸಾಮಾನ್ಯವಂತೆ.

ಬೊಮ್ಮಯ್ಯನಿಗೆ ಸಂಬಂಧಿಸಿದಂತೆ ಅಹಿಂಸೆಯ ಕಥೆಗಳು ಜನಜನಿತವಾಗಿ ಉಳಿದುಕೊಂಡು ಬಂದಿವೆ. ಇವೆಲ್ಲ ಗೋವು ಮತ್ತು ಬೊಮ್ಮಯ್ಯನಿಗೆ ಸಂಬಂಧಿಸಿದ ಕಥೆಗಳಾಗಿವೆ. ಈ ಕಥೆಗಳು ಹಿಂದೆ ಹೇಳಿದಂತೆ ಬೊಮ್ಮಯ್ಯ ಗೋಸಾಯಿಯಾಗಿದ್ದು, ನಾಥಪಂಥಕ್ಕೆ ಸಂಬಂಧಿಸಿದವನಾಗಿರಬೇಕೆಂಬ ಸಂಗತಿಗೆ ಪುಷ್ಟಿಯನ್ನು ಕೊಡುತ್ತವೆ.

ಬೊಮ್ಮಯ್ಯನಿಗೆ ಗೂಳಿ ಬಿಡುವುದು ಸಾಮಾನ್ಯ ಸಂಪ್ರದಾಯವಾಗಿದೆ. ಸುಮಾರು ೨೦೦ ವರ್ಷಗಳ ಹಿಂದಿನ ಘಟನೆಯಾಗಿರಬೇಕೆಂದು ಊರ ಜನ ಒಂದು ಘಟನೆಯನ್ನು ಬಿತ್ತರಿಸುತ್ತಾರೆ. ಮಕ್ಕಳಾಗದ ಒಬ್ಬ ಹರಿಜನ ಹೆಣ್ಣುಮಗಳು ತನಗೆ ಮಕ್ಕಳಾದರೆ ಒಂದು ಗೂಳಿ ಬಿಡುವುದಾಗಿ ಹರಕೆ ಹೊತ್ತಳಂತೆ. ಮುಂದೆ ಮಕ್ಕಳಾಗಲು ಒಂದು ಗೂಳಿ ಬಿಟ್ಟಳಂತೆ. ಆ ಗೂಳಿಯ ಸಂತತಿಯೇ ಮುಂದೆ ಅನೇಕ ಗೂಳಿಗಳಾಗಿ ಬೆಳೆದುಕೊಂಡು ಬಂದಿದೆ ಎಂದು ಹೇಳುತ್ತಾರೆ.

ಈ ಗೂಳಿಗಳು ಆಗಾಗ, ವಿಶೇಷವಾಗಿ ಹಬ್ಬ ಹುಣ್ಣಿಮೆಗಳಂದು ಮನೆಮನೆಗೂ ಬಂದು ನಿಲ್ಲುತ್ತವೆ. ಅಂದು ಊಟಕ್ಕೆ ಮಾಡಿದ ಅಡಿಗೆ- ರೊಟ್ಟಿ, ಹೋಳಿಗೆ ತಂದು ತಿನ್ನಿಸಿದರೆ ಮತ್ತೆ ಮುಂದಿನ ಮನೆಗೆ ಪ್ರಯಾಣ ಬೆಳೆಸುತ್ತವಂತೆ.

ಊರ ಮುಂದಿನ ಹೊಲದಲ್ಲಿ ಮೇಯುತ್ತಿರುವ ಗೂಳಿಯೊಂದನ್ನು ರಾತ್ರಿ ಹೊಲದ ಮಾಲೀಕನು ಅಟ್ಟಿಸಿಕೊಂಡು ಹೋದನಂತೆ. ಅದು ಗುಡ್ಡದಲ್ಲಿರುವ ಕಿನ್ನರಿ ಬೊಮ್ಮಯ್ಯನ ಗವಿಯಲ್ಲಿ ಹೋಯಿತೆಂಬ ಒಂದು ಕಥೆ ಇದೆ. ಗವಿಯಲ್ಲಿ ಆಗ ಅನೇಕ ಜನ ಶರಣರು ಕೂಡಿ ಭಜನೆ ಮಾಡುತ್ತಿದ್ದರಂತೆ. ಗೂಳಿ ಹೊಲದಲ್ಲಿ ಬೆಳೆ ತಿಂದು ಹಾಳು ಮಾಡಿದೆ, ದಂಡ ಕೊಡಬೇಕೆಂದು ಹೊಲದ ಮಾಲೀಕ ವಾದಿಸಿದನಂತೆ. ಆಗ ಒಬ್ಬ ಶರಣನು, ಆ ಗೂಳಿ ಅದೇ ಆಗ ಹಾಕಿದ ಹೆಂಡಿಯ ಒಂದು ಗೊತಾಲಿಯನ್ನು (ಹೆಂಡಿ ಗುಂಪು) ತೆಗೆದುಕೋ ಎಂದು ಅವನ ಉಡಿಯಲ್ಲಿ ಹಾಕಿದನಂತೆ. ಉಡಿಯಲ್ಲಿ ಹಾಕಿಸಿಕೊಂಡ ಒಕ್ಕಲಿಗ ಇದೇನು ಹೆಂಡಿ ಎಂದು ದಾರಿಯಲ್ಲಿ ಚೆಲ್ಲಿ ಬಂದನಂತೆ. ಮುಂಜಾನೆ ನೋಡಿದಾಗ ಅವನ ಧೋತರದ ಉಡಿಯಲ್ಲಿ ಬಂಗಾರ ಮೆತ್ತಿತ್ತಂತೆ. ತಾನು ಹೆಂಡಿ ಎಂದು ಚೆಲ್ಲಿ ಬಂದುದಕ್ಕಾಗಿ ಒಕ್ಕಲಿಗ ಪಶ್ಚಾತಾಪ ಪಟ್ಟನಂತೆ.

ಹೀಗೆ ಗೂಳಿಗಳಿಗೆ ಸಂಬಂಧಿಸಿದ ಕತೆಗಳು ರೋಚಕವಾಗಿವೆ. ಈ ಗೂಳಿಗಳನ್ನು ಹಣಕ್ಕೆ ಮಾರಿಕೊಳ್ಳುವುದು ಸಾಮಾನ್ಯವಾಗಿತ್ತಂತೆ. ಕಟುಕರ ಕರೀಮಸಾಬ ಎನ್ನುವವನಿಗೆ ಒಂದು ಗೂಳಿಯನ್ನು ಮಾರಿದರಂತೆ. ಅದನ್ನು ಕಡಿದ ಕರೀಮಸಾಬನಿಗೆ ಕಷ್ಟದ ದಿನಗಳು ಬಂದುವಂತೆ. ಆತ ಮತ್ತೊಂದು ಗೂಳಿಯನ್ನು ತಂದು ಬಿಟ್ಟನಂತೆ. ಮುಂದೆ ಹಳ್ಳಿಖೇಡ ಸೀಮೆಯಲ್ಲಿ ಮಾಂಸ ಮಾರುವುದನ್ನು ಬಿಟ್ಟನಂತೆ. ಮಾಂಸ ಮಾರುತ್ತ ಬಂದ ಕರೀಮಸಾಬನು ಈಗ ಪ್ರಾಣಿಹಿಂಸೆಯನ್ನು ಬಿಟ್ಟಿದ್ದಾನಂತೆ. ದೊಡ್ಡ ಶ್ರೀಮಂತನಾಗಿದ್ದಾನೆ. ಆತ ಬೊಮ್ಮಯ್ಯನ ಪರಮ ಭಕ್ತನಾಗಿದ್ದು, ಅವನ ಮಕ್ಕಳಿಗೆಲ್ಲ ಒಳ್ಳೆಯದಾಗಿದೆ. ಪ್ರತಿವರ್ಷವೂ ಜಾತ್ರೆಗೆ ಚಂದಾ ಕೊಡುತ್ತಾನಂತೆ. ಇಂತಹ ಅನೇಕ ಘಟನೆಗಳನ್ನು ಊರವರು ಹೇಳುತ್ತಾರೆ.

ಗೂಳಿಗಳನ್ನು ಕಟುಗರಿಗೆ ಮಾರಿಕೊಳ್ಳುವುದನ್ನು ಈಗ ಊರಿನ ದೇವಸ್ಥಾವನದ ಪಂಚ ಕಮಿಟಿಯವರು ಬಿಟ್ಟುಬಿಟ್ಟಿದ್ದಾರೆ. ಅವನ್ನು ಗೋಶಾಲೆಗಳಿಗೆ ಬಿಡುವ ಪದ್ಧತಿ ಹಾಕಿಕೊಂಡಿದ್ದಾರೆ. ಊರಿನಲ್ಲಿಯೆ ಸತ್ತ ಗೂಳಿಗಳನ್ನು ಬ್ರಹ್ಮಯ್ಯನ ಗುಡಿಯ ಕಟ್ಟೆಯ ಎದುರಿಗೆ, ಬಲಗಡೆ ಸಂಸ್ಕಾರ ಮಾಡುವ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ.



ಕಿನ್ನರಿ ಬೊಮ್ಮಯ್ಯನ ಗವಿ ಇದೆ ಎಂದು ಹೇಳುವ ಬೆಟ್ಟದ ಸ್ಥಳ

ಹಳ್ಳಿಖೇಡ ಗ್ರಾಮದ ಸೀಮೆಯಲ್ಲಿ ಯಾವುದೇ ಪ್ರಾಣಿಯನ್ನು ಬಲಿಕೊಡುವ, ಮಾಂಸಕ್ಕಾಗಿ ಕಡಿಯುವ ಪದ್ಧತಿ ಈಗಲೂ ಇಲ್ಲವಂತೆ. ಮಾಂಸದ ಬಳಕೆ ಮಾಡುವವರು, ಮಾರುವವರು ಬೇರಡೆಯಿಂದ ತಂದು ಮಾರುತ್ತಾರೆಂಬುದು ಊರವರ ವಿವರಣೆಯಾಗಿದೆ. ಕಿನ್ನರಯ್ಯನ ಅಹಿಂಸಾ ತತ್ತ್ವದಲ್ಲಿದ್ದ ಗ್ರಾಮಸ್ಥರ ಈ ನಂಬಿಕೆ ಶರಣನ ಮಹಿಮೆಯನ್ನು ಎತ್ತಿ ತೋರಿಸುತ್ತದೆ.

ಹಣವಂತ ಬೊಮ್ಮಯ್ಯ ಗುಣವಂತ ಶರಣಯ್ಯ
ರಣವಂತ ವೀರಶಿವಮತಕೆ । ನಾಡೊಳಗೆ
ತನುವಂತನಾದ ಪಶುಗಳಿಗೆ

ಈ ಊರಿನಲ್ಲಿ ನಡೆದ ಘಟನೆಗಳನ್ನು ಗಮನಿಸಿದರೆ ಅವೆಲ್ಲ ಅಹಿಂಸಾ ಧರ್ಮಕ್ಕೆ ಸಂಬಂಧಿಸಿದ ಘಟನೆಗಳೇ ಆಗಿವೆ. ಇವೆಲ್ಲ ಘಟನೆಗಳು ನಡೆದದ್ದು ಹಳ್ಳಿಖೇಡ(ಕೆ) ಗ್ರಾಮದಲ್ಲಿ. ಕನ್ನಡದ ಕವಿಗಳು ಉಳಿಸಿಕೊಟ್ಟ ಕಲ್ಯಾಣದಲ್ಲಿ ನಡೆಯಿತೆನ್ನಲಾಗುವ ಘಟನೆ ಕೂಡ ಅಹಿಂಸೆಗೆ ಸಂಬಂಧಪಟ್ಟ ಘಟನೆಯೇ ಆಗಿರುವುದು ಮಹತ್ವದ ಸಂಗತಿ ಎನಿಸುತ್ತದೆ. ಒಬ್ಬ ವಿಟ ತನ್ನ ಪ್ರೇಯಸಿಗಾಗಿ (ಸೂಳೆಗಾಗಿ) ಒಂದು ಕುರಿಯನ್ನು ಬಲಿಕೊಡಲು ತೆಗೆದುಕೊಂಡು ಹೋಗುವಾಗ ಕುರಿಯು ವಿಟನಿಂದ ತಪ್ಪಿಸಿಕೊಂಡು ಕಿನ್ನರಯ್ಯ ಇದ್ದ ತ್ರಿಪುರಾಂತಕೇಶ್ವರ ದೇವಾಲಯವನ್ನು ಹೊಕ್ಕಿತಂತೆ. ಈ ಕುರಿಯು ತನ್ನ ಮೊರೆ ಹೊಕ್ಕಿದೆ ಎಂದು ಭಾವಿಸಿಕೊಂಡ ಕಿನ್ನರಯ್ಯ ವಿಟನಿಗೆ ಅದರ ಬೆಲೆ

ಕೇಳಿ ಕೊಟ್ಟು ಕಳಿಸಿದನಂತೆ. ಇದರಿಂದ ಅಸಮಾಧಾನಗೊಂಡ ಸೂಳೆ ಅದೇ ಕುರಿಯನ್ನೇ ತಂದು ದೇವಿಗೆ ಬಲಿ ಕೊಡಬೇಕೆಂದು ಹಟ ಹಿಡಿಯುತ್ತಾಳೆ. ಆಗ ವಿಟ ಪುನಃ ಕಿನ್ನರಯ್ಯನ ಹತ್ತಿರ ಬಂದು ಕುರಿಯನ್ನು ಹಿಂತಿರುಗಿಸಲು ಕೇಳಿದಾಗ, ಆ ಕುರಿಯು ತನಗೆ ಮೊರೆ ಹೋಗಿದೆ, ಅದನ್ನು ಬಿಟ್ಟುಕೊಡಲು ಆಗುವುದಿಲ್ಲ ಎಂದು ಹೇಳುತ್ತಾನೆ. ಇಬ್ಬರ ನಡುವೆ ವಾಗ್ವಾದವುಂಟಾಗಿ ಕಿನ್ನರಯ್ಯ ಈ ವಿಟನನ್ನು ಕೊಂದನೆಂದು ಕಥೆ ಹೇಳುತ್ತದೆ.

ಈ ಘಟನೆ ಬಿಜ್ಜಳನ ಕಿವಿಯನ್ನು ಮುಟ್ಟುತ್ತದೆ. ಬಸವಣ್ಣನ ಎದುರು ಈ ವಿಷಯ ಪ್ರಸ್ತಾಪಿಸಿ ಭಕ್ತ ಶರಣರ ಅತಿರೇಕವನ್ನು ಖಂಡಿಸುತ್ತಾನೆ. ಆಗ ಬಸವಣ್ಣನವರು ಮತ್ತೂ ಶರಣರ ಪರವಹಿಸಿ ಮಾತನಾಡುತ್ತಾರೆ. ಅಲ್ಲಿ ನಡೆದದ್ದೇನೆಂಬುದನ್ನು ಕಿನ್ನರಯ್ಯನನ್ನು ಕೇಳಿ ತಿಳಿಯೋಣ ಎಂದು ಬಿಜ್ಜಳನನ್ನು ತ್ರಿಪುರಾಂತಕೇಶ್ವರನ ಗುಡಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಬಿಜ್ಜಳ ಲಿಂಗಸಾಕ್ಷಿಯಾಗಿ ಮಾತನಾಡಲು ಹೇಳಿದಾಗ ಕಿನ್ನರಯ್ಯನ ಬದಲು ಲಿಂಗವೇ ಸತ್ಯವನ್ನು ಒರೆಯುತ್ತದೆ. ಆಗ ಬಿಜ್ಜಳ ಆ ವಿಟನಿಗೆ ಜೀವದಾನ ಮಾಡಲು ಪ್ರಾರ್ಥಿಸಿಕೊಂಡಾಗ ಕಿನ್ನರಯ್ಯ ಹಾಗೇ ಮಾಡುತ್ತಾನೆ.

ಈ ಘಟನೆಯ ಹಿನ್ನೆಲೆಯಲ್ಲಿ ಕಿನ್ನರಯ್ಯನ ಬಗ್ಗೆ ಹಳ್ಳಿಖೇಡದಲ್ಲಿ ನಡೆದಿವೆ ಎನ್ನಲಾದ ಪ್ರಾಣಿದಯೆಗೆ ಸಂಬಂಧಿಸಿದ ಘಟನೆಗಳಿಗೆ ಮಹತ್ವದ ಅರ್ಥಗಳು ಉಳಿದುಕೊಳ್ಳುತ್ತವೆ.

ಕಿನ್ನರಯ್ಯನು ವಚನಗಳ ರಕ್ಷಣೆಗಾಗಿ ಅವುಗಳನ್ನು ಹೊತ್ತು ಒಯ್ಯುವವರ ಜೊತೆ ಉಳುವಿಗೆ ಹೋದನೆಂದೂ ಅಲ್ಲಿ ಒಂದು ನದಿಯ ದಿಕ್ಕನ್ನೆ ಬದಲಿಸಿದನೆಂದೂ ಅದಕ್ಕಾಗಿ ಆ ಹೊಳೆ ಕಿನ್ನರಯ್ಯನ ಹೊಳೆ ಎಂದು ಪ್ರಸಿದ್ಧವಾಗಿದೆ ಎಂದೂ ತಿಳಿದುಬರುತ್ತದೆ. ಹೀಗಾಗಿ ಹಳ್ಳಿಖೇಡದಲ್ಲಿ ಇರುವ ಸ್ಮಾರಕಗಳು ಗುಡಿ-ಗವಿಗಳು ಅವನ ಸಮಾಧಿಗಳಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದರಿಂದ ಕಿನ್ನರಯ್ಯನು ಉಳಿದುಕೊಂಡು, ಶರಣರನ್ನು ಬರಮಾಡಿಕೊಳ್ಳುವ ಮಹತ್ವದ ಕೆಲಸವನ್ನು ಮಾಡುತ್ತಿದ್ದನೆಂದೂ, ಅವನು ಕಾಯ್ದ ಕಲ್ಯಾಣದ ಮಹಾದ್ವಾರ ಹಳ್ಳಿಖೇಡವೇ ಆಗಿರಬೇಕೆಂದೂ ಹೇಳಬಹುದಾಗಿದೆ.

ಕಲಬುರ್ಗಿ ಜಿಲ್ಲೆಯ ಸರಹದ್ದು ಮುಗಿದ ನಂತರ ಬೀದರ ಜಿಲ್ಲೆಯ ಸರಹದ್ದಿನಲ್ಲಿ ಬರುವ ಮೊದಲನೇ ಹಳ್ಳಿಯೇ ಹಳ್ಳಿಖೇಡ ಗ್ರಾಮ. ಈ ಗ್ರಾಮದ ಹತ್ತಿರವೇ ಮುಲ್ಲಾಮಾರಿ ತೊರಿ ಹರಿಯುತ್ತದೆ. ಈ ತೊರಿಯೇ ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳ ಸರಹದ್ದು ಆಗಿದೆ. ಈ ತೊರಿಯ ದಡದಲ್ಲಿ ಕಲಬುರ್ಗಿ ಭಾಗಕ್ಕೆ ಸೇರಿದಂತೆ ಮೂರು ಕಿಣ್ಣಿ ಎಂಬ ಗ್ರಾಮಗಳಿವೆ. ಮ್ಯಾಲಿನ ಕಿಣ್ಣಿ, ಸಡಕಿನ ಕಿಣ್ಣಿ ಹಾಗೂ ಸರ್ಫೋಸ್ (ಸ್ವಂತ) ಕಿಣ್ಣಿ. ಕಿಣ್ಣಿ ಎಂಬ ಹೆಸರು ಬದಲಾದ ರೀತಿಯನ್ನು ಹೀಗೆ ಹೇಳಲಾಗುತ್ತದೆ: ಕಿಣ್ಣಿ>ಕಿಣಗಿ>ಕರಣಿ>ಕಿನ್ನರಿ. ಅಂದರೆ ಕಿನ್ನರಯ್ಯನು ಅಕ್ಕಮಹಾದೇವಿ

ಮಹಾಗಾಂವ ದಿಂದ ಕಲ್ಯಾಣಕ್ಕೆ ಬರುತ್ತಿರುವುದನ್ನು ತಿಳಿದ ಕಿನ್ನರಯ್ಯನು ಮುಲ್ಲಾಮಾರಿ ತೊರಿಯವರೆಗೆ ಹೋಗಿ ಸ್ವಾಗತಿಸಿದನೆಂದು, ಆ ಸ್ಥಳವನ್ನೇ ಕಿನ್ನರಯ್ಯನ ಹೆಸರಿಗೆ ಆ ಗ್ರಾಮದ ಹೆಸರು ಕಿಣಗಿ>ಕಿರಣಗಿ> ಕಿನ್ನರಿ ಎಂದು ಬಂದಿತೆಂದು ಕಿಣಗಿ ಗ್ರಾಮದ ಹಿರಿಯರು ಹೇಳುತ್ತಾರೆಂದು ತಿಳಿದುಬರುತ್ತದೆ. ಆ ತೊರಿಯ ದಡದಲ್ಲಿ ಒಂದೆರಡು ಸಣ್ಣ ಗುಡಿಗಳಿದ್ದವೆಂದೂ ಅವನ್ನು ಬಸವಣ್ಣನ ಗುಡಿ ಎಂದು ಕರೆಯುತ್ತಿದ್ದರೆಂದೂ ತಿಳಿದುಬರುತ್ತದೆ. ಈಗ ಅವೆಲ್ಲವನ್ನು ಅಲ್ಲಿಯ ಹೊಲದವರು ಹೊಡೆದುಹಾಕಿದ್ದಾರಂತೆ. ಈ ನದಿಯ ದಂಡೆಗೆ ಇನ್ನೊಂದು ಊರು ಗೊಬ್ಬರವಾಡಿ ತುಂಬಾ ಹಳೆಯ ಊರಾಗಿದ್ದು, ಅಲ್ಲಿ ಪ್ರಾಚೀನ ಕಾಲದ ಗುಡಿಗುಂಡಾರಗಳಿವೆ ಎಂದು ತಿಳಿದುಬರುತ್ತದೆ.

ಮಾಹಿತಿ : ರಾಚಯ್ಯ ಮಠಪತಿ, ವ. ೭೦
ಪ್ರೊ. ಕಲ್ಯಾಣರಾವ ಪಾಟೀಲ

***

## ಹುಮ್ನಾಬಾದ ತಾಲೂಕು :

### ೨. ಬಸವ ತೀರ್ಥ :

### ಬಸವಣ್ಣನವರು ಅನುಷ್ಠಾನ ಮಾಡಿದ ಸ್ಥಳ

ಹುಮ್ನಾಬಾದ ಪಟ್ಟಣದ ದಕ್ಷಿಣಕ್ಕೆ ಮೂರ್‍ನಾಲ್ಕು ಕೀ.ಮೀ.ದೂರದಲ್ಲಿ 'ಬಸವ ತೀರ್ಥ' ಎಂಬ ಹೆಸರಿನ ಒಂದು ದೊಡ್ಡ ಬಯಲು ಪ್ರದೇಶವಿದೆ. ಈ ಸ್ಥಳಕ್ಕೆ ಬಸವ ತೀರ್ಥ ಎಂಬ ಹೆಸರು ಬರಲು ಕಾರಣವೆಂದರೆ, ಬಸವಣ್ಣನವರು ಕಲ್ಯಾಣ ಬಿಟ್ಟು ಹೋಗುವಾಗ ಈ ಪ್ರದೇಶ್ಕಕೆ ಬಂದು, ಲಿಂಗಪೂಜೆ ಮಾಡಿಕೊಂಡು ಹೋಗಿದ್ದಾರೆ ಎಂಬ ಸ್ಥಳೀಯ ಸಂಗತಿ ಉಳಿದುಕೊಂಡು ಬಂದಿದೆ. ಬಸವನ ಗುಡಿ ಎಂದು ಹೇಳುವ ಒಂದು ಹಳೆಯ ಗುಡಿ ಇದೆ. ಈ ಗುಡಿಯ ಹಿಂದೆ ದಕ್ಷಿಣಕ್ಕೆ ಬಸವತೀರ್ಥ ಎಂದು ಹೇಳುವ ಸಣ್ಣ ಬಾವಿ ಇದೆ. ಲಿಂಗ ಪೂಜೆಯ



ಬಸವಣ್ಣನವರು ಅನುಷ್ಠಾನ ಮಾಡಿದ ಸ್ಥಳದಲ್ಲಿರುವ ಬಸವಣ್ಣನ ಗುಡಿ

ನೀರಿಗಾಗಿ ಬಸವಣ್ಣ ಒಂದು ಕೋಲಿನಿಂದ ತಿವಿಯಲು ಅಲ್ಲಿ ನೀರು ಚಿಮ್ಮಿತಂತೆ. ಹೀಗಾಗಿ ಇದಕ್ಕೆ **ಬಸವತೀರ್ಥ** ಎಂದು ಹೆಸರು ಬಂದಿತು ಎನ್ನುತ್ತಾರೆ.

ಇಲ್ಲಿ ಇನ್ನೊಂದು ಹಳೆಯ ಗುಡಿ ಇದ್ದು ಅದನ್ನೀಗ ವೀರಭದ್ರನ ಗುಡಿ ಎಂದು ಕರೆಯುತ್ತಾರೆ. ಆದರೆ ಈ ವೀರಭದ್ರನ ಗುಡಿಯನ್ನೂ ಸೇರಿಸಿಕೊಂಡು ಇರುವ ಬಹುವಿಶಾಲವಾದ ಸ್ಥಳವನ್ನೂ ಬಸವತೀರ್ಥ ಎಂದೇ ಗುರುತಿಸುವುದನ್ನು ಗಮನಿಸಿದರೆ, ವೀರಭದ್ರನ ಗುಡಿ ಎಂಬ ಹೆಸರು ನಂತರ ಸೇರಿರಬಹುದಾಗಿದೆ. ವೀರಭದ್ರನ ಪೂಜೆ ಮಾಡುವಾಗ ಮೂರ್ತಿಯ ಒಳಗೆ ಇರುವುದೇನೆಂದು ನೋಡುವ ಕುತೂಹಲದಿಂದ ಕಾದು ನೋಡಿದರೆ, ಒಳಗಡೆ ನೆಟ್ಟಗೆ ನಿಲ್ಲಿಸಿದ ಕಲ್ಲುಮಾತ್ರ ಇದೆ. ಅದಕ್ಕೆ ಇತ್ತೀಚಿನ ಮುಖವಾಡ ಒಂದನ್ನು ಹಾಕುತ್ತಾರೆ, ಬಟ್ಟೆ ತೊಡಿಸುತ್ತಾರೆ, ಕೊರಳಲ್ಲಿ ಲಿಂಗ ಹಾಕುತ್ತಾರೆ. ವೀರಭದ್ರನೆಂದು ಕರೆಯುತ್ತಾರೆ. ಅದು ಮೂಲತಃ ವೀರಭದ್ರನ ಗುಡಿ ಅಲ್ಲ ಎಂಬುದು ಗುಡಿಯ ಪ್ರಾಚೀನ ರಚನೆ ಮತ್ತು ಒಳಗಡೆಯ ಈ ಎಲ್ಲ ಸಂಗತಿಗಳು ಸ್ಪಷ್ಟಪಡಿಸುತ್ತವೆ.

ಇದೆಲ್ಲವನ್ನು ಗಮನಿಸಿದರೆ, ಶರಣರ ಹೆಸರಿಗೆ ಗವಿ ಇರುವ ಹಂದ್ರಾಳ, ರಾಜೇಶ್ವರ, ಮೋಳ್ಕೇರಾ, ಗಡವಂತಿ, ಅದೇ ದಾರಿಯಗುಂಟ ಇರಬಹುದಾದ ಈ ಬಸವತೀರ್ಥವೂ ಈ ಮೇಲಿನ ಶರಣರ ವಾಸಸ್ಥಳಗಳಂತೆ ಇದು ಕೂಡ ಒಂದು ಶರಣರ ವಾಸಸ್ಥಳವಾಗಿರಬೇಕೆಂದು ಅನಿಸುತ್ತದೆ.



ಬಸವಣ್ಣನ ಗುಡಿಯ ಗರ್ಭಗೃಹದಲ್ಲಿರುವ ನಂದಿ

ಬಸವತೀರ್ಥ ಪರಿಸರದಲ್ಲಿಯೇ ಮೇಲೆ ಸೂಚಿಸಿದ ಬಾವಿ, ಗುಡಿಗಳಿಗೆ ಹೋಗುವ ದಾರಿಯಲ್ಲಿ ಒಂದು ದೊಡ್ಡ ಮಠವಿದೆ. ಬಸವಣ್ಣನವರು ಇಲ್ಲಿಗೆ ಬಂದುಹೋದ ಸ್ಮರಣೆಗಾಗಿ ನಂತರ ಭಕ್ತರು ಈ ಮಠ ಕಟ್ಟಿಸಿರಬೇಕೆಂದು ಹೇಳಲಾಗುತ್ತದೆ. ಇದು ವಿರಕ್ತಮಠವಾಗಿದೆ. ಈಗ ಶಾಲೆ ನಡೆಸಲಾಗುತ್ತಿದೆ. ಈ ಮಠದ ಎದುರಿಗೆ ಹಳೆಯದಾದ ಒಂದು ಬಾವಿ ಇದೆ. ಈ ಬಾವಿಯಲ್ಲಿ ಒಂದು ಸುರಂಗ ಮಾರ್ಗವಿದ್ದು, ಅದು ಶ್ರೀಶೈಲಕ್ಕೆ ಹೋಗಿ ಮುಟ್ಟುತ್ತದೆ ಎಂದು ಹೇಳಲಾಗುತ್ತದೆ. ಈ ಎಲ್ಲ ಸಂಗತಿಗಳು ಇದೊಂದು ಶರಣರ ನೆಲೆ ಎಂಬುದನ್ನೇ ಸೂಚಿಸುತ್ತವೆ.

ಬಸವತೀರ್ಥದ ಕೆಳಗೆ ಒಟ್ಟಿಗೆ ೧೨೦ ಎಕರೆ ಜಮೀನಿದೆ. ಈ ಸ್ಥಳ ಕಲ್ಲೂರ, ಹುಮ್ನಾಬಾದ ಹಾಗೂ ಗಡವಂತಿ ಮೂರು ಗ್ರಾಮಗಳ ಸೀಮೆಯ ಮೇಲಿರುವುದು ಒಂದು ವಿಶೇಷ. ಈ ಮಠದ ಉಸ್ತುವಾರಿ ನೋಡಿಕೊಳ್ಳುವವರು ಈ ಪೀಠಕ್ಕೆ ಸಂಬಂಧಿಸಿದವರು ಇಂಗಳೇಶ್ವರದ ಸ್ವಾಮಿಗಳು ಎಂಬುದು ಗಮನಾರ್ಹ ಸಂಗತಿ ಎನಿಸುತ್ತದೆ.


ಮಾಹಿತಿ: ಶ್ರೀಮತಿ ಬೋರಮ್ಮ ಸಂಗಯ್ಯ ಹಿರೇಮಠ, ಅಂಬಳೂರು.
ಮಾಣಿಕಪ್ಪ ತಿಪ್ಪಣ್ಣ ಚಪ್ಪೆ, ಯರಭಾಗ
ಶ್ರೀ ಅಣ್ಣಪ್ಪ ನೇಳಗಿ, ಕಲ್ಲೂರ



ಬಸವ ಮಠ



ಬಸವತೀರ್ಥ ಬಾವಿ



ವೀರಭದ್ರೇಶ್ವರ ಗುಡಿ ಎಂದು ಹೇಳುವ ಹಳೆಯ ಗುಡಿ

## ಹುಮ್ನಾಬಾದ ತಾಲೂಕು :

### ೩. ಘಾಟಬೋರಾಳ :
### ಶಂಕರದಾಸಿಮಯ್ಯ-ಜೇಡರದಾಸಿಮಯ್ಯನವರ ಗವಿ

ಹುಮ್ನಾಬಾದದಿಂದ ೨೦ ಕಿ.ಮೀ. ದೂರದಲ್ಲಿ ಘಾಟಬೋರಾಳ ಎಂಬ ಗ್ರಾಮವಿದೆ. ದಕ್ಷಿಣ ದಿಕ್ಕನ್ನು ಹೊರತು ಪಡಿಸಿ ಮೂರೂ ದಿಕ್ಕುಗಳಿಗೂ ಘಾಟ ಸುತ್ತುವರೆದಿರುವುದಿರಿಂದ ಈ ಊರಿಗೆ ಘಾಟಬೋರಾಳ ಎಂಬ ಹೆಸರು ಬಂದಿದೆ. ಪ್ಯಾಟಿಧರಿ ಎಂಬ ಊರಲ್ಲಿ ಹಾವುಗಳ ಕಾಟ ವಿಪರೀತವಾಗಿತ್ತಂತೆ. ಆದರೆ ಅಲ್ಲಿರುವ ಹಾವುಗಳು ಊರವರಿಗೆ ಕಚ್ಚದೆ, ಬೇರೆ ಊರಿನಿಂದ ಬಂದವರಿಗೆ ಮಾತ್ರ ಕಚ್ಚುತ್ತಿದ್ದವು



ಶಂಕರದಾಸಿಮಯ್ಯ-ಜೇಡರದಾಸಿಮಯ್ಯನವರ ಗದ್ದುಗೆಗಳಿರುವ ಗವಿ




ಶಂಕರದಾಸಿಮಯ್ಯ-ಜೇಡರದಾಸಿಮಯ್ಯನವರ ಸಮಾಧಿಗಳು

ಎಂದು ಹೇಳಲಾಗುತ್ತದೆ. ಹೀಗಾಗಿ ಈ ಹಾವಳಿಯಿಂದ ತಪ್ಪಿಸಿಕೊಳ್ಳಲು ಘಾಟಕ್ಕೆ ಬಂದು ನೆಲೆಸುತ್ತಾರೆ. ಆಗಿನಿಂದ ಈ ಊರಿಗೆ ಘಾಟಬೋರಾಳ ಎಂದು ಹೆಸರು ಬಂದಿತು ಎನ್ನುತ್ತಾರೆ.

ಗುಡ್ಡದ ಧರಿಗೆ ಪ್ಯಾಟಿಧರಿ ಎಂದು ಕರೆಯುತ್ತಾರೆ. ಈ ಪ್ಯಾಟಿಧರಿ ಘಾಟಬೋರಾಳ ಗ್ರಾಮದ ಉತ್ತರಕ್ಕೆ ಇದೆ. ಇಲ್ಲಿ ಬೆಟ್ಟದ ಸಾಲು ಸುತ್ತಲೂ ಆವರಿಸಿಕೊಂಡು, ನಡುವೆ ತೆಗ್ಗು ಪ್ರದೇಶವಿದ್ದು, ಬಟ್ಟಲಾಕಾರದಲ್ಲಿ ಇದೆ. ಇದನ್ನು ನೋಡಿದರೆ ಬೆಟ್ಟಬಲಕುಂದ ಗ್ರಾಮದ ಶರಣರ ವಾಸಸ್ಥಾನ ಗಂಜಿಕೆರೆಯ ಪರಿಸರ ನೆನಪಿಗೆ ಬರುತ್ತದೆ. ಅಂತಹದೇ ಇನ್ನೊಂದು ಶರಣರ ವಾಸಸ್ಥಾನದಂತಿದೆ ಈ ಘಾಟಬೋರಾಳದ ಪ್ಯಾಟಿಧರಿ ಪ್ರದೇಶ.

ಸುತ್ತಲೂ ಆವರಿಸಿಕೊಂಡಿರುವ ಗುಡ್ಡದ ಸಾಲಿನ ನಡುವೆ, ದಕ್ಷಿಣದದಿಕ್ಕಿಗೆ ಆದರೆ ಉತ್ತರಕ್ಕೆ ಮುಖಮಾಡಿ ಒಂದು ದೊಡ್ಡ ಗವಿ ಇದೆ. ಇದನ್ನು ಶಂಕರ ದೇವಸ್ಥಾನ ಎಂದು ಕರೆಯಲಾಗುತ್ತದೆ. ಶಂಕರಲಿಂಗ (ಶಂಕರದಾಸಿಮಯ್ಯ) ಮತ್ತು ಜೇಡರ ದಾಸಿಮಯ್ಯನ ಹೆಸರಿನಿಂದ ಈ ಗವಿ ಪ್ರಸಿದ್ಧ ಪಡೆದಿದೆ. ಈ ದೊಡ್ಡ ಗವಿಯಲ್ಲಿ ಎರಡು ಗದ್ದುಗೆಗಳಿವೆ. ಒಂದು ಶಂಕರಲಿಂಗ (ಶಂಕರದಾಸಿಮಯ್ಯ), ಇನ್ನೊಂದು ಜೇಡರ ದಾಸಿಮಯ್ಯನದು ಎಂದು ಹೇಳುತ್ತಾರೆ. ಈ ಇಬ್ಬರೂ ಶರಣರು ಇಲ್ಲಿ ಕೆಲದಿನಗಳವರೆಗೆ ಅನುಷ್ಠಾನ ಮಾಡಿದ ಸ್ಥಳ ಇದು ಎಂದು ಹೇಳಲಾಗುತ್ತದೆ.

ಈ ಗವಿಯ ಮುಂದೆ ಹಳೆಗಾಲದ ಅತ್ಯಂತ ವಯಸ್ಸಾದ ಒಂದು ಆಲದ ಮರ ಇದೆ. ಇದಕ್ಕೆ ಕನಿಷ್ಠ ಸಾವಿರ ವರ್ಷಗಳ ಆಯುಷ್ಯವೆಂದು ಊರವರು ಹೇಳುತ್ತಾರೆ. ಈ ಗವಿಯ ಮಗ್ಗುಲಿಗೆ ಒಂದು ಚಿಕ್ಕ ಗವಿ ಕಾಣುತ್ತದೆ. ಇಂತಹ ಇನ್ನೂ ಹಲವಾರು ಗವಿಗಳಿರಬಹುದು. ಅವೆಲ್ಲ ಇಂದು ನಾಶವಾಗಿರುವ ಸಂಭವವಿದೆ. ಎದುರಿಗೆ ಒಂದು ನೀರನ ಹಳ್ಳ ಹರಿಯುತ್ತದೆ. ಒಂದು ಸುಂದರವಾದ ಬಾವಿ ಇದೆ. ಇಲ್ಲಿಯ ವಾತಾವರಣವನ್ನು ನೋಡಿದರೆ, ಇಬ್ಬರಲ್ಲ ಇಲ್ಲಿ ಹಲವಾರು ಶರಣರು ವಾಸವಾಗಿರುವ ಸಾಧ್ಯತೆ ಇದೆ. ಹೀಗಾಗಿ ಇದೊಂದು ಶರಣರ ನೆಲೆಯೇ ಎನಿಸುತ್ತದೆ. ಈಗಲೂ ಆಗಾಗ ಅನೇಕ ಜನ ಸ್ವಾಮಿಗಳು ಅನುಷ್ಠಾನಕ್ಕಾಗಿ ಈ ಸ್ಥಳವನ್ನು ಆರಿಸಿಕೊಂಡ ಉದಾಹರಣೆಗಳನ್ನು ಊರವರು ಕೊಡುತ್ತಾರೆ.

ಶ್ರಾವಣದ ಕೊನೆಗೆ ಅಮವಾಸೆಯ ಮರುದಿನ ಜಾತ್ರೆ ನಡೆಯುತ್ತದೆ. ಇದಕ್ಕೆ ಹ್ವಾಳದ ಹಬ್ಬ ಎಂದೂ ಕರೆಯುತ್ತಾರೆ. ಮೂರು ದಿನ ಈ ಹಬ್ಬ-ಜಾತ್ರೆ ನಡೆಯುತ್ತದೆ. ದನಗಳ ಜಾತ್ರೆಯೂ ಆಗುತ್ತದೆ. ಎರಡು ದಿನ ಕುಸ್ತಿ ನಡೆಯುತ್ತದೆ. ಹಿಂದೆ ಎತ್ತುಗಳ ಕುಸ್ತಿಯೂ ನಡೆಯುತ್ತಿತ್ತಂತೆ. ಕಾರಹುಣ್ಣಿವೆ ಆಚರಿಸಿದಂತೆ ಈ ಜಾತ್ರೆಯನ್ನು ಆಚರಿಸುವ ಸಂಪ್ರದಾಯವಿದೆ. ಈ ಜಾತ್ರೆಯ ಇನ್ನೊಂದು ವಿಶೇಷವೆಂದರೆ, ಗಂಡನ



ಶಂಕರದಾಸಿಮಯ್ಯ-ಜೇಡರದಾಸಿಮಯ್ಯನವರ ಗವಿಯ
ಎದುರಿಗೆ ಇರುವ ಪುಷ್ಕರಣಿ

ಮನೆಯಿಂದ ಹೆಣ್ಣುಮಕ್ಕಳನ್ನು ತಪ್ಪದೇ ಕರೆಸಿಕೊಳ್ಳುವುದು ಈ ಊರಿನ ರೂಢಿ. ಹಳ್ಳಿಖೇಡ ಕಿನ್ನರಿ ಬ್ರಹ್ಮಯ್ಯನ ಜಾತ್ರೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಅಲ್ಲದೆ ಊರಿನ ಜನ ಬೇರಬೇರೆ ಪ್ರದೇಶಗಳಲ್ಲಿ ನೌಕರಿಗಾಗಿ ಹೋದವರೂ ತಪ್ಪದೇ ಜಾತ್ರೆಗೆ ಬಂದೇ ಬರುತ್ತಾರೆ. ತಪ್ಪಿಸುವುದಿಲ್ಲ ಎಂದು ಹೇಳುತ್ತಾರೆ. ಸುಮಾರು ೨೦ ಸಾವಿರ ಜನಸಂಖ್ಯೆವುಳ್ಳ ಈ ಊರಿನಲ್ಲಿ ಮರಾಠಿ ಮಾತನಾಡುವ ಜನರೇ ಹೆಚ್ಚಿಗಿದ್ದಾರೆ ಎಂದು ತಿಳಿದುಬರುತ್ತದೆ.

ಮಾಹಿತಿ : ದಾನಯ್ಯ ಸ್ವಾಮಿ, ವ. ೬೫. ಶಂಕರದಾಸಿಮಯ್ಯ ಮತ್ತು ಜೇಡರದಾಸಿಮಯ್ಯ ಇವರ ಗದ್ದುಗೆಗಳ ಪಜಾರಿಗಳು.

***



ಶಂಕರದಾಸಿಮಯ್ಯ-ಜೇಡರದಾಸಿಮಯ್ಯನವರ
ಗವಿಯ ಮಗ್ಗುಲು ಇರುವ ಒಂದು ಸಣ್ಣ ಗವಿ

## ಹುಮ್ನಾಬಾದ ತಾಲೂಕು :

### ೪. ದುಬುಲಗುಂಡಿ :
### ಜಡೆಶಂಕರಲಿಂಗ ಗುಡಿ

ಬೀದರ ಜಿಲ್ಲೆಯ ಹುಮ್ನಾಬಾದ  ತಾಲೂಕಿನ ಒಂದು ಗ್ರಾಮ ದುಬುಲಗುಂಡಿ. ಇದು ಹೆಚ್ಚು ಪ್ರಸಿದ್ಧವಾಗಿರುವುದು ದನಗಳ ಸಂತೆಯಿಂದ.  ಆದರೆ ಆ ಊರಿನಲ್ಲಿ ಶಂಕರಲಿಂಗನ ಗುಡಿ ಇರುವುದು ಒಂದು ವಿಶೇಷ. ಬಣಗಾರ ಸಮಾಜದವರು ನೇರವಾಗಿ ಶಂಕರದಾಸಿಮಯ್ಯನ ಭಕ್ತರು. ಆದರೆ ಅವರು ಪೂಜಿಸುವುದು ಶಂಕರದಾಸಿಮಯ್ಯನ ಆರಾಧ್ಯದೈವ ಶಂಕರಲಿಂಗನನ್ನು.  ಅಂದರೆ ಶಂಕರದಾಸಿಮಯ್ಯನ ಮೂಲಕ ಶಂಕರಲಿಂಗನ ಪೂಜೆ ಇಲ್ಲೆಲ್ಲ ನಡೆದಿದೆ. ಶಂಕರಲಿಂಗನ ಗುಡಿ ಹಳೆಯದಾಗಿದೆ.



ಜಡೆಶಂಕರಲಿಂಗನ ಗುಡಿ



ಜಡೆಶಂಕರಲಿಂಗನ ಗುಡಿಯ ಗರ್ಭಗೃಹ

ಈಗ ವಿಶೇಷ ಕಾರ್ಯಕ್ರಮಗಳೇನೂ ನಡೆಯುವುದಿಲ್ಲ ಎನ್ನುತ್ತಾರೆ. ಆದರೆ ಶ್ರಾವಣ ಮಾಸದಲ್ಲಿ ಇಡೀ ತಿಂಗಳು ಭಜನೆ ಮಾಡುತ್ತಾರೆ. ಕೊನೆಯಲ್ಲಿ ಖಾಂಡ ಮಾಡುತ್ತಾರೆ. ಈಗಲೂ ಪ್ರತಿ ಸೋಮವಾರ, ಹುಣ್ಣಿವೆ ಅಮವಾಸೆ ದಿನಗಳಂದು ಕೂಡ ಭಜನೆ ಮಾಡುವುದಾಗಿ ಭಕ್ತರು ಹೇಳಿಕೊಳ್ಳುತ್ತಾರೆ.

ಮಾಹಿತಿ : ಸೂರ್ಯಕಾಂತ ದುಬಲಗುಂಡಿ

ಬೀದರ ತಾಲೂಕು :

## ೧. ಚಿದ್ರಿ :

## ಮೇದಾರ ಕೇತಯ್ಯನವರ ಸಮಾಧಿ-ಗದ್ದುಗೆ

ಶರಣ ಶಿವಕಾಯಕವ ಒರೆಗೆ ಹಚ್ಚುವರಾರು
ಹರಸಹಿತ ಸೋತು ಬದುಕಿಸಿದ । ಮೇದಾರ
ವರ ಕೇತ ನಿನಗೆ ಸರಿಯಾರು

ಬೀದರ ನಗರದ ಹೊರವಲಯದಲ್ಲಿರುವ ವಿಮಾನ ನಿಲ್ದಾಣದ ಹತ್ತಿರ ಇರುವ ಊರು ಚಿದ್ರಿ. ಅಂದು ಬಿದಿರು ಮೆದೆಯಿಂದ ತುಂಬಿ ತುಳುಕುವ ಪ್ರದೇಶ ಇದು. ಇಂಥ ಪರಿಸರದಲ್ಲಿ ಮೇದಾರ ಕೇತಯ್ಯನೆಂಬ ಶರಣನಿದ್ದನು. ಆ ಬಿದರಿನಿಂದ ಬುಟ್ಟಿ ಮೊದಲಾದವನ್ನು ಹೆಣೆದುಕೊಂಡು, ಕಾಲ್ನಡಿಗೆಯಲ್ಲಿ ಬಸವಕಲ್ಯಾಣಕ್ಕೆ ಮಾರಲು ಹೋಗುತ್ತಿದ್ದನಂತೆ. ಮಾರಿ ಬಂದ ಪ್ರತಿಫಲದಿಂದ ಜಂಗಮ ದಾಸೋಹವನ್ನು ನಡೆಸುತ್ತಿದ್ದನಂತೆ.

ಇಂಥ ನಿಷ್ಠಾವಂತ ಭಕ್ತನ ಮಹಿಮೆ ಎಲ್ಲರಿಗೂ ತಿಳಿಯುವಂತಾಗಲಿ ಎಂದು ಬಯಸಿದ ಶಿವನು ಒಮ್ಮೆ ಕೇತಯ್ಯ ಬಿದಿರನ್ನು ಕಡಿಯುತ್ತಿರುವಾಗ ಅದರೊಳಗಿಂದ ಹೊನ್ನ ಮಳೆಗೆರೆಯುವಂತೆ ಮಾಡಿದನಂತೆ. ಅದಕ್ಕೆ ಕೇತಯ್ಯನ ಪ್ರತಿಕ್ರಿಯೆ ಎಂತಹದೆಂದರೆ ಆ ಹೊನ್ನರಾಶಿ ಅವನಿಗೆ ಹುಳದ ರಾಶಿಯಂತೆ ಕಂಡಿತಂತೆ. ಹಾಗೆ ಕೇತಯ್ಯ ಕಾಯಕಕ್ಕಾಗಿ ಬೇರೆ ಬಿದಿರನ್ನು ನೋಡುತ್ತಾನೆ. ಅಲ್ಲಿಯೂ ಹಾಗೆಯೇ ಕಂಡುಬರುತ್ತದೆ. ಅದನ್ನು ನಿರಾಕರಿಸಿದ ಕೇತಯ್ಯ ಆ ಸ್ಥಳ ಬಿಟ್ಟು ಬೇರೆ ಕಡೆ ನೋಡುತ್ತಾನೆ. ಎತ್ತರವಾಗಿ ಬೆಳೆದ ಬಿದಿರ ಗಿಡ ಹತ್ತಿ ಕಡಿಯಲು ಹೋಗಿ ಕಾಲು ಜಾರಿ ಕೆಳಗೆ ಬೀಳುತ್ತಾನೆ. ಬೆನ್ನಿಗೆ ಬಿದಿರು ನಡುತ್ತದೆ. ಹಾಗಿದ್ದಾಗ್ಯೂ ತನ್ನ ಕಾಯಕವನ್ನು ಶ್ರದ್ಧೆಯಿಂದ ಮಾಡಿ, ಅದರ ಫಲದಿಂದ ದಾಸೋಹ ಮಾಡಿ, ಲಿಂಗೈಕ್ಯನಾಗುತ್ತಾನೆ. ಇದನ್ನು ಕಂಡು ಬಸವಣ್ಣನವರೂ ಲಿಂಗೈಕ್ಯರಾಗುತ್ತಾರಂತೆ. ಆಗ ಮಡಿವಾಳಯ್ಯ ಪ್ರಸಂಗವನ್ನು ಅರ್ಥಮಾಡಿಕೊಂಡು ಶಿವನಾಮ ಸ್ಮರಣೆ ಮಾಡಿ, ಇಬ್ಬರೂ ಶರಣರಿಗೆ ಪ್ರಾಣ ಚೈತನ್ಯ ತುಂಬುವಂತೆ ಮಾಡುತ್ತಾನೆ.

ಕೇತಯ್ಯ ನಿನ ಮಡದಿ ಸಾತವ್ವಳೆಂಬವಳು
ಜಾತಿ ಮೇದರರದು ಕಸಬಿನಲಿ । ನಾಡೊಳಗೆ
ನೀತಿ ಶಿವಮತದ ಒರೆಗಲ್ಲು



ಮೇದಾರ ಕೇತಯ್ಯನವರ ಸಮಾಧಿ-ಗದ್ದಿಗೆ

ಹರಮತದ ಹಾಡುಗಳ ಮೊರದೊಳಗೆ ಹಣೆಹಣೆದು
ಕರಡಿಗೆಯ ತುಂಬಿ ಕಲ್ಯಾಣ । ಪೇಟೆಯೊಳು
ಶರಣರಿಗೆ ಮಾರಿ ದಾಸೋಹ

ಬಂದ ಜಂಗಮ ಪರಿಸೆ ಅಂದೆ ಕರಗಿತು ಉಂಡು
ನಂದದಾ ದೀಪ ಕಾಯಕವು । ಕೇತನಿಗೆ
ಎಂದೆನುತ ಹೊಗಳಿ ನಡೆದಿರಲು

***

ವಚನಗಳು : ೧೮
ವಚನಾಂಕಿತ : ಗೌರೇಶ್ವರಾ
ಮಾಹಿತಿ : ಬಸಪ್ಪ ಕಾಳಪ್ಪ ಬಾಯಿದೊಡ್ಡಿ, ಚಿದ್ರಿ

***

## ಬೀದರ ತಾಲೂಕು :

# ಅಷ್ಟೂರು :

# ಅಲ್ಲಮಪ್ರಭು ಸ್ಮಾರಕ

## (ಸುಲ್ತಾನ ಅಹ್ಮದ ಶಹಾವಲಿ ಬಹಮನಿ ದರ್ಗಾ)

ಬೀದರಿನಿಂದ ಈಶ್ಯಾನ್ಯ ದಿಕ್ಕಿಗೆ ಸುಮಾರು ೫ ಕಿ.ಮಿ. ಅಂತರದಲ್ಲಿ 'ಅಷ್ಟೂರು' ಎಂಬ ಚಿಕ್ಕ ಗ್ರಾಮವಿದೆ. ಈ ಗ್ರಾಮ ಬೀದರ ತಾಲೂಕಿನ ವ್ಯಾಪ್ತಿಗೆ ಒಳಪಡುತ್ತದೆ. ಈ ಗ್ರಾಮದ ಹೊರವಲಯದಲ್ಲಿ ಸುಮಾರು ೧೫ ಕ್ಕೂ ಹೆಚ್ಚು ಗುಂಬಜ್‌ಗಳು ಕಾಣಸಿಗುತ್ತವೆ. ಈ ಗುಂಬಜ್‌ಗಳಲ್ಲಿ ಒಂದು ಗುಂಬಜ್ ಮಾತ್ರ ತುಂಬಾ ಭಿನ್ನವಾಗಿದೆ. ಈ ಗುಂಬಜ್‌ಗೆ ಸಾಮಾನ್ಯವಾಗಿ ಎಲ್ಲರೂ ಕರೆಯುವ ರೂಢಿ ಏನೆಂದರೆ 'ಅಷ್ಟೂರಿನ ಅಲ್ಲಮಪ್ರಭು ದೇವರ ಗುಡಿ' ಎಂದು. ಈ ಗುಂಬಜ್ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಪ್ರತೀಕವೆಂಬಂತೆ ಇವೊತ್ತಿಗೂ ಪ್ರತಿಯೊಬ್ಬ ದರ್ಶನಾರ್ಥಿಗೂ ಗೋಚರಿಸದೇ ಇರದು. ಅಲ್ಲಮಪ್ರಭುಗಳು ಈ ಸ್ಥಳದಲ್ಲಿ ಬಂದು ಓಡಾಡಿದ್ದಾರೆಂದು ಜನರು ಹೇಳುತ್ತಾರೆ. ಅಲ್ಲಮಪ್ರಭು ಮತ್ತು ಅವರ ಗೆಳೆಯ ಸುಲ್ತಾನ ಅಹ್ಮದ ಶಹಾವಲಿ ಬಹಮನಿ ಇವರಿಬ್ಬರೂ ಕೂಡಿ ಆಡಿ ಬೆಳೆದು, ಕೊನೆಗೆ ಇಬ್ಬರೂ ಇಲ್ಲಿಯೇ ಐಕ್ಯರಾದರೆಂದು ಅವರ ಸಮಾಧಿಯನ್ನು ತೋರಿಸುತ್ತಾರೆ. ಆ ಸಮಾಧಿ ಸ್ಥಳವೇ ಇಂದಿನ ಅಷ್ಟೂರು ಅಲ್ಲಮಪ್ರಭುದೇವರ ಗುಂಬಜ್‌ವೆಂದು ಹೇಳಲಾಗುತ್ತದೆ. ನ್ಯಾಮತ್ತುಲ್ಲಾವಲಿ ಕಿರ್‌ಮಾನಿ ಇವರು ಸುಲ್ತಾನ ಶಾಹವಲಿ ಬಹಮನಿ ಇವರ ಗುರುವಾಗಿದ್ದರಂತೆ. ಇವರ ಸಮಾಧಿ ಬೀದರಿನಿಂದ ಅಷ್ಟೂರಿಗೆ ಬರುವಾಗ ಎಡಗಡೆಯಲ್ಲಿ ಮೊದಲಿಗೆ ಬರುತ್ತದೆ.

ಈ ಊರಿನ ಬಹುಜನರು ಒಪ್ಪಿಕೊಂಡು ಬಂದಿರುವ ಅಲ್ಲಮಪ್ರಭುದೇವರ ಬಗ್ಗೆ ಮತ್ತು ಸುಲ್ತಾನ ಅಹ್ಮದ ಶಹಾವಲಿ ಬಹಮನಿ ಅವರ ಕುರಿತು ಇಂದಿಗೂ ಒಂದು ಜನಜನಿತ ಕಥೆ ದೊರೆಯುತ್ತದೆ.

ಒಮ್ಮೆ ಅಷ್ಟೂರಿನ ಬ್ರಾಹ್ಮಣರ ಮನೆತನಕ್ಕೆ ಒಬ್ಬ ಮುಸ್ಲಿಂ ಹುಡುಗ ಯಾವುದೋ ಊರಿಂದ ಓಡಿ ಬಂದು ನಾನು ನಿಮ್ಮ ಮನೆಯಲ್ಲಿಯೇ ತಂಗುತ್ತೇನೆಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಬ್ರಾಹ್ಮಣರು ಒಪ್ಪಿ ತಮ್ಮ ಮನೆಯಲ್ಲಿ ಮುಸ್ಲಿಂ ಹುಡುಗನನ್ನು ಇಟ್ಟುಕೊಳ್ಳುತ್ತಾರೆ. ಆ ಹುಡುಗನಿಗೆ ದನ ಕಾಯಲು ಹಚ್ಚುತ್ತಾರೆ. ಆತ ದಿನಾಲು ದನಗಳನ್ನು ಮೇಯಿಸಿಕೊಂಡು ಬರುತ್ತಿದ್ದನು. ಆದರೆ ತಾನು ಮೇಯಿಸುವ ಆಕಳುಗಳ ಮೊಲೆಗೆ ಬಾಯಿಹಾಕಿ ಹಾಲು ಕುಡಿಯುತ್ತಿದ್ದನು. ತಾನು ಹಾಲು ಕುಡಿದರೂ



ಅಲ್ಲಮಪ್ರಭು ಸ್ಮಾರಕ (ಸುಲ್ತಾನ ಅಹ್ಮದ ಶಹಾವಲಿ ಬಹಮನಿ ದರ್ಗಾ)

ಯಜಮಾನರಿಗೆ ಆ ಆಕಳುಗಳು ಹಾಲು ಕೊಡುವಲ್ಲಿ ಯಾವ ವ್ಯತ್ಯಾಸವನ್ನೂ ಮಾಡುತ್ತಿರಲಿಲ್ಲ. ಒಮ್ಮೆ ಬಾಲಕ ಆಕಳು ಕೆಚ್ಚಲಿಗೆ ಬಾಯಿ ಹಾಕಿ ಅಡವಿಯಲ್ಲಿ ಹಾಲು ಕುಡಿಯುವುದನ್ನು ನೋಡಿದ ವ್ಯಕ್ತಿಗಳು ಬ್ರಾಹ್ಮಣರ ಮನೆಗೆ ಬಂದು ಸುದ್ದಿ ಮುಟ್ಟಿಸಿದರು. ಕೂಡಲೇ ಬ್ರಾಹ್ಮಣರು ಆ ಬಾಲಕನಿಂದ ದನ ಮೇಯಿಸುವುದನ್ನು ನಿಲ್ಲಿಸಿ ತಾವೇ ಸ್ವತಃ ದನಗಳನ್ನು ಮೇಯಿಸಹತ್ತಿದರು. ಈಗ ದನಗಳು ಯಥೇಚ್ಛವಾಗಿ ಹಾಲು ಕೊಡದೆ ತಮ್ಮ ಕರುಗಳಿಗೆ ಮಾತ್ರ ಹಾಲು ಕೊಡತೊಡಗಿದವು. ಆಗ ಪುನಃ ಬಾಲಕನನ್ನು ದನಗಳೊಂದಿಗೆ ಕಳುಹಿಸಿದರೆ ಮೊದಲಿನಂತೆ ಹಾಲು ಹಿಂಡಲು ಸುರುಮಾಡಿದವು. ಈ ಮಹಿಮೆಯನ್ನು ತಿಳಿದ ಬ್ರಾಹ್ಮಣರು ಮುಸ್ಲಿಂ ಹುಡುಗನನ್ನು ಮಹಿಮಾ ವ್ಯಕ್ತಿಯೆಂದೇ ಭಾವಿಸಿ ತಮ್ಮಲ್ಲಿ ಇಟ್ಟುಕೊಂಡರು.

ಹೀಗೆ ದನಮೇಯಿಸುವ ಸಂದರ್ಭದಲ್ಲಿ ಒಮ್ಮೆ ಒಂದು ಮರದ ಕೆಳಗೆ ಆ ಬಾಲಕ ನಿದ್ರೆ ಹೋದನಂತೆ. ಆಗ ಇವನಿಗೆ ಐದುಹೆಡೆ ಸರ್ಪವೊಂದು ಬಂದು ನೆರಳು ಹಿಡಿದಿತಂತೆ. ಇದನ್ನು ಕಂಡ ಜನ ಗಾಬರಿಗೊಂಡು ಬ್ರಾಹ್ಮಣರಿಗೆ ಹೇಳಲಾಗಿ, ಅವರು ಬಂದು ನೋಡಿದರು. ಬಾಲಕ ನಿದ್ರೆಹೋಗಿದ್ದನಂತೆ. ಹಾವು ಮಾತ್ರ ಅವನಿಗೆ ನೆರಳಾಗಿ ನಿಂತಿತಂತೆ. ಇದನ್ನು ಕಂಡ ಬ್ರಾಹ್ಮಣರು ಅವನ ಮಹಿಮೆಗೆ ಮನಸೋತು ದೇವಪುತ್ರನೆಂದು ಭಾವಿಸಿ ತಮ್ಮಲ್ಲಿ ಇರಿಸಿಕೊಂಡರಂತೆ.

ಮತ್ತೊಂದು ಸಾರೆ ಅಡವಿಯಲ್ಲಿ ಬಿತ್ತನೆ ಕಾರ್ಯ ನಡೆದಿರುತ್ತದೆ. ಬಾಲಕನಿಗೆ ದನಮೇಯಿಸುವುದನ್ನು ಬಿಡಿಸಿ ಬಿತ್ತನೆ ಮಾಡಲು ಕರೆತರುತ್ತಾರೆ. ಆ ವರ್ಷದ ಬೆಳೆ

ಹುಲುಸಾಗಿ ಬೆಳೆದು ಮನೆ ತುಂಬಾ ದವಸ–ಧಾನ್ಯಗಳು ತುಂಬಿಹೋಗುತ್ತವೆ. ಹುಡುಗ ಮಾತ್ರ ಯಾರ ತಂಟೆಗೂ ಹೋಗದೆ ನೇರವಾಗಿ ತಾನಾಯಿತು ತನ್ನ ಕೆಲಸವಾಯಿತೆನ್ನುವಂತೆ ದಿನವೂ ದುಡಿಮೆಗೆ ಪ್ರಾಮುಖ್ಯತೆ ನೀಡುತ್ತಿದ್ದನು. ಹೀಗಿರುವಾಗ ಒಮ್ಮೆ ಆತನಿಗೆ ರೆಂಟೆ ಹೊಡೆಯಲು ಯಜಮಾನ ಹೇಳುತ್ತಾನೆ. ಬಾಲಕನು ಹೊಲಕ್ಕೆ ಹೋಗಿ ನೇಗಿಲು ಹೊಡೆಯುತ್ತಿದ್ದಾಗ ಭಾರಿಗಾತ್ರದ ದ್ರವ್ಯದ ಗಂಟೊಂದು ಹತ್ತುತ್ತದೆ. ಆಗ ಬಾಲಕ ಈ ಗಂಟು ನಿಮ್ಮ ಹೊಲದಲ್ಲಿ ಸಿಕ್ಕಿದ್ದಕ್ಕೆ ನೀವೇ ಇದರ ಯಜಮಾನರು. ಹಕ್ಕುದಾರರು ಹೀಗಾಗಿ ಈ ಗಂಟು ನಿಮ್ಮದೆಂದು ಹೇಳುತ್ತಾನೆ. ಆದರೆ ಯಜಮಾನರು ಮಾತ್ರ ಇದು ನೀನು ನೇಗಿಲು ಹೊಡೆಯುವಾಗ ದೊರಕಿದ ಗಂಟಾದ್ದರಿಂದ, ನೀನೇ ಇದರ ಹಕ್ಕುದಾರನೆಂದು ಹೇಳುತ್ತಾರೆ. ಕೊನೆಗೆ ಆ ಎಲ್ಲ ಗಂಟನ್ನು ಯಜಮಾನರಿಗೆ ನೀಡಿ ತಾನು ಸಂತೋಷವಾಗಿರಲು ಬಯಸುತ್ತಾನೆ.

ಅದೇ ವರ್ಷ ಇಡೀ ದೇಶಕ್ಕೆ ಬರಗಾಲ ಆವರಿಸುತ್ತದೆ. ಜನ ಕಂಗಾಲಾದಾಗ ತಮ್ಮ ಯಜಮಾನರಲ್ಲಿರುವ ಧನ–ಕನಕವನ್ನು ಬಡಜನತೆಗೆ ಹಂಚಿ ದವಸ–ಧಾನ್ಯಗಳನ್ನು ನೀಡಿ ತನ್ನ ಕೈಯಿಂದ ಬರಗಾಲ ನಿವಾರಣೆ ಮಾಡಲು ಪ್ರಯತ್ನ ಮಾಡುತ್ತಾನೆ. ಬರಗಾಲದಲ್ಲಿ ತಮಗೆ ಸಹಾಯ ಮಾಡಿದ್ದಕ್ಕಾಗಿ ಜನರೆಲ್ಲ ಈ ಬಾಲಕನನ್ನು ದೇವರೆಂದೇ ಬಗೆಯುತ್ತಾರೆ. ಈ ಬಾಲಕ ಬ್ರಾಹ್ಮಣರ ಮನೆಯಲ್ಲಿದ್ದುಕೊಂಡೇ ಇಂಥ ಹಲವಾರು ಪವಾಡಗಳನ್ನು ಮೆರೆದು ದೈವೀಶಕ್ತಿಯ ಪ್ರಭಾವವನ್ನು ಜನರಿಗೆ ತೋರಿಸುತ್ತಾನೆ ಎಂದು ಹೇಳಲಾಗುತ್ತದೆ.



ದರ್ಗಾದ ಮುಂದೆ ಹಿಂದುಗಳ ಹೊಲದಲ್ಲಿ ಇರುವ ಬಾವಿ

ಇದೇ ಕಥೆಯನ್ನು ಹಿಂದೂ ಜನರು ಅಲ್ಲಪ್ರಭುವಿಗೆ ಸಂಬಂಧಿಸಿ ಹೇಳುತ್ತಾರೆ. ಪ್ರಭುದೇವರು ಬಂದು ಈ ಸ್ಥಳದಲ್ಲಿ ಓಡಾಡಿದರೆಂಬ ವದಂತಿಗಳು ಮಾತ್ರ ಇಲ್ಲಿ ತುಂಬಾ ದಟ್ಟವಾಗಿ ಹರಡಿಕೊಂಡಿವೆ. ಈ ಗುಂಬಜ್‌ನಲ್ಲಿ ಅಲ್ಲಮಪ್ರಭು ಮತ್ತು ಸುಲ್ತಾನ ಅಹ್ಮದ್ ಶಹಾವಲಿ ಬಹಮನಿ ಈ ಇಬ್ಬರು ಗೆಳೆಯರು ಐಕ್ಯರಾಗಿದ್ದಾರೆಂದು ಜನ ಹೇಳುತ್ತಾರೆ. ಹೀಗಾಗಿ ಇಲ್ಲಿ ನಡೆಯುವ ಪೂಜೆ, ಜಾತ್ರೆ, ಭಜನೆ ಈ ಮುಂತಾದವುಗಳೆಲ್ಲಾ ತುಂಬಾ ಭಿನ್ನವಾಗಿ ಆಚರಣೆಗೊಳ್ಳುವುದನ್ನು ಕಾಣುತ್ತೇವೆ.

ಪ್ರತಿವರ್ಷ ಹೋಳಿಹುಣ್ಣಿಮೆಯಾದ ಐದನೇ ದಿವಸಕ್ಕೆ ಇಲ್ಲಿ ಜಾತ್ರೆ ಜರಗುತ್ತದೆ. ಈ ಜಾತ್ರೆಗೆ ಗುಲಬರ್ಗಾ ಜಿಲ್ಲೆಯ ಮಾಡಿಹಾಳ(ಮಾಡ್ಯಾಳ) ಗ್ರಾಮದಿಂದ ಒಬ್ಬ ಸ್ವಾಮಿಯವರು ಪಾದಯಾತ್ರೆಯ ಮೂಲಕ ಬರುತ್ತಾರೆ. ಈ ಸ್ವಾಮಿಗಳಿಲ್ಲದೆ ಇಲ್ಲಿನ ಜಾತ್ರೆ ಜರಗುವುದೇ ಇಲ್ಲ. ಈ ಜಾತ್ರೆಯಲ್ಲಿ ಸಾಮಾನ್ಯವಾಗಿ ಆಚರಿಸುವ ಆಚರಣೆಗಳಲ್ಲಿ ದೀಪ ಉರಿಸುವುದು(ಎಣ್ಣೆ), ಖವಾಲಿ ಹಾಡುವುದು, ಸಂದಲ್, ಘಟಾಕಿ ಸಿಡಿಸುವುದು, ಕುಸ್ತಿ, ಭಜನೆ ಮುಂತಾದವು ಮುಖ್ಯವೆನಿಸುತ್ತವೆ.

ಇಲ್ಲಿನ ವಿಶೇಷತೆ ಎಂದರೆ ಒಂದೆಡೆ ಪೂಜೆ ಮಾಡುವ ಹಿಂದೂ ಭಕ್ತಾದಿಗಳು ಕಂಡು ಬಂದರೆ ಅದೇ ಹೊತ್ತಿನಲ್ಲಿ ಇನ್ನೊಂದಡೆ ಪ್ರಾರ್ಥನೆ (ನಮಾಜ್) ಮಾಡುವ ಮುಸ್ಲಿಂ ಬಾಂಧವರನ್ನು ಕಾಣುತ್ತೇವೆ. ಇದರೊಂದಿಗೆ ಮತ್ತೊಂದೆಡೆ ಕಲ್ಗಿ–ತುರಾಯಿ ಹಾಡುವ ಮೇಳವಿದ್ದರೆ ಮತ್ತೊಂದೆಡೆ ಅನ್ನ ದಾಸೋಹ ಕಾರ್ಯ ನಡೆಯುತ್ತದೆ. ಗುಲಬರ್ಗಾ ಜಿಲ್ಲೆಯ ಮಾಡೋಳದಿಂದ ಆಗಮಿಸುವ ಸ್ವಾಮಿಗಳು ಅಲ್ಲಿಯ ಒಂದು ಗುರುಪರಂಪರೆಗೆ ಸಂಬಂಧಿಸಿದವರಾಗಿದ್ದಾರೆ. ಇವರು ಪ್ರತಿವರ್ಷ ನಡೆದುಕೊಂಡು ಅಷ್ಟೂರಿಗೆ ಬರುತ್ತಾರೆ. ಹೀಗೆ ನಡೆದು ಬರುವಾಗ ಒಮ್ಮೆ ಬೀದರ ತಾಲೂಕಿನ ಸಿರ್ಸಿ ಗ್ರಾಮದಲ್ಲಿ ತಂಗಿದ್ದರಂತೆ. ಆಗ ಆ ಊರಿನ ಜನ ಇವರಲ್ಲಿರುವ ಸಾಮಾನುಗಳನ್ನು ಕದ್ದರಂತೆ. ಆಗ ಆ ಊರು ತುಂಬಾ ತೊಂದರೆ ಅನುಭವಿಸಿತಂತೆ. ಕೊನೆಗೆ ಸ್ವಾಮಿಯ ಹೇಳಿಕೆ ಪ್ರಕಾರ ನಡೆದುಕೊಳ್ಳುತ್ತ ಬಂದರಂತೆ.

ಈ ಸ್ವಾಮಿಗಳು ಕಾಲ್ನಡಿಗೆಯಿಂದ ಅಷ್ಟೂರಿಗೆ ಬಂದ ಮೇಲೆ ಅಲ್ಲಿಯ ಲಿಂಗಾಯತರ ಮನೆಯಲ್ಲಿದ್ದ ಮಾಯಮ್ಮನ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಮಾಡುತ್ತಾರೆ. ಅದನ್ನು ಪಲ್ಲಕ್ಕಿಯಲ್ಲಿಟ್ಟು ಮೆರೆಸುತ್ತ ಅಲ್ಲಮನ ಗುಡಿಯವರೆಗೆ ಬರುತ್ತಾರೆ. ಇದನ್ನು 'ಮಾಯಮ್ಮನ ಉತ್ಸವ' ಎಂದು ಕರೆಯುತ್ತಾರೆ. ಜಾತ್ರೆಯಂದೇ ಈ ಉತ್ಸವ ನಡೆಯುವುದು ವಿಶೇಷವೇ. ಅಲ್ಲಮ 'ಮಾಯಾಕೋಲಾಹಲ' ಎಂದು ಹೇಳುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಇಲ್ಲಿರುವವೆಲ್ಲ ಐದಾರು ಗುಂಬಜಗಳೆ, ಅದ್ಹೇಗೆ ಇದು ಅಲ್ಲಮನಿಗೆ ಸಂಬಂಧಿಸಿದ್ದಾಗುತ್ತದೆ ಎಂದರೆ, ಮೊದಲಿನ ಸ್ಮಾರಕಗಳನ್ನೆಲ್ಲ ತೆಗೆದುಹಾಕಿ ಗುಮ್ಮಜಗಳನ್ನು ನಿರ್ಮಿಸಲಾಗಿದೆ ಎನ್ನುತ್ತಾರೆ. ಇಂಥಲ್ಲಿ ಸೌಹಾರ್ದತೆ ಮಾತ್ರ ಗಮನಿಸುವುದು ಅನಿವಾರ್ಯ.

***

ಬೀದರ ತಾಲೂಕು :

## ೩. ರೇಕುಳಕಿ :
## ಬಹುರೂಪಿ ಚೌಡಯ್ಯನವರ ನೆಲೆ

ಶಿವರೂಪ ಕಾಯಕವ ಶಿವಶರಣ ಚೌಡಯ್ಯ
ಭವದೊಳಗೆ ಮಾಡಿ ಹೆಸರಾದ । ಶರಣನಿಗೆ
ಶಿವ ಮೆಚ್ಚಿ ಕೊಟ್ಟ ಶಿವಪದವ

ಬಹುರೂಪಿ ಚೌಡಯ್ಯನ ತಂದೆ ಜನವಶ, ತಾಯಿ ಧರ್ಮವತಿ. ಇವರು ವೈದಿಕರು. ಬೀದರ ತಾಲೂಕಿಗೆ ಸೇರಿದ ರೇಕುಳಕಿ ಎಂಬ ಊರಿನವನು. ಚೌಡಯ್ಯನ ಹೆಸರಿನೊಂದಿಗೆ ಸೇರಿದ 'ಬಹುರೂಪಿ' ಎಂಬ ವಿಶೇಷಣವು ಅವನ ಕಾಯಕವನ್ನು ಸೂಚಿಸುತ್ತದೆ. ಅವನೊಬ್ಬ ಬಹುಮುಖಿ ಕಲಾವಿದನಾಗಿದ್ದನೆಂಬುದನ್ನೂ ಹೇಳುತ್ತದೆ. ಅವನು ಭರತನಾಟ್ಯ ವಿದ್ಯೆಯಲ್ಲಿ ಪ್ರಾವಿಣ್ಯತೆ ಪಡೆದಿದ್ದನು. ವಾದ್ಯ ಬಾರಿಸುವುದರಲ್ಲಿ, ಹಾಡುವುದರಲ್ಲಿ ಪ್ರಸಿದ್ಧನಾಗಿದ್ದನು. ಶಿವನ, ಶಿವಶರಣರ ಮಹಿಮೆಗಳನ್ನು ಪ್ರದರ್ಶಿಸಿ ಜನರಲ್ಲಿ ಭಕ್ತಿಯನ್ನು ತುಂಬಲು, ತತ್ತ್ವವನ್ನು ಸಾರಲು, ನೀತಿಯಿಂದ ಬಾಳುವಂತೆ ಪ್ರೇರೇಪಿಸಲು ಪ್ರಯತ್ನಿಸಿದನು.

ನಾಡೊಳಗೆ ರೇಕಳಿಗೆ ಬೀಡು ಶಿವಶರಣರಿಗೆ
ಮೂಡಿ ಶಿವಭಕ್ತಿ ಧರ್ಮವತಿ । ಜನವಶಕೆ
ಚೌಡ ಮಗನಾಗಿ ಹುಟ್ಟಿದನು

ಚೌಡಯ್ಯನು ರೇಕನಾಥರ ಪ್ರಭಾವಕ್ಕೊಳಗಾಗಿ ಲಿಂಗದೀಕ್ಷೆ ಪಡೆದನು. ನಾಗನಾಥಯ್ಯ ಇವನ ಮೋಕ್ಷಗುರುವಾಗಿದ್ದನು. ಈ ಇಬ್ಬರೂ ರೇಕುಳಿಯಲ್ಲಿದ್ದರೆಂದು ಅಲ್ಲಿನ ಜನ ಈಗಲೂ ಹೇಳುತ್ತಾರೆ. ರೇಕನಾಥ, ನಾಗನಾಥರ ಶಿಷ್ಯನಾದ ನಂತರ ಚೌಡಯ್ಯ ಬಹುರೂಪ ಧರಿಸಿ, ಕಲೆ ಪ್ರದರ್ಶಿಸುವ ಕಾಯಕವನ್ನು ಕೈಕೊಂಡನು.

ದೀಕ್ಷೆಗುರು ರೇಕಯ್ಯ ಮೋಕ್ಷಗುರು ನಾಗಯ್ಯ
ಶಿಕ್ಷಕೆ ಗುರುವು ಶಿವಮತವು । ಜಗದೊಳಗೆ
ಭಕ್ಷವೆನಗಾಯ್ತು ಕಾಯಕವು



ಬಹುರೂಪಿ ಚೌಡಯ್ಯನ ಗವಿಯ ಮೇಲೆ ಕಟ್ಟಿರುವ ಮನೆ

ಶಿವಲೀಲೆಯಾಡುತಲಿ ಶಿವಮತವ ಸಾರುತಲಿ
ಭವದ ರೇಕಯ್ಯ ನಾಗಯ್ಯ । ತಂದೆಗಳ
ಶಿವನಡಿಗೆ ಬೆರೆಸಿ ಹಾಡುತಲಿ

ಜನವೆಲ್ಲ ಮೌನಾಗಿ ಮನವೊಪ್ಪಿ ಕೇಳುತಲಿ
ತನುವ ನೀಡಿದರು ಹೊಸ ಮತಕೆ । ಜಗದೊಳಗೆ
ಹೊನಲಾಗಿ ಹರಿದು ಶಿವಬೆಳಕು

ಗುರು ನಾಗಿನಾಥಯ್ಯ ಹರುಷದಲಿ ಚೌಡನಿಗೆ
ಅರುಹಿದರು ಗುಟ್ಟ ಕಾಯಕವ । ನಡೆಸುದಕೆ
ಶರಣ ಗಣಚರಿತೆ ಕುಣಿಯುದಕೆ

ಹೀಗೆ ಗುರುಗಳ ಮಾರ್ಗದರ್ಶನದಲ್ಲಿ ತನ್ನ ಕಾಯಕ- ಕಲೆಯ ಮೂಲಕ ಶಿವನ, ಶಿವಶರಣರ ಮಹಿಮೆಗಳನ್ನು ಪ್ರದರ್ಶಿಸುತ್ತ ಚೌಡಯ್ಯ ನಡೆದನು. ಊರೂರು ತಿರುಗುತ್ತ ಈಗಿನ ಯಾದಗಿರಿ ತಾಲೂಕಿನ ಕೊಟ್ಟಗಿರಿ ಎಂಬಲ್ಲಿಗೆ ಬಂದು ಬಹಳ ದಿನ ಉಳಿಯುತ್ತಾನೆಂದೂ ಅಲ್ಲಿಯ ಅರಸ ಮತ್ತು ಕೆಲ ಆಸ್ಥಾನದ ಜನರ ನಡುವೆ ಕೆಲ ಸ್ಪರ್ಧೆಗಳು ನಡೆದವೆಂದೂ ಅವೆಲ್ಲವುಗಳಲ್ಲಿ ಚೌಡಯ್ಯನವರು ಗೆದ್ದು, ನಂತರ ಕಲ್ಯಾಣದೆಡೆಗೆ ಪ್ರಯಾಣ ಬೆಳೆಸಿದರೆಂದೂ ಕಾವ್ಯಗಳು ಮತ್ತು ಜನಪದ ಹಾಡು ಇವನ ವೃತ್ತಾಂತಗಳನ್ನು ಒರೆಯುತ್ತವೆ.

ರೇಕುಳಕಿ ಗ್ರಾಮದ ಮನೆಗಳ ಆಕಾರ, ಕಟ್ಟಡಗಳ ಕ್ರಮ ಇವನ್ನು ಗಮನಿಸಿದರೆ ಇದು ಸಹಜವಾಗಿಯೇ ಬಹು ಪುರಾತನ ಗ್ರಾಮ ಎನಿಸುತ್ತದೆ. ಈ ಊರಿನಲ್ಲಿ ಒಟ್ಟಿಗೆ ೩೪ ಜಾತಿಜನಾಂಗದ ಜನ ವಾಸಿಸುತ್ತಾರೆ. ಇದೊಂದು ಅಪರೂಪದ

ಸಂಗತಿಯೆ. ಈ ಗ್ರಾಮದ ಸುತ್ತಲು ಕೋಟೆ ಇತ್ತೆಂದು ಹೇಳಲಾಗುತ್ತದೆ. ಕೋಟೆಯ ಒಳಗಡೆ ಕುದುರೆ ಕಟ್ಟುವ ಪಾಗಾಗಾಳಿದ್ದವಂತೆ. ಈ ಊರಿನಲ್ಲಿ ಚೌಡಯ್ಯನವರ ಗುರುಗಳಾದ ರೇಖನಾಥ ಮತ್ತು ನಾಗನಾಥ ದೇವಾಲಯಗಳಿದ್ದವೆಂದು ಹೇಳಲಾಗುತ್ತದೆ. ಆದರೆ ಈಗ ಈ ದೇವಾಲಯಗಳು ಅಲ್ಲಿ ಕಾಣಿಸುವುದಿಲ್ಲ.

ಚೌಡಯ್ಯನವರು ಈ ಊರಿಗೆ ಸಂಬಂಧಿಸಿದವರು ಎನ್ನುವುದಕ್ಕೆ ಕೆಲವು ಸೂಚನೆಗಳು ನಮಗೆ ಇಲ್ಲಿ ದೊರೆಯುತ್ತವೆ. ಚೌಡಯ್ಯನ ವಚನಾಂಕಿತದಲ್ಲಿ ಇರುವ ರೇಖನಾಥ ಮತ್ತು ನಾಗಿನಾಥ ಎಂಬ ಹೆಸರುಗಳು ಇಲ್ಲಿ ಪ್ರಸಿದ್ಧವಾಗಿವೆ. ರೇಖನಾಥನ ದೇವಾಲಯ ಇರುವ ಸ್ಥಳವನ್ನು ಈ ಊರಿನ ಜನ ತೋರಿಸುತ್ತಾರೆ. ಊರ ಹೊರಗಿನ ಈ ಸ್ಥಳದಲ್ಲಿ ಈಗ ಬಡಿಗ ಮನೆತನಕ್ಕೆ ಸೇರಿದ ನಾರಾಯಣರಾವ ಸುತಾರ ಎನ್ನುವವರು ಒಂದೆರಡು ಕೋಣೆಗಳನ್ನು ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಅವರೇ ತಮ್ಮ ಮನೆ ಒಂದು ಹಳೆಯ ದೇವಾಲಯ ಇದ್ದ ಸ್ಥಳದಲ್ಲಿ ಇದೆ ಎಂದು ಹೇಳುತ್ತಾರೆ. ಈ ಮನೆಯ ಮುಂದೆ ಒಂದು ತೀರ ಪುರಾತನವಾದ ಬಾವಿ ಇದೆ. ಈ ಮನೆಯ ಪೂರ್ವದ ಗೋಡೆಗಳ ಮಗ್ಗುಲಿಗೆ ಕೋಣೆಗಳನ್ನು ಕಟ್ಟಿಸಿಕೊಳ್ಳಬೇಕೆಂದು ಅಗೆಯಲು ಹೋದಾಗ ಭಾರೀ ಉದ್ದನೆಯ ಕಲ್ಲುಗಳು ಹತ್ತಿದವು ಎಂದೂ, ಈ



ಬಹುರೂಪಿ ಚೌಡಯ್ಯನ ಗವಿಯ ಮೇಲೆ ಕಟ್ಟಿರುವ ಮನೆಯ
ಮಗ್ಗುಲಿನ ಭಾಗ. ಇಲ್ಲಿ ಅಗೆಯಲು ತೊಡಗಿದಾಗ
ಕೆಳಗೆ ವಿಸ್ತಾರವಾದ ಪೊಳ್ಳು ಕಾಣಿಸಲು ಅದನ್ನು ಮುಚ್ಚಿ ಬಿಟ್ಟ ಸ್ಥಳ



ಬಹುರೂಪಿ ಚೌಡಯ್ಯನ ಗುರುಗಳಾದ ರೇಖನಾಥ, ನಾಗನಾಥರ
ಸಮಾಧಿಗಳು ಹಾಳಾಗಿವೆ. ಸಮಾಧಿ ಮೇಲೆ ಇದ್ದ ಉಬ್ಬು ಶಿಲ್ಪವುಳ್ಳ
ಶಿಲೆಗಳನ್ನು ಒಂದು ಗಿಡದ ಬೊಡ್ಡೆಗೆ ಆನಿಸಿ ಇಡಲಾಗಿದೆ

ಕಲ್ಲುಗಳ ಕೆಳಗೆ ವಿಸ್ತಾರವಾದ ಪೊಳ್ಳು ಕಾಣಿಸಿದ್ದರಿಂದ ಅದನ್ನು ಅಷ್ಟಕ್ಕೆ ನಿಲ್ಲಿಸಿ, ಕಲ್ಲುಗಳನ್ನು ಪುನಃ ಮೊದಲಿದ್ದಂತೆ ಇಟ್ಟೆವೆಂದೂ ಅವರು ಹೇಳುತ್ತಾರೆ. ಬಹುಶಃ ಮನೆಯ ಕೆಳಗಿನ ಭಾಗದಲ್ಲಿ ವಿಸ್ತಾರವಾದ ಗವಿ ಇರಬೇಕೆಂದು ತೋರುತ್ತದೆ. ಹಾಗೇನಾದರೂ ಇದ್ದರೆ ಅದು ಚೌಡಯ್ಯನವರ ಗವಿ ಇರುಬಹುದಾಗಿದೆ.

ಬಹುರೂಪಿ ಚೌಡಯ್ಯ ಬ್ರಾಹ್ಮಣರ ಮನೆತನದಲ್ಲಿ ಜನಿಸಿದವನು ಎಂಬುದು ಮುಖ್ಯ ಸಂಗತಿ. ಆ ಹಿನ್ನೆಲೆಯಲ್ಲಿ ಮಾಹಿತಿಗಳನ್ನು ಸಂಗ್ರಹಿಸಿದಾಗ, ಇಲ್ಲಿ ಕಲೆಗೆ ಪ್ರಸಿದ್ಧವಾದ ಒಂದು ಬ್ರಾಹ್ಮಣರ ಮನೆತನವಿದೆ. ಚೌಡಯ್ಯನವರು ಪ್ರಸಿದ್ಧ ಸಂಗೀತಗಾರರು ಎಂಬುದನ್ನು ನಾವಿಲ್ಲಿ ನೆನಸಿಕೊಳ್ಳಬೇಕು. ಬ್ರಾಹ್ಮಣರ ಈ ಮನೆತನದಲ್ಲಿ ವಿಶೇಷವಾಗಿ ಸಂಗೀತದಲ್ಲಿ ಪ್ರಸಿದ್ಧರಾದ ಕಲಾವಿದರು ಆಗಿಹೋಗಿದ್ದಾರೆ.

ಗುಂಡುಭಟಜಿ, ನಿರಂಜನಭಾವಜಿ ಇವರಲ್ಲಿ ಪ್ರಸಿದ್ಧರು. ಗುಂಡೇರಾವ ಭಟ್ಟ ಅವರ ಮನೆತನವಿದು. ಇದು ಸ್ಮಾರ್ಥ ಬ್ರಾಹ್ಮಣರ ಮನೆತನ. ಈ ಮನೆತನಕ್ಕೆ ಸೇರಿದ ಗೋಪಾಳರಾವ ಎನ್ನುವವರು ಈಗಲೂ ವಿಭೂತಿ ಧರಿಸಿದ್ದರು, ಕೊರಳಲ್ಲಿ ರುದ್ರಾಕ್ಷಿ ಮಾಲೆ ಧರಿಸಿದ್ದರು. ಈ ಮನೆತನದವರನ್ನು 'ಮಹಾರಾಜ' ಎಂತಲೇ ಊರಿನ ಜನ ಈಗಲೂ ಸಂಬೋಧಿಸುತ್ತಾರೆ. ಇದು ಬಹುದೊಡ್ಡ ಕಲಾವಿದರಿಗೆ ಗೌರವದಿಂದ ಜೋಡಿಸುವ ನಾಮವೇ ಆಗಿದೆ. ಈ ಮನೆತನದ ಮಾಣಿಕರಾವ ಎನ್ನುವವರು ಏಕ್ತಾರಿ ಹಿಡಿದುಕೊಂಡು ಹಾಡುತ್ತ ತಿರುಗುತ್ತಿದ್ದರೆಂದು ನಮಗೆ ಮಾಹಿತಿ ನೀಡಿದ, ಈ ಮನೆತನಕ್ಕೆ ಸೇರಿದ ವೆಂಕಟರಾವ ಕುಲಕರ್ಣಿ ಅವರು ಹೇಳುತ್ತಾರೆ. ಇದೊಂದು ರೀತಿಯಲ್ಲಿ ಸಂತರ ಮನೆ ಎಂತಲೇ ಪ್ರಸಿದ್ಧಿಯನ್ನು ಪಡೆದಿದೆ. ಚೌಡಯ್ಯ ಈ ಮನೆತನಕ್ಕೆ ಸೇರಿದವನು ಎಂದು ತಮ್ಮ ಮನೆಯ ಹಿರಿಯರು ಹೇಳುತ್ತಿದ್ದುದನ್ನು ವೆಂಕಟರಾವ ಕುಲಕರ್ಣಿ ಅವರು ಜ್ಞಾಪಿಸಿಕೊಳ್ಳುತ್ತಾರೆ.



ಬಹುರೂಪಿ ಚೌಡಯ್ಯನ ವಂಶಸ್ಥರ ಮನೆಯಲ್ಲಿ ಗವಿ ಇರುವ ಭಾಗವನ್ನು ಮುಚ್ಚಿ ಹಾಕಲಾಗಿದೆ ಎಂದು ತೋರಿಸಿದ ಸ್ಥಳ. ಮುಚ್ಚಿದ ಎರಡು ಬಾಗಿಲುಗಳ ಒಳಗೆ ಗವಿ ಇದೆ ಎಂದು ಮನೆಯವರು ತೋರಿಸುತ್ತಾರೆ.

ಗುಂಡೇರಾವ ಭಟ್ಟ ಇವರ ವಂಶಜರಾದ ಶ್ರೀ ಗಂಗಾಧರ ಭಟ್ಟ ಇವರು ವಾಸವಾಗಿರುವ ಮನೆಯಲ್ಲಿ ಗವಿ ಇದೆ ಎಂದು, ಅದರ ಮೇಲೆ ಗೋಡೆಗಳನ್ನು ನಿರ್ಮಿಸಲಾಗಿದೆ ಎಂದು ಕರೆದುಕೊಂಡು ಹೋಗಿ ತೋರಿಸಿದರು. ಅಲ್ಲಿ ಗವಿ ಇರುವ ಸ್ಥಳ, ಗೋಡೆ ಕಟ್ಟಿದ ಸ್ಥಳಗಳು ಕಂಡುಬಂದವು. ಇವೆಲ್ಲ ಗುರುತುಗಳನ್ನು ಗಮನಿಸಿದರೆ, ಆ ಮನೆತನಕ್ಕೆ ಚೌಡಯ್ಯ ಸಂಬಂಧಿಸಿರಬಹುದಾಗಿದೆ. ಆದರೆ ಈ ವಿಷಯದಲ್ಲಿ ಇನ್ನೂ ಶೋಧ ನಡೆಯಬೇಕು.

ವಚನಗಳು : ೬೬
ವಚನಾಂಕಿತ: 'ರೇಕಣ್ಣ ಪ್ರಿಯ ನಾಗಿನಾಥಾ'
ಮಾಹಿತಿ : ವೆಂಕಟರಾವ ಕುಲಕರ್ಣಿ

***

## ಭಾಲ್ಕಿ ತಾಲೂಕ

### ೧. ಭಾಲ್ಕಿ :
### ಕುಂಬಾರ ಗುಂಡಯ್ಯನವರ ಸ್ಮಾರಕ

ಕುಂಬಾರ ಗುಂಡಯ್ಯ ತುಂಬಿ ತಿಗರಿಗೆ ಕೆಸರ
ಶಂಭು ಹರನೆಂದು ತಿರುಗಿಸಲು। ಶಿವಕುಣಿದ
ಹಂಬಲಿಸಿ ಜಂಗ ಕಟಿಗೊಂಡ

ಬೀದರ ಜಿಲ್ಲೆಯ ಪ್ರಮುಖ ತಾಲೂಕಾ ಕೇಂದ್ರ ಭಾಲ್ಕಿ. ಪೂಜ್ಯ ಚನ್ನಬಸವ ಪಟ್ಟದ್ದೇವರ ಕಾರ್ಯಕ್ಷೇತ್ರವಾಗಿ ಕರ್ನಾಟಕದ ತುಂಬ ಹೆಸರುವಾಸಿಯಾಗಿದೆ. ಬಸವಕಲ್ಯಾಣದಿಂದ ೪೧ ಕಿ.ಮೀ. ಅಂತರದಲ್ಲಿ ಈ ನಗರ ಇದೆ. ಬಸವಕಲ್ಯಾಣ




ಕುಂಭೇಶ್ವರ ದೇವಾಲಯದ ಹೊರಗಿರುವ ಒಂದು ಗುಡಿ



ಕುಂಭೇಶ್ವರ ದೇವಾಲಯ ಮಂಟಪ ಮತ್ತು ಗರ್ಭಗೃಹ ದೃಶ್ಯ

ಪರಿಸರದ (ಬೀದರ ಜಿಲ್ಲೆಯ) ಶರಣಸ್ಥಾನಗಳು ಸಾಮಾನ್ಯವಾಗಿ ೩೦-೩೫ ಕಿ.ಮೀ.ಗಿಂತ ದೂರ ಇರುವುದು ನಮಗೆ ಕಾಣುವುದಿಲ್ಲ. ಭಾಲ್ಕಿ, ಭಾಲ್ಕಿ ತಾಲೂಕಿನ ಲದ್ದಿ(ಲಾದಾ), ಔರಾದ ತಾಲೂಕಿನ ಧೂಪದ ಮಹಾಗಾಂವ, ಬೀದರ ಗ್ರಾಮಕ್ಕೆ ಹತ್ತಿಕೊಂಡಿರುವ ಚಿದ್ರಿ ಮತ್ತು ಅಷ್ಟೂರ ಹಾಗೂ ಹುಮ್ನಾಬಾದ ತಾಲೂಕಿನ ಬೆಮಳಖೇಡ ಈ ಐದು ಸ್ಥಳಗಳನ್ನು ಬಿಟ್ಟರೆ ಉಳಿದೆಲ್ಲ ಶರಣ ಸ್ಥಳಗಳು ಸುಮಾರು ೩೫ ಕಿ. ಮೀ. ಅಂತರದಲ್ಲಿಯೆ ಇವೆ. ಅವೆಲ್ಲ ಬಸವಕಲ್ಯಾಣ ಮತ್ತು ಹುಮ್ನಾಬಾದ, ಬಸವಕಲ್ಯಾಣ ಮತ್ತು ಬಾಲ್ಕಿ ಈ ಪ್ರಮುಖ ಪಟ್ಟಣಗಳ ಮಧ್ಯ, ಮತ್ತು ಬಸವಕಲ್ಯಾಣ ಸುತ್ತಮುತ್ತಲಿನ ಪ್ರದೇಶದಲ್ಲಿ ವ್ಯಾಪಿಸಿಕೊಂಡಿವೆ.

ಏಳರಿ ಭಾಲ್ಕೇಸೂರ ಎಷ್ಟೊತ್ತ ಮನಗೀರಿ
ಹಾಲ ಕಳವೀದ ಅಭಿಷೇಕ। ನನ ಮನಿಯ
ಬಾಲನ ಕಳವೀದ ಭಜನೀಗಿ

ಭಾಲ್ಕಿ ಪಟ್ಟಣಕ್ಕೆ 'ಭಲ್ಲುಂಕೆ' (ಭಲ್ಲುರೆ) ಎಂದೂ ಕರೆಯಲಾಗುತ್ತಿತ್ತೆಂದು ಹೇಳುತ್ತಾರೆ. ಶಾಸನಗಳಲ್ಲೂ ಭಲ್ಲುಂಕೆ ಎಂಬ ಹೆಸರೇ ದೊರೆಯುತ್ತದೆ. ಭಾಲ್ಕಿಯ

ಭಲ್ಕೇಶ್ವರ, ಕುಂಭೇಶ್ವರ ಹೆಸರಿನ ಲಿಂಗಗಳುಳ್ಳ ದೇವಾಲಯಗಳು ಬಹಳ ಹಳೆಯವು. ಕುಂಭೇಶ್ವರ ದೇವಾಲಯ ಕುಂಬಾರ ಓಣಿಯಲ್ಲಿದೆ. ಒಂದೇ ಆವರಣದಲ್ಲಿ ಎದುರು ಬದುರು ಎರಡು ಚಿಕ್ಕ ಗರ್ಭಗುಡಿಗಳಿವೆ. ಕುಂಭೇಶ್ವರ ದೇವಾಲಯದಲ್ಲಿ ಲಿಂಗ ಇದೆ. ಮುಂದೆ ನಂದಿ ಇದೆ. ಎದುರಿನ ಗುಡಿಯಲ್ಲಿ ಲಿಂಗವಿದೆ. ಆದರೆ ಹೊಸದಾಗಿ ಗಣಪತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಬಲಕ್ಕೆ ಒಂದು ಬಾವಿ ಇದೆ.

ಗೋಸಾಯಿಗಳು ಇದರ ಪೂಜಾರಿಗಳಾಗಿದ್ದಾರೆ. ಗೋಸಾಯಿಗಳು ಮೂಲತಃ ಶಿವನ ಪೂಜಕರು. ಆದರೆ ಬೀದರ ಜಿಲ್ಲೆಯಲ್ಲಿರುವ ಗೋಸಾಯಿಗಳು ಇತ್ತೀಚೆಗೆ ವೈಷ್ಣವ ಮತದ ಕಡೆಗೆ ವಾಲಿರುವುದು ಕಂಡುಬರುತ್ತದೆ. ಈಗ ಸುಮಾರು ಐವತ್ತು ವರ್ಷಗಳ ಹಿಂದೆ ಇರಬಹುದು, ದೇಹಲಿಯಿಂದ ಯಾರೋ ಒಬ್ಬರು ವೈಷ್ಣವ ಧರ್ಮದ ಸಾಧು, ಬೀದರ ಜಿಲ್ಲೆಯಲ್ಲಿರುವ ಪ್ರಮುಖ ನಗರಗಳಲ್ಲಿರುವ ಗೋಸಾಯಿಗಳಿಗೆ ವೈಷ್ಣವ ಧರ್ಮದ ಬೋಧೆ ಕೊಟ್ಟಂತೆ ಹೇಳುತ್ತಾರೆ. ಕೆಲವು ದೊಡ್ಡ ಮನೆತನಗಳಲ್ಲಿ ದತ್ತನನ್ನು ಸ್ಥಾಪಿಸಿರುವುದು ಕಂಡು ಬರುತ್ತದೆ. ಹೀಗಾಗಿ



ಕುಂಬಾರ ಗುಂಡಯ್ಯನದೆಂದು ಹೇಳುವ ಉಬ್ಬು ಶಿಲ್ಪ

ಗೋಸಾಯಿಗಳು ಈಗ ತಮಗೆ ಸಂಬಂಧಿಸಿದ ವಿಷಯಗಳನ್ನು ವೈದಿಕ ಸಂಪ್ರದಾಯಕ್ಕೆ ಸಂಬಂಧಿಸಿ ವಿವರಿಸಲು ಪ್ರಯತ್ನ ಮಾಡುವುದನ್ನು ಕಾಣುತ್ತೇವೆ.

ಭಾಲ್ಕಿಯಲ್ಲಿರುವ ಈ ಗುಡಿಯ ಬಗ್ಗೆಯೂ ಹಾಗೆಯೇ ಆಗಿದೆ. ಸಹಜವಾಗಿ ಪುರಾತನ ಶಿವಲಿಂಗ ಮಂದಿರುವಾಗಿರುವುದರಿಂದ ಶಿವೋಪಾಸಕಾರಾಗಿರುವ ಗೋಸಾಯಿಗಳು ಇಲ್ಲಿಯ ಪೂಜಾರಿಗಳಾಗಿರುವ ಸಾದ್ಯತೆ ಇದೆ. ಈಗ ಅವರು ಇದು ರಾಮಾಯಣ ಕಾಲದ ಗುಡಿ ಎಂದೇ ಹೇಳುತ್ತಾರೆ. ಗುಡಿಯ ಹೊರ ಆವರಣದಲ್ಲಿ ಒಂದು ದೊಡ್ಡ ಗವಿ ಇದ್ದು, ಅದನ್ನೀಗ ಮುಚ್ಚಿದ್ದಾರೆಂದೂ, ಅದರೊಳಗೆ ಸುರಂಗ ಮಾರ್ಗವಿದ್ದು, ಇಲ್ಲಿಂದ ಊರ ಹೊರಗಿರುವ ಸಂಗಮೇಶ್ವರ ದೇವಾಲಯಕ್ಕೆ ಹೋಗಿ ಮುಟ್ಟುತ್ತದೆ ಎಂದೂ ವಿವರಿಸಲಾಗುತ್ತದೆ.

ಭಾಲ್ಕಿಯಲ್ಲಿ ೧೨ ಜ್ಯೋತಿರ್ಲಿಂಗಗಳಿವೆ. ೧. ಭಾಲ್ಕೇಶ್ವರ, ೨. ಕುಂಭೇಶ್ವರ, ೩. ಖಡಕೇಶ್ವರ, ೪. ಲಿಂಗೇಶ್ವರ, ೫. ವೀರಭದ್ರೇಶ್ವರ, ೬. ರಾಮೇಶ್ವರ, ೭. ಸಿದ್ದೇಶ್ವರ, ೮. ಅಡಕೇಶ್ವರ, ೯. ರಾಮಲಿಂಗೇಶ್ವರ, ೧೦. ಧರ್ಮೇಶ್ವರ, ೧೧. ಮಾನಕೇಶ್ವರ, ೧೨. ನೀಲಕಂಠೇಶ್ವರ. ಈ ಎಲ್ಲ ಲಿಂಗಗಳನ್ನೂ ಗೋಸಾಯಿಗಳೇ ಪೂಜೆ ಮಾಡುತ್ತಾರೆ. ಭಾಲ್ಕಿಯಲ್ಲಿ ೧೨ ಗೋಸಾಯಿಗಳ ಮನೆಗಳಿವೆ. ಭಿಕ್ಷೆ ಬೇಡಿ ಉಪಜೀವನ ನಡೆಸುತ್ತಾರೆ ಎಂದು ಪ್ರಮೋದ ಭೂಪಾಲಗಿರಿ ಗೋಸಾಯಿ ಅವರು ಹೇಳುತ್ತಾರೆ. ಇವರು ಈಗಲೂ ರುದ್ರಾಕ್ಷಿ, ವಿಭೂತಿ ಧಾರಣೆ ಮಾಡುತ್ತಾರೆ.



ಭಾಲ್ಕೇಶ್ವರ ದೇವಸ್ಥಾನದ ಒಳಾಂಗಣದ ದೃಸ್ಯ



ಭಾಲ್ಕೇಶ್ವರ ದೇವಸ್ಥಾನದ ಲಿಂಗ

ಲಿಂಗಗಳ ನೆಲೆವೀಡಾದ ಈ ಊರಿನಲ್ಲಿ ಜನಿಸಿದವನು ಲಿಂಗಭಕ್ತನಾದ ಕುಂಬಾರ ಗುಂಡಯ್ಯ. ತನ್ನ ಕಾಯಕದ ಲಯಗಾರಿಕೆಯಿಂದ ಶಿವನನ್ನೇ ತಲೆದೂಗಿಸುವಂತೆ, ಕುಣಿಯುವಂತೆ ಮಾಡಿದ ಕೀರ್ತಿ ಗುಂಡಯ್ಯನಿಗೆ ಇದೆ ಎಂಬುದನ್ನು ಕನ್ನಡ ಕಾವ್ಯ, ರಗಳೆ, ಪುರಾಣಗಳು ಬಣ್ಣಿಸುತ್ತವೆ. ಕುಂಬಾರ ಗುಂಡಯ್ಯನ ಮಡದಿ ಕೇತಲೆಯೂ ಪರಮ ಶಿವಭಕ್ತೆ. ಲಿಂಗಕ್ಕೆ ಪಾವಡ ಹೊದಿಸುವ ನೇಮದಾಕೆ. ಒಂದು ಸಾರೆ ಪಾವಡ ಸಿಗದೆ ಹೋದಾಗ, ತನ್ನ ಚರ್ಮವನ್ನು ಸುಲಿದು ಪಾವಡ ಮಾಡಿ ಹೊದಿಸಿದಳೆಂಬ ಕಥೆ ಇದೆ.

ಗುಂಬಾರ ಗುಂಡಯ್ಯನ ಮಡದಿ ಕಡಗದ ಕೈಯಕಿ
ಕೊಡದ ಮ್ಯಾಲೇನು ಬರದಾಳ ಸೋ। ಕಲಬುರಗಿ
ಶರಣಬಸವನ ಬರದಾಳ ಸೋ

ಈ ಹಾಡಿನಲ್ಲಿ ಕುಂಬಾರ ಗುಂಡಯ್ಯ ಮತ್ತು ಅವನ ಹೆಂಡತಿಯ ಉಲ್ಲೇಖವಾಗಿದ್ದು, ಇದು ಬಹುತೇಕ ಉತ್ತರಕರ್ನಾಟಕದ ಪ್ರತಿ ಹಳ್ಳಿಯಲ್ಲೂ ಹಾಡಲ್ಪಡುತ್ತದೆ. ಇದು ಶರಣ ಕುಂಬಾರ ಗುಂಡಯ್ಯನ ಪ್ರಸಿದ್ಧಿಯನ್ನು ಹೇಳುತ್ತದೆ. ಕುಂಭೇಶ್ವರ ದೇವಾಲಯದ ಮುಂದೆ ಒಂದು ಶಿಲ್ಪವಿದ್ದು, ಅದು ತಿಗರಿಯನ್ನು

ತಿರುಗಿಸುವ ರೀತಿಯಲ್ಲಿದೆ. ಇದು ಕುಂಬಾರ ಗುಂಡಯ್ಯನದೆ ಆಗಿದೆ ಎಂದು ಹೇಳಲಾಗುತ್ತದೆ.

ಹೀಗೆಯೇ ಬಸವಕಲ್ಯಾಣ ತಾಲೂಕಿನ ಗೋರ್ಟಾ ಗ್ರಾಮದಲ್ಲಿಯೂ ಕುಂಭೇಶ್ವರ ದೇವಾಲಯವಿತ್ತೆಂದು ಹೇಳಲಾಗುತ್ತದೆ. ಕುಂಬಾರ ಗುಂಡಯ್ಯಗಳ ಚಿತ್ರವಿರುವ ಶಿಲ್ಪಗಳು ಅಬ್ಬಲೂರು, ಬಳ್ಳಾರಿಗಳಲ್ಲಿ ದೊರೆಯುತ್ತವೆ ಎಂದು ತಿಳಿದುಬರುತ್ತವೆ.

ಶರಣೆ ಕೇತಲೆ :
ವಚನಗಳು : ೨
ವಚನಾಂಕಿತ : ಕುಂಭೆಶ್ವರಲಿಂಗ
ಮಾಹಿತಿ : ಜಾಲಿಂದರ ಮಹೇಂದರ ಪುರಿ, ಭೂಪಾಲಗಿರಿ

***

## ೨. ಉರಿಲಿಂಗಪೆದ್ದಿ ಮಠ

ಭಾಲ್ಕಿಯಲ್ಲಿ ಚೆನ್ನಬಸವ ಪಟ್ಟದ್ದೇವರ ಹಿರೇಮಠ ಸಂಸ್ಥಾನಕ್ಕೆ ಹತ್ತಿಕೊಂಡೇ ಇರುವುದು ಉರಿಲಿಂಗ ಪೆದ್ದಿಗಳ ಮಠ. ಇದು ಶ್ರೀ ಶಿವಯೋಗಿ ಸ್ವಾಮಿ ಅವರು ಸ್ಥಾಪಿಸಿದ ಮಠವಾಗಿದೆ. ಇದಕ್ಕೂ ಮಠದ ಸ್ವಾಮಿಗಳಿದ್ದಾರೆ. ಉರಿಲಿಂಗ ಪೆದ್ದಿಗಳ ಜಯಂತೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರಂತೆ. ಇತ್ತೀಚೆಗೆ ಕಡಿಮೆಯಾಗಿದೆ ಎನ್ನುತ್ತಾರೆ.

***



ಉರಿಲಿಂಗಪೆದ್ದಿಗಳ ಮಠ




ಉರಿಲಿಂಗಪೆದ್ದಿಗಳ ಮಠದ ಅಂಗಳದಲ್ಲಿರುವ ಗದ್ದುಗೆ




ಉರಿಲಿಂಗಪೆದ್ದಿಗಳ ಮಠದ ಗದ್ದುಗೆಯ ಗರ್ಭಗೃಹ

## ಭಾಲ್ಕಿ ತಾಲೂಕು :

### ೨. ಮೋರಂಬಿ :

### ಹಡಪದ ರೇಚಯ್ಯನವರ ಗದ್ದುಗೆ

ಭಾಲ್ಕಿ ತಾಲೂಕಿನ ಮೋರಂಬಿ ಎಂಬ ಗ್ರಾಮವು ಬಸವಕಲ್ಯಾಣದಿಂದ ಪೂರ್ವಕ್ಕೆ ೧೪ ಕಿ.ಮೀ.ದೂರದಲ್ಲಿದೆ. ಇಲ್ಲಿ ಹಡಪದ ರೇಚಯ್ಯ ಎಂಬ ಶರಣರ ಗದ್ದುಗೆ ಇದೆ. ಈ ಶರಣರು ಆಂದ್ರಪ್ರದೇಶದ ಪೆನ್ನಾಗರ ಎಂಬ ಗ್ರಾಮದಲ್ಲಿದ್ದವರು. ಅಲ್ಲಿ ನಡೆದ ಒಂದು ಘಟನೆಯಿಂದಾಗಿ ಆ ಊರನ್ನೇ ಬಿಡಬೇಕಾಗುತ್ತದೆ. ರೇಚಯ್ಯ ವೆಂಗಿ ಭೂಪಾಲನ ಹತ್ತಿರ ವೀಳ್ಯದೆಲೆ ಮಡಿಚಿಕೊಡುವ ಕೆಲಸವನ್ನು ಮಾಡಿಕೊಂಡಿದ್ದರು. ಒಂದು ಸಲ ಭೂಪಾಲನು ವೈಹಾಳಿಯ ದೇಹಶ್ರಮ ಕಳೆದುಕೊಳ್ಳಲು ನದಿ ದಂಡೆಯಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದನು. ಅಲ್ಲಿಯೇ



ಹಡಪದ ರೇಚಯ್ಯನ ಗದ್ದುಗೆ



ಹಡಪದ ರೇಚಯ್ಯನ ಗದ್ದುಗೆ ಇರುವ ಮನೆ

ಹತ್ತಿರದ ಹೊಲವನ್ನು ಒಂದು ಗೂಳಿ ಹೊಕ್ಕು ಬೆಳೆ ನಾಶ ಮಾಡುತ್ತಿರುತ್ತದೆ. ಹೊಲದವರು ಗೂಳಿಯಿಂದ ತಮ್ಮ ಬೆಳೆ ನಾಶವಾಗುತ್ತಿರುವುದನ್ನು ಸಹಿಸದೆ, ಅದನ್ನು ಹೊಲದಿಂದ ಹೊರಗೆ ಓಡಿಸುವ ಪ್ರಯತ್ನ ಮಾಡುತ್ತಾರೆ. ಅವರ ಹೊಡೆತಗಳನ್ನು ಸಹಿಸದೆ ಗೂಳಿ ಸತ್ತು ಹೋಗುತ್ತದೆ. ಇದನ್ನೆಲ್ಲ ನೋಡುತ್ತ ಇರುವ ರಾಜ ತನಗೇನೂ ಸಂಬಂಧವಿಲ್ಲದಂತೆ ಸುಮ್ಮನಿರುತ್ತಾನೆ. ರಾಜನ ಈ ವರ್ತನೆ ರೇಚಯ್ಯನಿಗೆ ಬೇಸರ ತರಿಸುತ್ತದೆ. ಹಿಂದೆ ಮುಂದೆ ನೋಡದೆ, ರೇಚಯ್ಯ ಅರಸನ ಮೇಲೆ ಏರಿ ಹೋಗುತ್ತಾನೆ. ಸೈನಿಕರು ರೇಚಯ್ಯನನ್ನು ಹಿಡಿದು ದಂಡಿಸಲು ಪ್ರಯತ್ನಿಸುತ್ತಾರೆ. ಆದರೆ ರೇಚಯ್ಯ ಅವರನ್ನು ಎದುರಿಸುತ್ತಾನೆ. ರೇಚಯ್ಯನ ಶಕ್ತಿ ಎದುರಿಗೆ ಸೈನಿಕರ ಆರ್ಭಟವೆಲ್ಲ ಅಡಗಿ ಹೋಗುತ್ತದೆ. ಅವರೆಲ್ಲ ಓಡಿ ಹೋಗುತ್ತಾರೆ. ಇಂಥವರ ಜೊತೆ ಬದುಕುವುದಕ್ಕಿಂತ ದಯೆಯನ್ನೇ ಧರ್ಮವೆಂದು ಪ್ರಪಂಚದಾದ್ಯಂತ ಪಸರಿಸಲು ಪ್ರಯತ್ನಿಸುತ್ತಿರುವ ಬಸವಣ್ಣನಿರುವ ಕಲ್ಯಾಣಕ್ಕೆ ಹೋಗಬೇಕೆಂದು ನಿರ್ಧರಿಸುತ್ತಾನೆ.

ಕಲ್ಯಾಣದಲ್ಲಿ ಬಸವಣ್ಣನವರಿಗೆ, ಚೆನ್ನಬಸವಣ್ಣನವರಿಗೆ ವೀಳ್ಯದೆಲೆ ಮಡಚಿಕೊಡುವ ಕಾಯಕವನ್ನು ರೇಚಣ್ಣ ಮಾಡಿಕೊಂಡಿದ್ದನು. ನಂತರ ಆತ ವಾಸಿಸಲು ಬಳಸಿಕೊಂಡ ಊರು ಮೋರಂಬಿ. ಮೋರಂಬಿಯಲ್ಲಿ ರೇಚಯ್ಯನವರು ವಾಸವಾಗಿರುವ ಒಂದು ಮನೆಯನ್ನು ತೋರಿಸಲಾಗುತ್ತದೆ. ಈ ಮನೆಯ ಅಂಗಳ ತುಂಬಾ ವಿಸ್ತಾರವಾಗಿದ್ದು, ಈ ಮನೆಯ ಆವಾರ ಗೋಡೆಗೆ ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ತಲಬಾಗಿಲುಗಳಿವೆ. ಈ ಮನೆಯಲ್ಲಿ ಪೂರ್ವಕ್ಕಿರುವ ಒಂದು

ಕೋಣೆಯಲ್ಲಿ ರೇಚಯ್ಯನ ಗದ್ದುಗೆ ಇದೆ. ಅದನ್ನು ಈಗಲೂ ದಿನವೂ ಪೂಜಿಸಲಾಗುತ್ತದೆ. ಆ ಮನೆಯಲ್ಲಿ ಒಂದು ಕುಟುಂಬ ವಾಸವಾಗಿದೆ. ಈ ಗದ್ದುಗೆ ಇರುವ ಕೋಣೆ ಸ್ವಲ್ಪ ಕೆಳಗಡೆ ಇದೆ. ಗದ್ದುಗೆಯ ಹಿಂಬದಿಗೆ ಉತ್ತರದಿಕ್ಕಿನ ಗೋಡೆಯಲ್ಲಿ ಬಾಗಿಲಾಕಾರದ ಸ್ಥಳವಿದೆ. ಅಲ್ಲಿಂದ ಒಳಗಡೆ ಗವಿ ಇದೆ ಎಂದು ಹೇಳಲಾಗುತ್ತದೆ. ಗದ್ದುಗೆಯನ್ನು ಪುನರುಜ್ಜೀವನಗೊಳಿಸಲೆಂದು ಅಗೆದಾಗ ಅಲ್ಲಿ ದೊರೆತುದೆಂದು ಹೇಳುವ ಒಂದು ಪೀಕದಾನಿ (ಎಲೆ ತಿಂದು ಉಗಳಲು ಬಳಸುವ ಪಾತ್ರೆ)ಇದೆ. ಅದನ್ನು ಈಗ ಗದ್ದುಗೆಯ ಮೇಲೆ ಇಡಲಾಗಿದೆ. ಈಗಲು ಜನ ಈ ಗದ್ದುಗೆಗೆ ನಡೆದುಕೊಳ್ಳುತ್ತಾರೆ. ಹೀಗೆ ಈ ಗದ್ದುಗೆಗೆ ಹರಕೆ ಹೊರುವ ಪದ್ಧತಿ ಮೊದಲಿನಿಂದಲೂ ಇತ್ತೆಂದೂ, ಭಕ್ತರು ಏರಿಸಿದ ಕೆಲ ಹಳೆಗಾಲದ ಗಂಟೆಗಳನ್ನು ತೋರಿಸುತ್ತಾರೆ.

ಮನೆಯ ಆವಾರದ ಗೋಡೆಗೆ ಉತ್ತರಕ್ಕಿರುವ ಪ್ರವೇಶದ್ವಾರದ ಎದುರಿಗೆ ಒಂದು ಕಟ್ಟೆ ಇದೆ. ಆ ಕಟ್ಟೆಯ ಮೇಲೆ ಶರಣರೆಲ್ಲ ಕೂಡಿ ಚರ್ಚೆ ನಡೆಸುತ್ತಿದ್ದರೆಂದು ಹೇಳಲಾಗುತ್ತದೆ. ಆ ಕಟ್ಟೆಯನ್ನು ದೊಡ್ಡದಾಗಿ ಕಟ್ಟಲು ಹಲವಾರು ಬಾರಿ ಪ್ರಯತ್ನ ಮಾಡಿದಾಗ, ನಿಜಾಮನ ಕಾಲದಲ್ಲಿ ಅದನ್ನು ಕಟ್ಟಬಾರದೆಂದು ತಡೆದರೆಂದು ಹೇಳಲಾಗುತ್ತದೆ. ಹೀಗೆ ಮೂರುಬಾರಿ ಪ್ರಯತ್ನ ನಡೆಸಿದರೂ ಅಡ್ಡಿಯಾಗಿದೆ. ಈಗ ಆ ಕಟ್ಟೆಯನ್ನು ದೊಡ್ಡದಾಗಿ ಕಟ್ಟಲಾಗುತ್ತಿದೆ.



ಹಡಪದ ರೇಚಣ್ಣನವರ ಗದ್ದುಗೆ ಇರುವ ಮನೆಯ ಉತ್ತರದ ಬಾಗಿಲಿನ ಎದುರಿಗೆ ಇರುವ ಶರಣರ ಕಟ್ಟೆಯನ್ನು ಪುನರ್ ನಿರ್ಮಿಸುತ್ತಿರುವುದು



ಹಡಪದ ರೇಚಣ್ಣನವರ ಗದ್ದುಗೆ ಇರುವ ಮನೆಯ ಉತ್ತರದ ಬಾಗಿಲು

ಮೋರಂಬಿಯಿಂದ ಅನತಿ ದೂರದಲ್ಲಿರುವ ಗ್ರಾಮಗಳಿಂದ ಶರಣರು ಇಲ್ಲಿಗೆ ಬರುತ್ತಿದ್ದರೆಂದೂ, ಈ ಕಟ್ಟೆಯ ಮೇಲೆ ಅವರೆಲ್ಲ ಅನುಭಾವ ಗೋಷ್ಠಿ ನಡೆಸುತ್ತಿದ್ದರೆಂದೂ ಹೇಳಲಾಗುತ್ತದೆ. ಅನುಭಾವ ಗೋಷ್ಠಿಗಾಗಿ ಬಸವಕಲ್ಯಾಣಕ್ಕೆ ಹೋಗಬೇಕಾದಾಗ ಭಾಲ್ಕಿಯಿಂದ ಕುಂಬಾರ ಗುಂಡಯ್ಯ, ಲಾದಾದಿಂದ ಲದ್ದೆ ಸೋಮಣ್ಣ, ತೊಗಲೂರಿನಿಂದ ಡೋಹರಕಕ್ಕಯ್ಯ ಈ ಮುಂತಾದ ಶರಣರೆಲ್ಲ ಬಂದು ರಾತ್ರಿ ರೇಚಯ್ಯನವರ ಹತ್ತಿರ ತಂಗುತ್ತಿದ್ದರೆಂದೂ, ಅನುಭಾವ ಚರ್ಚೆಗಾಗಿ ಈ ಕಟ್ಟೆಯನ್ನು ಬಳಸುತ್ತಿದ್ದರೆಂದೂ ಹೇಳಲಾಗುತ್ತದೆ.

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಚೆನ್ನಬಸವಣ್ಣ ಅವರೊಂದಿಗೆ ಮಲ್ಲಿಕಾರ್ಜುನ, ರೇಚಣ್ಣ, ಘನಲಿಂಗ ರುದ್ರಮುನಿಗಳು ಮೊದಲಾದವರು ಸೇರಿಕೊಂಡು ಉಳಿವಿಗೆ ಹೋದರಂತೆ. ದಾರಿಯಲ್ಲಿ ಒಂದು ಸಲ ರೇಚಣ್ಣ ಶರಣರಿಗೆ ಎಲೆ ಮಡಚಿಕೊಡುವಾಗ ಬಿಳಿ ಎಲಿ ಬದಲಾಗಿ ಕರಿ ಎಲಿ ಮಡಚಿ ಕೊಟ್ಟದ್ದಕ್ಕೆ ಅವರನ್ನು ಬಿಟ್ಟು ಉಳಿವಿಗೆ ಹೋದರಂತೆ. ನಂತರ ರೇಚಣ್ಣ ಬೆಳಗಾಂವಿಯ ಅಂಕಲಗಿಗೆ ಹೋದರಂತೆ. ಅಂದಿನಿಂದ ಅವರಿಗೆ ಅಡವೆಪ್ಪ, ಅಡವಿಸ್ವಾಮಿ, ಅಡವೀರಸ್ವಾಮಿ ಎಂದೂ ಕರೆಯ ತೊಡಗಿದರಂತೆ.

ವಚನಗಳು : ೯
ವಚನಾಂಕಿತ : ನಿಃಕಳಂಕ ಕೂಡಲ ಚೆನ್ನಸಂಗಮದೇವ
ಮಾಹಿತಿ : ಷಣ್ಮುಕಪ್ಪ ಹಾಗೂ ಶಿವರಾಜ ಉಚ್ಚೇರಿ ಸಹೋದರರು,
ಶ್ರೀ ಶ್ರೀಮಂತ ಕಾಗೇರಿ

***

## ಭಾಲ್ಕಿ ತಾಲೂಕು :

# ೩. ಲದ್ದೆ :

# ಲದ್ದೆ ಸೋಮಣ್ಣ, ಸೋಮೇಶ್ವರ ದೇವಾಲಯ

ಲದ್ದಿದಾವ ಲದ್ದಿ ಸೋಮ । ಹುಲಸೂರಿನಲಿ ನಿತ್ತೆ ನೇಮ ।
ಹುಲ್ಲ ಮಾರಿ ಹೆಸರ ಪಡೆದಯ್ಯ । ಲದ್ದಿಯ ಸೊಮಣ್ಣ ।
ಹುಲ್ಲ ಮಾರಿ ಹೆಸರ ಪಡೆದಯ್ಯ

ಬೀದರ ಜಿಲ್ಲೆಯ ಬಾಲ್ಕಿ ತಾಲೂಕಿನ ಒಂದು ಗ್ರಾಮ ಲಾದಾ. ಈ ಗ್ರಾಮಕ್ಕೆ ಲದ್ದಿ, ಲದ್ದೆ ಎಂತಲೂ ಕರೆಯುತ್ತಾರೆ. ಈ ಗ್ರಾಮದಲ್ಲಿ ದೊಡ್ಡ ಸೋಮೇಶ್ವರ ದೇವಾಲಯ ಇದೆ. ದೇವರ ಹೆಸರನ್ನೇ ಶರಣ ಸೋಮಣ್ಣನಿಗೆ ಇಟ್ಟಂತಿದೆ. ಮುಂದೆ ಅವನು ಸೋಮೇಶ್ವರನನ್ನೇ ತನ್ನ ಆರಾಧ್ಯ ದೈವವನ್ನಾಗಿ ಸ್ವೀಕರಿಸಿದ್ದಾನೆ. ಸೋಮಣ್ಣನಿಗೆ ಸೋಮೇಶ್ವರನಲ್ಲಿ ಅತ್ಯಂತ ನಿಷ್ಠೆ ಭಕ್ತಿ ಇರುವುದನ್ನು ಕಾಣುತ್ತೇವೆ. ತನ್ನ ಊರಿನ ಹೆಸರಿನೊಂದಿಗೆ ಲದ್ದೆಯ ಸೋಮಣ್ಣನೆಂದೇ ಈ ಶರಣ ಪ್ರಸಿದ್ಧನಾಗಿದ್ದಾನೆ. ಇವನ ವೈಯಕ್ತಿಕ ಜೀವನದ ಸಂಗತಿಗಳು ಅಷ್ಟಾಗಿ ಲಭ್ಯವಿಲ್ಲ. ಆದರೂ ಇವನು ಮಾಡಿದ ಕಾಯಕ, ಸ್ವಾಭಿಮಾನದ ಬದುಕು, ಯಾರಿಗೂ ಕೈಚಾಚಿ ಬೇಡಿ ಹಂಗಿಗೊಳಗಾಗದ ಜೀವನ, ದೇವನಾದ ಸೋಮೇಶ್ವರನ ನಿಷ್ಠಾವಂತ ಭಕ್ತನೆಂಬುದು ಮಾತ್ರ ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದುಕೊಂಡು ಬಂದಿದೆ.

ಸೋಮಣ್ಣನ ಕಾಯಕನಿಷ್ಠೆ ಮೆಚ್ಚುವಂತಹದು. ದಿನವೂ ಹುಲ್ಲನ್ನು ಕೊಯ್ದುಕೊಂಡು ಬಂದು, ಹುಲಸೂರು ಗ್ರಾಮಕ್ಕೆ ಹುಲ್ಲನ್ನು ಹೊತ್ತುಕೊಂಡು ಹೋಗಿ ಮಾರಿ ಬರುತ್ತಿದ್ದನಂತೆ. ಅದರಿಂದ ಬಂದ ಪ್ರತಿಫಲವನ್ನು ಗುರು ಲಿಂಗ ಜಂಗಮಕ್ಕೆ ಅರ್ಪಿಸುತ್ತಿದ್ದನಂತೆ. ಅನಂತರ ದಂಪತಿಗಳು ಪ್ರಸಾದ ಸ್ವೀಕರಿಸುತ್ತಿದ್ದರಂತೆ. ಇವನ ಜೀವನದಲ್ಲಿ ನಡೆದಿರಬಹುದಾದ ಎರಡು ಘಟನೆಗಳನ್ನು ಜನರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ.

ಹುಲ್ಲುಕೊಯ್ದು ಹೊತ್ತುಕೊಂಡು ಹುಲಸೂರಿಗೆ ಹೋಗಿ ಮಾರಿಬರುವ ಕಾಯಕಜೀವಿಯ ಭಕ್ತಿಗೆ ಮೆಚ್ಚಿದ ಶಿವನಿಗೆ ಇವನ ಕಾಯಕ ನಿಷ್ಠೆಯನ್ನು ಪರೀಕ್ಷಿಸಬೇಕೆನಿಸುತ್ತದೆ. ಇವನ ಹುಲ್ಲಿನ ಹೊರೆ ಅಗ್ಘವಣಿ ಹೊನ್ನಯ್ಯನ ಕಂಬಿಯ





ಸೋಮೇಶ್ವರ ದೇವಾಲಯ

ಹಾಗೆ ಅಂತರದಲ್ಲಿಯೇ ಹೋಗುತ್ತಿತ್ತಂತೆ. ತಲೆಬಿಟ್ಟು ಒಂದಡಿ ಅಂತರ ಇರುತ್ತಿತ್ತಂದೆ. ಆಗ ಶಿವನು ಹುಲ್ಲಿನ ಹೊರೆಯ ಮಧ್ಯ ಒಂದು ಕಲ್ಲನ್ನು ಇಡುತ್ತಾನಂತೆ. ಸೋಮಣ್ಣ ಹುಲ್ಲಿನ ಹೊರೆ ಎತ್ತಲು ಹೋದಾಗ ವ್ಯತ್ಯಾಸ ಗೊತ್ತಾಗುತ್ತದೆ. ಶಿವನಾಟ ಇದು ಎಂದು ತಿಳಿಯಲು ಅವನಿಗೆ ತಡವಾಗಲಿಲ್ಲ. ಭಕ್ತಿಯಿಂದ ಆ ಹುಲ್ಲಿನ ಹೊರೆಯನ್ನು ತನ್ನ ಕಾಲ ಹೆಬ್ಬೆರಳಿನಿಂದ ಚಿಮ್ಮಲು ಅದು ನೇರವಾಗಿ ಹುಲಸೂರಿನ ಸಂತೆಯಲ್ಲಿ ಹೋಗಿ ಬೀಳುತ್ತದೆಯಂತೆ. ಭಕ್ತನ ಭಕ್ತಿಯ ಶಕ್ತಿಗೆ ಶಿವನೆ ತಲ್ಲಣಿಸುತ್ತಾನೆ. ಎಂದಿನಂತೆ ಭಕ್ತ ಗುರು ಲಿಂಗ ಜಂಗಮ ದಾಸೋಹದಲ್ಲಿ ನಿರತನಾಗುತ್ತಾನೆ. ಶಿವ ಮತ್ತೆ ಅವನಿಗೆ ಏನು ಬೇಕು ಕೇಳು ಎಂದಾಗ, ತಾನು ಯಾರಲ್ಲೂ ಏನನ್ನು ಬೇಡುವುದೂ ಇಲ್ಲ, ಕಾಡುವುದೂ ಇಲ್ಲ ಎಂದೇ ಹೇಳುತ್ತಾನೆ.

ಒಮ್ಮೆ ಸೋಮಣ್ಣನ ಹೆಂಡತಿಗೆ ಆರೋಗ್ಯದಲ್ಲಿ ಏರುಪೇರಾಗಿ ತುಂಬಾ ಬಳಲುತ್ತಿರುತ್ತಾಳೆ. ಆ ದೈಹಿಕ ನೋವಿನ ಸಂಗತಿಯನ್ನು ಗಂಡನ ಗಮನಕ್ಕೆ ತರುತ್ತಾಳೆ. ಅವನಿಂದ ಏನಾದರೂ ಆರೋಗ್ಯ ಸುಧಾರಿಸಿಕೊಳ್ಳುವ ಸೂಚನೆಗಳು ಸಿಗಬಹುದೆಂದು ಆಶಿಸುತ್ತಾಳೆ. ತನ್ನ ನೋವಿನ ನಿವಾರಣೆಗೆ ದೇವರಲ್ಲಿ ಪ್ರಾರ್ಥಿಸಲು ಗಂಡನಿಗೆ ಹೇಳುತ್ತಾಳೆ. ಅವಳ ವಿನಂತಿಯನ್ನು ಗಂಡ ಗಂಭೀರವಾಗಿ ಪರಿಗಣಿಸುವುದಿಲ್ಲ. ಏಕೆಂದರೆ ಮನುಷ್ಯರಲ್ಲಿ ಮಾತ್ರ ಅಲ್ಲ ದೇವರಲ್ಲಿಯೂ ತನಗಾಗಿ, ತನ್ನವರಿಗಾಗಿ ಎಂದೂ ಕೈಯೊಡ್ಡಿ ಬೇಡಿದಾತನಲ್ಲ ಆತ. ಅದೇ ನಿಷ್ಠುರತೆಯನ್ನು ಹೆಂಡತಿಯಲ್ಲಿ ವ್ಯಕ್ತಪಡಿಸುತ್ತಾನೆ.



ಮುಂದಿನದು ಸೋಮೇಶ್ವರ ಲಿಂಗ, ಹಿಂದೆ ಇರುವುದು ಸೋಮಣ್ಣನ ಸಮಾಧಿ

ವ್ಯಾದಿ ಬಂದೊಡೆ ನೆರಳು ಬೇನೆ ಬಂದೊಡೆ ಒರಲು
ಜೀವ ಹೋದಡೆ ಸಾಯಿ ಇದಕ್ಕಾದೇವರ ಹಂಗೇಕೆ?
ಭಾಪು ಲದ್ದೆಯ ಸೋಮಣ್ಣ

ಎನ್ನುತ್ತಾ ತನ್ನ ಕಾಯಕವನ್ನು ಮಾಡಿ ಹುಲ್ಲಿನ ಹೊರೆ ಹೊತ್ತು ಮಾರಲು ಹುಲಸೂರಿಗೆ ಹೋಗುತ್ತಾನೆ. ಆಗ ಭಕ್ತ ಸೋಮಣ್ಣನ ನಿಷ್ಠೆಯನ್ನು ಕಂಡು ಶಿವನಿಗೆ ಕರುಣೆ ಉಂಟಾಗುತ್ತದೆ. ಸೋಮಣ್ಣನಿಲ್ಲದಾಗ ಅವರನ ಮನೆಗೆ ಬಂದು ಅವನ ಹೆಂಡತಿಗೆ ಹೇಳುತ್ತಾನೆ, ನಿನ್ನ ನೋವುಪೀಡಿತ ದೇಹದ ಬಳಲಿಕೆಯನ್ನು ದೂರ ಮಾಡುವೆ, ಆದರೆ ನೀನು ನಾನು ಕೊಟ್ಟ ಔಷಧವನ್ನು ಸ್ವೀಕರಿಸಿದ ನಂತರ ಶಿವ ಶಿವ ಎನ್ನಬೇಕು ಎಂದು ಶರತ್ತು ವಿಧಿಸುತ್ತಾನೆ. ಇದಕ್ಕೆ ಮೊದಲು ಒಪ್ಪದ ಹೆಂಡತಿ, ನಂತರ ಸಮ್ಮತಿಸುತ್ತಾಳೆ. ಶಿವ ಕೊಟ್ಟ ಔಷಧವನ್ನು ಸ್ವೀಕರಿಸಲು ನೋವು ಮಾಯವಾಗಿ, ಆಕೆ ಶಿವ ಶಿವ ಎಂದು ಶಿವನನ್ನು ಸ್ಮರಿಸುತ್ತಾಳೆ.

ಈ ಸಂಗತಿ ಕೇಳಿ ಸೋಮಣ್ಣನಿಗೆ ಸಂತೋಷವಾಗುವ ಬದಲು ಕೋಪ ಬರುತ್ತದೆ. ಹೆಂಡಿತಿಯೇನೋ ನೋವಿನಿಂದ ಮುಕ್ತಳಾದಳು ನಿಜ, ಇದರಿಂದಾಗಿ ತಾನು ಆ ಸೋಮೇಶ್ವರನ ಹಂಗಿಗೆ ಒಳಗಾಗಬೇಕಾಯಿತಲ್ಲ ಎಂಬುದು ಅವನೊಳಗಣ ಚಿಂತೆಯಾಗಿತ್ತು. ಹೀಗೆ ಬೇಡಿಕೊಂಡು ಬದುಕುವುದು ಶರಣಧರ್ಮಕ್ಕೆ ವಿರುದ್ಧವಾದುದು ಎಂದು ಯೋಚಿಸಿ, ಸಿಟ್ಟಿನಿಂದ ಹೆಂಡತಿಯ ಮೂಗನ್ನು ಕೊಯ್ದು ದೂರ ಎಸೆಯುತ್ತಾನಂತೆ. ಆ ಎಸೆದ ಮೂಗು ಎಲ್ಲಿ ಹೋಗಿ ಬಿತ್ತೋ ಆ ಸ್ಮಾರಕವಾಗಿ

ಅಲ್ಲಿ ಒಂದು ಊರೇ ನಿರ್ಮಾಣವಾಯಿತಂತೆ. ಅದಕ್ಕೆ ಮೂಗನೂರು ಎಂದು ಕರೆಯುತ್ತಾರಂತೆ. ಈ ಊರು ಹುಮನಾಬಾದ ತಾಲೂಕಿನ ದುಬಲಗುಂಡಿ ಹತ್ತಿರ ಇದೆಯಂತೆ.

ಆಗ ಶಿವನು ಭಕ್ತನ ಉಗ್ರತೆಯನ್ನು ಶಮನ ಮಾಡಲು ಮತ್ತೆ ಆಗಮಿಸುತ್ತಾನೆ. ಅವನ ಹೆಂಡತಿಯ ಮೂಗನ್ನು ಸರಿಪಡಿಸುತ್ತಾನೆ. ನಿನ್ನಂಥ ನಿಷ್ಠಾವಂತ ಭಕ್ತರನ್ನು ನಾನು ಈವರೆಗೂ ನೋಡಿಲ್ಲ, ನಿನ್ನ ಕೋರಿಕೆ ಏನಾದರೂ ಇದ್ದರೆ ಹೇಳು ಎಂದು ಶಿವನೇ ಭಕ್ತನಲ್ಲಿ ವಿನಮ್ರವಾಗಿ ಕೇಳಿಕೊಳ್ಳುತ್ತಾನಂತೆ. ಆಗಲೂ ಸೋಮಣ್ಣ ತನ್ನ ಮೊಂಡುತನದ ಆತ್ಮಾಭಿಮಾನವನ್ನು ಬಿಟ್ಟುಕೊಡಲಿಲ್ಲ. ಶಿವನೂ ಮಣಿಯಲಿಲ್ಲ. ಮತ್ತೆ ಮತ್ತೆ ಭಕ್ತನಲ್ಲಿ ಶಿವನೇ ವಿನಂತಿಸಿಕೊಳ್ಳುವ ಪ್ರಸಂಗ ಸೋಜಿಗವಾದುದು. ಭಕ್ತನು ಮಣಿಯಲೇಬೇಕಾಗುತ್ತದೆ. ನೀನೇ ಇಷ್ಟೊಂದು ಹಟ ಮಾಡುವುದಾದರೆ ನೀನು ಸದಾ ನನ್ನ ಮುಂದಿರು ಎಂದು ಸೋಮಣ್ಣ ಕೇಳಿಕೊಳ್ಳುತ್ತಾನಂತೆ. ಭಕ್ತನ ಬಯಕೆಯನ್ನು ಶಿವನು ಒಪ್ಪಿಕೊಳ್ಳುತ್ತಾನೆ.

ನಿನ್ನ ಭಾವಕ್ಕೆ ಮೆಚ್ಚಿದೆನು ನೀನು ಹೇಳಿದಾಂಗ ಕೇಳಿ
ನಿನ್ನ ಮುಂದೆ ಕುಂತಿದೆನಯ್ಯ । ಲದ್ದಿಸೋಮ
ನಿನ್ನ ಮುಂದ ಕುಂತಿದೆನಯ್ಯ

ಎಂದು ಹೇಳಿ, ಶಿವನು ಇಲ್ಲಿ ನೆಲೆಸಿದ್ದಾನೆ ಎಂದು ಜನ ಹೇಳುತ್ತಾರೆ. ಸೋಮಣ್ಣನು ಲಿಂಗೈಕ್ಯನಾದಾಗ ಅವನ ಸಮಾಧಿಯ ಗದ್ದುಗೆಯನ್ನು ಸೋಮೇಶ್ವರ



ಸೋಮೇಶ್ವರ ಗುಡಿಯಲ್ಲಿರುವ ಸೋಮಣ್ಣನ ಸಮಾಧಿ

ಗುಡಿಯಲ್ಲಿ ಸೋಮೇಶ್ವರಲಿಂಗದ ಹಿಂದೆ ನಿರ್ಮಿಸಿ, ಅದಕ್ಕೆ ಲದ್ದೆಸೋಮಣ್ಣನ ಗುಡಿ ಎಂದು ಜನ ಕರೆಯುತ್ತ ಬಂದಿದ್ದಾರೆ ಎಂದು ಹೇಳುತ್ತಾರೆ.

ಲದ್ದೆಯ ಸೋಮೇಶ್ವರ ಗುಡಿಯಲ್ಲಿ ಗೋಡೆಗೆ ಆನಿಕೊಂಡಂತೆ ಒಂದು ಲಿಂಗವಿದ್ದರೆ, ಅದರ ಮುಂದೆ ಮತ್ತೊಂದು ಲಿಂಗವಿದೆ. ಊರಿನ ಜನ ಹೇಳುವಂತೆ ಗೋಡೆಗೆ ಆನಿದಂತೆ ಇರುವ ಲಿಂಗ ಅದು ಸೋಮಣ್ಣನ ಸಮಾಧಿ ಆಗಿದ್ದು, ಅದರ ಮುಂದೆ ಸೋಮೇಶ್ವರಲಿಂಗವಿದೆ ಎನ್ನುತ್ತಾರೆ. ಅಂದರೆ ಹುಲ್ಲೂರಿನಲ್ಲಿರುವುದು ಸೋಮಣ್ಣನ ಸಮಾಧಿ ಅಲ್ಲ ಎಂಬುದು ಲದ್ದಿಯ ಹಿರಿಯರ ಭಾವನೆಯಾಗಿದೆ.

ಕೊನೆಗಾಲದಲ್ಲಿ ಸೋಮಣ್ಣ ಉಳಿದುಕೊಂಡದ್ದು ಲದ್ದಿಯಲ್ಲಿ, ಮತ್ತು ಆತ ಐಕ್ಯನಾದದ್ದು ಸೋಮೇಶ್ವರಲಿಂಗದಲ್ಲಿ ಎಂಬುದು ಅವರ ಭಾವನೆ. ಹೀಗಾಗಿ ಹುಲ್ಲೂರಿನಲ್ಲಿರುವುದು ಸೋಮಣ್ಣನ ತೋರುಗದ್ದುಗೆ ಆಗಿರಬಹುದೇನೋ. ಏಕೆಂದರೆ ಸೋಮಣ್ಣನು ಮಾಡುವ ಕಾಯಕದ ಊರು ಹುಲ್ಲೂರು. ಆತನ ಸ್ವಂತ ಊರು ಲದ್ದಿಯೇ. ಆತ ಪ್ರಸಿದ್ಧನಾಗಿರುವುದು ಲದ್ದೆಯ ಸೋಮಣ್ಣನೆಂದು. ತನ್ನ ಕೊನೆಗಾಲವನ್ನು ಆತ ಲದ್ದಿಯಲ್ಲಿಯೇ ಕಳೆದಿರಬಹುದಾಗಿದೆ.

ಸೋಮಣ್ಣನ ಗುಡಿಯ ಕೆಳಗೆ ಸುಮಾರು ೮ ಎಕರೆ ಜಮೀನಿದ್ದು, ಅದನ್ನು ಯಾರೋ ಒಬ್ಬರು ತಮ್ಮ ಸ್ವಂತ ಜಮೀನಿನಂತೆ ಬಳಸುತ್ತಿದ್ದಾರೆಂದು ಖೇದ ವ್ಯಕ್ತಪಡಿಸುತ್ತಾರೆ. ಈ ಊರಿನಲ್ಲಿರುವ ಸಂಪ್ರದಾಯದಂತೆ ಲಾದಾದಲ್ಲಿ ಯಾರ ಮನೆಯಲ್ಲಿ ಎಂತಹದೇ ಸಣ್ಣ-ದೊಡ್ಡ ಕಾರ್ಯಕ್ರಮಗಳಾಗಲಿ ಸೋಮಣ್ಣನಿಗೆ ವಿಶೇಷವಾಗಿ ಪೂಜೆ ಸಲ್ಲಿಸುವ ಪದ್ಧತಿ ಇದೆ. ಇಲ್ಲಿಯ ವಿಶೇಷ ಪೂಜಾ ಪದ್ಧತಿ ಎಂದರೆ ಸೋಮಣ್ಣನಿಗೆ ಎಲೆ ಏರಿಸುವುದು. ಅದಕ್ಕಾಗಿ ಸೋಮಣ್ಣನ ಒಂದು ಪ್ರತ್ಯೇಕ ಉತ್ಸವ ಮೂರ್ತಿಯೇ ಇದೆ. ಅದನ್ನು ಕಾರ್ಯಕ್ರಮ ಮಾಡುವವರು ತಮ್ಮ ಮನೆಗೆ ಒಯ್ದು, ಅಲ್ಲಿಯೇ ಪ್ರತಿಷ್ಠಾಪಿಸಿ ಎಲೆ ಪೂಜೆ ಸಲ್ಲಿಸುತ್ತಾರೆ.

ಸೋಮೇಶ್ವರ ಲಿಂಗಕ್ಕೆ ಹರಕೆ ಹೊರುವ ಪದ್ಧತಿಯೂ ಇದೆ. ಸೋಮೇಶ್ವರ ಲಿಂಗಕ್ಕೆ ವೀಳ್ಯದೆಲೆಗಳನ್ನು ಜೋಡಿಸಿ, ಲಿಂಗದ ಗೋಳಕದ ಮೇಲೆ ಅಕ್ಕಿ ತುಂಬಿದ ಕೊಬ್ಬರಿ ಬಟ್ಟಲನ್ನು ಇಟ್ಟು, ಅದರ ಮೇಲೆ ಚುಟ್ಟದಾಕಾರದಲ್ಲಿ ಸುತ್ತಿದ ಎಲೆಯನ್ನು ಇಟ್ಟು ಅದರ ಮೇಲೆ ಹೂವು ಇಡುತ್ತಾರೆ. ಇಷ್ಟಾರ್ಥ ಈಡೇರುವುದಾದರೆ ಆ ಹೂವು ಕೆಳಗೆ ಬೀಳುತ್ತದೆ ಎಂಬ ನಂಬುಗೆ ಇದೆ.

ಹೀಗೆ ಯಾವುದೇ ಪೂಜೆ ಸಲ್ಲಿಸುವಾಗ ಅವರಿಗೆ ಸೋಮಣ್ಣ ಬೇರೆ, ಸೋಮೇಶ್ವರ ಬೇರೆ ಅಲ್ಲ ಎಂಬ ಭಾವನೆ ಇರುವುದು ಕಂಡುಬರುತ್ತದೆ. ಯಾವುದೇ ಪೂಜೆ, ಯಾವುದೇ ಹರಕೆ ಎರಡೂ ಲಿಂಗಗಳಿಗೂ ಸಲ್ಲುತ್ತದೆ ಎಂಬುದು ಲಾದಾ ಗ್ರಾಮದ ಜನರ ಭಾವನೆಯಾಗಿದೆ.

ವಚನಗಳು : ೧,

ವಚನಾಂಕಿತ : ಭಾಪು ಲದ್ದೆಯ ಸೋಮ

ಮಾಹಿತಿ : ಬಸವರಾಜ ಲಾಧಾ, ಕೈಲಾಸ ರಾಮಲಿಂಗಯ್ಯ ಸ್ವಾಮಿ, ಓಂಕಾರೆಪ್ಪ ಮೂಲಗೆ, ಶ್ರೀಮಂತರಾವ ಪಾಟೀಲ, ಚಂದ್ರಕಾಂತ ಪಾಟೀಲ, ವಿಶ್ವನಾಥ.

ನೋಡಿ : ಹುಲ್ಸೂರು, ತಾ. ಬಸವಕಲ್ಯಾಣ, ಜಿ. ಬೀದರ

***

## ಲದ್ದಿಯ ಸೋಮಣ್ಣನ

ಲದ್ದಿದಾವ ಲದ್ದಿ ಸೋಮ । ಹುಲಸೂರಿನಲಿ ನಿತ್ತೆ ನೇಮ ।
ಹುಲ್ಲ ಮಾರಿ ಹೆಸರ ಪಡೆದಯ್ಯ । ಲದ್ದಿಯ ಸೊಮಣ್ಣ ।
ಹುಲ್ಲ ಮಾರಿ ಹೆಸರ ಪಡೆದಯ್ಯ ॥ ೧ ॥

ನಾನು ಹುಟ್ಟಿಸಿದಾಗ ಹುಟ್ಟಿ । ನಾನು ಬೆಳಸಿದಾಗ ಬೆಳೆದೆ
ನನ್ನ ನಾಮ ನುಡಿಯಲ್ಲಿಲ್ಲಯ್ಯ । ಲದ್ದಿಯ ಸೋಮಣ್ಣ ।
ನನ್ನ ನಾಮ ನುಡಿಯಲ್ಲಿಲ್ಲಯ್ಯ ॥ ೨ ॥



ಸೋಮೇಶ್ವರನಿಗೆ ಪೂಜೆ ಸಲ್ಲಿಸುವ ಮೂರ್ತಿ

ಮಾಯದಿಂದೆ ಶಿವನು ಬಂದು । ಏಳು ಗಜದ ಕಲ್ಲ ತಂದು
ಹೊರಿದಾಗ್ಹಾಕಿ ಕಟ್ಟಿದರಯ್ಯ । ಮಹಾದೇವ
ಹೊರಿದಾಗ್ಹಾಕಿ ಕಟ್ಟಿದರಯ್ಯ ॥ ೩ ॥

ಹೊರಿ ಎತ್ತಿ ತಿಳಿದು ನೋಡಿ ಕಳ್ಳ ನಿನ್ನಾಟ ಮಾಡಿದೆಂದು ।
ಉಂಗುಷ್ಟದಲ್ಲಿ  ಎತ್ತಿ ಹೊಡೆದಯ್ಯ । ಲದ್ದಿಯ ಸೋಮಣ್ಣ
ಉಂಗುಷ್ಟದಲ್ಲಿ ಎತ್ತಿ ಹೊಡೆದಯ್ಯ ॥ ೪ ॥

ಉಂಗುಷ್ಟಿಯಲ್ಲಿ ಎತ್ತಿ ಹೊಡೆದು । ಹುಲಸೂರ ಸಂತೆಯೊಳು ಬಿದ್ದು ।
ಹುಲ್ಲ ಮಾರಿ ಸೌದೆ ತಂದಯ್ಯ । ಲದ್ದಿಯ ಸೋಮಣ್ಣ ।
ಹುಲ್ಲ ಮಾರಿ ಸೌದೆ ತಂದಯ್ಯಾ ॥ ೫ ॥

ಹುಲ್ಲ ಮಾರಿ ಸೌದೆ ತಂದು । ಮಡಿಯಲಿಂದೆ ಅಡಿಗೆ ಮಾಡಿ ।
ಪರಮಾತ್ಮಗ ಸಲ್ಲಿಸಿದೇಳಯ್ಯ । ಲದ್ದಿಯ ಸೋಮಣ್ಣ ।
ಪರಮಾತ್ಮಗ ಸಲ್ಲಿಸಿದೇಳಯ್ಯ । ॥ ೬ ॥

ದೇವ ಭಕ್ತ ಇಬ್ರೂ ಕೂಡಿ । ಊಟವನ್ನೂ ಮಾಡಿದಾರು ।
ಏನು ಬೇಡತಿ ಹೇಳು ನೀ ಶರಣ । ಬೇಡಿದ್ದು ಕೊಡುವೆ ನಾ ।
ಏನು ಬೇಡತಿ ಬೇಡು ನೀ ಶರಣ ॥ ೭ ॥

ನಾನು ಏನು ಬೇಡದಿಲ್ಲ । ಬೇಡಿ ನಾನು ಕಾಡುವದಿಲ್ಲ ।
ಎನ್ನ ಮುಂದೆ ಕುಂತೆ ಬಿಡರಯ್ಯ । ಮಹಾದೇವ ।
ಎನ್ನ ಮುಂದೆ ಕುಂತೆ ಬಿಡರಯ್ಯ । ॥ ೮ ॥

ನಿನ್ನ ಭಾವಕೆ ಮೆಚ್ಚಿದೆನು । ನೀನು ಹೇಳಿದ್ಹಾಂಗ ಕೇಳಿ ।
ನಿನ್ನ ಮುಂದೆ ಕುಂತಿದೆನಯ್ಯ । ಲದ್ದಿಯ ಸೋಮಣ್ಣ ।
ನಿನ್ನ ಮುಂದೆ ಕುಂತಿದೆನಯ್ಯ ॥ ೯ ॥

ಲದ್ದಿ ಗ್ರಾಮವು ಚೆಂದ । ಗುಡಿಯ ಮುಂದ ಗಿಡವು ಚೆಂದ ।
ಗುಡಿಯ ಬಾಗಿಲಿಗೆ ಬಸವಣ್ಣ ಚಂದ । ಮಹಾದೇವನ ।
ಬಾಗಿಲ ಮುಂದೆ ಬಸವಣ್ಣ ಚಂದ ॥ ೧೦ ॥

ಬಾಗಿಲಿಗೆ ಬಸವಣ್ಣ ಚಂದ । ಗುಡಿಯ ಒಳಗೆ ನೀನು ಚಂದ ।
ಮಹಾದೇವ ಚಂದ ನಿನ್ನ ಮುಂದಯ್ಯ । ಲದ್ದಿಯ ಸೋಮಣ್ಣ ।
ಮಹಾದೇವ ಚಂದ ನಿನ್ನ ಮುಂದಯ್ಯ ॥ ೧೧ ॥


ವರುಷಕೊಮ್ಮೆ ಶಿವರಾತ್ರಿ ಲದ್ದಿಯ ಸೋಮಣ್ಣನ ಜಾತ್ರಿ ।
ಲದ್ದಿಗ್ರಾಮದಲ್ಲಿ ಮೆರೆಯುತಾರಯ್ಯ । ಲದ್ದಿಯ ಸೋಮಣ್ಣ ।
ಲದ್ದಿಯಲ್ಲಿ ಮೆರೆಯುತಾರಯ್ಯ ॥ ೧೨ ॥

(ಕೃತಿ : ಲದ್ದೆಯ ಸೋಮಣ್ಣ)

***



ಸೋಮೇಸ್ವರ ದೇವಾಲಯದ ಮುಂಭಾಗದ ನೋಟ



ಸೋಮೇಸ್ವರ ದೇವಾಲಯದ ಹಿಂಭಾಗದ ನೋಟ

## ಔರಾದ ತಾಲೂಕು :

# ಧೂಪದ ಮಹಾಗಾಂವ :
# ಗೊಗ್ಗವ್ವೆಯವರ ಗುಡಿ

ಮೂರು ಲೋಕಗಳರಿಯೆ ಚಾರಮರಾಯನಿಗೆ
ಮಾರಹರನೂರ ದಾರಿಯನ್ನು। ತೋರಿಸಿದ
ನೀರೆ ಗೊಗ್ಗವ್ವೆ ಶರಣಾಗು

ಗೊಗ್ಗವ್ವೆಯ ಹುಟ್ಟಿದ ಊರು ಕೇರಳದ ಅವಲೂರು ಎಂದು ಹೇಳಲಾಗುತ್ತದೆ. ಈ ಊರಿನ ಗೊಗ್ಗೇಶ್ವರನಿಗೆ ಹರಕೆ ಹೊತ್ತು ಗೊಗ್ಗವ್ವೆಯಂಥ ಭಕ್ತಿಸಂಪನ್ನೆಯಾದ ಮಗಳನ್ನು ಹೆತ್ತಿರುತ್ತಾರೆ. ಆಕೆ ಬೆಳೆದಂತೆ ಭಕ್ತಿಯೂ ಬೆಳೆಯುತ್ತಾ ಹೋಗುತ್ತದೆ. ಭಕ್ತಿ ಪರಿಸರದ ಮನೆ, ಭಕ್ತಿಯಿಂದ ಪ್ರಾರ್ಥಿಸಿ ಪಡೆದ ಮಗಳು ಗೊಗ್ಗವ್ವೆ ಆದ್ದರಿಂದ ಆಕೆಗೆ ಲೌಕಿಕ ಜೀವಕ್ಕಿಂತ ಭಕ್ತಿಜೀವನವೆ ಹೆಚ್ಚು ಪ್ರಿಯವಾಗಿದ್ದಂತೆ ತೋರುತ್ತದೆ. ಹೀಗಾಗಿ ತಾಯಿ ತಂದೆಯರು ಈಕೆಯ ಮದುವೆಯ ಪ್ರಸ್ತಾಪ ಮಾಡಿದಾಗ ಓಡಿ ಹೋಗಿ ಗೊಗ್ಗೇಶ್ವರನ ಆಶ್ರಯ ಪಡೆದಿದ್ದಳಂತೆ. ಹೆತ್ತವರು ದೇವರ ಮೇಲೆ ಭಾರ ಹಾಕಿ ಬಂದರಂತೆ. ಈ ವಿಷಯವನ್ನು ಕಿವಿಯಾರೆ ಕೇಳಿದ ಗೊಗ್ಗವ್ವೆ ತಿರುಗಿ ಮನೆಗೆ ಬರುತ್ತಾಳೆ. ಮಗಳ ಮನಸ್ಸಿನಂತೆ ಬದುಕಲು ಅವಕಾಶ ಮಾಡಿಕೊಡುತ್ತಾರೆ. ಆಗ ಅವಳು ದಿನವೂ ಗೊಗ್ಗೇಶ್ವರನಲ್ಲಿಗೆ ಹೋಗಿ ತುಪ್ಪದ ದೀಪವನ್ನು ಹಚ್ಚಿ ಕರ್ಪೂರ, ಲೋಬಾನ, ಅಗರು ಕುಮಾಂಜನದಿಂದ ಧೂಪವನ್ನಿಕ್ಕಿ ಬರುತ್ತಿದ್ದಳಂತೆ. ಅವಳ ಪಾಲಿಗೆ ಇದೊಂದು ಕಾಯಕ ಎನಿಸಿತ್ತು. ಇದುವೇ ಪೂಜೆಯಾಗಿತ್ತು. ಹೀಗಾಗಿ ಅವಳನ್ನು ಅವಳ ಕಾಯಕದೊಂದಿಗೆ ಗುರುತಿಸಿ ಕರೆವ ರೂಢಿ ಬಿದ್ದಿತು. ಅವಾಗಿನಿಂದ 'ಧೂಪದ ಗೊಗ್ಗವ್ವೆ' ಎಂದು ಕರೆಯತೊಡಗಿದರು.

ಅವಳ ಭಕ್ತಿಯನ್ನು ಪರೀಕ್ಷಿಸಲು ಶಿವನೇ ಬರುತ್ತಾನೆ. ಸತಿಯಾಗಲು ಅವಳನ್ನು ಕೇಳಿಕೊಳ್ಳುತ್ತಾನೆ. ಮದುವೆ ಆಗದಿದ್ದರೆ ತನ್ನ ಕೈಯಲಗಿನಿಂದ ಕೊಲ್ಲುವುದಾಗಿಯೂ ಹೆದರಿಸುತ್ತಾನೆ. ಶಿವಭಕ್ತೆ ಆದ ಗೊಗ್ಗವ್ವೆಗೆ ಶಿವನಲ್ಲಿ, ಶಿವನ ಭಕ್ತಿಯಲ್ಲಿ ನಂಬಿಕೆ ಇರುವುದರಿಂದಾಗಿ ಶಿವನನ್ನು ಸ್ತುತಿಸುತ್ತ ನಿಲ್ಲುತ್ತಾಳೆ. ಅವಳ ಧೈರ್ಯದ ನಡೆ-ನಂಬಿಕೆಗೆ ಮಾರುಹೋದ ಶಿವನು ಅವಳಿಗೆ ಪ್ರತ್ಯಕ್ಷನಾಗಿ ಆಕೆ ಬಯಸಿದ್ದನ್ನು ಕೊಡಲು



ಗೊಗ್ಗವ್ವೆಯವರ ಗುಡಿ

ಮುಂದಾಗುತ್ತಾನೆ. ಆಗಲೂ ಆಕೆ ಕೇಳಿದ್ದು ಶಿವಭಕ್ತರ ಹತ್ತಿರ ಇದ್ದುಕೊಂಡು ಅವರಿಗೆ ತನ್ನ ಭಕ್ತಿ ಸಲ್ಲುವಂತೆ ಮಾಡು ಎಂದೇ ವಿನಾ ಬೇರೇನನ್ನೂ ಅಲ್ಲ.

ಶರಣರು, ಶಿವಭಕ್ತರು ಇರುವ ಕಲ್ಯಾಣಕ್ಕೆ ಬಂದು, ಶರಣರ ಮನೆಗಳಿಗೆ ಹೋಗಿ ಧೂಪ ಹಾಕುವ ಕಾಯಕವನ್ನು ಮುಂದುವರೆಸುತ್ತಾಳೆ. ಕಲ್ಯಾಣ ಕ್ರಾಂತಿಯ ನಂತರ ಬೀದರದಿಂದ ೩೦ ಕಿ.ಮಿ. ದೂರದಲ್ಲಿರುವ ಮಹಾಗಾಂವಕ್ಕೆ ಬಂದು ಅಲ್ಲಿ ತನ್ನ ಕಾಯಕ ಮುಂದುವರೆಸುತ್ತಾಳೆ. ಅವಳ ಕಾಯಕದಿಂದಾಗಿಯೇ ಊರಿನ ಹೆಸರಿನ ಹಿಂದೆ ಧೂಪದ ಎನ್ನುವ ಪದ ಸೇರಿಕೊಂಡು 'ಧೂಪದ ಮಹಾಗಾಂವ' ಎಂದು ಪ್ರಸಿದ್ಧಿ ಆಯಿತೆನ್ನಲಾಗುತ್ತದೆ.

ಈ ಊರಿನ ಹೊರವಲಯದಲ್ಲಿ ಗೊಗ್ಗವ್ವೆಯ ಒಂದು ಗುಡಿ ಇದೆ. ಗುಡಿಯಲ್ಲಿ ಒಂದು ಕಲ್ಲು ಮುಚ್ಚಿದ ಸ್ಥಳವಿದ್ದು ಅದು ಸುರಂಗಮಾರ್ಗದ ದಾರಿ ಎನ್ನುತ್ತಾರೆ. ಇಲ್ಲಿಂದ ಮಗ್ಗುಲಿಗೆ ಇರುವ ಕರೆಯವರೆಗೆ ಈ ಸುರಂಗ ಮಾರ್ಗವಿದೆ ಎನ್ನುತ್ತಾರೆ. ಸ್ವಲ್ಪ ದೂರದಲ್ಲಿಯೇ ಮಾಂಜರಾ ನದಿ ಹರಿಯುತ್ತದೆ. ಗೊಗ್ಗವ್ವೆಯ ಗದ್ದುಗೆಗೆ ನಿತ್ಯ ಪೂಜೆ ನಡೆಯುತ್ತದೆ.

ಊರಿನಲ್ಲಿ ಯಾರದೇ ಮನೆಯಲ್ಲಿ ಮದುವೆ ಇತ್ಯಾದಿ ಎಂಥದೇ ಸಣ್ಣಪುಟ್ಟ ಶುಭಕಾರ್ಯಕ್ರಮಗಳು ನಡೆಯುವುದಿದ್ದರೆ ಮೊದಲು ಗೊಗ್ಗವ್ವೆ ಗುಡಿಯ ಮುಂದಿನ ಮೈದಾನಲ್ಲಿರುವ ಒಂದು ಅಗ್ಗಿಷ್ಟಿಕೆಯಲ್ಲಿ ಧೂಪ ಉರಿಸಿದ ನಂತರವೇ ಆ

ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುವ ಪದ್ಧತಿ ಇಟ್ಟುಕೊಂಡು ಬಂದಿದ್ದಾರೆ. ಗೊಗ್ಗವ್ವೆಗೆ ಈ ಊರಿನ ಜನ ಅತ್ಯಂತ ಭಕ್ತಿಭಾವದಿಂದ ನಡೆದುಕೊಳ್ಳುತ್ತಾರೆ. ನಾವು ಗಮನಿಸಿದಂತೆ ವಿಶೇಷವಾಗಿ ಶರಣೆಯರ ಸ್ಥಳಗಳಲ್ಲಿ ಉಡಿತುಂಬುವ ಪದ್ಧತಿ ವಿಶೇಷವಾಗಿ ಕಾಣುತ್ತದೆ. ಗುಡ್ಡಾಪುರ ದಾನಮ್ಮನಿಗೆ ಹೀಗೆ ಉಡಿತುಂಬುವ ಕಾರ್ಯಕ್ರಮ ನಡಯುತ್ತದೆ. ಉಳಿದ ಶರಣೆಯರ ಸ್ಥಳಗಳಲ್ಲೂ ಇಂತಹ ಕಾರ್ಯಕ್ರಮದ ಬಗ್ಗೆ ಹೇಳುವುದನ್ನು ಕೇಳಿದ್ದೇವೆ. ಧೂಪದ ಮಹಾಗಾಂವ ಜನ ಕೂಡ ಗೊಗ್ಗವ್ವೆಗೆ ಹರಕೆ ಹೊತ್ತು, ಉಡಿತುಂಬುವ ವಿಶೇಷ ಕಾರ್ಯಕ್ರಮವನ್ನು ನೆರವೇರಿಸುತ್ತಾರೆಂದು ತಿಳಿದುಬರುತ್ತದೆ. ಬಿಳಿ ಸೀರೆ, ಕುಪ್ಪಸ, ಬಳೆಗಳೊಂದಿಗೆ ಮುತ್ತೈದೆಯರು ಬಂದು ಉಡಿತುಂಬುವ ಕಾರ್ಯಕ್ರಮ ನೆರವೇರಿಸುತ್ತಾರೆ. ಇದಲ್ಲದೆ ಮಕ್ಕಳ ಜಡೆ ತೆಗೆಯುವ, ದೀಡನಮಸ್ಕಾರ ಹಾಕುವ, ಗೂಳಿಗಳನ್ನು ಬಿಡುವ ಪದ್ಧತಿಗಳೂ ಇವೆ.

ಪ್ರತಿವರ್ಷ ಜನೇವರಿಯಲ್ಲಿ ೩೧ ನೇ ತಾರೀಕಿನಂದು ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಡಿಸೆಂಬರ್ ೨೪ ರಂದು, ದೀಪಾವಳಿ ನಂತರ ಬರುವ ಹುಣ್ಣಿಮೆಗೆ ಖಾಂಡ ಜರುಗುತ್ತದೆ. ಆದರೆ ಇಲ್ಲಿ ಭಜನೆ ಮಾಡಮಾರದೆಂಬ ನಂಬುಗೆ ಇದೆ. ಹಾಗೆಯೇ ಮದುವೆ ಕೂಡ ಮಾಡುವುದಿಲ್ಲ. ಈ ಗೊಗ್ಗವ್ವೆಯನ್ನು ಒಬ್ಬ ಶಕ್ತಿ ದೇವತೆ ಎಂದು ನಂಬುವ ಈ ಊರಿನ ಜನ ಗೊಗ್ಗವ್ವೆ ಬಗ್ಗೆ ತುಂಬಾ ಭಕ್ತಿಭಾವ ಇಟ್ಟುಕೊಂಡಿದ್ದಾರೆ. ಗುಡಿಯ ಮಗ್ಗುಲಿಗಿರುವ ಕೆರೆಯನ್ನು ಯಾವುದೇ ಬಗೆಯಲ್ಲಿ



ಗೊಗ್ಗವ್ವೆಯವರ ಗುಡಿಯಲ್ಲಿರುವ ಗೊಗ್ಗವ್ವೆಯ ಗದ್ದುಗೆ

ಮಲಿನ ಮಾಡಬಾರದೆಂಬ ನಂಬುಗೆ ಊರವರಲ್ಲಿದೆ. ಬಟ್ಟೆ ತೊಳೆಯುವದನ್ನೂ ಮಾಡುವುದಿಲ್ಲವಂತೆ. ಅಕಸ್ಮಾತ್ ಬಟ್ಟೆಗಳನ್ನು ಒಗೆಯಲು ತಂದರೆ, ಕೆರೆಯನೀರನ್ನು ಪಾತ್ರೆಗಳಲ್ಲಿ ತುಂಬಿ ಹೊರಗೆ ತಂದು ದೂರದಲ್ಲಿ ಬಟ್ಟೆ ತೊಳೆದುಕೊಂಡು ಹೋಗುತ್ತಾರೆ. ಆದರೆ ದಸರಾ ವೇಳೆಗೆ ಘಟಸ್ಥಾಪನೆ ಮಾಡಿದ ಸಸಿಗಳನ್ನು, ಗಣಪತಿ ಹಬ್ಬದಲ್ಲಿ ಗಣಪತಿಯ ವಿಸರ್ಜನೆಯನ್ನು ಮಾತ್ರ ಈ ಕೆರೆಯಲ್ಲಿಯೇ ಮಾಡುತ್ತಾರೆ.

ಈ ದೇವತೆಗೆ ವಿಶೇಷವಾಗಿ ನಡೆದುಕೊಳ್ಳುವ ಹುಲೆಪ್ಪನವರ ಎಂಬ ಮನೆತನದ ಹೆಣ್ಣುಮಕ್ಕಳು ಸೋಮವಾರಕ್ಕೊಮ್ಮೆ ಗುಡಿಗೆ ಬಂದು ವಿಶೇಷ ಪೂಜೆ ಸಲ್ಲಿಸುತ್ತಾರೆ. ಶ್ರಾವಣ ಮಾಸದಲ್ಲಿ ಪ್ರತಿನಿತ್ಯ ಈ ಮನೆಯರಿಂದಲೇ ಪೂಜೆ ನಡೆಯುತ್ತದೆಯಂತೆ. ಈ ಮನೆಯವರ ವಿಶೇಷತೆ ಎಂದರೆ, ತಾವು ಗೊಗ್ಗವ್ವೆಯ ಭಕ್ತರಾದುದರಿಂದ ಮನೆಯಲ್ಲಿ ದಸರಾ ಹಬ್ಬಕ್ಕೆ ಘಟಸ್ಥಾಪನೆ ಮಾಡುವುದಿಲ್ಲವಂತೆ. ಗಣಪತಿ, ಲಕ್ಷ್ಮಿಯರನ್ನು ಕೂಡಿಸುವುದಿಲ್ಲ. ಮಣ್ಣೆತ್ತಿನ ಅಮವಾಸೆಗೆ ಮಣ್ಣೆತ್ತು ಮಾಡಿ ಪೂಜಿಸುವುದಿಲ್ಲ. ಎಳ್ಳಾಮವಾಸೆಗೆ ಹೊಲಗಳಲ್ಲಿ ಪಾಂಡವರನ್ನು ಮಾಡಿ ಪೂಜೆ ಮಾಡುವುದಿಲ್ಲ. ಬದಲಾಗಿ ಎಲ್ಲ ಹಬ್ಬ ಹುಣ್ಣಿಮೆಗಳಂದು ಈ ಮನೆತನದ ಹೆಣ್ಣುಮಕ್ಕಳಿಂದ ಗೊಗ್ಗವ್ವೆಗೆ ವಿಶೇಷ ಪೂಜೆ ಸಲ್ಲಿಸುವ ಪರಿಪಾಠವಿದೆ ಎಂದು ತಿಳಿದುಬರುತ್ತದೆ. ಈ ಮನೆತನದವರೇ ಚಿಕ್ಕದಾಗಿದ್ದ ಗೊಗ್ಗವ್ವೆಯ ಗುಡಿಯನ್ನು ವಿಸ್ತರಿಸಿ ಕಟ್ಟುವ ಕೆಲಸವನ್ನು ಮಾಡಿದ್ದಾರೆ.

ವಚನಗಳು : ೬

ವಚನಾಂಕಿತ : ನಾಸ್ತಿನಾಥಾ

ಮಾಹಿತಿ : ಶ್ರೀ ರಮೇಶ ಪ್ರಭುಶೆಟ್ಟಿ ಪಾಟೀಲ, ನಾಗನಾಥ ಮಾಣಿಕರಾವ ಬಿರಾದಾರ, ಜಯರಾಜ ಬಿರಾದಾರ.

***

# ಭಾಗ ೨ :

# ಬಿಜನಳ್ಳಿಯಿಂದ ಕೂಡಲಸಂಗಮದವರೆಗೆ

ಬೇಡ ಶರಣರ ನಿಂದೆ ಕೇಡು ಬರುವದು ಮುಂದೆ
ನೋಡಿಕೋ ನಾಡ ಬಿಜ್ಜಳನೆ । ಒಪ್ಪಿಸುತ
ಕಾಡಬೇಡಿನ್ನು ಶರಣರಿಗೆ

## ಕಲಬುರ್ಗಿ ಜಿಲ್ಲೆಯ ಶರಣಸ್ಮಾರಕಗಳು

### ಸೇಡಂ ತಾಲೂಕು :

### ಬಿಜನಳ್ಳಿ :
### ಹರಳಯ್ಯನವರು ತಯಾರಿಸಿದ ಪಾದುಕೆಗಳು

ಕಲ್ಯಾಣ ಕೇರಿಯೊಳು ಬಲ್ಲಿದನು ಬಸವೇಶ
ಸಲ್ಲಿಸುತ ಶರಣು ಶರಣರಿಗೆ। ಬರುವಾಗ
ಅಲ್ಲೆ ಶರಣೆಂದ ಹರಳಯ್ಯ

ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನ ಒಂದು ಸಣ್ಣ ಹಳ್ಳಿ 'ಬಿಜನಳ್ಳಿ'. ಈ ಊರಿನ ಜನಸಂಖ್ಯೆ ಕೇವಲ ೪೦೦. ಕಾಗಿಣಾ ನದಿಯ ದಂಡೆಯ ಮೇಲೆಯೇ ಈ ಊರು ಇದೆ. ಇದು ಈಗ ಹೆಚ್ಚು ಪ್ರಸಿದ್ಧವಾಗಿರುವುದು ಬಸವಣ್ಣನವರಿಗಾಗಿ ಹರಳಯ್ಯ ಮತ್ತು ಹರಳಯ್ಯನವರ ಪತ್ನಿ ಕಲ್ಯಾಣಮ್ಮ ಅವರು ತಯಾರಿಸಿ ಅರ್ಪಿಸಿದ ಪಾದುಕೆಗಳಿಂದಾಗಿ. ಹರಳಯ್ಯನವರು ಬಸವಣ್ಣನವರಿಗೆ ಒಂದು 'ಶರಣು' ಎಂದು ಹೇಳಿದರೆ, ಪ್ರತಿಯಾಗಿ ಬಸವಣ್ಣನವರು 'ಶರಣು ಶರಣಾರ್ಥಿ' ಎಂದು ಹೇಳಿದರಂತೆ.

ಶರಣು ಶರಣೆಲೆ ಹರಳ ಕರುಣಿರಲಿ ನನ್ನಲ್ಲಿ
ಮರೆಯಬೇಡೆಂದು ಸಾಗಿದನು । ಹರಳಯ್ಯ
ಮರಳಿ ಚಿಂತಿಸುತ ಮನೆಕಡೆಗೆ

ಶರಣೊಂದು ನಾನೆಂದೆ ಶರಣು ಶರಣೆಂದಾತ
ಶರಣೊಂದು ಮೇಲೆ ಹೊರಿಸಿದನು। ಬಸವನಿಗೆ
ಶರಣು ನಾ ಹೇಗೆ ತೀರಿಸಲಿ

ತಾನು ಒಂದುಸಲ ಶರಣೆಂದರೆ ಬಸವಣ್ಣನವರು ಎರಡು ಸಲ ಶರಣು ಹೇಳಿದುದಕ್ಕೆ ಹರಳಯ್ಯನವರು ತಮ್ಮ ಪತ್ನಿ ಕಲ್ಯಾಣಮ್ಮಳ ಜೊತೆ ಸಮಾಲೋಚಿಸಿ ಒಂದು ಜೊತೆ ಸುಂದರವಾದ ಪಾದರಕ್ಷೆಗಳನ್ನು ಮಾಡಿ, ಅವುಗಳ ಹಿಂಬಡಿಯಲ್ಲಿ ದಂಪತಿಗಳಿಬ್ಬರ ತೊಡೆಯ ಚರ್ಮವನ್ನು ಸೇರಿಸಿ, ರೇಸಿಮೆ ಬಟ್ಟೆಯಲ್ಲಿ ಸುತ್ತಿ, ತೆಗೆದುಕೊಂಡು ಹೋಗಿ, ಬಸವಣ್ಣನವರಿಗೆ ಅರ್ಪಿಸಿದರು.




ಹರಳಯ್ಯನವರು ತಯಾರಿಸಿದ ಪಾದುಕೆಗಳನ್ನು ಗಂಧದ ಚೌಕಟ್ಟಿನ ಗಾಜಿನ ಪೆಟ್ಟಿಗೆಯಲ್ಲಿ ಇಟ್ಟಿರುವುದನ್ನು, ಪಾದುಕೆಗಳನ್ನು ಕಾಯ್ದುಕೊಂಡು ಬಂದ ಮನೆತನದ ಬಸವರಾಜ ತೋರಿಸುತ್ತಿರುವುದು

ತುಂಬ ಕಣ್ಣಿಲಿ ನೋಡಿ ಇಂಬಾತು ಮನಸಂದು
ನಂಬದಲೆ ಹೋದ ಕೈಗೆಲಸ ।ಕಲ್ಯಾಣಿ
ಅಂದು ಮುಂದಿನ್ನು ಕೆಡಗಾಲ

ಮುಂದಿನಾ ಕೆಡಗಾಲ ಇಂದು ನಮಗ್ಯಾಕೆಂದು
ಚೆಂದ ವಸ್ತ್ರದಲಿ ಹುದುಗಿಸಿದ । ಜೋಡುಗಳ
ತಂದ ಬಸವೇಶನರಮನೆಗೆ

ಬಸವಣ್ಣನವರು ಆ ಸುಂದರವಾದ ಪಾದುಕೆಗಳನ್ನು ನೋಡಿ ತಮ್ಮ ಕಣ್ಣನ್ನೇ ತಾವು ನಂಬದಾದರು. ಅಂತಹ ಅಪರೂಪದ ಪಾದುಕೆಗಳವು.

ಶಿವಕಳೆಯ ಈ ಜೋಡು ಜವನ ದಾಡೆಗಳಯ್ಯಾ
ಭವದೊಳಗೆ ಮೆಡುವ ಜನರುಂಟೆ। ಹರಳಯ್ಯ
ಶಿವಗೊಪ್ಪಿಸೆನ್ನ ಕ್ಷಮಿಸೆಂದ

ಬಸವಣ್ಣನವರು ಪಾದುಕೆಗಳನ್ನು ಕಾಲಲ್ಲಿ ತೊಡದೆ, ತಲೆಯ ಮೇಲಿಟ್ಟುಕೊಂಡು, ಇವನ್ನು ತೊಡಲು ಶಿವನು (ಕೂಡಸಂಗಮ)ಮಾತ್ರ ಯೋಗ್ಯನು, ಅವನಿಗೆ ಅರ್ಪಿಸಿ ಎಂದು ಹರಳಯ್ಯನವರಿಗೆ ಹಿಂತಿರುಗಿಸಿದರಂತೆ. ಅವನ್ನು ಹರಳಯ್ಯ ಮನೆಗೆ

ತಿರುಗಿ ತರುವಾಗ ಮಧುವರಸನು ಬೇಡವೆಂದರೂ ಕಸಿದುಕೊಂಡು ಮೆಟ್ಟಿದಾಗ ಅವನ ಅಂಗಾಂಗವೆಲ್ಲ ಉರಿಯ ಬಾಧೆಗೆ ಒಳಗಾಯಿತು. ಮಧುವಯ್ಯನವರ ಮನೆಯ ದಾಸಿಯು ಹರಳಯ್ಯನವರ ದೋಣಿಯ (ಬಾಣಿಯ) ನೀರನ್ನು ತಂದು ಮಧುವರಸರ ದೇಹದ ಮೇಲೆ ಹಾಕಲು ಅವರ ದೇಹದ ಉರಿತ ಮಾಯವಾಯಿತು. ಈ ಕಾರಣವಾಗಿಯೇ ಮಧುವರಸ ತಮ್ಮ ಮಗಳನ್ನು ಹರಳಯ್ಯನವರ ಮಗ ಶೀಲವಂತನಿಗೆ ಕೊಟ್ಟು ಮದುವೆ ಮಾಡಲು ಸಿದ್ಧರಾದರು. ಬಸವಣ್ಣನವರ ಸಮ್ಮುಖದಲ್ಲಿ ಆ ಮದುವೆ ನಡೆಯಿತು. ಇದನ್ನು ಒಂದು ದೊಡ್ಡ ಅಪರಾಧವಾಗಿ ಬಣ್ಣಿಸಿ, ಅರಸ ಬಿಜ್ಜಳನ ಮನಸ್ಸನ್ನು ಕೆಲವರು ಕೆಡಿಸಿದರು. ಈ ಕಾರಣವಾಗಿ ಬಿಜ್ಜಳನು ಹರಳಯ್ಯ ಮತ್ತು ಮಧುವಯ್ಯಗಳಿಗೆ ಎಳೆಹೂಟೆ ಶಿಕ್ಷೆ ಕೊಟ್ಟನು. ಇದರಿಂದಾಗಿ **'ಕಲ್ಯಾಣ ಕ್ರಾಂತಿ'** ಪ್ರಾರಂಭವಾಯಿತು.

ಇಂತಹ ಕ್ರಾಂತಿಗೆ ಕಾರಣವಾದ, ಹರಳಯ್ಯನವರು ಬಸವಣ್ಣನವರಿಗಾಗಿ ತಯಾರಿಸಿದ ಜೋಡುಗಳು ಇಂದಿನವರೆಗೆ ಉಳಿದುಕೊಂಡು ಬಂದಿವೆ ಎಂಬುದೇ ಒಂದು ಆಶ್ಚರ್ಯದ ಸಂಗತಿಯಾಗಿದೆ. ಆ ಪಾದುಕೆಗಳನ್ನು ಇವತ್ತಿಗೂ ತನ್ನ ಒಡಲಲ್ಲಿ ಬಚ್ಚಿಟ್ಟುಕೊಂಡು ಬಂದುದು ರಾಷ್ಟ್ರಕೂಟ ಅರಸರ ರಾಜಧಾನಿಯಾದ ಮಾನ್ಯಖೇಟ ನಗರದಿಂದ ಕೇವಲ ೪ ಕಿ.ಮೀ. ದೂರದಲ್ಲಿರುವ, ಕಾಗಿಣಾ ನದಿಯ ತೀರದ ಮೇಲಿರುವ ಒಂದು ಪುಟ್ಟ ಹಳ್ಳಿ **ಬಿಜನಳ್ಳಿ**. ಇದೊಂದು ಅದ್ಭುತವಾದ ಸಂಗತಿಯೇ. ಆ ಪಾದುಕೆಗಳನ್ನು ಬಿಜನಳ್ಳಿಯ ಶ್ರೀ ಬಸವರಾಜ ಶಿವಶರಣಪ್ಪ ಸೊಲಬಣ್ಣ ಎಂಬುವವರ ಮನೆತನ ಉಳಿಸಿಕೊಂಡು ಬಂದಿದೆ. ಬಡವರಾದ, ಒಕ್ಕಲುತನವನ್ನೇ ತಮ್ಮ ಮನೆಯ ಉದ್ಯೋಗವಾಗಿಸಿಕೊಂಡ ಅವರು ಈ ಪಾದುಕೆಗಳನ್ನು ಅತ್ಯಂತ ಭಯ-ಭಕ್ತಿಯಿಂದ ಕಾಪಾಡಿಕೊಂಡು ಬಂದಿರುವುದೇ ಒಂದು ಪವಾಡವೆಂಬಂತಿದೆ.

ಕಲ್ಯಾಣದಲ್ಲಿ ಕ್ರಾಂತಿ ಭುಗಿಲೇಳುತ್ತಲೇ ಕಲ್ಯಾಣದಲ್ಲಿಯ ಶರಣರೆಲ್ಲ ವಚನಗಳನ್ನು ಕಾಪಾಡಲು, ತಮ್ಮ ಪ್ರಾಣವುಳಿಸಿಕೊಳ್ಳಲು ಕಲ್ಯಾಣದಿಂದ ಹೊರನಡೆದರು. ಇಂತಹ ಸಮಯದಲ್ಲಿ ಹರಳಯ್ಯನವರ ಮನೆಯಲ್ಲಿಯ ಪಾದರಕ್ಷೆಗಳನ್ನು ತೆಗೆದುಕೊಂಡು ಹೊರನಡೆಯಲು (ಮಧುವರಸನ ಘಟನೆಯ ಹಿನ್ನೆಲೆಯಲ್ಲಿ) ಬೇರೆಯವರಿಗೆ ಸರಳವಾಗಿರಲು ಸಾಧ್ಯವಾಗದ ಮಾತು. ಯಾವುದೇ ಒಂದು ಮಹತ್ವದ ವಸ್ತು ಒಬ್ಬರ ಮನೆಯಿಂದ ಹೊರಗಾಗಲು ಆಯಾ ಮನೆಯವರಿಂದ ಮಾತ್ರ ಸಾಧ್ಯವೇ ಹೊರತು, ಬೇರೆಯವರಿಂದ ಸಾಧ್ಯವಾಗುವುದು ಅಷ್ಟು ಸುಲಭವಾದ ಮಾತಲ್ಲ. ಹೀಗಾಗಿ ಅಸಾಮಾನ್ಯವಾದ ಪಾದರಕ್ಷೆಗಳನ್ನು ಮನೆಯಿಂದ ಸಾಗಿಸಲು ಸಾಧ್ಯವಾಗಿರುವುದು ಹರಳಯ್ಯನವರ ಮನೆಯವರಿಗೆ ಮಾತ್ರ ಎನಿಸುತ್ತದೆ. ಪಾದರಕ್ಷೆಗಳನ್ನು ಮೆಡಲೇಬೇಕೆಂಬ ಮಧುವರಸನ ವರ್ತನೆಯ ಪರಿಣಾಮದ ಹಿನ್ನೆಲೆಯಲ್ಲಿ ಬೇರೆಯವರು ಅವುಗಳನ್ನು ಮುಟ್ಟುವ ಧೈರ್ಯವನ್ನೂ ಮಾಡಿರಲು ಸಾಧ್ಯವಿಲ್ಲ. ನಮ್ಮ ಕ್ಷೇತ್ರಕಾರ್ಯದ ಅನುಭವ ಕೂಡ ಇದನ್ನೇ ಹೇಳುತ್ತದೆ. ಪಾದರಕ್ಷೆಗಳನ್ನು ಹೊತ್ತು ಹೊರಟವರ ಜೊತೆಗೆ ಮತ್ತೆ ಹಲವು ಶರಣರು ಇದ್ದರೆಂದು



ಹರಳಯ್ಯನವರು ತಯಾರಿಸಿದ ಪಾದುಕೆಗಳ ಮೇಲ್ಭಾಗ ಹಾಳಾಗಿ ಹೋಗಿರುವುದು

ತೋರುತ್ತದೆ. ಹಾಗಾದರೆ ಆ ಪಾದರಕ್ಷೆಗಳನ್ನು ಮನೆಯಿಂದ ಸಾಗಿಸಿದವರು ಯಾರಾಗಿರಬಹುದು ಎಂಬ ಸಾಧ್ಯತೆಯನ್ನು ಮುಂದೆ ಚರ್ಚಿಸಲಾಗುವುದು.

ಈ ಪಾದರಕ್ಷೆಗಳನ್ನು ಹೊತ್ತು ತಂದ ಶರಣರು ಬಂದು ತಲುಪಿದುದು–ರಾಷ್ಟ್ರಕೂಟರ ಪ್ರಸಿದ್ಧ ರಾಜ್ಯಧಾನಿಯಾಗಿದ್ದ ಮಾನ್ಯಖೇಡ ಸಮೀಪದ, ಕಾಗಿಣಾ ನದಿ ತೀರದ **ಬಿಜನಳ್ಳಿ** ಎಂಬ ಪುಟ್ಟ ಗ್ರಾಮದ ಅಡವಿಗೆ. ಆ ಗ್ರಾಮದಲ್ಲಿ ಉಳಿದುಬಂದಿರುವ ಪ್ರತೀತಿಯ ಪ್ರಕಾರ ಪಾದರಕ್ಷೆಗಳನ್ನು ತಂದವರು ಒಬ್ಬರಲ್ಲ, ಅವರ ಜೊತೆಗೆ ಮತ್ತೆ ಕೆಲ ಶರಣರು ಇದ್ದರು ಎಂದು. ಅಲ್ಲಿಯೇ ಸಮೀಪದ ಒಂದು ಹೊಲದಲ್ಲಿ ಉಳುಮೆ ಮಾಡುತ್ತಿರುವ ಒಬ್ಬ ಒಕ್ಕಲಿಗನಿಗೆ ಕರೆದು, ಪಾದರಕ್ಷೆಗಳ ಮಹತ್ವವನ್ನು ತಿಳಿಸಿ, ಇವನ್ನು ಕಾಪಾಡುವ ಭಾರ ನಿಮ್ಮದು, ಯಾರಾದರೂ ತೆಗೆದುಕೊಂಡು ಹೋಗಲು ಬಂದರೆ, **'ಪಾದರಕ್ಷೆಗಳನ್ನು ಕಾಲಲ್ಲಿ ಹಾಕಿಕೊಂಡು ಹೋಗಬೇಕು, ತಲೆಯ ಮೇಲೆ ಹೊತ್ತುಕೊಂಡು ಹೋಗುವುದಾದರೆ ಕೊಡಬೇಡಿರಿ'** ಎಂದು ಒಪ್ಪಿಸಿದರು. ಇಂದಗೂ ಪಾದರಕ್ಷೆಗಳನ್ನು ಕಾಪಾಡಿಕೊಂಡು ಬಂದಿರುವ ಸೊಲಬಣ್ಣನವರ ಮನೆತನದ ಹೊಲಗಳು ಪಾದುಕೆಗಳನ್ನು ಒಪ್ಪಿಸಿದ ಸ್ಥಳದ ಮಗ್ಗುಲಿಗೆ ಇವೆ. ಪಾದರಕ್ಷೆಗಳನ್ನು ಒಪ್ಪಿಸಿದ ಸ್ಥಳದಲ್ಲಿ ಮಡಿಬಸವಣ್ಣ ಎಂಬ ಶರಣನ ಗುಡಿಯನ್ನು ನಿರ್ಮಿಸಲಾಗಿದೆ.

ಇಲ್ಲಿ ಇನ್ನೊಂದು ಸಂಗತಿಯೂ ಕೆಲವರ ಬಾಯಿಂದ ನುಸುಳಿ ಬರುತ್ತಿರುತ್ತದೆ. ಅದೆಂದರೆ ಪಾದರಕ್ಷೆಗಳನ್ನು ಕಾಪಾಡಿಕೊಂಡು ಬಂದಿರುವ ಸೊಲಬಣ್ಣನವರ ಮನೆತನಕ್ಕೆ ಸಂಬಂಧಿಸಿದ ಒಬ್ಬ ಹಿರಿಯ ಗವಿಸಿದ್ದ ಎನ್ನುವವರ ಒಂದು ಸಮಾಧಿ–ಗುಡಿ ಊರ ಪ್ರವೇಶದಲ್ಲಿಯೇ ಇದೆ. ಈ ಗುಡಿ ಇರುವ ಜಮೀನು ಸೊಲಬಣ್ಣನವರ ಮನೆತನಕ್ಕೆ ಸಂಬಂಧಿಸಿದೆ. ಈ ಗವಿಸಿದ್ಧನು ಪಾದರಕ್ಷೆಗಳನ್ನು ತಂದವರಲ್ಲಿಯೇ ಒಬ್ಬ ಶರಣಾಗಿದ್ದಾನೆ


ಎನ್ನುತ್ತಾರೆ. ಕೆಲವರು ಈ ಪಾದರಕ್ಷೆಗಳು ಉಳಿದಿರುವ ಮನೆತನಕ್ಕೆ ಸಂಬಂಧಿಸಿದವನು ಈ ಗವಿಸಿದ್ಧ ಎನ್ನುತ್ತಾರೆ. ಈತನೂ ಬಸವಣ್ಣನವರ ಕಾಲದ ಶರಣನೇ ಎನ್ನುತ್ತಾರೆ. ಹೀಗಾಗಿ ಪಾದರಕ್ಷೆಗಳನ್ನು ಕಾಪಾಡುವಲ್ಲಿ ಈ ಗವಿಸಿದ್ಧನ ಪಾತ್ರವೂ ಇದೆ ಎಂಬ ಸಂಗತಿ ತಲೆ ಹಾಕುತ್ತದೆ. ಹೀಗಾಗಿ ಇಲ್ಲಿ ಒಂದೆರಡು ಊಹೆಗಳು ಸುಳಿಯುತ್ತವೆ. ಗವಿಸಿದ್ಧನು ಪಾದರಕ್ಷೆಗಳನ್ನು ತಂದ ಶರಣರ ಜೊತೆಗೆ ಇರಬೇಕು. ಹೀಗಾಗಿ ಈ ತಂಡ ನೇರವಾಗಿ ಕಾಗಿಣಾ ನದಿಯ ಆ ಕಡೆಯ ದಂಡೆಯಲ್ಲಿರುವ ಅತ್ಯಂತ ಸಣ್ಣ ಹಳ್ಳಿ ಬಿಜನಳ್ಳಿಗೆ ಬರಲು ಸಾಧ್ಯವಾಗಿರಬಹುದು. ಇಲ್ಲವೆ ನದಿ ದಾಟಿ ಬಂದ ಶರಣರು ಹೊಲದಲ್ಲಿ ಗಳೆ ಹೊಡೆಯುತ್ತಿರುವ ಒಬ್ಬ ಒಕ್ಕಲಿಗನಿಗೆ ಆ ಪಾದರಕ್ಷೆಗಳನ್ನು ಒಪ್ಪಿಸಿ, ಅವುಗಳ ಮಹತ್ವ ತಿಳಿಸಿ, ಅವನ್ನು ಕಾಪಾಡಲು ಹೇಳಿದರು ಎಂದು ತಿಳಿದುಬರುತ್ತದೆ. ಬಹುಶಃ ಪಾದರಕ್ಷೆಗಳನ್ನು ಸ್ವೀಕರಿಸಿದ ಒಕ್ಕಲಿಗ ಈ ಗವಿಸಿದ್ಧ ಆಗಿರಬಹುದು.

ಗವಿಸಿದ್ಧನೂ ಶರಣ ವ್ಯಕ್ತಿತ್ವವುಳ್ಳವನಾಗಿರುವುದು ಸ್ಪಷ್ಟವಾಗಿದೆ. ಏಕೆಂದರೆ ಅವನಿಗೆ ಸಂಬಂಧಸಿದ ಸಮಾಧಿ ಮೂಲತಃ ಒಂದು ಗವಿಯೇ ಆಗಿದೆ. ಅವನ ಸಮಾಧಿಯ ಮೇಲೆ ಕಟ್ಟಿದ ಗುಡಿಯಲ್ಲಿಯ ಮಲ್ಲಿಕಾರ್ಜುನ ಲಿಂಗ ಆತನೆ ಶ್ರೀಶೈಲದಿಂದ ತಂದು ಸ್ಥಾಪಿಸಿದ್ದು ಎನ್ನುತ್ತಾರೆ. ಹೀಗಾಗಿ ಗವಿಸಿದ್ಧನೊಬ್ಬ ಶರಣನೇ ಆಗಿದ್ದು, ಪಾದರಕ್ಷೆಗಳನ್ನು ಕಾಪಾಡುವಲ್ಲಿ, ಬಿಜನಳ್ಳಿಯಲ್ಲಿ ಈ ಪಾದರಕ್ಷೆಗಳು ಉಳಿಯುವಲ್ಲಿ ಅವನ ಪಾತ್ರವಿದೆ ಎನಿಸುತ್ತದೆ.



ಪಾದುಕೆಗಳನ್ನು ಪಡೆದ ಸೊಲಬಣ್ಣ ಮನೆತನದ ಗವಿಸಿದ್ಧನ ಸ್ಮಾರಕ

ಪಾದುಕೆಗಳನ್ನು ತಂದವರಲ್ಲಿ ಒಬ್ಬ ಮಡಿಬಸವಣ್ಣ ಎಂಬ ಶರಣನಿದ್ದಾನೆ. ಅವರ ಸ್ಮಾರಕವೊಂದು ಬಿಜನಳ್ಳಿಯ ಅಡವಿಯಲ್ಲಿ ಇದೆ. ಪಾದುಕೆಗಳನ್ನು ಒಕ್ಕಲಿಗನಿಗೆ ಒಪ್ಪಿಸಿದ ಸ್ಥಳದಲ್ಲಿ ಅದು ನಿರ್ಮಾಣವಾಗಿದೆ ಎನ್ನುತ್ತಾರೆ. ಮಡಿಬಸವಣ್ಣ ಹಾಗೂ ಅವರ ಜೊತೆಗೆ ಬಂದ ಇನ್ನೊಬ್ಬರು ಅಂದಿನ ರಾತ್ರಿಯೇ ಅಲ್ಲಿಂದ ಮರೆಯಾಗಿದ್ದಾರೆ. ಮಡಿಬಸವಣ್ಣ ಬಿಜನಳ್ಳಿಯ ಆ ಅಡವಿಯಿಂದ ಎರಡು ಕಿ.ಮೀ. ದೂರದಲ್ಲಿರುವ ಬೀರನಳ್ಳಿ ಎಂಬ ಗ್ರಾಮಕ್ಕೆ ಬಂದು ತಲುಪಿದ್ದಾರೆ. ಜೊತೆಗಿದ್ದ ಇನ್ನೊಬ್ಬ ಶರಣ ಬೇರೆಡೆ ಹೋದಂತಿದೆ. ಹೀಗೆ ಅವರಿಬ್ಬರೂ ಅಲ್ಲಿಂದ ಕೂಡಲೆ ಬೇರೆಡೆಗೆ ಹೋಗಲು ಕಾರಣವೆಂದರೆ ಹಿಂದೆ ಬೆನ್ನುಹತ್ತಿರುವ ಬಿಜ್ಜಳನ ಸೈನಿಕರ ಭಯವೇ ಕಾರಣವಾಗಿರಬೇಕು.



ಗವಿಸಿದ್ಧನ ಗವಿ

ಪಾದುಕೆಗಳನ್ನು ಬಿಜನಳ್ಳಿಯಲ್ಲಿ ಬಿಟ್ಟು, ಅವುಗಳನ್ನು ಬಸವಕಲ್ಯಾಣದಿಂದ ತಂದ ಶರಣರು ಬೇರೆಡೆಗೆ ಹೋಗುವಲ್ಲಿ ಪಾದರಕ್ಷೆಗಳ ಸುರಕ್ಷತೆಯ ದೃಷ್ಟಿಯೇ ಅಡಗಿದೆ ಎನಿಸುತ್ತದೆ. ತಮಗೆ ಬೆನ್ನಟ್ಟಿ ಬರುತ್ತಿರುವ ಬಿಜ್ಜಳನ ಸೈನಿಕರ ಕೈಗೆ ತಾವು ಸಿಕ್ಕರೆ, ತಮಗೆ ಅಪಾಯ ಒದಗಿಬಂದರೂ ಪಾದುಕೆಗಳು ಸುರಕ್ಷಿತವಾಗಿ ಉಳಿಯಲಿ ಎಂಬ ಆಲೋಚನೆ ಇದರಲ್ಲಿ ಅಡಗಿದಂತಿದೆ.

ಅಪಾಯವನ್ನು ಎದುರಿಸಲು ಸಜ್ಜಾಗಿ, ಪಾದುಕೆಗಳನ್ನು ಬಿಜನಳ್ಳಿಯಲ್ಲಿ ಬಿಟ್ಟು, ತಾವು ಮಗ್ಗುಲೂರಿನ ಬೀರನಳ್ಳಿಗೆ ಬಂದು ಉಳಿದವರು ಮಡಿಬಸವಣ್ಣನವರು. ಇವರ ಜೊತೆಗೆ ಪಾದುಕೆಗಳನ್ನು ತರುವಲ್ಲಿ ಮುಖ್ಯಪಾತ್ರ ವಹಿಸಿದವರು, ಅಂದಿನ ರಾತ್ರಿಯೇ ಬಿಜನಳ್ಳಿ ಅಡವಿಯಿಂದ ಕಣ್ಮರೆಯಾದವರು ಬಹುಶಃ ಹರಳಯ್ಯನವರ ಮಗ ಶೀಲವಂತ ಇರಬಹುದಾಗಿದೆ ಅನಿಸುತ್ತದೆ. ಕಲ್ಯಾಣದ ಕ್ರಾಂತಿಗೆ ಮೂಲ ಕಾರಣರಾದವರಲ್ಲಿ ಈ ಯುವಕ ಪ್ರಮುಖನಾಗಿದ್ದಾನೆ. ಹರಳಯ್ಯನವರ ಮನೆಯಲ್ಲಿರುವ ಪಾದುಕೆಗಳನ್ನು ಮನೆಯಿಂದ ಹೊರತರಲು ಸಾಧ್ಯವಾಗಿರುವುದು ಆ ಮನೆಗೆ ಸಂಬಂಧಿಸಿದ ವ್ಯಕ್ತಿ ಶೀಲವಂತನಿಂದಲೇ ಎನಿಸುತ್ತದೆ.

ಬಿಜನಳ್ಳಿಯ ಅಡವಿಯಲ್ಲಿ ಪಾದುಕೆಗಳನ್ನು ಒಕ್ಕಲಿಗನಿಗೆ ಒಪ್ಪಿಸಿ, ಅಥವಾ ಬಿಜನಳ್ಳಿಯವರೇ ಆದ ಗವಿಸಿದ್ಧನನ್ನು ಬಿಜನಳ್ಳಿ ಅಡವಿಗೆ ತಲುಪಿಸಿ, ತಮ್ಮ ಜೊತೆಗಿದ್ದ



ಪಾದುಕೆಗಳ ಹಿಂಬಡಿಯ ಭಾಗದಲ್ಲಿ ಬಿಳಿಬಣ್ಣದ ಚರ್ಮ ಕಾಣುವುದು
ಹರಳಯ್ಯ-ಕಲ್ಯಾಣಮ್ಮ ಅವರ ತೊಡೆಯ ಚರ್ಮವಾಗಿದೆ

ಹರಳಯ್ಯನವರ ಮಗ ಶೀಲವಂತನನ್ನು ಅಂದು ರಾತ್ರಿಯೇ ಬಿಜನಳ್ಳಿಯಿಂದ ಮುಂದೆ ಪ್ರಯಾಣ ಬೆಳೆಸಲು ಜೊತೆಗಿದ್ದ ಶರಣರು ಸಹಕರಿಸಿರಬಹುದು ಎನಿಸುತ್ತದೆ. ಬಹುಶಃ ಶೀಲವಂತನ ಜೊತೆಗೇ ಅವರೂ ಹೊರಟಿರಲೂ ಬಹುದು. ಮಡಿಬಸವಣ್ಣ ಎಂಬ ಒಬ್ಬ ಶರಣ ಮಾತ್ರ ಬಿಜನಳ್ಳಿಯಿಂದ ಎರಡು ಕಿ.ಮೀ. ಅಂತರದಲ್ಲಿರುವ ಬೀರನಳ್ಳಿಗೆ ಬಂದು ತಲುಪಿದಂತೆ ತೋರುತ್ತದೆ. ಏಕೆಂದರೆ ಮಡಿಬಸವಣ್ಣ ಬೀರನಳ್ಳಿಯಲ್ಲಿ ಕೆಲದಿನಗಳವರೆಗೆ ಇದ್ದ ಸಮಾಚಾರಗಳು ಆ ಊರಿನಲ್ಲಿ ಉಳಿದುಕೊಂಡಿವೆ. ಮತ್ತು ಬಿಜನಳ್ಳಿಯ ಹೊಲದಲ್ಲಿ ಮಡಿಬಸವಣ್ಣನವರ ಸ್ಮಾರಕ ಇದೆ. ಅದನ್ನು ಹಿಂದೆಯೂ ಮತ್ತು ಈಗಲೂ ನಿರ್ಮಿಸಿದವರು ಬೀರನಳ್ಳಿಯವರು ಎಂದು ತಿಳಿದುಬರುತ್ತದೆ.

ಇಷ್ಟೆಲ್ಲ ಊಹೆಗೆ ಒಂದು ಕಾರಣವೆಂದರೆ, ಪಾದುಕೆಗಳನ್ನು ತಂದವರು ಒಬ್ಬರಲ್ಲ ಇಬ್ಬರು ಎಂಬ ಪ್ರತೀತಿ ಬಿಜನಳ್ಳಿಯಲ್ಲಿ ಉಳಿದು ಬಂದಿರುವುದು. ಜೊತೆಗೆ ಹೆಚ್ಚಿನ ಶರಣರು ಬಿಂದಿದ್ದರೂ ಅವರು ಹೊಳೆಯ ಆಚೆಯೇ ಉಳಿದಿರಬಹುದು. ಅಥವಾ ಬಿಜನಳ್ಳಿ ಅಡವಿಯಲ್ಲಿ ಒಕ್ಕಲಿಗನಿಗೆ ಕಾಣದಂತೆ ಮರೆಯಾಗಿರಬಹುದು. ಎರಡನೆಯ ಕಾರಣವೆಂದರೆ ಹರಳಯ್ಯನವರ ಮನೆಯಲ್ಲಿರುವ ಪಾದುಕೆಗಳು ಅವರ ಮನೆಯವರಿಂದಲೇ ಹೊರಬರಲು ಸಾಧ್ಯ, ಬೇರೆಯವರಿಗೆ ಸರಳವಾದ ಸಂಗತಿ ಅದಲ್ಲ ಎಂಬುದು. ಮೂರನೆಯ ಕಾರಣವೆಂದರೆ ಶಿಲವಂತನ ಮದುವೆಯ ಕಾರಣವಾಗಿಯೇ ಕ್ರಾಂತಿ ತಲೆದೋರಿದ್ದರಿಂದ ಸಹಜವಾಗಿಯೇ ಬಿಜ್ಜಳನ ಸೈನ್ಯ ಶೀಲವಂತನ ಬೆನ್ನುಹತ್ತಿರುವ ಸಾಧ್ಯವಿದೆ. ಈ ಅನುಮಾನದಿಂದ ಎದುರಾಗಬಹುದಾದ ಅಪಾಯದಿಂದ ಪಾರಾಗಲು ಶೀಲವಂತ ಅಲ್ಲಿಂದ ಮುಂದೆ ಪ್ರಯಾಣ ಬೆಳೆಸಿರುವ

ಸಾಧ್ಯತೆ ಇದೆ. ಹೀಗೆ ಶೀಲವಂತನನ್ನು ಮುಂದೆ ಕಳುಹಿಸಿ, ತಾನೂ ಕೂಡ ಪಾದರಕ್ಷೆಗಳು ಇರುವ ಕಡೆ ಉಳಿಯದೆ, ಬಿಜನಳ್ಳಿಯ ಮಗ್ಗುಲಿನ ಹಳ್ಳಿ ಬೀರನಳ್ಳಿಯಲ್ಲಿ ಮಡಿಬಸವಣ್ಣ ಉಳಿದಿರಬೇಕೆನಿಸುತ್ತದೆ. ನಾಲ್ಕನೆಯ ಕಾರಣವೆಂದರೆ ಮಾನ್ಯಖೇಡದಿಂದ ಮುಂದೆ ದಕ್ಷಿಣಕ್ಕೆ ಈಗಿನ ತಾಲೂಕಾ ಸ್ಥಳವಾದ ಶಹಪೂರ ಎಂಬ ಪಟ್ಟಣದ ಗುಡ್ಡದ ಒಂದು ಮಡ್ಡಿಯ ತುದಿಯಲ್ಲಿ ಶೀಲವಂತನ ಗವಿ ಇರುವುದನ್ನು ಮತ್ತು ಶಹಪುರ ನಗರದಲ್ಲಿ (ಆಗ ನಗರದ ಹೊರವಲಯದಲ್ಲಿ) ಶೀಲವಂತನ ಹೆಸರಿಗೆ ಒಂದು ಮಠವಿರುವುದನ್ನು ನಮ್ಮ ಕ್ಷೇತ್ರಕಾರ್ಯದ ಸಮಯದಲ್ಲಿ ಗುರುತಿಸಲು ಸಾಧ್ಯವಾಗಿರುವುದು. ಶೀಲವಂತ ಮತ್ತು ಅವನ ಜೊತೆಗೆ ಇರುವ ಶರಣರು ಬಿಜನಳ್ಳಿಯ ಅಡವಿಯಿಂದ ಮುಂದೆ ನಡೆದು ಹೋಗಿ ಬಹುಶಃ ಶಹಪುರದ ಗುಡ್ಡದ ಮಡ್ಡಿಯ ತುದಿಯನ್ನು ಸೇರಿ, ಸೈನಿಕರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿರಬಹುದಾಗಿದೆ. ಈ ಸ್ಥಳಗಳ ಬಗ್ಗೆ, ಅಲ್ಲಿ ಉಳಿದುಕೊಂಡು ಬಂದಿರುವ ಸಂಪ್ರದಾಯಗಳ ಬಗ್ಗೆ ಶಹಪುರ ಪಟ್ಟಣದಲ್ಲಿಯ ಶೀಲವಂತನಿಗೆ ಸಂಬಂಧಿಸಿದ ಸ್ಥಳಗಳ ಬಗ್ಗೆ ಬರೆಯುವಾಗ ವಿವರಿಸಲಾಗಿದೆ.

ಮಡಿಬಸವಣ್ಣನವರು ಬಿಜನಳ್ಳಿಗಿಂತ ಬೀರನಳ್ಳಿಗೆ ಮೊದಲು ಬಂದರೆಂದೂ, ಅಲ್ಲಿ ಉಳಿದುಕೊಳ್ಳಲು ಅಲ್ಲಿಯ ಊರ ಹಿರಿಯರೊಬ್ಬರು ಅವರಿಗೆ ಸ್ಥಳಾವಕಾಶ ಮಾಡಿಕೊಟ್ಟರೆಂದೂ ಅವರು ಮುಸ್ಲೀಮ ಜನಾಂಗಕ್ಕೆ ಸೇರಿದ ಮಾಲೀಗೌಡರೆಂದೂ ಬೀರನಳ್ಳಿಯ ಜನ ಹೇಳುತ್ತಾರೆ. ಆದರೆ ಆಗಿನ ಕಾಲಕ್ಕಿನ್ನೂ ಮುಸ್ಲೀಮರು ಈ ಭಾಗದಲ್ಲಿ ಪ್ರವೇಶಿಸಿರಲಿಲ್ಲ ಎಂಬುದನ್ನು ಗಮನಿಸಬೇಕು. ಜೊತೆಗೆ ಮಡಿಬಸವಣ್ಣನವರು ಬೀರನಳ್ಳಿಗೆ ಬಂದಾಗ ಅವರ ಜೊತೆಗೆ ಪಾದರಕ್ಷೆಗಳು ಇದ್ದಬಗ್ಗೆ ಯಾವುದೇ ಮಾಹಿತಿಗಳು ಉಳಿದುಬಂದಿಲ್ಲ. ಜೊತೆಗೆ ಈ ಊರಿಗೆ ಬಂದವರು ಮಡಿಬಸವಣ್ಣ ಒಬ್ಬರೇ ಎಂದು ಹೇಳುತ್ತಾರೆ. ಆದರೆ ಬಿಜನಳ್ಳಿಯಲ್ಲಿ ಪಾದರಕ್ಷೆಗಳನ್ನು ಹೊತ್ತು ತಂದವರು ಒಬ್ಬರಲ್ಲ ಇಬ್ಬರು (ಅಥವಾ ಹೆಚ್ಚಿಗೆ) ಎಂಬ ಮಾಹಿತಿ ಉಳಿದು ಬಂದಿದೆ.

ಹೀಗಾಗಿ ಪಾದರಕ್ಷೆಗಳನ್ನು ಹೊತ್ತು ತಂದವರು ಮೊದಲು ಬಿಜನಳ್ಳಿ ಅಡವಿಗೆ ಬಂದು, ಪಾದರಕ್ಷೆಗಳ ಸೊಲಬಣ್ಣ ಮನೆತನದ ಒಕ್ಕಲಿಗನಿಗೆ ಜೋಪಾನ ಮಾಡಲು ಹೇಳಿ, ಅಥವಾ ತಮ್ಮ ಜೊತೆಗೆ ಇದ್ದ ಗವಿಸಿದ್ಧನಿಗೆ ಒಪ್ಪಿಸಿ, ಮನೆಗೆ ಹೋಗಲು ಹೇಳಿ, ಶೀಲವಂತನಿಗೆ ಅಲ್ಲಿಂದ ಮುಂದೆ ಬೀಳ್ಕೊಟ್ಟು, ಮಡಿಬಸವಣ್ಣ ತಾವೂ ಅಲ್ಲಿರದೆ, ಬಹಳ ದೂರ ಹೋಗಲು ಮನಸ್ಸಾಗದೆ ಪಾದರಕ್ಷೆಗಳ ಸುರಕ್ಷತೆಗಾಗಿ ಬಿಜನಳ್ಳಿಯ ಮಗ್ಗಲೂರು ಬೀರನಳ್ಳಿಗೆ ಬಂದಿರಬಹುದೆಂಬ ಅನುಮಾನವನ್ನು ತಾಳಲು ಸಾಧ್ಯವಾಗಿರುವುದು. ಆ ರೈತನ ಹೆಸರು ಗವಿಸಿದ್ಧನೆಂದು ಕೆಲವರು, ಬಸವಣ್ಣನೆಂದು ಕೆಲವರು ಹೇಳುತ್ತಾರೆ. ಒಟ್ಟಿನಲ್ಲಿ ಪಾದುಕೆಗಳನ್ನು ಪಡೆದು ಅವುಗಳನ್ನು ಜೋಪಾನವಾಗಿ ತಮ್ಮ ಮನೆಯ ಜಂತಿಗೆ ಕಟ್ಟಿ ಭಕ್ತಿಯಿಂದ ಅವುಗಳನ್ನು ಕಾಪಾಡಿಕೊಂಡು ಬಂದ ಮನೆತನ ಬಿಜನಳ್ಳಿಯಲ್ಲಿದೆ. ಅವರ ಮನೆಯ ಹೆಸರು ನಂದಿಗೌಡರ ಮನೆ ಎಂದೂ ನಂತರ ಮನೆಯ ಹೆಸರು ಸೊಲಬಣ್ಣ ಎಂದು ಬದಲಾಗಿದೆ ಎಂದೂ ಹೇಳಲಾಗುತ್ತದೆ.

ಮಡಿಬಸವಣ್ಣ ಬೀರನಳ್ಳಿಯಿಂದ ಹಿಂತಿರುಗಿ ಬಂದು ಬಿಜನಳ್ಳಿ ಅಡವಿಯಲ್ಲಿಯೇ ಉಳಿದು, ನಂತರ ಅಲ್ಲಿಯೇ ಲಿಂಗೈಕ್ಯರಾಗಿದ್ದಾರೆ. ಅವರು ಲಿಂಗೈಕ್ಯರಾದ ಸ್ಥಳದಲ್ಲಿ ಒಂದು ಗುಡಿಯನ್ನು ಕಟ್ಟಲಾಗಿದೆ. ಈಗ ಹಳೆಯ ಗುಡಿಯನ್ನು ತೆಗೆದುಹಾಕಿ, ಮತ್ತೆ ಹೊಸ ಗುಡಿಯನ್ನು ನಿರ್ಮಿಸಿದ್ದಾರೆ. ಹೀಗೆ ಮಡಿಬಸವಣ್ಣನ ಗುಡಿಯನ್ನು ಮೊದಲು, ಮತ್ತು ಈಗ ಹೊಸದಾಗಿ ಕಟ್ಟಿದವರು ಬೀರನಳ್ಳಿಯ ಭಕ್ತರೇ ಆಗಿದ್ದಾರೆ ಎಂದು ತಿಳಿದುಬರುತ್ತದೆ. ಸೊಲಬಣ್ಣ ಮನೆತನದ ೧೪ನೇ ತಲೆಮಾರಿನವರೆಂದು ಹೇಳುವ ಬಸವರಾಜ ಶಿವಶರಣಪ್ಪ ಸೊಲಬಣ್ಣನವರ ಈಗ ಪಾದುಕೆಗಳನ್ನು ಕಾಪಾಡಿಕೊಂಡುಬರುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ಕಲ್ಯಾಣದಲ್ಲಿ ಮಧುವರಸನ ಜೊತೆಗೆ ನಡೆದ ಘಟನೆಯಂತೆ ಬಿಜನಳ್ಳಿಯಲ್ಲೂ ಒಂದು ಘಟನೆ ನಡೆಯಿತೆಂದು ಹೇಳುತ್ತಾರೆ. ಮಸ್ಕಿ ಗ್ರಾಮದ ರಾಚಣ್ಣ ಎಂಬಾತ ಬಿಜನಳ್ಳಿಗೆ ಬಂದು ಚಮ್ಮಾವುಗೆಗಳನ್ನು ಮೆಡುವ ಸಾಹಸ ಮಾಡಿದನಂತೆ. ಆದರೆ ಅವನಿಗೆ ಮೈ ಉರಿ ಉಂಟಾಗಿ, ಹುಚ್ಚನೇ ಆದನಂತೆ. ಹೀಗಾಗಿ ಪಾದರಕ್ಷೆಗಳನ್ನು ಇವತ್ತಿಗೂ ಮಡಿಯಿಂದಲೇ ಸ್ಪರ್ಶಿಸುತ್ತಾರೆ. ಯಾರಾದರೂ ಅವುಗಳನ್ನು ನೋಡಬೇಕೆಂದರೂ ಮಡಿಯಿಂದಲೇ ಸ್ಪರ್ಶಿಸುವ ಪದ್ಧತಿ ಇದೆ. ಹಾಗೇ ಮುಟ್ಟಲು ಯಾರೂ ಧೈರ್ಯ ಮಾಡುವುದಿಲ್ಲ. ಆ ಪಾದುಕೆಗಳನ್ನು ಸ್ಪರ್ಶಿಸಬೇಕೆಂದರೆ ಸಮೀಪದ ಕಾಗಿಣಾ ನದಿಯಲ್ಲಿಯೇ ಮಿಂದು ಬರುವುದು ನಿಯಮವಾಗಿದೆ.



ಬಿಜನಳ್ಳಿ ಅಡವಿಯಲ್ಲಿರುವ ಮಡಿಬಸವಣ್ಣನ ಗುಡಿ
ಪಾದರಕ್ಷೆಗಳನ್ನು ಒಕ್ಕಲಿಗನಿಗೆ ಒಪ್ಪಿಸಿದ ಸ್ಥಳ ಇದು ಎನ್ನುತ್ತಾರೆ



ಮಡಿಬಸವಣ್ಣನ ಗುಡಿಯ ಗರ್ಭಗೃಹದ ನಂದಿ

ಈಗ ಸುಮಾರು ೪೦-೫೦ ವರ್ಷಗಳ ಹಿಂದಿನ ಮಾತು. ರಾಮಶೆಟ್ಟಿ ಯಾಕಾಪುರೆ ತೊನಸಳ್ಳಿ ಎಂಬುವ ಒಬ್ಬ ಕಾವಿವೇಷದ ಭಕ್ತನು, 'ನಾನು ಈ ಪಾದುಕೆಗಳನ್ನು ಪೂಜೆಮಾಡಿಕೊಂಡು ಇರುತ್ತೇನೆ' ಎಂದು, ಆಗ ಇನ್ನೂ ಬದುಕಿರುವ ಬಸವರಾಜ ಅವರ ತಂದೆ ಶಿವಶರಣಪ್ಪ ಅವರಿಗೆ ಕೇಳಿಕೊಂಡರಂತೆ. ಅದಕ್ಕವರು ಒಪ್ಪಿ ಪೂಜೆಗೆ ಅವಕಾಶ ಮಾಡಿಕೊಟ್ಟರಂತೆ. ಆತ ಹುಣ್ಣಿವೆ, ಅಮವಾಸೆಗಳಿಗೆ ಬಂದು, ಪಾದರಕ್ಷೆಗಳನ್ನು ಸೊಲಬಣ್ಣನವರ ಮನೆಯಿಂದ ಪಡೆದು, ಕಾಗಿಣಾ ನದಿಗೆ ತೆಗೆದುಕೊಂಡು ಹೋಗಿ, ತಾನು ಸ್ನಾನ ಮಾಡಿ, ಪಾದರಕ್ಷೆಗಳಿಗೆ ನೀರು ಚಿಮುಕಿಸಿ ಪೂಜೆ ಮಾಡುತ್ತಿದ್ದನಂತೆ. ಹೀಗಾಗಿ ಪಾದುಕೆಗಳ ಮೇಲಿನ ಉಂಗುಟ, ಬಾರ ಇತ್ಯಾದಿಗಳೆಲ್ಲ ನೀರು ಹತ್ತಿ ಹಾಳಾಗಿ ಹೋಗಿವೆ. ಆ ಮೊದಲು ಪಾದುಕೆಗಳು ಅತ್ಯಂತ ಸುಂದರವಾಗಿದ್ದು, ಹೊಳೆಯುತ್ತಿದ್ದವು ಎಂದು ನೋಡಿದ ಊರಿನ ಜನ ಈಗಲೂ ಹೇಳುತ್ತಾರೆ. ಪಾದುಕೆಗಳ ಕೆಳಗಿನ ಭಾಗಗಳು ಈಗಲೂ ಅತ್ಯಂತ ಸುಂದರವಾಗಿ ಉಳಿದುಕೊಂಡು ಬಂದಿವೆ.

ಕಲ್ಯಾಣದಿಂದ ಪಾದುಕೆಗಳನ್ನು ಸುತ್ತಿ ತಂದಿದ್ದ ಕಂಬಳಿ ತುಣುಕು, ರೇಶಿಮೆ ಬಟ್ಟೆಗಳ ತುಣುಕುಗಳಲ್ಲಿಯೇ ಇಂದಿಗೂ ಆ ಪಾದುಕೆಗಳನ್ನು ಕಾಪಾಡಿಕೊಂಡು ಬರಲಾಗಿದೆ. ಸೊಲಬಣ್ಣನವರ ಮನೆಯಲ್ಲಿ ಮಾಳಿಗೆ ಜಂತಿಗೆ ಕಟ್ಟುವಾಗ, ಮೂಲ ಪಾದುಕೆಗಳನ್ನು ಸುತ್ತಿತಂದ ಬಟ್ಟೆಯ ತುಕಡಿಗಳಲ್ಲಿ ಸುತ್ತಿ, ಒಂದು ತಗಡಿನ ಡಬ್ಬಿಯಲ್ಲಿ ಹಾಕಿ ಕಟುತ್ತಿದ್ದರಂತೆ.

೧೯೭೨ ರಲ್ಲಿ ಸಿರಿಗೆರೆಯ ತರಳಬಾಳು ಬೃಹನ್ಮಠದ ಡಾ. ಶಿವಕುಮಾರ ಸ್ವಾಮಿಗಳು ಪಾದುಕೆಗಳನ್ನು ನೋಡಲು ಬಂದು, ಅವುಗಳ ಸ್ಥಿತಿಯನ್ನು ಕಂಡು,

ಪಾದುಕೆಗಳ ರಕ್ಷಣೆಗೆಂದು ಗಂಧದ ಕಟ್ಟಿಗೆಯ ಚೌಕಟ್ಟಿನ ಒಂದು ಗಾಜಿನ ಪೆಟ್ಟಿಗೆಯನ್ನು ಮಾಡಿಸಿಕೊಟ್ಟಿದ್ದಾರೆ. ಆ ಪೆಟ್ಟಿಗೆಯಲ್ಲಿ ಈಗ ಪಾದುಕೆಗಳನ್ನು ಇಡಲಾಗಿದೆ. ಅವುಗಳಿಗೆ ಮೂಲದಲ್ಲಿ ಸುತ್ತಿತಂದಿರುವ ಕಂಬಳಿಯ ತುಣುಕು ಮತ್ತು ರೇಶಿಮೆಯ ತುಣುಕುಗಳನ್ನು ಹಾಸಿ, ಅವುಗಳ ಮೇಲೆಯೇ ಪಾದುಕೆಗಳನ್ನು ಇಡುತ್ತಾರೆ.

ಡಾ। ಶಿಕುಮಾರ ಸ್ವಾಮಿಗಳು ಪಾದುಕೆಗಳನ್ನು ಕಾಪಾಡಿಕೊಂಡು ಬಂದ ಮನೆಯವರಿಗೆ ೨೦ ಸಾವಿರ ರೂಪಾಯಿಗಳನ್ನು ಸಹಾಯವಾಗಿ ಇತ್ತರು. ಆ ಹಣದ ಸಹಾಯದಿಂದ ಸೊಲಬಣ್ಣನವರ ಮನೆಯವರು ಪಾದುಕೆಗಳನ್ನು ಕಾಪಾಡಿಕೊಂಡು ಬಂದಿರುವ ಸ್ಥಳವೆಂದು, ತಾವಿದ್ದ ಮನೆಯ ಒಂದು ಕೋಣೆಯಲ್ಲಿ ಪಾದುಕೆಗಳನ್ನು ಇಟ್ಟು, ತಾವು ೨೦ ಸಾವಿರ ರೂಪಾಯಿಗಳಲ್ಲಿ ಬೇರೆಡೆ ಒಂದೆರಡು ಕೋಣೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಪಾದುಕೆಗಳಿರುವ ಸ್ಥಳದಲ್ಲಿ ಈಗ ಒಂದು ಸ್ಮಾರಕಭವನವನ್ನು ನಿರ್ಮಿಸಲಾಗಿದೆ. ಅದರಲ್ಲಿಯೇ ಗರ್ಭಗೃಹದಂತಿರುವ ಒಂದು ಕೋಣೆಯಲ್ಲಿ ಸಿರಿಗೆರೆ ಪೂಜ್ಯರು ಮಾಡಿಸಿ ಕೊಟ್ಟ ಗಂಧದ ಚೌಕಟ್ಟಿನ ಗಾಜಿನ ಪೆಟ್ಟಿಗೆಯಲ್ಲಿ ಪಾದುಕೆಗಳನ್ನು ಇಡಲಾಗಿದೆ. ೧೨ನೇ ಶತಮಾನದ ಶರಣರಿಗೆ ಸಂಬಂಧಿಸಿದಂತೆ ಉಳಿದುಕೊಂಡು ಬಂದಿರುವ ಪಳೆಯುಳಿಕೆ ಇದುವೊಂದೇ ಎಂಬುದು ತುಂಬಾ ಮಹತ್ವದ ಸಂಗತಿ.

ಮಹಾನವಮಿ (ದಸರಾ) ಖಂಡೆ ಪೂಜೆ ದಿನವೇ ಇಲ್ಲಿ 'ಮರಣವೇ ಮಹಾನವಮಿ' ಉತ್ಸವವನ್ನು ಪ್ರತಿವರ್ಷ ಆಚರಿಸಿಕೊಂಡು ಬರಲಾಗುತ್ತಿದೆ. ಈ ಉತ್ಸವದ ಪ್ರಾರಂಭದಲ್ಲಿ ಜ್ಯೋತಿಯನ್ನು ಗವಿಸಿದ್ಧೇಶ್ವರ ಗವಿಯಿಂದ ಪಾದುಕೆಗಳಿರುವ ಸ್ಮಾರಕದವರೆಗೆ ತರಲಾಗುತ್ತದೆ. ಬಸವಕಲ್ಯಾಣದಲ್ಲಿ ಆಚರಿಸುವ ಚೆನ್ನಬಸವಣ್ಣನವರ ಜಯಂತೋತ್ಸವಕ್ಕೂ ಇಲ್ಲಿಂದ ಜ್ಯೋತಿಯನ್ನು ಒಯ್ಯಲಾಗುತ್ತದೆ. ಈ ಜ್ಯೋತಿಯನ್ನು ಮೆರೆಸುವ ಪದ್ಧತಿ ಹಾಕಿದವರು ಡಾ। ಬಿ.ಡಿ.ಜತ್ತಿ ಅವರು. ಅವರು ಉಪರಾಷ್ಟ್ರಪತಿ ಆಗಿದ್ದಾಗ ಈ ಜ್ಯೋತಿಯನ್ನು ದಿಲ್ಲಿಯಿಂದಲೇ ತಂದರೆಂದು ಹೇಳಲಾಗುತ್ತದೆ. ಈಗ ಶರಣರಿಗೆ ಸಂಬಂಧಿಸಿದ ಮಹತ್ವದ ಉತ್ಸವಗಳಲ್ಲಿ ಈ ಜ್ಯೋತಿಯನ್ನು ಬಳಸಲಾಗುತ್ತದೆ. ಇತ್ತೀಚೆಗೆ ಬಿಜನಳ್ಳಿಯಲ್ಲಿರುವ ಈ ಪಾದುಕೆಗಳ ಬಗ್ಗೆ ಭಕ್ತರ ಕುತೂಹಲ ಸಹಜವಾಗಿಯೇ ಬೆಳೆಯುತ್ತಿದ್ದು, ಬಸವಕಲ್ಯಾಣ, ಕೂಡಲ ಸಂಗಮದ ನಂತರ ಈಗ ಮಹತ್ವ ದೊರೆಯಬೇಕಾಗಿರುವುದು ಈ ಪುಟ್ಟ ಗ್ರಾಮ ಬಿಜನಳ್ಳಿಗೆ.

ಬಿಜನಳ್ಳಿಯ ಮೂಲ ಹೆಸರು ನಂದಿಗ್ರಾಮವಾಗಿತ್ತೆಂದೂ, ಶರಣರ ಈ ಪಾದುಕೆಗಳು ಬಂದ ನಂತರವೇ ಇದಕ್ಕೆ ಬಿಜನಳ್ಳಿ ಎಂಬ ಹೆಸರು ಪ್ರಾಪ್ತವಾಗಿದೆ ಎಂಬ ಒಂದು ಸಂಗತಿಯೂ ಪ್ರಚಲಿತದಲ್ಲಿದೆ.

**ಮಾಹಿತಿ : ಬಸವರಾಜ ಶಿವಶರಣಪ್ಪ ಸೊಲಬಣ್ಣ, ಬಸವಣಪ್ಪ ಶಂಕರೆಪ್ಪ ದುಕಾನದಾರ, ಬೀರನಳ್ಳಿ, ಗೌಸ ಪಟೇಲ, ಬೀರನಳ್ಳಿ**

***



ಕಲ್ಯಾಣದಿಂದ ಪಾದುಕೆಗಳನ್ನು ಸುತ್ತಿ ತಂದ ರೇಶ್ಮೆ ಬಂಬಳಿಯ ತುಣುಕುಗಳು

## ಹರಳಯ್ಯಗೆ ಶರಣಾರ್ಥಿ

ಭಕ್ತಿಲಿಂದೆ ಬಸವೇಶನ ಸ್ಮರಣಿ ನಿತ್ಯ ಸ್ಮರಿಸಿರಿ
ಭವದ ಬಾಧಿಯು ನೀಗರಿ
ಸತ್ಯದ ಕಾರ್ಯಕೆ ಸದಾ ಶಾಂತಿಯೆಂಬ
ಮನವ ನೀಡರಿ ನಿಜ ಮುಕ್ತಿಯ ಬೇಡರಿ ॥ ಪ ॥

ರಾಜ ಬಸವೇಶ್ವರ ದರ್ಬಾರಲಿಂದ ತನ್ನ ಮಂದಿರಕ ನಡದಿದರಿ
ಹಾದಿಯಲ್ಲಿ ಸತ್ಯಶರಣ ಹರಳಯ್ಯ ನಮಸ್ಕರಿಸಿದರಿ
ಶರಣನ ಪಾದಕ ಸಾಷ್ಟಾಂಗ ಎಂದು ಬಾಯಿಲಿ ನುಡುದಿದರಿ
ಹರಳಯ್ಯ ತನ್ನ ಮಡದಿಗ ಉಸುರಿದರಿ ದಂಪತಿ ಚಿಂತಿ ಮಾಡದರಿ॥ ೧ ॥

ಪಾಪಿ ಜನ್ಮಕ ಇದಕೇನುಪಾಯವೆಂದು ಯೋಚನೆ ನಡೆಸಿದರಿ
ಅಂಗ ಚರ್ಮಲಿಂದ ಅಪ್ಪಗೊಪ್ಪುವಂತ ಪಾದರಕ್ಷಿ ಮಾಡಿದರಿ
ಮಡಿಯ ವಸ್ತ್ರದಲಿ ಮುಚ್ಚಿ ಬಸವನ ಎದುರಿಗೀ ಇಟ್ಟಿದರಿ
ಬಿಚ್ಚಿ ಬಸವ ಕೈಯಲಿ ಹಿಡಿದಿದರಿ ದಂಪತಿ ತಸ್ವೀರ ನೋಡಿದರಿ ॥ ೨ ॥

ಸಾಕ್ಷಾತ ಶಿವ ಪಾರ್ವತಿ ಇವರೆಂದು ತನ್ನ ತೆಲಿ ಮೇಲಿಟ್ಟುಕೊಂಡಿದರಿ
ಶಿವ ಶಿವ ಎಂದು ಸತ್ಯ ಶರಣನ ಸ್ತೋತ್ರ ಮಾಡಿದರಿ
ಕರ್ಮದ ಕೃತಿ ಕರದಿ ಗೈದೆನೆಂದು ಗಾಬರಿಯಾಗಿದರಿ
ಇಸಗೊಂಡು ವಾಪಿಸಹೊಂಟಿದರಿ ಮಧುವರಸ ಏನೆಂದು ಕೇಳಿದರಿ॥೩॥

ಖಬರವಿಲ್ಲದೆ ಜಬರದಸ್ತೀಲಿ ಕಾಲಗ ಮೆಟ್ಟಿದರಿ
ಚಟ್ಟನೆ ಚೀರಿ ಅರಸನ ಶರೀರಕ ಅರ್ಭಾಟ ಇಟ್ಟಿತರಿ
ವೈದ್ಯಗಾರ ಭಾರಿಭಾರಿ ಡಾಕ್ಟರರ ಇಲಾಜ ನಿಂತಿತರಿ
ನೀರನೀರೇ ಅಂತಿದರಿ ಲೆಕ್ಕಿಲ್ದ ಕೊಡಗಳ ನೆರಸಿದರಿ ॥ ೪ ॥

ಪಾಪೀ ಶರೀರಕ ಜಾಂಚಾಗೆದ ವಿಚಾರ ಹ್ಯಾಂಗ ಬಂದಿತರಿ
ಬ್ಯಾಸೊತ್ತು ಸಮಗಾರ ಬಚ್ಚಲ ನೀರ ಮೈಮೇಲೆ ಸುರದಿದರಿ
ಕೂಡಲೇ ಅರಸ ತಪ್ಪಾಯ್ತೆಂದು ಸಾಷ್ಟಾಂಗ ಹಾಕಿದರಿ
ಲಿಂಗ ಧಾರಣ ಆಗೀದರಿ ಮಗಳ ಕೊಟ್ಟು ಮದುವೆಯ ಮಾಡಿದರಿ ॥೫॥

ಬಸವನಿಂದೆ ಭವಲೋಕ ಶ್ರೇಷ್ಟವೆಂದು ಶೃತಿಯ ಸಾರೀತರಿ
ಬಿಡದೆ ಆತನ ನಾಮ ನುಡಿದರೆ ಹೊಂದೊದು ಸದ್ಗತೀರಿ
ದೇಶದೊಳಗೆ ಸಣ್ಣಳ್ಳಿ ಗ್ರಾಮದ ನಾಮ ಕರಹರಿ
ನೀತಿ ಮಾರ್ಗ ಹಿಡಿದು ನಡೀರಿ ಸರ್ವರಿಗೆ ಅದ ನಮ್ಮ ವಿನಂತೀರಿ ॥೬॥

ಕವಿ : ಶ್ರೀ ಶರಣಪ್ಪ ಕರಹರಿ

***

**ಸೇಡಂ ತಾಲೂಕು :**

## ೨. ಬೀರನಳ್ಳಿ :

## ಮಡಿಬಸವಣ್ಣನ ಕಟ್ಟಿ

ಹರಳಯ್ಯ-ಕಲ್ಯಾಣಮ್ಮ ಅವರು ಬಸವಣ್ಣನವರಿಗಾಗಿ ತಯಾರಿಸಿದ ಪಾದುಕೆಗಳನ್ನ ಹೊತ್ತು ಹೊರಹೊಂಟ ಹರಳಯ್ಯನವರ ಮಗ ಶೀಲವಂತನ ಜೊತೆಗೆ ಹೊರಟ ಶರಣರಲ್ಲಿ ಪ್ರಮುಖವಾದ ಅನುಯಾಯಿ ಶರಣನೆಂದರೆ ಮಡಿಬಸವಣ್ಣ. ಬಿಜನಳ್ಳಿ ಎಂಬ ಗ್ರಾಮದಲ್ಲಿ ಪಾದುಕೆಗಳನ್ನು ಒಬ್ಬ ಒಕ್ಕಲಿಗನಿಗೆ ಒಪ್ಪಿಸಿ, ಅಲ್ಲಿಂದ ಶೀಲವಂತನನ್ನು ಮುಂದೆ ಪ್ರಯಾಣ ಬೆಳಸಲು ಅಹಕರಿಸಿ, ತಾವು ಮಾತ್ರ ಬಿಜನಳ್ಳಿಯ ಮಗ್ಗುಲೂರಾದ ಬೀರನಳ್ಳಿಗೆ ಬಂದು ಉಳಿಯುತ್ತಾರೆ.

ಬೀರನಳ್ಳಿಯಲ್ಲಿ ಮಡಿಬಸವಣ್ಣನವರಿಗೆ ಊರ ಹಿರಿಯರೊಬ್ಬರು ತಮ್ಮ ಮನೆಯಲ್ಲಿ ಸ್ಥಳಾವಕಾಶ ಒದಗಿಸಿ ಕೊಟ್ಟಂತೆ ತೋರುತ್ತದೆ. ಆದರೆ ಮುಸ್ಲಿಮ ಜನಾಂಗದ ಮಾಲೀಗೌಡರ ಮನೆ ಅದು ಎಂದು ಸ್ವತಃ ಆ ಮನೆತನದ ಈಗಿನ ಹಿರಿಯರಾದ ಗೌಸ ಪಟೇಲ ಅವರು ಹೇಳುತ್ತಾರೆ. ಈ ಮನೆತನಕ್ಕೆ ಸಂಬಂಧಿಸಿದ ನಾಲ್ಕು ಎಕರೆ ಹೊಲವನ್ನು ಮಡಿಬಸವಣ್ಣನವರಿಗೆ ಕೊಟ್ಟಿರುವ ಉದಾಹರಣೆಯನ್ನೂ ಅವರು ಕೊಡುತ್ತಾರೆ. ಇವತ್ತಿಗೂ ಆ ಜಮೀನು ಮಡಿಬಸವಣ್ಣನವರ ಗುಡಿಯ ಕೆಳಗೇ ಇದೆ. ಅದೇನಿದ್ದರೂ ಈ ಸಂಗತಿ ನಂತರದ ದಿನಗಳಲ್ಲಿ ನಡೆದಿರುವ ಸಾಧ್ಯತೆ ಇದೆ.

ಮಡಿಬಸವಣ್ಣನವರು ಬೀರನಳ್ಳಿಯಲ್ಲಿ ದಿನವೂ ಮಡಿಯಿಂದ ಇರುವುದು, ಧ್ಯಾನ, ಪೂಜೆಗಳಲ್ಲಿ ತಲ್ಲೀನರಾಗಿರುವುದು ಇತ್ಯಾದಿಗಳನ್ನು ಗಮನಿಸಿ ಅವರಿಗೆ ಮಡಿಬಸವಣ್ಣ ಎಂಬ ಅನ್ವರ್ಥಕ ನಾಮ ಬಂದಿರಬೇಕೆನಿಸುತ್ತದೆ. ಅವರು ದಿನಾಲೂ ಕಂತಿಭಿಕ್ಷೆ ಮಾಡಿ ಊಟಮಾಡುತ್ತಿದ್ದರೆಂದು ಹೇಳಲಾಗುತ್ತದೆ.

ಮಡಿಬಸವಣ್ಣನವರ ಬಗ್ಗೆ ಬೀರನಳ್ಳಿಯಲ್ಲಿ ಅನೇಕ ಕಥೆಗಳು ಉಳಿದುಕೊಂಡು ಬಂದಿವೆ. 'ದುಕಾನದಾರ' ಹೆಸರಿನ ಒಂದು ಮನೆಯಲ್ಲಿ ಮಡಿಬಸವಣ್ಣನವರು



ಮಡಿಬಸವಣ್ಣನವರು ಬೀರನಳ್ಳಿ ಬಿಡುವಾಗ ನದಿಗೆ ಹಾರಿದ ಸ್ಥಳ– ಬಸವಣ್ಣನ ಕಟ್ಟೆ

ಯಾವಾಗಲೂ ಕುಳಿತುಕೊಳ್ಳುತ್ತಿದ್ದರಂತೆ. ಒಬ್ಬ ಭಿಕ್ಷುಕ ದುಕಾನದಾರ ಅವರ ಮನೆಗೆ ಭಿಕ್ಷೆಗೆ ಬರಲು, ಮನೆಯಲ್ಲಿ ಕೇಲಿನ ತುಂಬ ಇದ್ದ ಗೋದಿಯನ್ನು ಮಡಿಬಸವಣ್ಣನವರು ಭಿಕ್ಷುಕನಿಗೆ ಹಾಕಿಬಿಟ್ಟರಂತೆ. ಇದರಿಂದ ಮನೆಯವರು ಕೋಪಗೊಂಡರು. ಶರಣರು ಅಲ್ಲಿಂದ ಎದ್ದು ಹೋದರು. ದುಕಾನದಾರ ಅವರ ಮನೆಗೆ ಬಡತನ ಆವರಿಸಿದ್ದು, ಇಂದಿಗೂ ಆ ಮನೆತನ ಬಡತನವ ಅವತ್ತಿನಿಂದ ಅನುಭವಿಸುತ್ತಿದೆ ಎಂದು ಹೇಳಲಾಗುತ್ತದೆ.

ಇಂತಹ ಅನೇಕ ಘಟನೆಗಳು ಬೀರನಳ್ಳಿಯಲ್ಲಿ ನಡೆದವೆಂದು ಅಲ್ಲಿಯ ಜನ ಕಥೆಮಾಡಿ ಹೇಳುತ್ತಾರೆ. ಒಟ್ಟಿನ ಮೇಲೆ ಮಡಿಬಸವಣ್ಣನವರು ತಮ್ಮ ಸ್ವಭಾವಕ್ಕೆ ಹೊಂದಿಕೆಯಾಗದ ಘಟನೆಗಳಿಂದ ಬೇಸತ್ತು ಬೀರನಳ್ಳಿ ಬಿಡಲು ಯೋಚಿಸಿದಂತಿದೆ. ಕಾಗಿಣಾ ನದಿ ತುಂಬಿ ಹರಿಯುತ್ತಿತ್ತು. ಅಂತಹದರಲ್ಲಿಯೇ ಊರವರು ಬೇಡವೆಂದರೂ ಧುಮುಕಿ, ಬಿಜನಳ್ಳಿ ಗ್ರಾಮದ ಅಡವಿಯಲ್ಲಿ, ತಾವು ಎಲ್ಲಿ ಪಾದರಕ್ಷೆಗಳನ್ನು ಒಕ್ಕಲಿಗನಿಗೆ ಒಪ್ಪಿಸಿದರೋ ಅಲ್ಲಿಯೇ ಬಂದು ಉಳಿದರು. ಬಸವಣ್ಣನವರು ಬೀರನಳ್ಳಿಯಲ್ಲಿ ನದಿಗೆ ಜಿಗಿದ ಸ್ಥಳವನ್ನು ಇವತ್ತಿಗೂ **'ಮಡಿಬಸವಣ್ಣನವರ ಕಟ್ಟೆ'** ಎಂದು ತೋರಿಸುತ್ತಾರೆ.

ಮಡಿಬಸವಣ್ಣನವರ ಸ್ಮಾರಕ-ಗುಡಿ ಬಿಜನಳ್ಳಿ ಅಡವಿಯಲ್ಲಿದ್ದರೂ ಬೀರನಳ್ಳಿಯ ಜನ ಈಗಲೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಅವರೊಬ್ಬ ಮಹಾತ್ಮ ಎಂಬ

ಭಾವ ಎರಡೂ ಊರುಗಳಲ್ಲಿದೆ. ೧೪ನೇ ಶತಮಾನದ ನಂತರ ಈ ಭಾಗದಲ್ಲಿ ಮುಸ್ಲೀಮರು ವ್ಯಾಪಕವಾಗಿ ಎಲ್ಲ ಹಳ್ಳಿಗಳನ್ನು ಪ್ರವೇಶಿಸಿದರು. ಬೀರನಳ್ಳಿಯ ಜನ ಮಡಿಬಸವಣ್ಣನವರಿಗೆ ನಡೆದುಕೊಳ್ಳುತ್ತಿದ್ದುದರಿಂದ ಆ ಊರಿನ ಮಾಲೀಗೌಡಕಿ ಹೊಂದಿರುವ ಮುಸ್ಲೀಮ ಗೌಡರೊಬ್ಬರು ಮಡಿಬಸವಣ್ಣನವರ ಗುಡಿಗೆ ೪ ಎಕರೆ ಜಮೀನು ಕೊಟ್ಟಂತೆ ತೋರುತ್ತದೆ. ಆ ಜಮೀನು ಈಗಲೂ ಮಡಿಬಸವಣ್ಣನವರ ಗುಡಿಯ ಅಧೀನದಲ್ಲಿಯೇ ಇದೆ.

ಮಾಲಿಗೌಡರ ಮನೆತನಕ್ಕೆ ಸಂಬಂಧಿಸಿದ ಗೌಸ ಪಟೇಲ ಎನ್ನುವವರು ಒಂದು ಕಥೆಯನ್ನು ಹೇಳುತ್ತಾರೆ. ಮಾಲೀಗೌಡರು ಮಡಿಬಸವಣ್ಣನವರಿಗೆ ನಾಲ್ಕು ಎಕರೆ ಜಮೀನು ಕೊಟ್ಟು, ಅದರಿಂದ ಬಂದ ಆಹಾರಧಾನ್ಯಗಳನ್ನು ಪಡೆದು ಬೀರನಳ್ಳಯಲ್ಲಿಯೇ ಇರಲು ಹೇಳಿದರಂತೆ. ಗೌಡ ಕುಲಕರ್ಣಿ ಕೂಡಿ, ಒಕ್ಕಲಿಗರಿಂದ ವಸೂಲಿಯಾದ ಬಿರಾಡ (ಜಮೀನಿನ ಸುಂಕ) ಹಣವನ್ನು ಕಛೇರಿಗೆ ತುಂಬಲು ಚಿತಾಪುರ ಗ್ರಾಮಕ್ಕೆ ಹೋಗುತ್ತಿದ್ದರಂತೆ. ಆ ದಾರಿಯಲ್ಲಿಯೇ ಮಡಿಬಸವಣ್ಣನವರಿಗೆ ಕೊಟ್ಟ ಹೊಲ ಬೆಳೆಯಿಂದ ತುಂಬಿ ನಿಂತಿತ್ತಂತೆ. ಇದನ್ನು ಗಮನಿಸಿದ ಆ ಊರ ಕುಲಕರ್ಣಿ ಮಾಲೀಗೌಡರ ಮನ ಕೆಡಿಸಿ, ಹೊಲವನ್ನು ಹಿಂತಿರುಗಿ ಪಡೆಯಲು ಪುಸಲಾಯಿಸಿದರಂತೆ. ಅದರಂತೆ ಮಾಲೀಗೌಡರು ತಲೆ ದೂಗಿದರಂತೆ.



ಮಡಿ ಬಸವಣ್ಣ ಶ್ರಾಪ ಕೊಟ್ಟ ದುಕಾನದಾರ ಮನೆತನದವರ ಮನೆ

ಮಡಿಬಸವಣ್ಣನವರಿಗೆ ಕರೆದು ನೀವು ಈ ವರ್ಷ ಬೆಳೆದಿರುವ ಬೆಳೆಯನ್ನು ತೆಗೆದುಕೊಂಡು ನಮ್ಮ ಹೊಲ ನಮಗೆ ಕೊಡಿರಿ, ಎಂದು ಹೇಳಿದನಂತೆ. ಅಂದು ಪಟೇಲರ ಕನಸಿನಲ್ಲಿ ಮಡಿಬಸವಣ್ಣ ಬಂದು, ನಿನ್ನ ಹೊಲ ನೀನು ತೆಗೆದುಕೋ ಎಂದರಂತೆ. ಕುಲಕರ್ಣಿಗೆ 'ನಿಮ್ಮ ವಂಶದಲ್ಲಿ ಒಂದೇ ಗಂಡು ಸಂತಾನವಾಗಲಿ' ಎಂದೂ, ಪಟೇಲರಿಗೆ 'ಅನ್ನ ಕಡಿಮೆಯಾಗಲಿ, ಸಂತಾನ ಜಾಸ್ತಿಯಾಗಲಿ' ಎಂದೂ ಶಾಪವಿತ್ತರಂತೆ. ಅದರಂತೆ ಈಗಲೂ ಇರುವ ಈ ಮನೆತನಗಳಲ್ಲಿ ಮಡಿಬಸವಣ್ಣನವರು ಅಂದಂತೆಯೇ ಸ್ಥಿತಿ ಇದೆ ಎಂದು ಹೇಳಲಾಗುತ್ತದೆ. ಕುಲಕರ್ಣಿ ಅವರ ಮನೆಯಲ್ಲಿ ಇವತ್ತಿಗೂ ಒಂದೇ ಗಂಡು ಸಂತತಿ ಆಗುತ್ತ ಬಂದಿದೆ ಎಂದೂ, ಪಟೇಲರ ಮನೆಯ ಸ್ಥಿತಿ ಇಂದಿಗೂ ಸರಿಯಿಲ್ಲ ಎಂದೂ ಗೊತ್ತಾಗುತ್ತದೆ. ಆದರೆ ಜಮೀನನ್ನು ಹಿಂತಿರುಗಿ ಪಡೆದ ಪಟೇಲರು ನಂತರ ಪುನಃ ಆ ಜಮೀನನ್ನು ಮಡಿಬಸವಣ್ಣನವರಿಗೆ ಕೊಟ್ಟಿದ್ದಾರೆಂದು, ಆ ಜಮೀನು ಇವತ್ತಿಗೂ ಮಡಿಬಸವಣ್ಣನವರ ಗುಡಿಯ ಅಧೀನದಲ್ಲಿದೆ ಎಂದೂ ಗೊತ್ತಾಗುತ್ತದೆ.

ಇದು ಈ ಭಾಗದಲ್ಲಿ ಮುಸ್ಲೀಮರು ಪ್ರವೇಶಿಸಿದ ನಂತರ ನಡೆದ ಘಟನೆಯಾಗಿರವ ಸಾಧ್ಯತೆ ಇದೆ. ಅಥವಾ ಹೊಲವನ್ನು ಮಡಿಬಸವಣ್ಣನವರು ಜೀವಂತ ಇದ್ದಾಗಲೇ




ದುಕಾನದಾರ ಅವರ ಮನೆಯ ಗೋಡೆಯಲ್ಲಿರುವ
ಧಾನ್ಯ ತುಂಬಿಡುವ ಕೇಲ ಮಾದರಿ



ದುಕಾನದಾರ ಅವರ ಮನೆಯ ಗೋಡೆಯ ತುದಿಯಲ್ಲಿರುವ
ಧಾನ್ಯ ತುಂಬುವ ಕೀಲ ಮಾದರಿ

ಕೊಟ್ಟಿದ್ದರೆ, ಅದು ಆಗ ಆ ಊರಿನ ಗೌಡರಾದವರು ಕೊಡಮಾಡಿ, ನಂತರ ಆ ಹೊಲವನ್ನು ಮುಸ್ಲೀಮ ಮಾಲಿಗೌಡರು ಕುಲಕರ್ಣಿಯ ಸಲಹೆಯ ಮೇರೆಗೆ ಹಿಂತಿರುಗಿ ಪಡೆದು, ತಮಗೆ ಕಾಡಾಟ ಪ್ರಾರಂಭವಾದುದರಿಂದ ಮತ್ತೆ ಹಿಂತಿರುಗಿಸಿರುವ ಸಾಧ್ಯತೆ ಇದೆ. ಏಕೆಂದರೆ ಗೌಸ ಪಟೇಲ ಹೇಳುವಲ್ಲಿ ಈ ಊಹೆಗೆ ಒಂದು ಸಣ್ಣ ಮೌಖಿಕ ಸಾಕ್ಷಿ ಉಳಿದುಕೊಂಡು ಬಂದಿದೆ. ಅದೇನೆಂದರೆ, **'ಮಡಿಬಸವಣ್ಣನವರು ಮಾಲೀಗೌಡರ ಕನಸಿನಲ್ಲಿ ಬಂದು ನಿನ್ನ ಹೊಲವನ್ನು ಹಿಂತಿರುಗಿ ನೀನು ಪಡೆ'** ಎಂದು ಹೇಳಿದರೆಂಬ ಮಾತು. ಕನಸಿನಲ್ಲಿ ಈ ಸಂದೇಶ ಕೊಡುತ್ತಾರೆಂದರೆ ಅದು ನಂತರದ ಘಟನೆಯೇ ಎಂಬುದು ಸ್ಪಷ್ಟವಾಗುತ್ತದೆ. ಅದೇನಿದ್ದರೂ ಮಡಿಬಸವಣ್ಣನವರ ಜಾತ್ರೆ ಮತ್ತಿತರ ಯಾವುದೇ ಉತ್ಸವ ನಡೆದರೂ ಇಂದಿಗೂ ಈ ಗೌಸ ಪಟೇಲ ಮನೆತನದವರಿಗೆ ಆಮಂತ್ರಣ ಇರುತ್ತದಂತೆ. ಅವರಿಗೆ ಆಮಂತ್ರಿಸದೇ ಮಡಿಬಸವಣ್ಣ ಹಾಗೂ ಪಾದುಕೆಗಳಿಗೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮವನ್ನು ಬಿಜನಳ್ಳಿಯವರು ಮಾಡುವುದಿಲ್ಲ ಎಂದು ತಿಳಿದುಬರುತ್ತದೆ.

ಮಾಹಿತಿ : ಬಸವಣಪ್ಪ ಶಂಕರೆಪ್ಪ ದುಕಾನದಾರ, ಬೀರನಳ್ಳಿ,
ಗೌಸ ಪಟೇಲ, ಬೀರನಳ್ಳಿ

***

**ಸೇಡಂ ತಾಲೂಕು :**

## ೩. ಕೋಡ್ಲಾ :

## ಉರಿಲಿಂಗಪೆದ್ದಿ ಮಠ

ಸೇಡಂ ತಾಲೂಕಾ ಸ್ಥಳದಿಂದ ದಕ್ಷಿಣಕ್ಕೆ ೨೦ ಕಿ.ಮೀ. ದೂರದಲ್ಲಿ ಕೋಡ್ಲಾ. (ಕೋಡ್ಲಿ) ಎಂದು ಕರೆಯುವ ಒಂದು ಗ್ರಾಮವಿದೆ. ಇದು ಪ್ರಸಿದ್ಧವಾಗಿರುವುದು ಅಲ್ಲಿಯ ಉರಿಲಿಂಗಪೆದ್ದಿ ಶರಣರ ಮಠದಿಂದಾಗಿ. ಶರಣಪರಂಪರೆಗೆ ಸಂಬಂಧಿಸಿದಂತೆ ಇದೊಂದು ಅಪರೂಪದ ಉದಾಹರಣೆ. ಉರಿಲಿಂಗಪೆದ್ದಿ ಅಸ್ಪೃಶ್ಯ ಸಮಾಜಕ್ಕೆ ಸೇರಿದ ಶರಣನಾಗಿರುವುದರಿಂದ ಅವರ ಹೆಸರಿಗೆ ದಲಿತ ಕೇರಿಯಲ್ಲಿ ಇಲ್ಲಿ ಒಂದು ಮಠ ಹುಟ್ಟಿಕೊಂಡಿದೆ. ಧ್ಯಾನಕ್ಕಾಗಿ ಒಂದು ಸಣ್ಣ ಗವಿಯನ್ನೂ ನಿರ್ಮಿಸಿಕೊಂಡಿದ್ದಾರೆ.

ಬೇವಿನ ಚಿಂಚೋಳಿಯ ಶಿವಯೋಗಿ ಸ್ವಾಮಿಗಳು ಉರಿಲಿಂಗಪೆದ್ದಿ ಮಠಗಳನ್ನು ವಿಶೇಷವಾಗಿ ದಲಿತ ಕೇರಿಗಳಲ್ಲಿ ಸ್ಥಾಪಿಸುವ ಒಂದು ಪರಂಪರೆಯನ್ನು ಪ್ರಾರಂಭಿಸಿದರು. ಶಿವಯೋಗಿ ಸ್ವಾಮಿಗಳ ಮೂಲ ಹೆಸರು ತುಕಾರಾಮ ಎಂದು. ತಂದೆ ಅಪ್ಪಣ್ಣ, ತಾಯಿ ಕಲ್ಲಮ್ಮ. ಇವರು ಹರಿಜನ ಕೋಮಿಗೆ ಸೇರಿದ ಸಾತ್ವಿಕರು ಎಂದು ಗೊತ್ತಾಗುತ್ತದೆ. ಮತ್ತು ಇವರು ಬದುಕಿದ್ದುದು ಅಂದಾಜ ೧೮೬೭ ರಿಂದ ೧೯೪೭ರ ವರೆಗಿನ ವರ್ಷಗಳಲ್ಲಿ.

ಬೀದರ ಜಿಲ್ಲೆಯ ಹುಮ್ನಾಬಾದ ತಾಲೂಕಿನ ಬೇವಿನ ಚಿಂಚೋಳಿ ಗ್ರಾಮದ ಸಾವುಕಾರ ಕಲ್ಲಪ್ಪ ಕೋರಿ ಎಂಬುವವರಲ್ಲಿ ಇವರು ಒಕ್ಕಲುತನ ಮಾಡಲು ಆಳಾಗಿ ದುಡಿಯಲು ಇದ್ದರಂತೆ. ಆದರೆ ಇವರಿಗೆ ಪೂಜೆ ಧ್ಯಾನಗಳಲ್ಲಿ ಆಸಕ್ತಿ ಹೆಚ್ಚಾಗಿ, ದುಡಿಯುವ ಕೆಲಸವನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ. ಅವರು ಮುಂದೆ ಶರಣರಾಗಿಯೇ ತಮ್ಮ ಜೀವನವನ್ನು ಕಳೆಯುತ್ತಾರೆ.

ನಿರಕ್ಷರಿಗಳಾದ ಇವರು ಆ ಭಾಗದಲ್ಲಿ ಕಾಲರಾ ರೋಗ ಹಬ್ಬಿಕೊಂಡಾಗ, ೨೧ ದಿನಗಳ ವರೆಗೆ ಒಂಟಿಗಾಲಿನ ಮೇಲೆ ತಪಸ್ಸಿಗೆ ನಿಂತು ಆ ಊರಿಗೆ ಕಾಲರಾ ಹಬ್ಬಗೊಡಲಿಲ್ಲ ಎಂದು ಅವರ ಮಹಾತ್ಮೆಯನ್ನು ಜನ ಇವತ್ತಿಗೂ ಕೊಂಡಾಡುತ್ತಾರೆ. ಹೀಗಾಗಿ ಅವರಿಗೆ ಜನ 'ತುಕಾರಾಮ ಮಹಾರಾಜ' ಎಂದೂ ಮುಂದೆ 'ಶಿವಯೋಗಿ ಸ್ವಾಮಿ' ಎಂದೂ ಕರೆಯಲು ಪ್ರಾರಂಭಿಸಿದರೆಂದು ಗೊತ್ತಾಗುತ್ತದೆ.



ಉರಿಲಿಂಗಪೆದ್ದಿ ಮಠ

ನಂತರ ಓಡಾಟ ಪ್ರಾರಂಭ ಮಾಡಿದ ಶಿವಯೋಗಿ ಸ್ವಾಮಿಗಳು ಹಳ್ಳಿಹಳ್ಳಿಗಳಿಗೆ ತೆರಳಿ, ಅಲ್ಲಿಯ ಹರಿಜನ ಕೇರಿಗಳಲ್ಲಿ ಸಂಚರಿಸಿ, ಜನರಿಗೆ ಶರಣ ತತ್ತ್ವಗಳನ್ನು ತಿಳಿಹೇಳುವ, ಲಿಂಗದೀಕ್ಷೆ ಮಾಡುವ ಕೆಲಸದಲ್ಲಿ ನಿರತರಾದರು. ಜೊತೆಗೆ ಹರಿಜನ ಕೇರಿಗಳಲ್ಲಿ ಉರಿಲಿಂಗಪೆದ್ದಿ ಮಠಗಳನ್ನು ಸ್ಥಾಪನೆ ಮಾಡುತ್ತ, ದಲಿತರನ್ನೇ ಮಠದ ಸ್ವಾಮಿಗಳನ್ನಾಗಿ ಮಾಡುವ ದೊಡ್ಡ ಪರಂಪರೆಯನ್ನು ಪ್ರಾರಂಭಿಸಿದರು.

ತಮ್ಮ ೪೦ನೇ ವಯಸ್ಸಿನಲ್ಲಿ ಸುಮಾರು ೧೯೦೭ ರಲ್ಲಿ ಹುಮ್ನಾಬಾದ ತಾಲೂಕಿನ ಬೆಮಳಖೇಡ ಊರಿಗೆ ಬಂದು ಅಲ್ಲಿ ಪ್ರಪ್ರಥಮ ಉರಿಲಿಂಗಪೆದ್ದಿ ಮಠವನ್ನು ಸ್ಥಾಪಿಸಿದರು. ನಂತರ ಅವರು ಉರಿಲಿಂಗಪೆದ್ದಿ ಮಠ ಸ್ಥಾಪಿಸಿದ್ದು ಸೇಡಂ ತಾಲೂಕಿನ ಕೋಡ್ಲಾ ಗ್ರಾಮದಲ್ಲಿ. ಈ ಮಠದಿಂದ ಅವರು ಮಠಾಧಿಪತಿಗಳನ್ನು ನೇಮಿಸುವ ಪದ್ಧತಿಯನ್ನು ಪ್ರಾರಂಭಿಸಿದರು.

ಕೋಡ್ಲಾ ಉರಿಲಿಂಗಪೆದ್ದಿ ಮಠವನ್ನು ವಿರಕ್ತಮಠದ ಪರಂಪರೆಯಾಗಿ ಪ್ರಾರಂಭಿಸಿದರು. ತಾವೇ ಅದರ ಮೊದಲ ಸ್ವಾಮಿಗಳಾಗಿ ಕೆಲಸ ಮಾಡಿದರು. ನಂತರ ಶಿವಯೋಗಿ ಸ್ವಾಮಿಗಳು ಈ ಮಠಕ್ಕೆ ನೇಮಿಸಿದ ಗುರುಗಳೆಂದರೆ ಗುರುಲಿಂಗ ಸ್ವಾಮಿಗಳು, ನಂತರ ಮಹಾದೇವ ಸ್ವಾಮಿಗಳು. ಈಗ ನಂಜುಂಡ ಸ್ವಾಮಿಗಳು ಕೋಡ್ಲಾಮಠದ ಪೀಠಾಧಿಪತಿಗಳಾಗಿದ್ದಾರೆ. ಈ ಕೋಡ್ಲಾ ಮಠವೇ ಮುಖ್ಯವಾಗಿರಬೇಕು, ಇನ್ನು ಮುಂದೆ ಹುಟ್ಟುವ ಎಲ್ಲ ಮಠಗಳು ಕೋಡ್ಲಾ ಮಠದ ಶಾಖಾ ಮಠಗಳಾಗಿ

ಕೆಲಸ ನಿರ್ವಹಿಸಬೇಕು ಎಂದು ನಿರ್ಧರಿಸಿದವರು ಶಿವಯೋಗಿ ಸ್ವಾಮಿಗಳೆ. ಇದರ ಶಾಖಾಮಠಗಳು ಬೀದರ, ಕಲಬುರ್ಗಿ, ಯಾದಗೀರ, ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹಬ್ಬಿಕೊಂಡಿವೆ. ಅವರು ಮೊದಲಿಗೆ ಸ್ಥಾಪಿಸಿದ ಬೆಮಳಖೇಡ ಮಠವೂ ಕೋಡ್ಲಾಮಠದ ಆಡಳಿತಕ್ಕೆ ಒಳಪಟ್ಟು ಕೆಲಸ ಮಾಡುತ್ತಿದೆ.

ಶಿವಯೋಗಿ ಸ್ವಾಮಿಗಳು ಸ್ಥಾಪಿಸಿದ ಮಠಗಳ ವಿವರ ಹೀಗಿದೆ :

೧. ಬೆಮಳಖೇಡ, ತಾ. ಹುಮ್ನಾಬಾದ, ಜಿ. ಬೀದರ
೨. ಹಳ್ಳಿಖೇಡ (ಬಿ), ತಾ. ಹುಮ್ನಾಬಾದ
೩. ಭಾಲ್ಕಿ,
೪. ಬೇಲೂರ, ತಾ. ಬಸವಕಲ್ಯಾಣ
೫. ಟೇಂಗಳಿ, ತಾ. ಚಿತಾಪೂರ, ಜಿ. ಕಲಬುರ್ಗಿ
೬. ಹೊನಗುಂಟಿ "
೭. ಗುಂಡಗುರ್ತಿ "
೮. ಇಂಗಳಗಿ "
೯. ಉರುಸಗುಂಡಗಿ, ತಾ. ಶಹಪುರ, ಜಿ. ಯಾದಗೀರ
೧೦. ಯಾದಗಿರಿ (ಕೊಟಗರವಾಡಾ-ಗಲ್ಲಿ)
೧೧ ತಂಗಡಗಿ, ತಾ. ಯಾದಗಿರಿ

ಹೈದ್ರಾಬಾದ ಕರ್ನಾಟಕದಲ್ಲಿರುವ ಈ ಹನ್ನೊಂದು ಮಠಗಳಲ್ಲದೆ, ಮೈಸೂರು ಭಾಗದಲ್ಲಿ ೨೧ ಮಠಗಳನ್ನು ಸ್ಥಾಪನೆ ಮಾಡಿದ್ದಾರೆಂದು ತಿಳಿದುಬರುತ್ತದೆ. ಶಿವಯೋಗಿ ಸ್ವಾಮಿಗಳು ಒಬ್ಬ ನಿರಕ್ಷರಿಯಾಗಿದ್ದು, ಅವರು ಬಸವಕಲ್ಯಾಣ ನಾಡಿನಿಂದ ಮೈಸೂರುವರೆಗೆ ಪ್ರಯಾಣ ಬೆಳೆಸಿದ್ದು, ದಲಿತ ಕೇರಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿಸಿದ್ದು, ಇಷ್ಟೊಂದು ಪ್ರಮಾಣದಲ್ಲಿ ಮಠಗಳನ್ನು ಸ್ಥಾಪಿಸಿ, ಅವೆಲ್ಲ ಸಾಮಾಜಿಕ ಧಾರ್ಮಿಕ ಕೆಲಸಗಳಲ್ಲಿ ತೊಡಗುವಂತೆ ಮಾಡಿದ್ದು ಶಿವಯೋಗಿ ಸ್ವಾಮಿಗಳ ಅದ್ಭುತ ಸಾಮಾರ್ಥ್ಯವನ್ನು ತೋರಿಸಿಕೊಡುತ್ತವೆ.


ಶಿವರಾತ್ರಿ, ಶ್ರಾವಣಗಳಲ್ಲಿ ಈಗಿನ ನಂಜುಂಡ ಸ್ವಾಮಿಗಳು ಲಿಂಗದೀಕ್ಷೆ ಮಾಡುತ್ತಿರುತ್ತಾರೆ. ಕೋಡ್ಲಾದ ಹರಿಜನ ಕೇರಿಯಲ್ಲಿ ಸುಮಾರು ಅರ್ಧದಷ್ಟು ಜನ ಲಿಂಗದೀಕ್ಷೆ ಪಡೆದಿದ್ದಾರೆಂದು ತಿಳಿದುಬರುತ್ತದೆ. ಮಠದ ಕೆಳಗೆ ೨೫ ಎಕರೆ ಜಮೀನಿದೆ. ಇತ್ತೀಚೆಗೆ ಜಾತ್ರೆಯನ್ನೂ ಪ್ರಾರಂಭಿಸಿದ್ದು, ರಥೋತ್ಸವವೂ ನಡೆಯುತ್ತದೆ. ಈ ಮಠಕ್ಕೆ ಮರಿಗಳನ್ನು ತರುವಾಗ ಮೈಸೂರಿನ ಕಡೆಯಿಂದಲೇ ತರಲಾಗುತ್ತಿದೆ. ಮೈಸೂರು ಮಠ ಕೋಡ್ಲಾಮಠದ ಶಾಖಾಮಠವಾದರೂ ಶಿಕ್ಷಣ ಪಡೆದವರು ಮೈಸೂರಿನ ಮಠಕ್ಕೆ ಅಧಿಪತಿಗಳಾಗಿ ಬರುತ್ತಿರುವುದರಿಂದ ಅಲ್ಲಿಯ ಮಠದ ಪ್ರಭಾವ ಜಾಸ್ತಿಯಾಗಿದೆ.

ಈಗಿರುವ ನಂಜುಂಡ ಸ್ವಾಮಿಗಳು ಮಂಡ್ಯ ಜಿಲ್ಲೆಯ ಕುಪ್ಪಗಲ್ಲಿನವರು. ಇವರ ಹಿಂದಿನವರು ಮಹಾದೇವ ಸ್ವಾಮಿಗಳು. ಇವರ ಅವಧಿಯಲ್ಲಿ ೧೯೬೮ ರಲ್ಲಿ

ಶಿಕ್ಷಣ ಸಂಸ್ಥೆ ಪ್ರಾರಂಭಿಸಲಾಗಿದೆ. ಸೇಡಮ್, ರಾಯಚೂರು, ಶಹಬಾದ, ವಾಡಿಗಳಲ್ಲಿ ಶಾಲೆ ಕಾಲೇಜುಗಳು ನಡೆಯುತ್ತಿವೆ. ಮಹಾದೇವ ಸ್ವಾಮಿಗಳ ಅವಧಿಯಲ್ಲಿಯೇ ಒಂದು ಅನಾಥಾಶ್ರಮವನ್ನೂ ಪ್ರಾರಂಭಿಸಲಾಗಿದೆ.

ವಚನಗಳು : ೩೬೩
ವಚನಾಂಕಿತ : ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ
ಮಾಹಿತಿ : ಪೂಜ್ಯ ನಂಜುಂಡ ಸ್ವಾಮಿಗಳು, ಶ್ರೀ ಚಂದ್ರಪ್ಪ ಹೆಬ್ಬಾಳಕರ

*



ಪೂಜ್ಯ ಶಿವಯೋಗಿ ಸ್ವಾಮಿಗಳು
ಉರಿಲಿಂಗಪೆದ್ದಿ ಮಠಗಳ ಸಂಸ್ಥಾಪಕರು

## ಕಲಬುರ್ಗಿ ತಾಲೂಕು :

### ೧. ಮಹಾಗಾಂವ :
### ಅಕ್ಕಮಹಾದೇವಿ ಮಂದಿರ

ಬಸವಕಲ್ಯಾಣ ಪರಿಸರವನ್ನು(ಬೀದರ ಜಿಲ್ಲೆಯನ್ನು) ಪ್ರವೇಶಿಸುವಾಗ ಕಲಬುರ್ಗಿ ಜಿಲ್ಲೆಯ ಕೊನೆಯಲ್ಲಿ ಶರಣ ಸ್ಮಾರಕ ಇರುವ ಊರು ಈ ಮಹಾಗಾಂವ. ಇಲ್ಲಿಂದ ಮುಂದೆ ಬೀದರ ಜಿಲ್ಲೆ ಪ್ರವೇಶಿಸಿದ ನಂತರ ಹತ್ತುವ ಮೊದಲನೇ ಊರು ಕಿನ್ನರಿ ಬ್ರಹ್ಮಯ್ಯನ ಸ್ಮಾರಕವಿರುವ ಹಳ್ಳಿಖೇಡ ಗ್ರಾಮ. ಕಿನ್ನರಿ ಬ್ರಹ್ಮಯ್ಯ ಮತ್ತು ಅಕ್ಕಮಹಾದೇವಿ ಭೇಟಿಯಾದ ಸ್ಥಳ ಬಹುಶಃ ಹಳ್ಳಿಖೇಡ ಆಗಿರುವ ಸಾಧ್ಯತೆ ಇದೆ. ಒಂದು ವೇಳೆ ಇದು ಹೌದಾದರೆ, ಅಕ್ಕಮಹಾದೇವಿ ಬಸವಕಲ್ಯಾಣಕ್ಕೆ ಹೋದ ದಾರಿ ಮಹಾಗಾಂವ-ಹಳ್ಳಿಖೇಡ-ಬಂದವರ ಓಣಿ ಮೂಲಕ ಕಲ್ಯಾಣವನ್ನು ಪ್ರವೇಶಿಸಿರಬೇಕೆನಿಸುತ್ತದೆ. ಏಕೆಂದರೆ ಮಹಾಗಾಂವ ನಂತರ ಅಕ್ಕಮಹಾದೇವಿಯ



ಅಕ್ಕಮಹಾದೇವಿ ಸ್ಮಾರಕ-ಗುಡಿ



ಅಕ್ಕಮಹಾದೇವಿ ಗುಡಿಯ ಗರ್ಭಗೃಹದ ಎದುರಿನ ಮಂಟಪ

ಸ್ಮಾರಕ ನಮಗೆ ದೊರೆಯುವುದು ಬಸವಕಲ್ಯಾಣದ ಬಂದವರ ಓಣಿ ಪ್ರದೇಶದಲ್ಲಿ. ಅಲ್ಲಿ ಈಗ ಮುಖ್ಯವಾಗಿ ಉಳಿದಿರುವುದು ಅಕ್ಕಮಹಾದೇವಿ ಗವಿಯೇ.

ಅಕ್ಕಮಹಾದೇವಿ ಮಹಾಗಾಂವ ಗ್ರಾಮದವಳಾಗಿರಬೇಕೆಂಬ ಚರ್ಚೆಯೂ ಇದೆ. ಆದರೆ ಈಗ ಆಕೆ ಉಡತಡಿಯವಳೇ ಆಗಿದ್ದು, ಕಲ್ಯಾಣಕ್ಕೆ ಹೋಗುವಾಗ ಆಕೆ ಮಹಾಗಾಂವದಲ್ಲಿ ತಂಗಿ, ಲಿಂಗಪೂಜೆ ಮಾಡಿಕೊಂಡು ಮುಂದೆ ಪ್ರಯಾಣ ಬೆಳಸಿರಬಹುದಾಗಿದೆ ಎಂಬ ಆಲೋಚನೆಗೆ ಬರಲಾಗಿದೆ. ಆದರೆ ಮಹಾಗಾಂವ ಗ್ರಾಮದ ಜನ ಈಗಲೂ ಅಕ್ಕಮಹಾದೇವಿ ತಮ್ಮೂರಿನವಳೇ ಎನ್ನುತ್ತಾರೆ. ಈ ಬಗೆಗೆ ಇನ್ನೂ ಶೋಧ ನಡೆಯುವ ಅಗತ್ಯವಿದೆ.

ಮಹಾಗಾಂವ ಒಂದು ಪುರಾತನ ಗ್ರಾಮ. ಊರಮುಂದೆ ಗಂಡೋರಿ ನಾಲಾ ಹರಿದಿದೆ. ಅಕ್ಕಮಹಾದೇವಿ ಸ್ಮಾರಕವು ಗಂಡೋರಿ ನಾಲಾದ ದಂಡೆಯ ಮೇಲೆಯೇ ಇದೆ. ಮುಂದೆ ಸುಮಾರು ಒಂದೆರಡು ಫರ್ಲಾಂಗ್ ಅಂತರದಲ್ಲಿ ಬೆಣ್ಣೆತೊರೆ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತಿದ್ದು, ಉತ್ತರದಿಂದ ದಕ್ಷಿಣಕ್ಕೆ ಹರಿದು ಹೋಗುವ ಗಂಡೋರಿ ನಾಲಾ ಬೆಣ್ಣೆ ತೊರೆಯನ್ನು ಕೂಡುತ್ತದೆ. ಹೀಗಾಗಿ ಅಕ್ಕಮಹಾದೇವಿ ಸ್ಮಾರಕದಿಂದ ಒಂದು ನೂರು ಮೀಟರ ಅಂತರದಲ್ಲಿಯೇ ಸಂಗಮನಾಥನ ಲಿಂಗವಿರುವ ಕಟ್ಟೆ ಇದೆ. ಈ **'ಉದಕತಡಿ'** ಪರಿಸರವನ್ನು ಗಮನಿಸಿದರೆ ಅಕ್ಕಮಹಾದೇವಿ ಕೆಲದಿನ ಇಲ್ಲಿ ಉಳಿದಿರುವ ಸಾಧ್ಯತೆಯೂ ಇದೆ. 'ಉದಕತಡಿ' ಯೇ 'ಉಡತಡಿ' ಆಗಿರಬೇಕೆನ್ನುತ್ತಾರೆ ಮಹಾಗಾಂವದ ಜನ.

ಅಕ್ಕಮಹಾದೇವಿಯ ಹಳೆಯ ಸ್ಮಾರಕ ಗಂಡೋರಿ ನಾಲಾದ ದಂಡೆಯ ಮೇಲೆ ಇರುವುದರಿಂದ ಅದನ್ನು ಎತ್ತರವಾದ ಕಟ್ಟೆಯ ಮೇಲೆ ಕಟ್ಟಿದಂತಿದೆ. ಈಗ ವಿಶಾಲವಾದ ಮಂದಿರವನ್ನು ನಿರ್ಮಿಸಲಾಗಿದೆ. ಕಲ್ಯಾಣಮಂಟಪವೊಂದನ್ನು ಕೂಡ ಕಟ್ಟಲಾಗಿದೆ. ಹೀಗಾಗಿ ಅಲ್ಲಿ ಮದುವೆಯಂತಹ ದೊಡ್ಡ ಕಾರ್ಯಕ್ರಮಗಳೂ ನಡೆಯುತ್ತವೆ. ಪ್ರತಿವರ್ಷ ಜನೇವರಿ ೨೬ನೇ ತಾರೀಕಿನಂದು ಅಕ್ಕಮಹಾದೇವಿ ಜಾತ್ರೆ ನಡೆಯುತ್ತದೆ.

ಮಹಾಗಾಂವ ಗ್ರಾಮನಿವಾಸಿಯಾದ ಶ್ರೀಮತಿ ಸುಂದರಾಬಾಯಿ ಬಾಳ್ಳ ಅವರು ಅಕ್ಕಮಹಾದೇವಿ ತಮ್ಮ ಮನೆತನದ ಹೆಣ್ಣುಮಗಳು ಎಂದು ಹೇಳುತ್ತಾರೆ. ಮಹಾಗಾಂವದಲ್ಲಿರುವ ಈಗಿನ ಪೋಲಿಸ ಠಾಣೆಯ ಕಟ್ಟಡದಿಂದ ಬಾಳ್ಳ ಅವರ ಮನೆಯವರೆಗೂ ಒಂದು ಸುರಂಗಮಾರ್ಗ ಇದೆ ಎಂದು ಕೂಡಾ ಹೇಳಲಾಗುತ್ತದೆ.

ಮಹಾಗಾಂವದಲ್ಲಿ ೧೨ನೇ ಶತಮಾನಕ್ಕೆ ಸಂಬಂಧಸಿದ್ದೆಂದು ಹೇಳುವ ಕೆಲವು ಹಳೆಯ ಗುಡಿಗಳಿವೆ. ಅವುಗಳಲ್ಲಿ ಗೌರಿಶಂಕರ ಹೆಸರಿನ ಒಂದು ಗುಡಿ ಇದೆ. ಈ ಗುಡಿಯಲ್ಲಿ ದೊಡ್ಡದೊಡ್ಡ ಲಿಂಗಗಳಿವೆ. ಈ ಗುಡಿಯ ಹಿಂದೆ ಒಂದು ದೊಡ್ಡ ದಿಬ್ಬ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಕೆಳಗೆ ಏನೋ ಸ್ಮಾರಕವೊಂದು ಹೂತು ಹೋಗಿರಬೇಕೆಂಬ ಅನುಮಾನ ಜನರಲ್ಲಿದೆ. ಈ ಗುಡಿಯಿಂದ ೩೦೦ ಅಡಿ ಅಂತರದಲ್ಲಿ ಒಂದು ಬಾವಿ ಇದೆ. ಆ ಬಾವಿಯ ಆಳದ ಬಗ್ಗೆ ಜನ ಕಥೆ ಕಟ್ಟಿ ಹೇಳುತ್ತಾರೆ. ಆ ಬಾವಿಯ ಒಳಗೆ ಕದಳಿಗೆ ಹೋಗುವ ಸುರಂಗ ಮಾರ್ಗವಿರಬೇಕೆಂಬ ಊಹೆಯೂ ಇದೆ. ಈ ಊರಿನಲ್ಲಿರುವ ಹಳೆಯ ಗುಡಿಗಳೆಂದರೆ ರೇವಣಸಿದ್ಧೇಶ್ವರ, ಸಂಗಮೇಶ್ವರ, ಮಲ್ಲಿಕಾರ್ಜುನ ಮತ್ತು ಗೌರಿಶಂಕರ ಗುಡಿಗಳು. ಮಲ್ಲಿಕಾರ್ಜುನ, ಸಂಗಮೇಶ್ವರ, ಗೌರಿಶಂಕರ ಹಾಗೂ ಮಹಾದೇವಿಯಕ್ಕನ ಗುಡಿಗಳು ಗಂಡೋರಿ ನಾಲಾದ ದಡದ ಮೇಲೆ ಒಂದೇ ಸಾಲಿಗೆ ಇವೆ ಎಂಬುದು ಕೂಡ ಗಮನಿಸಬೇಕಾದ ಸಂಗತಿಯಾಗಿದೆ. ರೇವಣಸಿದ್ಧೇಶ್ವರ ಗುಡಿ ಮಾತ್ರ ಬೇರೆಡೆ ಇದೆ.

ಇಲ್ಲಿ ಹೇಳಬೇಕಾದ ಒಂದು ಸಂಗತಿ ಎಂದರೆ, ಎಲ್ಲೆಲ್ಲಿ ನಮಗೆ ಶರಣರ ಸ್ಮಾರಕಗಳು ಕಾಣುತ್ತವೆಯೋ ಅಲ್ಲೆಲ್ಲ ರೇವಣಸಿದ್ಧರ ಗುಡಿಗಳಿರುವುದು ಸಾಮಾನ್ಯವಾಗಿ ಕಾಣುತ್ತದೆ. ಅಂದರೆ ರೇವಣಸಿದ್ಧರು ಶರಣರ ಹಿರಿಯ ಸಮಕಾಲೀನರಾಗಿದ್ದು, ಸದಾ ಸಂಚಾರಿಗಳಾಗಿದ್ದರು. ಶೈವ ಸಂಪ್ರದಾಯದ ಪ್ರಚಾರ ಮಾಡಿಕೊಂಡಿದ್ದವರು, ಶರಣರ ಸಂಪರ್ಕ ಬಂದನಂತರ ಶರಣ ತತ್ತ್ವದ ಪ್ರಚಾರ ಮಾಡಿದರೆಂದು ಫ.ಗು.ಹಳಕಟ್ಟಿ ಅವರು ಬರೆಯುತ್ತಾರೆ. ರೇವಣಸಿದ್ಧರು ತಮ್ಮ ಮಗ ಘನಲಿಂಗ ರುದ್ರಮುನಿ ಅವರನ್ನು ಸಂಪೂರ್ಣವಾಗಿ ಶರಣರ ತತ್ತ್ವಗಳಿಗೇ ಒಪ್ಪಿಸಿದ್ದು ಗಮನಿಸಬೇಕಾದ ಸಂಗತಿಯಾಗಿದೆ.

ಮಹಾಗಾಂವದಲ್ಲಿ ಕೋಡಿಮಲ್ಲರಾಯನ ದಡ್ಡಿ ಎಂದು ಹೇಳುವ ಒಂದು ದೊಡ್ಡಿ ಇದೆ. ಅಲ್ಲಿ ಈಗಲೂ ಹಳೆಯಕಾಲದ ಮಣ್ಣಿನ ಪಾತ್ರೆಗಳು ಸಿಗುತ್ತವೆ. ಹಾಳುಬಿದ್ದ ಕೌಶಿಕನ ಅರಮನೆಯೂ ಇದೆ ಎಂದು ಹೇಳುತ್ತಾರೆ. ಕೆಲ ವರ್ಷಗಳ ಹಿಂದೆ ತೊಗಲಿನ ನಾಣ್ಯಗಳು ಸಿಕ್ಕಿರುವುದು ಕೌಶಿಕ ಇಲ್ಲಿದ್ದಿರಬಹುದು ಎನ್ನುವುದಕ್ಕೆ



ಅಕ್ಕಮಹಾದೇವಿ ಮಂದಿರದ ಗರ್ಭಗೃಹದಲ್ಲಿರುವ ಅಕ್ಕಮಹಾದೇವಿ ಮೂರ್ತಿಶಿಲ್ಪ

ಇನ್ನಷ್ಟು ಪುಷ್ಟಿ ನೀಡುತ್ತದೆ. ಕೌಶಿಕ ಒಬ್ಬ ರಾಜನಾಗಿರದೆ ಪಾಳೆಗಾರನಾಗಿರಬೇಕೆಂದೂ ಊರಿನ ಹಿರಿಯರಾದ ಲಿಂ. ಶ್ರೀ ರುದ್ರಗೌಡ ಪಾಟೀಲ ಅವರ ಅನುಮಾನ.

ಮಾಹಿತಿ : ಡಾ. ಶಶಿಕಲಾ ಮೋಳ್ದಿ, ಶಿವರಾಜ ಪಾಟೀಲ,
ಮಹಾಲಿಂಗ ಗುಂಡಪ್ಪಗೋಳ್, ಪೂಜಾರಿ

*

## ಚಿಕ್ಕ ವಯದೊಳು ಅಕ್ಕಮಹಾದೇವಿ

ಚಿಕ್ಕ ವಯದೊಳು ಅಕ್ಕಮಹಾದೇವಿ ಮುಕ್ಕಣ್ಣನ ಭಜಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ಪ ॥

ಉಡತಡಿ ಊರಾಗ ಅಕ್ಕಮಹಾದೇವಿ ತಡತುಡ ಉದ್ಭವಿಸಿ
ಸುಮತಿ ತಾಯಿ ನಿರ್ಮಲ ಜನಕ ನೋಡಿ ಮನಕಾದರು ಖುಷಿ
ಜಂಗಮ ಕುಲ ಜಗಭರಿತ ಜ್ಯೋತಿ ಜಗವೆಲ್ಲ ಹಾಡ್ಹರಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೧ ॥


ಹಾಸವದನ ಹದಿನೈದು ವರುಷಕ ಹೊಂಟಾಳ ಸಾವಕಾಶಿ
ಪೂಜೆಕ ಬೇಕೆಂದು ಪುಷ್ಪ ಹುಡುಕುತ ಸಂಗಟೊಂದು ದಾಸಿ
ಕೌಶಿಕ ರಾಜನ ಮೆರವಣಿಗಿ ಹೊಂಟಿತು ಎದುರಿಗಿ ನೇಮಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೨ ॥

ಚಿಕ್ಕ ಪ್ರಾಯದ ಅಕ್ಕಮಹಾದೇವಿಗಿ ರಾಜ ನೋಡಿಕೇಸಿ
ಮೇಣಿದಾಗೆ ಅವ ಮೂರ್ಛಿತನಾದನು ರೂಪಕೆ ಮೋಹಿಸಿ
ಮನಿಗೆ ಬಂದು ತಾ ಎಳೆದು ತರಿಸಿ ಬಲಾತ್ಕರಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೩ ॥

ಮಹಾದೇವಿ ತನ್ನ ಮನಸಿಗಿ ತಿಳಿದಳು ಪಕ್ಕಾ ವಿಚಾರಿಸಿ
ಜೈನಮತದ ಕೌಶಿಕ ರಾಜಗ ಅಂತಾಳ ಧಿಕ್ಕರಿಸಿ
ಶಿವಭಕ್ತರಾಗಿ ಶಿವಶಿವನೆಂದರ ತೋರುತಾದ ಕಾಶಿ ।
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೪ ॥

ಜೈನ ಮತದ ಕೌಶಿಕರಾಜ ಹೀಂಗಂತನ ಹೂಂಕರಿಸಿ
ಕಾಮನ ಭಕ್ತಿಗೆ ಶಿವಭಕ್ತೆಂದರೆ ಏಕಿರತದ ಆಸಿ
ಸಿಕ್ಕಿದಿ ಕೈಯಾಗ ದಕ್ಕಿ ಹೋಗೆಂದು ಹಿಡಿದಾನ ಹೌಹರಿಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೫ ॥

ಮಹಾದೇವಿ ಮಹಾತ್ಮೆ ಏನು ಹೇಳಲಿ ತಾನೆ ಅಗ್ನಿ ಪುಟಿಸಿ
ರಾಜನಂಗಕ ಉರಿಯ ಹತ್ತಿತು ಬೆಳ್ತಾನ ತಡಪಡಿಸಿ
ಅಕ್ಕಮಹಾದೇವಿಯದು ಪಾದ ಹಿಡಿಯುತಾನ ತಾಯಿಯೆಂದಕೇಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೬ ॥



ಮಲ್ಲಿಕಾರ್ಜುನ ಗುಡಿ



ಮಲ್ಲಿಕಾರ್ಜುನ ಗುಡಿಯ ಗರ್ಭಗೃಹದ ಶಿವಲಿಂಗ

ಪೀತಾಂಬ್ರಿ ಕಳೆದು ದಿಗಂಬರಾಗಿ ಮಲ್ಲಿನಾಥನ ನೆನಿಸಿ
ಕಲ್ಯಾಣಕ ಬಂದು ಪ್ರಭುದೇವರ ಪಾದಗಳಿಗೆ ನಮಿಸಿ
ಶ್ರೀಶೈಲಕೆ ಬಂದು ಮಲ್ಲಿಕಾರ್ಜುನನ ಎದುರಿಗೆ ಪ್ರತ್ಯಕ್ಷಿಸಿ
ತನ್ನೊಳು ತಾನು ಐಕ್ಯವಾದಳೊ ಲಿಂಗದಾಗ ಬೆರೆಸಿ
ಅಂಗಲಿಂಗ ಸಮರಸ ಮಾಡಿದಳು ಭಕ್ತಿಲಿ ಪೂಜಿಸಿ ॥ ೭ ॥

– ಶ್ರೀಮತಿ ನೀಲಮ್ಮ ಎಣೆಗೂರ

*

## ಅಕ್ಕಮಹಾದೇವಿಯ ನಾಮ

ಅಕ್ಕಮಹಾದೇವಿಯ ನಾಮ
ನಿತ್ಯ ನೀವು ನುಡಿಯರಮ್ಮ
ಮುಕ್ತಿಯ ದೊರಿವದು ಸತ್ಯಸತ್ಯ ಎಲ್ಲರಮ್ಮ
ಸಾಕ್ಷಾತ ಶಿವನೊಲಿದ ಶಿವಶರಣೆಯಮ್ಮ ।ಪ।

ಉಡತಡಿ ಗ್ರಾಮ ಎಂಬಲ್ಲಿ
ನಿರ್ಮಲ ಸುಮಿತ್ರಾ ಉದರದಲ್ಲಿ

ಬಂದಾಳೊ ಜನ್ಮವು ತಾಳಿ
ಮುದ್ದಾಗಿ ಬೆಳದಾಳಲ್ಲಿ ಶಿವನಿಂಗ ಲೀಲೆಯಲ್ಲಿ
ಸಂತೋಷ ತುಂಬಿತೊ ತಾಯಿತಂದಿ ಬಲ್ಲಿ

ಕೌಶಿಕ ರಾಜನಿದ್ದನಲ್ಲಿ
ಮೆರುಣಗಿ ಹೊಂಟಿತೊ ಪುರದಲ್ಲಿ
ಮಹಾದೇವಿ ನಿಂತಾಳೊ ಬಾಗಿಲಲ್ಲಿ
ಅರಸನ ಕಂಗಳಲ್ಲಿ ಅಕ್ಕನ ಬಿಂಬವು ತಗಲಿ
ಅಗ್ನಿಯ ಮಾಡ್ಯಾಳೊ ಅರಮನಿಯಲ್ಲಿ

ಅಕ್ಕಗ ದುಃಖವು ಉಕ್ಕೇರಿ
ತಿಳಿಸಿ ಹೇಳ್ಯಾಳೊ ಪರಿಪರಿ
ಮಲ್ಲಿಕಾರ್ಜುನನೆ ನನ ದೊರಿ
ಅವನಿಗಿ ಎರೆದಾರೊ ಧಾರಿ
ಬಿಡು ಎನಗ ಕರುಣೆಯ ತೋರಿ
ಹಿಡಿದೆಳದ ಕಾಮೇರಿ ಮೈಮ್ಯಾಲಿನ ಸೀರಿ

ಹುಟ್ಟುತಲೆ ಅರಸನ ಜಯಿಸಿ
ನಡದಾಳೊ ಮನಿಮಾರ ತ್ಯಜಿಸಿ
ಕಮರಿಯ ಬನದೊಳು ಸಂಚರಿಸಿ
ಕಲ್ಯಾಣ ಪುರದೊಳು ಜನಿಸಿ
ಅಲ್ಲಮರಿಗೆ ಮಗಳೆ ಅನಿಸಿ
ಅಣ್ಣ ಬಸವಣ್ಣನಿಗಿ ತಂಗಿಯ ಅನಸಿ

ಸಲಗರ ಸಾಂಭನ ಕೀರ್ತಿ ಅಕ್ಕನ ಬಳಗದ ಶಾಂತಿ
ಬೆಳಗಲಿ ಮಂಡಲದ ಜ್ಯೋತಿ
ಚಂದ್ರನ ಕವನದ ರೀತಿ ಹಗಲಿರುಳು ಮಾಡು ಸ್ತುತಿ
ಭಾಗ್ಯವು ದೊರಿವದು ನಿಮಗೆ ಸುಖ ಶಾಂತಿ

ರಚನೆ : ಚಂದ್ರಕಾಂತ ಸಾಖರೆ, ಸಲಗರ
ಹಾಡಿದವರು : ಬಂಡಪ್ಪ ಕಣಮುಸ, ಮುನವಳ್ಳಿ

***

## ಕಲಬುರ್ಗಿ ತಾಲೂಕು:

# ೨. ಕಲಬುರ್ಗಿ :

# ಜಡೆಶಂಕರಲಿಂಗ ಗುಡಿ

ಕಲಬುರ್ಗಿಯ ಮಕ್ತಂಪೂರ ಭಾಗದಲ್ಲಿ, ಈಗಿನ ಬಂಗಾರ ಅಂಗಡಿಗಳ ಸಂತೆಯ ಹಿಂದಿನ ಮಗ್ಗಲು ಒಂದು ದೊಡ್ಡ ಜಡೆಶಂಕರಲಿಂಗ ದೇವಸ್ಥಾನ ಇದೆ. ಇಲ್ಲಿಯ ವೀರಶೈವ ಬಣಗಾರ ಸಮಾಜದವರು ಒಂದು ಸಂಘಟನೆಯನ್ನು ಮಾಡಿಕೊಂಡು ಮೂಲದಲ್ಲಿದ್ದ ಒಂದು ಸಣ್ಣ ಗುಡಿಯನ್ನು ಇಂದು ಮೂರಂತಸ್ತಿನ ದೊಡ್ಡ ಗುಡಿಯನ್ನಾಗಿ ಮಾಡಿದ್ದಾರೆ. ಮದುವೆಯ ಕಲ್ಯಾಣಮಂಟಪವನ್ನೂ ಇದರಲ್ಲಿ ಅಳವಡಿಸಿದ್ದಾರೆ. ಗರ್ಭಗೃಹ ಬಹು ಆಕರ್ಶಕವಾಗಿ ಕಾಣುತ್ತದೆ. ಹೀಗಾಗಿ ಇಲ್ಲಿಗೆ ಬರಹೋಗುವ ಭಕ್ತರ ಸಂಖ್ಯೆ ಅಧಿಕವಾಗಿದೆ.



ಜಡೆಶಂಕರಲಿಂಗ ದೇವಸ್ಥಾನದಲ್ಲಿ ಪ್ರತಿವರ್ಷ ಶಿವರಾತ್ರಿಗೆ ರುದ್ರಾಭಿಶೇಕ ಮಾಡುತ್ತಾರೆ. ಅಂದು ಜಾಗರಣೆ ಇರುತ್ತದೆ. ಶ್ರಾವಣ ಮಾಸದಲ್ಲಿ ಭಜನೆ ಹಚ್ಚುತ್ತಾರೆ. ಇತ್ತೀಚೆಗೆ ಪುರಾಣ ಹಚ್ಚುತ್ತಲೂ ಬಂದಿದ್ದಾರೆ. ಕೊನೆಯಲ್ಲಿ ಶ್ರಾವಣ ಮುಗಿದ ನಂತರ ಎರಡನೇ ರವಿವಾರ ದೊಡ್ಡ ಪ್ರಮಾಣದಲ್ಲಿ ಖಾಂಡ ಮಾಡುತ್ತಾರೆ. ಪ್ರಸಾದ ಸ್ವೀಕರಿಸಲು ಸುಮಾರು ಐದಾರು ಸಾವಿರ ಭಕ್ತರು ಬರುತ್ತಾರೆಂದು ತಿಳಿದು ಬರುತ್ತದೆ. ಖಾಂಡ ಇದ್ದ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಮರುದಿನ ಪಲ್ಲಕ್ಕಿ ಉತ್ಸವ ಇರುತ್ತದೆ. ಪಲ್ಲಕ್ಕಿ ಉತ್ಸವದ ಮರುದಿನ ಇಲ್ಲಿಯ ಪ್ರಮುಖರು ಕೂಡಿ

ಶಂಕರಲಿಂಗನ ಮೂಲಸ್ಥಳವಾದ ರಾಯಚೂರು ಜಿಲ್ಲೆಯ ನವಿಲೆಗೆ ಹೋಗಿ ಬರುವ ರೂಢಿ ಹಾಕಿಕೊಂಡಿದ್ದಾರಂತೆ.

***



ಜಡೆ ಶಂಕರಲಿಂಗ ಗುಡಿಯ ಒಳ ಚಿತ್ರ

## ಚಿಂಚೋಳಿ ತಾಲೂಕು:

# ಕೋಡ್ಲಿ :

# ಭೋಗಲಿಂಗೇಶ್ವರ ಗುಡಿ

ಚಿಂಚೋಳಿ ತಾಲೂಕಿನ ಕೋಡ್ಲಿಯಲ್ಲಿ ಪ್ರಾಚೀನವಾದ ಭೋಗಲಿಂಗೇಶ್ವರ ಗುಡಿ ಇದೆ. ಇಲ್ಲಿಗೆ ಕೆಂಭಾವಿ ಭೋಗಣ್ಣ ಬಂದು ಹೋಗಿದ್ದಾನೆ ಎಂದು ಹೇಳಲಾಗುತ್ತದೆ. ಅದರ ಸ್ಮಾರಕವಾಗಿ ಈ ಗುಡಿ ಇಲ್ಲಿ ಆಗಿದೆ ಎನ್ನುತ್ತಾರೆ. ಪ್ರಾಚೀನ ಶಿಲ್ಪದಿಂದ ಕೂಡಿದ ಈ ಗುಡಿಯ ಮುಂದೆ ವಿಶಾಲವಾದ ತೆರೆದಬಾವಿ ಇದೆ. ಈ ಗುಡಿಗೆ ಜನ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.



ಭೋಗಲಿಂಗೇಶ್ವರ ಗುಡಿ



ಭೋಗಲಿಂಗೇಶ್ವರ ಗುಡಿಯ ಗರ್ಭಗೃಹ

ಇದೇ ಚಿಂಚೋಳಿ ತಾಲೂಕಿನಲ್ಲಿಯೇ ಭೋಗಲಿಂಗದಳ್ಳಿ ಎಂಬ ಹೆಸರಿನ ಒಂದು ಊರು ಇದೆ. ಆದರೆ ಇಲ್ಲಿ ಜನವಸತಿ ಇಲ್ಲ. ಬೆಟ್ಟದ ಮೇಲೆ ಒಂದು ದೊಡ್ಡ ಭೋಗಲಿಂಗೇಶ್ವರ ಗುಡಿ ಇದೆ.

ಸಿಂದಗಿ ತಾಲೂಕಿನ ರಾಂಪೂರ ಹತ್ತಿರ ಬೆನ್‌ಕೊಟಗಿಯಲ್ಲಿ ಭೋಗೇಶ್ವರ ಗುಡಿ ಇದೆ. ಆಳಂದ ತಾಲೂಕಿನ ಝುಳಕಿ, ಚಿತಾಪೂರ ತಾಲೂಕಿನ ಕಾಳಗಿ ಹತ್ತಿರ ಎರಡು ಕಿ.ಮೀ. ಅಂತರದಲ್ಲಿರುವ ರಾಜಾಪೂರ, ಚಿಂಚೋಳಿ ತಾಲೂಕಿನ ರುದ್ನೂರ (ಇದಕ್ಕೆ ಪಂಚಪುರ ಎನ್ನಲಾಗುತ್ತದೆ) ಹಾಗೂ ಕಲಬುರ್ಗಿ ತಾಲೂಕಿನ ಬೋಳೆವಾಡ ಈ ಎಲ್ಲ ಗ್ರಾಮಗಳಲ್ಲಿ ಭೋಗಲಿಂಗೇಶ್ವರ ಗುಡಿಗಳಿರುವುದು ವಿಶೇಷವಾಗಿದೆ.

ಇಷ್ಟೆಲ್ಲ ಪ್ರದೇಶಗಳಿಗೆ ಭೋಗಣ್ಣ ಭೆಟ್ಟಿಕೊಟ್ಟಿರಬಹುದಾಗಿದೆ. ಆ ಸ್ಮಾರಕವಾಗಿ ಜನ ಅವನ ಹೆಸರಿನಲ್ಲಿ ಗುಡಿ ಕಟ್ಟಿಸಿ ಆರಾಧಿಸುತ್ತಾರೆ ಎಂಬ ಸಂಗತಿ ಮಾತ್ರ ತಿಳಿಯುತ್ತದೆ. ಉಳಿದಂತೆ ಹೆಚ್ಚಿನ ವಿವರಗಳು ಸಿಗುವದಿಲ್ಲ.

ಮಾಹಿತಿ : ಪಸಾರ ಮಾಣಿಕರಾವ

***

## ಆಳಂದ ತಾಲೂಕು:

## ೧. ಆಳಂದ :
## ಏಕಾಂತ ರಾಮಯ್ಯನವರ ಗುಡಿ

ಏಕಾಂತ ರಾಮಯ್ಯ ಎನ್ನುವ ಶರಣನ ಹುಟ್ಟೂರು ಆಳಂದ. ಈ ಪಟ್ಟಣ ಈಗ ಕಲಬುರ್ಗಿ ಜಿಲ್ಲೆಯ ತಾಲೂಕಾ ಸ್ಥಳವಾಗಿದೆ. ಏಕಾಂತ ರಾಮಯ್ಯನ ಮಂದಿರ ಎಂದು ಕರೆಯಲಾಗುವ ಮಂದಿರ ನಿಜವಾಗಿ ಏಕಾಂತರಾಮಯ್ಯನ ಆರಾಧ್ಯ ದೈವವಾಗಿರುವ ಸೋಮೇಶ್ವರ ದೇವಾಲಯವಾಗಿದೆ. ಆಳಂದ ಪಟ್ಟಣದ ಶ್ರೀ ಅಣ್ಣಾರಾವ ವೀರಭದ್ರಪ್ಪ ಪಾಟೀಲ ಎನ್ನುವವರು ಅತ್ಯಂತ ದೈವಭಕ್ತರು. ತೀರ ಶಿಥಿಲಗೊಂಡಿದ್ದ, ತೀರ ಸಣ್ಣದಾಗಿದ್ದ ಸೋಮೇಶ್ವರ ಮಂದಿರವನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ. ೧೯೮೫ ರಲ್ಲಿ ಈಗಿರುವ ಹೊಸ ಮಂದಿರ ತಯಾರಾಗಿದೆ. ಸೋಮೇಶ್ವರ ಲಿಂಗವಿರುವ ಗರ್ಭಗೃಹದಲ್ಲಿಯೇ ಏಕಾಂತರಾಮಯ್ಯನ ಶಿಲ್ಪವೊಂದನ್ನು ಪ್ರತಿಷ್ಠಾಪನೆ ಮಾಡಿಸಿದ್ದಾರೆ.

ಏಕಾಂತರಾಮಯ್ಯ ಶೈವ ಬ್ರಾಹ್ಮಣ ಮನೆತನಕ್ಕೆ ಸೇರಿದವರು. ಏಕಾಂತ ರಾಮಯ್ಯನ ಮಂದಿರ ಇರುವುದು ಬ್ರಾಹ್ಮಣರ ಕೇರಿಯಲ್ಲಿಯೆ. ಈ ಮಂದಿರದ ಮೇಲ್ಭಾಗದಲ್ಲಿ ದಕ್ಷಿಣಕ್ಕೆ ಈಗಲೂ ಬ್ರಾಹ್ಮಣರ ಮನೆಗಳೇ ಇವೆ. ಅವರ ಮನೆತನದ ವಂಶಜರೆಂದು ಹೇಳಿಕೊಳ್ಳುವ ಪೋದ್ದಾರ ಹೆಸರಿನ ಮನೆತನಗಳು ಏಕಾಂತರಾಮಯ್ಯನ ಮಂದಿರಕ್ಕೆ ಹತ್ತಿಕೊಂಡೇ ಇವೆ. ಈಗಲೂ ಈ ಮನೆತನದಲ್ಲಿ ರಾಮ, ರಾಮಚಂದ್ರ ಎನ್ನುವ ಹೆಸರುಗಳನ್ನು ಮಕ್ಕಳಿಗೆ ಇಡುವ ಪದ್ಧತಿ ಇದೆ ಎಂದು ಪೋದ್ದಾರ ಮನೆತನದ ಹಿರಿಯರು ಹೇಳುತ್ತಾರೆ.

ಏಕಾಂತ ರಾಮಯ್ಯ ಬಾಲ್ಯದಿಂದಲೂ ಸ್ವಲ್ಪ ಅಂತರ್‌ಮುಖಿಯಾಗಿದ್ದನೆಂದು ಹೇಳಲಾಗುತ್ತದೆ. ತಾನೊಬ್ಬನೇ ಏಕಾಂತದಲ್ಲಿ ಇರುವುದು, ಊರ ಹೊರಗಿನ ಗುಡ್ಡದ ಮೇಲೆ ಹೋಗಿ ಒಬ್ಬನೇ ಕುಳಿತುಕೊಳ್ಳುವುದು, ಓರಗೆಯವರೊಂದಿಗೆ ಬೆರೆತು ಇರದೇ ಇರುವುದು, ತಮ್ಮ ಮನೆಯ ಮಗ್ಗುಲಲ್ಲಿಯೇ ಇರುವ ಸೋಮೇಶ್ವರನ ಗುಡಿಯಲ್ಲಿ ಹೋಗಿ ಕೂಡುವುದು ಸಾಮಾನ್ಯವಾಗಿತ್ತಂತೆ. ಆತ ಬೆಳೆಯುತ್ತ ಶಿವನ ಆರಾಧಕನಾಗಿ ಜೈನ ಪ್ರಾಬಲ್ಯವನ್ನು ಸಹಿಸದವನಾಗಿ ಬೆಳೆದನೆಂದೂ ಹೇಳುತ್ತಾರೆ.



ಏಕಾಂತ ರಾಮಯ್ಯನ ಆರಾಧ್ಯ ದೈವ ಸೋಮೇಶ್ವರ ದೇವಾಲಯ

ಈಗಲೂ ಆಳಂದ ಪಟ್ಟಣದಲ್ಲಿ ಜೈನ ಮನೆತನಗಳಿವೆ. ಅವೆಲ್ಲ ಪುರಾತನ ಕಾಲದಿಂದಲೂ ಆಳಂದದಲ್ಲಿ ಪ್ರಭಾವಿ ಮನೆತನಗಳಾಗಿವೆ ಎಂದು ತಿಳಿದು ಬರುತ್ತದೆ. ಆಳಂದಲ್ಲಿ ಸೋಮೇಶ್ವರನ ಭಕ್ತನಾಗಿ ಬೆಳೆದ ರಾಮಯ್ಯ ಮುಂದೆ ಅಬ್ಬಲೂರಿನ ಬಸದಿಯಲ್ಲಿ ಸೋಮೇಶ್ವರನನ್ನು ಸ್ಥಾಪಿಸಿದನೆಂಬ ಸಂಗತಿ ಗಮನಾರ್ಹವೆನಿಸುತ್ತದೆ.

ಅಣ್ಣಾರಾವ ಪಾಟೀಲರು ಇರುವವರೆಗೆ ಈ ಮಂದಿರದಲ್ಲಿ ಯಾವಾಗಲೂ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದವು. ಅವರು ಶಿವೈಕ್ಯರಾದ ನಂತರ ಕಡಿಮೆಯಾಗಿವೆ. ನಿತ್ಯ ಪೂಜೆ ಮಾತ್ರ ನಡೆಯುತ್ತದೆ.

ವಚನಗಳು : ಏಳು

ವಚನಾಂಕಿತ : ಎನ್ನಯ್ಯಪ್ರಿಯ ಚೆನ್ನರಾಮ

***



ಸೋಮೇಶ್ವರ ಲಿಂಗ

## ಆಳಂದ ತಾಲೂಕು :

### ೨. ಮುನವಳ್ಳಿ :
### ಗಜೇಶ ಮಸಣಯ್ಯನವರ ಗುಡಿ

ಚಿಕ್ಕ ಮಸಣಸಿದ್ಧ ಚಿಣಿಯನಾಡುತ ಹ್ವಾದ
ಚಿಕ್ಕಳ್ಳಿ ದಾಟಿ ಮನಗೂಳಿ। ಸಂತ್ಯಾಗ
ಚಿತ್ರದ ಕೊಡಕ ಚಿಣಿ ಬಡದೋ

ತೆಗ್ಗಿಲ್ಲ ತೆವರಿಲ್ಲ ಮುಗ್ಗ್ಯಾವ ಎರಡಾನಿ
ತೆಗ್ಗಿನಾಗಾದ ಮುನೋಳಿ। ಮಸಣಸಿದ್ಧ
ಹುಬ್ಬಿನಾಗಾದ ಹರಿನಾಮೋ

ಗಜೇಶ ಮಸಣಯ್ಯನವರ ಮಂದಿರ ಇರುವುದು ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಮುನವಳ್ಳಿ ಎಂಬ ಗ್ರಾಮದಲ್ಲಿ. ಈ ಗ್ರಾಮವು ಆಳಂದ ಪಟ್ಟಣದಿಂದ ೧೦ ಕೀ.ಮೀ.ದೂರದಲ್ಲಿ, ಉತ್ತರ ದಿಕ್ಕಿನಲ್ಲಿದೆ. ಊರವರು ಮಸಣಯ್ಯನವರಿಗೆ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಈಗ ನಾವು ತಿರುಗಾಡಿ ನೋಡಿದ ಸುಮಾರು ನೂರಾರು ಶರಣಸ್ಥಳಗಳಲ್ಲಿ ಅನೇಕ ಕಡೆ ಊರ ಭಕ್ತರು ಶರಣ ಸ್ಮಾರಕಗಳನ್ನು ಪುನರ್ ನಿರ್ಮಿಸಿಕೊಂಡಿದ್ದಾರೆ. ಆದರೆ ಮುನವಳ್ಳಿಯ ಭಕ್ತರ ಕಲಾತ್ಮಕ ದೃಷ್ಟಿಯನ್ನು ಮೆಚ್ಚಲೇಬೇಕು. ದೂರದ ಆಂಧ್ರಪ್ರದೇಶಕ್ಕೆ ಸೇರಿದ ಕಡಪಾದಿಂದ ಸುಂದರವಾದ ಕಲ್ಲುಗಳನ್ನು ತರೆಸಿ, ಅತ್ಯಂತ ಕಲಾತ್ಮಕವಾಗಿ ಮಂದಿರದ ನಿರ್ಮಾಣ ಮಾಡಿದ್ದಾರೆ. ಬಹುಶಃ ಅವರ ಈ ಮಂದಿರದ ಕಲಾತ್ಮಕತೆಗೆ ಕಲಬುರ್ಗಿಯಲ್ಲಿಯ ಶ್ರೀ ಶರಣಬಸವೇಶ್ವರ ಗುಡಿಯ ರಚನಾ ವಿಧಾನ ಬಹುವಾಗಿ ಪ್ರಭಾವ ಬೀರಿದಂತಿದೆ. ಇಂದಿನ ಗಜೇಶ ಮಸಣಯ್ಯನ ಮಂದಿರವನ್ನು ನೋಡಿದರೆ, ಕಲಬುರ್ಗಿಯ ಶರಣಬಸವೇಶ್ವರ ಗುಡಿಯನ್ನು ನೋಡಿದಂತೆಯೇ ಆಗುತ್ತದೆ. ಸುಮಾರು ೩೫ ರಿಂದ ೪೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಈ ಮಂದಿರವನ್ನು ಅಭಿವೃದ್ಧಿಪಡಿಸಿದ್ದಾರೆ. ಮಂದಿರಕ್ಕೆ ಹತ್ತಿಕೊಂಡೆ ದೊಡ್ಡ ಕಲ್ಯಾಣಮಂಟಪವನ್ನೂ ರಚಿಸಿಕೊಂಡಿದ್ದಾರೆ. ಹೀಗಾಗಿ ಊರಿನ ಜನರಿಗೆ ಕಾರ್ಯಕ್ರಮಗಳನ್ನು ಮಾಡಿಕೊಳ್ಳಲು ಅನುಕೂಲವಾಗಿದೆ.

ಮಂದಿರದ ಮೂಲ ಮೂರ್ತಿ ನಂದಿಯೇ. ಜೋಡು ನಂದಿಗಳು ಈಗಲೂ ಗರ್ಭಗೃಹದಲ್ಲಿವೆ. ಇವು ಮಸಣ್ಣಯ್ಯ ಮತ್ತು ಅವನ ಗುರುವಿನ ಸಂಕೇತಗಳೆಂದು



ಗಜೇಶ ಮಸಣಯ್ಯನ ಗುಡಿ

ಹೇಳಲಾಗುತ್ತದೆ. ಮಸಣಯ್ಯನ ಸಮಾಧಿ ಉತ್ತರಕ್ಕೆ ಮುಖಮಾಡಿದೆ. ಬಲಮಗ್ಗಲು ಗುರುವಿನ ಸಮಾಧಿ ಇದೆ. ಗುರುವಿನ ಹೆಸರು ಖಚಿತವಾಗಿ ಗೊತ್ತಿಲ್ಲ. ಅವನನ್ನು ಮುತ್ಯಾಮಸಣಯ್ಯ ಎಂದು ಹೇಳುತ್ತಾರೆ. ಉತ್ತರಕ್ಕೆ ಊರೆಡೆಗೆ ಗಜೇಶ ಮಸಣಯ್ಯನ ಇಬ್ಬರು ಹೆಣ್ಣುಮಕ್ಕಳ ಸಮಾಧಿ ಇದೆಯೆಂದು ಹೇಳಲಾಗುತ್ತದೆ. ಗಂಗಮ್ಮ- ಸಂಗಮ್ಮ ಎಂದು ಅವರ ಹೆಸರುಗಳಿದ್ದವಂತೆ. ಸಮಾಧಿ ಮಂದಿರ ಮಾತ್ರ ಒಂದೇ ಇದೆ. ಅದನ್ನು ಗಂಗಮ್ಮನ ಸಮಾಧಿ ಎಂದು ಹೇಳುತ್ತಾರೆ. ಆದರೆ ಕರೆಯುವುದು ಜೋಡಿ ಹೆಸರುಗಳಿಂದ: ಗಂಗಮ್ಮ-ಸಂಗಮ್ಮ ಎಂದು.

ಗಂಗಮ್ಮಳ ಸಮಾಧಿ ಊರ ಕೆರೆಯ ದಡದ ದಕ್ಷಿಣ ದಿಕ್ಕಿಗಿದ್ದು, ಉತ್ತರಕ್ಕೆ ಮುಖಮಾಡಿದೆ. ಕೆರೆಯೆಲ್ಲ ಈಗ ಹೂಳು ತುಂಬಿದ್ದು, ನೀರಿಲ್ಲ. ಕೆರೆಯಲ್ಲಿ ಏಳು ಹಳೆಯ ಬಾವಿಗಳಿವೆ ಎಂದು ಹೇಳಲಾಗುತ್ತದೆ. ನಮಗೆ ಕೆರೆಯ ಒಂದು ಹಳೆಯ ಚಿತ್ರ ದೊರಕಿಸಿಕೊಳ್ಳಲು ಸಾಧ್ಯವಾಗಿದ್ದು, ಕೆರೆಯಲ್ಲಿಯ ಒಂದು ನೀರಿನ ಗುಂಡ ಚಿತ್ರದಲ್ಲಿ ಕಾಣುತ್ತದೆ. ಒಂದು ಗುಂಡದಲ್ಲಿ ಕೋಲು ಒಗೆದರೆ ಅದು ಸಮೀಪದ ಹಳ್ಳಿಯಾದ ನರೋಣಾದ ಪ್ರಸಿದ್ಧ ದೇವಸ್ಥಾನ ಕ್ಷೇಮಲಿಂಗನ ಗುಡಿಯ ಗುಂಡದಲ್ಲಿ ತೇಲುತ್ತದೆ ಎಂಬ ಪ್ರತೀತಿ ಇರುವ ಬಗ್ಗೆ ಜನ ಹೇಳಿಕೊಳ್ಳುತ್ತಾರೆ.

ಮಸಣಯ್ಯನವರ ಮಂದಿರದ ಎಡ ಮಗ್ಗಲು, ಸ್ವಲ್ಪದೂರದಲ್ಲಿ ಮಗ ನೀಲಕಂಠನ ಸಮಾಧಿಯನ್ನು ತೋರಿಸುತ್ತಾರೆ. ಮಸಣಯ್ಯನ ಮಗ್ಗಲು ಮಸಣಮ್ಮನ ಸಮಾಧಿ ಇತ್ತಂತೆ. ಗುಡಿಕಟ್ಟುವಾಗ ಅದನ್ನೂ ಒಳಗಡೆಯೇ ತೆಗೆದುಕೊಂಡಿದ್ದಾರೆ. ಹೀಗಾಗಿ ಮಸಣಯ್ಯನ ಜೊತೆಗೆ ಗುಡಿಯ ಗರ್ಭಗೃಹದಲ್ಲಿಯೇ ಮಸಣಮ್ಮನ ಸಮಾಧಿಯೂ ಸೇರಿದಂತಾಗಿದೆ.

ಮಸಣಯ್ಯನವರ ಮೂಲ ಊರು ಈಗಿನ ಮಹಾರಾಷ್ಟ್ರಕ್ಕೆ ಸೇರಿದ ಸೋಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ಕರ್ಜಗಿ ಎಂಬ ಊರಾಗಿದೆ. ಅಲ್ಲಿ 'ಗಜೇಶ್ವರ' ದೇವರ ಮಂದಿರವಿದೆ. ಕರ್ಜಗಿಯಲ್ಲಿ ಮಾಲಗಾರ ಸಮಾಜಕ್ಕೆ ಸೇರಿದ ಒಂದು ಮನೆತನದ ಹೆಸರು 'ಗಜಾನವರು' ಎಂದಿದೆ. ಆ ಮನೆತನಕ್ಕೆ ಗಜೇಶ ಮಸಣಯ್ಯ ಸೇರಿರಬಹುದಾಗಿದೆ. ಆದರೆ ಮಸಣಯ್ಯನವರು ಮುನವಳ್ಳಿಗೆ ಏಕೆ ಬಂದರು, ಯಾವಾಗ ಬಂದರು ಎಂಬುದು ತಿಳಿಯುವುದಿಲ್ಲ.

ಈ ಊರಿಗೆ 'ಮುನಿಹಳ್ಳಿ' ಎಂಬುದು ಪೂರ್ವದ ಹೆಸರು. ಬಹುಶಃ ಮಸಣಯ್ಯನವರ ಗುರುವಿನಿಂದಾಗಿ ಈ ಊರಿಗೆ ಮುನಿಹಳ್ಳಿ ಎಂದು ಹೆಸರು ಬಂದಿರಬಹುದಾಗಿದೆ. ಬಹುಶಃ ಮಸಣಯ್ಯನವರು ಬಾಲ್ಯದಲ್ಲಿಯೇ ಕರ್ಜಗಿ ಬಿಟ್ಟು ಗುರುವಿಗಾಗಿ ಮುನವಳ್ಳಿಗೆ ಬಂದಿರಬಹುದು ಎನ್ನುವುದು ಒಂದು ಆಲೋಚನೆಯಾಗಿದೆ. ಮಸಣಯ್ಯನವರಿಗೆ ಮದುವೆಯಾದ ನಂತರ ಮುನವಳ್ಳಿಗೆ ಬಂದಿರಬಹುದೆಂದು ಊಹಿಸಿಕೊಳ್ಳಲು ಸಾಧ್ಯವಿದೆ. ಏಕೆಂದರೆ ಮಸಣಯ್ಯನವರಿಗೆ ಹುಟ್ಟಿದ ಮಕ್ಕಳು ದಕ್ಕುತ್ತಿರಲಿಲ್ಲ ಎಂದು ತೋರುತ್ತದೆ. ಅದಕ್ಕಾಗಿ ಅದಕ್ಕಾಗಿ ನೋಂದುಕೊಂಡಿದದ ಮಸಣಯ್ಯನವರು ಮಸಣಮ್ಮನ ಜೊತೆಗೆ ಗುರುಗಳನ್ನು ಹುಡುಕಿಕೊಂಡು ಮನವಳ್ಳಿಗೆ ಬಂದಿರುಲೂ ಬಹುದಾಗಿದೆ.

ಗಜೇಶ ಮಸಣಯ್ಯನವರನ್ನು ಮುನವಳ್ಳಿಯ ಜನ 'ಮಸಣಸಿದ್ಧ' ಎಂದು ಕರೆಯುವುದೇ ಸಹಜವಾಗಿರುವಂತೆ ಕಾಣುತ್ತದೆ. ನಾವು ಭೇಟಿಯಾದ- ಊರಲ್ಲಿಯ ಹಿರಿಯರು, ಕಲಾವಿದರು, ಹರಿಜನವಾಡಾದ ಜನರು ಕೂಡ 'ಮಸಣಸಿದ್ಧ' ಎಂದೇ ಕರೆಯುತ್ತಿದ್ದುದು ಸಹಜವಾಗಿತ್ತು. ಹೀಗೆ ಹೇಳುವಲ್ಲಿ ಮುನವಳ್ಳಿಯ ಜನರಲ್ಲಿರುವ ಮಸಣಯ್ಯನವರ ಬಗೆಗಿನ ಗೌರವ ಭಾವನೆ, ಈ ಶರಣರು ನಮ್ಮವರು ಎಂಬ ಆತ್ಮೀಯತೆ ಎದ್ದು ಕಾಣುತ್ತಿತ್ತು. ಮಸಣಯ್ಯನವರು ವಾಸವಾಗಿದ್ದುದು ಮುನವಳ್ಳಿಯ ಹೊರವಲಯದಲ್ಲಿ. ಅದು ಮಸುಟಗಿ (ಸುಡಗಾಡು) ಆಗಿತ್ತು ಎಂದು ತಿಳಿದುಬರುತ್ತದೆ. ಮಸಣಯ್ಯನವರಿಗೆ ಈ ಕಾರಣವೇನಾದರು ಮಸಣಯ್ಯನೆಂದು ಹೆಸರು ಬಂದಿತೋ ವಿಚಾರಿಸಬೇಕು. ಏಕೆಂದರೆ ಈ ಶರಣನ ಹೆಸರು ಮಸಣಯ್ಯ, ಹೆಂಡತಿಯ ಹೆಸರು ಮಸಣಮ್ಮ, ಗುರುವಿನ ಹೆಸರು 'ಮುತ್ಯಾಮಸಣಯ್ಯ'. ಈ ಹೆಸರುಗಳು ಹೀಗೆ ಊಹಸಿಕೊಳ್ಳಲು ಅನುವುಮಾಡಿಕೊಡುತ್ತವೆ.

ಗಜೇಶ ಮಸಣಯ್ಯನವರ ಬಗ್ಗೆ ಮುನವಳ್ಳಿಯ ಜನ ಒಂದು ಪವಾಡ ಸದೃಶ ಘಟನೆಯನ್ನು ಹೇಳುತ್ತಾರೆ. ಅವರು ಒಮ್ಮೆ ಈ ಊರಿನ ಸಮೀಪವಿರುವ ಬೆಣ್ಣೆ ತೊರೆಯ ದಡದ ಮೇಲೆ ಪೂಜೆಗೆ ಕುಳಿತಾಗ, ಇವರನ್ನು ಪರೀಕ್ಷಿಸಲೆಂದು ಗಂಗಮ್ಮ ಏರಿಬಂದಳೆಂದೂ, ಮಸಣಯ್ಯನವರು ಇದಾವುದರ ಅರಿವಿಲ್ಲದೆ ಪೂಜೆಯಲ್ಲಿ ಮಗ್ನರಾಗಿರುವದನ್ನು ಕಂಡು ಗಂಗಮ್ಮ ತಿರುಗಿ ಹೋದಳೆಂದು ಹೇಳಲಾಗುತ್ತದೆ. ಇದರ ಇನ್ನೊಂದು ಪಾಠವೆಂದರೆ ಮಳೆಗಾಲದಲ್ಲಿ ಬೆಣ್ಣೆ ತೊರೆಯ ದಡದ ಮೇಲೆ ಲಿಂಗಪೂಜೆಗೆ ಕುಳಿತ ಮಸಣ್ಣಯ್ಯನವರು ಪೂಜೆಯಲ್ಲಿ ನಿರತರಾದರು. ಮಳೆ

ಬಂದಿತು. ತೊರೆ ತುಂಬಿ ಬಂದಿತು. ಮುಂಜಾನೆ ಜನ ನೋಡಿದಾಗ ತೊರೆಯ ನೀರು ಮಸಣ್ಣಯ್ಯನವರನ್ನು ಸುತ್ತುವರೆದು ಹರಿದು ಹೋಗುತ್ತಿತ್ತು, ಅವರಿಗೆ ತಗಲುತ್ತಿರಲಿಲ್ಲ. ಇದು ಅವರನೊಬ್ಬ ಮಹಾತ್ಮರೆಂಬ ಭಾವನೆಯಿಂದ ಕಂಡದ್ದಕ್ಕೆ ಉದಾಹರಣೆಯಾಗಿದೆ ಎಂಬಂತೆ ತೋರುತ್ತದೆ. ಬೆಣ್ಣೆತೊರೆ ಸುಮಾರು ಹತ್ತು-ಹನ್ನೆರಡು ಕಿ.ಮೀ. ದೂರದಲ್ಲಿ ಹರಿಯುತ್ತದೆ. ಅಲೌಕಿಕ ಸ್ವಭಾವದ ಜನ ತಮ್ಮ ಧ್ಯಾನಕ್ಕಾಗಿ, ಪೂಜೆಗಾಗಿ ಆಗಾಗ ಇಂತಹ ಸ್ಥಳಗಳಲ್ಲಿ ಕೆಲಹೊತ್ತು ಕಳೆಯುವುದು ಸಹಜ. ಬಹುಶಃ ಮಸಣಯ್ಯನವರು ಆಗಾಗ ತೊರೆಯ ದಡಕ್ಕೆ ಹೋಗಿ ಪೂಜೆ ಧ್ಯಾನಾನುಷ್ಠಾನಗಳಲ್ಲಿ ತೊಡಗುತ್ತಿದ್ದರೆಂದೂ, ಅದರಿಂದಾಗಿ ಇಂತಹ ಘಟನೆಗಳು ಅವರ ಜೀವನಕ್ಕೆ ಅಂಟಿಕೊಂಡು ಹುಟ್ಟಿಕೊಂಡಿರಬಹುದೆಂದೂ ಇಟ್ಟುಕೊಂಡರೆ ಹೆಚ್ಚು ಸಮಂಜಸವೆಂದು ತೋರುತ್ತದೆ.

ಹುಟ್ಟಿದ ಮಕ್ಕಳು ಲಿಂಗಧರಿಸಿಯೇ ಜನಿಸಬೇಕೆಂದು ಮಸಣಯ್ಯನವರು ಬಯಸುತ್ತಿದ್ದರು. ಲಿಂಗವಿಲ್ಲದೆ ಹುಟ್ಟಿದ ಮಕ್ಕಳನ್ನು ಮಸಣಯ್ಯ ಕೊಲ್ಲುತ್ತಿದ್ದರು ಎಂಬ ವದಂತಿ ಉಳಿದುಕೊಂಡು ಬಂದಿದೆ. ಬಹುಶಃ ಹುಟ್ಟಿದ ಮಕ್ಕಳು ದಕ್ಕುತ್ತಿರಲಿಲ್ಲವೆಂದು ಭಾವಿಸುವುದು ಇಲ್ಲಿ ಸಮಂಜಸವೆನಿಸುತ್ತದೆ. ಕೊನೆಗೆ ಶಿವ-ಪಾರ್ವತಿಯರೇ ನೀಲಕಂಠ ಮತ್ತು ಗಂಗಮ್ಮರಾಗಿ ಜನಿಸಿದರೆಂಬ ಪೌರಾಣಿಕ ಸಂಗತಿ ಸೃಷ್ಟಿಯಾಗಿ ಉಳಿದಿದೆ.

ಚೈತ್ರಮಾಸದ ದವನದ ಹುಣ್ಣಿಮೆಯ ನಂತರ, ಅಗ್ಗಾದಿ ಅಮವಾಸ್ಯೆಗೆ ಮಸಣಯ್ಯನ ಜಾತ್ರೆ ನಡೆಯುತ್ತದೆ. ಉಗಾದಿಯ ನಂತರ ಬರುವ ದವನದ ಹುಣ್ಣಿಮೆ



ಗರ್ಭಗೃಹದ ಮೂರ್ತಿಗಳು



ಮುತ್ಯಮಸಣಯ್ಯನ ಸಮಾಧಿ

ಆದ ೫ ದಿನಕ್ಕೆ ವೀರಭದ್ರ ದೇವರ ಗುಡಿಯಲ್ಲಿ ಇಡಲಾಗಿರುವ ತೊಟ್ಟಿಲನ್ನು ಮತ್ತು ನಂದಿಕೋಲನ್ನು ಮೆರವಣಿಗೆ ಮೂಲಕ ಮಸಣಯ್ಯನ ಗುಡಿಗೆ ಒಯ್ಯಲಾಗುತ್ತದೆ. ಅಂದು ಸಾಂಕೇತಿಕವಾಗಿ ಗೊಂಬೆಯನ್ನು ತೊಟ್ಟಿಲಲ್ಲಿ ಹಾಕಿ, ಗುಗ್ಗರಿ ಹಂಚಿ ಅಂದರೆ ಮಗುವಿಗೆ ತೊಟ್ಟಿಲಲ್ಲಿ ಹಾಕುವ ಸಂಪ್ರದಾಯದಂತೆ ಕಾರ್ಯಕ್ರಮಗಳನ್ನು ಮಾಡಿ, ಅಂದಿನ ಕಾರ್ಯಕ್ರಮವನ್ನು ಮುಗಿಸುತ್ತಾರೆ.

ಮುಂದೆ ೧೨ನೇ ದಿನ, ಅಂದರೆ ತೊಟ್ಟಿಲನ್ನು ಗುಡಿಗೆ ತಂದ ನಂತರದ ಎರಡನೆಯ ಸೋಮವಾರ, ಅರ್ಥಾತ್ ಅಗ್ಗಾದಿ ಅಮವಾಸ್ಯೆಯ ನಂತರ ಬರುವ ಮೊದಲನೇ ಸೋಮವಾರ ದಿನವೇ ದೀಪ ಮುಡಿಸುವ ಕಾರ್ಯಕ್ರಮ ನಡೆಯುತ್ತದೆ. ಅಂದೇ ಪಲ್ಲಕ್ಕಿ ಮೆರವಣಿಗೆಯೂ ಇರುತ್ತದೆ. ಮಂಗಳವಾರ ಅಗ್ನಿ ತುಳಿಯುವುದು ಮತ್ತು ರಥೋತ್ಸವ, ಬುಧವಾರ ಕುಸ್ತಿ, ಗುರುವಾರ ಜಾತ್ರೆ-ಮತ್ತೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಶುಕ್ರವಾರ ತೊಟ್ಟಿಲು ಮತ್ತು ನಂದಿಕೋಲಗಳನ್ನು ತಿರುಗಿ ಊರಿಗೆ ತರಲಾಗುತ್ತದೆ. ಹೀಗೆ ಐದು ದಿನ ಮಸಣಯ್ಯನ ಜಾತ್ರೆ ನಡೆಯುತ್ತದೆ.

ತೊಟ್ಟಿಲ ಮೆರವಣಿಗೆಯಿಂದಲೇ ಮಸಣಯ್ಯನ ಜಾತ್ರೆಗೆ ಚಾಲನೆ ಸಿಗುವುದನ್ನು, ಮತ್ತು ತೊಟ್ಟಿಲನ್ನು ತಿರುಗಿ ಮೆರವಣಿಗೆಯಲ್ಲಿ ಊರಿಗೆ ತರುವ ಮೂಲಕವಾಗಿ ಜಾತ್ರೆ ಮಂಗಳವಾಗುವುದನ್ನು ಲಕ್ಷಿಸಬೇಕು. ಈ ತೊಟ್ಟಿಲನ್ನು ಅತ್ಯಂತ ವಿಜೃಂಭಣೆಯಿಂದ ಊದುತ್ತ ಬಾರಿಸುತ್ತ ಹಾಡುತ್ತ ಮೆರವಣಿಗೆಯ ಮೂಲಕ ಕೊಂಡೊಯ್ಯುತ್ತಾರೆ, ಅಷ್ಟೇ ವಿಜೃಂಭಣೆಯಿಂದ ಹಿಂತಿರುಗಿ ತರುತ್ತಾರೆ. ಈ ತೊಟ್ಟಿಲಿಗೆ ಸಂಬಂಧಪಟ್ಟಂತೆ ಕೆಲವು ನಿಯಮಗಳನ್ನು ಊರವರು ಮೊದಲಿನಿಂದಲೂ ಪಾಲಿಸುತ್ತ ಬಂದಿದ್ದಾರೆ:

೧. ಹೆಣ್ಣುಮಕ್ಕಳು ಮೊದಲ ಹೆರಿಗೆ ಆದ ನಂತರ ತವರುಮನೆಯಿಂದ ಗಂಡನ ಮನೆಗೆ ಹೋಗುವಾಗ ಕೂಸಿನ ಜೊತೆಗೆ ಒಂದು ತೊಟ್ಟಿಲನ್ನು ಕೊಡುವುದು ಎಲ್ಲ ಕಡೆ ಇರುವ ಒಂದು ವಾಡಿಕೆ. ಆದರೆ ಈ ಊರಿನಲ್ಲಿ ಈ ಸಂಪ್ರದಾಯ ಇಲ್ಲ. ಈ ಊರಿನಿಂದ ತೊಟ್ಟಿಲನ್ನು ಬೇರೆ ಊರಿಗೆ ಕೊಡುವಂತಿಲ್ಲ.

೨. ಜಾತ್ರೆಯ ಸಂಬಂಧವಾಗಿ ತೊಟ್ಟಿಲನ್ನು ಮಸಣಯ್ಯನ ಗುಡಿಗೆ ತರುವಾಗ ಊರಲ್ಲಿದ್ದವರು, ಮೆರವಣಿಗೆಯಲ್ಲಿದ್ದವರು, ಜಾತ್ರೆ ಮುಗಿದ ನಂತರ ಆ ತೊಟ್ಟಿಲನ್ನು ಹಿಂತಿರುಗಿ ತರುವಾಗಲೂ ಹಾಜರಿರಬೇಕು.

೩. ತೊಟ್ಟಿಲು ಗುಡಿಗೆ ಬಂದನಂತರ ರೊಟ್ಟಿಬುತ್ತಿ, ಹೊಸಬಟ್ಟೆ ಊರಿನಿಂದ ಹೊರಗೆ ಕೊಡುವಂತಿಲ್ಲ.

೪. ತೊಟ್ಟಿಲು ಗುಡಿಗೆ ಬಂದ ನಂತರ ೧೫ ದಿನಗಳವರೆಗೆ ಊರಲ್ಲಿ ಹಲಗಿ-ಬಾಜಿ ಬಾರಿಸುವಂತಿಲ್ಲ. ಸತ್ತರೂ ಹುಟ್ಟಿದರೂ ಏನೇ ಆದರೂ ೧೫ ದಿನಗಳವರೆಗೆ ಹಲಗಿ-ಬಾಜಿ ಬಾರಿಸುವಂತಿಲ್ಲ.

೫. ಯಾವುದೇ ಬಗೆಯ ಹೊಸ ಕಾರ್ಯಕ್ರಮ ನಡೆಯುವುದಿಲ್ಲ.

ಮಸಣಯ್ಯನ ತೊಟ್ಟಿಲಿಗೆ ಸಂಬಂಧಿಸಿದಂತೆ ಇಷ್ಟೆಲ್ಲ ನಂಬುಗೆಗಳು ಇರುವುದನ್ನು ಗಮನಿಸಿದರೆ, ಬಹುಶಃ ಮಸಣಯ್ಯನ ಮಕ್ಕಳಿಗೆ ಸಂಬಂಧಿಸಿದಂತೆ ಈ ಸಾಂಕೇತಿಕ



ಗಂಗಮ್ಮನ ಕೆರೆಯ ದಡದಲ್ಲಿ ಮಗಳು ಗಂಗಮ್ಮಳ ಸಮಾಧಿ

ಆಚರಣೆ ಉಳಿದುಕೊಂಡು ಬಂದಂತೆ ತೋರುತ್ತದೆ. ಮಸಣಯ್ಯನ ಹುಟ್ಟಿದ ಮಕ್ಕಳು ಬದುಕುಳಿಯದೇ ಇರುವ ಸಂಗತಿಯ ಹಿನ್ನೆಲೆಯಲ್ಲಿ ತೊಟ್ಟಿಲಿಗೆ ಸಂಬಂಧಿಸಿದ ಈ ಮೇಲಿನ ನಂಬಿಗೆಗಳು ಆಚರಣೆಯಲ್ಲಿ ಉಳಿದು ಬಂದಿರಬೇಕೆನಿಸುತ್ತದೆ.

ಜಾತ್ರೆಗೆ ಸಂಬಂದಿಸಿದಂತೆ ಇನ್ನಷ್ಟು ವಿಶೇಷ ಸಂಗತಿಗಳಿವೆ. ಹಳ್ಳಿಖೇಡ (ಕೆ) ಗ್ರಾಮದಲ್ಲಿ ಕಿನ್ನರಿ ಬೊಮ್ಮಯ್ಯನ ಜಾತ್ರೆಯ ವಿಶೇಷಗಳಂತೆ ಇಲ್ಲೂ ಈ ಊರಿನ ಜನ– ಬದುಕಲು ಊರು ಬಿಟ್ಟು ಹೋದವರು, ಮದುವೆಯಾಗಿ ಹೋದ ಹೆಣ್ಣುಮಕ್ಕಳು ಈ ಜಾತ್ರೆಗೆ ತಪ್ಪದೆ ಬರುತ್ತಾರೆ. ಊರಲ್ಲಿ ಎಲ್ಲ ಸಮುದಾಯದವರನ್ನು ಈ ಜಾತ್ರೆಯಲ್ಲಿ ಭಾಗಿಯಾಗಿಸಿಕೊಳ್ಳಲು ಒಬ್ಬೊಬ್ಬರಿಗೆ ಒಂದೊಂದು ಚಾಜ ಕೊಡಲಾಗಿದೆ.

೧. ತೊಟ್ಟಿಲನ್ನು ಅಗಸ ಹೊತ್ತೊಯ್ಯುತ್ತಾನೆ.
೨. ಹಡಪದರು ದೀಪ–ದೀವಟಿಗೆ ಒಯ್ಯುತ್ತಾರೆ.
೩. ಮಾದರ ಜನಾಂಗದವರಿಗೆ ಜಾತ್ರೆಯಲ್ಲಿ ಗುಗ್ಗರಿ ಹಾಕುವ ಚಾಜ ಇದೆ.
೪. ಥೇರು ಎಳೆಯುವಾಗ ಬಡಿಗ್ಯಾ ಥೇರಿನ ಮೇಲೆ ನಿಲ್ಲುತ್ತಾನೆ.



ಮಗ ನೀಲಕಂಠನ ಸಮಾಧಿ

೫. ಹರಿಜನ ಕೇರಿಯವರು ಬೆಳಕು ಹಿಡಿಯುವ, ಅಗ್ನಿಗೆ ಕಟಗಿ ಒಟ್ಟುವ ಚಾಜ ಹೊಂದಿದ್ದಾರೆ. ಅಲ್ಲದೆ ಜಾತ್ರೆಯ ಮೊದಲ ದಿನ ದೀಪದ ಮೆರವಣಿಗೆ ನಡೆಯುತ್ತದೆ. ದೀಪದೊಂದಿಗೆ ಹರಿಜನ ಕೇರಿಯಿಂದ ಎಲ್ಲರೂ ಮೆರವಣಿಗೆಯಲ್ಲಿ ಹೊರಟು ಗಂಗಮ್ಮನ ಗುಡಿಗೆ ನೈವಿದ್ಯ ಅರ್ಪಿಸುತ್ತಾರೆ. ಅಲ್ಲಿಯ ಕೆರೆಯಲ್ಲಿ ತೆಪ್ಪ ಬಿಡುತ್ತಾರೆ.
೬. ಜಮಾದಾರರು ಎಲ್ಲ ಜಾತ್ರೆಯ ವ್ಯವಸ್ಥೆ ಮಾಡುತ್ತಾರೆ.
೭. ಹೂಗಾರರು ಪೂಜಾ ಮಾಡುತ್ತಾರೆ.

ಇಂತಹ ಅನೇಕ ನಂಬುಗೆಗಳನ್ನು ಆಚರಣೆಗಳನ್ನು ಹೊಂದಿರುವ ಮಸಣಸಿದ್ಧನ ಜಾತ್ರೆ ಐದು ದಿನಗಳವರೆಗೆ ನಡೆಯುತ್ತದೆ.

ಮೊದಲು ಮಸಣಯ್ಯನ ಗುಡಿ ತೀರ ಸಣ್ಣದಾಗಿತ್ತು. ಈ ಎರಡು ವರ್ಷಗಳ ಹಿಂದೆಯಷ್ಟೆ ೨೦೧೧ರಲ್ಲಿ ಈಗಿರುವ ದೊಡ್ಡ ದೇವಾಲಯದ ಕಟ್ಟಡ ಮುಗಿದಿದೆ. ಮಸಣಯ್ಯನ ಗುಡಿ ಸಣ್ಣದಾಗಿದ್ದು, ಊರ ಹೊರವಲಯದಲ್ಲಿ ಇದ್ದುದರಿಂದ ಮತ್ತು ಮೆರವಣಿಗೆ ಬರಲು ಒಂದು ದೂರ ಬೇಕಾಗುವದರಿಂದ ತೊಟ್ಟಿಲು, ಪಲ್ಲಕ್ಕಿ, ನಂದಿಕೋಲ ಇವನ್ನು ಊರಲ್ಲಿರುವ ವೀರಭದ್ರ ದೇವಾಲಯದಲ್ಲಿ ಇಡುವ ಪದ್ಧತಿ ಇದ್ದಿರಬೇಕು. ಮಸಣಯ್ಯನವರ ಗುಡಿಗೆ ಸಂಬಂದಿಸಿದಂತೆ ೧೫ ಎಕರೆ ಜಮೀನಿದೆ. ಮಸಣಯ್ಯನವರ ಕಾಯಕ ಒಕ್ಕಲುತನ ಆಗಿರಬಹುದಾಗಿದೆ.

ಮಸಣಯ್ಯ ಕಲ್ಯಾಣಕ್ಕೆ ಹೋದ ಸಂಗತಿ ನಿಜವಿರಬಹುದಾದರೂ ಅದು ಮಕ್ಕಳಿಗೆ ಸಂಬಂಧ ನೋಡಲು ಎನ್ನುವ ಸಂಗತಿಗಿಂತ ಸಹಜವಾಗಿಯೇ ಬಸವಣ್ಣನವರ ದರ್ಶನ ಪಡೆಯಲು ಎಂದು ಇಟ್ಟುಕೊಳ್ಳಬಹುದಾಗಿದೆ. ಆದರೆ ಹಳ್ಳಿಗಾಡಿನಲ್ಲಿ ಇಂತಹ ಅಸಹಜ ಸಂಗತಿಗಳು ಆಯಾ ಶರಣರ ಮಹಿಮೆಗಳಂತೆ ಉಳಿದುಕೊಂಡು ಬಂದಿವೆ. ಮೌಖಿಕ ಪರಂಪರೆಯಲ್ಲಿ ಆಯುಷ್ಯ ಪಡೆಯಲು ಆಗುವ ಬದಲಾವಣೆಗಳು ಇವು ಎಂದು ಇಟ್ಟುಕೊಳ್ಳಬೇಕಾಗುತ್ತದೆ. ಪರಂಪರೆಯಿಂದ ಉಳಿದುಕೊಂಡು, ಆಗಾಗ ಬದಲಾವಣೆಯಾಗುತ್ತ, ಸಂಪೂರ್ಣವಾಗಿ ವಿಕೃತ ರೂಪ ಪಡೆದ ಘಟನೆಗಳನ್ನೇ ಮಹಿಮಾಸದೃಶ ಎಂಬಂತೆ ಜನ ಹೇಳಿಕೊಂಡು ಬರುವುದು ಮೌಖಿಕ ಪರಂಪರೆಯಲ್ಲಿ ಸಹಜವಾಗಿದೆ.

ಮಾಹಿತಿ : ಶ್ರೀಮಂತ ಶರಣಪ್ಪ ಜವಳಗಿ
ವಚನಗಳು : ೭೦
ವಚನಾಂಕಿತ : ಮಹಾಲಿಂಗ ಗಜೇಶ್ವರ
ಮಸಣಮ್ಮನ ವಚನಗಳು : ೧೦
ವಚನಾಂಕಿತ : ಮಸಣಯ್ಯಪ್ರಿಯ ಗಜೇಶ್ವರಾ

***

**ಜೇವರ್ಗಿ ತಾಲೂಕು :**

## ೧. ನೆಲೋಗಿ :

## ಕೋಲಶಾಂತಯ್ಯನವರ ಗದ್ದುಗೆ

'ನೆಲವಗಿ' ಎಂದು ಶಾಸನಗಳಲ್ಲಿ ಹೆಸರಿಸಲಾದ ನೆಲೋಗಿ ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಒಂದು ಪುರಾತನ ಗ್ರಾಮ. ಜೇವರ್ಗಿಯಿಂದ ಸುಮಾರು ೨೫ ಕಿ. ಮೀ. ಅಂತರದಲ್ಲಿದೆ. ಬಿಜಾಪೂರ ರಸ್ತೆಗುಂಟ ೨೦ ಕಿ.ಮೀ. ಮುಂದೆ ಹೋಗಿ, ನಂತರ ಬಲಗಡೆ ತಿರುಗಿಕೊಂಡರೆ, ಮುಂದೆ ಆರು ಕಿ.ಮೀ. ಅಂತರದಲ್ಲಿ ಈ ನೆಲವಗಿ ಇದೆ.

ನೆಲೋಗಿ ಗ್ರಾಮದ ಪೂರ್ವಕ್ಕೆ ಸುಮಾರು ಎರಡ್ಮೂರು ಕಿ.ಮೀ. ದೂರದ ಮೇಲೆ, **ಶಾಂತಯ್ಯನವರ ಸಮಾಧಿ** ಇದೆ. ಈ ಸಮಾಧಿಯ ಎದುರಿಗೆ **'ಅಣಬಸವಣ್ಣ'** ಹಾಗೂ ಮಗ್ಗಲು **'ಮೂಕಬಸವಣ್ಣ'** ಹೀಗೆ ಬಸವಣ್ಣನ ಹೆಸರಿನ ಎರಡು ಸಮಾಧಿಗಳಿವೆ. ಆದರೆ ಈ ಮೂವರ ಪರಸ್ಪರ ಸಂಬಂಧ ಗ್ರಾಮದವರ ಗಮನಕ್ಕೆ ಇಲ್ಲ. ಶಾಂತಯ್ಯನವರ ಸಮಾಧಿ ಮುಂದುಗಡೆ ಇರುವ ಅಣಬಸವಣ್ಣನಿಗೆ ಗುಡಿ ಇದೆ. ಈಗ ಅಣಬಸವಣ್ಣನ ಗುಡಿಯ ಅಭಿವೃದ್ಧಿ ಕೆಲಸವೂ ನಡೆದಿದೆ. ಅದನ್ನು ಪ್ರವೇಶಿಸಿ ನೋಡಿದರೆ ಮೂಲದಲ್ಲಿ ಅದೊಂದು ಕಲ್ಲಿನ ಮಂಟಪವಾಗಿದ್ದು, ನಂತರ ಸುತ್ತಲೂ ಗೋಡೆ ಕಟ್ಟಿದಂತಿದೆ. ಶಾಂತಯ್ಯನವರ ಸಮಾಧಿ ಈಗಲೂ ಒಂದು ಗಿಡದ ಕೆಳಗೇ ಇದೆ. ಮೂಕಬಸವಣ್ಣನ ಸಮಾಧಿಗೂ ಆಶ್ರಯವಿಲ್ಲ. ಈ ಮೂರೂ ಸಮಾಧಿಗಳಿರುವ ಹೊಲಗಳು ಈಗ ಮುಸಲ್ಮಾನ ಕುಟುಂಬವೊಂದರ ಒಡೆತನದಲ್ಲಿವೆ. ಇವು ಮೂಲತಃ ದತ್ತಿ ಹೊಲಗಳಾಗಿದ್ದವೆಂದು ಹೇಳಲಾಗುತ್ತದೆ.

ಅಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳು ಕೋಲಶಾಂತಯ್ಯನವರ ಹೆಸರಿಗೆ ನಡೆಯುತ್ತವೆ ಎಂದು ತಿಳಿದುಬರುತ್ತದೆ. ಅಮವಾಸ್ಯೆಗೆ ನಡೆಸುವ ದಾಸೋಹ, ಭಜನೆ ಇತ್ಯಾದಿಗಳೆಲ್ಲ ಕೋಲ ಶಾಂತಯ್ಯನ ಹೆಸರಿನ ಮೇಲೆ ನಡೆಯುತ್ತವೆ.

ಕಲ್ಯಾಣ ಕ್ರಾಂತಿ ಕಾಲದಲ್ಲಿ ಚನ್ನಬಸವಣ್ಣ ಅವರ ಜೊತೆಗೆ ಕೋಲಶಾಂತಯ್ಯ ಹಾಗೂ ನನ್ನಯ್ಯ-ನಾದಯ್ಯ ಎಂಬ ಶರಣರು ನೆಲೋಗಿಗೆ ಬಂದರೆಂದು ಹೇಳಲಾಗುತ್ತದೆ. ಅಣಬಸವಯ್ಯ ಅದು ಚೆನ್ನಬಸವಯ್ಯ ಎಂದಿರಬೇಕೆಂದು ಊಹಿಸಲಾಗುತ್ತದೆ. ಆದರೆ ಚೆನ್ನಬಸವಣ್ಣನವರು ಇವರ ಜೊತೆಗೆ ಬಂದಿರಲು



ಕೋಲಶಾಂತಯ್ಯನವರ ಸಮಾಧಿ

ಸಾಧ್ಯವೇ ಇಲ್ಲವಾದುದರಿಂದ ಆ ಹೆಸರಿನ ಬೇರೊಬ್ಬ ಶರಣನೇನಾದರೂ ಬಂದಿರಬಹುದೆಂದು ಊಹಿಸಬಹುದಾಗಿದೆ. ಊರಿಂದ ಕೋಲಶಾಂತಯ್ಯನವರ ಗದ್ದುಗೆಗೆ ಹೋಗುವ ದಾರಿಯಲ್ಲಿ ಊರ ಹೊರಗೆ ತಗ್ಗಿನಲ್ಲಿ ನನ್ನಯ್ಯ-ನಾದಯ್ಯನವರದೆಂದು ಹೇಳುವ ಒಂದು ತೀರ ಜೀರ್ಣಗೊಂಡಿರುವ ಸಮಾಧಿ ಇದೆ. ಇದನ್ನು ಗಮನಿಸಿದರೆ ಶಾಂತಯ್ಯನವರ ಜೊತೆ ಕೆಲ ಶರಣರು ನೆಲೋಗಿಗೆ ಬಂದಂತೆ ತೋರುತ್ತದೆ.

ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಭೂಯಾರ ಗ್ರಾಮದ ಶಾಸನದಲ್ಲಿ ನೆಲೋಗಿ ಶಾಂತಯ್ಯನ ಹೆಸರು ಉಲ್ಲೇಖವಾಗಿದೆ. 'ಈ ಶಾಸನದ ಕಾಲ ಕ್ರಿ.ಶ.೧೧೬೨. ...ಇದು ಕಲ್ಯಾಣ ಶರಣರನ್ನು ಕುರಿತ ಪ್ರಾಚೀನತಮ ಶಾಸನವಾಗಿದೆ'(ಶಾಸನಗಳಲ್ಲಿ ಶಿವಶರಣರು,ಪು.೮೯-೯೦, ಎಂ.ಎಂ.ಕಲಬುರ್ಗಿ) ಎಂದು ತಿಳಿದುಬರುತ್ತದೆ. ಈ ಶಾಸನದಲ್ಲಿ ಶಾಂತಯ್ಯನ ಶಿಷ್ಯ 'ಬಸವಯ್ಯ' ಎಂಬುವವನ ಉಲ್ಲೇಖವಿದೆ. ಶಾಂತಯ್ಯನವರ ಜೊತೆ ಇಬ್ಬರು ಬಸವಯ್ಯಗಳ (ಅಣಬಸವಣ್ಣ, ಮೂಕಬಸವಣ್ಣ) ಸಮಾಧಿಗಳಿವೆ. ಇವರು ಶಾಂತಯ್ಯನವರ ಶಿಷ್ಯರಾಗಿರಬಹುದಾಗಿದೆ. ಇವರಲ್ಲಿಯೇ ಒಬ್ಬರ ಹೆಸರನ್ನು ಶಾಸನ ಉಲ್ಲೇಖಿಸುತ್ತಿರಬಹುದಾಗಿದೆ. ಅಣಬಸವಣ್ಣನ ವಂಶಸ್ಥರು ಎಂದು ಹೇಳಿಕೊಳ್ಳುವ ಒಂದು ಕುಟುಂಬವೂ ನೆಲೋಗಿಯಲ್ಲಿದೆ. ಹೀಗೆ ಶಾಸನದಲ್ಲಿ ಉಲ್ಲೇಖಿತ ಶಾಂತಯ್ಯನ ಶಿಷ್ಯ ಬಸವಯ್ಯನ ಸಮಾಧಿಯೆ ಇದಾಗಿರಲೂ ಬಹುದಾಗಿದೆ. ಶಾಸನ ಇರುವ ಭೂಯಾರವೂ ಭೀಮಾನದಿಯ ತೀರದಲ್ಲಿರುವ ಒಂದು ಹಳ್ಳಿ. ಅಲ್ಲಿಂದ ಕೆಳಗಡೆ ಶಾಂತಯ್ಯನವರ ಸಮಾಧಿ ಇರುವ ನೆಲೋಗಿಯೂ ಭೀಮಾನದಿಯ


ಹತ್ತಿರವೇ ಇರುವ ಊರಾಗಿದೆ. ಎರಡಕ್ಕೂ ಇರುವ ದೂರ ೨೫ ಕಿ.ಮೀ. ಮಾತ್ರ.

ಕೋಲಶಾಂತಯ್ಯ ಅವರ ಜಡೆಗಳು ತುಂಬ ಉದ್ದವಾಗಿದ್ದವು, ನೆಲಕ್ಕೆ ಎಳೆಯುತ್ತಿದ್ದವು ಎಂದು ಹೇಳಲಾಗುತ್ತದೆ. ಕೋಲಶಾಂತಯ್ಯ ಅವರು ಕೈಯಲ್ಲಿ ಕೋಲು ಹಿಡಿದುಕೊಂಡು ಈಗ ಅವರ ಸಮಾಧಿಯಿಂದ ಉತ್ತರಕ್ಕೆ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಹರಿಯುವ ಭೀಮಾನದಿಗೆ ಸ್ನಾನಕ್ಕೆ ಹೋಗುತ್ತಿದ್ದರಂತೆ. ಕೈಯಲ್ಲಿಯ ಕೋಲನ್ನು ನದಿಯಲ್ಲಿ ನೆಟ್ಟು, ಅದಕ್ಕೆ ಕಂದೀಲನ್ನು ತೂಗುಹಾಕಿ ಸ್ನಾನ ಪೂಜೆಗಳನ್ನು ಮುಗಿಸುತ್ತಿದ್ದರೆಂದು ಹೇಳಲಾಗುತ್ತದೆ. ಭೀಮಾ ನದಿಯ ತೀರದಲ್ಲಿ ನೀಲಕಂಠೇಶ್ವರ ದೇವಾಲಯವೊಂದಿದ್ದು, ಈ ದೇವಾಲಯ ೧೧-೧೨ನೇ ಶತಮಾನಕ್ಕೆ ಸೇರಿದ್ದಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಶರಣ ಕೋಲಶಾಂತಯ್ಯ ಅವರು ಈ ದೇವಾಲಯದಲ್ಲಿ ಅನುಷ್ಠಾನ ಮಾಡಿದ್ದಾರೆಂದು ಹೇಳಲಾಗುತ್ತದೆ.

ಕೋಲಶಾಂತಯ್ಯ ಅದ್ವಿತೀಯ ಶಕ್ತಿಯುಳ್ಳ ಶರಣನು. ಅವರು ಕಲ್ಯಾಣದಲ್ಲಿದ್ದಾಗಿನ ಪ್ರಸಂಗವೊಂದು ಈಗಲೂ ಜನರ ಮನಸ್ಸಿನಲ್ಲಿ ಉಳಿದುಕೊಂಡು ಬಂದಿದೆ. ಕಲ್ಯಾಣದ ಬಿಜ್ಜಳ ದೊರೆಯ ಚಾವಡಿಯೊಂದರ ಕಂಬ ಕುಸಿದಿತ್ತಂತೆ. ಅದನ್ನು ಹಿಡಿದು ಎತ್ತಿನಿಲ್ಲಿಸಿ, ಗೋಡೆ ಬಿಚ್ಚಿಕಟ್ಟುವ ಕೆಲಸದಲ್ಲಿ ಉಪ್ಪಾರನು ತೊಡಗಿದ್ದನಂತೆ. ಗೋಡೆಯ ಮೇಲೆ ಜಂಗಮನೊಬ್ಬನ ಚಿತ್ರವಿದ್ದು, ಉಪ್ಪಾರ ಅಪಹಾಸ್ಯಮಾಡಿ ಡೊಳ್ಳುಹೊಟ್ಟೆಯವನು ಎಂದು ಹಾರೆಯಿಂದ ಇರಿಯಲು ಸಜ್ಜಾದನಂತೆ. ಆಗ ಅಲ್ಲಿಯೇ ಇದ್ದ ಕೋಲಶಾಂತಯ್ಯ ಹಾಗೆ ಮಾಡದಿರಲು ವಿನಂತಿಸಿಕೊಳ್ಳುತ್ತಾನೆ. ಆದರೂ ಉದ್ಧಟತನದಿಂದ ಉಪ್ಪಾರ



ಅಣಬಸವಣ್ಣನವರ ಸಮಾಧಿ



ಮೂಕಬಸವಣ್ಣನವರ ಸಮಾಧಿ

ಹಾರೆಯಿಂದ ತಿವಿದೇ ಬಿಡುತ್ತಾನೆ. ಕೋಲಶಾಂತಯ್ಯ ಕೋಪದಿಂದ ಉಪ್ಪಾರನನ್ನು ತಿವಿದಾಗ ನೆಲಕ್ಕುರುಳುತ್ತಾನೆ. ಬಿಜ್ಜಳನಿಗೆ ಕೋಲಶಾಂತಯ್ಯನ ಮೇಲೆ ಕೋಪ ಬಂದು ಕಿರಚುತ್ತಾನೆ. ಚಿತ್ರದ ಜಂಗಮನಿಗಾಗಿ ಉಪ್ಪಾರನನ್ನು ಹತ್ಯೆಗೈದುದು ಅನ್ಯಾಯ. ಆ ಚಿತ್ರದ ಜಂಗಮನನ್ನು ನೀವು ನುಡಿಸಬಲ್ಲಿರಾ? ಎಂದಾಗ, ಕೋಲಶಾಂತಯ್ಯ 'ಚಿತ್ರದ ಸಂಗಮನಾಥಯ್ಯ ಬನ್ನಿ' ಎಂದು ಭಕ್ತಿಯಿಂದ ಪ್ರಾರ್ಥಿಸುತ್ತಾನೆ. ಆಗ ಸಂಗಮನಾಥ ನಿಜರೂಪದೋರಿ ಮಾತನಾಡುತ್ತಾನೆ. ಬೆರಗಾದ ಬಿಜ್ಜಳ ಹಾಗಾದರೆ ಉಪ್ಪಾರನನ್ನೂ ಬದುಕಿಸಿ ಎಂದಾಗ, ತನ್ನ ಕೈಯ ಕೋಲನ್ನು ಅವನಿಗೆ ಮುಟ್ಟಿಸುವ ಮಾತ್ರದಿಂದಲೇ ಅವನಲ್ಲಿ ಜೀವ ಚೈತನ್ಯ ತುಂಬುತ್ತಾನೆ. ಹೀಗೆ ಅವರ ಕೈಯ ಕೋಲು ಸಾಮಾನ್ಯ ಕೋಲಾಗಿರಲಿಲ್ಲ. ಅದಕ್ಕೆ ಮಹಾನ್ ಶಕ್ತಿ ಇತ್ತು. ಈ ಕಾರಣಕ್ಕಾಗಿ ಶಾಂತಯ್ಯ ಕೋಲಶಾಂತಯ್ಯನೆಂದೇ ಪ್ರಸಿದ್ಧಿ ಪಡೆದನೆಂದು ಕಾವ್ಯಗಳೂ ಸಾರಿ ಹೇಳುತ್ತವೆ. ಮಸಕು ಮಸುಕಾಗಿ ಈ ಸಂಗತಿಗಳು ಜನರ ಬಾಯಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವುದನ್ನು ನಾವು ಕಾಣುತ್ತೇವೆ.

ನೆಲೋಗಿಯಲ್ಲಿ ಕೋಲಶಾಂತಯ್ಯನ ವಂಶಜರು ಇಂದಿಗೂ ಇದ್ದಾರೆಂದು ತಿಳಿದುಬರುತ್ತದೆ. ಆದರೆ ಈ ಬಗೆಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಾಗುವುದಿಲ್ಲ.

ಇದೇ ಊರಿನಲ್ಲಿರುವ ನನ್ನಯ್ಯ ನಾದಯ್ಯ ಹೆಸರಿನ ಎರಡು ನೀರಿನ ಗುಂಡಗಳು, ಒಂದು ತೀರ ಶಿಥಿಲಗೊಂಡ ಸಮಾಧಿ, ಕೋಲಶಾಂತಯ್ಯನವರ ಸಮಾಧಿಗೆ ಹೋಗುವ ಹಾದಿಗೆ, ಎಡಮಗ್ಗಲು ತೆಗ್ಗು ಪ್ರದೇಶದಲ್ಲಿ ಇವೆ. ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ನನ್ನಯ್ಯನ ಹೆಸರು ಮಾತಂಗತಮ್ಮ ಎಂದಿತ್ತಂತೆ. ಇವನು ಓಡಿಸ್ಸಾ

ಪ್ರಾಂತದ ಕರ್ಣಿಕಾಪುರ ಎಂಬ ಗ್ರಾಮದಿಂದ ಬಂದವನೆಂದು ಹೇಳುತ್ತಾರೆ. ಇವರು ಕಲ್ಯಾಣಕ್ಕೆ ಬಂದಾಗ ಬಸವಣ್ಣ ಅವರನ್ನು 'ನನ್ನಯ್ಯ' ಎಂದು ಕರೆಯುತ್ತಾರೆ. ಆಗಿನಿಂದ ಮಾತಂಗತಮ್ಮ ಎಂಬ ಹೆಸರು ಹೋಗಿ ನನ್ನಯ್ಯ ಆಯಿತಂತೆ. ಇವನು ಪೂರ್ವದಲ್ಲಿ ಕಳ್ಳತನ ಮಾಡುತ್ತಿದ್ದನೆಂದೂ ಸುಜ್ಞಾನದೇವರಿಂದ ಲಿಂಗದೀಕ್ಷೆ ಪಡೆದರೆಂದೂ ಹೇಳಲಾಗುತ್ತದೆ. ಗುರುಗಳಿಗೆ ತನಗೋಸ್ಕರ ಆಪತ್ತು ಬಂದು ಕೊಲೆ ಆದಾಗ ತನ್ನ ಪ್ರಾಣವನ್ನೇ ಕೊಡಲು ಸಿದ್ಧನಾಗುತ್ತಾನೆ. ಆಗ ಅಶರೀರ ವಾಣಿಯೊಂದು- ಗುರುವಿನ ರುಂಡಕ್ಕೆ ಮುಂಡ ಹಚ್ಚಲು ಹೇಳಿದಂತೆ ಆಗುತ್ತದೆ. ಆಗ ಜೀವ ಬರುತ್ತದೆ. ಇಬ್ಬರೂ ಕಲ್ಯಾಣಕ್ಕೆ ಬರುತ್ತಾರೆ. ನಂತರ ಕೋಲ ಶಾಂತಯ್ಯನೊಂದಿಗೆ ನೆಲೋಗಿಗೆ ಬರುತ್ತಾರೆ. ಇವರ ಹೆಸರಿನ ಎರಡು ನೀರಿನ ಗುಂಡಗಳಿವೆ. ಗದ್ದುಗೆ ಇದೆ. ಈ ಸ್ಥಳವನ್ನು ನೆಲೋಗಿ ಗ್ರಾಮದವರು ನನ್ನಯ್ಯ-ನಾದಯ್ಯ ಗುಂಡಗಳೆಂದು ಕರೆಯುತ್ತಾ ಬಂದಿದ್ದಾರೆಂದು ತಿಳಿದುಬರುತ್ತದೆ.

=ವಚನಗಳು : ೧೦೩
ವಚನಾಂಕಿತ : ಪುಣ್ಯಾರಣ್ಯದಹನ ಭೀಮೇಶ್ವರ ಲಿಂಗ ನಿರಂಗಸಂಗ.
ಮಾಹಿತಿ : ಭೀಮರಾವ ಕಲ್ಯಾಣಿ ಹಾಗೂ ಅಣಬಸಯ್ಯ ಪುರಾಣಿಕ

***



ನನ್ನಯ್ಯ ನಾದಯ್ಯ ಅವರ ಸಮಾಧಿ

## ಜೇವರ್ಗಿ ತಾಲೂಕು :

### ೨. ಜಾಡ ಕೊಂಡಗುಳಿ :
### ಕೇಶಿರಾಜನ ಸಮಾಧಿಗುಡಿ

ಜೇವರ್ಗಿ ತಾಲೂಕಿನ ಕೊನೆಯ ಹಳ್ಳಿ ಜಾಡಕೊಂಡಗುಳಿ. ಜಾಡಕೊಂಡಗುಳಿಗೆ ಜೇವರ್ಗಿಗಿಂತ ಸಿಂದಗಿಯೇ ಸಮೀಪದಲ್ಲಿದೆ. ಹೀಗಾಗಿ ಈ ಊರಿನ ವ್ಯವಹಾರವೆಲ್ಲ ಸಿಂದಗಿಯನ್ನೇ ಅವಲಂಬಿಸಿದೆ. ಕಛೇರಿ ಕೆಲಸಗಳಿಗಾಗಿ ಮಾತ್ರ ಜನ ಜೇವರ್ಗಿಗೆ ಅಲೆದಾಡುತ್ತಾರಂತೆ. ಜೇವರ್ಗಿ ೫೦ ಕಿ.ಮೀ. ಅಂತರದಲ್ಲಿದ್ದರೆ ಸಿಂದಗಿ ಕೇವಲ ೨೫ ಕಿ.ಮೀ. ಅಂತರದಲ್ಲಿದೆ. ಉತ್ತಮ ರಸ್ತೆಯಿಂದ ಜೇವರ್ಗಿಗೆ ಹೋಗಲು ಕನಿಷ್ಠ ೧೦೦ ಕಿ.ಮೀ. ಪ್ರಯಾಣಿಸಬೇಕಾಗುತ್ತದೆಂಬುದು ಕೊಂಡಗುಳಿ ಜನಗಳ ಬೇಸರ.



ಸೋಮನಾಥ ದೇವಾಲಯದ ಗರ್ಭಗೃಹದ ಎದುರಿನ ಮಂಟಪ



**ಸೋಮನಾಥ ದೇವಾಲಯದ ಗರ್ಭಗೃಹದ ಶಿವಲಿಂಗ**

ಈ ಊರಿನ ವಿಶೇಷತೆ ಎಂದರೆ ೧೨ನೇ ಶತಮಾನದ ಶರಣರಿಗಿಂತ ಮುಂಚೆ ಆಗಿಹೋದ, ಬಸವಸಮಕಾಲೀನರಿಗೆ ಹಿರಿಯನೆನಿಸುವ, ಕಲ್ಯಾಣದಲ್ಲಿ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಮಹಾಮಂಡಲೇಶ್ವರನಾಗಿದ್ದ ಕೊಂಡಗುಳಿಯ ಕೇಶಿರಾಜನೇ ಆ ಕಾಲದ ದೊಡ್ಡ ಶಿವಭಕ್ತ. ಇವತ್ತಿಗೂ ಆತನಿಂದ ಕಟ್ಟಿಸಲ್ಪಟ್ಟ ಸೋಮನಾಥ ದೇವಾಲಯವೊಂದು ಈ ಊರಿನಲ್ಲಿದೆ. ಕಲ್ಯಾಣದ ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯ ಮತ್ತು ದಂಡನಾಯಕನಾದ ಕೊಂಡಗುಳಿ ಕೇಶಿರಾಜ ಇವರ ಕಾಲದಲ್ಲಿ ಶೈವಧರ್ಮ ಅತ್ಯಂತ ಉನ್ನತಿಗೇರಿತ್ತೆಂದು ತೋರುತ್ತದೆ. ಅದರಲ್ಲೂ ಶಿವದೇವಾಲಯಗಳನ್ನಂತೂ ಇವರು ಹೋದಲ್ಲೆಲ್ಲ ನಿರ್ಮಿಸಿದ್ದಾರೆ.

ಕೊಂಡಗುಳಿಯಲ್ಲಿರುವ ಸೋಮನಾಥ ದೇವಾಲಯವನ್ನು ಕೇಶಿರಾಜನ ಇಚ್ಛೆಯ ಮೇರೆಗೆ ಅರಸ ಕಟ್ಟಿಸಿಕೊಟ್ಟನೆಂದು ಹೇಳಲಾಗುತ್ತದೆ. ಈ ದೇವಾಲಯದ ಮುಂಭಾಗದಲ್ಲಿಯೇ ಬಸವಣ್ಣನ (ನಂದಿ) ವಿಗ್ರಹವಿದೆ. ಅದಕ್ಕೆ ಗುಡಿಯೊಂದನ್ನು ನಂತರ ಕಟ್ಟಿಸಿದಂತೆ ತೋರುತ್ತದೆ. ಈಗ ಊರವರ ಬಾಯಿಯಲ್ಲಿ ಸೋಮನಾಥ ದೇವಾಲಯಕ್ಕಿಂತ ಬಸವಣ್ಣಪ್ಪನ ಗುಡಿಯೆಂದೇ ಬಳಸುವುದು ಸಾಮಾನ್ಯವಾಗಿದೆ. ನಾವು ಸೋಮಾನಾಥನ ದೇವಾಲಯವನ್ನು ಕೇಳಿದರೆ ಊರವರು ಬಸವಣ್ಣಪ್ಪನ ಗುಡಿಯ ದಾರಿಯೆಂದೇ ತೋರಿಸಿದರು.

ಸೋಮನಾಥ ದೇವಾಲಯಕ್ಕೆ ಸಾಗಿ ಹೋಗಲು ಇರುವ ಮೆಟ್ಟಿಲು ದಾರಿಯಲ್ಲಿಯೇ ಒಂದು ಹಾಸಿದ ಬಂಡೆ ಇದ್ದು, ಇದರ ಕೆಳಗೆ ಸುರಂಗ ಮಾರ್ಗವಿದೆ

ಎಂದು ಹೇಳುತ್ತಾರೆ. ಕೇಶಿರಾಜನು ದಿನಾಲು ಈ ಸುರಂಗಮಾರ್ಗವಾಗಿಯೇ ಸೇತುಲಿಂಗನ ಬಾವಿಗೆ ಹೋಗಿ ಪೂಜೆಗಾಗಿ ನೀರು ತರುತಿದ್ದನಂತೆ. ಹಾಸಿದ ಬಂಡೆಯ ಕೆಳಗಡೆ ಪೊಳ್ಳಾಗಿರುವಂತೆ ತೋರುತ್ತದೆ. ಇಂತಹ ಸುರಂಗ ಮಾರ್ಗದ ದಾರಿಗಳನ್ನು ನಾವು ನೋಡಿದ ಅನೇಕ ಗುಹೆಗಳಲ್ಲಿ, ಮಂದಿರಗಳಲ್ಲಿ ಜನ ತೋರಿಸುತ್ತಾರೆ. ಅಲ್ಲಿಂದ ದಾರಿ ಕಲ್ಯಾಣಕ್ಕೆ ಹೋಗುತ್ತದೆಂತಲೋ ಅಥವಾ ಸಮೀಪದ ಇನ್ನೊಂದು ಯಾವುದೋ ಮಂದಿರಕ್ಕೆ ಹೋಗುತ್ತದೆಂತಲೋ ಅಥವಾ ಬಾವಿಗೆ ಹೋಗುತ್ತದೆಂತಲೋ ಹೇಳಲಾಗುತ್ತದೆ. ಒಂದೆರಡು ಕಡೆ ಇಂತಹ ಸುರಂಗದ ದಾರಿ ಬಾವಿಗೆ ಹೋಗುವುದನ್ನು ನೋಡಿ ಕೇಳಿ ತಿಳಿಯಬಹುದಾಗಿದೆ. ಬಸವಕಲ್ಯಾಣದಲ್ಲಿರುವ ಬಸವಣ್ಣನವರ ಅರಿವಿನ ಮನೆಯ ಒಂದು ಮೂಲೆಯಲ್ಲಿ ಸುರಂಗ ಒಂದು ಕೆತ್ತಲಾಗಿದ್ದು, ಅದು ಹೊರಗಡೆ ಇರುವ ಬಾವಿಗೆ ಬಂದು ಮುಟ್ಟುವುದನ್ನು ಕಾಣಬಹುದಾಗಿದೆ.

ಸೋಮನಾಥ ಅಥವಾ ಬಸವಣ್ಣ ಇವರಿಗಿಂತ ಈ ಊರಿನ ಜನಗಳ ಅಭಿಮಾನದ ಸಂಕೇತವೆಂದರೆ ಇಂದು ಕೇಶಿರಾಜನ ನಾಮವೇ ಆಗಿದೆ. ಎಲ್ಲರೂ ಅಭಿಮಾನದಿಂದ ಕೇಶಿರಾಜನ ಬಗೆಗೆ ಹೇಳಿಕೊಳ್ಳುತ್ತಾರೆ. ಅವನ ಸಮಾಧಿ ಸ್ಥಳವೆಂದು ಹೇಳುವ, ಈಗ ಪಾಳುಬಿದ್ದಿರುವ ಒಂದು ಸಣ್ಣ ಗುಡಿಯೊಂದನ್ನು ತೋರಿಸುತ್ತಾರೆ. ಶ್ರಾವಣಮಾಸದಲ್ಲಿ ಭಜನೆ ಇತ್ಯಾದಿಗಳನ್ನು ಮಾಡುತ್ತಾರೆ. ಈ ಊರಿನ ಪ್ರತಿಯೊಬ್ಬರ ಬಾಯಿಯಲ್ಲೂ ಕೇಶಿರಾಜ ಇದ್ದಾನೆ. ಜಾತಿಧರ್ಮಗಳನ್ನು ಮೀರಿ ಕೇಶಿರಾಜ ಇಂದು



ಸೋಮನಾಥ ದೇವಾಲಯದ ಹೊರ ನೋಟ



ಸಂಪೂರ್ಣವಾಗಿ ಶಿಥಿಲಾವಸ್ಥೆಯಲಿರುವ ಕೇಶಿರಾಜನ ಮಂದಿರ

ಈ ಕೊಂಡಗುಳಿಯ ಅಭಿಮಾನದ ಸಂಕೇತವಾಗಿದ್ದಾನೆ. ಅಂತಲೇ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲೂ ಕೇಶಿರಾಜನನ್ನು ನೆನೆಪಿಸಿಕೊಳ್ಳುವ ಹಾಡಿನ ನುಡಿಗಳು ನಮಗೆ ಕಂಡು ಬರುತ್ತವೆ.

ದೇಶಕಧಿಕವಾದ ವಾಸುಳ್ಳ ಕೊಂಡಗುಳಿ
ಈಶ ಕೇಶುರಾಜನಾ ಪಾದಕ ಶರಣಂದೆ
ಪಾವನಾದಿತ್ತೆ ಜಲುಮ। ಕೈಯಕೊಂಡೆ ಕಾಯದ ಕಡಬವ
ಕಡಬವ ಮಾಡಿದೇನಾ ಶ್ರೀಗುರುವಿನಡಿಗೆ।

ಹಾಡಿದವರು : ಕೃಷ್ಣಾಬಾಯಿ ನಾಯಕೊಡಿ,

ಹರಹರ ಕೇಸುರಾಜ ತಂದೆ ನಾ ನಿಮ್ಮ ಪಾದ ನಂಬಿ ಬಂದೆ
ಹರಹರ ಬಸವರಾಜ ತಂದೆ ನಾ ನಿಮ್ಮ ಪಾದ ನಂಬಿ ಬಂದೆ।
ಹರಹರ ಅಡವಿಸ್ವಾಮಿ ತಂದೆ ನಾ ನಿಮ್ಮ ಪಾದ ನಂಬಿ ಬಂದೆ।
ಹರಹರ ಪರವುತ ಪಾತಾಳದ ಗಂಗಾ। ಹಂಪಿ ವಿರೂಪಾಕ್ಷಲಿಂಗ।

ಹಾಡಿದವರು : ಕೃಷ್ಣಾಬಾಯಿ ನಾಯಕೊಡಿ,

ಸೋಮನಾಥನ ಮಂದಿರದ ಗರ್ಭಗೃಹದ ಬಾಗಿಲ ಮಂಗಲ ಫಲಕದ ಮೇಲೆ ಗಜಲಕ್ಷ್ಮಿ ಶಿಲ್ಪವಿದೆ. ಇದು ಚಾಲುಕ್ಯರ ಕಾಲದ ವಾಸ್ತು ಶಿಲ್ಪ ಎಂಬುದನ್ನು

ಖಚಿತಪಡಿಸುತ್ತದೆ. ನಾಲ್ಕು ಕಂಬಗಳಿರುವ ಒಂದು ಸುಂದರವಾದ ರಂಗಮಂಟಪವಿದೆ. ಮಂದಿರದ ಆವರಣದಲ್ಲಿ ಒಂದು ಶಾಸನವಿದೆ. ಈ ಮಂದಿರ ತುಂಬಾ ಹಾಳಾಗಿದ್ದು, ಜೀರ್ಣಾವಸ್ಥೆಯಲ್ಲಿದೆ. ಆವರಣದ ತುಂಬ ಶಿಲ್ಪಗಳುಳ್ಳ ಕಲ್ಲುಗಳು ಬಿದ್ದಿವೆ. ಇಲ್ಲಿಯ ಕಲ್ಲುಗಳನ್ನು ಜನ ಬೇರೆಡೆ ಸಾಗಿಸಿದ



ಕೇಶಿರಾಜನ ಮಂದಿರದ ಗರ್ಭಗೃಹದ ಎದುರಿನ ಮಂಟಪದ ನಂದಿ

ಬಗ್ಗೆಯೂ ಊರವರು ಹೇಳುತ್ತಾರೆ. ಶಿವನು ನಂದಿಯ ಮೇಲೆ ಸವಾರನಾಗಿ ಹಿಂದೆ ಪಾರ್ವತಿಯನ್ನು ಕೂಡಿಸಿಕೊಂಡು ಹೊರಟಿರುವ ಸುಂದರ ಶಿಲ್ಪವಿರುವ ಕಲ್ಲುಗಳೂ ಕಾಣಿಸುತ್ತವೆ.

ಸೋಮನಾಥ ದೇವಾಲಯದಿಂದ ಮುಂದೆ ಎರಡು ಮನೆಗಳನ್ನು ದಾಟಿದರೆ ಸಾಕು ಕೇಶಿರಾಜನದೆಂದು ಹೇಳುವ ಒಂದು ತೀರ ಜೀರ್ಣಾವಸ್ಥೆಯಲ್ಲಿರುವ ಮಂದಿರವಿದೆ. ಗರ್ಭಗೃಹದಲ್ಲಿರುವ ಶಿವಲಿಂಗದ ಗೋಳಕಕ್ಕೆ ಕೇಶಿರಾಜನ ಮುಖವಾಡವನ್ನು ಹಾಕಿದ್ದಾರೆ. ಕೇಶಿರಾಜನ ಗುಡಿಯ ಕೆಳಗೆ ೨೦೦ ಎಕರೆ ಜಮೀನು ಇದೆ. ಅದನ್ನು 'ಗುಡಿಪಟ್ಟಿ' ಎಂದೇ ಕರೆಯಲಾಗುತ್ತದೆ. ಈ ಗುಡಿಯ ಸೇವೆಗಾಗಿ ಒಂದೊಂದು ಸೇವೆಯವರಿಗೆ ಒಂದಿಷ್ಟು ಒಂದಿಷ್ಟು ಹೊಲವನ್ನು ಕೊಡಲಾಗಿದ್ದು, ಅವೆಲ್ಲವನ್ನೂ ಆಯಾ ವಿಶೇಷ ಸೇವೆಗಳ ಹೆಸರಿನಿಂದಲೇ ಕರೆಯಲಾಗುತ್ತದೆ. ಹೂವಿನಹೊಲ, ಎಣ್ಣೆಹೊಲ, ಸಂಬಾಳಮಡ್ಡಿ, ಲದ್ದಿಠಿಕಣ ಎಂದೆಲ್ಲ ಕರೆಯುವ ರೂಢಿ ಇಂದಿಗೂ ಉಳಿದುಕೊಂಡು ಬಂದಿದೆ. ಪೂಜೆಗಾಗಿ ಹೂಪತ್ರಿಗಳನ್ನು ಪೂರೈಸುವ ಹೂಗಾರರಿಗೆ ಕೊಡಲಾದ ಹೊಲ ಹೂವಿನಹೊಲ, ದೇವಾಲಯಗಳಲ್ಲಿ ದೀಪಕ್ಕೆಂದು ಎಣ್ಣೆ ಕೊಡುವ ಗಾಣಿಗರಿಗೆ ಕೊಟ್ಟ ಹೊಲವೇ ಎಣ್ಣೆಹೊಲ, ವಿಶೇಷ ಕಾರ್ಯಕ್ರಮಗಳಲ್ಲಿ ಮಂಗಳವಾದ್ಯಗಳನ್ನು ನುಡಿಸುವವರಿಗೆ ಕೊಟ್ಟ ಹೊಲವೇ ಸಂಬಾಳಮಡ್ಡಿ, ಕುದುರೆಯ ಲಾಯದಲ್ಲಿ ಕೆಲಸ ಮಾಡುವವರಿಗೆ ಕೊಟ್ಟದ್ದು ಲದ್ದಿಠಿಕಣ. ಠಿಕಣ ಎನ್ನುವ ಪದವೇ ದತ್ತಿ ಎನ್ನುವ ಅರ್ಥವನ್ನು ಕೊಡುತ್ತದೆ. ಹೀಗಾಗಿ ಮೇಲಿನ ಹೊಲಗಳ ಸಣ್ಣಸಣ್ಣ ಭಾಗಗಳೆಲ್ಲ ಠಿಕಣಗಳೇ ಅಂದರೆ ದತ್ತಿಕೊಟ್ಟ ಹೊಲಗಳೇ ಆಗಿವೆ. ಇವೆಲ್ಲ ಕೇಶಿರಾಜನಿಂದ ಕೊಡಲ್ಪಟ್ಟ ದತ್ತಿ ಹೊಲಗಳೆಂದೆ ಜನ ಇವತ್ತಿಗೂ ಹೇಳುತ್ತಾರೆ. ಆದರೆ ಕೇಶಿರಾಜನಿಗೆ ಇಂದು ಕೇಳುವವರೆ ಇಲ್ಲದಂತಾಗಿದೆ ಎಂಬ ಕೊರಗನ್ನೂ ಊರವರು ತೋಡಿಕೊಳ್ಳುತ್ತಾರೆ.

ಕೊಂಡಗುಳಿ ಊರ ನಡುವೆ ಇರುವ ಒಂದು ಬಯಲು ಸ್ಥಳವನ್ನು 'ಶರಣರ ಸ್ಥಳ' ಎಂದು ತೋರಿಸಿ, ಇದು ಕೇಶಿರಾಜನು ವಾಸವಾಗಿದ್ದ ಸ್ಥಳವೆಂದು ಹೇಳುತ್ತಾರೆ. ಈ ಸ್ಥಳವನ್ನು ಯಾರಾದರೂ ಆಕ್ರಮಿಸಿಕೊಂಡರೆ ಅವರಿಗೆ ಕೇಡುಬರುವುದೆಂಬ ನಂಬುಗೆಯೂ ಈ ಊರಿನಲ್ಲಿದೆ.

ಜಾಡಕೊಂಡಗುಳಿಯಲ್ಲಿ ಶ್ರಾವಣದ ಕಡೆ ಸೋಮವಾರದಂದು ಬಸವಣ್ಣನವರ ಜಾತ್ರೆ ನಡೆಯುತ್ತದೆ. ಅಗ್ನಿ ತುಳಿಯುವ ಸಂಪ್ರದಾಯವಿದೆ. ಈ ಊರಿನ ಜನಗಳಿಗೆ ಇತ್ತೀಚಿನವರೆಗೆ ಸೋಮನಾಥ ದೇವಾಲಯದ ಹೆಸರು ಪರಿಚಯವಿರಲಿಲ್ಲವೆಂದು ತಿಳಿದುಬರುತ್ತದೆ. ಇತ್ತೀಚೆಗೆ ಈ ಮಂದಿರ ಸೋಮನಾಥ ಮಂದಿರವೆಂದೂ, ಜಾತ್ರೆ ಸಂಪ್ರದಾಯವಿರುವುದು ಸೋಮನಾಥನಿಗೆ ಸಂಬಂಧಿಸಿದ್ದೆಂದೂ ಗೊತ್ತಾಗಿದೆ ಎಂದು ಹೇಳುತ್ತಾರೆ. ಹೀಗಾಗಿ ಈ ಮಂದಿರವನ್ನು ಜನ ಈಗಲೂ ಬಸವಣ್ಣಪ್ಪನ ಗುಡಿ ಎಂದೇ ಕರೆಯುತ್ತಾರೆ.

ಶ್ರಾವಣ ಮಾಸದಲ್ಲಿ ಕೇಶಿರಾಜನ ಮಂದಿರದಲ್ಲಿ ಭಜನೆ ಮಾಡುತ್ತಾರೆ. ನಡುವಿನ ಸೋಮವಾರ ಕೇಶಿರಾಜನ ಖಾಂಡ ಎಂದೇ ಮಾಡುತ್ತಾರೆ. ಜೋಳದ ಕಡಬು, ಹಿಂಡಿಪಲ್ಲೆ, ಪುಂಡಿಪಲ್ಲೆ, ಭರತ, ಅನ್ನ, ಸಾರು ಇಲ್ಲಿ ಮಾಡುವ ವಿಶೇಷ ಅಡಿಗೆ. ಊರಜನ ತಮ್ಮ ಶಕ್ತ್ಯಾನುಸಾರ ಕಾಳುಕಡಿ ಹಿಟ್ಟುಬ್ಯಾಳಿ ಕೊಡುತ್ತಾರೆ. ಅದನ್ನೇ 'ಕೇಶಿಖಾಂಡ' ಎಂದು ಶ್ರಾವಣದ ನಡುವಿನ ಸೋಮವಾರ ಮಾಡಲಾಗುತ್ತದೆ. ಖಾಂಡ ಮಾಡುವ ದಿನ ನಂದಿಕೋಲ ಮೆರವಣಿಗೆ ವಿಶೇಷವಾಗಿರುತ್ತದೆ. ಅಂದು ಕೇಶಿರಾಜನ ಮಂದಿರದಿಂದ ಹೊರಟ ನಂದಿಕೋಲ ಮೆರವಣಿಗೆ ಪತ್ರಿಹೊಲಕ್ಕೆ ಹೋಗಿಬರುತ್ತದೆ.

ಮಾಹಿತಿ : ಕಲ್ಲಯ್ಯಸ್ವಾಮಿ, ಗೌಡಪ್ಪಗೌಡ

***



ಕೇಶಿರಾಜ ಮಂದಿರದ ಗರ್ಭಗೃಹದ ಶಿವಲಿಂಗ

## ಶಹಪೂರ ತಾಲೂಕು :

### ಶಹಪೂರ :
### ಶೀಲವಂತನ ಗವಿ–ಮಠ

ಅಂಗದಲಿ ಲಿಂಗವನು ಲಿಂಗಿಗಳೆ ಧರಿಸಿದರು
ಬಂದು ಮಧುವರಸ ಶೀಲವಂತಗೆ । ಮಗಳಿತ್ತು
ಹಂದರದ ನಡುವೆ ಬೀಗಾದ



'ಶೀಲವಂತೇಶ್ವರ ಮಡ್ಡಿಯ ಮೇಲಿರುವ ಶೀಲವಂತೇಶ್ವರ ಗವಿ–ಗುಡಿ




ಶೀಲವಂತೇಶ್ವರ ಗವಿಯ ಗರ್ಭಗೃಹ

ಯಾದಗೀರ ಜಿಲ್ಲೆಯ ಶಹಪೂರ ಈಗ ಗಮನಾರ್ಹ ಪಟ್ಟಣವಾಗಿ ಬೆಳೆಯುತ್ತಿದೆ. ಈ ಪಟ್ಟಣ ಹುಟ್ಟಿಕೊಂಡಿರುವುದೇ ಬೆಟ್ಟದ ಹೊಟ್ಟೆಯಲ್ಲಿ. ಈ ಬೆಟ್ಟ ಸುಮಾರು ೧೧ ಕಿ.ಮೀ. ದೀರ್ಘವಾಗಿದೆ ಮತ್ತು ನಾಲ್ಕೈದು ಕಿ.ಮೀ. ಅಗಲವಾಗಿದೆ. ಗ್ರಾನೈಟ್ ಕಲ್ಲಿನ ದೊಡ್ಡದೊಡ್ಡ ಬಂಡೆಗಳಿಂದ ಆವೃತವಾಗಿದೆ. ಶಹಪುರ ಪಟ್ಟಣವು ಗುಡ್ಡದ ದಕ್ಷಿಣದ ತುದಿಯಲ್ಲಿ ಇದೆ. ಗುಡ್ಡದಲ್ಲಿ ನೈಸರ್ಗಿಕವಾಗಿ ಮಲಗಿದ ಬುದ್ಧ ಕಾಣುವುದು ಒಂದು ದೊಡ್ಡ ಆಕರ್ಷಣೆ. ಈ ಗುಡ್ಡ ಅನೇಕ ಸಂತರ ಬೀಡಾಗಿರಬಹುದೆಂಬುದಕ್ಕೆ ಅನೇಕ ಪಳೆಯುಳಿಕೆಗಳು ಅಲ್ಲಿವೆ. ದುರ್ಗಮವಾದ ಈ ಗುಡ್ಡವನ್ನು ಹತ್ತುವುದು, ಗುಡ್ಡದಲ್ಲಿ ಅಡ್ಡಾಡುವುದು ತುಂಬ ದುಸ್ತರವಾಗಿದೆ.

ಶಹಪೂರ ಪಟ್ಟಣಕ್ಕೆ ಹತ್ತಿಕೊಂಡಿರುವ ಗುಡ್ಡದ ಒಂದು ಮಡ್ಡಿಯ ಮೇಲೆ ಕಲ್ಲುಬಂಡೆಗಳಿಂದ ನಿರ್ಮಿತವಾದ ಒಂದು ನೈಸರ್ಗಿಕ ಗವಿ ಇದೆ. ಅದು ಶೀಲವಂತನ ಗವಿ ಎಂದು ಪ್ರಸಿದ್ಧವಾಗಿದೆ. ಆದುದರಿಂದ ಗುಡ್ಡದ ಈ ಮಡ್ಡಿಯನ್ನು **'ಶೀಲವಂತನ ಮಡ್ಡಿ, ಶೀಲವಂತನ ಬೆಟ್ಟ'** ಎಂದೇ ಜನ ಇವತ್ತಿಗೂ ಕರೆಯುತ್ತಾರೆ. ಅಲ್ಲಿರುವ ಗವಿಯನ್ನು ಈಗ ಸುಮಾರು ೨೦೦-೩೦೦ ವರ್ಷಗಳ ಹಿಂದೆ, ಅಭಿವೃದ್ಧಿ ಪಡಿಸಲಾಗಿದೆ. ಗವಿಯನ್ನು ಒಂದು ಗರ್ಭಗೃಹದಂತೆ ಬಳಸಿಕೊಂಡು, ಗವಿಯ ಮುಂದೆ ದೊಡ್ಡ ಮಂಟಪ ಬರುವಂತೆ, ಕಟ್ಟಡವನ್ನು ನಿರ್ಮಿಸಲಾಗಿದೆ.




ಶೀಲವಂತೇಶ್ವರ ಮಠ

ಏರಲು ಅಸಾಧ್ಯವೆನ್ನುವಂತಿರುವ ತೀರ ಕಡಿದಾದ ಈ ಮಡ್ಡಿಯ ಭಾಗವನ್ನು ಹತ್ತಿ ಹೋಗಲು ಅನುಕೂಲವಾಗುವಂತೆ ೧೫೦ ಮೆಟ್ಟಲುಗಳನ್ನು ನಿರ್ಮಿಸಲಾಗಿದೆ. ಹೀಗಾಗಿ ಶೀಲವಂತನ ಗವಿಗೆ ಹೋಗಿಬರಲು ಅನುಕೂಲವಾಗಿದೆ. ಶಹಪುರದ ಜನ ನಿರಂತರವಾಗಿ ಈ ಗವಿಗೆ ಹೋಗಿ ಬರುವ ರೂಢಿಯನ್ನು ಇಟ್ಟುಕೊಂಡಿದ್ದಾರೆ. ನಗರದಲ್ಲಿ ಈಗಲೂ ಕೆಲ ಕುಟುಂಬಗಳು ಈ ಗವಿಯ ಬಗೆಗೆ ಭಕ್ತಿಭಾವವನ್ನು ಇಟ್ಟುಕೊಂಡು ನಡೆದುಕೊಳ್ಳುತ್ತಾರೆ.

ಈ ಗವಿ ಇರುವ ಗುಡ್ಡದ ಮಡ್ಡಿಯ ಕೆಳಗೆ ಸ್ವಲ್ಪದೂರದಲ್ಲಿ ಒಂದು ಮಠವಿದೆ. ಈ ಮಠ **'ಶೀಲವಂತನ ಮಠ'** ಆಗಿದೆ. ಸಣ್ಣದಾಗಿದ್ದ ಮಠವನ್ನು ಈಗ ವಿಸ್ತರಿಸಿ ಕಟ್ಟಲಾಗಿದೆ. ಒಳಗಡೆ ಶೀಲವಂತೇಶ್ವರ ಸಂಸ್ಕೃತ ಪಾಠಶಾಲೆ ಒಂದನ್ನು ನಡೆಸಲಾಗುತ್ತಿದೆ. ಈ ಮಠಕ್ಕೆ ಫಕೀರೇಶ ಎಂಬ ಸಂತನೊಬ್ಬ ಬಂದು ನೆಲೆಸಿದ್ದರಿಂದ ಫಕಿರೇಶ ಮಠವೆಂದು ಕರೆಯುವ ರೂಢಿಯೂ ಬಿದ್ದಿದೆ. ಫಕೀರೇಶ ತೀರ ಇತ್ತೀಚಿಗೆ, ಬಹಳವೆಂದರೆ ಐವತ್ತು ಅರವತ್ತು ವರ್ಷಗಳ ಹಿಂದೆ ಬದುಕಿದ್ದ ಒಬ್ಬ ಸಂತ.

ಈ ಮಠದ ಸಂಪ್ರದಾಯದಲ್ಲಿ ಅಂಬಲಿ ಪ್ರಸಾದ ಕಾರ್ಯಕ್ರಮವೊಂದನ್ನು ಮೊದಲಿನಿಂದಲೂ ಮಾಡುತ್ತ ಬರಲಾಗಿದೆ. ಹರಳಯ್ಯನವರು ಅಂಬಲಿಗೆ ಪ್ರಸಿದ್ಧರಾದ ಶರಣರು. ಶೀಲವಂತನು ಅವರ ಮಗನಾಗಿರುವುದರಿಂದ ಆ ಅಂಬಲಿಯ ನೇಮ

ಇವತ್ತಿಗೂ ಉಳಿದುಕೊಂಡು ಬಂದಿರುವುದು ಆಶ್ಚರ್ಯ. ಯುಗಾದಿ ಅಮವಾಸ್ಯೆಯ ಹಿಂದಿನ ದಿನ ರಾತ್ರಿ ಈ ಕಾರ್ಯಕ್ರಮ ನಡೆಯುತ್ತದೆ. ಅಂಬಲಿಯನ್ನು ಮಾಡಿ, ಮಠದ ಗದ್ದಿಗೆಗೆ ಪೂಜೆ ಸಲ್ಲಿಸಿ, ಅಂದು ಊರ ಭಕ್ತರಿಗೆಲ್ಲ ಅಂಬಲಿಯನ್ನು ಬಡಿಸುವ ಕಾರ್ಯಕ್ರಮ ಮಾಡಲಾಗುತ್ತದೆ.

ಯುಗಾದಿಯ ದಿನ **'ಗಿರಿ ಸುತ್ತುವ'** ಒಂದು ವಿಶೇಷ ಕಾರ್ಯಕ್ರಮವೂ ಈ ಶೀಲವಂತೇಶ್ವರ ಮಠ ಮಾಡುತ್ತ ಬಂದಿದೆ. ಶಹಪುರದ ಗುಡ್ಡವನ್ನು ಪೂರ್ತಿಯಾಗಿ ಸುತ್ತಿಬರುವ ಕಾರ್ಯಕ್ರಮವಿದು. ಸುಮಾರು ೩೫-೪೦ ಕಿ.ಮೀ. ನಷ್ಟು ದಾರಿಯಾಗುತ್ತದೆ. ಯುಗಾದಿ ಅಮವಾಸೆಯ ದಿನ ಶ್ರೀಶೈಲ ಮಲ್ಲಿಕಾರ್ಜುನನ ಜಾತ್ರೆ ಪ್ರಾರಂಭವಾಗುವುದರಿಂದ ಶಹಪುರದಲ್ಲಿಯ ಗಿರಿ ಸುತ್ತುವ ಕಾರ್ಯಕ್ರಮ ಶ್ರೀಶೈಲಕ್ಕೆ ಹೋಗಿಬಂದ ಪುಣ್ಯಕ್ಕೆ ಸಮಾನವಾದುದು ಎಂಬ ನಂಬುಗೆಯಿಂದ ಈ ಕಾರ್ಯಕ್ರಮ ಮಾಡಲಾಗುತ್ತದೆ ಎನ್ನುತ್ತಾರೆ.


ಶೀಲವಂತೇಶ್ವರ ಗವಿ ಇರುವ ಮಡ್ಡಿ, ಈ ಮಡ್ಡಿಗೆ ಹತ್ತಿಕೊಂಡಿರುವ ವಿಸ್ತಾರವಾದ ಬೆಟ್ಟದ ಮೇಲೆ ನಾನಾ ಸಂತರು ಆಗಿ ಹೋದಬಗ್ಗೆ ಕಥೆಗಳಿವೆ. ಹಾಗೆಯೇ ಒಂದಿಷ್ಟು ಸ್ಮಾರಕಗಳೂ ಇವೆ. ಶೀಲವಂತೇಶ್ವರ ಗುಡಿ ಇರುವ ಬೆಟ್ಟದ ಭಾಗದ





ಶೀಲವಂತೇಶ್ವರ ಮಠದ ಗರ್ಭಗೃಹ

ಮುಂದೆ ಮಾವಿನ ಕೆರೆ, ಹಿಂದೆ ನಾಗರ ಕೆರೆಗಳಿವೆ. ವಿಸ್ತಾರವಾದ ಗುಡ್ಡದ ಮೇಲೆ ಮಂದಾಕಿನಿ ಸರೋವರ, ತಾವರೆ ಕೊಳ, ಮೇಲಗಿರಿ ಪರ್ವತ, ಅಮರಕಲ್ಯಾಣ, ಅಲ್ಲಮಪ್ರಭು ದೇವಸ್ಥಾನ, ನಿರಹಂಕಾರ, ನೀಲಮ್ಮ, ಸುಜ್ಞಾನಿ ಇವರಿಗೆ ಸಂಬಂಧಿಸಿದ ಸ್ಮಾರಕಗಳು, ಬಾವಿ, ನೈಸರ್ಗಿಕ ಗವಿಗಳಿವೆ. ಹೀಗಾಗಿ ಶಹಪುರದ ಬೆಟ್ಟ ಒಂದು ವಿಶೇಷತೆಯನ್ನು ಹೊಂದಿದೆ. ಇಂತಹ ಬೆಟ್ಟದ ದಕ್ಷಿಣದ ತುದಿಯಲ್ಲಿ ಶೀಲವಂತೇಶ್ವರ ಗವಿ ಇರುವುದು ಗಮನಾರ್ಹ ಸಂಗತಿಯಾಗಿದೆ. ಮತ್ತೆ ಮಡ್ಡಿಯ ಕೆಳಗಡೆ ಊರಿನಲ್ಲಿ ಒಂದು ಮಠವೂ ಇರುವುದನ್ನು ಗಮನಿಸಿದರೆ, ಶೀಲವಂತನು ಗವಿಯನ್ನು ಪೂಜೆ ಧ್ಯಾನಕ್ಕಾಗಿ, ಮಠವನ್ನು ವಾಸಿಸಲು ಬಳಸಿಕೊಂಡಿರಬೇಕೆನಿಸುತ್ತದೆ.

ಈ ಶೀಲವಂತ ಇಲ್ಲಿ ಹೇಗೆ ಬಂದ ಎಂಬುದೊಂದು ಕುತೂಹಲದ ಸಂಗತಿಯಾಗಿದೆ. ಕಲ್ಯಾಣದಲ್ಲಿ ಕ್ರಾಂತಿ ಪ್ರಾರಂಭವಾದ ನಂತರ ಶರಣರೆಲ್ಲ ಕಲ್ಯಾಣ ಬಿಟ್ಟುಹೊರಡುವಾಗ ಶರಣರಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಅವರೆಲ್ಲ



ಶೀಲವಂತನ ಗವಿ ಇರುವ ಮಡ್ಡಿಯ ತುದಿಯಲ್ಲಿರುವ ಬಸವಣ್ಣನ ಗುಡಿ



ಬಸವಣ್ಣನ ಗುಡಿಯ ಗರ್ಭಗೃಹದಲ್ಲಿರುವ ನಂದಿಯ ವಿಗ್ರಹ

ಜೊತೆಗೆ ಕೊಂಡೊಯ್ದಿದ್ದಾರೆ. ಹರಳಯ್ಯ-ಕಲ್ಯಾಣಮ್ಮ ಅವರು ಬಸವಣ್ಣನವರಿಗಾಗಿ ಮಾಡಿದ ಪಾದುಕೆಗಳು ಸೇಡಂ ಪಟ್ಟಣಕ್ಕೆ ಸಮೀಪವಾಗಿರುವ, ಮಾನ್ಯಖೇಡ ಪಟ್ಟಣದ ದಕ್ಷಿಣದ ಮಗ್ಗುಲಿಗೆ, ಕೇವಲ ನಾಲ್ಕು ಕಿ.ಮೀ. ದೂರದಲ್ಲಿರುವ **ಬಿಜನಳ್ಳಿ** ಎಂಬ ಗ್ರಾಮಕ್ಕೆ ಬಂದು ಮುಟ್ಟಿವೆ. ಈ ಪಾದುಕೆಗಳನ್ನು ಗೌಪ್ಯವಾಗಿ ಹೊತ್ತು ತಂದವರು ಇಬ್ಬರಿದ್ದರೆಂದೂ, ಅವರಲ್ಲಿ ಒಬ್ಬರು ಮಡಿಬಸವಣ್ಣನೆಂದೂ ಆ ಊರ ಹೊರಗೆ ಅಡವಿಯಲ್ಲಿ ಮಾನ್ಯಖೇಡದೆಡೆಗೆ ಕಾಗಿಣಾ ತೊರೆಗೆ ಹತ್ತಿರವಾಗಿ ಇರುವ ಮಡಿಬಸವಣ್ಣ ಎಂಬ ಶರಣನ ಸ್ಮಾರಕ ತೋರಿಸಿ ಬಿಜನಳ್ಳಿಯ ಜನ ಹೇಳುತ್ತಾರೆ. ಒಬ್ಬ ಶರಣ ಮಡಿಬಸವಣ್ಣನಾದರೆ ಇನ್ನೊಬ್ಬರು ಯಾರು? ಮತ್ತು ಅವರು ಎಲ್ಲಿ ಹೋದರು? ಎಂಬ ಪ್ರಶ್ನೆಗಳು ಉಳಿದುಕೊಳ್ಳುತ್ತವೆ.

ಬಿಜನಳ್ಳಿಯಲ್ಲಿ ಪ್ರಚಲಿತದಲ್ಲಿರುವ ಇನ್ನೊಂದು ಸಂಗತಿ ಎಂದರೆ, ಪಾದರಕ್ಷೆಗಳನ್ನು ತಂದವರು, ಅವುಗಳನ್ನು ಅಲ್ಲಿಯೇ ಹೊಲ ಊಳುತ್ತಿರುವ ಒಕ್ಕಲಿಗನ ಕೈಗೆ ಅವುಗಳನ್ನು ಒಪ್ಪಿಸಿ, ಇವನ್ನು ಮನೆಗೆ ಹೋಗಿ ತೆರೆದು ನೋಡಬೇಕೆಂದೂ ಮನೆ ತಲುಪುವರೆಗೆ ತಿರುಗಿ ನೋಡಬಾರದೆಂದೂ ಹೇಳಿದರಂತೆ. ಪಾದರಕ್ಷೆಗಳನ್ನು ಪಡೆದು ಸ್ವಲ್ಪ ಮುಂದಕ್ಕೆ ಹೋದ ಆ ರೈತ ಕುತೂಹಲದಿಂದ ತಿರುಗಿ ನೋಡಿದನಂತೆ. ಆಗ ಹಿಂದೆ ನಿಂತವರು ಮಾಯವಾಗಿದ್ದರಂತೆ. ಅವರು ನಿಂತ ಸ್ಥಳದಲ್ಲಿ ಆ ರೈತ ಒಂದು ಕಲ್ಲನ್ನು ನೆಟ್ಟು ಬಂದನೆಂದೂ, ಆ ಸ್ಥಳದಲ್ಲಿಯೇ ಈಗಿರುವ ಮಡಿಬಸವಣ್ಣನ ಸ್ಮಾರಕ ಇದೆ ಎಂದೂ ಹೇಳುತ್ತಾರೆ.




ಶೀಲವಂತೇಶ್ವರ ಮಠದ ಗರ್ಭಗೃಹದ ಎದುರಿನ ಮಂಟಪ

ಹರಳಯ್ಯ-ಕಲ್ಯಾಣಮ್ಮ ಅವರು ಬಸವಣ್ಣನವರಿಗಾಗಿ ಮಾಡಿದ ಪಾದರಕ್ಷೆಗಳನ್ನು ಮೆಡದೆ, ಬಸವಣ್ಣನವರು ಆ ಪಾದುಕೆಗಳನ್ನು ತಲೆಯ ಮೇಲೆ ಇಟ್ಟುಕೊಂಡು, ಅವುಗಳನ್ನು ಹರಳಯ್ಯನವರಿಗೆ ಹಿಂತಿರುಗಿ ಕೊಟ್ಟರೆಂದು ಕಾವ್ಯಗಳು ಹೇಳುತ್ತವೆ. ಅಂದರೆ ಪಾದುಕೆಗಳು ಉಳಿದದ್ದು ಹರಳಯ್ಯನವರ ಮನೆಯಲ್ಲಿಯೇ. ಹರಳಯ್ಯನವರಿಗೆ ಶಿಕ್ಷೆಯಾದ ನಂತರ, ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿ, ಶರಣರೆಲ್ಲ ಕಲ್ಯಾಣ ತೊರೆದು ಹೋಗಲು ಪ್ರಾರಂಭಿಸಿದರು. ಒಂದು ಮನೆಯ ಮಹತ್ವದ ವಸ್ತುಗಳನ್ನು ಯಾವುದೇ ಸಂದರ್ಭದಲ್ಲಿ ಹೊರಸಾಗಿಸಲು ಸಾಧ್ಯವಾಗುವುದು ಆ ಮನೆಯರಿಗೆ ಮಾತ್ರ. ತಾಯಿ ಕಲ್ಯಾಣಮ್ಮ ಅಕ್ಕನಾಗಮ್ಮನವರ ಜೊತೆ ಹೊರಟುಹೋಗಿದ್ದಾರೆ. ಈಗ ಉಳಿದಿರುವವನು ಶೀಲವಂತನೊಬ್ಬನೇ. ಹೀಗಾಗಿ ಬಹುಶಃ ಶೀಲವಂತನೇ ಆ ಪಾದುಕೆಗಳ ಜೊತೆ ಹೊರಗಾಗಿರುವ ಸಾದ್ಯತೆ ಇದೆ. ಮಡಿಬಸವಣ್ಣ ಎಂಬ ಹೆಸರಿನ ಅನುಯಾಯಿ ಶರಣನೊಬ್ಬ ಜೊತೆಗೂಡಿದಂತೆ ತೋರುತ್ತದೆ. ಅಥವಾ ಇನ್ನೂ ಕೆಲ ಶರಣರೂ ಜೊತೆಗೆ ಹೊರಟಿರಲೂ ಬಹುದು.

ಸೇಡಂ ತಾಲೂಕಿನ, ಮಳಖೇಡ ಮಗ್ಗುಲೂರು ಬಿಜನಳ್ಳಿ. ಕಾಗಿಣಾ ನದಿಯನ್ನು ದಾಟಿ, ಪೂರ್ವದಿಕ್ಕಿನ ದಡದ ಮೇಲಿರುವ ಬಿಜನಳ್ಳಿ ಗ್ರಾಮದ ಜಮೀನಿಗೆ ಬಂದು ಮುಟ್ಟಿದ್ದಾರೆ. ಹೀಗೆ ಈ ದಡ ಸೇರಿ ಈಚೆಗೆ ಬಂದು, ಅಲ್ಲಿ ಒಕ್ಕನಿಗನೊಬ್ಬನಿಗೆ

ಪಾದುಕೆಗಳನ್ನು ಮುಟ್ಟಿಸುವಲ್ಲಿ, ಬಹುಶಃ ಪಾದರಕ್ಷೆಗಳನ್ನು ಹೊತ್ತ ಶೀಲವಂತ (ಪಾದರಕ್ಷೆಗಳ ಮಹಿಮೆಯ ಹಿನ್ನೆಲೆಯಲ್ಲಿ ಬೇರೆಯವರು ಆ ಪಾದರಕ್ಷೆಗಳನ್ನು ಹೊತ್ತಿರುವ ಸಾಧ್ಯತೆ ಕಡಿಮೆ) ಮತ್ತು ಮಡಿಬಸವಣ್ಣ ಇಬ್ಬರು ಮಾತ್ರ ಕಾಣಿಸಿಕೊಂಡಿರಬೇಕೆನಿಸುತ್ತದೆ. ಏಕೆಂದರೆ ಬಿಜನಳ್ಳಿಯಲ್ಲಿ ಉಳಿದಿರುವ ಮಾಹಿತಿಯ ಪ್ರಕಾರ ಪಾದರಕ್ಷೆಗಳನ್ನು ತಂದವರು ಇಬ್ಬರಿದ್ದರು ಎಂಬ ಸಂಗತಿ ಇದೆ.

ಒಕ್ಕಲಿಗನಿಗೆ ಪಾದರಕ್ಷೆಗಳನ್ನು ಒಪ್ಪಿಸಿ, ಅವುಗಳನ್ನು ಕಾಪಾಡುವ ಜವಾಬ್ದಾರಿಯನ್ನು ವಹಿಸಿ, ಅಲ್ಲಿಂದ ಮಾಯವಾಗಿದ್ದಾರೆ (ಹೊರಟು ಹೋಗಿದ್ದಾರೆ). ಬಹುಶಃ ಬಿಜ್ಜಳನ ದಂಡು ಬೆನ್ನುಹತ್ತಿ ಬರುತ್ತಿರುವದರಿಂದ ಶೀಲವಂತನನ್ನು (ಜೊತೆಗೆ ಉಳಿದ ಶರಣರನ್ನು) ಮಡಿಬಸವಣ್ಣ ಮುಂದೆ ಕಳಿಸಿ, ತಾನು ಮಾತ್ರ ಪಾದರಕ್ಷೆಗಳನ್ನು ಬಿಟ್ಟ ಬಿಜನಳ್ಳಿಯ ಮಗ್ಗಲೂರು ಬೀರನಳ್ಳಿಗೆ ಬಂದಂತೆ ತೋರುತ್ತದೆ.

ಹರಳಯ್ಯನವರು ಸಗರ ನಾಡಿಗೆ ಸಂಬಂಧಿಸಿದವರು ಎಂಬ ಪ್ರತೀತಿ ಇದೆ. ಈ ಬಗೆಗೆ ಶೋಧ ನಡೆಯಬೇಕಾಗಿದೆ. ಇದೇ ಕಾರಣವೇ ಇರಬೇಕು, ಶೀಲವಂತ ಶಹಪುರಕ್ಕೆ ಬಂದು ತಲುಪಿದ್ದಾನೆ. ಸರಳವಾಗಿ ಏರಲು ಬರದ ಮಡ್ಡಿಯನ್ನು ಹತ್ತಿ ಅಲ್ಲಿ ಇರುವ ನೈಸರ್ಗಿಕ ಗವಿಯೊಂದರಲ್ಲಿ ಉಳಿದಿದ್ದಾನೆ. ಬಹುಶಃ ಎಲ್ಲವೂ ಶಾಂತವಾದ ನಂತರ ಮಡ್ಡಿಯ ಕೆಳಗೆ ಬಂದು ಉಳಿದಿರಬೇಕು. ಆ ಸ್ಥಳವೇ ಶೀಲವಂತನ ಮಠವಾಗಿರುವ ಸಾಧ್ಯತೆ ಇದೆ. ಮಡ್ಡಿಯ ಮೇಲೆ ಗವಿ, ಕೆಳಗೆ ಮಠ ಇರುವುದನ್ನು ಗಮನಿಸಿದರೆ, ಶೀಲವಂತ ಕಲ್ಯಾಣ ಕ್ರಾಂತಿಯ ನಂತರ ಶಹಪುರದಲ್ಲಿ ಉಳಿದಿರುವ ಸಾಧ್ಯತೆ ಇದೆ. ಈ ಬಗೆಗೆ ಹೆಚ್ಚಿನ ಶೋಧ ನಡೆಯುವುದು ಯೋಗ್ಯವೆನಿಸುತ್ತದೆ.

*

ಮಾಹಿತಿ : ಮನಿಪ್ರ ಗುರುಪಾದ ಮಹಾಸ್ವಾಮಿಗಳು ಶೀಲವಂತೇಶ್ವರ ಮಠ,
ಚಂದ್ರಕಾಂತ ಕರದಳ್ಳಿ, ಶರಣು ಗದ್ದುಗೆ, ಶಿವಣ್ಣ ಇಜೇರಿ.

ನೋಡಿ : ಬಿಜನಳ್ಳಿ, ತಾ. ಸೇಡಂ, ಜಿ. ಕಲಬುರ್ಗಿ

***

## ಸುರಪುರ ತಾಲೂಕು :

### ೧. ಕೆಂಭಾವಿ :
### ಭೋಗಣ್ಣನ ಗುಡಿ

ಕೆಂಭಾವಿಯಂಥ ಊರಿಲ್ಲ ನಿಂಬೆಣ್ಣನಂಥ ದೇವರಿಲ್ಲ
ಎಂಟಮೂಲಿ ಬಾವಿಯಿಲ್ಲ । ಭೋಗಣ್ಣ
ಒಂಟ ಗೋರಿ ಕಲ್ಲಿಲ್ಲ

ಕೆಂಭಾವಿ ಜನ ಹೀಗೆ ತಮ್ಮೂರಿನ ವಿಶೇಷತೆಯನ್ನು ಹಾಡುತ್ತಾ ಬಂದಿದ್ದಾರೆ. ಭೋಗೇಶ್ವರ ದೇವಾಲಯದ ಪಶ್ಚಿಮಕ್ಕೆ ಒಂದು ಕೆಂಪು ನೀರಿನಬಾವಿ ಇತ್ತಂತೆ. ‘ಕೆಂಪಾದ ಬಾವಿ’>ಕೆಂಬಾವಿ>ಕೆಂಭಾವಿ ಆಗಿರಬೇಕೆಂದು ಹೇಳಲಾಗುತ್ತದೆ. ಭೋಗಣ್ಣನ ಗುಡಿಯ ಸಮೀಪದಲ್ಲಿ **‘ಕೆಂಗೇರಿ’** ಎಂಬ ಒಂದು ಕೆರೆಯೂ ಇದೆ. ಅದು **‘ಕೆಂಪಾದ ಕೆರೆ’** ಇರಬೆಕು. ಜೊತೆಗೆ ಭೋಗೇಶ್ವರ ಗುಡಿಯ ಸುತ್ತಲೂ ದೊಡ್ಡ ನೀರಿನ ಸಂಗ್ರವಿದ್ದು, ಇದನ್ನು ಕೆಂಭಾವಿಯ ಜನ ಬಾವಿ ಎಂದೇ ಕರೆಯುತ್ತಾರೆ. ಈ ಬಾವಿ ಸುಮಾರು ಐದುನೂರು ಅಡಿ ಚೌಕಾಕಾರದಲ್ಲಿದ್ದು, ಗುಡಿಗೆ ಹೋಗಿಬರಲು ದಕ್ಷಿಣ ದಿಕ್ಕಿನಲ್ಲಿ ಒಂದು ಸೇತುವೆ ನಿರ್ಮಿಸಿದ್ದಾರೆ. ಸೇತುವೆಯ ಕೆಳಗೆ ಏಳು ಅಂತಸ್ತಿನ ಕಲ್ಲಿನ ಮಂಟಪವಿದೆ ಎನ್ನುತ್ತಾರೆ. ಬಾವಿಯಲ್ಲಿ ಕಲ್ಲಿನ ಕಂಬಗಳ ಮಂಟಪ ಇರುವುದರಿಂದ ಕಂಬದ ಬಾವಿ>ಕೆಂಭಾವಿ ಆಗಿರಲೂ ಬಹುದಾಗಿದೆ ಎನ್ನುತ್ತಾರೆ. ಇದನ್ನು ಜಿನಪುರ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರೆಂದು ಹೇಳಲಾಗುತ್ತದೆ. ಚೆಂದಿಮರಸ ಈ ಊರನ್ನಾಳುವ ದೊರೆ ಆಗಿದ್ದನು. ಇಲ್ಲಿ ಭೋಗೇಶ್ವರ ಗುಡಿ ಇರುವಂತೆ ಚಂದಿಮರಸನ ವಾಡೆ ಎಂದು ಹೇಳುವ ಒಂದು ಮನೆಯೂ ಇದೆ.

ಹನ್ನೆರಡನೇ ಶತಮಾನದಲ್ಲಿ ಕೆಂಭಾವಿ ಅಗ್ರಹಾರವಾಗಿತ್ತು. ಇಲ್ಲಿ ಶಿವೋಪಾಸಕ ರಿರುವಂತೆ, ವಿಷ್ಣು ಉಪಾಸಕರೂ ಇದ್ದರು. ಭೋಗಣ್ಣ ಹಾಗೂ ಚಂದಿಮರಸ ಇಬ್ಬರೂ ವೈದಿಕರೆ. ಭೋಗಣ್ಣ ಶಿವೋಪಾಸಕನಾದರೆ ಚಂದಿಮರಸ ವಿಷ್ಣು ಉಪಾಸಕನಾಗಿದ್ದ. ಆದರೆ ಈ ಊರಲ್ಲಿ ಶಿವಲಿಂಗ ಗುಡಿಗಳೇ ಹೆಚ್ಚಾಗಿವೆ.

ಭೋಗಣ್ಣ ವೈದಿಕ ಅಧ್ಯಯನವನ್ನು ಮಾಡಿದ್ದರೂ ಅವನ ಮನಸ್ಸೆಲ್ಲ ಕೇಂದ್ರೀಕೃತ ಆದದ್ದು ಲಿಂಗದಲ್ಲಿ. ಲಿಂಗದ ಮೇಲೆ ಅಪಾರವಾದ ನಿಷ್ಠೆ ನಂಬಿಗೆಯುಳ್ಳ ಶರಣನೀತ. ಭೋಗಣ್ಣ ಲಿಂಗಾಭಿಮಾನಿ, ಲಿಂಗಭಕ್ತ ಎಂದು ತೋರಿಸುವುದಕ್ಕೆಂದೆ



ಭೋಗಣ್ಣನ ಗುಡಿ, ಸುತ್ತಲಿನ ಕೆರೆ ಹೂಳೆತ್ತಿದಾಗ ಒಳಗಡೆ ಹತ್ತಿದ
ಮಂಟಪದ ಒಂದು ಅಂತಸ್ತನ್ನು ಕಾಣಬಹುದು

ಘಟನೆಯೊಂದು ನಡೆಯುತ್ತದೆ. ದಿನವೂ ಲಿಂಗಕ್ಕೆ ಅಕ್ಷತೆ ಧರಿಸುವ ನೇಮವಿಡಿದ ಈ ಭಕ್ತನ ಲಿಂಗನಿಷ್ಠೆ ಪರೀಕ್ಷಿಸುವ ಸಮಯ. ಒಬ್ಬ ಶೂದ್ರನು ಸತ್ತ ಕರುವೊಂದನ್ನು ಭೋಗಣ್ಣನಲ್ಲಿಗೆ ಹೊತ್ತು ತಂದು ತನಗೆ ಆ ಕರುವಿನ ಅಡಿಗೆ ಆಗಬೇಕೆಂದು ಪ್ರಾರ್ಥಿಸಿಕೊಂಡನಂತೆ. ಆದರೆ ಆ ಶೂದ್ರ ಅಷ್ಟಾವರಣ ಸಂಪನ್ನನಾಗಿದ್ದ. ಹಣೆಯ ಮೇಲೆ ಭಸ್ಮ. ಕೊರಳಲ್ಲಿ ಲಿಂಗ ರುದ್ರಾಕ್ಷಿ. ಈತ ಸಾಕ್ಷಾತ್ ಲಿಂಗವೇ ಎಂದುಕೊಂಡ ಭೋಗಣ್ಣ ಹಾಗೇ ಮಾಡಿದನು. ಆದರೆ ಬಂದ ವ್ಯಕ್ತಿಯೊಬ್ಬ ಶೂದ್ರ, ಅವನನ್ನು ಮನೆಯೊಳಗೆ ಬಿಟ್ಟಕೊಂಡು ಸತ್ತ ಕರುವಿನ ಅಡಿಗೆ ಮಾಡುತ್ತಿದ್ದಾನೆಂಬ ದೂರು ಚಂದಿಮರಸನವರೆಗೂ ಹೋಯಿತು. ತಕ್ಷಣ ಚಂದಿಮರಸ ಅವನ ಮನೆಹೊಕ್ಕು ಅವನನ್ನು ಕರೆತರಲು ಅಪ್ಪಣೆ ಮಾಡಿದನು. ಆಗ ವೈದಿಕರು ಹಾಗೆ ಮಾಡಿದರು. ಆದರೆ ಅಲ್ಲಿ ಭೋಗಣ್ಣ ಕಾಣಲಿಲ್ಲ. ದೂರದಲ್ಲಿ ಕಂಡನು. ಭೋಗಣ್ಣನ ಭಕ್ತಿಗೆ ಕಂಪಿತಗೊಂಡ ಲಿಂಗಗಳು ಅವನ ಬೆನ್ನು ಹತ್ತಿಹೊರಟವು. ಕೆಲ ಲಿಂಗಗಳು ಭೂಮಿಯನ್ನು ಭೇದಿಸಿಕೊಂಡು, ಇನ್ನು ಕೆಲವು ಆಕಾಶದಲ್ಲಿ ಹಾರುತ್ತ ಹೊರಟವಂತೆ.

ಸತ್ತ ಕರುವಿನ ಅಡಿಗೆಯ ಕಾರಣವಾಗಿ ಭೋಗಣ್ಣನನ್ನು ಶಿಕ್ಷಿಸಲು ಯಾರ್‍ಯಾರು ಮುಂದಾಗಿದ್ದರೋ ಅವರ ಮನೆಯ ಅಡಿಗೆಯೆಲ್ಲ ಹಳಸಿ, ಹುಳಿತು ನಾರಲು ಪ್ರಾರಂಭಿಸಿತಂತೆ. ಹಾಲು ಬತ್ತಿ, ಪುಷ್ಪ ಬಾಡಿ ಪ್ರಕೃತಿಯೆ ಮುನಿದುಕೊಂಡಂತೆ ಕಂಡಾಗ ವಿಧಿಯಿಲ್ಲದೆ ಆರೋಪಿ ಸ್ಥಾನದಲ್ಲಿ ಭೋಗಣ್ಣನನ್ನು ನಿಲ್ಲಿಸಲು

ಕಾರಣರಾದವರೆಲ್ಲ ಭೋಗಣ್ಣನಿಗೆ ಶರಣು ಹೋಗುತ್ತಾರೆ. ಕ್ಷಮೆ ಕೇಳುತ್ತಾರೆ. ತಮ್ಮ ತಪ್ಪನ್ನು ಮನ್ನಿಸಬೇಕೆನ್ನುತ್ತಾರೆ. ಭೋಗಣ್ಣನನ್ನು ಆದರದಿಂದ ಕರೆತರುತ್ತಾರೆ. ಅವನು ಬಂದಂತೆ ಲಿಂಗಗಳೆಲ್ಲ ತಿರುಗಿ ನಾಮುಂದು ತಾಮುಂದು ಎಂದು ಬೆನ್ನು ಹತ್ತಿ ಬರುತ್ತವೆ. ಆ ಗಡಿಬಿಡಿಯಲ್ಲಿ ಸಣ್ಣ ಪೀಠದ ಮೇಲೆ ದೊಡ್ಡಲಿಂಗಗಳು, ದೊಡ್ಡ ಪೀಠದ ಮೇಲೆ ಸಣ್ಣಲಿಂಗಗಳು ನೆಲೆಗೊಳ್ಳುತ್ತವೆ. ಭೋಗಣ್ಣನ ಜೊತೆ ಬರದೆ ಇರುವ ಲಿಂಗಗಳು ಕೂಡಲಗಿ, ರಾಮಲಿಂಗನಕೊಳ್ಳ, ಹೆಗ್ಗಣದೊಡ್ಡಿ ಈ ಮೂರು ಊರಲ್ಲಿವೆ. ಈ ಮೂರನ್ನು ಬಿಟ್ಟು ಉಳಿದೆಲ್ಲ ಲಿಂಗಗಳು ಕೆಂಭಾವಿಗೆ ಬಂದವೆನ್ನಲಾಗುತ್ತದೆ. ಈ ಘಟನೆಯಿಂದ ಕೆಂಭಾವಿಯ ಜನ ಭೋಗಣ್ಣನನ್ನು ಪ್ರತ್ಯಕ್ಷ ದೇವರೆಂದೇ ಗೌರವಿಸಿದ ಪ್ರತೀಕ ಎಂಬಂತೆ, ಊರಿನ ದೈವ ಎಂಬಂತೆ ಭೋಗಣ್ಣನ ಸ್ಮಾರಕವೊಂದನ್ನು ನಿರ್ಮಾಣ ಮಾಡುತ್ತಾರೆ. ದ್ವಿಕೂಟ ಮಾದರಿಯ ದೇವಾಲಯ ಇದು. ಗುಡಿಯ ಸುತ್ತಲೂ ಸುಮಾರು ಐದುನೂರು ಅಡಿಗಳ ಚೌಕಾಕಾರದ ಗೋಡೆಯ ನಡುವೆ ಭಾರೀಪ್ರಮಾಣದ



ಭೋಗಣ್ಣನ ಗುಡಿಯ ಗರ್ಭಗೃಹದ ಶಿವಲಿಂಗ



ರೇವಣಸಿದ್ದೇಶ್ವರ ಗುಡಿ

ನೀರಿನ ಸಂಗ್ರಹ ಇರುವಂತೆ ವ್ಯವಸ್ಥೆ ಮಾಡಲಾಗಿದೆ. ಇದನ್ನೇ ಕೆಂಭಾವಿಯ ಜನ 'ಭೋಗಣ್ಣನ ಬಾವಿ' ಎಂದು ಕರೆಯುತ್ತಾರೆ.

ಗುಡಿಗೆ ಬಂದುಹೋಗಲು ಏಳು ಅಂತಸ್ತಿನ ಕಲ್ಲಿನ ಮಂಟಪದ ಮೇಲೆ ಸೇತುವೆ ನಿರ್ಮಿಸಿದರಂತೆ. ಈ ಗುಡಿಯ ಸುತ್ತಲೂ ಇರುವ ಆಳವಾದ ಬಾವಿ ಸಂಪೂರ್ಣವಾಗಿ ಹೂಳು ತುಂಬಿ ಹೋಗಿ ಸೇತುವೆ ಮಾತ್ರ ಕಾಣುತ್ತಿತ್ತು. ಇದೀಗ ಊರಿನ ಗೌಡರಾದ ಮತ್ತು ಪಂಚಾಯತ ಅಧ್ಯಕ್ಷರಾಗಿರುವ ಶ್ರೀ ಸಿದ್ದಣಗೌಡ ಪೋಲಿಸ ಪಾಟೀಲ ಅವರು ಕೆರೆಯ ಹೂಳೆತ್ತಿಸುವ ಕೆಲಸ ಮಾಡಿಸುತ್ತಿದ್ದಾರೆ. ಹಾಗೆ ಹೂಳೆತ್ತಿಸುವಾಗ ಮುಕ್ಕಾಗದೆ ಇರುವ ನೆಲ ಅಂತಸ್ತೊಂದು ತೆರೆದುಕೊಂಡಿದೆ. ಉದ್ದಕ್ಕೆ ಎರಡೂ ಕಡೆ ಹನ್ನೊಂದು ಹನ್ನೊಂದು ಕಂಬಗಳಿವೆ. ನಡುವೆ ನಾಲ್ಕು ನಾಲ್ಕು ಕಂಬಗಳಿವೆ. ಇಂಥ ಇನ್ನೂ ಆರು ನೆಲಮಾಳಿಗೆಗಳು ಮುಚ್ಚಿ ಹೋಗಿವೆ ಎಂಬುದು ಜನರ ನಂಬಿಕೆ. ಈ ಕಲ್ಲಿನ ಕಂಬಗಳ ಮಾಳಿಗೆಯೇ ಕೆರೆಯ ಸೇತುವೆಯಾಗಿದ್ದು, ಇದರಿಂದಾಗಿಯೇ ಕಂಬದ+ಬಾವಿ>ಕೆಂಭಾವಿ ಹೆಸರು ಬಂದಿರಬೇಕ್ನೆನ್ನಲಾಗುತ್ತದೆ.

ಭೋಗಣ್ಣನ ಲಿಂಗ ಬಲಕ್ಕೆ (ಪೂರ್ವದಿಕ್ಕು) ಇರುವ ಗರ್ಭಗುಡಿಯಲ್ಲಿದ್ದು, ಭೋಗೇಶ್ವರಲಿಂಗ ಎಂದು ಕರೆಯುತ್ತಾರೆ. ಎದುರು ನಂದಿ ಇದೆ. ಮಂಗಲ ಫಲಕಕ್ಕೆ ಗಜಲಕ್ಷ್ಮಿ ಶಿಲ್ಪ ಇದೆ. ಬಾಗಿಲುವಾಡಕ್ಕೆ ಸುರುಳಿಯಾಕಾರದ ಕೆತ್ತನೆಗಳಿವೆ. ಭೋಗಣ್ಣನ ಗರ್ಭಗೃಹದ ಎದುರಿಗೆ ಪಶ್ಚಿಮ ದಿಕ್ಕಿಗೆ ಇರುವುದು ಸಂಗಮನಾಥಲಿಂಗ. ಅದರ

ಅಂತರಾಳದಲ್ಲೂ ಒಂದು ಲಿಂಗವೇ ಇದೆ. ಯಾವಾಗಲೂ ಲಿಂಗದ ಮುಂದೆ ನಂದಿ ಇರುವುದು ಸಾಮಾನ್ಯ ಸಂಗತಿ. ಆದರೆ ಸಂಗಮನಾಥ ಲಿಂಗದ ಮುಂದೆ ಲಿಂಗವೇ ಇರುವುದು ವಿಶೇಷ. ದ್ವಾರ ಬಾಗಿಲಿಗೆ ಅಂಟಿಕೊಂಡೇ ಒಂದೆಡೆ ನೃತ್ಯಶಿಲ್ಪ, ಇನ್ನೊಂದೆಡೆ ಅಶ್ವಾರೂಢ ಶಿಲ್ಪಗಳಿವೆ. ಎತ್ತಿತಂದಿಟ್ಟ ಮೂರ್ತಿಗಳು ಎರಡೂ ಬದಿಗೆ ಇವೆ. ಶೈವ ಸಂಪ್ರದಾಯದ ಶಿಲ್ಪಗಳೇ ಇಲ್ಲಿವೆ. ಶಿಲ್ಪ ಕೆತ್ತನೆ ಚಾಲುಕ್ಯ ಶೈಲಿಯದಾಗಿದೆ.

ಭೋಗೇಶ್ವರ ಲಿಂಗಕ್ಕೆ ಶ್ರಾವಣದಲ್ಲಿ ಅಭಿಷೇಕ ನಡೆಯುತ್ತದೆ. ಶರಣ ಭೋಗಣ್ಣನ ಹೆಸರಿನಲ್ಲಿ ಶ್ರಾವಣ ಮಾಸದ ಕೊನೆಯಲ್ಲಿ, ಅಮವಾಸೆಯ ಮರುದಿನ ಜಾತ್ರೆ ನಡೆಯುತ್ತದೆ. ಅಂದು ಭೋಗಣ್ಣನ ಕಂಚಿನ ಉತ್ಸವ ಮೂರ್ತಿಯ ಮೆರವಣಿಗೆ ನಡೆಯುತ್ತದೆ. ಶರಣನಾದ ಭೋಗಣ್ಣ ದೇವನಾಗಿ ಊರವರಿಂದ ಪೂಜಿಸಲ್ಪಡುತ್ತಿದ್ದಾನೆ.

ಭೋಗಣ್ಣನ ಜೊತೆಗೆ ನಡೆದ ಘಟನೆಯಿಂದ ಚಂದಿಮರಸ ಕುಗ್ಗಿ ಹೋಗುತ್ತಾನೆ. ಭೋಗಣ್ಣನ ಲಿಂಗಭಕ್ತಿಗೆ ಮಾರುಹೋಗುತ್ತಾನೆ. ತಾನೂ ಕೂಡ ತನ್ನ ಜನ್ಮಜಾತಿಯನ್ನು ತೊರೆಯುತ್ತಾನೆ. ಚಂದಿಮರಸನಲ್ಲಿ ಹೇಳಲಾಗದ ಬದಲಾವಣೆ ಕಾಣಿಸಿಕೊಳ್ಳುತ್ತದೆ. ವಿರಕ್ತಿಯ ಭಾವ ಮೂಡಿತ್ತದೆ. ತನ್ನ ರಾಜ್ಯ ಸಂಪತ್ತನ್ನು ತೊರೆದು ಹೊರಟುಬಿಡುತ್ತಾನೆ. ಕೃಷ್ಣಾನದಿ ತೀರದ ಚಿಮ್ಮಲಿಗೆಗೆ ಬಂದು, ಅಲ್ಲಿ ಬೀಡು ಬಿಡುತ್ತಾನೆ. ಅಲ್ಲಿಯೇ ಇದ್ದ ಆರೂಢ ಜ್ಞಾನಿಗಳಾದ ನಿಜಗುಣರ ಪ್ರಭಾವಕ್ಕೆ ಒಳಗಾಗುತ್ತಾನೆ. ಚಿಮ್ಮಲಿಗೆಯಲ್ಲಿ ಈಗಲೂ ಚಂದಿಮರಸನ ಹೆಸರಿನಲ್ಲಿ ಗುಡಿಯೊಂದಿದೆ. ವಚನ ರಚನೆ ಮಾಡುತ್ತಾನೆ. ಅಂಕಿತವಾಗಿ 'ಸಿಮ್ಮಲಿಗೆಯ ಚೆನ್ನರಾಮ' ಎಂದು ಇಟ್ಟುಕೊಳ್ಳುತ್ತಾನೆ.

ಚಂದಿಮರಸನ ಕಾಲದ ಬಗ್ಗೆ, ಇವನು ವಚನ ರಚನೆ ಮಾಡಿರಬಹುದೇ ಎಂಬುದರ ಬಗ್ಗೆ, ಅರಸನಾಗಿದ್ದನೆಂಬ ಬಗ್ಗೆ ವಿದ್ವಾಂಸರಲ್ಲಿ ವಾದವಿವಾದಗಳಿವೆ. ಆದರೆ ಮೌಖಿಕ ಮಾಹಿತಿಗಳು ಚಂದಿಮರಸ ಅರಸನಾಗಿದ್ದ, ಭೋಗಣ್ಣನನ್ನು ಪರೀಕ್ಷಿಸಿ ಶರಣರ ಪ್ರಭಾವಕ್ಕೆ ಒಳಗಾದ ಎಂದು ಹೇಳುತ್ತವೆ.

ಭೋಗಣ್ಣ, ಚೆಂದಿಮರಸ ಇಬ್ಬರೂ ಜೇಡರ ದಾಸಿಮಯ್ಯನ ಸಮಕಾಲೀನರು, ಬಸವಾದಿ ಶರಣರ ಹಿರಿಯ ಸಮಕಾಲೀನರೆಂದು ಹೇಳಲಾಗುತ್ತದೆ. ಆಗ ಆ ಭಾಗದ ಪರಿಸರದಲ್ಲಿ ಶರಣರ ಸುಳಿಗಾಳಿ ಬೀಸುತ್ತಿರುವುದರಿಂದ, ಲಿಂಗನಿಷ್ಠೆಯಿಂದ ಅವರು ಶರಣಜೀವನ ನಡೆಸಿದರು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಕಲ್ಯಾಣದಲ್ಲಿ ಭೋಗಣ್ಣನ ಹೆಸರಿನ ಯಾವ ಕುರುಹುಗಳೂ ಇಲ್ಲ. ಆದರೆ ಭೋಗಣ್ಣ ಹಲವಾರು ಕಡೆ ಅಡ್ಡಾಡಿದ್ದಾರೆ ಎಂಬುದಕ್ಕೆ ಕಲಬುರ್ಗಿ ಜಿಲ್ಲೆಯ ಅನೇಕ ಊರುಗಳಲ್ಲಿ ಭೋಗೇಶ್ವರ ಗುಡಿಗಳು ಕಾಣಬರುತ್ತವೆ. ಅಲ್ಲೆಲ್ಲ ಕೆಂಭಾವಿ ಭೋಗಣ್ಣ ಬಂದು ಹೋಗಿದ್ದಾರೆ ಎಂದು ಜನ ಹೇಳುತ್ತಾರೆ.

ಭೋಗಣ್ಣ ಊರು ಬಿಡುವಾಗ ಅವನ ಜೊತೆ ಹೋದ ಲಿಂಗಗಳು, ನಂತರ ಅವನು ಹಿಂತಿರುಗಿ ಬರುವಾಗ ಬಂದು, ಗಡಿಬಿಡಿಯಲ್ಲಿ ಸಣ್ಣ ಪೀಠದ ಮೇಲೆ



ಚಂದಿಮರಸನ ಅರಮನೆ ಎಂದು ಹೇಳುವ ಮನೆ

ದೊಡ್ಡ ಲಿಂಗ, ದೊಡ್ಡ ಪೀಠದ ಮೇಲೆ ಸಣ್ಣ ಲಿಂಗಗಳು ಕುಳಿತುಕೊಂಡವೆಂದು ಹೇಳುವ ಐತಿಹ್ಯಕ್ಕೆ ಸಾಕ್ಷಿಯಾಗಿ, ಸ್ಥಾನ ಪಲ್ಲಟಗೊಂಡ ಲಿಂಗಗಳ ದೊಡ್ಡ ಸ್ಮಾರಕವೊಂದು ಕೆಂಭಾವಿಯಲ್ಲಿದೆ. ಇದಕ್ಕೆ ಪೂರ್ವದಿಂದಲೂ ಪಂಚಲಿಂಗಗಳ ಗುಡಿಯೆಂದೇ ಕರೆಯುವ ವಾಡಿಕೆ ಇದೆ. ಆದರೆ ಈಗ ಇದನ್ನು ರೇವಣಸಿದ್ಧೇಶ್ವರ ಗುಡಿ ಎಂದು ಕರೆಯುತ್ತಾರೆ. ಮೂರುವರಿ ಅಡಿ ಎತ್ತರದ ಲಿಂಗದ ಮೇಲೆ ರೇವಣಸಿದ್ಧರ ಮುಖವಾಡವನ್ನು ಹಾಕಲಾಗಿದೆ. ಈ ದೇವಾಲಯದ ಎದುರು ಎಡಬಲಕ್ಕೆ ದೊಡ್ಡ ದೊಡ್ಡ ದ್ವಾರಪಾಲಕರ ಮೂರ್ತಿಗಳಿವೆ. ಮಂಗಲ ಫಲಕಕ್ಕೆ ಮಕರ ತೋರಣವಿದೆ. ಈ ದೇವಾಲಯದ ರಚನೆ ಚತುರ್ಕೂಟದ್ದಾಗಿದೆ. ನಾಲ್ಕು ಗರ್ಭಗೃಹಗಳಿವೆ. ನಾಲ್ಕು ಅಂತರಾಳಗಳಿವೆ. ನಾಲ್ಕು ಅಂತರಾಳಕ್ಕೆ ಹೊಂದಿಕೊಂಡಂತೆ ವಿಶಾಲವಾದ ನವರಂಗ ಇದೆ. ಮುಖ್ಯ ಗರ್ಭಗುಡಿಯನ್ನು ರೇವಣಸಿದ್ಧೇಶ್ವರ ಎಂದು ಕರೆಯಲಾಗುತ್ತದೆ. ಈ ಗುಡಿಯು ವಿಶಾಲವಾಗಿದೆ. ಇದನ್ನು ಹೂಗಾರರು ಪೂಜಿಸುತ್ತ ಬಂದಿದ್ದಾರೆ.

ವಚನಗಳು : ೧೫೭
ವಚನಾಂಕಿತ : ಸಿಮ್ಮಲಿಗೆಯ ಚೆನ್ನರಾಮ
ಮಾಹಿತಿ : ನಿಂಗನಗೌಡ ಎಚ್. ದೇಸಾಯಿ, ಶಾಂತಪ್ಪ ಬೂದಿಹಾಳ
ನೋಡಿ : ಕೋಡ್ಲಿ, ಭೋಗಲಿಂಗೇಶ್ವರ ಗುಡಿ

***

**ಸುರಪುರ ತಾಲೂಕು :**

## ೨. ಮುದುನೂರು(ಬಿ)
## ಜೇಡರ ದಾಸಿಮಯ್ಯ

ದಾಸಿಮಯ್ಯನ ನೆನಸಿ ಕೂಸು ನೇಯುವದಯ್ಯ
ಹಾಸುಹೊಕ್ಕಾಗಿ ನಿನ್ನಾಡು । ಜಗದೊಳಗೆ
ಸೋಸಿ ನಡೆದವಗೆ ಶಿವಬೆಳಕು

ಕೆಂಭಾವಿಯಿಂದ ಹೊರಟರೆ, ಮೊದಲು ಹತ್ತುವುದು ಮುದನೂರು ಕೆ. ಮುದನೂರು-ಕೆ ಹಾಗೂ ಮುದನೂರು-ಬಿ ದೂರ ದೂರದ ಊರುಗಳಲ್ಲ,




ರಾಮನಾಥ ಮಂದಿರ



ರಾಮನಾಥ ಮಂದಿರದ ಗರ್ಭಗೃಹದ ಎದುರಿನ ಅಂತರಾಳ ಮತ್ತು ಮಂಟಪ

ನಡುವೆ ಒಂದು ಸಣ್ಣ ನೀರಿನ ಹಳ್ಳ ಮಾತ್ರ ಇದೆ. ಎರಡೂ ಊರುಗಳು ಕೂಡಿಯೇ ಇವೆ. ಕೆ ಎಂದರೆ ಖುರ್ದ, ಅಂದರೆ ಸಣ್ಣದು ಎಂದರ್ಥ. ಬಿ ಎಂದರೆ ಬುಜುರ್ಗ, ಎಂದರೆ ದೊಡ್ಡದು ಎಂದರ್ಥ. ದೊಡ್ಡದು ಹಳೆಯದಾಗಿರಬಹುದು. ಅದು ಬೆಳೆದು ಹಳ್ಳದ ಈ ಕಡೆ ಊರು ಬೆಳೆದಾಗ ಮತ್ತೊಂದು ಸಣ್ಣದು ಎಂದು ಹೆಸರಾಗಿರಬಹುದು.

ಮುದನೂರು (ಬಿ) ಬಹು ಪ್ರಾಚೀನ ಗ್ರಾಮ. ಇದೊಂದು ಅಗ್ರಹಾರವೂ ಆಗಿತ್ತು. ಊರಿನ ತುಂಬ ೧೦೦೧ ಲಿಂಗಗಗಳಿರುವುದು, ಏಳು ತೀರ್ಥಗಳಿರುವುದು ಇಲ್ಲಿಯ ವಿಶೇಷ. ರಾಮತೀರ್ಥ, ಲಕ್ಷ್ಮಣತೀರ್ಥ, ಮರುಳತೀರ್ಥ, ಹಾಲತೀರ್ಥ, ಪಾಂಡುತೀರ್ಥ, ಸಕ್ಕರಿ ತೀರ್ಥಗಳು ಈಗಲೂ ನೋಡಸಿಗುತ್ತವೆ. ಆದರೆ ಸಂಗಮತೀರ್ಥ ಮುಚ್ಚಿ ಹೋಗಿದೆ. ಹೀಗೆ ಸಮೃದ್ಧವಾಗಿ ನೀರಿನ ಮೂಲಗಳಿವರುವುದರಿಂದ ಇದಕ್ಕೆ ‘ಮುದಿನೀರು’> ಮುದನೂರು>ಮುದುನೂರು ಎಂಬ ಹೆಸರು ಬಂದಿರುವ ಸಾಧ್ಯತೆಯೂ ಇದೆ. ಕೆಲ ಶಾಸನಗಳಲ್ಲಿ ಮುದಿನೀರು ಎಂಬ ಹೆಸರೂ ಉಲ್ಲೇಖವಾಗಿರುವಂತೆ ತಿಳಿದುಬರುತ್ತದೆ.

ವಿಶಾಲವಾದ ರಾಮನಾಥ ದೇವಾಲಯ ಇದೆ. ಇದಕ್ಕೆ ರಾಮನಾಥಲಿಂಗ ಎಂದು ಹೇಳುತ್ತಾರೆ. ಕಾಮಯ್ಯ ಮತ್ತು ಶಂಕರಿಯರ ಮಗ ಜೇಡರ ದಾಸಿಮಯ್ಯ ಜನಿಸಿದ್ದು ಈ ಮುದನೂರಿನಲ್ಲಿ. ಇವರು ವಾಸಿಸಿದ್ದೆಂದು ಹೇಳುವ ಹಳೆಯ ಮನೆಯೊಂದನ್ನು ಊರವರು ತೋರಿಸುತ್ತಾರೆ. ಈಗ ಅಲ್ಲಿ ಬಡಿಗೇರ ಜನಾಂಗಕ್ಕೆ



ರಾಮನಾಥ ಮಂದಿರದ ಗರ್ಭಗೃಹದ ಶಿವಲಿಂಗ

ಸೇರಿದವರು ವಾಸಿಸುತ್ತಿದ್ದಾರೆ. ಆ ಮನೆಯ ರಚನೆ ತೀರ ಹಳೆಯದಾಗಿದೆ. ಅದರ ಒಳಗೆ ಹೋಗಿ ನೋಡಲು ಸಾಧ್ಯವಾಗಲಿಲ್ಲ.

ದಾಸಿಮಯ್ಯ ಲಿಂಗಾಯತ ಜಾಡನು. ಲಿಂಗನಿಷ್ಠೆ ಉಳ್ಳವನು. ರಾಮನಾಥಲಿಂಗದ ಪರಮಭಕ್ತನು. ಅಷ್ಟೆ ಭಕ್ತಿ ವಿನಯ ಸಂಪನ್ನ ಗುಣವುಳ್ಳಾಕೆ ಅವನ ಹೆಂಡತಿ ದುಗ್ಗಳೆ. ದಂಪತಿಗಳು ಹನ್ನೆರಡು ವರ್ಷಪರ್ಯಂತ ಶಿವನಾಮಸ್ಮರಣೆಯನ್ನೇ ಹಾಸುಹೊಕ್ಕಾಗಿಸಿ ದಿವ್ಯವಸ್ತ್ರ ನೇಯ್ದವರು. ಈ ಅಪರೂಪದ ವಸ್ತ್ರಕ್ಕೆ ರಾಜ ಕೂಡ ಬೆಲೆಕಟ್ಟಲು ಆಗುತ್ತಿರಲಿಲ್ಲ. ಅಂಥ ದಿವ್ಯ ವಸ್ತ್ರ ಮಾರಲು ಸಿದ್ದಾಪೂರ ಸಂತೆಗೆ(?) ದಾಸಿಮಯ್ಯ ಒಯ್ದನೆಂದು ಹೇಳುತ್ತಾರೆ. ಕೊಳ್ಳುವವರಿಲ್ಲದೇ ವಸ್ತ್ರವನ್ನು ಮರಳಿ ತರುತ್ತಿರುವಾಗ ಶಿವನೇ ಮುದುಕನ ವೇಷಧರಿಸಿ ಬಂದು, ವಸ್ತ್ರ ಕೇಳಿ ಪಡೆದು, ದಾಸಿಮಯ್ಯನ ಮುಂದೆಯೆ ಹರಿದು ತುಂಡು ತುಂಡು ಮಾಡಿ ದೇಹಕ್ಕೆ ಸುತ್ತಿಕೊಂಡನಂತೆ. ದಾಸಿಮಯ್ಯನೊಂದಿಗೆ ಅವರ ಮನೆಗೆ ಬಂದು ಆತಿಥ್ಯ ಸ್ವೀಕರಿಸಿ, ಅವರ ಭಕ್ತಿಗೆ ಒಲಿದು ತವನಿಧಿ ಕೊಟ್ಟನಂತೆ. ತವನಿಧಿ ಬೇರೇನೂ ಆಗಿರಲಿಲ್ಲ. ಹಿಡಿಧಾನ್ಯ ಆಗಿತ್ತು. ಅದನ್ನು ಧಾನ್ಯಸಂಗ್ರಹದ ಹಗೆಯಲ್ಲಿ ಹಾಕಲು ಅದು ತವನಿಧಿ ಆಗುತ್ತದೆಂದು ಹರಸಿದನು. ಇದರಿಂದಾಗಿ ದಾಸೋಹವನ್ನು ಇನ್ನಷ್ಟು ಉತ್ಸಾಹದಿಂದ ಮಾಡತೊಡಗಿದರು.

ಹೀಗಿರುವಾಗ ಒಂದು ದಿನ ಶಂಕರದಾಸಿಮಯ್ಯ ಅಲ್ಲಿಗೆ ಬರುತ್ತಾರೆ. ಅವರು ಶಿಷ್ಯರಿಗೆ ಊರಲ್ಲಿ ಭಿಕ್ಷೆ ಬೇಡಿಕೊಂಡು ಬರಲು ಹೇಳಿದಾಗ ಅಲ್ಲಿಯೇ ಇದ್ದ

ಜೇಡರ ದಾಸಿಮಯ್ಯ ತನ್ನ ಮನೆಯಲ್ಲಿ ತವನಿಧಿ ಇದೆ, ಊರೆಲ್ಲ ಹೋಗಿ ಬೇಡುವುದು ಬೇಡ ಎಂದು ಕೇಳಿಕೊಂಡನು. ಇದನ್ನು ಅಹಂಕಾರವೆಂದು ತಿಳಿದ ಶಂಕರದಾಸಿಮಯ್ಯ ತವನಿಧಿಯೆ ಬಯಲಾಗುವ ಹಾಗೆ ಮಾಡಿದರು. ತಮ್ಮ ತಪ್ಪಿನ ಅರಿವಾಗಿ ಮತ್ತೆ ಶಂಕರ ದಾಸಿಮಯ್ಯರಲ್ಲಿ ವಿನಂತಿಸಿಕೊಂಡು ತವನಿಧಿ ಮರಳಿ ಪಡೆದರೆಂದು ಹೇಳುತ್ತ ಬಂದಿದ್ದಾರೆ. ಈ ವಿಷಯ ಇನ್ನೂ ಜನರ ಮನಸ್ಸಿನಲ್ಲಿ ಹಾಗೆಯೆ ಉಳಿದುಕೊಂಡಿದೆ.

ಜೇಡರ ದಾಸಿಮಯ್ಯನ ಆರಾಧ್ಯ ದೈವ ರಾಮನಾಥನ ದೇವಾಲಯವೆಂದು ಹೇಳುವ ದೊಡ್ಡ ಗುಡಿಯ ಸುತ್ತಲೂ ತೀರ್ಥಗಳಿವೆ. ಎದುರು ಬದರಾಗಿ ಇರುವ ಗರ್ಭಗೃಹಗಳಲ್ಲಿ ಒಂದೆಡೆ ರಾಮನಾಥ ಲಿಂಗವಿದೆ. ಇನ್ನೊಂದೆಡೆ ಜೇಡರ ದಾಸಿಮಯ್ಯನ ನವೀನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲಿ ಮೊದಲು ಶಿವಪಾರ್ವತಿಯರಿದ್ದ ಮೂರ್ತಿ ಇತ್ತೆಂದೂ, ಚಿಕ್ಕ ಪಾದರಿಯು ದಾಸಿಮಯ್ಯ ದಂಪತಿಗಳ ಮೂರ್ತಿಗಳಿದ್ದವೆಂದೂ ಹೇಳುತ್ತಾರೆ. ದಂಪತಿಗಳ ಮೂರ್ತಿಗಳು ಅಲ್ಲಿ ಕಾಣಿಸಲಿಲ್ಲ. ಬದಲಾಗಿ ಭಗ್ನವಾದ ಶಿವಪಾರ್ವತಿಯರ ಮೂರ್ತಿಯನ್ನು ಒಂದು ಚಿಕ್ಕ ಗರ್ಭಗುಡಿಯಲ್ಲಿ ಇಟ್ಟಿದ್ದಾರೆ. ರಾಮನಾಥ ಲಿಂಗದ ಬಣ್ಣ ಕರಿಯಾಗಿರದೆ ಕೆಂಪುಮಿಶ್ರಿತ ಬೆಣಚುಕಲ್ಲಿನದಾಗಿದೆ.



ರಾಮನಾಥ ಮಂದಿರದ ಗರ್ಭಗೃಹದ ಎದುರಿನ ಇನ್ನೊಂದು ಗರ್ಭಗೃಹದಲ್ಲಿ ಇಡಲಾಗಿರುವ ದೇವರ ದಾಸಿಮಯ್ಯನ ಇತ್ತೀಚಿನ ಶಿಲ್ಪ

ರಾಮನಾಥ ದೇವಾಲಯದ ಮಗ್ಗುಲಿಗೆ ೧೦೧ ಕಂಬಗಳ ಸಂಗಮನಾಥ ದೇವಾಲಯವಿದೆ. ಅದರ ಮೇಲೆ ಗುಡಿಯ ಸೌಂದರ್ಯವನ್ನು ಹಾಳುಗೆಡವಿ ಹೇಗೆ ಬಂತು ಹಾಗೆ ಕೆಡವಿ ಮುಸ್ಲೀಮರು ಸುಮಾರು ೨೫೦ಕ್ಕೂ ಮೇಲ್ಪಟ್ಟು ಮನೆಗಳನ್ನು ಮಾಡಿಕೊಂಡಿದ್ದಾರೆ. ಹೀಗಾಗಿ ಸಂಗಮನಾಥ ದೇವಾಲಯ ಮತ್ತು ಸಂಗಮ ತೀರ್ಥಗಳು ಇಂದು ಸುಸ್ಥಿತಿಯಲ್ಲಿಲ್ಲ. ಇಂಥ ಅಪರೂಪದ ಸ್ಮಾರಕಗಳನ್ನು ಉಳಿಸಿಕೊಳ್ಳಲು ಎಲ್ಲರೂ ಪ್ರಯತ್ನಿಸಬೇಕೆಂಬ ಅಭಿಲಾಷೆ ಊರವರದು.

ಯುಗಾದಿ ಅಮವಾಸ್ಯೆ ಆದ ಹತ್ತನೇ ದಿನಕ್ಕೆ ಅಂದರೆ ದಶಮಿಯಂದು ದಾಸಿಮಯ್ಯನ ತೇರು ಎಳೆಯುತ್ತದೆ. ಜಾತ್ರೆ ನಡೆಯುತ್ತದೆ. ಹದಿನೈದು ದಿನ ಮುಂಚೆಯೇ ಪುರಾಣ ಪ್ರವಚನ ಹಚ್ಚುತ್ತಾರಂತೆ.

ಮಾಹಿತಿ: ಮಡಿವಾಳಪ್ಪ ಜಂಗಳೇರ
ವಚನಗಳು: ೧೭೬
ವಚನಾಂಕಿತ : ರಾಮನಾಥ

***



ರಾಮನಾಥ ಮಂದಿರದ ಸುತ್ತಲೂ ಇರುವ ದೇವಾಲಯಗಳ ಮೇಲೆ
ಮುಸ್ಲೀಮ ಜನಾಂಗದ ಮನೆಗಳು, ಈಗಲೂ ಜನ ವಾಸವಾಗಿದ್ದಾರೆ



ದೇವರ ದಾಸಿಮಯ್ಯ ವಾಸವಾಗಿದ್ದ ಮನೆ
ಎಂದು ತೋರಿಸುವ ಹಳೆಯ ಮನೆ



ರಾಮನಾಥ ಮಂದಿರದ ಮಗ್ಗುಲಿರುವ ಒಂದು ಬಾವಿ

## ಸುರಪುರ ತಾಲೂಕು :

### ೩. ಅಗ್ನಿ:

### ಅಗ್ಘವಣಿ ಹೊನ್ನಯ್ಯ

ಅಗ್ನಿ ಊರಿನ ಪೂರ್ವದ ಹೆಸರು ಅಗ್ಘವಣಿ ಎಂದು. ಆದರೆ ಬ್ರಿಟೀಷರ ಬಾಯಿಯಲ್ಲಿ ಈ ಊರಿನ ಉಚ್ಚಾರ ಅಗ್ನಿ ಎಂದಾಯಿತು. ಹೀಗಾಗಿ ಅಗ್ಘವಣಿ ಬದಲು ಅಗ್ನಿ ಎಂದು ಕರೆಯುವುದೇ ಇಂದು ಉಳಿದುಕೊಂಡು ಬಂದಿದೆ ಎನ್ನುತ್ತಾರೆ. ಈ ಊರಿನಲ್ಲಿ ಹೊನ್ನಯ್ಯ ಎಂಬ ಶರಣ ಆಗಿ ಹೋಗಿದ್ದಾನೆ. ಇವನ ತಾಯಿ-ತಂದೆ ಯಾರು ಅಂತ ತಿಳಿಯುವದಿಲ್ಲ. ಆದರೆ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಬಾಸ್ಗಿಯಲ್ಲಿ ಹುಟ್ಟಿದನೆಂದು ಹೇಳುತ್ತಾರೆ. ಆದರೆ ಅವರು ಲಿಂಗೈಕ್ಯರಾದದ್ದು ಅಗ್ನಿಯಲ್ಲಿ.



ಅಗ್ಘವಣಿ ಹೊನ್ನಯ್ಯನ ಗುಡಿ





**ಅಗ್ಘವಣಿ ಹೊನ್ನಯ್ಯನ ಗುಡಿಯ ಗರ್ಭಗೃಹದಲ್ಲಿರುವ ಬೃಹತ್ ಶಿವಲಿಂಗ**

ಪೂರ್ವದ ಹೊನ್ನಲಿಂಗನ ಗುಡಿ ಇಳಿದಿತ್ತು. ಹೀಗಾಗಿ ಅದನ್ನು ಜೀರ್ಣೋದ್ಧಾರ ಮಾಡಬೇಕೆಂದು ಊರಿನವರೆಲ್ಲ ಯೋಚಿಸಿದರು. ಈಗ ೩೦ ವರ್ಷಗಳ ಹಿಂದೆ ಮಾತ್ರ ಈ ಗುಡಿಯ ಜೀರ್ಣೋದ್ಧಾರ ಆಗಿದೆಯಂತೆ. ಈ ಕೆಲಸ ಮಾಡಿಸಿದವರು ಶಿವನಗೌಡ ಸಿದ್ಧಲಿಂಗಪ್ಪಗೌಡ ಪೋಲಿಸ ಪಾಟೀಲ. ಆಗ ಗರ್ಭ ಗುಡಿಯಲ್ಲಿ ಒಂದು ದೊಡ್ಡ ಕಟ್ಟೆ ಇತ್ತು. ಆ ಕಟ್ಟೆಯ ಮೇಲೇ ಲಿಂಗ ಇತ್ತು. ಎರಡೂ ಮಗ್ಗಲು ಗೋಡೆಗೆ ಕಟ್ಟೆ ಹತ್ತಿಕೊಂಡಿತ್ತು. ಅದನ್ನು ಅಗಿದು ತಗೆದು ಲಿಂಗ ಇದ್ದ ಸ್ಥಳದಲ್ಲಿ ಲಿಂಗಕ್ಕೆ ಬಾಧೆಯಾಗದ ಹಾಗೆ ಕೆದರುತ್ತ ಹೋದಾಗ ಐದು ಅಡಿ ಹಾರಿಯ ಐದು ಆಳ ತೆಗೆದರೂ ಅದರ ತಳದ ಆಳ ಸಿಗಲಿಲ್ಲವಂತೆ. ಅಷ್ಟು ಆಳದಿಂದ ಈ ಲಿಂಗವಿದೆ ಎಂದು ಹೇಳುತ್ತಾರೆ. ಈ ಲಿಂಗವನ್ನು ಪೂರ್ವದಿಂದಲೂ 'ಹೊನ್ನಲಿಂಗ' ಎಂದೇ ಕರೆಯುತ್ತಾರೆ. ಈ ಲಿಂಗದ ವಿಶೇಷವೆಂದರೆ ಬೇಸಿಗೆಕಾಲ, ಮಳೆಗಾಲ, ಚಳಿಗಾಲದಲ್ಲಿ ಬೇರೆ ಬೇರೆ ವರ್ಣದಲ್ಲಿಯೇ ಕಾಣುತ್ತದಂತೆ. ಹಸಿರು ಮಿಶ್ರಿತ ನೀಲಿ, ಕಪ್ಪು, ಕೆಂಪು ಬಣ್ಣದಲ್ಲಿ ಲಿಂಗ ಕಾಣಿಸುತ್ತದೆ ಎಂದು ಹೇಳುತ್ತಾರೆ. ಇದು ಈ ಊರಿನ ಭಾಗ್ಯ ಎಂಬಂತೆಯೂ ಉದ್ಗಾರ ತೆಗೆಯುತ್ತಾರೆ.


ಹೊನ್ನಯ್ಯನ ಲಿಂಗಭಕ್ತಿ ಕೂಡ ಅನುಪಮವಾದುದು. ಅವನು ಕಂಬಿಯಲ್ಲಿ ನೀರು ಹೊತ್ತು ಬಸವಣ್ಣನವರ ಲಿಂಗಪೂಜೆಗೆ ಒಯ್ದು ಕೊಡತ್ತಿದ್ದನೆಂದೂ, ಇದುವೇ ಅವನ ಕಾಯಕವಾಗಿತ್ತೆಂದೂ ಹೇಳುತ್ತಾರೆ. ಕಲ್ಯಾಣದ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಅಲ್ಲಿಗೆ ಹೋದರು. ಆದರೆ ಕಲ್ಯಾಣ ಕ್ರಾಂತಿ ಸಂದರ್ಭದಲ್ಲಿ ಮರಳಿ ತನ್ನ

ಗೂಡಿಗೆ ಬಂದರು. ಲಿಂಗಪೂಜೆ ಮಾಡಿಕೊಳ್ಳುತ್ತಲೇ ಕಾಲಕಳೆದರು. ಈ ಶರಣ ಇಲ್ಲಿಯೇ ಲಿಂಗೈಕ್ಯನಾದರು. ಅವರ ಗದ್ದಿಗೆಯ ಕುರುಹೇ ಹೊನ್ನಲಿಂಗ ಗುಡಿ ಎಂದು ಈಗ ಪ್ರಸಿದ್ಧವಾಗಿದೆ.

ಈ ಶರಣನ ಹೆಸರಿನಲ್ಲಿ ಶ್ರಾವಣಮಾಸದಲ್ಲಿ ಜಾತ್ರೆ ಆಗುತ್ತದೆ. ತೇರಿನ ಬದಲಾಗಿ ಶರಣನ ಭಾವಚಿತ್ರದ ಮೆರವಣಿಗೆ ಆಗುತ್ತದೆ. ಶ್ರಾವಣಮಾಸ ಪೂರ್ತಿ ಭಜನೆ ಮಾಡುತ್ತಾರೆ. ಇಲ್ಲಿ 'ಸಪ್ತಭಜನಿ' ನಡೆಯುತ್ತದೆ. ಇದು ಕೂಡ ವಿಶೇಷವಾದುದು. ನಿರಂತರ ತೊಯ್ದುಬಟ್ಟೆಯಲ್ಲಿಯೆ ಭಜನೆ ನಡೆಯುತ್ತದೆ. ಐದು ಮಣೆ ಹಾಕುತ್ತಾರೆ. ಅದರ ಮೇಲೆ ಭಕ್ತರನ್ನು ಮಡಿಯಿಂದಲೇ ನಿಲ್ಲಿಸುತ್ತಾರೆ. ಆ ಮಡಿಯಿಂದಲೇ ಭಜನೆ ನಡೆಯುತ್ತದೆ. ಐದೈದು ಜನರ ಗುಂಪು ಇರುತ್ತದೆ. ಈ ಗುಂಪು ಬದಲಾಗುತ್ತ ಹೋಗುತ್ತದೆ. ಈ ಸಂಪ್ರದಾಯಗಳೆಲ್ಲ ಹೊನ್ನಲಿಂಗಯ್ಯನ ಹೆಸರಿನ ಮೇಲೆ ನಡೆಯುತ್ತವೆ. ಇವನು ಲಿಂಗಾಯತ ಜಾಡನಾಗಿದ್ದನೆಂದು ಹೇಳುತ್ತಾರೆ.

ಅಗ್ಘವಣಿ ಹೊನ್ನಯ್ಯನ ಬಗ್ಗೆ ಕಾವ್ಯಗಳಲ್ಲಿ ಬರುವ ವಿಷಯಗಳನ್ನು ಮೌಖಿಕವಾಗಿ ಹೇಳುವ ರೂಢಿಯಿದ್ದಂತಿದೆ. ಅಥವಾ ಮೌಖಿಕ ಹೇಳಿಕೆಗಳೇ ಕಾವ್ಯದಲ್ಲಿ ಉಳಿದುಕೊಂಡು ಬಂದಿರುವ ಸಾಧ್ಯತೆಯೂ ಇದೆ. ಹೊನ್ನಯ್ಯ ಪರಮ ಭಕ್ತ. ಮಡಿಯಿಂದ ಲಿಂಗಕ್ಕೆ ನೀರು ತರುವ ನೇಮ ಉಳ್ಳವನು. ವಯಸ್ಸಾದರೂ ಈ ನೇಮವನ್ನು ಸಡಿಲಿಸಲಿಲ್ಲ. ಹೀಗಾಗಿ ವೃದ್ಧಾಪ್ಯದ ಕಾರಣವಾಗಿ ಎಡವಿ ಬಿದ್ದು ಸೊಂಟಕ್ಕೆ ಪೆಟ್ಟಾದರೂ ಆ ಪೆಟ್ಟಿನ ಕಡೆ ಅವನ ಗಮನಿಸದೆ ಲಿಂಗಕ್ಕೆ ನೀರು ಮಡಿಯಿಂದ ಇರಬೇಕೆಂದು ಹೆಗಲಲ್ಲಿ ಹೊತ್ತ ಕಂಬಿಯನ್ನು ಎತ್ತಿ ಹಿಡಿದಿದ್ದನಂತೆ. ಇವನ ಶಿವಭಕ್ತಿಗೆ ಮೆಚ್ಚಿದ ಶಿವನು ಭಕ್ತನಿಗೆ ನೋವಾಗದಿರಲೆಂದು ನಾಲ್ಕು ಬೆರಳು ಅಂತರದಲ್ಲಿ ಕಂಬಿ ಹೋಗುವ ಹಾಗೆ ಮಾಡಿದನೆಂಬ ವಿಷಯ ಇನ್ನೂ ಜನರ ಬಾಯಲ್ಲಿ ಉಳಿದುಕೊಂಡು ಬಂದಿದೆ.

ಶಿವಭಕ್ತಿ, ಲಿಂಗಪೂಜಾನಿಷ್ಠನಾದ ಹೊನ್ನಯ್ಯ ಕೆಲದಿನ ಕಲ್ಯಾಣಕ್ಕೂ ಹೋಗಿದ್ದನೆಂದು ಹೇಳುತ್ತಾರೆ. ಅಲ್ಲಿಯೂ ಬಸವಣ್ಣನವರ ಲಿಂಗಪೂಜೆಗೆ ಮಹಾಮನೆಯ ದಾಸೋಹಕ್ಕೆ ಅಗ್ಘವಣಿ ತಂದು ಹಾಕುವ ಕಾಯಕ ಮಾಡಿಕೊಂಡಿದ್ದನು. ಆಗಲೂ ಕಂಬಿ ಅವನ ಹೆಗಲಿನಿಂದ ಎತ್ತರದಲ್ಲೇ ಬರುತ್ತಿತ್ತಂತೆ. ಒಂದು ಸಾರೆ ಓಲೆಯಕಾರ ಶಾಂತಯ್ಯ ಎಂಬುವವನು ಕಾಲಿನಲ್ಲಿ ಮೆಟ್ಟು ಹಾಕಿಕೊಂಡೆ ಲಿಂಗಕ್ಕೆ ಮಜ್ಜನಕ್ಕೆರೆವುದನ್ನು ನೋಡಿ ಹೊನ್ನಯ್ಯ ಮನಸ್ಸಿನಲ್ಲಿಯೆ ಮರುಗಿದನು. ಅವನಿಗೆ ಬಾಯಿಬಿಟ್ಟು ಹೇಳಲಿಲ್ಲ. ಆದರೆ ಓಲೆಯಕಾರ ಶಾಂತಯ್ಯನೂ ನಿಷ್ಠಾವಂತ ಭಕ್ತನಾಗಿರುವುದರಿಂದ ಹೊನ್ನಯ್ಯನ ಮನದ ಮರುಗುವಿಕೆಯ ಮಾತು ಅವನ ಅಂತರಂಗಕ್ಕೆ ಕೇಳಿಸಿರಬಹುದು. ತಕ್ಷಣ ಕಂಬಿ ಹೊನ್ನಯ್ಯನ ಹೆಗಲ ಮೇಲೆ ಕುಳಿತಿತಂತೆ. ಆಗ ಹೊನ್ನಯ್ಯನಿಗೆ ತನ್ನ ಮನದಲ್ಲಿ ಮೂಡಿದ ಜಿಗುಪ್ಸೆಯಿಂದಾಗಿಯೇ ಹೀಗಾಗಿರಬೇಕೆಂದೆನಿಸಿ, ಓಲೆಯಕಾರ ಶಾಂತಯ್ಯನಿಗೆ ಕ್ಷಮೆ ಕೇಳಿದಾಗ, ಕಂಬಿ ಮೊದಲಿಗಿಂತ ಒಂದು ಗೇಣು ಮೇಲೆ ಅಂತರದಲ್ಲಿ ಹೋಯಿತೆಂದೂ ಹೇಳುತ್ತಾರೆ.




ಓಲೆಯುಕಾರ ಶಾಂತಯ್ಯನು ತ್ರಿಕಾಲಪೂಜೆ ಮಾಡಿ ಶಿವನನ್ನು ಒಲಿಸಿಕೊಂಡಿದ್ದನು. ಓಲೆಯುಕಾರ ಶಾಂತಯ್ಯ, ಹೊನ್ನಯ್ಯ ಇಬ್ಬರೂ ಕಲ್ಯಾಣವನ್ನು ಪ್ರವೇಶಿಸುವಾಗ ೩೬೦ ರೋಗಗಳು ತಾವೂ ಅವರ ಜೊತೆ ಕಲ್ಯಾಣವನ್ನು ಹೊಗುವುದಾಗಿ ಶಾಂತಯ್ಯನಿಗೆ ಕೇಳಿಕೊಂಡವಂತೆ. ಆಗ ಶರಣರು ನಿರಾಕರಣೆ ಮಾಡಿದರೂ ಮತ್ತೆ ಮತ್ತೆ ದೈನ್ಯದಿಂದ ಬೇಡಿಕೊಂಡಾಗ ಕುಷ್ಠರೋಗ ಒಂದನ್ನು ಬಿಟ್ಟು ೩೫೯ ರೋಗಗಳೊಂದಿಗೆ ಶಾಂತಯ್ಯ ಕಲ್ಯಾಣವನ್ನು ಪ್ರವೇಶಿಸಿದನಂತೆ. ಹೊರಗೆ ಉಳಿದ ಕುಷ್ಠಕ್ಕೆ ಅವಮಾನವಾದಂತಾಗಿ, ಇಲ್ಲ ನನ್ನನ್ನು ನೀವು ಕರೆದೊಯ್ಯಿರಿ ಎಂದು ಹೊನ್ನಯ್ಯನನ್ನು ಪ್ರಾರ್ಥಿಸಿಕೊಂಡಿತಂತೆ. ಹೊನ್ನಯ್ಯ ಒಪ್ಪಿಕೊಂಡನಂತೆ. ಕುಷ್ಠರೋಗ ಅಷ್ಟಕ್ಕೆ ಸುಮ್ಮನಿರದೆ, ಹೊನ್ನಯ್ಯನು ನೀರು ತರುವಾಗ– ನನಗೆ ನಿಮ್ಮ ಪಾದದಲ್ಲಿ ಸ್ಥಾನ ಕೊಡಿ, ನಾನೂ ಶರಣರಿಗೆ, ಲಿಂಗಕ್ಕೆ ನೀರು ನೀಡಿ ಶುದ್ಧನಾಗುವೆ ಎಂದು ಪ್ರಾರ್ಥಿಸಿಕೊಂಡಿತಂತೆ. ಹೊನ್ನಯ್ಯ ಅದನ್ನೂ ಒಪ್ಪಿಕೊಳ್ಳುತ್ತಾನೆ. ಹೊನ್ನಯ್ಯನನ್ನು ನೋಡಿದ ಬಿಜ್ಜಳ ಅವನ ಪಾದಕ್ಕೆ ಹತ್ತಿದ ಕುಷ್ಠ ನೋಡಿ ಅಪಹಾಸ್ಯ ಮಾಡಿ ನಕ್ಕನಂತೆ. ಆಗ ಬಸವಣ್ಣನವರು– ನೀವು ಹೀಗೆ ಶರಣರಿಗೆ ಅವಮಾನ ಮಾಡುವುದು ಯೋಗ್ಯವಲ್ಲ. ಆ ಕುಷ್ಠ ತಾನಾಗಿಯೆ ಹೊನ್ನಯ್ಯನವರನ್ನು ಪ್ರಾರ್ಥಿಸಿಕೊಂಡು, ಅವರ ಪಾದದಲ್ಲಿ ಸ್ಥಾನ ಪಡೆದಿದೆ ಎಂದು ವಿವರಿಸಿದಾಗ ಬಿಜ್ಜಳ 'ಅದನ್ನು ನಮ್ಮತ್ತ ಕಳುಹಿಸು' ಎನ್ನುತ್ತಾನೆ. ಬಸವಣ್ಣನವರು ಹೊನ್ನಯ್ಯನವರಿಗೆ ಬಿಜ್ಜಳನ ಬೇಡಿಕೆಯನ್ನು ಪೂರೈಸಲು ಸೂಚಿಸುತ್ತಾರೆ. ಹೊನ್ನಯ್ಯ ಹಾಗೆ ಮಾಡಲು, ಬಿಜ್ಜಳನ ದೇಹಕ್ಕೆ ತೊನ್ನು ವ್ಯಾಪಿಸಿಕೊಳ್ಳುತ್ತದಂತೆ. ಬಿಜ್ಜಳ ತನ್ನ ತಪ್ಪಿಗೆ ಬಸವಣ್ಣನವರಲ್ಲಿ ಕ್ಷಮೆ ಕೇಳಲು, ಹೊನ್ನಯ್ಯ ಆ ವ್ಯಾಧಿಯನ್ನು ಹಿಂಪಡೆದರಂತೆ.

ಹೀಗೆ ಹೊನ್ನಯ್ಯ ಮಹಾನ್ ಶರಣನಾಗಿದ್ದನೆಂದೂ ಅವನ ಗದ್ದುಗೆಯನ್ನು ನಿಷ್ಠೆಯಿಂದ ಪೂಜಿಸುತ್ತೇವೆಂದೂ ಊರ ಸಮಸ್ತ ಹಿರಿಕಿರಿಯರೆಲ್ಲ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಮುಕುಂದಪುರ ನಿವಾಸಿಯಾದ ಅಗ್ಘವಣಿ ಹಂಪಯ್ಯ, ಪುಲಿಗೆರೆಯ ಅಗ್ಘವಣಿ ಹೊನ್ನಯ್ಯ ಅವರ ವಚನಗಳು ಸಿಗುತ್ತವೆ. ಆದರೆ ಈ ಅಗ್ನಿಯ ಹೊನ್ನಯ್ಯ ವಚನ ರಚನೆ ಮಾಡಿದಂತೆ ಇಲ್ಲ.

ಮಾಹಿತಿ: ಹಣಮಂತರಾಯ ಬಿರಾದಾರ, ಶರಣಪ್ಪ ಸಿದ್ರಾಮಪ್ಪ ಮೆಟ್ಟಿ.

***

## ಸುರಪುರ ತಾಲೂಕು :

# ೪. ಹಾವಿನಹಾಳ-೧ :
# ಕಲ್ಲಯ್ಯ

ಯಾದಗೀರ ಜಿಲ್ಲೆಯ ಸುರಪೂರ ತಾಲೂಕಿನ ಅಮ್ಮಾಪೂರಕ್ಕೆ ಸಮೀಪದಲ್ಲಿರುವ ಗ್ರಾಮ ಹಾವಿನಹಾಳ. ಸುರಪುರ ನಂತರ ಬರುವ ದೇವಾಪುರ ಕ್ರಾಸ್‌ನಿಂದ ಒಂದು ಕಿ.ಮೀ. ದೂರದಲ್ಲಿರುವ ಹಾವಿನಹಾಳದಲ್ಲಿ ಚಾಲುಕ್ಯ ಶೈಲಿಯ ಒಂದು ಪುರಾತನ ಶಿವದೇವಾಲಯ ಇದೆ. ಅದರಲ್ಲಿ ಹಳೆಯ ಮಾದರಿಯ ದೊಡ್ಡ ಶಿವಲಿಂಗ ಇದೆ. ಮುಂದೆ ನಾಲ್ಕು ಕಂಬದ ಮಂಟಪ ಇದ್ದು ಅದೆಲ್ಲ ಬಿದ್ದು ಹೋಗಿದೆ. ಹಾವಿನಹಾಳ ಕಲ್ಲಯ್ಯ ಪೂಜಿಸಿದ ಕಲ್ಲಿನಾಥನ ಗುಡಿ ಇದು. ಹಾವಿನ್ಹಾಳ, ರಾಜಾಪುರ, ದೇವಾಪುರ, ಆಲ್ದಾಳ ಇವು ನಾಲ್ಕೂ ಒಂದಕ್ಕೊಂದು ಹತ್ತಿರದ ಊರುಗಳು. ಇಲ್ಲಿ ಒಂದು ಹಿರಿಹಳ್ಳ ಹರಿದಿದೆ. ಈ ಕಲ್ಲಿನಾಥ ಗುಡಿ ದೇವಾಪುರ ಸೀಮೆಯಲ್ಲಿದೆ. ಈ ಗುಡಿಗೆ



ಹಾವಿನಹಾಳ ಕಲ್ಲಿನಾಥನ ಗುಡಿ



ಹಾವಿನಹಾಳ ಕಲ್ಲಿನಾಥನ ಗುಡಿ, ಗರ್ಭಗೃಹದ ಎದುರಿನ ಮಂಟಪ

ಈಗ ನಿಯಮಿತವಾದ ಪೂಜೆ ನಡೆಯುವುದಿಲ್ಲ. ಯಾರೂ ಪೂಜಾರಿಗಳೇ ಇಲ್ಲ. ಆಲ್ದಾಳ ಗ್ರಾಮದ ಪೂಜಾರಿ ಆಗಾಗ ಬಂದು ಪೂಜೆ ಮಾಡುತ್ತಾರೆನ್ನುತ್ತಾರೆ.

ಹಾವಿನಹಾಳ ಗ್ರಾಮದಲ್ಲಿ ಶಿವನಯ್ಯ ಸೋಮವ್ವೆ ಎಂಬ ಶಿವಭಕ್ತರಿದ್ದರು. ಇವರು ಅಕ್ಕಸಾಲಿ ಕೆಲಸವನ್ನು ಮಾಡುತ್ತಿದ್ದರು. ಬಹಳ ದಿನ ಮಕ್ಕಳು ಆಗದೇ ಹೋದಾಗ ಊರಿನ ದೇವತೆ ಕಲ್ಲಿನಾಥನನ್ನು ಪ್ರಾರ್ಥಿಸಿ ಮಗನನ್ನು ಪಡೆದರು. ಕಲ್ಲಿನಾಥನ ವರಪ್ರಸಾದದಿಂದ ಹುಟ್ಟಿದ ಮಗುವಿಗೆ ಕಲ್ಲಯ್ಯನೆಂದೇ ಹೆಸರನ್ನಿಟ್ಟರು. ಆ ಭಕ್ತಿಯ ಪ್ರಭಾವ ಪರಿಣಾಮ ಕಲ್ಲಯ್ಯನ ಮೇಲೆ ಆಯಿತು. ಸಹಜವಾಗಿ ಕಲ್ಲಿನಾಥನೇ ಕಲ್ಲಯ್ಯನ ಆರಾಧ್ಯದೈವನಾಗುತ್ತಾನೆ.

ತಾಯಿ-ತಂದೆಯಂತೆ ಪರಮಭಕ್ತನಾದ ಈತನು ನಿತ್ಯವೂ ಶಿವನಿಗೆ ಪುಷ್ಪ ಅರ್ಪಿಸುವ ನೇಮವನ್ನು ಪಾಲಿಸಿಕೊಂಡು ಬಂದವನು. ಒಂದು ಸಾರೆ ಹೂವು ಸಿಗದೇ ಹೋದಾಗ ತನ್ನ ತಲೆಯನ್ನೇ ಶಿವನಿಗೆ ಅರ್ಪಿಸಲು ಮುಂದಾಗಿ ಶಿವನನ್ನು ಒಲಿಸಿಕೊಂಡವನು.

ಹಾವಿನಹಾಳ ಹಾವುಗಳಿಂದ ತುಂಬಿದ ಊರು. ಜನರಿಗೆ ಇದೊಂದು ದೊಡ್ಡ ಉಪದ್ರವವೇ ಸರಿ. ಕಲ್ಲಯ್ಯನೊಂದು ದಿನ ಕಲ್ಲಿನಾಥನ ಗುಡಿಗೆ ಹೋಗಿದ್ದನು. ಜೀವವನ್ನು ಕಳೆದುಕೊಳ್ಳಬೇಕೆಂದು ನಿಶ್ಚಯಸಿದನು. ಹೊಟ್ಟೆಯನ್ನು ಇರಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದನು. ಆದರೆ ಭಕ್ತನನ್ನು ಇಷ್ಟುಬೇಗ ಶಿವ ಬಿಟ್ಟುಕೊಡಬಲ್ಲನೇ? ಅವನ ಮನಸ್ಸಿನ ಆತಂಕಗಳನ್ನು ಪರಿಹರಿಸಿದನು. ಅವನಿಂದ ಇನ್ನೂ ಬೇಕಾದಷ್ಟು ಕೆಲಸವಾಗಬೇಕಿದೆ ಎಂದು ಹೇಳಿ ಜೀವನದಲ್ಲಿ ಉತ್ಸಾಹ ತುಂಬಿದನು.

ರೇವಣಸಿದ್ಧೇಶ್ವರರು ಕೆಲದಿನಗಳ ಮೇಲೆ ಮಗ ರುದ್ರಮುನಿಯೊಂದಿಗೆ ಹಾವಿನ್ಹಾಳಕ್ಕೆ ಬಂದಿದ್ದರು. ಮಗ ರುದ್ರಮುನಿಯಿಂದ ರೇವಣಸಿದ್ಧರು ಕಲ್ಲಯ್ಯ ಅಕ್ಕಸಾಲಿಗನಾದರೂ ಲಿಂಗದೀಕ್ಷೆ ಮಾಡಿಸಿದರು. ಇದರಿಂದಾಗಿ ಕಲ್ಲಯ್ಯನಲ್ಲಿ ಇಮ್ಮಡಿ ಉತ್ಸಾಹ ಮೂಡಿತು. ಅಪಾರ ಜ್ಞಾನವನ್ನು ಓದಿನ ಮೂಲಕ ಸಂಪಾದಿಸಿಕೊಂಡ ಕಲ್ಲಯ್ಯ ಎಂಥವರನ್ನೂ ವಾದದಲ್ಲಿ ನಿಲ್ಲಿಸುವ ಸಾಮರ್ಥ್ಯವುಳ್ಳವನಾಗಿದ್ದನು. ಹೀಗಾಗಿ ಕಲ್ಲಯ್ಯನ ಜ್ಞಾನದ ಬಗ್ಗೆ ಎಲ್ಲೆಡೆ ಪ್ರಸಾರವಾಯಿತು.

ಒಂದು ಸಾರೆ ಕಲ್ಲಯ್ಯನ ಜೀವನದಲ್ಲಿ ಆಶ್ಚರ್ಯಕರವೆನಿಸುವ ಘಟನೆಯೊಂದು ಘಟಿಸಿ ಬಿಟ್ಟಿತು. ವಿಷಜಂತುಗಳು ಮನುಷ್ಯರಿಗೆ ಕಚ್ಚಿದರೆ ಮನುಷ್ಯ ಸಾಯುವುದು ನಿಸರ್ಗ ನೇಮ. ಆದರೆ ಇಲ್ಲಿ ನಡೆದದ್ದೇ ಬೇರೆ. ಹಾವು ಕಲ್ಲಯ್ಯನಿಗೆ ಕಚ್ಚಿ ಕಲ್ಲಯ್ಯ ಬದುಕಿದನು, ಹಾವು ಸತ್ತಿತು. ಕಲ್ಲಯ್ಯ ಅದರ ಮೇಲೆ ಕರುಣೆದೋರಿ ತನ್ನ ಪಾದ ಸ್ಪರ್ಶದಿಂದ ಸತ್ತ ಹಾವನ್ನು ಬದುಕಿಸಿದನು. ಇದು ಊರವರಿಗೆಲ್ಲ ಬೆರಗುಗೊಳಿಸುವ ಸುದ್ದಿ ಆಯಿತು. ಕಲ್ಲಯ್ಯನ ಮಹಿಮೆ ಎಲ್ಲೆಡೆ ಹಬ್ಬಿಹರಡಿತು.

ಮುಂದೆ ಗುರುಗಳಾದ ರುದ್ರಮುನಿಯೊಂದಿಗೆ ರೇವಣಸಿದ್ಧರ ಆದೇಶದಂತೆ ಸೊನ್ನಲಾಪುರದ ಸಿದ್ಧರಾಮೇಶ್ವರ ಹಾಗೂ ಮಲ್ಲಿಕಾರ್ಜುನನ ದರ್ಶನ ಮಾಡಲು ಕಲ್ಲಯ್ಯ ಹೋದನು. ಅಲ್ಲಿಯ ಶಿವಭಕ್ತೆಯಾದ ಶರಣೆಯೊಬ್ಬಳನ್ನು ಮದುವೆ ಆಗಿ ಮಗಳಿಗೆ ಜನ್ಮಕೊಟ್ಟನು. ಆ ಮಗಳಿಗೆ ಕಲ್ಲವ್ವೆ ಎಂದು ಹೆಸರಿಟ್ಟರು. ಅಪ್ಪನಂತೆ ಮಗಳು ಕೂಡ ಶಿವಭಕ್ತೆ. ಆಕೆ ದಿನವೂ ನದಿಯಿಂದ ಶಿವಪೂಜೆಗೆ, ಲಿಂಗಪೂಜೆಗೆ



ಹಾವಿನಹಾಳ ಕಲ್ಲಯ್ಯನ ಗುಡಿಯ ಗರ್ಭಗೃಹದ ಶಿವಲಿಂಗ



ಹಾವಿನಹಾಳ ಕಲ್ಲಯ್ಯನ ಗುಡಿಯ ಗರ್ಭಗೃಹದ ಬಾಗಿಲು

ನೀರು ತರುವ ನೇಮವನ್ನು ಪರಿಪಾಲಿಸಿಕೊಂಡು ಬಂದಿದ್ದಳು. ಆದರೆ ಒಂದು ಸಾರೆ ಒಬ್ಬ ಬ್ರಾಹ್ಮಣ ತನ್ನನ್ನು ಮುಟ್ಟಿದುದಕ್ಕಾಗಿ ನೀರಿನ ಹರವಿಯನ್ನು ಅಲ್ಲಿಯೆ ಒಗೆದು ಒಡೆದುಬಿಟ್ಟಳು. ಮತ್ತೊಂದು ಹರವಿಯನ್ನು ತಗೆದುಕೊಂಡು ನೀರನ್ನು ಒಯ್ದಳು. ಶೀಲವಂತರಾದ ಬ್ರಾಹ್ಮಣರು ಇದರಿಂದ ಸಿಟ್ಟಿಗೆ ಬಂದು, ಕಲ್ಲಯ್ಯನ ಜೊತೆ ತಮ್ಮ ಮಡಿವಂತಿಕೆಯ ನೇಮದ ಬಗ್ಗೆ ವಾದ ಬೆಳೆಸಿದರು. ಕಲ್ಲಯ್ಯ ತನ್ನ ಮನೆಯ ನಾಯಿಯಿಂದ ವೇದವನ್ನು ಓದಿಸಿ, ಬಂದವರ ಗರ್ವವನ್ನು ಮುರಿದನೆಂಬ ಸಂಗತಿ ಉಳಿದುಕೊಂಡು ಬಂದಿದೆ.

ಸಿದ್ಧರಾಮನ ಆಪ್ತ ಬಳಗದಲ್ಲಿ ಕಲ್ಲಯ್ಯನಿಗೆ ವಿಶೇಷ ಸ್ಥಾನವಿತ್ತೆಂದು ಹೇಳಲಾಗುತ್ತದೆ.

**ವಚನಗಳು : ೧೦೨**

**ವಚನಾಂಕಿತ : ಮಹಾಲಿಂಗ ಕಲ್ಲೇಶ್ವರಾ**

**ನೋಡಿ : ಹಾವಿನಹಾಳ-೨, ತಾ. ಇಂಡಿ, ಜಿ. ಬಿಜಾಪೂರ**

***

## ಸುರಪುರ ತಾಲೂಕು :

# ೫. ಕಕ್ಕೇರಾ :
# ಡೋಹರ ಕಕ್ಕಯ್ಯನವರ ಗುಡಿ

ಯಾದಗೀರ ಜಿಲ್ಲೆಯ ಸುರಪೂರ ತಾಲೂಕಿನ ಕಕ್ಕೇರಾ ಅಥವಾ ಕಕ್ಕೇರಿ ಒಂದು ಪುರಾತನ ಗ್ರಾಮ. ಸುರಪುರದಿಂದ ತಿಂಥಿಣಿ ಸಮೀಪ ಕೃಷ್ಣಾ ನದಿಗೆ ಕಟ್ಟಿರುವ ಸೇತುವೆಗಿಂತ ಮುಂಚೆ, ಶಾಂತಪುರ ಎಂಬ ಊರು ಹತ್ತುತ್ತದೆ. ಅಲ್ಲಿಂದ ಎಂಟು ಕಿ.ಮೀ. ದಕ್ಷಿಣಕ್ಕೆ ಕಕ್ಕೇರಾ ಗ್ರಾಮವಿದೆ. ಈಗ ಕಕ್ಕೇರಾ ಸುಮಾರು ೩೫ ಸಾವಿರ ಜನಸಂಖ್ಯೆವುಳ್ಳ ದೊಡ್ಡ ಗ್ರಾಮ. ಈ ಗ್ರಾಮದಲ್ಲಿ ಚಾಲುಕ್ಯರ ಕಾಲದ ಒಂದು ಸೋಮೇಶ್ವರ ದೇವಾಲಯವಿದೆ. ಆಗಿನ ಕಾಲದ ಅನೇಕ ಶಿಲಾಶಾಸನಗಳೂ



ಡೋಹರ ಕಕ್ಕಯ್ಯನವರ ಗುಡಿ




ಡೋಹರ ಕಕ್ಕಯ್ಯನವರ ಗುಡಿಯ ಗರ್ಭಗೃಹದ ಮುಂದಿನ ಮಂಟಪ

ಇವೆ. ಹೀಗೆ ಪುರಾತನ ಸಂಗತಿಗಳಿಂದ ತುಂಬಿರುವ ಈ ಊರಿನಲ್ಲಿ ಡೋಹರ ಕಕ್ಕಯ್ಯನ ಒಂದು ಸ್ಮಾರಕವೂ ಇದೆ. ಇದನ್ನು ಕಕ್ಕಯ್ಯನ ಗುಡಿ ಎಂದು ಕರೆಯುತ್ತಾರೆ. ಕಲಾತ್ಮಕವಾಗಿ ಕೆತ್ತಿರುವ ಕಂಬಗಳುಳ್ಳ ಗುಡಿಯ ಮಂಟಪ ಗಮನಸೆಳೆಯುತ್ತದೆ. ಗರ್ಭಗೃಹದಲ್ಲಿ ಒಂದು ಹಳೆಯ ಮಾದರಿಯ ಶಿವಲಿಂಗವಿದೆ. ಇದನ್ನು ಜನ ಭಕ್ತಿಯಿಂದ ಪೂಜಿಸುತ್ತಾರೆ.

'ಕಕ್ಕಯ್ಯನ ಕೇರಿ' ಕಕ್ಕೇರಿ ಆಗಿದೆ ಎಂದು ಹೇಳಲಾಗುತ್ತದೆ. ಆ ಮೊದಲು ಈ ಊರಿಗೆ ಯಾವ ಹೆಸರಿತ್ತು ಎಂದು ಗೊತ್ತಾಗುವುದಿಲ್ಲ. ಕಕ್ಕಯ್ಯನವರು ಮಾಳವದೇಶದಿಂದ ಬಂದು ಕಲ್ಯಾಣದಲ್ಲಿ ಇದ್ದವರು. ಇವರಿಗೆ ಸಂಬಂಧಿಸಿದ ತೊಗಲು ಹದಮಾಡುವ ಮೂರು ಮಂತಣಿಗಳು ತೊಗಲೂರು (ಬಸವಕಲ್ಯಾಣ ತಾ.) ಎಂಬ ಗ್ರಾಮದಲ್ಲಿ ದೊರಕಿವೆ. ಕಲ್ಯಾಣದಲ್ಲಿ ಕ್ರಾಂತಿ ಆವರಿಸಿಕೊಂಡಾಗ, ವೀರನಾಗಿ ಹೋರಾಡಿದವರಲ್ಲಿ ಕಕ್ಕಯ್ಯನವರೂ ಒಬ್ಬರು. ಅವರು ಒಂದು ಶರಣರ ಗುಂಪನ್ನು ಸಂರಕ್ಷಿಸುತ್ತ, ವಚನಗಳ ಕಟ್ಟುಗಳನ್ನು ಹೊತ್ತು ಬರುವಾಗ ಈ ಗ್ರಾಮದ ಸಮೀಪ ಇರುವ ಕಾಡಿನಲ್ಲಿ ವೈರಿಗಳ ಜೊತೆಗೆ ಹೋರಾಡುತ್ತ ಹುತಾತ್ಮರಾದರು. ಅಲ್ಲಿಯೇ ಇಂದು ಕಕ್ಕಯ್ಯನ ಸ್ಮಾರಕ ನಿರ್ಮಾಣವಾಗಿದೆ ಎಂದು ಹೇಳಲಾಗುತ್ತದೆ.




ಡೋಹರ ಕಕ್ಕಯ್ಯನವರ ಗುಡಿಯ ಗರ್ಭಗೃಹದಲ್ಲಿರುವ ಶಿವಲಿಂಗ

ತೀರ ಹಳೆಗಾಲದ ಗುಡಿ ಇದಾಗಿರುವುದರಿಂದ ಖಾಯಮ ಆಗಿ ಇಲ್ಲಿ ಯಾರೂ ಪೂಜಾರಿಕಿ ಮಾಡುವುದಿಲ್ಲ. ಮೊದಲು ಹೂಗಾರ ಸಮಾಜದವರು ಪೂಜೆ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಈ ಊರಿನಲ್ಲಿ ಹಳೆಯ ಸ್ಥಳಗಳಲ್ಲಿ ಸಂಪತ್ತು ಇತ್ಯಾದಿಗಳು ದೊರೆಯುತ್ತವೆಂಬ ನಂಬುಗೆ ಇರುವುದರಿಂದ ಇಂತಹ ಸ್ಥಳಗಳಲ್ಲಿ ನಿರಂತರವಾಗಿ ಸಂಪರ್ಕ ಹೊಂದಲು ಒಬ್ಬರಿಗೇ ಬಿಡುತ್ತಿಲ್ಲವೆಂದು ಗೊತ್ತಾಗುತ್ತದೆ. ಹೀಗಾಗಿ ಹೂಗಾರ ಸಮಾಜದವರು ಪೂಜಾರಿಕೆಯನ್ನು ಬಿಟ್ಟುಬಿಟ್ಟಿದ್ದಾರೆ.

ಆದರೆ ಈಗಲೂ ಪ್ರತಿವರ್ಷ ಶಿವರಾತ್ರಿಯ ಹಿಂದಿನ ದಿನ ಕಕ್ಕಯ್ಯನ ಗುಡಿಗೆ ಸುಣ್ಣಬಣ್ಣ ಬಳಿಯುತ್ತಾರೆ. ಶಿವರಾತ್ರಿ ದಿನ ದೀಪೋತ್ಸವ ಮಾಡುತ್ತಾರೆ. ಭಜನೆ, ಜಾಗರಣೆ ಮಾಡುತ್ತಾರೆ. ಹಬ್ಬಹುಣ್ಣಿಮೆಗೆ ನೈವೇದ್ಯ ಅರ್ಪಿಸುತ್ತಾರೆ. ರಜಪೂತ ಸಮಾಜಕ್ಕೆ ಸೇರಿದ ಲಕ್ಷ್ಮಣ ಎನ್ನುವವರು ಕಕ್ಕಯ್ಯನ ಭಕ್ತರಾಗಿದ್ದು, ಅವರು ಬದುಕಿರುವವರೆಗೆ ಶ್ರಾವಣ ಮಾಸದಲ್ಲಿ ಭಜನೆ, ಕೊನೆಗೆ ಖಾಂಡ, ದಿನನಿತ್ಯವೂ ಪೂಜೆ ಇವೆಲ್ಲ ನಡೆಯುತ್ತಿದ್ದವಂತೆ.

ಕಕ್ಕಯ್ಯನ ಮಂದಿರ ಇರುವ ಸ್ಥಳ ಊರ ಹೊರಗೆ ಇತ್ತಂತೆ. ಈಗ ಊರು ಬೆಳೆದು ಗುಡಿ ಊರಿನಲ್ಲಿ ಆಗಿದೆ. ಈ ಗುಡಿಗಾಗಿ ಗಾಣಿಗರ ಸಮಾಜಕ್ಕೆ ಸೇರಿದ ಮನೆತನವೊಂದು ನಾಲ್ಕು ಎಕರೆಯಷ್ಟು ಜಮೀನನ್ನು ಕೊಟ್ಟಿದ್ದರಂತೆ. ಈ ಮನೆತನಕ್ಕೆ

ಸಂಬಂಧಿಸಿದವರ ಮನೆಯ ಸ್ಥಳವೂ ಕಕ್ಕಯ್ಯನವರ ಗುಡಿಯ ಎದುರಿನಲ್ಲಿಯೇ ಇದೆ. ಈಗ ಮನೆಯೆಲ್ಲ ಬಿದ್ದು ಹೋಗಿ ಖಾಲಿಸ್ಥಳ ಮಾತ್ರ ಇದೆ. ಈ ಮನೆತನಕ್ಕೆ ಸಂಬಂಧಿಸಿದ ಒಬ್ಬ ಹಿರಿಯ ಹೆಣ್ಣುಮಗಳು ಮಾತ್ರ ಈಗ ಉಳಿದಿದ್ದಾಳೆ.

ಕಕ್ಕಯ್ಯನ ಗುಡಿ ಪೂರ್ವಕ್ಕೆ ಮುಖಮಾಡಿಕೊಂಡಿದೆ. ಗುಡಿಯ ಹಿಂದೆ ಆಗ್ನೇಯ ದಿಕ್ಕಿಗೆ 'ಕಕ್ಕಯ್ಯನ ಬಾವಿ' ಎಂದು ಕರೆಯುವ ಒಂದು ಬಾವಿ ಇದೆ. ಈಗ ಅದೆಲ್ಲ ಕಸಕಡ್ಡಿಯಿಂದ ತುಂಬಿ ಹೋಗಿದೆ. ಆದರೆ ಇದು ಬಹುದೊಡ್ಡ ಬಾವಿಯಾಗಿತ್ತು, ಸುತ್ತಲೂ ಸುಂದರವಾದ ಕಲ್ಲಿನ ಗೋಡೆಯೂ ಇತ್ತು ಎಂದು ನೋಡಿದವರು ಹೇಳುತ್ತಾರೆ.

ವಚನಗಳು : ೬

ವಚನಾಂಕಿತ : ಅಭಿನವ ಮಲ್ಲಿಕಾರ್ಜುನಾ

ಮಾಹಿತಿ : ನಂದಣ್ಣ ನಾಯಕ ದೇಸಾಯಿ, ಗವಿಸಿದ್ದಪ್ಪ ಹೊಗರಿ, ರಹೀಮ ಹವಾಲ್ದಾರ.

***




ಹಾಳುಬಿದ್ದಿರುವ ಕಕ್ಕಯ್ಯನವರ ಬಾವಿ

## ಯಾದಗೀರ ತಾಲೂಕು :

### ಏಲೇರಿ :

### ಏಲೇಶ ಕೇತಯ್ಯ

ಯಾದಗಿರಿಯಿಂದ ಆಗ್ನೆಯಕ್ಕೆ ೨೩ ಕಿ.ಮೀ ಅಂತರದಲ್ಲಿ ಎಲೇರಿ ಎಂಬ ಊರಿದೆ. ಈ ಊರಿನವನು ಕೇತಯ್ಯ. ಊರಿನ ದೈವ ಏಲೇಶ್ವರ. ಏಲೇರಿಯಲ್ಲಿ ಕುಂಬಾರಗಲ್ಲಿಯೆಂದೇ ಪ್ರಸಿದ್ಧವಾದ ಸ್ಥಳದಲ್ಲಿ ಏಲೇಶ್ವರ ಮಂದಿರ ಇದೆ. ತೀರ ಜೀರ್ಣಾವಸ್ಥೆಯಲ್ಲಿರುವ ಈ ಮಂದಿರದ ರಚನೆ ಚಾಲುಕ್ಯರ ಕಾಲದ್ದಿರಬೇಕೆನಿಸುತ್ತದೆ. ಆ ಗುಡಿಯ ಪಶ್ಚಿಮಕ್ಕೆ ಕೇತಯ್ಯನ ಹೆಸರಿಗೆ ಒಂದು ಸಣ್ಣ ಮಂದಿರ ಇದೆ. ಈಗ ಸುಮಾರು ೫೦ ವರ್ಷಗಳ ಹಿಂದೆ ಕೇತಯ್ಯನ ಮಂದಿರ ನೋಡಿದವರು ಇದ್ದಾರೆ. ತುಂಬಾ ದೊಡ್ಡದಾದ, ಕಲ್ಲು ಕಂಬಗಳಿಂದ ಕೂಡಿದ, ಕಲ್ಲು ಚಪ್ಪಡಿಗಳಿಂದ ಹೊದಿಸಿದ ಕೇತಯ್ಯನ ಗುಡಿ, ನಂತರ ಶಿಥಿಲಗೊಂಡು ಬಿದ್ದಿತಂತೆ. ಏಲೇಶ್ವರ ಮಂದಿರದ ಕಲ್ಲುಗಳನ್ನು ಮತ್ತು ಕೇತಯ್ಯನ ಗುಡಿಯ ಕಲ್ಲುಗಳನ್ನು ಯಾರ್‍ಯಾರೋ ಬೇಕಾದ ಹಾಗೆ ಒಯ್ದಿದ್ದಾರೆ. ಇಲ್ಲಿಯ ಕಲ್ಲುಗಳನ್ನೇ ಬಳಸಿಕೊಂಡು ಎಲ್ಲಮ್ಮನ ಗುಡಿಯೊಂದನ್ನು ಕಟ್ಟಲಾಗಿದೆ. ಈಗ ಕೇತಯ್ಯನ ಹೆಸರಿಗೆ ಉಳಿದಿರುವ ಸಣ್ಣ ಗುಡಿಯ ಮುಂದೆ ಸುಮಾರು ೧೦೦ x ೧೦೦ ಅಡಿ ಅಗಲದ ಅಂಗಣ ಇದೆ. ಸರ್ಕಾರ ಈ ಅಂಗಳದಲ್ಲಿಯೇ ಅಂಗನವಾಡಿ ಕೇಂದ್ರ್ರದ ಕಟ್ಟಡವನ್ನು ಕಟ್ಟಿದೆ.

ಈ ಎರಡೂ ಗುಡಿಗಳು ಕುಂಬಾರಗಲ್ಲಿಯಲ್ಲಿರುವುದರಿಂದ ಇವುಗಳನ್ನು ಕುಂಬಾರ ಗುಡಿಗಳೆಂದೆ ಹೇಳಲಾಗುತ್ತದೆ. ಪೂರ್ವದಲ್ಲಿ, ಸುಮಾರು ೨೦೦ ವರ್ಷಗಳ ಹಿಂದೆ ವೈಭವದಿಂದ ಜಾತ್ರೆಯೂ ನಡೆಯುತಿತ್ತಂತೆ. ರಥ ಹೋಗಿ ಮುಟ್ಟುವ ಪಾದಗಟ್ಟೆಯನ್ನು ಜನ ತೋರಿಸುತ್ತಾರೆ. ಕುಂಬಾರರೆಲ್ಲ ಒಬ್ಬೊಬ್ಬರಾಗಿ ಮನೆಗಳನ್ನು ಮಾರಿ ಬೇರೆಡೆ ಹೋಗಿದ್ದಾರೆ. ಈಗ ಸುತ್ತಲೂ ಕಬ್ಬಲಿಗ ಜನಾಂಗ ವಾಸವಾಗಿದ್ದಾರೆ. ತಾವು ಮಾಂಸ ಇತ್ಯಾದಿ ಸೇವಿಸುವುದರಿಂದ – ಗುಡಿಯನ್ನು ಮುಟ್ಟುವದಿಲ್ಲ ಎಂದೂ ಆಗಾಗ ಮಡಿಯಿಂದ ಪೂಜೆಮಾಡುವುದಾಗಿಯೂ ಈ ಜನಾಂಗದ ಹಿರಿಯರು ಹೇಳುತ್ತಾರೆ. ಆದರೆ ತಮಗೆ ಯಾವುದೇ ಕೇಡು ಆಗಿಲ್ಲ ಎಂಬುದನ್ನು ಅತ್ಯಂತ ನಿಷ್ಠೆಯಿಂದ ಹೇಳಿಕೊಳ್ಳುತ್ತಾರೆ. ಏಲೇಶ್ವರ ಗುಡಿಯ ಹಿಂದೆ ದಕ್ಷಿಣಕ್ಕೆ ಒಂದು ಬಾವಿ ಇದೆ. ಅದು ಕೇತಯ್ಯ ಬಳಸಿದ ಬಾವಿ ಎನ್ನುತ್ತಾರೆ. ಆ ನೀರನ್ನು ಊರವರು



ಸಂಪೂರ್ಣವಾಗಿ ನಾಶವಾಗಿರುವ ಏಲೇಶ್ವರ ಮಂದಿರ

ಬಳಸುತ್ತಿದ್ದರು. ಈಗ ಊರಿಗೆ ನೀರಿನ ವ್ಯವಸ್ಥೆ ಆದುದರಿಂದ ಬಾವಿಯ ನೀರು ಬಳಸದೆ ನೀರು ಬತ್ತಿ ಹೋಗಿದೆ.

ಊರವರೆಲ್ಲ ಮುಂಚೆ ಶ್ರಾವಣ ಮಾಸದಲ್ಲಿ ಭಜನೆ ಮಾಡುತ್ತಿದ್ದರಂತೆ. ಕೊನೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಖಾಂಡ ಕೂಡ ಮಾಡುತ್ತಿದ್ದರು ಎಂದು ತಿಳಿದುಬರುತ್ತದೆ. ಈಗ ಎರಡು ವರ್ಷಗಳಿಂದ ಈ ಯಾವ ಕ್ರಮಗಳೂ ನಡೆಯುತ್ತಿಲ್ಲ. ಎಲ್ಲವೂ ನಿಂತು ಹೋಗಿವೆ ಎನ್ನುತ್ತಾರೆ.

ಏಲೇಶ್ವರದಿಂದ ಉತ್ತರಕ್ಕೆ ೨೦ ಕಿ.ಮೀ ಅಂತರದಲ್ಲಿ ಗಾಜರಕೋಟ ಎಂಬ ಗ್ರಾಮ ಇದೆ. ಕೇತಯ್ಯನ ಮಡದಿ ಸಾಯವ್ವನ ತವರುಮನೆ ಗಾಜರಕೋಟ ಎಂದು ಹೇಳಲಾಗುತ್ತದೆ. ಆ ಊರು ಕೂಡ ತುಂಬಾ ಪುರಾತನವಾಗಿದೆ. ಆದರೆ ಅಲ್ಲಿ ಸಾಯವ್ವಳ ಸ್ಮಾರಕಗಳೇನೂ ಇಲ್ಲ.

ಕೇತಯ್ಯ-ಸಾಯಿದೇವಿ ಅವರಿಗೆ ಶಿವಣ್ಣ ಎಂಬ ಮಗ, ಶಿವಕ್ಕ ಎಂಬ ಮಗಳು ಇದ್ದರು. ಲಿಂಗ ತತ್ವದ ಹಾಡು ಹಾಡುತ್ತ ಲಿಂಗಪೂಜೆ ಮಾಡುತ್ತ ಲಿಂಗದಲ್ಲಿ ಅತಿ ನಿಷ್ಠೆಯುಳ್ಳವರಾಗಿದ್ದರು. ಸ್ಥಾವರ ಉಪಾಸನೆ, ಆಚರಣೆಯ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಿದ್ದರು. ಶೈವ ಸಂಪ್ರದಾಯದಿಂದ ದೂರ ಇದ್ದರು. ಇವರ ಕಾಯಕ ಕೃಷಿ ಆಗಿತ್ತು. ಕೃಷಿ ಸಾಗುವಳಿ ಭೂಮಿಗೆ, ಮನೆಯ ದನ ಕರುಗಳಿಗೆ ಲಿಂಗಮುದ್ರೆ ಹಾಕಿದ್ದರು. ಭೂಮಿಯಲ್ಲಿ ಬಿತ್ತುವ ಬೀಜವಿರಲಿ, ದನಕರುಗಳಿಗೆ ಹಾಕುವ ಮೇವು

ನೀರು ಇರಲಿ, ತಾವು ನಿತ್ಯ ಸ್ವೀಕರಿಸುವ ಆಹಾರವಿರಲಿ ಎಲ್ಲವನ್ನೂ ಲಿಂಗಕ್ಕೆ ಅರ್ಪಿಸಿಯೆ ಸ್ವೀಕರಿಸುವ, ಬಿತ್ತುವ ರೂಢಿಯನ್ನು ತಪ್ಪದೆ ಪರಿಪಾಲಿಸಿಕೊಂಡು ಬಂದಿದ್ದರು. ಈ ಕುಟುಂಬದ ಅತ್ಯುಗ್ರವಾದ ಈ ನಿಯಮವನ್ನು ಶೈವ ಸಂಪ್ರದಾಯಸ್ತರಿಗೆ ಸಹಿಸಿಕೊಳ್ಳಲು ಆಗಲಿಲ್ಲ. ಇವರ ಭಕ್ತಿ ನಿಷ್ಠೆಯ ಮೇಲೆ ಸೇಡು ತೀರಿಸಿಕೊಳ್ಳಲು ಹೊಂಚು ಹಾಕಿದ್ದರು.

ಬಿತ್ತುವ ಕಾಲವನ್ನು ಗಮನದಲ್ಲಿಟ್ಟುಕೊಂಡು, ಕೇತಯ್ಯ ಬಿತ್ತಲು ಇಟ್ಟಿದ್ದ ಗೋದಿ, ಕಡಲೆ, ಜೋಳದ ಬೀಜಗಳನ್ನು ಸುಟ್ಟುಹಾಕಲು ಹೇಳಿದರು. ಕುಟುಂಬದವರು ಮನೆಯಲ್ಲಿ ಇಲ್ಲದ ಸಮಯ ಸಾಧಿಸಿ ಕೇಡಿಗಳು ಹಾಗೆ ಮಾಡಿದರು. ಇದರಿಂದ ಕೇತಯ್ಯನಿಗೆ ನಷ್ಟವೇನೂ ಆಗಲಿಲ್ಲ. 'ಇದಕಾರಂಜುವರು ಇದಕಾರಳಕುವರು' ಎಂಬ ವೀರಭಾವವು ಅವರಲ್ಲಿ ಜಾಗ್ರತವಾಗುತ್ತದೆ. ಹೀಗಾಗಿ ನಡೆದು ಹೋದ ಘಟನೆಗೆ ಮರುಗಲಿಲ್ಲ. ಹೇಗೆ ಎಂದು ಚಿಂತಿಸಲಿಲ್ಲ. ಆ ಸುಟ್ಟ ಬೀಜಗಳನ್ನೇ ಶಿವಾರ್ಪಿತ ಮಾಡಿ ಬಿತ್ತಿದರು. ಎಂದಿಗಿಂತ ಚೆನ್ನಾಗಿಯೆ ಬೆಳೆ ಬಂದಿತು. ವಿರೋಧಿಗಳಿಗೆ, ಊರವರಿಗೆ ಆಶ್ಚರ್ಯವಾಯಿತು. ಕುತಂತ್ರಿಗಳಿಗೆ ನಡುಕ ಹುಟ್ಟಿತು. ತಮ್ಮ ತಂತ್ರ ವಿಫಲವಾದುದಕ್ಕೆ ನಾಚಿ ತಲೆ ತಗ್ಗಿಸಿದರು. ಆದರೂ ಅಸೂಯೆ ಹೊಗೆಯಾಡುತ್ತಲೆ ಇತ್ತು. ಮತ್ತೊಂದು ಉಪಾಯ ಮಾಡುತ್ತಾರೆ. ಕೇತಯ್ಯನ ಮನೆಯ ದನಗಳನ್ನೆಲ್ಲ ಕದ್ದೊಯ್ಯುವಂತೆ ಹೇಳುತ್ತಾರೆ. ಕಳ್ಳರು ಕೇತಯ್ಯನ ಮನೆಯಲ್ಲಿ ಯಾರೂ ಇಲ್ಲದಾಗ ದನಗಳನ್ನು ಕದ್ದೊಯ್ಯುತ್ತಾರೆ. ಆದರೆ ಅಲ್ಲಿಯೂ ಅವರಿಗೊಂದು ಆಶ್ಚರ್ಯ ಕಾದಿತ್ತು. ದನಗಳು ಭವಿಗಳ ಮನೆಯ ನೀರು, ಮೇವನ್ನು ಮುಟ್ಟಲಿಲ್ಲ. ಏಳುದಿನಗಳ ಪರ್ಯಂತ ಉಪವಾಸ ಮಾಡಿದವು. ಆಗ ಕಳ್ಳರಿಗೆ ಕನಿಕರ ಹುಟ್ಟುತ್ತದೆ. ಕಳ್ಳತನ ಮಾಡುವಾಗ ಕಾಡದ ಪಾಪ ಪ್ರಜ್ಞೆ ಈಗ ಕಾಡಲು ಪ್ರಾರಂಭಿಸುತ್ತದೆ. ಮೂಕ ಪಶುಗಳನ್ನು ಉಪವಾಸ ಕೊಂದ ಪಾಪ ತಮ್ಮನ್ನು ತಟ್ಟದೆಬಿಡದು ಎಂದುಕೊಂಡು, ಕೇತಯ್ಯನ ಹೊಲದತ್ತ ದನಗಳನ್ನು ಅಟ್ಟುತ್ತಾರೆ. ಕೇತಯ್ಯನಿಗೆ ಅಷ್ಟೆ ಅಲ್ಲ ದನ ಕರುಗಳಿಗೂ ಅವುಗಳ ಮೇಲೆ ಸಂದೇಹವಿರುತ್ತದೆ. ಕರುಗಳಿಗೆ ಮತ್ತು ಕೇತಯ್ಯನಿಗೆ ಮುತ್ತಿದ ಅನುಮಾನವನ್ನು ದೂರಮಾಡುವುದಕ್ಕೋಸ್ಕರ ಸತ್ಯ ತಿಳಿದ ಊರವರು, ಹತ್ತಿರದ ಬಣಿವೆಯ ಮೇವನ್ನು ತಂದು ಹಾಕುತ್ತಾರೆ. ದನಗಳು ಆ ಮೇವನ್ನು ಮುಟ್ಟುವುದಿಲ್ಲ. ಅವುಗಳ ನಿಷ್ಠೆಯನ್ನು ಕಂಡು ಕೇತಯ್ಯ ಹರ್ಷಿತನಾಗುತ್ತಾನೆ. ಕರುಗಳಿಗೆ ಹಾಲು ಕುಡಿಯಲು ಹೇಳುತ್ತಾನೆ.

ಇಷ್ಟಕ್ಕೂ ದ್ವೇಷ ಹಿಂಗಿಸಿಕೊಳ್ಳದ ವಿರೋಧಿಗಳು ಇವನ ಶಿವಭಕ್ತಿಯ ಏಕನಿಷ್ಠೆ ಏನು ಮಾಡಿದರೂ ಕಡಿಮೆ ಆಗುತ್ತಿಲ್ಲ. ಅವನನ್ನೆ ಕೊಂದು ಹಾಕಬೇಕು ಎಂದು ನಿರ್ಣಯಿಸಿ ಅವನ ಮನೆಯ ಮೇಲೆ ಮುತ್ತಿಗೆ ಹಾಕುತ್ತಾರೆ. ಆಗಲೂ ಕೇತಯ್ಯ ಅವರ ವೈರವನ್ನು ತನ್ನ ಪ್ರೀತಿ – ಸಮಾಧಾನದಿಂದ ಗೆಲ್ಲುತ್ತಾನೆ. ಅವರನ್ನು ಕುಳ್ಳಿರಿಸಿಕೊಂಡು ಶೈವ– ಲಿಂಗಾಯತದ ಭೇದವನ್ನು ಲಿಂಗಾಂಗ ಸಂಬಂಧವನ್ನು, ಷಟ್‌ಸ್ಥಲ, ಅಷ್ಟಾವರಣ ಆಚರಣೆಗಳ ಸೂಕ್ಷ್ಮವನ್ನು ವಿವರವಾಗಿ ತಿಳಿಪಡಿಸುತ್ತಾನೆ. ಆಗ ಅವರನ್ನು ಮುತ್ತಿದ ದ್ವೇಷಾಸೂಯೆಗಳು ದೂರ ಆಗುತ್ತವೆ.

ಡಾ। ಎಂ. ಎಂ. ಕಲಬುರ್ಗಿ ಅವರು ಏಲೇಶ ಕೇತಯ್ಯ ಆಂಧ್ರಪ್ರದೇಶದ



ಏಲೇಶ ಕೇತಯ್ಯನ ಸ್ಮಾರಕ

ಏಲೇಶ್ವರದವನೆಂದು ಹೇಳುತ್ತಾರೆ (ಸಮಗ್ರ ವಚನ ಸಂಪುಟ–೬ ಸಂಕೀರ್ಣ ವಚನ ಸಂಪುಟ – ೧, ಪು. xxvi).

ವಚನಗಳು : ೭೪
ವಚನಾಂಕಿತ : 'ಏಲೇಶ್ವರಲಿಂಗ'

***

ಏಲೇರಿ ರೆಮ್ಮವ್ವೆ :

ಯಾದಗಿರ ಜಿಲ್ಲೆಯ ಏಲೇರಿ ಎಂಬ ಗ್ರಾಮದಲ್ಲಿ ಹುಟ್ಟಿದವಳು ರೆಮ್ಮವ್ವೆ. ಇದೇ ಊರಿನ ಏಲೇಶ ಕೇತಯ್ಯ ಮೊದಲಾದ ಶರಣರ ಪ್ರಭಾವಕ್ಕೆ ರೆಮ್ಮವ್ವೆ ಒಳಗಾಗಿರಬೇಕು. ಏಲೇರಿಯಲ್ಲಿ ಏಲೇಶ್ವರ ದೇವಾಲಯವಿದೆ. ಕೃಷಿ ಕಾಯಕವನ್ನು ಮಾಡಿಕೊಂಡಿದ್ದ ಶರಣೆ ಈಕೆ. ವ್ರತದಲ್ಲಿ ಅತ್ಯಂತ ನಿಷ್ಠೆಯನ್ನು ಬೆಳೆಸಿಕೊಂಡಾಕೆ. ತಾನು ಅರಿತ ಅರಿವನ್ನು ಇನ್ನೊಬ್ಬರ ಜೊತೆ ಹಂಚಿಕೊಳ್ಳುವ ವಿಶೇಷ ಗುಣ ಇವಳಲ್ಲಿತ್ತು. ಉತ್ತಮರಾದ ಸಮಶೀಲವಂತರಲ್ಲಿಯೇ ಪ್ರಸಾದ ಸ್ವೀಕರಿಸಬೇಕೆಂಬ ನಿಷ್ಠೆಯನ್ನು ಇಟ್ಟುಕೊಂಡು ಬಂದವಳು ರೆಮ್ಮವ್ವೆ. ಏಲೇಶ್ವರಲಿಂಗ ಅಂಕಿತದಲ್ಲಿ ೨೩ ವಚನಗಳು ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಕಟವಾಗಿವೆ. ಆದರೆ ಏಲೇರಿಯಲ್ಲಿ ರೆಮ್ಮವ್ವೆ ಬಗ್ಗೆ ಈಗ ಯಾವುದೇ ಕುರುಹುಗಳು ದೊರೆಯುತ್ತಿಲ್ಲ. ಅಲ್ಲಿಯ ಜನಗಳಿಗೂ ರೆಮ್ಮವ್ವೆ ಪರಿಚಿತಳಾಗಿಲ್ಲ.

***

## ರಾಯಚೂರು ಜಿಲ್ಲೆಯ ಶರಣ ಸ್ಮಾರಕಗಳು

### ದೇವದುರ್ಗ ತಾಲೂಕು :

### ೧. ಮೊಸರಕಲ್ಲ : ಮುಕ್ತಾಯಕ್ಕನ ಗುಡಿ

ಭಕ್ತಿಸಾಗರ ಮೇಣ್ವಿರಕ್ತಿಯಾ ನೆಲೆವನೆಯು
ಮುಕ್ತಿಯಾ ಕೋಶ ಇವನಂಗದೊಳು। ತಾಳ್ದ
ಮುಕ್ತಾಯಕ್ಕನೆ ಶರಣಾಗು

ಲಕ್ಕುಂಡಿ ಹೊಲ ಬೆಳೆದು ಮುಕ್ತಾಯಿ ಅಜಗಣ್ಣ
ಮಿಕ್ಕ ಶರಣರಿಗೆ ಶಿವ ಮಾತು । ಪ್ರಭುದೇವ
ಹೊಕ್ಕ ಹೊಕ್ಕಲ್ಲಿ ಹೊನ್ನುಗ್ಗಿ

ಬೃಹತ್ತಾದ ಬೆಟ್ಟದ ಕೆಳಗೆ ಮೊಸರಕಲ್ ಎಂಬ ಪುಟ್ಟ ಗ್ರಾಮವಿದೆ. ಮುಕ್ತಾಯಕ್ಕ ವಾಸಿಸುತ್ತಿದ್ದಳೆನ್ನಲಾದ ಗುಡಿಯು ಪೂರ್ವದಿಕ್ಕಿಗೆ ಮುಖಮಾಡಿ ಈ ಊರಿನ ಪಶ್ಚಿಮಕ್ಕೆ ಬೆಟ್ಟದ ಮೇಲೆ ಇದೆ. ಈ ಗುಡಿಯು ಅತ್ಯಂತ ಚಿಕ್ಕದಾಗಿದ್ದು ಗುಡಿಯ ಸುತ್ತಳತೆ ಸುಮಾರು ೨೦ ಅಡಿಗಳಷ್ಟು ಮಾತ್ರ ಎನಿಸುತ್ತದೆ. ದಿನಾಲು ಬೆಟ್ಟ ಹತ್ತಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಸಾಂಕೇತಿಕವಾಗಿ ಈ ಗ್ರಾಮದಲ್ಲಿ ಮುಕ್ತಾಯಕ್ಕನ ಗುಡಿ ಕಟ್ಟಿಕೊಂಡಿದ್ದಾರೆ.

ಐದು ಅಡಿ ಎತ್ತರ ಮತ್ತು ಅದರ ಮೇಲೆ ಎರಡು–ಮೂರು ಕಲ್ಲುಗಳ ಹೇರಿಕೆಯ ಕಟ್ಟಡ ಅದಾಗಿದೆ. ಈ ಊರಿನ ಜನರು ಹೇಳುವ ಹಾಗೆ ಈ ಗುಡ್ಡವೇ ಮೊದಲು ಊರಾಗಿತ್ತೆಂದು ತಿಳಿದು ಬರುತ್ತದೆ. ಇಲ್ಲಿ ಊರಿತ್ತು ಎನ್ನುವುದಕ್ಕೆ ಹಲವಾರು ಕುರುಹುಗಳನ್ನು ಅಲ್ಲಿ ನೋಡಬಹುದಾಗಿದೆ. ಈ ಗುಡ್ಡದ ಮೇಲೆ ಕಟ್ಟಡದ ಅವಶೇಷಗಳು ಸುತ್ತಲೂ ಕಂಡುಬರುತ್ತವೆ. ಈ ಊರಿನವರು ಇದೇ ಗುಡ್ಡದ ಹಿಂದೆ ಪಶ್ಚಿಮಕ್ಕಿರುವ 'ದಿಬ್ಬಮ್ಮನ ಬಾವಿ'ಯಿಂದ ಕುಡಿಯಲು ನೀರು ತರುತ್ತಿದ್ದರಂತೆ. ಈ ಗುಡ್ಡದಲ್ಲಿರುವ ಇನ್ನೊಂದು ವಿಸ್ಮಯಕಾರಿ ಸಂಗತಿಯೆಂದರೆ ಸಿದ್ಧಯ್ಯನ ಗುಡಿಯ ಎದುರಿನಲ್ಲಿರುವ



ಮುಕ್ತಾಯಕ್ಕನ ಸಮಾಧಿ ಗುಡಿ

ಹೊಂಡ. ಈ ಹೊಂಡದಲ್ಲಿ ಈಗಲೂ ನೀರಿರುವುದು ಆಶ್ಚರ್ಯ ಮೂಡಿಸುತ್ತದೆ. ಸುಮಾರು ಎರಡು ಕಿಲೋ ಮೀಟರ್‌ಗಳಷ್ಟು ಸುತ್ತಳತೆ ವ್ಯಾಸ ಹೊಂದಿರುವ ಈ ಬೆಟ್ಟ ಹತ್ತಲು ಕನಿಷ್ಠ ೪೦ ರಿಂದ ೫೦ ನಿಮಿಷ ಸುಮಯ ಬೇಕು. ಇಷ್ಟು ಎತ್ತರವಾದ ಪ್ರದೇಶದವಾದರೂ ಹೊಂಡದಲ್ಲಿ ನೀರಿರುವುದು ಆಶ್ಚರ್ಯವೆನಿಸುತ್ತದೆ.

ಈ ಗುಡ್ಡದಲ್ಲಿ ಕಾಣಬರುವ ಇನ್ನುಳಿದ ವಿಶೇಷ ಅವಶೇಷಗಳೆಂದರೆ ಊರಿನ ಅಗಸಿಬಾಗಿಲು, ವೀರಭದ್ರದೇವರ ಗುಡಿ, ಮಲ್ಲಯ್ಯನ ಗುಡಿ, ಪಾಳುಬಿದ್ದ ಗೋಡೆ ಈ ಮುಂತಾದವುಗಳನ್ನು ನೋಡಬಹುದು. ಹನುಮಂತನ ವಿಗ್ರಹ ಮತ್ತು ಗುಡಿ ಈ ಬೆಟ್ಟದಲ್ಲಿತ್ತೆಂದೆ ಕೆಲವರು ಹೇಳುತ್ತಾರೆ. ಆದರೆ ಪ್ರಸ್ತುತದಲ್ಲಿ ಹನುಮಂತನ ಮೂರ್ತಿಯಾಗಲಿ ಇತರೆ ಯಾವ ಕುರುಹುಗಳಾಗಲಿ ಬೆಟ್ಟದಲ್ಲಿ ಕಾಣಿಸಿಗುವುದಿಲ್ಲ. ದನಕಾಯುವ ಹುಡುಗರು ಈ ಮೂರ್ತಿಯನ್ನು ಹಾಳು ಮಾಡಿದ್ದಾರಂತೆ.

ಮುಕ್ತಾಯಕ್ಕಳ ಗುಡಿಯ ತುಂಬಾ ಹುತ್ತ ತುಂಬಿಕೊಂಡಿತ್ತೆಂದು, ನಂತರ ದನಕಾಯುವ ಹುಡುಗರು ಹುತ್ತಿಗೆ ನೀರು ಹಾಕಲಾಗಿ ಹುತ್ತು ಕರಗಿ ಅಲ್ಲಿ ಮಣ್ಣಿನ ಪ್ರಣತೆ ಮತ್ತು ಪಂಚಾರತಿ ಮುಂತಾದ ಕುರುಹುಗಳು ದೊರಕಿದವೆಂದೂ ಹೇಳುತ್ತಾರೆ. ಈಗಲೂ ಗುಡಿಯ ಕೆಲಭಾಗ ಹುತ್ತಿನಿಂದ ಕೂಡಿಕೊಂಡಿದೆ. ಈ ಹುತ್ತಿನ ಕೆಳಗಡೆ ಹಣವಿದೆ ಎಂಬ ವದಂತಿಯಿಂದೆ. ಅದಕ್ಕಾಗಿ ಅಲ್ಲಿ ಅದನ್ನು ತೋಡಿದ್ದೂ ಉಂಟು.

ಮುಕ್ತಾಯಕ್ಕ ಗಂಡನ ಮನೆಗೆ ಹೋಗುವಾಗ ತನ್ನ ಅಣ್ಣನು ಹೇಳಿಕಳಿಸಿದ

ಕೆಲ ಸೂಚನೆಗಳಲ್ಲಿ ನಂಬಿಗೆಯನ್ನು ಇಟ್ಟಿದ್ದಳು ಎಂಬ ಸಂಗತಿಗಳು ಇಂದಿಗೂ ಜನರ ಮನಸ್ಸಿನಲ್ಲಿ ಮೌಖಿಕವಾಗಿ ಹಾಗೇ ಉಳಿದುಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ. ತನ್ನ ಜೀವಕ್ಕೆ ವಿಪತ್ತು ಬಂದಾಗ ಏನು ಘಟಿಸಬಹುದೆಂದು ಗಂಡನ ಮನೆಗೆ ಹೊರಟ ತಂಗಿ ಮುಕ್ತಾಯಕ್ಕನಿಗೆ ಹೇಳಿಕಳಿಸಿದ್ದನೆಂದು ಜನ ಈಗಲೂ ಹೇಳುತ್ತಾರೆ. ಮುಕ್ತಾಯಕ್ಕನ ವಚನವೊಂದರಲ್ಲೂ ಇಂಥ ಕಳವಳದ ವೇದನೆ ಕಾಣಿಸಿಕೊಳ್ಳುತ್ತದೆ.

೧. ಮುಕ್ತಾಯಕ್ಕ ಮುಡಿಯುವ ಮಲ್ಲಿಗೆ ದಂಡೆ ಮುಡಿಯುವ ಮೊದಲೆ ಬಾಡಿ ಹೋಗುವುದು.

೨. ಮಜ್ಜಿಗೆ ಮಾಡುವಾಗ ಮೊಸರು ಕಲ್ಲಾಗಿ ಬಿಡುವುದು.

೩. ಉಟ್ಟ ಸೀರೆಯ ನಿಲಿಗೆ ತಾನಾಗಿಯೆ ಬಿಚ್ಚಿಕೊಳ್ಳುವುದು.

೪. ಕಟ್ಟಿದ ತುರುಬು ಸಡಿಲಾಗಿ ತಾನೆ ಬಿಚ್ಚಿಕೊಳ್ಳುವುದು.

ಹೀಗಾದಾಗ ಅಣ್ಣನ ಜೀವಕ್ಕೆ ಕುತ್ತು ಬಂದಿದೆ ಎಂದು ತಿಳಿಯಬೇಕೆಂದು ಅಜಗಣ್ಣ ಹೇಳಿದ್ದನಂತೆ. ಹಾಗೆ ಮುಕ್ತಾಯಕ್ಕ ಒಂದು ದಿನ ಮಜ್ಜಿಗೆ ಮಾಡಬೇಕೆಂದು ಹೋದಾಗ ಮೊಸರು ಕಲ್ಲಾಗಿ ಬಿಟ್ಟಿತಂತೆ. ಆಕೆ ತನ್ನ ಅಣ್ಣನ ಜೀವಕ್ಕೆ ತೊಂದರೆಯಾಗಿದೆ ಎಂದು ಶೋಕಿಸುತ್ತ ಅಣ್ಣನಲ್ಲಿಗೆ ಹೋಗುತ್ತಾಳೆ. ಅಂದಿನಿಂದ ಈ ಊರಿಗೆ ಮೊಸರಕಲ್ಲು ಎಂದು ಕರೆಯತೊಡಗಿದರೆಂದು ಹೇಳಲಾಗುತ್ತದೆ.

ಮಜ್ಜಿಗೆ ಮಾಳಮ್ಮ ಎಂಬ ಹೆಸರಿನಿಂದ ಕರೆಯಲ್ಪಡುವ ಮಹಿಳೆಯೊಬ್ಬಳು ಮೊಸರು ಕಡೆಯುವಾಗ, ಮೊಸರೇ ಕಲ್ಲಾದ್ದರಿಂದ ಮಸರಕಲ್ಲು ಮುಕ್ತಾಯಕ್ಕಳಾದಳೆಂಬ ವಂದತಿಯೂ ಇದೆ. ಹೀಗಾಗಿ ಇದು ೧೨ನೇ ಶತಮಾನದ ಶರಣೆ ಮುಕ್ತಾಯಕ್ಕಗಳಿಗೆ ಸಂಬಂಧಿಸಿದ್ದಲ್ಲ ಎಂಬ ಪ್ರತೀತಿಯೂ ಇದೆ.


ಮುಕ್ತಾಯಕ್ಕನ ಘಟನೆ ಸಂಭವಿಸುವ ಪೂರ್ವದಲ್ಲಿ ಈ ಊರಿಗೆ **'ದ್ವಾರಗಿರಿ ಪಟ್ಟಣ'** ಎಂದು ಕರೆಯುತ್ತಿದ್ದರೆಂದು ಈ ಊರಿನ ಹಿರಿಯರಾದ ಶ್ರೀ ಬಸಲಿಂಗಪ್ಪ ಹೂಗಾರ ಅವರು ಹೇಳುತ್ತಾರೆ.

ಪ್ರತಿ ಅಮವಾಸೆಯಂದು ಇಲ್ಲಿ ಪೂಜೆ ನಡೆಯುತ್ತದೆ. ಊರಲ್ಲಿ ಅಜಗಣ್ಣ ಮತ್ತು ಮುಕ್ತಾಯಕ್ಕ ಎಂಬ ಹೆಸರಿನ ಹಲವಾರು ಜನರಿದ್ದಾರೆ.

***

ವಚನಗಳು : ೩೭
ವಚನಾಂಕಿತ : ಅಜಗಣ್ಣ, ಅಜಗಣ್ಣ ತಂದೆ
ಮಾಹಿತಿ : ಶ್ರೀ ಪ್ಯಾಟೆಪ್ಪ ನಾಯಕ, ನಿಂಗಪ್ಪ ಕಟಿಕಾರ, ಬಸಲಿಂಗಪ್ಪ ಹೂಗಾರ

***



ಅಜಗಣ್ಣನ ಗವಿ ಇರುವ ಗುಡ್ಡ

## ಮುಕ್ತಾಯಕ್ಕನ ಹಾಡು

ಹಂತಿಯ ತುಳದೆತ್ತು ಅಂಗಳಕ ಬಂದಾವ
ಸುಂಕ ಜಾಡಸಮ್ಮ ಸೆರಗೀಲೆ । ಮುಕ್ತಾಯಿ
ಕಂಚಿನಾರುತಿ ಬೆಳಗಮ್ಮ ॥ ೧ ॥

ಬಂಡಿಯ ಕಟಬೇಕು ಅಣ್ಣ ಮುಂದಿರಬೇಕು
ಅಣ್ಣ ಅಜಗಣ್ಣನ ದರಸೀಣ । ಮಾಡಿದರೆ
ಮುಕ್ತಿಯ ನಮುಗ ದೊರಿವದು ॥ ೨ ॥

ಅಡಕೆ ಹೂವಿನ ಶಲ್ಯ ಹೆಡಕಿನಮ್ಯಾಲ ಹಾಕ್ಕೊಂಡು
ಚೆಡುಕಿನ ಮ್ಯಾಲ ಬರುತಾನ । ಅಜಗಣ್ಣ
ಹತ್ತೂರು ನ್ಯಾಯ ಹರುದಾನ ॥ ೩ ॥

ಅಡ್ಡಗುಡ್ಡದ ನಡುವ ಒಡ್ಡೀತು ಮಳಿಮಾಡ
ದೊಡ್ಡವರ ಮಗ ಬಸವಣ್ಣ । ಬರುವಾಗ
ಒಡ್ಡಿದು ಮಾಡ ಬಯಲಾಗಿ ॥ ೪ ॥

ಹೊತ್ತ ಮುಣಗಿದರೇನ ಕತ್ತಲಾದರೇನ
ತಾಯಿ ನಿನ್ನಯ ದರಿಸೀಣ । ಮುಕ್ತಾಯಿ
ಶರಣರಿಗಿ ದರಿಶೀಣ ಕೊಡುತಾಯಿ ॥ ೫ ॥

ಏಳುತ್ತ ನೆನುದೇನು ಏಳೆಂಟ ದೇವರ್ನ
ಬಾಳಿಯ ಬನದ ಒಡಿಯನ । ಅಜಗಣ್ಣ
ಏಳುತ್ತ ಮೊದಲ ನೆನುದೇನ ॥ ೬ ॥

ಅಣ್ಣ ಬರ್ತಾನೆಂದು ಹಾದೀಯ ನೋಡಿದೆ
ಐಯ್ಯಯ್ಯೋ ಅಣ್ಣ ಬರಲಿಲ್ಲ । ಅಜಗಣ್ಣ
ಹಾಲು ನಿನಗಾಗಿ ತೆಗದೀನಿ ॥ ೭ ॥

ಅಣ್ಣನ ಕರಿತಾಳ ಮಾತೊಂದು ಕೇಳುತಾಳ
ವಚನ ಕೊಡಣ್ಣ ನನಗೊಂದು । ಅಜಗಣ್ಣ
ಗಂಡನ ಮನೀಗಿ ಹೊಗತೀನಿ ॥ ೮ ॥

ತಂಗಿಯ ಕಳವ್ಯಾನ ತೆವರೇರಿ ನಿಂತಾನ
ಅಂಗೀಲಿ ನೀರ ಒರಸ್ಯಾನ । ಅಣ್ಣಯ್ಯ
ಇಂದಿಗಿ ತವರ ಎರವಂದ ॥ ೯ ॥

ಮುಂಜಾನೆ ಎದ್ದಾಳ ಮೊಸುರಾವ ಕಡದಾಳ
ಕಟ್ಟೀದ ತುರಬು ಸಡಿಲ್ಯಾದ । ಮುಕ್ತಾಯಿ
ಉಟ್ಟಾವ ನಿಲಗಿ ಸಡಿಲ್ಯಾವ । ॥ ೧೦ ॥

ಮುಟ್ಟಿದ ಮೊಸರು ಕಲ್ಲಾಗಿ । ಮುಕ್ತಾಯಿ
ಕಣ್ಣೀರು ಸುರಿದು ಅಳುತಾಳ । ಮುಕ್ತಾಯಿ
ಅಲ್ಲಮ ಪ್ರಭುದೇವ್ರ ಬಂದಾನ ॥ ೧೧ ॥

ಬಂದು ನಿಂತಾನ ಪ್ರಭುದೇವ ಅಲ್ಲಿಗಿ
ಕಣ್ಣೀರು ತೆಗಿವದು ಸರಿಯಲ್ಲ । ಮುಕ್ತಾಯಿ
ಶರಣರ ಕುಲಕ ಸರಿಯಲ್ಲ ॥ ೧೧ ॥

ಶರಣರ ಕುಲಕ ತರವಲ್ಲ ಪ್ರಭುದೇವ
ಅಣ್ಣ ಅಜಗಣ್ಣ ಬಯಲಾಗಿ । ಮುಕ್ತಾಯಿ
ಶರಣರ ಕುಲಕ ಬೆಳಕಾಗಿ ॥ ೧೨ ॥

– ಶ್ರೀ ಪ್ಯಾಟೆಪ್ಪ ನಾಯಕ

***

**ದೇವದುರ್ಗ ತಾಲೂಕು :**

## ೨. ಗೊಬ್ಬೂರು : ಬಿಬ್ಬಿಬಾಚರಸನ ಗುಡಿ

ಗೊಬ್ಬೂರುಗಳು ಎರಡಿವೆ. ಒಂದು ಕಲಬುರ್ಗಿ ಜಿಲ್ಲೆಯಲ್ಲಿ, ಇನ್ನೊಂದು ರಾಯಚೂರು ಜಿಲ್ಲೆಯಲ್ಲಿ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗೊಬ್ಬೂರೇ ಬಿಬ್ಬಿಬಾಚಯ್ಯನು ಹುಟ್ಟಿದ ಊರೆಂದು ಖಚಿತಗೊಂಡಿದೆ. ಬಿಬ್ಬಿಬಾಚಯ್ಯ ಬ್ರಾಹ್ಮಣನಾಗಿ ಹುಟ್ಟಿ ಲಿಂಗದೀಕ್ಷೆ ಪಡೆದು ಶರಣನಾದವನು.

ಬಿಬ್ಬಿಬಾಚಯ್ಯ ಒಬ್ಬ ಪ್ರಸಾದಿ. ಇವನಿಗೆ ಸಂಬಂಧಿಸಿದಂತೆ ಅದರಲ್ಲೂ ಪ್ರಸಾದಕ್ಕೆ ಸಂಬಂಧಿಸಿದ ವಿಷಯ ಜನರ ಬಾಯಿಯಲ್ಲಿ ಈಗಲೂ ಉಳಿದುಕೊಂಡು ಬಂದಿದೆ. ಗುರುಲಿಂಗ ಜಂಗಮ ನಿಷ್ಠೆ, ಪ್ರಸಾದದ ಮೇಲೆ ನಿಷ್ಠೆಯನ್ನಿಟ್ಟುಕೊಂಡು ಬಂದ ಶರಣ. ಶರಣರ ಪರಿಭಾಷೆಯಲ್ಲಿ ಬಳಸಲ್ಪಡುವ ಒಕ್ಕುಮಿಕ್ಕ ಪ್ರಸಾದ ಸ್ವೀಕರಿಸುವ ಶರಣನೆಂದು ತಿಳಿದಾಗ ಬ್ರಾಹ್ಮಣರು ಇವನಿಗೆ ಅವಮಾನವಾಗುವಂತೆ ಮಾತನಾಡಿದರಂತೆ. ಬಿಬ್ಬಿಬಾಚಯ್ಯನು ಕೋಪೋದ್ರೇಕಕ್ಕೆ ಒಳಗಾಗುತ್ತಾನೆ. ಅವರಿಗೆ ಪಾಠ ಕಲಿಸುವುದಕ್ಕಾಗಿ ನಿಂದಿಸಿದವರ ಮನೆಯ ಮೇಲೆ ನಿಂದಿಸಿದ ಪ್ರಸಾದವನ್ನು ತೂರಿಬಿಡುತ್ತಾನಂತೆ. ಆಗ ಬ್ರಾಹ್ಮಣರ ಮನೆಗೆ ಬೆಂಕಿ ಬಿತ್ತೆಂದು, ನಂತರ ತಮ್ಮ ತಪ್ಪಿನ ಅರಿವಾಗಿ, ಬೇರೆದಾರಿ ಇಲ್ಲದೆ ಬಾಚರಸನಲ್ಲಿ ವಿನಂತಿಸಿಕೊಳ್ಳಲು, ಆ ಅಗ್ನಿಯನ್ನು ದಮನಗೊಳಿಸಿದನಂತೆ.

ಬಿಬ್ಬಿಬಾಚಯ್ಯ ಕಾಯಕ ಮಾಡಿ, ದಿನ ನಿತ್ಯ ದಾಸೋಹ ಮಾಡುತ್ತಿದ್ದನಂತೆ. ಅವನ ದಾಸೋಹದ ಸ್ಥಳವನ್ನು ಈ ಊರಿನ ಜನ ಅರ್ಪಣಕಟ್ಟೆ ಎಂದು ಈಗಲೂ ಕರೆಯುತ್ತ ಬಂದಿದ್ದಾರೆ. ಈ ಸ್ಥಳ ಗೊಬ್ಬೂರಿನಿಂದ ಸುಮಾರು ನಾಲ್ಕು ಕಿ.ಮೀ. ದೂರದ ಒಂದು ಹೊಲದಲ್ಲಿದೆ. ಈ ಹೊಲವು ಸದಾಶಿವಯ್ಯ ಸ್ವಾಮಿ ಗಂಜಿಗುಡಿಮಠ ಅವರ ಕಬ್ಜಾದಲ್ಲಿದೆ. ಅರ್ಪಣಕಟ್ಟೆಗೆ ನಿತ್ಯವೂ ಪೂಜೆ ಮಾಡುವ ಸಂಪ್ರದಾಯವನ್ನು ಇಂದಿಗೂ ಅವರು ಉಳಿಸಿಕೊಂಡು ಬಂದಿದ್ದಾರೆ. ಈ ಹೊಲದಲ್ಲಿ ಒಂದು ಹಳೆಯ ಗಿಡವಿದೆ. ಗಿಡದ ತಳಕ್ಕೆ ಒಂದು ದೊಡ್ಡ ಪೊಟರೆ ಕಾಣಿಸುತ್ತದೆ. ಆ ಪೊಟರೆಯಲ್ಲಿ ನೀರು ಇದೆ. ಅಲ್ಲಿಂದ ನೀರನ್ನು ತೆಗೆಯುತ್ತಿದ್ದರೆಂದು ಜನ ಹೇಳುತ್ತಾರೆ.

ದಿನದ ಪೂಜೆ ಮಾತ್ರ ಅರ್ಪಣಕಟ್ಟೆಗೆ ಸಲ್ಲುವುದಷ್ಟೆ ಅಲ್ಲ, ಜನ ಭಯಭಕ್ತಿಯಿಂದ ಹರಕೆ ಹೊತ್ತು, ಇಲ್ಲಿ ಹರಕೆಗಳನ್ನು ತೀರಿಸುತ್ತಾರೆ. ಜವಳ ನಡೆಯುತ್ತದೆ. ದೀಡನಮಸ್ಕಾರ



ಅರ್ಪಣ ಕಟ್ಟೆ

ಹಾಕುತ್ತಾರೆ. ಅಲ್ಲದೇ ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ನಡೆಸುವ ಸಂಪ್ರದಾಯ ನಡೆದುಕೊಂಡು ಬರುತ್ತಿದೆ. ಶ್ರಾವಣ ಮಾಸದಲ್ಲಿ ಪೂಜೆ ಪ್ರಾರಂಭವಾದರೆ ಭಾದ್ರಪದ ಶುದ್ಧ ಪಾಡ್ಯದವರೆಗೂ ನಿರಂತರ ನಡೆಯುತ್ತದೆ ಎಂದು ಹೇಳುತ್ತಾರೆ. ಅಂದು ಮಂಗಲವಾಗುತ್ತದೆ. ನಂತರ ಪ್ರಸಾದ ವಿತರಣೆ ಆಗುತ್ತದೆ.

ಅರ್ಪಣಕಟ್ಟೆ ಇರುವ ಹೊಲದಲ್ಲಿ ಭಕ್ತರು ಇಲ್ಲಿಯವರೆಗೂ ಚರ್ಮದ ಯಾವುದೇ ವಸ್ತುಗಳನ್ನು ಬಳಸಿದ್ದಿಲ್ಲವಂತೆ. ಕಾಲಲ್ಲಿ ಮೆಟ್ಟುಗಳನ್ನು ಕೂಡ ಹಾಕಿಕೊಂಡು ಹೋಗುವುದಿಲ್ಲವಂತೆ. ಇಂತಹ ಭಯಭಕ್ತಿಯನ್ನು ಇಂದಿಗೂ ಈ ಶರಣನ ಬಗ್ಗೆ ಉಳಿಸಿಕೊಂಡು ಬಂದಿದ್ದಾರೆ.

ಗೊಬ್ಬೂರು ದೇವಸೂಗೂರುಗಳ ನಡುವೆ ಒಂದು ಬಾವಿ ಇದೆ. ಅದಕ್ಕೆ 'ಡೋಣಿ ಬಾವಿ' ಎನ್ನುತ್ತಾರೆ. ಗೊಬ್ಬೂರಿನ ಜನರಿಗೆ ಡೋಣಿಬಾವಿ ನೀರು ರಕ್ತವಾಗಿಯೂ, ಸೂಗೂರಿನ ಜನರಿಗೆ ಶುದ್ಧನೀರಾಗಿಯೂ ಕಾಣಿಸುತ್ತದೆ ಎಂಬ ಪ್ರತೀತಿ ಇದೆ.

ಬಿಬ್ಬಿ ಬಾಚರಸನು ಕಲ್ಯಾಣ ಕ್ರಾಂತಿಯ ನಂತರ ಚನ್ನವೀರ ಎಂಬ ಶರಣನ ಜೊತೆಗೆ ಮತ್ತೆ ಅನೇಕ ಜನ ಶಿಷ್ಯರನ್ನು ಗೊಬ್ಬೂರಿಗೆ ಕರೆದುಕೊಂಡು ಬಂದನಂತೆ. ಇವರೆಲ್ಲರೂ ಬೆಟ್ಟದ ಮೇಲೆಯೇ ವಾಸಿಸುತ್ತಿದ್ದರಂತೆ. ಚನ್ನವೀರರು ಮಾತ್ರ ವೀರಭದ್ರನ ಹೆಸರು ಪಡೆದು ದೇವಸೂಗೂರಿನಲ್ಲಿ ನೆಲಸಿದರೆಂದು ಹೇಳಲಾಗುತ್ತದೆ.

ಈ ಊರಿನ ಉತ್ತರಕ್ಕೆ ಊರ ಹೊರಗಿನ ಬಯಲು ಪ್ರದೇಶದಲ್ಲಿ ಬೂದಿ ಬಸವನ ಮಠವೊಂದಿದೆ. ಈ ಮಠಕ್ಕೆ ಹೊಂದಿಕೊಂಡು ಬೆಟ್ಟದ ಮೇಲೆ ಸೂಗೂರೇಶ್ವರ ದೇವಾಲಯವಿದೆ. ಈ ದೇವಾಲಯವೂ ಪ್ರಾಚೀನವಾಗಿದ್ದು, ೨೪ ಕಂಬಗಳಿಂದ ಕೂಡಿದೆ. ಗರ್ಭಗುಡಿಯ ಮುಂದೆ ಸುಕನಾಶಿ, ಮಂಟಪಗಳಿವೆ. ಗುಡಿಯ ಬಲಗಡೆ ಒಂದು ದೊಡ್ಡ ಬಸವಣ್ಣನ ಮೂರ್ತಿ ಇದೆ.

ವಚನಗಳು : ೧೦೨

ವಚನಾಂಕಿತ : ಏಣಾಂಕಧರ ಸೋಮೇಶ್ವರಲಿಂಗ

ಮಾಹಿತಿ: ಸದಾಶಿವಯ್ಯ ಸ್ವಾಮಿ ಗಂಜಿಗುಡಿಮಠ

***




ಅರ್ಪಣ ಕಟ್ಟೆ ಇನ್ನೊಂದು ಮಗ್ಗಲು

**ದೇವದುರ್ಗ ತಾಲೂಕು :**

## ೩. ಗೂಗಲ್ :
## ಅಲ್ಲಮಪ್ರಭು ಗವಿ ಗುಡಿ

ಗೂಗಲ್ ಊರಿನ ಹೊರವಲಯದ ಉತ್ತರದಿಕ್ಕಿನಲ್ಲಿ ವಿಶಾಲವಾದ ಅಲ್ಲಮಪ್ರಭುಗಳ ದೇವಾಲಯವಿದೆ. ಈ ಗುಡಿಯನ್ನು ಸುರುಪುರದ ದೊರೆಗಳು ಕಟ್ಟಿಸಿದರೆಂದು ಹೇಳಲಾಗುತ್ತದೆ. ಪೂರ್ವಾಭಿಮುಖವಾಗಿ ಅತ್ಯಂತ ಬೃಹದಾಕಾರದ ಮುಖ್ಯದ್ವಾರದಿಂದ ಕೂಡಿರುವ ಈ ದೇವಾಲಯವು ಪ್ರಾಚೀನ ದೇವಾಲಯವೆನಿಸುತ್ತದೆ. ಮುಖ್ಯದ್ವಾರ ಪ್ರವೇಶ ಮಾಡಿದರೆ ಒಳಗೆ ವಿಶಾಲವಾದ ಅಂಗಳದಲ್ಲಿ ಸುತ್ತಲು ಟಾಕುಗಳು ಕಾಣುತ್ತವೆ. ಅದರಿಂದ ಮುಂದೆ ಹೋದರೆ ಮತ್ತೊಂದು ದ್ವಾರವಿದೆ. ಈ ದ್ವಾರದಿಂದ ಒಳಪ್ರವೇಶಿಸಿದರೆ ಮೇಲ್ಗಡೆ ಅಲ್ಲಮಪ್ರಭುಗಳ ಮಂಟಪವಿದೆ. ಈ ಮಂಟಪದ ಕೆಳಗಡೆ ಗವಿ ಇದೆ. ಅಲ್ಲಮಪ್ರಭುಗಳು ತಪಸ್ಸು ಮಾಡಿ ಹೋಗಿರುವ ಸ್ಥಳವಿದೆಂದು ಹೇಳಲಾಗುತ್ತದೆ. ಈ ದೇವಾಲಯದ ಎಡಭಾಗದಲ್ಲಿ ಕೃಷ್ಣೆಯು ಸಮಾಧಾನದಿಂದ ಹರಿಯುತಿರುತ್ತಾಳೆ.




ಅಲ್ಲಮಪ್ರಭು ದೇವಾಲಯ

ಈ ಗವಿಯನ್ನು ಪ್ರವೇಶಿಸಿದರೆ ಇಡೀ ದೇಹ ಬಗ್ಗಿಸಿಯೇ ನಡೆಯಬೇಕು. ಅಷ್ಟೊಂದು ಚಿಕ್ಕದಾದ ಗವಿ ಇದಾಗಿದೆ.

ಪಂಚಾಳ ಸಮಾಜಕ್ಕೆ ಸೇರಿದ ಬೆಂಡೆಗಂಬಳಿಯ ಪರಪ್ಪಯ್ಯ ಎನ್ನುವವರು ೧೯ನೇ ಶತಮಾನದ ಪ್ರಸಿದ್ಧ ತತ್ತ್ವಪದಕಾರ (೧೭೮೦-೧೮೫೦). ಯಾದಗೀರ ಜಿಲ್ಲೆಯ ಶಹಪೂರ ತಾಲೂಕಿನ ಬೆಂಡೆಗಂಬಳಿ ಎಂಬ ಊರಿನಿಂದ ದಿನಾಲೂ



ಅಲ್ಲಮಪ್ರಭುದೇವರ ಗವಿಯಲ್ಲಿರುವ ಗದ್ದುಗೆ


ದೋಣಿಯಲ್ಲಿ ಬರುತ್ತಿದ್ದ ಪರಪ್ಪಯ್ಯ ಒಮ್ಮೆ ಹೊಳೆ ಆಚೆಯೇ ನಿಲ್ಲಬೇಕಾದ ಪ್ರಸಂಗ ವೊದಗುತ್ತದೆ. ಏಕೆಂದರೆ ಪರಪ್ಪಯ್ಯ ದೋಣಿಯವನಿಗೆ ದಿನಾಲು ಹಣನೀಡದೆ ಪುಕ್ಕಟೆಯಾಗಿ ಬರುತ್ತಿದ್ದರಂತೆ. ಇದನ್ನು ತಿಳಿದ ಅಂಬಿಗ ಪರಪ್ಪಯ್ಯ ಬರುವುದನ್ನು ಗಮನಿಸಿಯೂ ದೋಣಿ ಬಿಡುತ್ತಾನೆ. ಆಗ ಪರಪ್ಪಯ್ಯ ಕೊನೆಗೆ ತನ್ನ ಹೆಗಲ ಮೇಲಿರುವ ಕಂಬಳಿಯನ್ನು ನೀರಿನ ಮೇಲೆ ಹಾಸಿ ಅದರ ಮೇಲೆ ಕುಳಿತು ಗುರುವನ್ನು ಸೇರಿದರೆಂಬ ಪ್ರತೀತಿ ಇದೆ. ಅಲ್ಲಮನ ಶಿಷ್ಯನಾದ ಪರಪ್ಪಯ್ಯನವರಿಗೆ ಮಕ್ಕಳಿರಲಿಲ್ಲ. ಕೊಟ್ಟು ಕಸಿದುಕೊಂಡನೆಂಬ ಪ್ರತೀತಿ ಇದೆ. ಪರಪ್ಪಯ್ಯನ ಸಮಾಧಿಯು ಪ್ರಭುದೇವರ ಗುಡಿಯ ಮುಂಭಾಗದಲ್ಲಿದೆ. ಅಲ್ಲಮಪ್ರಭುಗಳ ಪೂಜಾರಿಯೇ ಈ ಗದ್ದುಗೆಯನ್ನೂ ಪೂಜಿಸುತ್ತಾನೆ.

ಪ್ರತಿವರ್ಷ ಯುಗಾದಿ ಅಮವಾಸ್ಯೆಯಾದ ಐದನೆಯ ದಿವಸಕ್ಕೆ ಅಂದರೆ ಚೈತ್ರಶುದ್ಧ ಪಂಚಮಿಯಂದು ಜಾತ್ರೆ ಜರಗುತ್ತದೆ. ಹಾಗೂ ಪ್ರತಿವರ್ಷ ಶ್ರಾವಣಮಾಸದ ನಾಲ್ಕನೇ ಸೋಮವಾರದಂದು ತೆಪ್ಪ (ಹೊಳೆಯಲ್ಲಿ ದೀಪ) ಬಿಡುವ ಮೂಲಕ ಜಾತ್ರೆ ಆರಂಭಗೊಳ್ಳುತ್ತದೆ. ಜಾತ್ರೆಯಲ್ಲಿ ಥೇರು ಮತ್ತು ಉಚ್ಚಾಯ ಎಳೆಯುತ್ತಾರೆ. ಪಲ್ಲಕ್ಕಿ ಮೆರವಣಿಗೆ ನಡೆಯುತ್ತವೆ. ಬಾಳೆಹಣ್ಣು, ಕಬ್ಬು, ಉತ್ತತ್ತಿ, ಹೂವು, ಟೆಂಗು ಮತ್ತು ಮಂಡಾಳ, ಖಾರಾ, ಕಡ್ಲೆ ಈ ಮುಂತಾದವುಗಳ ಮಿಶ್ರಣ ಇವೆಲ್ಲವನ್ನೂ ಥೇರಿಗೆ ಎಸೆಯುತ್ತಾರೆ. ಇದರಿಂದ ತಮ್ಮ ಇಷ್ಟಾರ್ಥ ಸಿದ್ಧಿಯಾಗುತ್ತದೆಂದು ಜನ ನಂಬಿದ್ದಾರೆ. ಪ್ರತಿ ಅಮವಾಸ್ಯೆಯಂದು ಪುರವಂತಿಕೆ, ನಂದಿಕೋಲು ಸೇವಾ ಮತ್ತು ಭಜನೆಗಳು ಜರುಗುತ್ತವೆ. ಅಲ್ಲಮನ ಅರ್ಚನೆ ಮಾಡುವ ಜನರು ಹೂಗಾರ ಸಮಾಜಕ್ಕೆ ಸೇರಿದವರಾಗಿದ್ದಾರೆ.

ಹೊಳೆಯಲ್ಲಿ ಒಂದು ಮಗ್ಗುಲಿಗೆ ಪಾದದ ಕೆತ್ತನೆವುಳ್ಳ ಶಿಲ್ಪವಿದೆ. ಈ ಬಂಡಿಯ ಮೇಲೆ ದೋಣಿ ಹೋದರೆ ಅದು ಮುಳುಗುತ್ತದೆಂಬ ನಂಬಿಕೆಯಿದೆ. ಇದು ಬೆಂಡೆಗಂಬಳಿ ಪರಪ್ಪಯ್ಯನು ಅಂಬಿಗನಿಗೆ ನೀಡಿದ ಶಾಪದ ಫಲವೆಂದು ಕೆಲವರು ಹೇಳುತ್ತಾರೆ. ಇದು ನದಿಯ ದಂಡೆಗೆ ಹತ್ತಿಕೊಂಡಿರುವ ಬಂಡೆಯಾಗಿದೆ. ಗೂಗಲ್ ಊರಿನಲ್ಲಿಯೇ ಇನ್ನೊಂದು ಪ್ರಭುಲಿಂಗನ ಗದ್ದುಗೆ ಇದೆ ಎಂದು ಹೇಳಲಾಗುತ್ತದೆ. ಜಾತ್ರೆ ಜರುಗಿದ ಐದನೇ ದಿವಸಕ್ಕೆ ಕಡುಬಿನ ಕಾಳಗ (ಕಳಸ ಇಳಿಸುವ) ನಡೆಯುತ್ತದೆ. ತೇರಿನ ಮೇಲಿರುವ ಕಳಸ ತೆಗೆಯಲಾಗುತ್ತದೆ. ಕಳಸವನ್ನು ಈ ಮೊದಲು ಚೈತ್ರ ಶುದ್ಧ ಪಂಚಮಿಯಂದು ಕೂಡಿಸಿರುತ್ತಾರೆ.

ಮಾಹಿತಿ : ಪ್ರಭಣ್ಣ ಪೂಜಾರಿ ಅರ್ಚಕರು.
ಮಹಾನಂದಿ ಪೂಜಾರಿ ಅರ್ಚಕರು, ಈಶ್ವರಯ್ಯ ಸ್ವಾಮಿ ಹಿರೇಮಠ.

***



ಅಲ್ಲಮಪ್ರಭುದೇವರ ಗುಡಿಯಲ್ಲಿಯ ಗವಿ

## ಮಾನ್ವಿ ತಾಲೂಕು :

# ಮೊರಟ :
# ಸುಂಕದ ಬಂಕಯ್ಯ, ಪ್ರಭುದೇವರು

### ಸುಂಕದ ಬಂಕಯ್ಯ :

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಮೊರಟ (ಮಲ್ಲಟ) ಗ್ರಾಮದವರು ಶರಣ ಸುಂಕದ ಬಂಕಯ್ಯ. ಮಲ್ಲಟವನ್ನು ಮೊಱಟನಾಡು ಎಂದೂ ಮೊಱಟ-೩೦೦ ಎಂದೂ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಮಲ್ಲಟದಲ್ಲಿ ಸುಂಕದ ಬಂಕಯ್ಯನ ಒಂದು ಸಣ್ಣ ಮಂಟಪವಿದೆ. ಈ ಮಂಟಪದ ಎದುರಿಗೆ ಹಳೆಯ ಮಲ್ಲಿಕಾರ್ಜುನ ದೇವಾಲಯ ಇದೆ. ಈ ಗುಡಿಯ ಎಡಕ್ಕೆ ಜೀರ್ಣಾವಸ್ಥೆಯಲ್ಲಿರುವ ವೀರಭದ್ರ ದೇವಾಸ್ಥಾನ ಇದೆ. ಸುಂಕದ ಬಂಕಯ್ಯ ಮಲ್ಲಿಕಾರ್ಜುನನ ಪರಮಭಕ್ತನು. ಬಂಕಯ್ಯನ ಕಾಯಕ ಸುಂಕ ಎತ್ತುವುದಾಗಿತ್ತು. ಕಾಯಕದಿಂದ ಬಂದುದರಲ್ಲಿ ದಾಸೋಹ ಮಾಡುವ ದಿನಚರಿಯನ್ನು ಬಂಕಯ್ಯ ಪಾಲಿಸುತ್ತ ಬಂದಿದ್ದನಂತೆ.

ಇವನು ಇಚ್ಛಾಪ್ರಸಾದ ವಿತರಿಸುವ ಅಪರೂಪದ ಶರಣ ಎಂದು ಈ ಭಾಗದ ಜನ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅಂತಹ ಕೆಲ ಪ್ರಸಂಗಗಳು ಜನರ ಮನಸ್ಸಿನಲ್ಲಿ ಇಂದಿಗೂ ನೆಲೆಯೂರಿ ನಿಂತಿವೆ. ಇವನ ದಾಸೋಹ ನೇಮವನ್ನು ಪರೀಕ್ಷಿಸಲೆಂದು ಶಿವನೇ ನಡುರಾತ್ರಿ ಜಂಗಮ ವೇಷಧರಿಸಿ ಬರುತ್ತಾನಂತೆ. ಆಕಳು ಕರೆದುಕೊಂಡು ಹಸಿಹಾಲನ್ನು ತನಗೆ ಕೊಡುಬೇಕೆಂದೂ, ಆಗತಾನೆ ಇಳಿಸಿದ ಬಿಲ್ವಪತ್ರಿ ಪೂಜೆಗೆ ಬೇಕೆಂದೂ ಕೇಳಿಕೊಂಡಾಗ ಬಂಕಯ್ಯ ಹಾಗೇ ಮಾಡುತ್ತಾನೆ. ಭಕ್ತಿಯಿಂದ ಪ್ರಾರ್ಥಿಸಿ ಬರಡು ಆಕಳನ್ನು ಕರೆದುಕೊಂಡಾಗ ಹಾಲು ಬಂತಂತೆ. ಹಾಗೆ ಕೊರಡಾಗಿ ನಿಂತ ಪತ್ರಿ ಗಿಡ ಚಿಗಿತು ಪತ್ರಿಯನ್ನು ದಯಪಾಲಿಸಿತಂತೆ. ಇವಗಳನ್ನು ಬಂದ ಜಂಗಮನಿಗೆ ಭಕ್ತಿಯಿಂದ ಬಂಕಯ್ಯ ಅರ್ಪಿಸಿ ಶಿವನೊಲುಮೆಗೆ ಪಾತ್ರನಾದನು.

ಇವನು ವೀರಭಕ್ತಿಯ ಶರಣನಾಗಿದ್ದನೆಂಬುದನ್ನೂ ಜನ ಸ್ಮರಿಸಿಕೊಳ್ಳುತ್ತಾರೆ. ವೈದಿಕರ ಭಕ್ತಿಗಿಂತ ತನ್ನ ವೀರಭಕ್ತಿ ಕಡಿಮೆಯದಲ್ಲ ಎಂಬುದನ್ನು ತೋರಿಸಲು ಅವನು ತಗೆದುಕೊಂಡ ನಿರ್ಣಯ ನಮ್ಮನ್ನು ರೋಮಾಂಚನಗೊಳಿಸುತ್ತದೆ. ಎದೆ ನಡುಗುತ್ತದೆ. ದಿನವೂ ಮಲ್ಲಿಕಾರ್ಜುನನಿಗೆ ಶಿರವನ್ನರ್ಪಿಸಿ ಪೂಜಿಸುತ್ತಿದ್ದನಂತೆ. ಹಾಗೇ

ಶಿರ ಚಿಗಿಯುತ್ತ ಹೋಗುತ್ತಿತ್ತಂತೆ. ಮತ್ತೆ ಮತ್ತೆ ರುಂಡ ಕತ್ತರಿಸಿದರೂ ಮೊದಲಿನಂತೆ ಆಗುತ್ತಿತ್ತಂತೆ. ಬಂಕಯ್ಯನು ಕತ್ತರಿಸಿ ಅರ್ಪಿಸಿದ ರುಂಡಗಳೆಲ್ಲ ಅವನ ಆರಾಧ್ಯ ದೈವ ಮಲ್ಲಿಕಾರ್ಜುನನಲ್ಲಿ ಐಕ್ಯವಾದುವಂತೆ. ಇಂಥ ಕಠೋರ ನೇಮದ (ಗಣಾಚಾರದ) ಶರಣ ಸುಂಕದ ಬಂಕಣ್ಣ. ಎಳೆಯ ಮಕ್ಕಳು ಕೋಪದಿಂದ ನಡೆದುಕೊಳ್ಳುತ್ತಿದ್ದರೆ ಅವರನ್ನು ಕರೆದುತಂದು ಬಂಕಯ್ಯನ ಕಟ್ಟೆಗೆ (ಗದ್ದುಗೆ) ಪ್ರದಕ್ಷಿಣೆ ಹಾಕಿಸುವ ನಂಬಿಕೆಯನ್ನು ಇಟ್ಟುಕೊಂಡು ಬಂದಿದ್ದಾರೆ. ಹಾಗೆ ಮಾಡಿಸಿದ ಮೇಲೆ ಮಕ್ಕಳು



ಸುಂಕದ ಬಂಕಯ್ಯನ ಮಂಟಪ

ಶಾಂತ ಆಗುತ್ತವೆ ಎಂಬ ಭಾವನಾತ್ಮಕ ಸಂಬಂಧ ಇಂದೂ ಇರುವುದು ತಿಳಿದುಬರುತ್ತದೆ.

ಮಲ್ಲಿಕಾರ್ಜುನನ ಗುಡಿ ಎದುರಿಗೇ ಬಂಕಯ್ಯನ ಗದ್ದುಗೆ ಇದೆ. ಇದೇನು ದೊಡ್ಡ ಗುಡಿಯಲ್ಲ. ನಾಲ್ಕು ಕಂಬಗಳಿಂದ ಕೂಡಿದ ಚೌಕಾಕಾರದ ಚಿಕ್ಕ ಮಂಟಪ ಇದಾಗಿದೆ. ಈ ಮಂಟಪದ ಬಲಕ್ಕೆ ಒಂದು ದೊಡ್ಡ ಅರಳಿಮರವಿದೆ. ಇದಕ್ಕೆ ಬಂಕಯ್ಯನ ಕಟ್ಟೆ ಎಂದೇ ಕರೆಯುವ ವಾಡಿಕೆ. ಏಕೆಂದರೆ ಇದು ಮೊದಲು ಬಯಲಲ್ಲಿಯೇ ಇತ್ತು. ಚೌಕಾಕಾರದ ನಾಲ್ಕು ಕಂಬ ಮಾತ್ರ ಇದ್ದುವಂತೆ. ಇತ್ತೀಚೆಗೆ ಮಲ್ಲಟದ ಗೌಡರು ತಮ್ಮ ಹೆತ್ತವರ ಸ್ಮರಣೆಗೋಸ್ಕರ ಮಂಟಪವನ್ನು ಸುಸಜ್ಜಿತಗೊಳಿಸಿದ್ದಾರೆ (೨೬-೮-೨೦೦೨ರಲ್ಲಿ) ಎಂದು ಹೇಳುತ್ತಾರೆ.

ಬಂಕಯ್ಯನೆ ಮಲ್ಲಿಕಾರ್ಜುನ ದೇವಾಲಯ ಕಟ್ಟಿಸಿದ್ದಾನೆ ಎಂಬ ಪ್ರತೀತಿ ಇದೆ. ಪ್ರತಿ ವರ್ಷ ಮಲ್ಲಿಕಾರ್ಜುನನ ಜಾತ್ರೆ ಆಗುತ್ತದೆ. ಶ್ರಾವಣ ಮಾಸದ ನಾಲ್ಕನೆಯ ದಿನಕ್ಕೆ ಈ ಜಾತ್ರೆ ನಡೆಯುತ್ತದೆ. ಅಂದು ಬಂಕಣ್ಣನ ಗದ್ದುಗೆಗೂ ವಿಶೇಷ ಪೂಜೆ ಸಲ್ಲುತ್ತದೆ. ಪ್ರತ್ಯೇಕವಾಗಿ ಶರಣ ಬಂಕಯ್ಯನ ಹೆಸರಿನಲ್ಲಿ ಜಾತ್ರೆ ನಡೆಯುವದಿಲ್ಲ.

ಈ ಜಾತ್ರೆಯ ವಿಶೇಷತೆ ಎಂದರೆ ಕುರಕುಂದಿ ಎನ್ನುವ ಪಕ್ಕದ ಊರಿನಲ್ಲಿ ಮಲ್ಲಿಕಾರ್ಜುನ ಬೆಟ್ಟ ಇದೆ. ಅಲ್ಲಿಂದ ಪಲ್ಲಕ್ಕಿ ಇಲ್ಲಿಗೆ ಬಂದ ನಂತರವೆ ಜಾತ್ರೆಯ ಉಚ್ಚಯ್ಯ ತೇರನ್ನು ಎಳೆಯುತ್ತಾರೆ. ಅಲ್ಲಿಂದ ಪಲ್ಲಕ್ಕಿ ಬರದ ಹೊರತು ಜಾತ್ರೆ ಆಗದು. ಹಾಗೆ ಕುರುಕುಂದಿ ಮಲ್ಲಿಕಾರ್ಜುನ ದೇವರ ಜಾತ್ರೆ ಆಗಬೇಕಾದರೂ ಮಲ್ಲಟ ಮಲ್ಲಿಕಾರ್ಜುನ ದೇವರ ಪಲ್ಲಕ್ಕಿ ಹೋಗಬೇಕು. ಆಗಲೇ ಜಾತ್ರೆಗೆ ಚಾಲನೆ ಸಿಗುತ್ತದೆ ಎಂದು ತಿಳಿದುಬರುತ್ತದೆ.

ವಚನಗಳು : ೧೧೯

ವಚನಾಂಕಿತ : ಬಂಕೇಶ್ವರ

ಮಾಹಿತಿ: ಸಿದ್ದಯ್ಯಾ ಸ್ವಾಮಿ ಹಿರೇಮಠ. ಮಲ್ಲಟ

***

## ಅಲ್ಲಮಪ್ರಭು ದೇವಾಲಯ :

ಮಲ್ಲಟದಲ್ಲಿಯೇ ಬಂಕಯ್ಯ, ಮಲ್ಲಿಕಾರ್ಜುನ ಗುಡಿಯಿಂದ ಸ್ವಲ್ಪದೂರ ಉತ್ತರಕ್ಕೆ ಒಂದು ಹೊಲದಲ್ಲಿ ಅಲ್ಲಮಪ್ರಭುಗಳ ದೇವಾಲಯ ಇದೆ. ಈ ದೇವಾಲಯ ಹಳೆಯದಾಗಿದೆ. ಶರಣರ ಸ್ಮಾರಕಗಳನ್ನು ಸಂರಕ್ಷಿಸದ ಕಾರಣವಾಗಿ ದೇವಾಲಯದೊಳಗೆ ಹುತ್ತಬೆಳೆದಿದೆ. ಹೊರಗೆ ಎರಡು ಶಿಲಾಶಾಸನಗಳು ಇವೆ. ಅಲ್ಲಮಪ್ರಭುಗಳು ಇಲ್ಲಿಗೆ ಬಂದು ಹೋದುದರ ಸ್ಮಾರಕ ಎಂದಿಷ್ಟೇ ಹೇಳುತ್ತಾರೆ. ಹೆಚ್ಚಿನ ಮಾಹಿತಿಗಳು ಇಲ್ಲಿ ಸಿಗುವದಿಲ್ಲ. ಈ ಮಾಹಿತಿಯನ್ನು ಈ ದೇವಾಲಯದ ಪೂಜಾರಿಗಳಾದ ಶ್ರೀ ಶಿವಶಂಕರ ಆದೆಪ್ಪ ಅವರು ನೀಡಿದ್ದಾರೆ.

ಮಾಹಿತಿ: ಶ್ರೀ ಶಿವಶಂಕರ ಆದೆಪ್ಪ, ದೇವಾಲಯದ ಪೂಜಾರಿ

***




ಅಲ್ಲಮಪ್ರಭು ದೇವಾಲಯ

ಲಿಂಗಸೂರು ತಾಲೂಕು :

## ೧. ನವಿಲೆ :
## ಜಡೆಶಂಕರಲಿಂಗನ ದೇವಾಲಯ

ಶಂಕರ ದಾಸಿಮಯ್ಯ ಬಸವಣ್ಣನವರ ಹಿರಿಯ ಸಮಕಾಲೀನರು. ಇವರು ಕಂದಶಿಲೆ-ಈಗಿನ ಕಂದಗಲ್ಲು ಎಂಬ ಗ್ರಾಮದಲ್ಲಿ ಹುಟ್ಟಿದರೆಂದು ಹೇಳಲಾಗುತ್ತದೆ. ಕಂದಗಲ್ಲು ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿದೆ. ಶಂಕರ ದಾಸಿಮಯ್ಯ ಶಿವೋಪಾಸಕನಾದ ಸ್ಮಾರ್ಥಬ್ರಾಹ್ಮಣ. ಶರಣನಾಗುವ ಪೂರ್ವದಲ್ಲಿದ್ದ ಇವನ ಹೆಸರು ಗೋವಿಂದ ಭಟ್ಟ. ಇವನ ಹೆಂಡತಿ ಹೆಸರು ಉಮ್ಮವ್ವೆ.

ಶಂಕರ ದಾಸಿಮಯ್ಯ ಅವರು ಕಾಶಿ ವಿಶ್ವೇಶ್ವರನ ದರ್ಶನ ಮಾಡಿಬರುವ ಸಂಕಲ್ಪದಿಂದ ಪ್ರಯಾಣ ಬೆಳೆಸುತ್ತಾರೆ. ಅಷ್ಟೇನೂ ಅನುಕೂಲಸ್ತರಲ್ಲದ ಗೋವಿಂದಭಟ್ಟ ತನ್ನ ಹತ್ತಿರವಿದ್ದ ಅಲ್ಪಸ್ವಲ್ಪ ವಸ್ತುಗಳನ್ನು ಬಡಬಗ್ಗರಿಗೆ ಕೊಟ್ಟು, ಹೆಂಡತಿ ಉಮ್ಮವ್ವೆ (ದುಮ್ಮವ್ವೆ) ಜೊತೆಗೆ ಕಾಲ್ನಡಿಗೆಯಿಂದ ಅವರ ಊರ ಸಮೀಪದ, ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ನವಿಲೆಗೆ ಬರುತ್ತಾರೆ. ನವಿಲೆಯಲ್ಲಿ ಜಡೆಶಂಕರ



ಕೃಷ್ಣಾ ನದಿಯ ದಂಡೆಯ ಮೇಲಿರುವ ಶಂಕರಲಿಂಗ ದೇವಸ್ಥಾನ



ನದಿಯ ವತ್ತುವರಿ ನೀರು ತುಂಬಿರುವ ಶಂಕರಲಿಂಗ ದೇವಸ್ಥಾನದ ಗರ್ಭಗೃಹ

ಎಂಬ ದೇವರ ಪುರಾತನ ದೇವಾಲಯ ಇದೆ. ಕೃಷ್ಣಾ ನದಿಯ ದಂಡೆಯ ಮೇಲೆ ಇರುವ ಶಂಕರಲಿಂಗ ದೇವಾಲಯದಲ್ಲಿ ಆ ಸಂಜೆ ಸೇರಿದ ಭಕ್ತಸಂದಣಿ ನೋಡಿ ದಂಪತಿಗಳಿಬ್ಬರೂ ಆ ರಾತ್ರಿಯನ್ನು ಅಲ್ಲಿಯೇ ಕಳೆಯಲು ನಿರ್ಧರಿಸುತ್ತಾರೆ. ಕೃಷ್ಣೆಯಲ್ಲಿ ಸ್ನಾನ ಮಾಡಿ ಬಂದು ತಾವೂ ಪೂಜೆಯಲ್ಲಿ ಭಾಗಿಯಾಗುತ್ತಾರೆ. ಜಡೆಯ ಶಂಕರಲಿಂಗನನ್ನು ಪೂಜಿಸುತ್ತಾ ಧ್ಯಾನಸ್ಥರಾದಾಗ, ಕಾಶಿವಿಶ್ವನಾಥನೇ ಈತನು ಎನಿಸಿ, ಕೃಷ್ಣೆಯೇ ಗಂಗೆ ಎಂದು ಭಾವಿಸಿ, ಮುಂದಿನ ಯಾತ್ರೆಯನ್ನು ಕೈಬಿಡುತ್ತಾರೆ.

ಜಡೆಶಂಕರಲಿಂಗನ ಪರಮ ಭಕ್ತನಾಗಿ ದಿನವೂ ಹುಟ್ಟೂರು ಕಂದಗಲ್ಲಿನಿಂದ ಬಂದು ಪೂಜೆ ಮಾಡುವ ಸಂಕಲ್ಪ ಹೊತ್ತು ಮರಳಿ ಕಂದಗಲ್ಲಿಗೆ ಹೋಗುತ್ತಿರುತ್ತಾನೆ. ಇವರ ನಿಷ್ಕಾಮ ಭಕ್ತಿಗೆ ಒಲಿದು ಜಡೆಯ ಶಂಕರಲಿಂಗ ಪುತ್ರ ಸಂತಾನ ಭಾಗ್ಯವನ್ನು ಕರುಣಿಸುತ್ತಾನೆ. ಹುಟ್ಟಿದ ಕೂಸಿಗೆ ಅವನಿಗೆ ಸದ್ಯೋಜಾತನೆಂದು ಹೆಸರಿಡುತ್ತಾರೆ.

ಶಂಕರದಾಸಿಮಯ್ಯನವರು ದಿನವೂ ಕಂದಗಲ್ಲಿನಿಂದ ನಡೆದುಕೊಂಡು ಬಂದು ನವಿಲೆಯಲ್ಲಿ ಪೂಜಿಸುವದನ್ನು ಕಂಡು ದೇವನು ಮರಗುತ್ತಾನೆ. ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ, 'ದಿನವೂ ಇಲ್ಲಿಗೆ ನಡೆದುಕೊಂಡು ಬರುವ ತಾಪತ್ರಯಬೇಡ, ನವಿಲೆಯಲ್ಲಿಯೇ ಉಳಿದುಕೊಳ್ಳಿ' ಎಂಬ ಸೂಚನೆಯನ್ನು ಕೊಡುತ್ತಾನೆ. ಪರಮ ಭಕ್ತಿಗೆ ಒಲಿದು, ದಂಪತಿಗಳಿಗೆ ಇಷ್ಟಲಿಂಗ ದೀಕ್ಷೆ ಕೊಡುವುದಾಗಿ ಭರವಸೆ ನೀಡುತ್ತಾನೆ. ಹಾಗೇ ಮಾಡುತ್ತಾನೆ. ಗೋವಿಂದಭಟ್ಟನು ತನ್ನ ಮತ್ತು ಹೆಂಡತಿಯ ಹೆಸರುಗಳನ್ನು ಮರುನಾಮಕರಣ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾನಂತೆ. ಆಗ ಪರಮಾತ್ಮನು

ಗೋವಿಂದ ಭಟ್ಟನಿಗೆ ಶಂಕರದಾಸಿಮಯ್ಯ ಎಂದೂ ಅವನ ಹೆಂಡತಿಗೆ ಶಿವದಾಸಿ ಎಂದೂ ಕರೆದು, ಅವರಿಗೆ ಹೊಲಿಗೆ ಕಾಯಕ ಮಾಡಿಕೊಂಡಿರಲು ಹರಸುತ್ತಾನಂತೆ.

ಇಬ್ಬರೂ ದಂಪತಿಗಳು ಕಾಯಕ ದಾಸೋಹ ಮಾಡುತ್ತ ಇರುತ್ತಾರೆ. ಗುರುಲಿಂಗಜಂಗಮ ಭಕ್ತಿಯಲ್ಲಿ ತನ್ಮಯನಾದ ಶಂಕರ ದಾಸಿಮಯ್ಯನ ಭಕ್ತಿಗೆ ಮೆಚ್ಚಿದ ಶಂಕರಲಿಂಗ ಮತ್ತೆ ಸ್ವಪ್ನದಲ್ಲಿ ಕಾಣಿಸಿಕೊಂಡು ಒಂದು ವರವನ್ನು ಕೊಡುವುದಾಗಿ ಹೇಳುತ್ತಾನೆ. ಆಗ ಶಂಕರದಾಸಿಮಯ್ಯ- 'ಕೊಡುವುದಾದರೆ ಹುರುಳಿಲ್ಲದ ವಾದ ಮಂಡಿಸುವವರಿಗೆ, ಕ್ಷುದ್ರ ದೇವಾರಾಧನೆ ಮಾಡುವವರಿಗೆ ತಿಳಿಹೇಳುವ ಅಥವಾ ಶಿಕ್ಷಿಸುವ ವರವನ್ನು ದಯಪಾಲಿಸಬೇಕು' ಎಂದು ಶಿವನಲ್ಲಿ ಪ್ರಾರ್ಥಿಸಿಕೊಳ್ಳುತ್ತಾನೆ. ಶಿವಭಕ್ತಿ ಫಲವಾಗಿ ಶಿವನು ಶಂಕರದಾಸಿಮಯ್ಯನಿಗೆ ಹಣೆಗಣ್ಣು ಕೊಟ್ಟನೆನ್ನಲಾಗುತ್ತದೆ.

ಶಂಕರದಾಸಿಮಯ್ಯ ಜೇಡರ ದಾಸಿಮಯ್ಯನ ತವನಿಧಿಯನ್ನು ಬಯಲು ಮಾಡಿ, ಮತ್ತೆ ಕರುಣಿಸಿ, ದಾಸಿಮಯ್ಯನ ಅಹಂಕಾರ ಮುರಿದ ಹಾಗೆ ಶಂಕರ ದಾಸಿಮಯ್ಯನ ಹಣೆಗಣ್ಣಿನ ಬಲದ ಅಹಂಕಾರವನ್ನು ಢಕ್ಕೆಯ ಮಾರಯ್ಯ ಅಡಗಿಸಿದನೆಂದು ಜನ ಹೇಳುತ್ತಾರೆ. ಅತ್ತಿತ್ತ ಸುತ್ತಾಡಿಕೊಂಡು ಬಂದು ಕೊನೆಯವರೆಗೂ ನವಿಲೆಯಲ್ಲಿಯೇ ಉಳಿದನೆಂದು, ಜಡೆಯ ಶಂಕರಲಿಂಗದಲ್ಲಿ ಐಕ್ಯನಾದನೆಂದು ಹೇಳಲಾಗುತ್ತದೆ.

ಇವರದು ಸೂಜಿಕಾಯಕ (ಬಟ್ಟೆ ಹೊಲೆಯುವ ಕಾಯಕ). ಶಂಕರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಇಬ್ಬರೂ ಕೂಡಿಯೇ ಅಡ್ಡಾಡಿದಂತಿದೆ. ಬಸವಕಲ್ಯಾಣದಲ್ಲಿ ಇಬ್ಬರ ಸ್ಮಾರಕಗಳಿವೆ, ಘಾಟಬೋರಾಳದ ಗವಿಯಲ್ಲಿ ಇಬ್ಬರೂ ತಪಸ್ಸು ಮಾಡಿದ್ದಾರೆಂದೂ ಹೇಳಲಾಗುತ್ತದೆ. ಆ ಗವಿಯಲ್ಲಿ ಇಬ್ಬರ ತೋರುಗದ್ದುಗೆಗಳೂ ಇವೆ.



ಊರಲ್ಲಿ ಕಟ್ಟಿಕೊಂಡ ಶಂಕರಲಿಂಗ ದೇವಸ್ಥಾನ




ಊರಲ್ಲಿ ಕಟ್ಟಿಕೊಂಡ ಶಂಕರಲಿಂಗ ದೇವಸ್ಥಾನ ಗರ್ಭಗೃಹದ ದೃಶ್ಯಗಳು

ವಚನಗಳು: ೫

ವಚನಾಂಕಿತ : ನಿಜಗುರುಶಂಕರದೇವಾ

ಮಾಹಿತಿ: ಹೊಳೆಯಪ್ಪ ರಾಜಪ್ಪ ಆಕಾಶ




ಶಂಕರಲಿಂಗ ದೇವಸ್ಥಾನದ ಮಂಟಪದ ದೃಶ್ಯ

ಲಿಂಗಸೂರು ತಾಲೂಕು

## ೨. ಗುಡುಗುಂಟಿ :
## ಅಮರೇಶ್ವರ, ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ

ಬಂಗಾರದ ಕಳಸ ಬಂಡಿಮ್ಯಾಗ ಇಟಗೊಂಡು
ಬಂದಾರ ಗುಂತಗುಳಿ ದೊರಿಗೋಳ। ಅಮರೇಶ
ಕಾಯೊಡದ ತೇರ ಎಳಸ್ಯಾರ

ಲಿಂಗಸೂರಿನಿಂದ ಈಶಾನ್ಯಕ್ಕೆ ೮ ಮೈಲುಗಳ ಅಂತರದಲ್ಲಿ ಗುಡುಗುಂಟಿ ಗ್ರಾಮದ ಅಮರೇಶ್ವರ ಎಂಬ ಪುಣ್ಯಕ್ಷೇತ್ರ ಇದೆ. ಇದೊಂದು ಪವಿತ್ರ ಕ್ಷೇತ್ರವಾಗಿದೆ. ಸುತ್ತಲೂ ಪ್ರಕೃತಿ ರಮಣೀಯತೆ ತುಂಬಿದೆ. ಎಲ್ಲ ಭಾಗದ ಜನ ಅಮರೇಶ್ವರ ಲಿಂಗಕ್ಕೆ ನಡೆದುಕೊಳ್ಳುತ್ತಾರೆ. ನಿರಂತರ ಪೂಜೆ ನಡೆದಿರುತ್ತದೆ. ಅಮರೇಶ್ವರದ ಉತ್ತರಕ್ಕೆ ೪ ಮೈಲು ದೂರದಲ್ಲಿ ಕೃಷ್ಣಾನದಿ ಇದೆ. ಅಮರೇಶ್ವರ ಗುಡಿಯ ಆವರಣದಲ್ಲಿ ಒಂದು



ಅಮರೇಶ್ವರ ಗುಡಿಯ ಹೊರನೋಟ



ಗಡಿಗೆ ಬಾವಿ, ನೀರಿನ ಕಾಲುವೆ

ನೀರಿನ ಹೊಂಡ ಇದೆ. ದೇವರ ದರ್ಶನಕ್ಕೆ ಬಂದವರು ಈ ಹೊಂಡದಲ್ಲಿ ಮುಳುಗೇಳುತ್ತಾರೆ. ಅಲ್ಲಿಯೇ ಮೇಲೆ ಮೆಟ್ಟಲು ಹತ್ತಿಹೋದರೆ ರೇವಣಸಿದ್ಧೇಶ್ವರ ದೇವಾಲಯ ಇದೆ. ನೀರಿನಲ್ಲಿಯೇ ಅಮರೇಶ್ವರಲಿಂಗ ಇದೆ. ಈ ಗುಡ್ಡದಲ್ಲಿ ನೀರಿನ ಕಾಲುವೆಯೇ ಹತ್ತಿದೆ. ಆ ಸ್ಥಳವನ್ನು 'ಗಡಿಗೆ ಬಾವಿ' ಎಂದು ಕರೆಯುತ್ತಾರೆ. ಅಲ್ಲಿಂದ ನೀರು ನಿರಂತರವಾಗಿ ಹರಿಯುತ್ತಿರುತ್ತದೆ.

ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ ಇದೇ ಅಮರೇಶ್ವರದವರು. ಆರಾಧ್ಯ ದೈವ ಅಮರೇಶ್ವರಲಿಂಗ. ಕೃಷಿಕಾಯಕ ಮಾಡಿಕೊಂಡು ಸುಖವಾಗಿ ಜೀವನ ಸಾಗಿಸುತ್ತಿದ್ದರು. ಬಂದದ್ದರಲ್ಲಿ ಸಂತೃಪ್ತಿ ಪಡುವ ಪರಮಭಕ್ತರು ಅವರಾಗಿದ್ದರು. ಬಸವಣ್ಣನವರ ಹೆಸರನ್ನು ಕೇಳಿ ಮಾರಯ್ಯ ಮತ್ತು ಲಕ್ಕಮ್ಮ ಕಲ್ಯಾಣಕ್ಕೆ ಹೋದರು. ಈ ಶರಣ ದಂಪತಿಗಳು ಸ್ವಾಭಿಮಾನಿಗಳು. ಕಾಯಕವನ್ನು ಕೈಲಾಸ ಎಂದು ನಂಬಿದವರು. ಎಂಥ ಪ್ರಸಂಗದಲ್ಲಿಯೂ ಯಾರಿಗೂ ಕೈಯೊಡ್ಡಿ ಕೇಳಿದವರಲ್ಲ. ಹೀಗಾಗಿ ಕಲ್ಯಾಣದಲ್ಲಿ ಸ್ವತಂತ್ರ ಕಾಯಕವನ್ನು ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಶರಣರ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತರುವ ಕಾಯಕ ಅವರದಾಗಿತ್ತು. ತನುಮನ ಭಾವ ಶುದ್ಧಿಯಿಂದ ಕಾಯಕ ಮಾಡಿ ಅದರಿಂದ ಬಂದ ಪ್ರತಿಫಲದಲ್ಲಿ ದಾಸೋಹ ಮಾಡಿ, ತಾವೂ ಪ್ರಸಾದ ತೆಗೆದುಕೊಳ್ಳುತ್ತಿದ್ದರು. ಒಂದು ದಿನ ಮಾರಯ್ಯ ಕಾಯಕವನ್ನೇ ಮರೆತು ಕುಳಿತಾಗ ಲಕ್ಕಮ್ಮ ನೇರವಾಗಿ ಅನುಭವ ಮಂಟಪಕ್ಕೆ ಬಂದು ಗಂಡನಿಗೆ ಕಾಯಕಕ್ಕೆ ಸಮಯ ಆಗಿದೆ ಎಂದು ನೆನಪಿಸಿ, ಕಾಯಕಕ್ಕೆ ಕಳಿಸಿದಳು. ಗಂಡನು ದಿನದ ಅಕ್ಕಿಗಿಂತ ಹೆಚ್ಚಿಗೆ ತಂದಾಗ ಲಕ್ಕಮ್ಮ ಅದನ್ನು ತಮ್ಮ ಆರಾಧ್ಯದೈವ ಅಮರೇಶ್ವರಲಿಂಗ ಒಪ್ಪಿಕೊಳ್ಳುವದಿಲ್ಲ, ಅವನ್ನು ಒಯ್ದು ತಂದಲ್ಲಿಯೆ ಸುರವಿ ಬನ್ನಿ ಎಂದು ಗಂಡನಿಗೆ ಹೇಳಿದಳು. ಅಷ್ಟೇ ಅಲ್ಲ ಅಮರೇಶ್ವರಲಿಂಗದ ಮನೆಗೆ ಬಿನ್ನಕ್ಕೆ ಬಾ ಎಂದು ಶರಣರಿಗೆ ಹೇಳಿ ಬರಲು ಗಂಡನನ್ನು ಕಳಿಸಿದಳು. ಗಂಡನು ಹಾಗೇ ಮಾಡುತ್ತಾನೆ. ಶರಣರೆಲ್ಲರ ಇಚ್ಛಾಪ್ರಸಾದವನ್ನು ಅಮರೇಶ್ವರಲಿಂಗದ ಮೇಲಿನ ನಿಷ್ಠೆಯಿಂದ

ಪೂರೈಸಿಕೊಟ್ಟರು. ಅಂಥ ಲಿಂಗ ಇದು ಎಂದು ಅಮರೇಶ್ವರಲಿಂಗದ ಪೂಜಾರಿ ಹೇಳುತ್ತಾರೆ.

ದಂಪತಿಗಳಿಬ್ಬರೂ ವಚನಗಳನ್ನು ಬರೆದಿದ್ದಾರೆ. ಶರಣ ಸಮೂಹದಲ್ಲಿ ಅಪರೂಪದ ಶರಣದಂಪತಿಗಳಾಗಿ ಕಾಣಿಸುತ್ತಾರೆ.

ಆಯ್ದಕ್ಕಿ ಮಾರಯ್ಯ : ವಚನಗಳು : ೩೨
ಅಂಕಿತ : ಅಮರೇಶ್ವರಲಿಂಗ
ಆಯ್ದಕ್ಕಿ ಲಕ್ಕಮ್ಮ : ವಚನಗಳು : ೨೫
ಅಂಕಿತ : ಮಾರಯ್ಯಪ್ರಿಯ ಅಮರೇಶ್ವರಲಿಂಗ



ಗರ್ಭಗೃಹದ ಅಮರೇಶ್ವರ ಲಿಂಗ

## ಲಿಂಗಸೂರು ತಾಲೂಕು :


### ೩. ಉಳಿಯುಮೇಶ್ವರ :
### ಚಿಕ್ಕಯ್ಯ

ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಉಳಿಮೇಶ್ವರ (ಉಳಿಯುಮೇಶ್ವರ) ಎಂಬ ಗ್ರಾಮದಲ್ಲಿ ಚಿಕ್ಕಯ್ಯ ಎಂಬ ಶರಣ ಆಗಿಹೋಗಿದ್ದಾನೆ. ಈ ಉಳಿಮೇಶ್ವರದಲ್ಲಿ ಚಿಕ್ಕಯ್ಯನೆಂಬ ಶರಣ ಇದ್ದನೆಂಬುದಕ್ಕೆ ಗ್ರಾಮದವರು ಕೆಲ ಕುರುಹುಗಳನ್ನು ತೋರಿಸುತ್ತಾರೆ. ಊರ ಹೊರಭಾಗದಲ್ಲಿ ಉಳಿಯ ಮಲ್ಲೇಶ್ವರ, ಮಲ್ಲಯ್ಯ ಅಥವಾ ಈಶ್ವರ ದೇವಸ್ಥಾನವಿತ್ತೆಂದು ಒಂದು ಸ್ಥಳವನ್ನು ತೋರಿಸುತ್ತಾರೆ. ಆದರೆ ಅಲ್ಲಿ ಈಗ ಯಾವ ದೇವಸ್ಥಾನವೂ ಇಲ್ಲ. ಅದು ಈಗ ನಶಿಸಿ ಹೋಗಿದೆ ಎಂದೂ ಅದರ ಅವಶೇಷಗಳು ಊರಲ್ಲಿ ಸಿಗುತ್ತವೆ ಎಂದೂ ಊರ ಹಿರಿಯರು ಹೇಳುತ್ತಾರೆ.

ಹಂಪಿಯ ಶ್ರೀ ಕೃಷ್ಣದೇವರಾಯನು ಶಿವರಾತ್ರಿಯ ವಿಶೇಷ ಪೂಜೆಗಾಗಿ ಈ ದೇವಸ್ಥಾನಕ್ಕೆ ಭೇಟಿ ನೀಡುತ್ತಿದ್ದನೆನ್ನುವ ಪ್ರತೀತಿ ಇದೆ. ಅಲ್ಲದೆ ಇಂದಿಗೂ ಕೆಲವರು



ಈಶ್ವರ ದೇವಸ್ಥಾನ ಇದ್ದಿರಬಹುದಾದ ಸ್ಥಳ



ಉಳಿಮೇಶ್ವರ ಚಿಕ್ಕಯ್ಯನ ಸಮಾಧಿ ಗುಡಿ. (ಚಿತ್ರ : ಎಚ್. ಚಂದ್ರಶೇಖರ)

ಆ ಸ್ಥಳವನ್ನು ಪೂಜಿಸುತ್ತಿರುವುದನ್ನು ಗಮನಿಸಿದರೆ ಪೂರ್ವದಲ್ಲಿ ಅಲ್ಲಿ ದೇವಸ್ಥಾನ ಇದ್ದಿರಬಹುದು ಎನಿಸುತ್ತದೆ. ಈಶ್ವರ ದೇವಸ್ಥಾನವಿದ್ದ ಸ್ಥಳದಲ್ಲಿ ಹುತ್ತು ಬೆಳೆದಿರುವುದರಿಂದ ಹಲವಾರು ವರ್ಷಗಳಿಂದ ಹುತ್ತಿನ ಪೂಜೆಯನ್ನೇ ಮಾಡುತ್ತ ಬಂದಿರುವುದು ಕಾಣುತ್ತದೆ. ಇಲ್ಲಿಯೇ ಈ ಹಿಂದೆ ಈಶ್ವರ ದೇವಸ್ಥಾನವಿತ್ತೆಂದು ಹೇಳಲಾಗುತ್ತದೆ.

ಈಶ್ವರ, ಮಲ್ಲಯ್ಯ-ಮಲ್ಲೇಶನ ಆರಾಧನೆಯನ್ನು ಶರಣ ಚಿಕ್ಕಯ್ಯ ಮಾಡುತ್ತಿದ್ದನೆಂದು ಹೇಳಲಾಗುತ್ತದೆ. ಊರಲ್ಲಿ ಒಂದು ಮಠ ಇತ್ತಂತೆ. ಅದು ಚಿಕ್ಕಯ್ಯನ ಮಠವೆಂದು ಕೆಲವರು ಹೇಳುತ್ತಾರೆ. ಆದರೆ ಈಗ ಮಠದ ಯಾವ ಕುರುಹುಗಳೂ ಊರಲ್ಲಿ ಸಿಗುವುದಿಲ್ಲ. ಈ ಮಠದ ಜಾಗದಲ್ಲಿ ಕೆಲವು ಮನೆಗಳು ಇದ್ದು, ಅಲ್ಲಿ ಕೆಲವರು ಜಂಗಮರು ವಾಸಿಸುತ್ತಿದ್ದರಂತೆ. ಅವರ ಕುಟುಂಬಗಳಲ್ಲಿ ಅನಾಹುತಗಳೇ ಹೆಚ್ಚು ಸಂಭವಿಸುತ್ತಿದ್ದುದರಿಂದ ಜಂಗಮರು ಈ ಊರನ್ನೇ ತೊರೆದು ಬೇರೆಡೆ ಹೋದರೆಂದು ಹೇಳುತ್ತಾರೆ. ಇಂದಿಗೂ ಉಳಿಮೇಶ್ವರದಲ್ಲಿ ಜಂಗಮರ ಏಕೆ ಲಿಂಗಾಯತರ ಒಂದು ಕುಟುಂಬವೂ ಕೂಡ ಇಲ್ಲದಿರುವುದು ಇದಕ್ಕೆ ಪುಷ್ಟಿಯನ್ನು ಕೊಡುತ್ತದೆ.

ಸಿಂಧನೂರು ತಾಲೂಕಿನ ದೇವರಗುಡಿಯಲ್ಲಿ ಚಿಕ್ಕಯ್ಯ ಪಂಡಿತ ಇದ್ದನೆಂದೂ ಆ ಚಿಕ್ಕಯ್ಯನೇ ವಚನಕಾರ ಚಿಕ್ಕಯ್ಯನೆಂದು ಹೇಳಲಾಗುತ್ತದೆ. ಶ್ರೀ ಎಚ್. ಚಂದ್ರಶೇಖರ ಅವರು ಈ ಬಗೆಗೆ ಸವಿಸ್ತಾರವಾದ ಶೋಧ ನಡೆಸಿ, ದೇವರಗುಡಿಯಲ್ಲಿದ್ದ ಚಿಕ್ಕಯ್ಯ ಪಂಡಿತನಿಗೂ ಉಳಿಮೇಶ್ವರದ ಚಿಕ್ಕಯ್ಯನಿಗೂ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

ಕೆಲ ವಚನಕಾರರ ಹೆಸರುಗಳು ಊರುಗಳ ಹೆಸರಿನೊಂದಿಗೆ ಪ್ರಾರಂಭವಾಗುವುದನ್ನು ಗಮನಿಸುತ್ತೇವೆ. ಅಘ್ಟವಣಿ ಹೊನ್ನಯ್ಯ, ಕೆಂಭಾವಿ ಭೋಗಣ್ಣ, ಹಾವಿನಹಾಳ ಕಲ್ಲಯ್ಯ, ಇಳಿಹಾಳ ಬ್ರಹ್ಮಯ್ಯ ಹೀಗೆಯೇ ಉಳಿಮೇಶ್ವರ ಚಿಕ್ಕಯ್ಯ ಎಂಬುದನ್ನು ಗ್ರಹಿಸಬಹುದಾಗಿದೆ. ಉಳಿಮೇಶ್ವರ ಎಂಬುದು ಒಂದು ಗ್ರಾಮದ ಹೆಸರಾಗಿದ್ದು, ಚಿಕ್ಕಯ್ಯ ಆ ಊರಿಗೆ ಸೇರಿದವನು ಎಂಬುದು ಸರಳ ತಿಳುವಳಿಕೆಯಾಗಿದೆ. ಆತ ದೇವರಗುಡಿಯವನಾಗಿದ್ದರೆ, 'ಉಳಿಮೇಶ್ವರ ಚಿಕ್ಕಯ್ಯ' ಎಂದು ಹೆಸರು ಬರುವ ಪ್ರಮೇಯವೇ ಇರಲಿಲ್ಲ. ಜೊತೆಗೆ ಚಿಕ್ಕಯ್ಯನ ವಚನಾಂಕಿತ 'ಉಳಿಯುಮೇಶ್ವರಾ' ಎಂದು ಆಗಿರುವುದರಿಂದ ಸಹಜವಾಗಿಯೇ ಉಳಿಮೇಶ್ವರದಲ್ಲಿತ್ತು ಎಂದು ಹೇಳುವ ಈಶ್ವರನ ಉಲ್ಲೇಖವೇ ಇರಬೇಕು. ಈ ಈಶ್ವರ ಚಿಕ್ಕಯ್ಯನ ಆರಾಧ್ಯ ದೈವವಾಗಿರಬಹುದಾಗಿದೆ.

ಉಳಿಮೇಶ್ವರ (ಉಳಿಯುವೇಶ್ವರ) ಎಂಬ ಈ ಗ್ರಾಮದ ಮಗ್ಗುಲಿಗೆ ಹಿರೇಹಳ್ಳ ಒಂದು ಹರಿಯುತ್ತದೆ. 'ಹಳ್ಳ ದಾಟಿ ಬಲದಂಡೆಯ ಮೇಲೆ ಸುಮಾರು ಅರ್ಧ ಕಿ.ಮೀ. ನಡೆದರೆ ಪಿಕಳಿಹಾಳ ಗ್ರಾಮದ ನಿವಾಸಿಯಾದ ಮಹಾಂತಪ್ಪ ತಂದೆ ಸಂಗಪ್ಪ ರೆಡ್ಡೇರ ಹೊಲ ಸಿಗುತ್ತದೆ. ಇವರು ಲಿಂಗಾಯತ ಧರ್ಮಕ್ಕೆ ಸೇರಿದವರು. ಈ ಹೊಲದಲ್ಲಿ ಒಂದು ಹಾಳು ಬಿದದಿರುವ ಅಧಿಷ್ಠಾನವನ್ನು ಚಿಕ್ಕಯ್ಯನ ಗುಡಿ ಎಂದು ಸ್ಥಳೀಯರು ಕರೆಯುತ್ತಾರೆ. ಸುಮಾರು ೩ ಮೀ. x ೩ ಮೀ. ಚಚ್ಚೌಕಾರದ ಜಾಗದ ಮಧ್ಯದಲ್ಲಿ ಒಂದು ಸ್ಥಾವರಲಿಂಗ ಇದೆ. ಗುಡಿ ಹಾಳಾಗಿರುವ ಕುರುಹುಗಳು ಸ್ಪಷ್ಟವಾಗಿ ಕಾಣುತ್ತದೆ. ಈ ಸ್ಥಾವರಲಿಂಗಕ್ಕೆ ಹೊದ ಮಾಲಕರು ಪೂಜೆ ಮಾಡುತ್ತಾರೆ. ಹಾಗೂ ಇದನ್ನು ಚಿಕ್ಕಯ್ಯನ ಗುಡಿ ಎಂದು ಹಲವಾರು ತಲೆಮಾರುಗಳಿಂದ ಕರೆಯುತ್ತಾ ಬಂದಿದ್ದಾರೆ'. (ಎಚ್. ಚಂದ್ರಶೇಖರ, 'ವಚನಕಾರ ಚಿಕ್ಕಯ್ಯ ಮತ್ತು ಚಿಕ್ಕಯ್ಯ ಪಂಡಿತ', ಬಸವಪಥ ೨೫-೧೧, ೨೦೦೪).

ವಚನಗಳು : ೧೨

ವಚನಾಂಕಿತ : ಉಳಿಯುಮೇಶ್ವರಾ

ಮಾಹಿತಿ : ಡಾ. ಗಿರಿಗೌಡ ಅರಳಿಹಳ್ಳಿ

## ಬಿಜಾಪೂರ ಜಿಲ್ಲೆಯ ಶರಣ ಸ್ಮಾರಕಗಳು

### ಬಸವನಬಾಗೇವಾಡಿ ತಲೂಕು :

### ೧. ಇಂಗಳೇಶ್ವರ :
### ಬಸವಣ್ಣನವರು ಹುಟ್ಟಿದ ಊರಲ್ಲಿಯ ಸ್ಮಾರಕಗಳು

ಹಡದವ್ವ ಮಾದವ್ವ ಹಡೆದಪ್ಪ ಮಾದರಸು
ಪಡೆದವ್ವ ಅಕ್ಕನಾಗಾಯಿ । ಬಸವನಿಗೆ
ಬಿಡದೆ ಸಲುಹಿದನು ವರ ಸಂಗ

ವಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಒಂದು ಅಗ್ರಹಾರವಾಗಿದ್ದ ಪುರಾತನ ಗ್ರಾಮ ಇಂಗಳೇಶ್ವರ. ಬಾಗೇವಾಡಿಯಿಂದ ೧೧ ಕಿ.ಮೀ. ಅಂತರದಲ್ಲಿದೆ. ಇಲ್ಲಿ ಶಿಲಾಯುಗದ ಅವಶೇಷಗಳು ಕೂಡ ಸಿಗುತ್ತವೆ. ಕಲಚೂರ್ಯ ವಂಶದ ರಾಜರ



ಸೋಮೇಶ್ವರ ದೇವಾಲಯ



**ಸೋಮೇಶ್ವರ ದೇವಾಲಯದ ಮಂಟಪ**

ಆಳ್ವಿಕೆಗೆ ಇಂಗಳೇಶ್ವರ ಒಳಪಟ್ಟಿತ್ತೆಂದೂ ಹಾಗಾಗಿಯೆ ಮಾದಲಾಂಬಿಕೆಯ ಸಹೋದರರಾದ ಬಲದೇವ, ಸಿದ್ಧರಸರು ಬಿಜ್ಜಳನ ಆಸ್ಥಾನದಲ್ಲಿ ಪ್ರಮುಖ ಸ್ಥಾನ ಪಡೆದಿದ್ದರೆಂದೂ ಅದು ಬಸವಣ್ಣ, ಚನ್ನಬಸವಣ್ಣನವರೆಗೂ ಮುಂದುವರೆಯಿತೆಂದೂ ಇತಿಹಾಸದಿಂದ ತಿಳಿದುಬರುತ್ತದೆ.

**ತಿಂಗಳೇಶ್ವರ-ಇಂಗಳೇಶ್ವರ :**

ಇಂಗಳೇಶ್ವರ ಶೈವ ವಿದ್ಯಾಕೇಂದ್ರವೂ ಆಗಿತ್ತು. ಶಾಸನಗಳಲ್ಲಿ ಇಂಗಳೇಶ್ವರದ ಪ್ರಸ್ತಾಪವಿದೆ. ಈ ಊರು 'ಇಂಗುಳೇಶ್ವರ' 'ಇಂಗಳೇಶ್ವರ', 'ಅಗ್ರಹಾರಿಂಗಳೇಶ್ವರ', 'ತಿಂಗಳೇಶ್ವರ', 'ಕರ್ನಾಟಕದ ಕಾಶೀಪುರಂ' ಎಂಬ ಹೆಸರುಗಳಿಂದ ಕರೆಯಲ್ಪಡುತ್ತಿತ್ತೆಂದು ತಿಳಿದು ಬರುತ್ತದೆ. ಇಂಗಳೇಶ್ವರದಿಂದ ಸ್ವಲ್ಪ ದೂರದಲ್ಲಿ ಗುಡ್ಡದ ಕೆಳಗೆ 'ತಿಂಗಳೇಶ್ವರ' ಎಂಬ ಊರು ಇದ್ದ ಬಗ್ಗೆ ಕೆಲ ಪಳೆಯುಳಿಕೆಗಳು ಉಳಿದುಕೊಂಡಿವೆ. ಅಲ್ಲೊಂದು ಶಿವನ ಗುಡಿಯಿದೆ. ಚಂದ್ರನ ತಂಪಾದ ಕಿರಣಗಳು ನೇರವಾಗಿ ಶಿವನ ಮೇಲೆ ಬೀಳುತ್ತಿದ್ದುದರಿಂದ ಈ ಗ್ರಾಮಕ್ಕೆ ತಿಂಗಳೇಶ್ವರ ಎಂಬ ಹೆಸರು ಬಂದಿತ್ತೆಂದು ಹೇಳಲಾಗುತ್ತದೆ. ಅಲ್ಲಿ ಒಂದು ಸಾರೆ ಬೆಂಕಿ ಮಳೆ ಬಿದ್ದ ಕಾರಣ ಅಲ್ಲಿಂದ ಊರನ್ನು ಸ್ಥಳಾಂತರಿಸಲಾಯಿತಂತೆ. ಬೆಂಕಿಬಿದ್ದ ಕಾರಣದಿಂದಾಗಿ ಹೊಸ ಸ್ಥಳದಲ್ಲಿ ನಿರ್ಮಾಣವಾದ ಊರಿಗೆ ಇಂಗಳ(ಬೆಂಕಿ) ಎಂದೂ ಇಂಗಳೇಶ್ವರ ಎಂದೂ ಕರೆಯಲಾಯಿತೆಂದು ಹೇಳಲಾಗುತ್ತದೆ. ಹಿಂದೊಮ್ಮೆ ಶಾಂತಕಿರಣದ ಚಂದ್ರನ ಹೆಸರು

ಪಡೆದ ಊರು, ಮುಂದೆ ಬೆಂಕಿಯ ಹೆಸರು ಪಡೆಯಿತೆಂದು ತೋರುತ್ತದೆ. ಇದು ಇಂಗಳೇಶ್ವರ>ಇಂಗಳೇಸೂರ ಎಂದು ಹೆಸರು ಬರಲು ಹೇಳುವ ಹಿನ್ನೆಲೆ.

**ಶಿವಲಿಂಗ ದೇವಾಲಯಗಳ ಬೀಡು :**

ಇಂಗಳೇಶ್ವರದಲ್ಲಿ ಪುರಾತನವಾದ ದೇವಾಲಯಗಳ ಸಂಖ್ಯೆ ಹೆಚ್ಚಿಗಿದೆ. ಆದರೆ ವ್ಯವಸ್ಥಿತವಾಗಿರದ ಹಾಳುಬಿದ್ದ ದೇವಾಲಯಗಳೇ ಹೆಚ್ಚು. ಅವುಗಳಲ್ಲಿ ಸೋಮನಾಥೇಶ್ವರ, ಕಲ್ಮೇಶ್ವರ, ನೀಲಕಂಠೇಶ್ವರ, ಸೋಬಾನದೇವರ ಗುಡಿಗಳು ಈಗಲೂ ನೋಡಲು ಸಿಗುತ್ತವೆ. ನಾಲ್ಕು ಹಳೆಯ ಗುಡಿಗಳು. ಬಸವಣ್ಣ, ಅಕ್ಕನಾಗಮ್ಮ ಈ ಗುಡಿಗಳಲ್ಲಿ ಆಡಿದ್ದಾರೆಂದು ಜನ ಈಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಇವುಗಳಲ್ಲಿ ನೀಲಕಂಠೇಶ್ವರ ದೇವಾಲಯದ ಬಗ್ಗೆ ಗಮನಾರ್ಹವಾದ ಕೆಲ ಸಂಗತಿಗಳು ಇವೆ. ಮಾದಲಾಂಬಿಕೆಯ ಸಹೋದರ ನೀಕಂಠ ಕಟ್ಟಿಸಿದ ಗುಡಿ ಇದು. ಹಿಗಾಗಿ ನೀಲಕಂಠೇಶ್ವರ ದೇವಾಲಯವೆಂದು ಈ ಗುಡಿಯನ್ನು ಕರೆಯುತ್ತಿದ್ದರೆನ್ನುತ್ತಾರೆ. ದೇವಾಲಯದ ಗರ್ಭಗುಡಿಯೊಳಗಿನ ನವರಂಗದ ಎಡಬಲಕ್ಕೆ ಎರಡು ಲಿಂಗಗಳಿವೆ. ದ್ವಾರಬಾಗಿಲೆದರು ಒಂದು ಶಾಸನ ಇದೆ. ಗುಡಿಯ ಒಂದು ಮಗ್ಗಲು, ಈಗ ಇದ್ದ ಮನೆಯ ಮುಂದೆ ಒಂದು ಗುರುತು ತೋರಿಸಿ ಅಲ್ಲಿ ಒಂದು ದೊಡ್ಡ ಗವಿ ಇದೆ ಎನ್ನುತ್ತಾರೆ.



ನೀಲಕಂಠೇಶ್ವರ ಗುಡಿ



నీలకంఠేశ్వర గుడియ మంటప

ನೀಲಕಂಠೇಶ್ವರ ದೇವಾಲಯವನ್ನು ಈಗ ನಾರಾಯಣ ದೇವಾಲಯವೆಂದು ಕರೆಯುತ್ತಾರೆ. ನಾರಾಯಣ ಮೂರ್ತಿ ಇತ್ತೀಚಿನದಾಗಿದ್ದು, ಪೂರ್ವದ ಶಿವಲಿಂಗವನ್ನು ತೆಗೆದು ಇದನ್ನು ಸ್ಥಾಪಿಸಿದ್ದು ಸ್ಪಷ್ಟವಾಗಿ ಕಾಣುತ್ತದೆ. ಈ ಬಗೆಗೆ ಕೇಳಿದಾಗ, ಅದಕ್ಕೆ ಸಂಬಂಧಿಸಿದಂತೆ ಒಂದು ಕಥೆಯನ್ನು ಹೇಳಿದರು.

ಈ ದೇವಾಲಯಕ್ಕೆ ಸುಮಾರು ೫೦ ವರ್ಷಗಳ ಹಿಂದೆ ಚೌಡಮ್ಮನ ಗುಡಿ ಎಂದು ಕರೆಯುತ್ತಿದ್ದರಂತೆ. ಚೌಡಮ್ಮನ ಜಾತ್ರೆಯಲ್ಲಿ ಬಾಳಬಟ್ಟಲ(ಜಾತ್ರಿ ಸಾಮಾನುಗಳು) ನ್ನು ಡೋಣೂರ ಊರವರು ತೆಗೆದುಕೊಂಡು ಹೋದರಂತೆ. ಈ ಅಪಶಕುನದಿಂದಾಗಿ ಜಾತ್ರೆಯೆ ನಿಂತು ಹೋಯಿತಂತೆ. ಹೇಗಾದರೂ ಮಾಡಿ ಡೋಣೂರಿಂದ ಬಾಳಬಟ್ಟಲು ತರುವುದೆಂದು ಊರವರೆಲ್ಲ ಹಂಚಿಕೆ ಹಾಕಿದರಂತೆ. ಈ ಸಂಗತಿಯನ್ನು ಗಮನಿಸಿದ ಡೋಣೂರು ಗ್ರಾಮದವರು ತಮ್ಮೂರ ಜಾತ್ರೆ ನೋಡಲೆಂದು ಇಂಗಳೇಶ್ವರದವರು ಬಂದರೆ ಅಥವಾ ಸ್ನೇಹಿತರ ಮನೆಗೆ ಬಂದರೆ ಅವರಿಗೆ ಜಾತ್ರೆ ನೋಡಲು ಅವಕಾಶ ವಾಗದಂತೆ ಬಂದೋಬಸ್ತ ಮಾಡಿದ್ದರಂತೆ.

ಒಂದು ಸಾರೆ ಇಂಗಳೇಶ್ವರದ ಒಬ್ಬ ವ್ಯಕ್ತಿ ದವಸಧಾನ್ಯಗಳನ್ನು ತೆಗೆದುಕೊಂಡು ಬಿಜಾಪೂರ ಅಡತಿಗೆ ಹೋಗಿದ್ದವನು ಮರಳಿ ಬರುವಾಗ ಡೋಣೂರು ತಲುಪುವಷ್ಟರಲ್ಲಿ ಕತ್ತಲಾಯಿತಂತೆ. ಊರವರಿಗೆ ತಾನು ಇಂಗಳೇಶ್ವರದವನು ಎಂದು ಹೇಳದೆ ಅಲ್ಲಿಯೆ ತಂಗಿ, ಬೆಳಿಗ್ಗೆ ಹೊರಡುವುದಾಗಿ ಕೇಳಿಕೊಳ್ಳುತ್ತಾನೆ. ನಂತರ ಊರವರೆಲ್ಲ ಮಲಗಿದ ಮೇಲೆ ಡೋಣೂರಿನ ನಾರಾಯಣ ಮೂರ್ತಿಯನ್ನು

ಹೊತ್ತು ಗಾಡಿಯಲ್ಲಿಟ್ಟು ಹೊರಡುತ್ತಾನೆ. ಸ್ವಲ್ಪ ಸಮಯದಲ್ಲಿ ಊರವರಿಗೆ ಸುಳಿಹು ಹತ್ತಿ ಅವನ ಬೆನ್ನು ಹತ್ತುತ್ತಾರೆ. ಆದರೆ ಆಗಲೇ ಆ ವ್ಯಕ್ತಿ ಡೋಣೂರ ಸೀಮೆ ದಾಟಿ ಇಂಗಳೇಶ್ವರ ಸೀಮೆಗೆ ಕಾಲಿಟ್ಟಾಗಿರುತ್ತದೆ. ಹೀಗಾಗಿ ಡೋಣೂರವರು ಅವರಿಗೆ ಏನೂ ಮಾಡಲು ಆಗುವುದಿಲ್ಲ. ಆ ಮೂರ್ತಿಯನ್ನು ತಂದು ಚೌಡಮ್ಮನ ಗುಡಿಯಲ್ಲಿ ಪ್ರತಿಷ್ಠಾಪಿಸುತ್ತಾರೆ. ಇದರಿಂದ ಊರವರಿಗೆಲ್ಲ ಸಂತೋಷ ಆಗುತ್ತದೆ. ಅಂದಿನಿಂದ ಈ ಗುಡಿಗೆ ನಾರಾಯಣದೇವರ ಗುಡಿ ಎಂದು ಕರೆಯುವ ವಾಡಿಕೆ ಪ್ರಾರಂಭವಾಯಿತಂತೆ.

ನಾರಾಯಣ ಮೂರ್ತಿಯ ಹಿಂದೆ ಈಗಲೂ ಒಂದು ಲಿಂಗವಿದೆ. ಅದರ ಹಿಂದಿನ ಸ್ಥಳದಲ್ಲಿ ಸುರಂಗಮಾರ್ಗ ಇದೆ ಎಂದು ಹೇಳುತ್ತಾರೆ. ಈ ಮಾರ್ಗವು ರೇವಣಸಿದ್ಧೇಶ್ವರ ಗುಡ್ಡಕ್ಕೆ, ಅಕ್ಕನಾಗಮ್ಮನ ಗವಿಗೆ ಹೋಗುತ್ತದೆ ಎಂದೂ ಹೇಳಲಾಗುತ್ತದೆ. ಈ ಗುಡಿ ಮಾದಲಾಂಬಿಕೆಯ ಸಹೋದರ ನೀಲಕಂಠನೇ ಕಟ್ಟಿಸಿ ನೀಲಕಂಠೇಶ್ವರ ದೇವಾಲಯವೆಂದೇ ಹೆಸರು ಕೊಟ್ಟಿದ್ದ ಕಾರಣ ಸುರಂಗಮಾರ್ಗ ಅಕ್ಕನಾಗಮ್ಮನ ಗವಿಯವರೆಗೆ ಇದೆ ಎಂಬ ಕಲ್ಪನೆ ಉಳಿದಿರಬಹುದಾಗಿದೆ.



ಬಸವಣ್ಣನವರು ಹುಟ್ಟಿದ ಮನೆಯ ಸ್ಮಾರಕ



ಬಸವಣ್ಣನವರು ಹುಟ್ಟಿದ ಮನೆಯ ಸ್ಮಾರಕದ ಒಳಾಂಗಣ
ತಾಯಿ ಮಾದಲಾಂಬಿಕೆ ಕೂಸು ಬಸವನನ್ನು ಎತ್ತಿಕೊಂಡಿರುವುದು
ಅಕ್ಕನಾಮ್ಮ ಮಗ್ಗುಲಲ್ಲಿ ನಿಂತಿರುವುದು

### ಬಸವಣ್ಣನವರು ಹುಟ್ಟಿದ ಮನೆಯ ಸ್ಮಾರಕ :

ಇಂಗಳೇಶ್ವರ ಮಾದಲಾಂಬಿಕೆಯ ತವರು ಮನೆ. ಅವಳ ತವರು ಮನೆಯಲ್ಲಿ ಬಸವಣ್ಣ ಹುಟ್ಟಿದ ಎಂದು ಹೇಳುವ ಮನೆ ಇಂದು ಸ್ಮಾರಕವಾಗಿ ನಿಂತಿದೆ. ಬಸವಣ್ಣನವರು ಹುಟ್ಟಿದರೆಂದು ಗುರುತಿಸಲಾದ ಕುಲಕರ್ಣಿಯವರ ಮನೆಯನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದವರು ವಶಪಡಿಸಿಕೊಂಡು ಒಂದು ಸುಂದರವಾದ ಸ್ಮಾರಕವನ್ನು ನಿರ್ಮಿಸಿದ್ದಾರೆ. ಒಳಗಡೆ ತಾಯಿ ಮಾದಲಾಂಬಿಕೆ ಕೂಸು ಬಸವಣ್ಣನವರನ್ನು ಎತ್ತಿಕೊಂಡು ನಿಂತಿರುವಂತೆ, ಮಗ್ಗುಲಲ್ಲಿ ಅಕ್ಕನಾಗಮ್ಮ ಇರುವಂತೆ ಮೂರ್ತಿಗಳನ್ನು ನಿರ್ಮಿಸಿದ್ದಾರೆ. ಇದು ನೋಡುಗರಿಗೆ ತುಂಬಾ ಆಕರ್ಶಕವಾಗಿಯೂ ಪರಿಣಾಮಕಾರಿಯಾಗಿಯೂ ಕಾಣಿಸುತ್ತದೆ.

೯೦೦ ವರ್ಷಗಳ ಹಿಂದಿನ ಮಾತು. ಬಸವಣ್ಣನವರು ಜನಿಸಿದ ಮನೆ ಈಗ ಎಷ್ಟು ಮನೆತನಗಳು ವಾಸವಾಗಿದ್ದ ಮನೆಯಾಗಿದೆಯೋ ಏನೋ. ಈ ಮನೆ ಸ್ಮಾರಕವಾಗುವ ಮೊದಲು ಅಲ್ಲಿ ಇದ್ದವರು ಉಕ್ಲಿ ಮನೆತನದವರಾಗಿದ್ದರು. ಇವರು ಮೂಲ ಮಾಲೀಕರಾದ ಕುಲಕರ್ಣಿ ಅವರಿಂದ ಆ ಮನೆಯನ್ನು ಖರೀದಿಸಿದ್ದರು. ಮನೆಯಲ್ಲಿ ಗಾಣವಿತ್ತು. ಅಲ್ಲದೆ ಅವರಿಗೆ ಮನೆ ಕಟ್ಟುವಾಗ ಅಲ್ಲಿ ನಂದಿ

ಮೂರ್ತಿಯೊಂದು ಸಿಕ್ಕಿದೆಯಂತೆ. ಅದನ್ನು ಈಗಲೂ ಅವರು ತಮ್ಮ ಮನೆಯ ಜಗಲಿಯ ಮೇಲಿಟ್ಟು ಪೂಜಿಸುತ್ತಾರೆಂದು ತಿಳಿದುಬರುತ್ತದೆ.

ಬಸವಣ್ಣನವರ ತಾಯಿಯ ತವರು ಮನೆಯ ಸಂಬಂಧಿಗಳೆಂದು, ಅಣ್ಣತಮ್ಮಂದಿರೆಂದು ಹೇಳಿಕೊಳ್ಳವ ಮನೆಗಳು ಈಗಿನ ಸ್ಮಾರಕದ ಸುತ್ತಮುತ್ತಲು ಇವೆ. ಅವರೆಲ್ಲ ಈಗ ಬಸವಣ್ಣನವರು ತಮ್ಮ ಮನೆತನಕ್ಕೆ ಸಂಬಂಧಿಸಿದವರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬಸವಣ್ಣನ ವಂಶಜರೆಂದು ಹೇಳಿಕೊಳ್ಳುವವರ ಮನೆಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ ಎಂಬ ಹೆಸರುಗಳನ್ನು ಇಡುವ ಸಂಪ್ರದಾಯ ಕಾಣುವುದಿಲ್ಲ. ಕುಲಕರ್ಣಿ ಅವರನ್ನು ಈ ವಿಷಯವಾಗಿ ಮಾತನಾಡಿಸಿದಾಗ ನಮ್ಮ ಪೂರ್ವಜರ ಹೆಸರುಗಳಾದ ಮಾದಪ್ಪ, ಮುದ್ದಪ್ಪ, ನೀಲಕಂಠರಾವ, ಶಿವದೇವ, ಶಿವರಾಯ ಎಂಬ ಹೆಸರನ್ನು ಇಡುತ್ತಾ ಬಂದಿದ್ದೇವೆ. ಆದರೆ ಬಸವಣ್ಣ ಎಷ್ಟೇ ಆಗಲಿ ಮಾದರಸ ಅವರ ಮನೆತನದವ. ಇದು ಮಾದಲಾಂಬೆಯ ತವರು ಮನೆ. ಇದಕ್ಕಿಂತ ಮುಖ್ಯ ಅಂದರೆ ಅವರು ನಮ್ಮ ಧರ್ಮದ ಸಂಸ್ಕಾರವನ್ನೇ ಧಿಕ್ಕರಿಸಿ ಹೋದ ಕಾರಣ ಆ ಹೆಸರನ್ನು ಇಡುವ ರೂಢಿ ಇರಲಿಕ್ಕಿಲ್ಲ ಎಂದು ವಿವರಿಸಿದರು. ಹಾಗಾದರೆ ಮಾದಲಾಂಬಿಕೆ ಮಾದರಸ ಅವರು ಬಸವಣ್ಣನವರು ಹುಟ್ಟಿದಾಗ ಇಟ್ಟ ಹೆಸರು ಬೇರೆ ಆಗಿತ್ತೆ? ಎಂದರೆ 'ಇಲ್ಲ ಇಲ್ಲ; ನಮ್ಮಲ್ಲಿ ಗಂಡಸರ ಹೆಸರುಗಳು ಬದಲಾಗುವುದಿಲ್ಲ. ಮಾದರಸ ಮಾದಲಾಂಬಿಕೆ ನಂದಿ ನೋಂಪಿ ಮಾಡಿ ಮಗನನ್ನು ಪಡೆದ ಕಾರಣ ಅವನಿಗೆ ಹುಟ್ಟಿದಾಗಲೇ ಬಸವರಾಜನೆಂದು ಹೆಸರಿಟ್ಟಿದ್ದಾರೆ' ಎಂಬ ಮಾಹಿತಿಯನ್ನು ಬಾಬುರಾವ ಗುಂಡೇರಾವ ಕುಲಕರ್ಣಿ ಅವರು ನೀಡಿದರು.

### ಹಾಲಬಾವಿ :

ಬಸವಣ್ಣನವರ ಮುಂಜಿವೆ ಮುರಿದಾಗ ಅವರು ಬಹುಶಃ ತನ್ನ ಸಹೋದರಿಯನ್ನೊಮ್ಮೆ ಕಂಡು ಹೋಗಬೇಕೆಂದು ಇಂಗಳೇಶ್ವರಕ್ಕೆ ಬಂದಿರಬಹುದು. ಆಗ ಅಕ್ಕನಾಗಮ್ಮ ಬಸವಣ್ಣನವರ ಜೊತೆಗೆ ಹೊರಟಿರಬಹುದು. ಮಕ್ಕಳನ್ನು ಅಗಲಿರುವದು ತಾಯಿಗೆ ಆಗದ ಮಾತು. ಹೀಗಾಗಿ ಮಾದಲಾಂಬಿಕೆ 'ಮಗನೆ, ನೀನು ಮನಿಬಿಟ್ಟು ಹೊರಟಿರುವಿ. ನಿನ್ನ ಗುರುತು ಏನಾದರೂ ನನಗೆ ಕೊಟ್ಟುಹೋಗು' ಎಂದು ಶೋಕಿಸಿದಳಂತೆ. ಆಗ ಬಸವಣ್ಣ ಇನ್ನೂ ಬಾಲಕ. 'ನೀನು ನನಗೆ ಹಾಲು ಕುಡಿಸಿ ಬೆಳೆಸಿರುವೆ. ಅದನ್ನು ಬಿಟ್ಟು ನನ್ನಲ್ಲಿ ಕೊಡಲು ಬೇರೇನೂ ಇಲ್ಲ. ನೀ ಕುಡಿಸಿದ ಹಾಲನ್ನೇ ಗುರುತಾಗಿ ಕೊಟ್ಟು ಹೋಗುತ್ತೇನೆ' ಎಂದು ಹಾಲನ್ನು ಕಕ್ಕಿಕೊಂಡನಂತೆ. ಅದರ ಸ್ಮಾರಕವಾಗಿ ಒಂದು ಬಾವಿ ನಿರ್ಮಾಣವಾಗಿದೆ. ಅದಕ್ಕೆ 'ಹಾಲಬಾವಿ' ಎಂದು ಕರೆಯುತ್ತಾರೆ. ಈ ಬಾವಿ ಊರ ಕೊನೆಯಲ್ಲಿ, ದಾರಿಯ ಬದಿಗೆ ಇದೆ. ಬಸವಣ್ಣ ಆಗ ಕೇವಲ ಎಂಟೊಂಬತ್ತು ವರ್ಷದವ ಮಾತ್ರ ಆಗಿರಬೇಕು. ವೈದಿಕರಲ್ಲಿ ೮ ವರ್ಷದಲ್ಲಿ ಮಕ್ಕಳಿಗೆ ಗುರುಬಲ ಇರುತ್ತದೆ. ಬಹಳ ಎಂದರೆ ೯ ನೇ ವರ್ಷಕ್ಕೆ ಮುಂಜಿವೆ ಮಾಡಲಾಗುತ್ತದೆ ಎಂದು ಬಾಬುರಾವ ಕುಲಕರ್ಣಿ ಹೇಳಿದರು. ೧೬ನೇ ವರ್ಷಕ್ಕೆ ಮುಂಜಿವೆ ಮಾಡುವುದು ತೀರ ಅಪರೂಪ ಎನ್ನುತ್ತಾರೆ.



ಹಾಲ ಬಾವಿ

**ಬಸವನ ಬಾವಿ:**

'ಹಾಲಬಾವಿ' ಇಂದ ಸ್ವಲ್ಪ ದೂರದಲ್ಲಿ ಗೌಡರ ಹೊಲದಲ್ಲಿ ಒಂದು ತೆರೆದ ಬಾವಿ ಇದೆ. ಬಾವಿಗೆ ಸಮೀಪದಲ್ಲಿ ಹಾಳುಬಿದ್ದ ದೇವಾಲಯವಿದೆ. ಇಂಗಳೇಶ್ವರ ಶೈವ ವಿದ್ಯಾಕೇಂದ್ರವಾಗಿತ್ತೆಂದು ಹೇಳುವುದನ್ನು ಗಮನಿಸಿದಾಗ, ಬಸವಣ್ಣನವರ ಬಾಲ್ಯದ ಓದು ಇಲ್ಲಿಯೇ ಆಗಿರಬಹುದು ಎನಿಸುತ್ತದೆ. ಗುರುಗಳು ಶಿಷ್ಯರ ಪಾಟಿಗಳನ್ನು ತೊಳೆದು ತರಲು ಹೇಳಿದಾಗ ಒಂದು ಘಟನೆ ನಡೆಯುತ್ತದೆ. ಎಲ್ಲ ಚಿಕ್ಕ ವಯಸ್ಸಿನ ಮಕ್ಕಳು ನಾಮುಂದು ತಾಮುಂದು ಎಂದು ಹೋಗಿ ನೂಕು ನುಗ್ಗಲಲ್ಲಿ ಒಬ್ಬ ಬಾಲಕ ಬಾವಿಯಲ್ಲಿ ಬೀಳುತ್ತಾನೆ. ಆ ಜಾಣ ಹುಡುಗರು ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಬಸವಣ್ಣನ ಮೇಲೆ ಆರೋಪ ಹೊರಿಸುತ್ತಾರೆ. ಪಂಚಾಯತಿ ಸೇರುತ್ತದೆ. ಬಸವಣ್ಣ ತನ್ನಿಂದ ಈ ತಪ್ಪು ಆಗಿಲ್ಲ ಎಂದೇ ಸಮರ್ಥಿಸಿಕೊಳ್ಳುತ್ತಾನೆ. ಆಗ ದೈವದವರು ಅದಕ್ಕೇನು ಸಾಕ್ಷಿ ಎಂದಾಗ ಬಾವಿಯಲ್ಲಿ ಬಿದ್ದ ಬಾಲಕನೇ ಸಾಕ್ಷಿ ನುಡಿಯುತ್ತಾನೆ ಎನ್ನುತ್ತಾನೆ ಬಸವಣ್ಣ. ಹಾಗಾದರೆ ಸಾಕ್ಷಿ ನುಡಿಸು ಎಂದಾಗ ಆ ಮಗುವಿನ ಹೆಸರ್ಹಿಡಿದು ಕರೆದು ಮಾತನಾಡಿಸಿ, ತಾನು ತಪ್ಪಿತಸ್ತನೆ? ಎಂದು ಕೇಳಿದಾಗ, ಇಲ್ಲ ಎಂಬ ಉತ್ತರವನ್ನು ಬಾವಿಯೊಳಗಿನ ಬಾಲಕ ಕೊಡುತ್ತಾನೆ. ಆಗ ಅವನನ್ನು ದಡಕ್ಕೆ ತರುತ್ತಾರೆ. ಹೀಗೆ ಆ ಬಾಲಕನನ್ನು ಬಸವ ಬದುಕಿಸಿದ ಎಂಬ ಧನ್ಯತೆ ಎಲ್ಲರಲ್ಲಿ ಮೂಡುತ್ತದೆ. ಬಾಲಕ ಬಸವಣ್ಣನ ಈ ಶಕ್ತಿ ಕಂಡು ಎಲ್ಲರೂ ಬೆರಗಾಗುತ್ತಾರೆ. ಆ

ಘಟನೆ ನಡೆದ ಬಾವಿ ಇದು ಎಂದು ಗಂಗಾಬಾಯಿ ಶ್ಯಾಮಗೋಳ ಅವರು ತೋರಿಸಿದರು. ಇದಕ್ಕೆ 'ಬಸವನ ಬಾವಿ' ಎಂದು ಊರವರು ಕರೆಯುತ್ತಾರೆಂದು ಹೇಳಿದರು.

ಮಾಹಿತಿ: ಗಂಗಾಬಾಯಿ ಶ್ಯಾಮಗೋಳ, ಬಾಬುರಾವ ಗುಂಡೇರಾವ ಕುಲಕರ್ಣಿ

ಮಾಧವರಾವ ನರಸಿಂಹರಾವ ಕುಲಕರ್ಣಿ

***



ಬಸವನ ಬಾವಿ

## ಭಾಗ್ಯವಾಡಿಯಲಿ ಬ್ರಹ್ಮರ ಮಠದಲ್ಲಿ ಹುಟ್ಟ್ಯಾರ ಬಸವಣ್ಣ

ಭಜನಿದೊಳಗೆ ನಾ ನಿಂತ ಹೇಳತಿನಿ ಕೇಳಿರಿ ಈ ವಚನ
ಭಾಗ್ಯವಾಡಿಯಲಿ ಬ್ರಹ್ಮರ ಮಠದಲ್ಲಿ ಹುಟ್ಟ್ಯಾರ ಬಸವಣ್ಣ ॥ ಪ ॥

ವೀರಶೈವರ ಮತವ ಬೆಳಸಲಿಕ್ಕೆ ಬಂದರ ಬಸವಣ್ಣ
ಮಾದಲಾಂಬಿಕೆಯ ಹೊಟ್ಟೀಲಿ ಹುಟ್ಟಿ ಜಗದೊಳು ಮೆರದಿದನ ।
ಚಿಕ್ಕ ಹುಡುಗರಾದಾಗ ಚಿಕ್ಕ ವಯಸಿನಾಗ ಚಂಡಾಟ ಆಡತಿದ್ದರಾ
ಚಂಡ ಉರಳಿ ಹೋಗಿ ಭಾವ್ಯಾಲಿ ಬಿದ್ದರ ಹ್ಯಾಂಗಿದ್ದರು ಚೈನ । ॥ ೧ ॥

ಆದರೊಳಗೊಬ್ಬ ಹುಡುಗ ದಡಗದುಡಗ ಮಾಡಿ ಭಾವ್ಯಾಲಿ ಹಾರಿದನಾ
ಚಂಡಿನ ಸಲುವಾಗಿ ನೀರ ಕುಡಿದು ಕುಡಿದು ಬಿಟ್ಟಿದನವ ಪ್ರಾಣ ।
ಎಲ್ಲ ಹುಡುಗರು ಕೂಡಿ ಕಮಿಟಿ ಮಾಡ್ಯಾರೋ ಗರೀಭಾನ ಬಸವಣ್ಣ
ತಾಯಿ ತಂದಿ ಬಂದು ಕೇಳಿದರ್ಲೆಳರಿ ನೂಕ್ಯಾನ ಬಸವಣ್ಣ । ॥ ೨ ॥

ತಾಯಿ ತಂದಿ ಬಂದು ಪೊಲೀಸದವರಿಗೆ ಕರಸ್ಯಾರಿ ಆ ಕ್ಷಣಾ
ಪೊಲೀಸದವರು ಬಂದು ಕೈ ಹಿಡಿದು ಕೇಳಿದ್ರ ಖಿನ್ನಾದ ಬಸವಣ್ಣ ।
ಎಲ್ಲ ಹುಡುಗರು ಒಂದೇ ನುಡಿತಾರ ಮಾಡಲಿ ಇನ್ನೇನ
ದಯಾ ನೀನೇ ಸಂಗಮೇಶನಂದು ನಿಂತಾರೋ ಬಸವಣ್ಣ । ॥ ೩ ॥


ಎಲ್ಲ ಹುಡುಗರು ಒಂದೇ ನುಡಿತಾರ ನೀ ಹ್ಯಾಂಗ ಹೇಳಣ್ಣಾ
ಸತ್ತಿದ ಹೆಣ ಎದ್ದು ನಿಂತು ಹೇಳ್ತಾದ ನೀ ನೂಕಿಲ್ಲ ಬಸವಣ್ಣ ।
ಚಂಡಿನ ಸಲುವಾಗಿ ನೀರ ಕುಡಿಕುಡಿದು ಬಿಟ್ಟಿದ ನಾ ಪ್ರಾಣ
ದಯಾ ಮಾಡೋ ಹಾರಕೂಡ ಚನ್ನಬಸವ ನೀನೇ ನಿಜ ಶರಣ ॥ ೪ ॥

– ಶ್ರೀಮತಿ ಶಕುಂತಲಾ ಕಂಟೆಪ್ಪ ಗೋರ್ಟಾ
– ಶ್ರೀಮತಿ ಶಶಿಕಲಾ ಗಿರಿ ಹಾಗೂ ಪಾರ್ವತಿ ಜೆಮಶೆಟ್ಟಿ,
ಶೀಲಾ ಕೋಣೀನ, ಮಹಾದೇವಿ ಕುಂಬಾರ


***

### ಅಕ್ಕನಾಗಮ್ಮನ ಗವಿ :

ಇಂಗಳೇಶ್ವರದ ಪೂರ್ವಕ್ಕೆ ಒಂದು ದೊಡ್ಡ ಗುಡ್ಡವಿದೆ. ಈ ಗುಡ್ಡ ಪ್ರಸಿದ್ಧವಾಗಿರುವುದು ಅಕ್ಕನಾಗಮ್ಮನ ಗವಿ ಇರುವ ಗುಡ್ಡ ಎಂದು. ಆದರೆ ಈ ಗುಡ್ಡದಲ್ಲಿ ಅಕ್ಕನಾಗಮ್ಮನ ಗವಿ ಒಂದೇ ಅಲ್ಲ, ಇಲ್ಲಿ ಮತ್ತೆ ಹಲವಾರು ಗವಿಗಳಿವೆ. ನಾವು ಗುಡ್ಡದ ಎದುರಿಗೆ ಹೋಗಿ ನಿಂತರೆ ಎಡಗಡೆಯ ತುದಿಯಲ್ಲಿರುವುದು ಅಕ್ಕನಾಗಮ್ಮನ ಗವಿ. ಈಗ ತೀರ ಸವೆದು ಹೋಗಿದೆ. ಅದರ ಎದುರಿನ ಗುಡ್ಡದ ಭಾಗ ಕಡಿದಾಗಿದ್ದು, ಅಲ್ಲಿಗೆ ಗುಡ್ಡದ ಅಂಚು ಇರುವುದರಿಂದ ಮಳೆಗಾಲದಲ್ಲಿ ಸವೆಯುತ್ತ ಹೋಗಿರುವುದು ಸಹಜವಾಗಿದೆ. ಗವಿಯ ಪ್ರವೇಶದ ಭಾಗದಲ್ಲಿ ಎಂಟ್ಹತ್ತು ಜನ ಕುಳಿತುಕೊಳ್ಳುವಷ್ಟು ಸ್ಥಳ ಇದೆ. ಮತ್ತೆ ಒಳಗೆ ತೀರ ಇಕ್ಕಟ್ಟಾಗಿ ಗವಿಯನ್ನು ಕೊರೆಯಲಾಗಿದೆ. ಕುಳಿತು ಜರೆಯುತ್ತ ಒಳಸೇರಬೇಕು. ಇಲ್ಲವೆ ಅಂಬೆಗಾಲಿಡುತ್ತ ಸಾಗಬೇಕು. ಸುಮಾರು ಹದಿನೈದು ಇಪ್ಪತ್ತು ಅಡಿಗಳ ಒಳಗೆ ಮತ್ತೆ ಒಂದಿಷ್ಟು ಸ್ಥಳ ಮಾಡಲಾಗಿದೆ. ಒಂದು ಮಾಡದಲ್ಲಿ ಕೆಲ ಶಿಲಾಮೂರ್ತಿಗಳಿವೆ. ಅವನ್ನು ಅಕ್ಕನಾಗಮ್ಮ, ನೀಲಾಂಬಿಕೆ, ಬಸವಣ್ಣ, ಚೆನ್ನಬಸವಣ್ಣನ ಹೆಸರಿನಿಂದ ಗುರುತಿಸಲಾಗುತ್ತದೆ. ಕೆಳಗಡೆ



ಅಕ್ಕನಾಗಮ್ಮನ ಗವಿಯ ಮುಂಭಾಗ



ಗವಿಯಲ್ಲಿ ಅಕ್ಕನಾಗಮ್ಮ ಪೂಜಿಸಿದ ಲಿಂಗ

ಒಂದು ಕಡೆ ಶಿವಲಿಂಗವಿದೆ. ಈ ಶಿವಲಿಂಗದ ಹಿಂದೆ ಮತ್ತೆ ಗವಿ ಮುಂದುವರೆದಂತೆ ಇದೆ. ಆದರೆ ಅದು ಬಹು ಇಕ್ಕಟ್ಟಾಗಿದೆ.

ಒಂದು ಸಾರೆ ಈ ಸುರಂಗ ಮಾರ್ಗವನ್ನು ಪರೀಕ್ಷಿಸಬೇಕೆಂದು ೫ ಜನ ಮುತ್ತೈದೆಯರು, ಐದು ಜನ ಡೊಳ್ಳಿನವರು ಆ ಗವಿಯ ಒಳಗಿರುವ ಸುರಂಗಮಾರ್ಗವನ್ನು ಪ್ರವೇಶಿಸಿದರಂತೆ. ಆದರೆ ಅವರು ಯಾವ ದಡಕ್ಕೂ ಮುಟ್ಟದೇ ನಡುವೆ ಏನಾದರೆಂದೂ ಗೊತ್ತಾಗದೇ ಹೋಯಿತೆಂದು ಹೇಳಲಾಗುತ್ತದೆ. ಆದರೆ ಸುರಂಗಮಾರ್ಗವೆಂದು ತೋರಿಸುವ ಗವಿಯ ಭಾಗ ಮನುಷ್ಯರು ಹೊಕ್ಕು ನಡೆಯುವಷ್ಟು ಅಗಲವಾಗಿಲ್ಲ. ಎಲ್ಲ ಕಡೆ ಇಂತಹ ದಂತ ಕತೆಗಳು ಉಳಿದುಕೊಂಡುಬಂದಿರುವುದು ಸಾಮಾನ್ಯ.

ಬಲತುದಿಯಲ್ಲಿರುವ ರೇವಣಸಿದ್ಧರ ಗವಿಯ ಮಗ್ಗುಲಿನಿಂದ ಗುಡ್ಡ ಹತ್ತಿ ಹೊರಟರೆ ಗುಡ್ಡದ ಎಡತುದಿಗೆ ಅಕ್ಕನಾಗಮ್ಮನವರ ಗವಿ ಇದೆ. ಸುರಕ್ಷಿತವಾಗಿ ನಡೆದು ಹೋಗಲು ಸಾಧ್ಯವಾಗದ ಸ್ಥಿತಿಯಲ್ಲಿ ಗುಡ್ಡದ ದಾರಿ ಇದೆ. ಅಕ್ಕಮಹಾದೇವಿ ಕದಳಿವನಕ್ಕೆ ಹೋದಂತೆ, ಅಕ್ಕನಾಗಮ್ಮ ಇಂಥ ಗವಿಯೊಳಗೆ ಬಂದು ಕುಳಿತು ಧ್ಯಾನ ಮೌನ ಅನುಷ್ಠಾನ ಮಾಡಿದ್ದಾಳೆ ಎಂಬ ಸಂಗತಿ ಇನ್ನೂ ಜನರ ಮನಸ್ಸಿನಲ್ಲಿ ಉಳಿದುಕೊಂಡು ಬಂದಿದೆ.



ಅಕ್ಕನಾಗಮ್ಮನ ಗವಿಯಲ್ಲಿರುವ ಮೂರ್ತಿಗಳು

**ರೇವಣಸಿದ್ಧೇಶ್ವರನ ಗವಿ :**

ಈ ಬೆಟ್ಟದ ಮೇಲೆಯೇ ಇನ್ನೊಂದು ದಂಡೆಗೆ, ಬಲ ತುದಿಯಲ್ಲಿ ಒಂದು ದೊಡ್ಡ ಗುಡಿಯನ್ನು ನಿರ್ಮಿಸಲಾಗಿದೆ. ಇದನ್ನು ರೇವಣಸಿದ್ಧೇಶ್ವರ ಗುಡಿ ಎಂದು ಕರೆಯಲಾಗುತ್ತದೆ. ಗುಡ್ಡದಲ್ಲಿ ಮೂಲತಃ ರೇವಣಸಿದ್ಧೇಶ್ವರ ಗವಿ ಇದ್ದು, ಅದನ್ನು ಒಳಮಾಡಿಕೊಂಡು, ದೊಡ್ಡ ಗುಡಿಯನ್ನು ಕಟ್ಟಲಾಗಿದೆ. ಈ ಗುಡಿಗೆ ಹತ್ತಿ ಹೋಗಲು ಮೆಟ್ಟಲುಗಳನ್ನು ನಿರ್ಮಿಸಿದ್ದಾರೆ. ಇಲ್ಲಿ ನಿತ್ಯ ಪೂಜೆ ನಡೆಯುತ್ತದೆ.

ರೇವಣಸಿದ್ಧೇಶ್ವರ ಗವಿಯನ್ನು ಅಭಿವೃದ್ಧಿ ಪಡಿಸಿದಂತೆ ಅಕ್ಕನಾಗಮ್ಮನ ಗವಿಯ ಅಭಿವೃದ್ಧಿಯ ಅವಶ್ಯಕತೆಯೂ ಇದೆ. ಗುಡ್ಡದ ಮೇಲಿನ ದಾರಿ ಅಥವಾ ಗುಡ್ಡದ ವಾರಿಯಲ್ಲಿರುವ ಕಾಲು ದಾರಿಯನ್ನು ಸರಿಗೊಳಿಸಿದರೆ ಈ ಸ್ಮಾರಕಗಳ ಆಕರ್ಷಣೆ ಹೆಚ್ಚುತ್ತದೆ.


***

ಮಾಹಿತಿ : ಚಂದ್ರಶೇಖರ ಶಿವಪ್ಪ ಪೂಜಾರಿ

ಬಸವ ಹೂಡಿದ ಬಂಡಿ ಸಿಸುವು ಏರಿತು ನಂದಿ
ದೆಸೆಗೆಟ್ಟು ಲೋಕ ಕೈಲಾಸ । ಕಾಯಕದ
ಉಸಿರಾತು ನಾಡ ಸಿರಿಯಾತು

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲರೆ ಬಸವಯ್ಯ ಬಸವರಸ । ನಿನ್ನುಸುರು
ನೆಲೆಯಾತು ನಿತ್ಯ ಜನಪದಕೆ

ಸಾಗಿ ಬಸವನು ಬಂದು ತೂಗಿದನು ಕಲ್ಯಾಣ
ಹಾಗಿನಲಿ ಕಟ್ಟಿ ಅನುಭಾವ । ಮಂಟಪವ
ಕೂಗು ಕೇಳುತಲಿ ಜನವೆದ್ದು



**ರೇವಣಸಿದ್ಧೇಶ್ವರ ಗವಿ ಗುಡಿ**

## ಬಸವನಬಾಗೇವಾಡಿ ತಾಲೂಕು :

### ೨. ಬಸವನಬಾಗೇವಾಡಿ : ಬಸವಣ್ಣನವರ ಊರು

ಬಾಗೋಡಿನಂಬಾದು ಬಾಲೇರ ಪಟ್ಟಣ
ಮ್ಯಾಲೆ ಚನ್ನಮ್ಮನ ಅರಮನಿ। ಬಾಗಿಲದಾಗ
ಬಾಗಿ ನಿಂತಾನ ಬಸವಣ್ಣ

ಬಾಗೇವಾಡಿಯ ಬಸವ ಬಹಳ ದೊಡ್ಡವನೆಂದು
ಬೆಳ್ಳಿಯ ಮಗಡ ಮಾಡ್ಸೇನು । ಬಸವಣ್ಣ
ಹೊನ್ನ ಹಣಿಕಟ್ಟ ಬಿಗಿಸೇನು




ಬಸವಣ್ಣನವರ ಮನೆಯ ಸ್ಮಾರಕ




ಬಸವಣ್ಣನವರ ಮನೆಯ ಸ್ಮಾರಕದ ಒಗಳಗಿನ ದೃಶ್ಯ

ಬಾಗೇವಾಡಿ ಪ್ರಸಿದ್ಧವಾಗಿರುವುದು ಅಲ್ಲಿಯ ಬಸವಣ್ಣ–ನಂದಿಯಿಂದ. ಬಸವಣ್ಣನು ಮೃತದೇಹಿಯಾದ ಚೆನ್ನಮ್ಮನ ಗಂಡನನ್ನು ಜೀವಂತಗೊಳಿಸಿ, ಆಕೆಯ ಮುತ್ತೈದಿತನವನ್ನು ಕಾಪಾಡಿದವ. ಇದಕ್ಕೆಲ್ಲ ಚೆನ್ನಮ್ಮ ಹಿಡಿದ ನಂದಿ ವ್ರತವೇ ಕಾರಣ. ಚೆನ್ನಮ್ಮನಿಗೆ ಒಲಿದ ಬಸವಣ್ಣನೇ ಬಾಗೇವಾಡಿ ಬಸವಣ್ಣನೆಂದು ಪ್ರಸಿದ್ಧನಾಗಿದ್ದಾನೆ. ೧೨ನೇ ಶತಮಾನದಲ್ಲಿ ಮಾದಲಾಂಬಿಕೆ ಈ ಬಸವಣ್ಣನನ್ನೇ ಪ್ರಾರ್ಥಿಸಿಕೊಂಡು, ನಂದಿ ವ್ರತ ಹಿಡಿದು, ಶ್ರೀ ಬಸವೇಶ್ವರರನ್ನು ಪಡೆದುದು. ಹೀಗಾಗಿ ಈ ಜೋಡು ಬಸವಣ್ಣನವರಿಂದಾಗಿಯೇ ಬಾಗೇವಾಡಿ ಇಂದು ಪ್ರಸಿದ್ಧಿಯನ್ನು ಹೊಂದಿದೆ.

**ಬಸವಣ್ಣನವರ ಮನೆ– ಸ್ಮಾರಕ ಭವನ :**

ಬಾಗೇವಾಡಿಯಲ್ಲಿ ಬಸವಣ್ಣನವರು ಹುಟ್ಟಿ ಬೆಳೆದ ಮನೆಯೆಂದು ಹೇಳುವ ಒಂದು ಮನೆಯನ್ನು ವಶಪಡಿಸಿಕೊಂಡು, ಕೂಡಲಸಂಗಮ ಪ್ರಾಧಿಕಾರದವರು ಒಂದು ದೊಡ್ಡ ಸ್ಮಾರಕ ಭವನವೊಂದನ್ನು ನಿರ್ಮಾಣ ಮಾಡಿದ್ದಾರೆ. ಒಳಗೆ ಮಾದಲಾಂಬಿಕೆಯು ಮಗು ಬಸವಣ್ಣನನ್ನು ತೊಡೆಯ ಮೇಲೆ ಹಾಕಿಕೊಂಡು ಮಂಚದ ಮೇಲೆ ಕುಳಿತ ದೃಶ್ಯ, ಕೆಳಗೆ ಒಂದು ಪೀಠದ (ಕುರ್ಚಿ)ಮೇಲೆ ಗುರುಗಳು, ಅವರೆದುರು ಮಾದರಸ ವಿನಯದಿಂದ ಬಾಗಿ ನಿಂತ ಚಿತ್ರ, ಆ ಮಂಚದ ಹಿಂದೆ ಒಂದು ದೊಡ್ಡ ತೊಟ್ಟಿಲು, ಇವೆಲ್ಲ ನೋಡುಗರ ಕಣ್ಮನ ಸೆಳೆಯುತ್ತವೆ. ಈ ದೃಶ್ಯ ಬಸವಣ್ಣನವರ ಜನನದ ಸ್ಮೃತಿಯನ್ನು ಮಾಡಿಕೊಡುತ್ತದೆ.



ಬಸವಣ್ಣನವರು ಪೂಜೆಗಾಗಿ ಬಳಸುತ್ತಿದ್ದ ನೀರಿನ ಬಾವಿ
ಎಡಗಡೆ ಕಾಣುವ ಬಾಗಿಲಿನ ಒಳಗೆ ಇದೆ

### ಬಾಗೇವಾಡಿ ತುಂಬ ಬಸವನ ಸ್ಮೃತಿಗಳು :

ಬಾಗೇವಾಡಿ ಊರಿನ ತುಂಬ ಬಸವಣ್ಣನವರ ಸ್ಮರಣೆಗಳು ಇಂದಿಗೂ ಉಳಿದುಕೊಂಡು ಬಂದಿವೆ. ಈ ಊರಿನಲ್ಲಿ ಪ್ರಚಲಿತದಲ್ಲಿರುವ ಮೌಖಿಕ ಮಾಹಿತಿಗಳು ಇನ್ನೂ ಬೇರೆ ಬೇರೆ ವಿಷಯಗಳನ್ನು ನಮ್ಮ ಗಮನಕ್ಕೆ ತರುತ್ತವೆ. ಈಗಲೂ ಎಷ್ಟೋ ಸಂಗತಿಗಳು ಹಾಗೇ ಮರೆಯಲ್ಲಿ ಉಳಿದುಕೊಂಡಿವೆ. ಇಂಗಳೇಶ್ವರದಲ್ಲಿ ಬಸವಣ್ಣನವರ ಬಗ್ಗೆ ಇರುವ ಪೂರಕ ವಾತಾವರಣ ಬಾಗೇವಾಡಿಯಲ್ಲಿ ಇಲ್ಲ. ಇಂಗಳೇಶ್ವರದಲ್ಲಿ ಬ್ರಾಹ್ಮಣರಾದಿಯಾಗಿ ಎಲ್ಲ ಸಮಾಜದ ಬಾಂಧವರು ಬಸವಣ್ಣನವರ ಜೊತೆ ತಮ್ಮ ಸಂಬಂಧವನ್ನು ಹಚ್ಚಿಕೊಂಡು ಇವ ನಮ್ಮವನೆಂದು ಹೇಳಿಕೊಳ್ಳುವಲ್ಲಿ ಅಭಿಮಾನ ಪಡುತ್ತಾರೆ. ಆದರೆ ಬಾಗೇವಾಡಿಯಲ್ಲಿ ಇಂಗಳೇಶ್ವರದಲ್ಲಿ

ಇರುವಷ್ಟು ಉತ್ಸಾಹದಾಯಕ ಪೂರಕ ವಾತಾವರಣ ಇಲ್ಲವೆಂದೇ ಹೇಳಬೇಕು. ಬ್ರಾಹ್ಮಣರ ಕೇರಿಯಲ್ಲಂತೂ ಎಲ್ಲವೂ ನಿಷೇಧಾತ್ಮಕವಾಗಿಯೇ ಇರುವಂತೆ ತೋರಿತು. ಇದ್ದುದನ್ನು ಅಲ್ಲವೆಂದು ಹೇಳುವ, ಹೌದೆಂದು ಒಪ್ಪಿಕೊಳ್ಳದ ಮನೋಭಾವ ಎಲ್ಲ ಕಡೆ ಕಾಣಿಸಿತು. ಎಷ್ಟೋ ಕಡೆ ಕ್ಯಾಮರಾವನ್ನು ಮರೆಮಾಡಿ ಹಿಡಿಯಬೇಕಾಯಿತು. ಚಿತ್ರ ತೆಗೆದುಕೊಳ್ಳಲು ಅನುಮತಿ ನಿರಾಕರಿಸಲಾಯಿತು. ಹೀಗಿದೆ ಬಾಗೇವಾಡಿಯಲ್ಲಿ ಬಸವಣ್ಣನವರ ಈಗಿನ ಸ್ಥಿತಿ. ಅಲ್ಲಿ ಯಾವುದೇ ಪ್ರದೇಶವನ್ನು ಈಕ್ಷಿಸಲು ಹೋದಾಗ ನೋಡುಗರನ್ನು ಅನುಮಾನದಿಂದ ಕಾಣುವುದೇ ಹೆಚ್ಚು. ೯೦೦ ವರ್ಷಗಳ ಹಿಂದಿನ ಮಾತು. ಹಳೆಯ ಸ್ಮಾರಕಗಳೆಲ್ಲ ಒಬ್ಬರಿಂದೊಬ್ಬರು ಖರೀದಿಸಲ್ಪಟ್ಟು ಸ್ವಂತ ಆಸ್ತಿಗಳಾಗಿವೆ. ಹೀಗಾಗಿ ಅವರೆಲ್ಲ ಬಂದವರನ್ನು ಅನುಮಾನದಿಂದ ಕಾಣುವ ಸ್ಥಿತಿ ಸಹಜವಾಗಿಯೆ ಉಂಟಾಗಿದೆ.

### ಬಸವಣ್ಣನವರ ಪೂಜಾ ಬಾವಿ :

ಬ್ರಾಹ್ಮಣರ ಗಲ್ಲಿಯಲ್ಲಿ ಮಾದರಸ ಮಾದಲಾಂಬಿಕೆಯವರು ತಮ್ಮ ಮಕ್ಕಳೊಂದಿಗೆ ಇದ್ದ ಮನೆಗಳೆಂದು ಈಗ ಎರಡು ಮನೆಗಳನ್ನು ತೋರಿಸುತ್ತಾರೆ. ದೊಡ್ಡ ಮನೆಗಳವು. ಒಂದು ಮನೆಯಂತೂ ಬಿದ್ದು ಬಹುಭಾಗ ಹಾಳಾಗಿ ಹೋಗಿದೆ. ಈ ಮನೆಯ ಸ್ಥಳದಲ್ಲಿ ಒಂದು ಕಡೆ ಒಂದು ಬಾವಿ ಇದೆ. ಬಸವಣ್ಣನವರು ಈ ಬಾವಿಯ ನೀರನ್ನು ಪೂಜೆಗೆ ಬಳಸುತ್ತಿದ್ದರು ಎಂದು ಹೇಳಲಾಗುತ್ತದೆ. ಜನರು ದಿನವೂ ಬಸವಣ್ಣನವರ ಬಾವಿ ಎಂದು ಕರೆಯ ಹತ್ತಿದ ಮೇಲೆ ಈಗ ಆ ಮನೆಯನ್ನು ಖರೀದಿಸಿದ ಜನ ಆ



ಬಸವಣ್ಣನವರು ಪೂಜೆಗಾಗಿ ಬಳಸುತ್ತಿದ್ದ ನೀರಿನ ಬಾವಿ



ಮಲ್ಲಯ್ಯನ ಕಂಬಿ ಪೂಜೆ ಇರುವ ಮನೆಯ ಜಗಲಿ ಮೇಲೆ ಕಂಬಿ ಇರುವುದು

ಬಾವಿಯನ್ನೇ ಮುಚ್ಚಿಸಿದರಂತೆ. ಅವರ ಮನೆಯಲ್ಲಿ ಅವಘಡಗಳು ಉಂಟಾಗತೊಡಗಲು ಮತ್ತೆ ಬಾವಿಯನ್ನು ತೆಗೆಸಿ ಕಟ್ಟೆ ಕಟ್ಟಿದ್ದಾರಂತೆ. ಒಳಗೆ ನೀರಿಲ್ಲ. ನೀವು ಫೋಟೋ ತೆಗೆಯಬೇಡಿ ಎಂದು ಗದರಿದರು. ಅವರಿಗೆ ಪರಿಚಯವಿದ್ದವರೊಂದಿಗೆ ನಾವು ಮನೆ ಪ್ರವೇಶಿಸಿದ್ದರಿಂದ ಹೇಗೋ ಮುಚ್ಚುಮರೆ ಮಾಡಿ ಫೋಟೋ ತೆಗೆದುಕೊಂಡು ಹೊರಗಾಗಬೇಕಾಯಿತು.

### ಮಲ್ಲಯ್ಯನ ಕಂಬಿ ಪೂಜೆ ಇರುವ ಮನೆ :

ಈಗ ಹೊಸದಾಗಿ ನಿರ್ಮಾಣಗೊಂಡಿರುವ ಬಸವಣ್ಣನವರ ಸ್ಮಾರಕಕ್ಕೆ ತೀರ ಸಮೀಪವಾಗಿ (ಆ ಮನೆಯ ಹಿತ್ತಲಕ್ಕೆ ಹತ್ತಿಕೊಂಡಿರುವಂತೆ) ದೊಡ್ಡದಾದ ಮನೆಯೊಂದಿದೆ. ಆ ಮನೆಯ ಮಾಲೀಕರು ಬೇರೆ ಊರಿನಲ್ಲಿರುತ್ತಾರಂತೆ. ಈ ಮನೆಯಲ್ಲಿ ವಾಸವಾಗಿರುವವರು ಬಾಡಿಗೆದಾರರು ಮಾತ್ರ. ಇದನ್ನು ಬಸವಣ್ಣನವರ ವಂಶಜರ ಮನೆಯೆಂದೇ ಹೇಳುತ್ತಾರೆ. ಮನೆಯ ಒಂದು ದೊಡ್ಡ ಕೋಣೆಯಲ್ಲಿ ವಿಸ್ತಾರವಾದ ಒಂದು ಜಗಲಿ ಇದೆ. ಅಲ್ಲಿ ಮಲ್ಲಯ್ಯನ ಕಂಬಿ ಇದೆ. ಶ್ರೀಶೈಲಕ್ಕೆ ಹೋಗುವ ಕಂಬಿಗಳೆಲ್ಲ ಈಗಲೂ ಈ ಮನೆಗೆ ಬಂದು ಕೂಡುತ್ತವೆಯಂತೆ. ಇಲ್ಲಿ ಪೂಜೆ ಆದ ಮೇಲೆಯೇ ಶ್ರೀಶೈಲಕ್ಕೆ ಹೋಗಿ, ಮರಳಿ ಮತ್ತೆ ಈ ಮನೆಗೆ ಬಂದು ಹೋಗುತ್ತವಂತೆ. ಬಸವಣ್ಣನವರ ಈ ಮನೆಯಿಂದ ಹೋದ (ಚಿತ್ರದಲ್ಲಿ ಕಾಣುವ) ಕಂಬಿಗೆ ಶ್ರೀಶೈಲದಲ್ಲಿ ಅಗ್ರ ಪೂಜೆ ಸಲ್ಲುತ್ತದಂತೆ. ಇದು ಗಮನಿಸಬೇಕಾದ ಸಂಗತಿಯಾಗಿದೆ. ಅಂದರೆ ಬಸವಣ್ಣನವರ ಮನೆಯವರೂ ಶ್ರೀಶೈಲ ಮಲ್ಲಿಕಾರ್ಜುನನ

ಭಕ್ತರಾಗಿದ್ದರು ಎಂಬುದನ್ನು ಈ ಸಂಗತಿ ಉಳಿಸಿಕೊಂಡಿದೆ. ಹೀಗಾಗಿ ಬಸವಣ್ಣನವರು ಶೈವ ಸಂಪ್ರದಾಯಸ್ಥರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕಂಬಿ ಪೂಜೆ ಪರಂಪರೆಯುಳ್ಳ ಈ ಮನೆ ಇರುವ ಓಣಿ ಸ್ಮಾರ್ಥ ಬ್ರಾಹ್ಮಣರು ವಾಸಿಸುವ ಓಣಿಯಾಗಿದೆ. ಹುದ್ದಾರ ಮನೆತನದವರು ಇರುವ ಈಗಿನ ಮನೆಯೆ ಬಸವಣ್ಣನವರ ಮನೆ ಆಗಿರುವ ಸಾಧ್ಯತೆ ಹೆಚ್ಚು ಎನ್ನಲಾಗುತ್ತದೆ. ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಿದರೆ ಸತ್ಯಸಂಗತಿಗಳು ಹೊರಬರಬಹುದು. ಈ ಓಣಿ ಬಸವಣ್ಣನ (ನಂದಿ ದೇವಾಲಯದ) ಪೂಜೆ ಮಾಡುತ್ತಾ ಬಂದ ಪೂಜಾರಿಗಳಿಗೂ ಸಂಬಂಧಿಸಿದೆ. ಬಸವಣ್ಣನ ಪೂಜೆ ಮಾಡುತ್ತ ಬಂದ ಮೂಲ ಪೂಜಾರಿಗಳ ಮನೆತನಗಳು ಇಲ್ಲಿವೆ. ಅವರಿಗೆ (ಬಸವಣ್ಣನ ಪೂಜೆಗಾಗಿ-ನಂದಿಯ) ನೂರಾರು ಎಕರೆ ಜಮೀನನ್ನು ಉಂಬಳಿ ಹಾಕಿಕೊಟ್ಟಿದ್ದಾರೆಂದು ಹೇಳುತ್ತಾರೆ.

### ಬಸವಣ್ಣನವರ ಮನೆಯ ಕುದುರೆಗಳ ಲಾಯ :

ಬಾಗೇವಾಡಿಯ ಮುಖ್ಯರಸ್ತೆಯ ಮಗ್ಗುಲಿಗೆ ಒಂದು ಹಾಳುಬಿದ್ದ ನಿವೇಶನವಿದೆ. ಅದರ ತುಂಬ ಮುಳ್ಳುಕಂಟಿಗಳೆಲ್ಲ ಬೆಳೆದಿವೆ. ರಸ್ತೆಗೆ ಹತ್ತಿಕೊಂಡು ಆ ಸ್ಥಳದ ಒಂದು ಮೂಲೆಯಲ್ಲಿ ಲಿಂಗಾಕಾರದ ಕಲ್ಲು ಬಿದ್ದಿದೆ. ಈ ವಿಶಾಲವಾದ ಸ್ಥಳ ಬಸವಣ್ಣನವರ ಮನೆಯವರು ಕುದುರೆ ಕಟ್ಟುವ ಮನೆಯಾಗಿತ್ತು ಎಂಬ ಪ್ರತೀತಿ ಈಗಲೂ ಬಾಗೇವಾಡಿಯಲ್ಲಿ ಉಳಿದುಕೊಂಡು ಬಂದಿದೆ.



ಬಸವಣ್ಣನವರ ಮನೆಯ ಕುದುರೆಗಳನ್ನು ಕಟ್ಟುವ ಮನೆಯಿದ್ದ ಸ್ಥಳ



ಚೆನ್ನಮ್ಮನ ಅರಮನೆಯ ಸ್ಥಳವೆಂದು ತೋರಿಸುವ ಸ್ಥಳದಲ್ಲಿ ಇರುವ ಗುಡಿ

### ಮುತ್ತೈದಿ ಚೆನ್ನಮ್ಮನ ಅರಮನೆ ಪ್ರದೇಶ :

ಬಾಗೇವಾಡಿಯ ಕುಂಬಾರ ಓಣಿಯಲ್ಲಿ ಪ್ರಾಚೀನವಾದ ಒಂದು ದೊಡ್ಡ ಶಿವದೇವಾಲಯ ಇದೆ. ಆ ಸ್ಥಳವನ್ನು ಜನ ಮುತ್ತೈದಿ ಚೆನ್ನಮ್ಮನ ಅರಮನೆ ಪ್ರದೇಶವೆಂದು ಹೇಳುತ್ತಾರೆ. ಈ ದೇವಾಲಯದಿಂದ ಬಸವಣ್ಣನವರ ಮನೆಯವರು ಕುದುರೆ ಕಟ್ಟುವ ಸ್ಥಳದವರೆಗೆ ಅರಮನೆಯ ಪ್ರದೇಶ ವ್ಯಾಪಿಸಿದೆ ಎನ್ನುತ್ತಾರೆ.

### ಬಸವಣ್ಣನ ಗುಡಿ :

ಬಾಗೇವಾಡಿಯ ದೊಡ್ಡ ದೇವಾಲಯವೆಂದರೆ ಬಸವಣ್ಣನ ಗುಡಿ. ಒಂದಡೆ ಸಂಗಮೇಶ್ವರ, ಎದುರಿಗೆ ದೊಡ್ಡ ನಂದಿ ಎರಡರ ನಡುವೆ ರಂಗಮಂಟಪ. ಪ್ರಾಚೀನ ದೇವಾಲಯ. ಇವುಗಳ ಜೊತೆ ಪ್ರತ್ಯೇಕವಾಗಿ ಇನ್ನೊಂದು ಲಿಂಗವೂ ಈ ದೇವಾಲಯದಲ್ಲಿದೆ. ಅದನ್ನು ಮಲ್ಲಿಕಾರ್ಜುನಲಿಂಗ ಎಂದು ಕರೆಯುತ್ತಾರೆ. ಇತ್ತೀಚೆಗೆ ನಿರ್ಮಿಸಿರಬಹುದೆನ್ನುವ ಬಸವಣ್ಣ ನೀಲಾಂಬಿಕೆಯರ ವಿಗ್ರಹಗಳೂ ಇಲ್ಲಿವೆ.

ಮೂಲತಃ ಇದು ಸಂಗಮೇಶ್ವರ ದೇವಾಲಯ. ಈ ಗುಡಿಯೊಳಗಿನ ನಂದಿಯನ್ನು ಪ್ರಾರ್ಥಿಸಿಕೊಂಡು, ನಂದಿಯ ವ್ರತವನ್ನು ಮಾಡಿ ಮಾದಲಾಂಬಿಕೆ ಬಸವಣ್ಣನನ್ನು ಹೆತ್ತಿದ್ದು. ಅದಕ್ಕಾಗಿ ಮಗನಿಗೆ ಬಸವಣ್ಣ ಎಂಬ ಹೆಸರನ್ನು ಇಡಲಾಗಿದೆ ಎಂದು ಜನ ಹೇಳುತ್ತಲೇ ಬಂದಿದ್ದಾರೆ. ಈಗಲೂ ಅದನ್ನೇ ಹೇಳುತ್ತಾರೆ. ಅವರು ವ್ರತಮಾಡಿದ ಸ್ಥಳವನ್ನು ಜನ ತೋರಿಸುತ್ತಾರೆ. ಹೀಗಾಗಿ ಭಾವನಾತ್ಮಕ ಸಂಬಂಧವನ್ನು ಈ ಗುಡಿಯೊಂದಿಗೆ ಜನ ಇಟ್ಟುಕೊಂಡಿದ್ದಾರೆಂಬುದು ಇದರಿಂದ ತಿಳಿದುಬರುತ್ತದೆ. ಈ

ಗುಡಿಯ ಆವರಣದ ಹೊರಮಗ್ಗಲು ದೊಡ್ಡ ಬಾವಿ ಇದೆ. ಇದು ಪುರಾತನ ಬಾವಿ ಎಂದು ಹೇಳಲಾಗುತ್ತದೆ.

ಬಸವನ ಮಂದಿರದಲ್ಲಿ ಶ್ರಾವಣದಲ್ಲಿ ವಿಶೇಷ ಪೂಜೆ ನಡೆಯುತ್ತವೆ. ಪುರಾಣ ಪ್ರವಚನಗಳು ನಡೆಯುತ್ತವೆ. ಶ್ರಾವಣ ಮೂರನೆಯ ಸೋಮವಾರ ಸಂಗಮೇಶ್ವರ, ಬಸವೇಶ್ವರ ಜಾತ್ರೆ ಆಗುತ್ತದೆ. ಆಗ ಪಲ್ಲಕ್ಕಿ ಉತ್ಸವ ನೆರವೇರುತ್ತದೆ. ಈ ಪಲ್ಲಕ್ಕಿ ಉತ್ಸವದ ವಿಶೇಷತೆ ಎಂದರೆ ಬಾಗೇವಾಡಿಯಿಂದ ೮ ಕಿ.ಮಿ. ದೂರದಲ್ಲಿರುವ ಹೋರಿಮಟ್ಟಿ ಗುಡ್ಡಕ್ಕೆ ಈ ಪಲ್ಲಕ್ಕಿ ಹೋಗಿ ಬಂದ ನಂತರವೆ ಉಳಿದ ಆಚರಣೆಗಳು ನಡೆಯುವುದು. ಅಕ್ಕತಂಗೇರ ಅಮವಾಸ್ಯೆ ಆದ ಮೂರು ದಿನಕ್ಕೆ ಅಕ್ಷಯ ತೃತಿಯಾದಂದು ಬಸವಣ್ಣನ ತೊಟ್ಟಿಲು ಕಾರ್ಯಕ್ರಮ ನಡೆಯುತ್ತದೆ. ಮಕ್ಕಳಾಗಲಾರದವರು ಬಸವಣ್ಣನ ಕಾಲ್ದೆಸೆಯಲ್ಲಿಟ್ಟ ಗುಗ್ಗರಿ ತಿನ್ನುತ್ತಾರೆ. ಇವತ್ತಿಗೂ ಜನಬಸವಣ್ಣನ ಮೇಲೆ ಅತ್ಯಂತ ಶ್ರದ್ಧೆ ಇಟ್ಟಿದ್ದಾರೆ. ತಮ್ಮ ಮನಸ್ಸಿನಲ್ಲಿದ್ದುದನ್ನು ಪ್ರಾರ್ಥಿಸಿಕೊಂಡು, ತಮ್ಮ ಬೇಡಿಕೆಗಳು ಕೈಗೂಡಿದ ಮೇಲೆ ಬಂದು ಹರಕೆ ತೀರಿಸುತ್ತಾರೆ. ಸಂತಾನ ಪ್ರಾಪ್ತಿಯ ಸಂತೋಷ ಸಂಭ್ರಮ ಅವರದಾಗಿರುತ್ತದೆ.


ಬಸವಣ್ಣನವರ ವಚನಗಳು : ೧೪೧೪,
ವಚನಾಂಕಿತ : ಕೂಡಲ ಸಂಗಮದೇವ
ಮಾಹಿತಿ: ಜಗದೀಶ್ಚಂದ್ರ ಶಿವದೇವಶಾಸ್ತ್ರಿ ಹಿರೇಮಠ,
ಸಂಗಪ್ಪ ಚೆನ್ನಬಸಪ್ಪ ಪೂಜಾರಿ, ಸಂಗವ್ವ ಪೂಜಾರಿ



ಬಸವೇಶ್ವರ(ನಂದಿ) ದೇವಸ್ಥಾನ



ಬಸವೇಶ್ವರ(ನಂದಿ) ದೇವಸ್ಥಾನದ ಒಂದು ಪ್ರವೇಶದ್ವಾರ



ಬಸವೇಶ್ವರ(ನಂದಿ) ದೇವಸ್ಥಾನದ ಬಾವಿ



ಬಸವೇಶ್ವರ(ನಂದಿ) ದೇವಸ್ಥಾನದಲ್ಲಿರುವ ನಂದಿ

## ಬಸವನ ಬಾಗೇವಾಡಿ ತಾಲೂಕು :

### ೩. ಹೋರಿಮಟ್ಟಿಗುಡ್ಡ :
### ಬಸವಣ್ಣನವರ ಹೊಲ-ಗುಡಿ

ಬಿಜಾಪೂರ ಜಿಲ್ಲೆಯ ಬಾಗೇವಾಡಿಯಿಂದ ಪೂರ್ವಕ್ಕೆ ಸುಮಾರು ೮ ಕಿ. ಮಿ. ದೂರದಲ್ಲಿ ಹೋರಿಮಟ್ಟಿ ಗುಡ್ಡ ಇದೆ. ಈ ಗುಡ್ಡದ ಮೇಲೆ ಇರುವ ಜಮೀನಿನಲ್ಲಿ ಪುರಾತನವೆನ್ನುವ ಗುಡಿಯೊಂದಿದೆ. ಈ ಹೊಲ ಬಸವಣ್ಣನವರ ತಂದೆ ಮಾದರಸನಿಗೆ ಸೇರಿದ್ದು ಎಂದು ಹೇಳಲಾಗುತ್ತದೆ. ಮಾದಲಾಂಬಿಕೆಯ ತವರು ಮನೆಯ ಹೊಲಗಳೂ ರಸ್ತೆಯಾಚೆ ಇನ್ನೊಂದು ಪಕ್ಕಕ್ಕಿವೆ ಎನ್ನುತ್ತಾರೆ.

ಈ ಹೊಲಕ್ಕೆ ಮಾದಲಾಂಬಿಕೆ ಮತ್ತು ಮಾದರಸ ದಿನವೂ ಹೋಗಿ ಬರುತ್ತಿದ್ದರಂತೆ. ಒಂದು ಸಾರೆ ಎಳ್ಳಾಮವಾಸ್ಯೆ ದಿನ ಹೊಲಕ್ಕೆ ಚರಗ ಚಲ್ಲಲು ಬಂದಾಗ ಹೊಲದ ಬೆಳೆ ತುಂಬಿ ನಿಂತುದನ್ನು ಕಂಡು, ಜೋಳದ ತೆನೆಗಳನ್ನು



ಬಸವಣ್ಣನವರ ಗುಡಿ



ಬಸವಣ್ಣನವರ ಗುಡಿಯ ಗರ್ಭಗೃಹದ ನಂದಿ

ಕಂಡು, ಈ ದಂಪತಿಗಳಿಗೆ ಸಂತಾನಾಪೇಕ್ಷೆ ಆಯಿತಂತೆ. ಅವರ ಬಯಕೆ ಹುಸಿ ಆಗದೆ ಮರುವರುಷಕ್ಕೆ ಮಗುವಿನೊಂದಿಗೆ ಚರಗ ಚೆಲ್ಲಲು ಬಂದರೆಂದು ಅಲ್ಲಿಯ ಜನ ಹೇಳುತ್ತಾರೆ. ಆ ಮಗುವೆ ಬಸವಣ್ಣ ಎಂದೂ ಹೇಳಲಾಗುತ್ತದೆ. ಹೀಗಾಗಿ ಈ ಹೊಲಕ್ಕೆ, ಹೊಲದಲ್ಲಿರುವ ಗುಡಿಗೆ ಜನರು ಸಂತಾನ ಪ್ರಾಪ್ತಿಗಾಗಿ ನಡೆದುಕೊಳ್ಳತೊಡಗಿದರೆಂಬ ಮಾತು ಉಳಿದುಕೊಂಡು ಬಂದಿದೆ.

ಬಾಗೇವಾಡಿ ಬಸವಣ್ಣನಿಗೂ ಈ ಹೋರಿಮಟ್ಟಿ ಬಸವಣ್ಣನಿಗೂ ಸಂಬಂಧಕಲ್ಪಿಸುವ ಆಚರಣೆಗಳು ಕಂಡುಬರುತ್ತವೆ. ಪ್ರತಿವರ್ಷ ಶ್ರಾವಣ ಮಾಸದಲ್ಲಿ ೩ ನೇ ಸೋಮವಾರ ಬಾಗೇವಾಡಿ ಬಸವಣ್ಣನ ಗುಡಿಯುಲ್ಲಿ ನಡೆಯುವ ಪಲ್ಲಕ್ಕಿ ಉತ್ಸವ ಪ್ರಾರಂಭವಾಗುವುದಕ್ಕಿಂತ ಮುಂಚೆ, ಆ ಪಲ್ಲಕ್ಕಿ ಹೋರಿಮಟ್ಟಿಗುಡ್ಡಕ್ಕೆ ಹೋಗಿ, ಅಲ್ಲಿ ಪೂಜೆ ಮುಗಿಸಿಕೊಂಡು ಮರಳಿ ಬಸವಣ್ಣನ ಗುಡಿಗೆ ಬಂದ ಮೇಲೆಯೇ ಬಾಗೇವಾಡಿ ಗುಡಿಯಲ್ಲಿ ಪಲ್ಲಕ್ಕಿ ಉತ್ಸವ ನೆರವೇರುತ್ತದೆ. ಇದು ವಿಶೇಷ.

ಈ ಸಮಯದಲ್ಲಿ ಕುರುಬ ಜನಾಂಗದ ಜನ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿರುತ್ತಾರಂತೆ. ಅವರಿಂದ ಪಾಲಿಕೆಗೆ ಪೂಜೆ ಸಲ್ಲುತ್ತದೆಯಂತೆ. ಆನಂತರ ಅವರಲ್ಲಿ ದೇವರು ಹೊಕ್ಕು, ಕಾರ್ಣಿಕ ಹೇಳುತ್ತಾರೆಂದು ಜನ ಹೇಳುತ್ತಾರೆ. ಈ ಸಂಪ್ರದಾಯ ಇಂದಿನವರೆಗೂ ನಡೆದುಕೊಂಡು ಬಂದಿದೆ. ಈ ಗುಡ್ಡದ ಮೇಲೆ ಪತ್ರಿಗಿಡಗಳು ಇವೆ. ಧ್ಯಾನ ಮೌನ ಅನುಷ್ಠಾನ ಮಾಡುವವರಿಗೆ ಪ್ರಶಾಂತವಾದ ಸ್ಥಳವಿದು.

ಮಾಹಿತಿ: ಶ್ರೀಮತಿ ಸಂಗಮ್ಮ ಪೂಜಾರಿ

***

ಬಸವನ ಬಾಗೇವಾಡಿ ತಾಲೂಕು :

## ೪. ನಾಗೋಡ ಗುಡ್ಡ : ಸಿದ್ಧರಾಮೇಶ್ವರ ಅನುಷ್ಠಾನ ಮಾಡಿದ ಸ್ಥಳ

ನಾಗೋಡಗುಡ್ಡ ಬಾಗೇವಾಡಿ ತಾಲೂಕಿನಲ್ಲಿ ಬರುವ ಇನ್ನೊಂದು ಮಹತ್ವದ ಸ್ಥಳ. ಅಲ್ಲಿಗೆ ಹೋಗಲು ದಾರಿ ಅಷ್ಟೊಂದು ಚೆನ್ನಾಗಿಲ್ಲ. ಆದರೆ ಬೆಟ್ಟದ ಮೇಲೆ ಗುಡಿಯೊಂದಿದೆ. ಸಿದ್ಧರಾಮೇಶ್ವರರು ಇಲ್ಲಿ ಅನುಷ್ಠಾನ ಮಾಡಿ ಹೋದುದುರ ಸ್ಮಾರಕ ಇದು ಎಂದು ಹೇಳುತ್ತಾರೆ.

ಇಂಗಳೇಶ್ವರದ ಅಕ್ಕನಾಗಮ್ಮನ ಗವಿಯಿಂದ, ರೇವಣಸಿದ್ಧೇಶ್ವರ ಗವಿಯಿಂದ ನಾಗೋಡ ಗುಡ್ಡಕ್ಕೆ ಹೋಗಿ ತಲುಪಲು ಸುರಂಗ ಮಾರ್ಗವೊಂದು ಇದೆ ಎಂಬ ಪ್ರತೀತಿಯೂ ಇದೆ.



ಸಿದ್ಧರಾಮೇಶ್ವರ ತಪಸ್ಸು ಮಾಡಿದ ಸ್ಥಳ

ನಾಗೋಡು ಗುಡ್ಡದಲ್ಲಿ ಪ್ರತಿವರ್ಷ ಶ್ರಾವಣಮಾಸದ ಕೊನೆಯ ಸೋಮವಾರದಂದು ಜಾತ್ರೆ ನಡೆಯುತ್ತದೆ. ಅದಕ್ಕೆ ಸಿದ್ಧರಾಮೇಶ್ವರ ಜಾತ್ರೆ ಎಂದೇ ಕರೆಯುತ್ತಾರೆ. ಜನರು, ಭಕ್ತಾದಿಗಳು ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ.

ಮಾಹಿತಿ: ಸಂಗಪ್ಪ ಪೂಜಾರಿ ಬಾಗೇವಾಡಿ,

ಚಂದ್ರಶೇಖರ ಶಿವಪ್ಪ ಪೂಜಾರಿ, ಇಂಗಳೇಶ್ವರ

***

ಸಿಂದಗಿ ತಾಲೂಕು :

## ಗೋಲ್ಗೇರಿ :
## ಗೊಲ್ಲಾಳೇಶ್ವರ ಗುಡಿ

ಗ್ವಾಲಗೇರಿ ಅಂಬುದು । ಗೊಲ್ಲನ ಕುರಿ ದೊಡ್ಡಿ ।
ಅಲ್ಲಿ ನಿಂಗಯ್ಯ ನೆನದಾನ । ಕಾರಣದಿಂದ ।
ಗ್ವಾಲಗೇರಿ ಅಂಬ ಹೆಸರಾಗಿ ॥

ಆಡಿನ ಹಿಕ್ಕಿಯ ತಂದು । ತೀಡಿ ಲಿಂಗವ ಮಾಡಿ ।
ನೋಡಿರಿ ಶಿವನ ಮಹಿಮವ । ಗೋಲಗೇರಿ ನಿಂಗ ।
ಆಡಿನ ಹಿಕ್ಯಾಗ ನೆನೆದಾನ ॥



ಗೊಲ್ಲಾಳೇಶ್ವರ ಗುಡಿ



ಗೊಲ್ಲಾಳ ಲಿಂಗ

ಕಲಬುರ್ಗಿಯಿಂದ ಸಿಂದಗಿ ೧೧೦ ಕಿ.ಮೀ. ದೂರದಲ್ಲಿದೆ. ಸಿಂದಗಿಯ ಬಸವೇಶ್ವರ ಚೌಕ್‌ನಿಂದ ೨೨ ಕಿ. ಮೀ. ಅಂತರದಲ್ಲಿರು ಗೋಲ್ಗೇರಿ ಇದೆ. ಗೋಲ್ಗೇರಿಯಿಂದ ೩ ಕಿ.ಮೀ. ದೂರದಲ್ಲಿ 'ಢವಳಾರ' ಎಂಬ ಪಟ್ಟಣ. ಆ ಪಟ್ಟಣದಲ್ಲಿ ಸ್ಥಿತಿವಂತರಾದ ಬಲ್ಲುಗ ಅವರ ಹೆಂಡತಿ ದುಗ್ಗಳೆ (ಇವರಿಗೆ ದ್ಯಾವಳವ್ವ ಎಂದೂ ಕರೆಯುತ್ತಿದ್ದರು) ವಾಸಮಾಡಿಕೊಂಡಿದ್ದರು. ಈ ಪಟ್ಟಣವನ್ನು ಮಹಾದೇವ ರಾಜನು ಆಳುತ್ತಿದ್ದನು. ಬಲ್ಲುಗ ದುಗ್ಗಳೆಯರಿಗೆ ಮಕ್ಕಳಿರಲಿಲ್ಲ. ಅವರು ಆಗಲೆ ೫೦, ೬೦ ವರ್ಷ ವಯಸ್ಸಿನವರಾಗಿದ್ದರು. ಮಕ್ಕಳಿಲ್ಲದ ಚಿಂತೆ ಅವರಿಗಿತ್ತು. ಆದರೆ ಮುಪ್ಪಿನ ಈ ಅವಸ್ಥೆಯಲ್ಲಿ ಮಕ್ಕಳಾಗುವುದಿಲ್ಲ ಎಂಬ ಸತ್ಯದ ಅರಿವೂ ಅವರಿಗಿತ್ತು. ಮಕ್ಕಳಿಲ್ಲ ಎಂಬುದನ್ನು ಮರೆತು ಜೀವನ ಸಾಗಿಸುವಾಗ, ಅವರಿಗೆ ಶಿವಕರುಣೆಯಿಂದ ಸಂತಾನ ಪ್ರಾಪ್ತಿ ಆಗುತ್ತದೆ. ಈ ವಯಸ್ಸಿನಲ್ಲಿ ಒಂದು ರೀತಿಯ ಮುಜುಗರ, ಇನ್ನೊಂದೆಡೆ ಸಂತೋಷ. ಅವರ ಮನೆದೇವರು ಕುಲದೇವರು ಬೀರಪ್ಪ. ಸಹಜವಾಗಿಯೆ ಹುಟ್ಟಿದ ಮಗುವಿಗೆ ಬೀರಲಿಂಗ ಎಂದು ಹೆಸರಿಡುತ್ತಾರೆ. ಮುಗ್ಧಭಕ್ತಿಯ ಶಿಶುವಾಗಿ, ಕುರಿಕಾಯುತ್ತ ಲಿಂಗದ ಹುಚ್ಚಿನಲ್ಲಿ ಮಗು ಬೆಳೆಯುತ್ತದೆ. ಮುಂದೆ ಇವನು ವಚನ ರಚನೆ ಮಾಡುತ್ತಾನೆ.

ತನ್ನ ಮುಗ್ಧ ಭಕ್ತಿಯಿಂದಾಗಿ ಸುತ್ತಲಿನವರಿಗೆ ದೇವರ ಸ್ವರೂಪದಲ್ಲಿ ಕಾಣಿಸಿಕೊಂಡ ಅಪರೂಪದ ಶರಣ ಗೊಲ್ಲಾಳ. ಅವನನ್ನು ಅವತಾರಿ ಪುರುಷನೆಂದೂ ಕಾರಣಿಕ ಪುರುಷನೆಂದೂ ಜನ ಗೌರವಿಸುತ್ತಾರೆ. ಈಗಲೂ ಆ ಪೂಜ್ಯಭಾವನೆ ಹಾಗೇ ಉಳಿದುಕೊಂಡು ಬಂದಿದೆ. ಗೊಲ್ಲಾಳ ಪೂಜಿಸಿದ ಲಿಂಗದಿಂದಾಗಿ ಗೋಲ್ಗೇರಿ

ಇಂದು ಯಾತ್ರಾ ಸ್ಥಳವಾಗಿದೆ. ಕರ್ನಾಟಕದ ಅಷ್ಟೇ ಅಲ್ಲ ಆಂಧ್ರ, ಮಹಾರಾಷ್ಟ್ರ, ತಮಿಳುನಾಡಿನಿಂದ ಕೂಡ ಜನ ವರ್ಷವಿಡಿ ಬರುತ್ತಾರೆ.

ಈಗ ಗೊಲ್ಲಾಳೇಶ್ವರ ಲಿಂಗ ಇರುವ ಸ್ಥಳದಲ್ಲಿಯೇ ಗೊಲ್ಲಾಳ ಕುರಿ ಕಾಯುತ್ತಿದ್ದನೆಂದೂ ಅದು ಅವರ ಮನೆತನದ ಕುರಿ ಹಟ್ಟಿ ಆಗಿತ್ತೆಂದೂ ಹೇಳುತ್ತಾರೆ. ಬಯಲು ಪ್ರದೇಶ. ಅಲ್ಲಿಯೇ ಕುರಿಗಳನ್ನು ಕಾಯುತ್ತ ಜೀವನವನ್ನು ಸಾಗಿಸುತ್ತಿದ್ದನು. ಹೀಗಿರುವಾಗ ಈ ಮಾರ್ಗವಾಗಿ ಕಂಬಿಯನ್ನು ಹೊತ್ತು ಪಾದಯಾತ್ರೆ ಹೊರಟ ಭಕ್ತರ ಸಮೂಹವನ್ನು ಗೊಲ್ಲಾಳ ನೋಡುತ್ತಾನೆ. ಅವರ ಬಾಯಿಯಿಂದ ಪುನರುಚ್ಚರಣೆ ಆಗುತ್ತಿದ್ದ **'ಶ್ರೀಶೈಲ ಮಲ್ಲಿಕಾರ್ಜುನ ಉಘೇ ಉಘೇ'** ಎಂಬ ನಾಮಸ್ಮರಣೆ ಅವನಲ್ಲಿ




ಅವ್ವಮ್ಮ ಮಲಕಮ್ಮ ಅವರ ಸಮಾಧಿ ಮೇಲಿನ ಉಮಾಮಹೇಶ್ವರನ ಶಿಲ್ಪ

ದಿವ್ಯ ಸಂಚಲನವನ್ನುಂಟು ಮಾಡುತ್ತದೆ. ಮಗು ಗೊಲ್ಲಾಳ ಎಲ್ಲರನ್ನು ಮಾತನಾಡಿಸುತ್ತಾನೆ. ಇವನೇನು ಕುರಿಕಾಯುವವ ಎಂದು ಯಾರೂ ಸರಿಯಾಗಿ ಮಾತನಾಡಿಸುವದಿಲ್ಲ. ಅವನನ್ನುಆ ಗುಂಪಿನೊಳಗಿದ್ದ ನಂದಯ್ಯ ಎಂಬುವವನು ಮಾತನಾಡಿಸುತ್ತಾನೆ. ಗೊಲ್ಲಾಳನಿಗೆ ಸಂತೋಷ ವಾಗುತ್ತದೆ. ಅವರೆಲ್ಲ ಹೊರಟ ಕಾರಣವನ್ನು ಕೇಳುತ್ತಾನೆ. ಶ್ರೀಶೈಲಕ್ಕೆ ಹೊರಟ ಸಂಗತಿ ತಿಳಿದಾಗ ಸಂತೋಷ ಆಗುತ್ತದೆ. ತನಗೂ ಹೋಗಬೇಕೆಂಬ ಆಪೇಕ್ಷೆ ಆಗುತ್ತದೆ. ಆದರೆ ಕಾಯಕ ಬಿಟ್ಟು ಹೋಗುವಂತಿರಲಿಲ್ಲ. ಹೀಗಾಗಿ ಶ್ರೀಶೈಲದಿಂದ ತನಗೂ ಒಂದು ಲಿಂಗವನ್ನು ತಂದುಕೊಡುವಂತೆ ನಂದಯ್ಯನಲ್ಲಿ ಪ್ರಾರ್ಥಿಸಿಕೊಳ್ಳುತ್ತಾನೆ. ಅವನು ಅದಕ್ಕೆ ದುಡ್ಡು ಬೇಕಾಗುತ್ತದೆ ಎಂದಾಗ ಮನೆಯಲ್ಲಿದ್ದ ತಂದೆಯ ಹೊನ್ನ ಬಿಂದಿಗೆಯನ್ನು ನಂದಯ್ಯನಿಗೆ ತಂದು ಕೊಟ್ಟನೆಂದು ಕೆಲವರು ಹೇಳುತ್ತಾರೆ. ಸಾವಿರ ಹೊನ್ನು ಕೇಳಿದ ನಂದಯ್ಯನಿಗೆ ಗೊಲ್ಲಾಳ ಜಾಣತನದಿಂದ ೫೦೦ ಹೊನ್ನು ಮಾತ್ರ ಕೊಡುತ್ತಾನೆ. ಮತ್ತೆ ಉಳಿದ ೫೦೦ ಹೊನ್ನನ್ನು ಲಿಂಗ ತಂದು ಕೊಟ್ಟ ಮೇಲೆ ಕೊಡುವುದಾಗಿ ಹೇಳಿದನೆಂದೂ ಹೇಳುತ್ತಾರೆ. ಈ ಘಟನೆಯೇ ಅವನ ಬೀರಪ್ಪ ಹೆಸರು ಹೋಗಿ ಗೊಲ್ಲಾಳ ಆಗಿ ಪರಿವರ್ತಗೊಳ್ಳಲು ಕಾರಣವಾಯಿತೆಂದೂ ಹೇಳಲಾಗುತ್ತದೆ.

ಈ ಘಟನೆ ಇನ್ನೂ ಮುಂದುವರೆದು ಅವನ ಸತ್ವಪರೀಕ್ಷೆ ನಡೆಯುತ್ತದೆ. ನಂದಯ್ಯನ ದಾರಿಯನ್ನು ಕಾಯುತ್ತಿದ್ದ ಬೀರಲಿಂಗನಿಗೆ ನಂದಯ್ಯನಿಂದ ದೊರೆತದ್ದು ಲಿಂಗವಲ್ಲ ಕುರಿಹಿಕ್ಕಿ ಮಾತ್ರ. ನಂದಯ್ಯ ತನ್ನ ಎಡಗಾಲ ಉಂಗುಷ್ಟದಿಂದ ಅಲ್ಲಿ ಬಿದ್ದ ಕುರಿ ಹಿಕ್ಕಿಯನ್ನು ಎತ್ತಿಕೊಂಡು ಗೊಲ್ಲಾಳನಿಗೆ ಲಿಂಗವೆಂದು ಕೊಟ್ಟಿದ್ದನು. ಏಕೆಂದರೆ ಅವನು ಹೊನ್ನು ಸಿಕ್ಕ ಸಂಭ್ರಮದಲ್ಲಿ ಹೊನ್ನು ಕೊಟ್ಟ ಬೀರಲಿಂಗನ ಉದ್ದೇಶ, ಆಸೆಯನ್ನೇ ಮರೆತುಬಿಟ್ಟಿದ್ದನು. ಹೀಗಾಗಿ ಬೀರಲಿಂಗನನ್ನು ನೋಡಿದಾಗಲೆ ಅವನ ಲಿಂಗದ ನೆನಪಾದದ್ದು. ನಂದಯ್ಯನಿಂದ ಪೂಜಾವಿಧಾನವನ್ನು, ಅದರ ಮಹತ್ವವನ್ನು ತಿಳಿದುಕೊಳ್ಳುತ್ತಾನೆ. ಕುರಿಹಾಲಿನಿಂದ ನಿತ್ಯ ಅಭಿಷೇಕ ಮಾಡಿ ಪ್ರಸಾದ ಅರ್ಪಿಸಲೂ ಹೇಳುತ್ತಾನೆ. ಯಾರಿಗೂ ಕಾಣದಂತೆ ಕುರಿಯ ಕಳ್ಳೆ (ಗೊಬ್ಬರದಲ್ಲಿ)ಯಲ್ಲಿ ಆ ಹಿಕ್ಕಿಯ ಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. ಲಿಂಗಕೊಟ್ಟ ಗುರು ನಂದಯ್ಯ ಹೇಳಿದಂತೆ ಹಾಲ ಅಭಿಷೇಕ ಮಾಡುತ್ತಾನೆ. ಮೊಸರು, ತುಪ್ಪ ಸುರುವುತ್ತಾನೆ. ಪತ್ರಿ ಪುಷ್ಪ ಏರಿಸುತ್ತಾನೆ. ಅವನು ಎರೆಯುವ ಹಾಲು ಹಳ್ಳವಾಗಿ ಹರಿಯತೊಡಗುತ್ತದೆ. ಭಕ್ತಿಪರವಶನಾಗಿ ಕುಣಿದಾಡುವ ಬೀರಲಿಂಗನ ಈ ಪೂಜೆ ಎಲ್ಲರಿಗೂ ವಿಚಿತ್ರವಾಗಿ ಕಾಣುತ್ತದೆ. ಬಹಳ ದಿನಗಳ ಮೇಲೆ ಮಕ್ಕಳಾದರೆ ಇಂಥ ಹುಚ್ಚು ಮಕ್ಕಳೇ ಹುಟ್ಟುತ್ತಾರೆ ಎಂದು, ಅವನ ಭಕ್ತಿಯ ಉನ್ಮಾದವನ್ನು ಮೂಢ ಜನ ಹುಚ್ಚುತನಕ್ಕೆ ಹೋಲಿಕೆ ಮಾಡಿತು. ಗೊಬ್ಬರಗುಂಡಿಗೆ ಹೀಗೆ ಮಾಡುವುದು ಮೌಢ್ಯವಲ್ಲದೆ ಮತ್ತೇನು? ಎಂದು ಜನ ಆಡಿಕೊಳ್ಳತೊಡಗಿತು. ಕುರಿಹಟ್ಟಿಯಲ್ಲಿ ಹೀಗೆ ವರ್ತಿಸುತ್ತಿರುವ ಮಗನ ಸುದ್ದಿ ಕೇಳಿ ಬಲ್ಲುಗನಿಗೆ ಅವಮಾನವಾದಂತಾಗಿ, ಮಗನ ಮೇಲೆ ಕೋಪಗೊಂಡು ಅವನಲ್ಲಿಗೆ ಬರುತ್ತಾನೆ.

ತಂದೆ ಬಲ್ಲುಗ ಹಿರಿಯರ ಸಂಪತ್ತು ಮಗನಿಗಾಗಿ ಇರಲಿ ಎಂದು ಕಾಯ್ದಿಟ್ಟವನು. ಆದರೆ ಮಗನೇ ಹೊನ್ನ ಬಿಂದಿಗೆ ಮತ್ತೊಬ್ಬರಿಗೆ ಕೊಟ್ಟಿದ್ದಲ್ಲದೆ, ಗೊಬ್ಬರ ಗುಂಪಿಗೆ ಹಾಲು ಮೊಸರು ತುಪ್ಪ ಎರೆದು ಅದನ್ನು ಹಾಳು ಮಾಡುತ್ತಿದ್ದಾನೆ. ಮಗನ ಅವಸ್ಥೆ ಕಣ್ಣಾರೆ ಕಂಡು, ಕುಪಿತನಾಗಿ ಅವಹೇಳನ ಮಾಡತೊಡಗುತ್ತಾನೆ. ಆದರೆ ತಂದೆಯು ಲಿಂಗವನ್ನು ಕಾಲಿನಿಂದ ಒದ್ದು ಪೂಜೆ ಭಗ್ನಗೊಳಿಸಿದ್ದನ್ನು ಮಾತ್ರ ಗೊಲ್ಲಾಳ ಸಹಿಸಿಕೊಳ್ಳಲಿಲ್ಲ. ಹೆತ್ತಪ್ಪನೆಂಬುದನ್ನೂ ಮರೆತು ತಂದೆಯ ರುಂಡವನ್ನೇ ಕತ್ತರಿಸುತ್ತಾನೆ. ಮತ್ತೆ ಯಥಾಸ್ಥಿತಿ ಲಿಂಗಪೂಜೆಯಲ್ಲಿ ಮಗ್ನನಾಗುತ್ತಾನೆ. ಸುದ್ದಿ ಧವಳಾರ ಪಟ್ಟಣಕ್ಕೂ ಮುಟ್ಟಿ ತಾಯಿಯು ಪತಿಯ ವಿಯೋಗದ ದುಃಖದಲ್ಲಿ ಮುಳುಗುತ್ತಾಳೆ. ಸುದ್ದಿ ಪಟ್ಟಣದ ರಾಜ ಮಹಾದೇವನಿಗೂ ತಲಪುತ್ತದೆ. ಗೊಲ್ಲಾಳನ ಭಕ್ತಿಗೊಲಿದ ಶಿವ ಲಿಂಗವಾಗಿ ರೂಪುದೋರುತ್ತಾನೆ. ಶಿವ ಗೊಲ್ಲಾಳನಿಗೆ ಪ್ರತ್ಯಕ್ಷವಾದ ಪವಿತ್ರ ನೆಲ ಇದು ಎಂದು ಅಂದು ಹಟ್ಟಿ ಆಗಿದ್ದ ಪ್ರದೇಶದ ಬಗ್ಗೆ ಅಲ್ಲಿಯ ಧರ್ಮದರ್ಶಿಗಳಾದ ಶ್ರೀಮಾನ್ ಶಿವಶಂಕ್ರಪ್ಪ ಸಾಹುಕಾರ ದೇವರಮನಿ ಅವರು ಅಭಿಮಾನದಿಂದ ಹೇಳುತ್ತಾರೆ. ಶಿವ ಪ್ರತ್ಯಕ್ಷ ಗೊಲ್ಲಾಳನಿಗೆ ತೋರಿದ ಲಿಂಗವಿದಾದ್ದರಿಂದ ಬೀರಲಿಂಗ ಗೊಲ್ಲಾಳಲಿಂಗವಾದ. ಗೊಲ್ಲಾಳ ಶರಣನಾಗಿ ಪ್ರಸಿದ್ಧಿ ಪಡೆದ.

ಗ್ವಾಲಗೇರಿಯ ತೇರ ಗಾಲ ಮೇಲಾಗ್ಯಾವ ।
ಮ್ಯಾಲಿನ ಕಳಸ ಅದರ್ಯಾವ । ಗೊಲ್ಲಾಳ ।
ಗಾಬರಿಯಾಗ್ಯಾನ ಗಳಗ್ಯಾಗ



ಗೊಲ್ಲಾಳನ ತೇರು



ಗೊಲ್ಲಾಳ ತೇರಿನ ಪಾದಗಟ್ಟಿ

ಈ ಮೇಲಿನ ಘಟನೆಯಿಂದಾಗಿ ಬಹಳಷ್ಟು ಜನ ಗೊಲ್ಲಾಳನ ಭಕ್ತರಾದರು. ಅಂಥವರಲ್ಲಿ ಬಾಗೇವಾಡಿ ತಾಲೂಕಿನ ಉಕ್ಲಿಯ ಗೌಡರ ಮನೆತನದ ಅವ್ವಮ್ಮ ಮಲಕಮ್ಮ ಇಬ್ಬರು. ಗೊಲ್ಲಾಳನೇ ಅವರ ಭಕ್ತಿಗೆ ಮೆಚ್ಚಿ ಹಟ್ಟಿಗೆ ಕರೆತಂದನೆಂದೂ ಅವರಿಬ್ಬರ ಸಮಾಧಿಗಳೂ ಗೊಲ್ಲಾಳಲಿಂಗನ ಆವರಣದಲ್ಲಿಯೇ ಇವೆ ಎಂದೂ ಸ್ಥಳ ತೋರಿಸುತ್ತಾರೆ. ದೇವಾಲಯದ ಮುಖ್ಯದ್ವಾರ ಪ್ರವೇಶಿಸಿದ ಕೂಡಲೇ ಬಲಕ್ಕೆ ಒಂದು ಸ್ಥಳ ತೋರಿಸಿ, ಅದುವೇ ಆ ಇಬ್ಬರು ಭಕ್ತೆಯರ ಗದ್ದುಗೆ ಎನ್ನುತ್ತಾರೆ. ಅದರ ಮೇಲೆ ಉಮಾಮಹೇಶ್ವರ ವಿಗ್ರಹವಿದೆ. ಆ ನೆನಪಿಗಾಗಿ ಉಕ್ಲಿ ಊರಿನ ಜನ ಇಂದಿಗೂ ತಮ್ಮೂರಿನ ಹೆಣ್ಣುಮಕ್ಕಳು ಎಂಬ ಕಾರಣಕ್ಕಾಗಿ ಸಂಕ್ರಮಣದ ಭೋಗಿ ದಿನ ತಮ್ಮೂರಿನಿಂದ ಸೀತ್ನಿ, ಕಬ್ಬು, ಬಾರಿಹಣ್ಣು, ಸುಲಿಗಡಲೆಯನ್ನು ತಂದು ಅರ್ಪಿಸುತ್ತಾರೆ. ಅವೆಲ್ಲ ಬಂದು ಮುಟ್ಟಿರುತ್ತವೆ ಎಂದು ಹೇಳಿ ಪತ್ರ ಬರೆದು ಕಳಿಸುವ ರೂಢಿಯೂ ಇದೆ ಎನ್ನುತ್ತಾರೆ.

ಇನ್ನೊಂದು ವಿಶೇಷವೆಂದರೆ ಆಗಿನಿಂದ ಈಗಿನವರೆಗೂ ಆಚರಿಸುವ ಸಂಪ್ರದಾಯವೆಂದರೆ- ಗೊಲ್ಲಾಳನಿಗೆ ಶ್ರೀಶೈಲದಿಂದ ಲಿಂಗ ತಂದು ಕೊಟ್ಟ ಕಾರಣವಾಗಿಯೋ ಶಿವ ಗೊಲ್ಲಾಳನಿಗೆ ಪ್ರತ್ಯಕ್ಷ ಆದ ಸ್ಥಳವೆಂತಲೋ ಸೊಲ್ಲಾಪುರ ಸಿದ್ಧರಾಮನ ಕಂಬಿ ಮೊದಲ್ಗೊಂಡು ಸುತ್ತಲೂರಿನ ಕಂಬಿಗಳೆಲ್ಲ ಫಾಲ್ಗುಣಮಾಸದ ಹೋಳಿಹುಣ್ಣಿವೆಯ ಮರುದಿನ ಬೂದಿಚೆಲ್ಲುವ ದಿನದಂದು ಗೊಲ್ಲಾಳಲಿಂಗವಿದ್ದ ಈ ಆವರಣಕ್ಕೆ ಬರುತ್ತವೆ. ಬೂದಿಚೆಲ್ಲುವ ದಿನ ಎಲ್ಲ ಕಂಬಿಗಳನ್ನು ಪೂಜೆ ಮಾಡಿ

ಕಳಿಸುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ. ಅಲ್ಲಿಂದ ಜಾತ್ರೆಯ ಆಚರಣೆಗಳು ಪ್ರಾರಂಭವಾಗುತ್ತವೆ. ಸುಣ್ಣ ಬಣ್ಣ ಆಗುತ್ತದೆ. ಕಂಬಿ ಶ್ರೀಶೈಲ ಮುಟ್ಟಿ ಮತ್ತೆ ಈ ಸ್ಥಳಕ್ಕೆ ಬಂದ ನಂತರವೇ ತಮ್ಮ ತಮ್ಮ ಊರಿಗೆ ಹೋಗುತ್ತವೆ. ಈ ಕಾರಣಕ್ಕಾಗಿ ಈ ಪ್ರದೇಶಕ್ಕೆ 'ಕಡೆ ಶ್ರೀಶೈಲ' ಎಂದು ಕರೆಯಲಾಗುತ್ತದಂತೆ.

ಶ್ರೀಶೈಲದ ಮಲ್ಲಿಕಾರ್ಜುನನ ಜಾತ್ರೆ ವರ್ಷದಲ್ಲಿ ಎರಡು ಸಾರೆ ಆಗುತ್ತದೆ. ಯುಗಾದಿಗೆ ಒಮ್ಮೆ, ಶಿವರಾತ್ರಿಗೆ ಒಮ್ಮೆ. ಹಾಗೆ ಗೋಲ್ಗೇರಿಯಲ್ಲಿಯೂ ಜಾತ್ರೆ ಎರಡುಸಲ ಆಗುತ್ತದೆಯಂತೆ, ಯುಗಾದಿಗೆ ಧರ್ಮದರ್ಶಿಗಳು ತಮ್ಮ ಮನೆಯಲ್ಲಿ ಗೊಲ್ಲಾಳೇಶ್ವರ ಪುರಾಣ ಹಚ್ಚುವುದಾಗಿ ಹೇಳುತ್ತಾರೆ. ಗುಡಿಯಲ್ಲಿ ಶ್ರಾವಣದಲ್ಲಿ ಪುರಾಣ ಹಚ್ಚುತ್ತಾರೆ. ಶ್ರಾವಣದಲ್ಲಿಯೆ ಜಾತ್ರೆ ತೇರು ಆಗಬೇಕಾದ್ದು. ಶ್ರಾವಣದಲ್ಲಿ ತೊಟ್ಟಿಲು ಕಾರ್ಯಕ್ರಮ ನಡೆಯುತ್ತದೆ. ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಶಿವ ತನ್ನ ರೂಪವನ್ನು ನಾಗರ ರೂಪದಲ್ಲಿಯೂ ತೋರಿಸಿದ್ದಾನೆಂಬ ನಂಬಿಕೆಯೂ ಇದ್ದು, ಉತ್ಸವ ಮೂರ್ತಿಯ ಹಿಂದೆ ನಾಗರವನ್ನು ಪಲ್ಲಕ್ಕಿಯಲ್ಲಿಟ್ಟು ಮೆರೆಸುತ್ತಾರೆ. ಆದರೆ ಆಗ ಮಳೆಗಾಲ ಆದುದರಿಂದ ತೇರು ಪಾಜ(ಪಾದಗಟ್ಟಿ) ಮುಟ್ಟಿ ಬರಲು ತೊಂದರೆ ಆಗುತ್ತದೆಂದೂ ಬೇರೆ ಬೇರೆ ಪ್ರದೇಶದಿಂದ ಬಂದ ಭಕ್ತರಿಗೂ ತೊಂದರೆ ಆಗುತ್ತದೆ ಎಂಬ ಕಾರಣಕ್ಕಾಗಿ ಜಾತ್ರೆಯನ್ನು ಮುಂದೆ ಹಾಕಲಾಗಿದೆ. ಯುಗಾದಿ ಅಮವಾಸ್ಯೆ



ಗೊಲ್ಲಾಳೇಶ್ವರ ಗುಡಿಯ ಮುಂಭಾಗ



ಆದನಂತರ ದವನದ ಹುಣ್ಣಿವೆಗೆ ಜಾತ್ರೆ ಆಗುತ್ತದೆ. ಅಮವಾಸ್ಯೆ ಆದ ಆರುದಿನಕ್ಕೆ (ಷಷ್ಠಿಗೆ)ಆಚರಣೆಗಳು ಪ್ರಾರಂಭವಾಗುತ್ತವೆ. ೯ನೇ ದಿನ ಉಚ್ಚಾಯ ಎಳೆಯುವ, ದಶಮಿ ಅಂದರೆ ಹತ್ತನೆಯ ದಿನಕ್ಕೆ ತೇರು ಎಳೆಯುವ ಸಂಪ್ರದಾಯವನ್ನು ಜನ ಮುಂದುವರೆಸಿಕೊಂಡು ಹೊರಟಿದೆ. ಶ್ರಾವಣ ಮಾಸದಲ್ಲಿ ಬರುವ ನೂಲಹುಣ್ಣಿವೆ ಹಿಡಿದು ಹತ್ತನೇ ದಿನಕ್ಕೆ ಗೊಲ್ಲಾಳ ಲಿಂಗೈಕ್ಯನಾಗಿದ್ದಾನೆಂದು ಹೇಳಲಾಗುತ್ತದೆ.

ಗೊಲ್ಲಾಳನ ಉತ್ಸವಗಳನ್ನು ಚಾಚೂ ತಪ್ಪದೆ ಮುಂದುವರೆಸಿಕೊಂಡು ಹೊರಟಿರುವುದು ಆಶ್ಚರ್ಯವೆ. ೯೦೦ ವರ್ಷಗಳಿಂದಲೂ ನಡೆಸಿಕೊಂಡು ಬಂದ ಸಂಪ್ರದಾಯ ಇದು ಎಂದು ಹೇಳುತ್ತಾರೆ. ಬಯಲಲ್ಲಿಯೆ ಇದ್ದ ಲಿಂಗಕ್ಕೆ ಗುಡಿ ಕಟ್ಟಿಸಿದವರು ಸುರಪುರದಿಂದ ಬಂದ ಮರಿಯಪ್ಪ ಶೆಟ್ಟಿ ಅವರು. ಆ ಮನೆತನದವರೇ ಇಲ್ಲಿಯ ಧರ್ಮದರ್ಶಿಗಳಾಗಿ ಮುಂದುವರೆದಿದ್ದಾರೆ. ಪ್ರತಿ ಸೋಮವಾರವೂ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಆಗ ಸಣ್ಣ ಬೆಳ್ಳಿಯ ಉತ್ಸವಮೂರ್ತಿ ಇಟ್ಟು ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಈ ಪಲ್ಲಕ್ಕಿ ಹೊರುವ ಚಾಜ ಈಗಲೂ ಕುರುಬ ಜನಾಂಗಕ್ಕೆ ಇದೆ. ಬಾಜಾಭಜಂತ್ರಿ ಚಾಜದವರೂ ಬರುತ್ತಾರೆ. ಡೊಳ್ಳು ಸೇವೆ ನಡೆಯುತ್ತದೆ.

ಈ ಗುಡಿಯ ಆವರಣದಲ್ಲಿ ಗೌರಿ ಸೋಮಣ್ಣನ ಗುಡಿ ಇದೆ. ಅರಳಿ ಬೇವು ಬನ್ನಿ ಬಿಲ್ವಪತ್ರಿಗಿಡಗಳು ಕೂಡಿರುವ ಒಂದು ದೊಡ್ಡ ಕಟ್ಟೆ ಇದೆ. ಬ್ರಾಹ್ಮಣರ ಮನೆದೇವರು, ಕುಲದೇವರು ಗೊಲ್ಲಾಳ ಆಗಿರುವುದೂ ಕೂಡಾ ವಿಶೇಷವೆನ್ನುತ್ತಾರೆ. ಗೊಲ್ಲಾಳನ ಬಗ್ಗೆ ವಿಪುಲವಾದ ಮೌಖಿಕ ಸಾಹಿತ್ಯ ದೊರೆಯುತ್ತದೆ. ಹಂತಿ ಪದಗಳು, ಡೊಳ್ಳುಪದಗಳು, ಕುಟ್ಟುವ ಬೀಸುವ ಪದಗಳು, ಜೋಗುಳ ಪದಗಳು, ಸಂಪ್ರದಾಯದ ಪದಗಳು, ಲಾವಣಿ ಪದಗಳು ಈ ಭಾಗದಲ್ಲಿ ಹೇರಳವಾಗಿ ಸಿಗುತ್ತವೆ.

ಮಾಹಿತಿ: ಶಿವಶಂಕ್ರಪ್ಪ ಸಾಹುಕಾರ ದೇವರಮನಿ, ಧರ್ಮದರ್ಶಿಗಳು
ವಚನಗಳು: ೧೦
ವಚನಾಂಕಿತ: ವೀರಬೀರೇಶ್ವರಲಿಂಗ

***

## ಗೋಲಗೇರಿ ಅಂಬುದು ಗೊಲ್ಲನ ಕುರಿದೊಡ್ಡಿ

ಗ್ವಾಲಗೇರಿ ಅಂಬುದು । ಗೊಲ್ಲನ ಕುರಿ ದೊಡ್ಡಿ ।
ಅಲ್ಲಿ ನಿಂಗಯ್ಯ ನೆನದಾನ । ಕಾರಣದಿಂದ ।
ಗ್ವಾಲಗೇರಿ ಅಂಬ ಹೆಸರಾಗಿ ॥ ॥ ೧ ॥

ಆಡಿನ ಹಿಕ್ಕಿಯ ತಂದು । ತೀಡಿ ಲಿಂಗವ ಮಾಡಿ ।
ನೋಡಿರಿ ಶಿವನ ಮಹಿಮವೊ । ಗೋಲಗೇರಿ ನಿಂಗ ।
ಆಡಿನ ಹಿಕ್ಯಾಗ ನೆನೆದಾನ ॥ ॥ ೨ ॥

ಸಿದ್ಧ ಸಿದ್ಧರ ಕೂಡಿ । ಬುದ್ಧಿವಂತರು ಕೂಡಿ ।
ಸಿದ್ಧಯ್ಯ ಕೂಡಿ ಶಿವಕೂಡಿ । ಮಾಡ್ಯಾರ ।
ಅಪ್ಪ ಗೊಲ್ಲಾಳನ ಹೊಸತೇರ ॥ ॥ ೩ ॥

ಅಪ್ಪನ ತೇರಿಗಿ । ಇಪ್ಪತ್ತ ಮಿಣಿಹಚ್ಚಿ ।
ಪಪ್ಪಳ ಶಲ್ಯ ಪತಿ ಹಚ್ಚಿ । ನಿಂಗಯ್ಯನ ।
ಚಪ್ಪಳಗಿ ಇಟ್ಟು ತೇರ ಎಳದೇವ ॥ ॥ ೪ ॥

ಗ್ವಾಲಗೇರಿಯ ತೇರ । ಗಾಲ ಮೇಲಾಗ್ಯಾವ ।
ಮ್ಯಾಲಿನ ಕಳಸ ಅದರ್‍ಯಾವ । ಗೊಲ್ಲಾಳ ।
ಗಾಬರಿಯಾಗ್ಯಾನ ಗಳಗ್ಯಾಗ ॥ ೫ ॥

ಆಲಗೂರ ಅಕ್ಕಿ । ಗ್ವಾಲಗೇರಿಯ ಬೆಲ್ಲ ।
ಕೆಳಗ ಡಂಬಳದ ಕೆನಿ ಮಸರ । ಕೂಡಿಸಿ ।
ಅಪ್ಪ ನಿಂಗಯ್ಯನ ಅಭಿಷೇಕ ॥ ॥ ೬ ॥

ಗ್ವಾಲಗೇರಿಯ ಗೊಲ್ಲ । ಎಲಿಯ ಪೂಜಿನೇ ಒಲ್ಲ ।
ಯಾಕೋ ನಮ್ಮನಿಗಿ ಬರುವಲ್ಲ । ಗೊಲ್ಲಾಳ ।
ಪಲ್ಲಕ್ಕಿ ಬೇಡಿ ಮುನಿದಾನ ॥ ॥ ೭ ॥

ಪಲ್ಲಕ್ಕಿ ಹೊತ್ತಣ್ಣ । ಮೆಲ್ಲಕ ನಡಿರೆಣ್ಣ ।
ಕಲ್ಲಾಗ ಕಾಲ ಅದರ್‍ಯಾವ । ಗೊಲ್ಲಾಳನ
ಪಲ್ಲಕ್ಕೆನ ಮುತ್ತ ಉದುರ್‍ಯಾವ ॥ ೮ ॥

ಕುರಿಹಿಂಡ ಕಟಗೊಂಡು । ಮರತಿದ್ದ ಬಡತನ ।
ಇರುವುತಲಿ ಹುಟ್ಟಿ ಮಗನೊಬ್ಬ । ಗೊಲ್ಲಾಳ ।
ವರಪುತ್ರನಾದ ಪಡೆದವನ ॥ ೯ ॥

ಹಡೆದವನು ಬಡ ಕುರುಬ । ನಡೆಸಿದ್ದ ಜೀವನವ ।
ಕಡದುಳಿದ ಮಡದಿಯೊಡಗೂಡಿ । ಕುರಿಹಿಂಡ ।
ಎಡಬಿಡದೆ ಬೆಳಸಿ ದೊರಿಯಾದ ॥ ೧೦ ॥

ಮಳ್ಳಿ ಮಾಗಣಗೇರಿ । ಎಲ್ಯಾದ ಕುಳಗೇರಿ ।
ತೆಗ್ಗೀನಾಗಾದ ಗ್ವಾಲಗೇರಿ । ನಿಂಗಯ್ಯನ ।
ಹುಬ್ಬಿನ್ಯಾಗಾದ ಹರಿನಾಮೋ ॥ ೧೧ ॥

ಕಲ್ಲ ಕಟ್ಟಿಸಿದ ಬಾಂವಿ । ಮಲ್ಲೀಗಿ ಸೊಪಾನ ।
ಗಲ್ಲ ಗಲ್ಲೆಂಬ ಗ್ವಾಲಗೇರಿ । ನಿಂಗಯ್ಯ ।
ಮಲ್ಲೀಗಿ ಹೂವಿನ್ಯಾಗ ನೆನದಾನ ॥ ೧೨ ॥

ತೆಗ್ಗಿಲ್ಲ ತೆವರಿಲ್ಲ । ಮುಗ್ಯಾವ ಎರಡಾನಿ ।
ತೆಗ್ಗಿನ್ಯಾಗಾದ ಗ್ವಾಲಗೇರಿ । ನಿಂಗಯ್ಯನ ।
ಹುಬ್ಬಿನ್ಯಾಗಾದ ಹರಿನಾಮೋ ॥ ೧೩ ॥

ನಿಂಗಯ್ಯನ ಗುಡಿಮುಂದ । ನಿಂಗ ಮುದ್ರಕಿಯ ಕಲ್ಲ ।
ನಿಂದ್ರಸಿ ಎತ್ತಿ ಇಳದಾಳ । ಆ ಬಾಲಿ ।
ವಂದಿಸಿ ಕೈಯ್ಯ ಮುಗಿದಾಳ ॥ ೧೪ ॥

– ಶ್ರೀ ಮಡಿವಾಳಪ್ಪ ಪೂಜಾರಿ

***

**ಸಿಂದಗಿ ತಾಲೂಕು :**


## ೨. ಬಬಲೇಶ್ವರ :
## ಜಗದೇವ- ಬೊಮ್ಮಯ್ಯ ಅವರ ಊರು

ಕಾಳರುದ್ರನು ಮಾಚ ಭಾಳಲೋಚನ ಬಕ್ತ
ಮಲ್ಲಿಬೊಮ್ಮಯ್ಯ ಜಗದೇವ । ಮನೆ ಹೊಕ್ಕು
ಸೀಳಿ ತಲೆಹೊಡೆದು ಬಿಜ್ಜಳನ

ಸಿಂದಗಿ ಇಂದ ೧೨ ಕಿ.ಮೀ. ದೂರದಲ್ಲಿ ಆಲಮೇಲ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ ಒಂದು ವಿರಕ್ತಮಠದ ಹೆಸರು **'ಜಗದೇವ-ಮೊಲ್ಲಿಬೊಮ್ಮ ಮಠ'** ಎಂದಿದೆ. ಅದನ್ನು ಇತ್ತೀಚೆಗೆ ಹಾಗೆ ನಾಮಕರಣ ಮಾಡಲಾಗಿದೆ. ಕಾರಣವೆಂದರೆ ಆಲಮೇಲ ಮತ್ತು ಬಬಲೇಶ್ವರದಲ್ಲಿ ಜಗದೇವ-ಮೊಲ್ಲಿಬೊಮ್ಮರ ವಂಶಜರೆಂದು ಹೇಳಿಕೊಳ್ಳುವ ಒಂದು ದೇಸಾಯಿ ಮನೆತನವಿದೆ. ಈ ಇತಿಹಾಸ ಜನರ ನೆನಪಿನಲ್ಲಿ ಉಳಿಯಲಿ ಎಂಬ ಕಾರಣಕ್ಕಾಗಿ ಮಠದ ಹೆಸರನ್ನು ಹಾಗೆ ಇಡಲಾಗಿದೆಯಂತೆ.



**ಜಗದೇವನ ತಂದೆ ಗುರುಬಸಪ್ಪ ಅವರ ಸಮಾಧಿ-ಬಬಲೇಶ್ವರ**



ಗುರುಬಸಪ್ಪ ಅವರ ಸಮಾಧಿಗುಡಿಯ ಗರ್ಭಗೃಹದ ಚಿತ್ರ

ಆಲಮೇಲದಲ್ಲಿರುವ ದೇಸಾಯರ ಮನೆತನವು ಅಲ್ಲಿಯೇ ಸಮೀಪದ ಒಂದು ಹಳ್ಳಿ ಬಬಲೇಶ್ವರ ಗ್ರಾಮಕ್ಕೆ ಸೇರಿದ ಮನೆತನ. ಬಿಜ್ಜಳನನ್ನು ಸಂಹಾರ ಮಾಡಿದ ಜಗದೇವ–ಮೊಲ್ಲಿಬೊಮ್ಮ ಇವರ ವಂಶಕ್ಕೆ ಸಂಬಂಧಿಸಿದವರು ಎಂದು ಹೇಳಲಾಗುತ್ತದೆ. ಜಗದೇವ–ಮೊಲ್ಲಿಬೊಮ್ಮ ಇಬ್ಬರೂ ಅಣ್ಣತಮ್ಮರು. ಇವರ ತಂದೆಯ ಹೆಸರು ಗುರಬಸಪ್ಪ. ತಾಯಿ ಸೋಮವ್ವೆ. ಇವರ ಮೂಲ ಊರು ಬೀದರ ಜಿಲ್ಲೆಯ ಕನ್ನೇಹಳ್ಳಿ ಎಂಬ ಗ್ರಾಮ ಎಂದು ಹೇಳಲಾಗುತ್ತದೆ.

ಮಧುವರಸ ಮತ್ತು ಹರಳಯ್ಯ ಅವರಿಗೆ ಎಳೆಹೂಟೆ ಶಿಕ್ಷೆಯಾದ ನಂತರ, ಇವರ ಮನೆಯಲ್ಲಿ ತಾಯಿ ಸೋಮವ್ವೆ ತನ್ನ ಇಬ್ಬರು ಮಕ್ಕಳಾದ ಜಗದೇವ ಮತ್ತು ಮೊಲ್ಲೆಬೊಮ್ಮಯ್ಯಗಳಿಗೆ ಊಟಕ್ಕೆ ಬಡಿಸುವಾಗ, ಶರಣರಿಗೆ ಅನ್ಯಾಯವಾಗಿ ಎಳೆಹೂಟೆ ಶಿಕ್ಷೆಯಾಗಿರುವುದನ್ನು ಕೇಳಿ ತಿಳಿದುಕೊಳ್ಳುತ್ತಾಳೆ. ಯಾವುದೇ ತಪ್ಪು ಮಾಡದ ಶರಣರಿಗೆ ಈ ರೀತಿ ಶಿಕ್ಷೆ ಆಗುವಾಗ ನೀವು ಸುಮ್ಮನಿದ್ದರೆ ಹೇಗೆ? ಎಂದು ಮಕ್ಕಳನ್ನು ಜರಿಯುತ್ತಾಳೆ. ಶರಣರಿಗೆ ಆದ ಅನ್ಯಾಯದ ಸೇಡು ತೀರಿಸಿಕೊಳ್ಳಲು, ಬಿಜ್ಜಳನ ಕೊಲೆಗೈಯ್ಯುವಂತೆ ಮಕ್ಕಳನ್ನು ಒತ್ತಾಯಿಸುತ್ತಾಳೆ. ಅಲ್ಲಿಯವರೆಗೆ ಮಕ್ಕಳು ನಾಯಿಯಂತೆ ನೆಲದಮೇಲೆ ಹಾಕಿದ ಆಹಾರ ತಿನ್ನಬೇಕೆಂದು ಹೇಳುತ್ತಾಳೆ.

ತಾಯಿಯ ಈ ಮಾತುಗಳನ್ನು ಕೇಳಿದ ಮಕ್ಕಳು ರೋಷದಿಂದ ಏಳುತ್ತಾರೆ. ಊಟದ ಪರ್ಯಾಣವನ್ನು ಒಗೆದು, ಟೊಂಕಕ್ಕೆ ಕಟ್ಟಿದ ಉಡದಾರವನ್ನು ಕಡಿದು ಮನೆಯ

ಮುಂದಿನ ಬೇಲಿಗೆ ಹಾಕಿ, ಬಿಜ್ಜಳನ ಕೊಲೆ ಮಾಡುವ ಪಣತೊಟ್ಟು ಅಲ್ಲಿಂದ ಹೊರಡುತ್ತಾರೆ. ಇಂದಿಗೂ ಬಬಲೇಶ್ವರ ಮತ್ತು ಆಲಮೇಲದಲ್ಲಿರುವ ದೇಸಾಯರ ಮನೆತನದಲ್ಲಿ ಉಡದಾರ ಕಟ್ಟಿಕೊಳ್ಳುವ ರೂಢಿ ಇಲ್ಲವೆಂದು ತಿಳಿದುಬರುತ್ತದೆ. ಜಗದೇವ ಮತ್ತು ಮೊಲ್ಲೆಬೊಮ್ಮಯ್ಯ ಅವರು ಬಿಜ್ಜಳನಲ್ಲಿ ಕಾವಲುಗಾರರಂತೆ ಸೇರಿ, ದೀವಟಿಗೆ ಹಿಡಿಯುವವರಾಗಿ, ಅರಸ ಬಿಜ್ಜಳನನ್ನು ಕೊಲೆಗೈಯುತ್ತಾರೆ. ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲವುಂಟಾಗುತ್ತದೆ.

ಜಗದೇವನು ಸಿಂದಗಿ ತಾಲೂಕಿನ ಬಬಲೇಶ್ವರ ಎಂಬ ಗ್ರಾಮಕ್ಕೆ ಬರುತ್ತಾನೆ. ಬಬಲಾದ, ಆಲಮೇಲ ಮತ್ತು ಘುತ್ತರಗಿ ಎಂಬ ಗ್ರಾಮಗಳಲ್ಲಿ ದೇಸಗತಿಗಳನ್ನು ಸಂಪಾದಿಸಿಕೊಳ್ಳುತ್ತಾನೆ. ಮತ್ತೆ ಸಾವಿರಾರು ಎಕರೆ ಜಮೀನು ಗಳಿಸುತ್ತಾನೆ. ಆದರೆ ಮೊಲ್ಲಿಬೊಮ್ಮ ಏನಾದನೆಂದು ಈ ಭಾಗದಲ್ಲಿ ಮೌಖಿಕ ಮಾಹಿತಿಗಳು ಉಳಿದುಕೊಂಡು ಬಂದಿಲ್ಲ. ಈಗ ಬಬಲೇಶ್ವರದಲ್ಲಿರುವವರು ಜಗದೇವಪ್ಪನ ವಂಶಜರು ಎಂದು ಹೇಳಿಕೊಳ್ಳುತ್ತಾರೆ.

ಜಗದೇವ–ಮೊಲ್ಲೆ ಬೊಮ್ಮರು ಹೀಗೆ ಬಿಜ್ಜಳನ ಕೊಲೆಗೈಯಬೇಕಾದರೆ ಮೊದಲೇ ತಮ್ಮ ಹಿರಿಯರನ್ನು ಸಿಂದಗಿ ಕಡೆ ಕಳಿಸಿದ್ದರೋ ಅಥವಾ ಕೊಲೆಗೈದ ನಂತರ ಗೌಪ್ಯವಾಗಿ ಎಲ್ಲರೂ ಕೂಡಿಯೇ ಬಂದರೋ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಆದರೆ ಸಿಂದಗಿಯಿಂದ ಎಂಟ್ಹತ್ತು ಕಿ.ಮೀ. ದೂರದಲ್ಲಿರುವ ಬಬಲೇಶ್ವರ ಎಂಬ ಗ್ರಾಮದಲ್ಲಿ ಜಗದೇವ ಮಲ್ಲಿಬೊಮ್ಮರ ತಂದೆ ಗುರಬಸಪ್ಪ (ಗುರುರಾವ) ದೇಸಾಯಿ ಅವರು



ಗುರುಬಸಪ್ಪ ಅವರ ಸಮಾಧಿ ಆವಾರದ ಗೋಡೆಯ ಹೊರಗಡೆ
ಗವಿಯ ಬಾಗಿಲು ಇರುವ ಗುರುತು ಕಾಣುತ್ತದೆ



ಜಗದೇವಪ್ಪ ಅವರ ಹಾಳಾಗಿ ಹೋದ ಮನೆಯ ಅವಶೇಷ- ಬಬಲೇಶ್ವರ

ಜೀವಂತ ಸಮಾಧಿಯಾದರೆಂದು ಹೇಳುವ ಸ್ಮಾರಕ ಇದೆ. ಈ ಸಮಾಧಿ ಇರುವ ಸ್ಥಳದ ಅಂಗಳದಲ್ಲಿ ಒಂದು ದೊಡ್ಡ ಗವಿ ಇರುವುದೆಂದು ಹೇಳುತ್ತಾರೆ. ಆದರೆ ಅದನ್ನು ಈಗ ಮುಚ್ಚಲಾಗಿದೆ.

ಗವಿಗೆ ಇರುವ ಕಂಪೌಂಡನ ಪಶ್ಚಿಮದ ಹೊರಮಗ್ಗಲು ಒಂದು ಗವಿಯ ಬಾಗಿಲು ಕಾಣಿಸುತ್ತದೆ. ಅದು ಪುನಃ ಸಮಾಧಿ ಅಂಗಳದ ಒಳಗಡೆಯೇ ಗವಿ ಇರುವುದರ ಸೂಚನೆಯಾಗಿದೆ. ಸಮಾಧಿಯ ಪೂರ್ವದಿಕ್ಕಿನ ಸ್ಥಳದಲ್ಲಿ ಒಂದು ಹಳೆಯ ಅಷ್ಟಪೈಲ್ ಬಾವಿ ಇದೆ. ಶರಣರಾದ ಇವರು ಅಷ್ಟಾವರಣದ ಸಂಕೇತವಾಗಿ ಹೀಗೆ ರಚಿಸಿರಬಹುದು. ಬಾವಿಗೆ ನಾಲ್ಕು ಕಡೆ ಬಾಗಿಲುಗಳಿದ್ದು, ಒಂದು ಬಾಗಿಲಿನಿಂದ ಗವಿಗೆ ಬರಲು ದಾರಿ ಇದೆ ಎನ್ನುತ್ತಾರೆ. ಇದೆಲ್ಲವನ್ನು ಗಮನಿಸಿದರೆ, ಜಗದೇವ-ಮೊಲ್ಲಿಬೊಮ್ಮ ಇವರ ಹಿರಿಯರು ಶರಣ ಸಂಪ್ರದಾಯಕ್ಕೆ ಸೇರಿದವರೇ ಆಗಿದ್ದರು ಎನಿಸುತ್ತದೆ.

ಗುರಬಸಪ್ಪ ದೇಸಾಯಿ ಅವರ ಕಿರಿಯ ಸಹೋದರ ಶಾಂತಪ್ಪ ದೇಸಾಯಿ ಅವರ ಜೀವಂತ ಸಮಾಧಿ ಸಿಂದಗಿಯ ಹಿರೇಮಠದ ಆವರಣದಲ್ಲಿದೆ ಎಂದು ಹೇಳುತ್ತಾರೆ. ಸಿಂದಗಿಯಲ್ಲಿ ಜನ ಅವರನ್ನು ಶಾಂತಯ್ಯಮುತ್ತ್ಯಾ ಎಂದು ಕರೆಯುತ್ತಾರೆ. ಬಸವ ಜಯಂತಿಯಂದು ದೇಸಾಯಿ ಮನೆತನದವರು ಬಬಲೇಶ್ವರದಲ್ಲಿ ಗುರುಬಸವಪ್ಪನವರ ಜಾತ್ರೆಯನ್ನು ಮಾಡುತ್ತಾರೆ. ಅನ್ನಸಂತರ್ಪಣೆ ಇರುತ್ತದೆ. ಭಜನೆ ಹಚ್ಚಿರುತ್ತಾರೆ.

ಈ ಎಲ್ಲ ಮೇಲಿನ ವಿಷಯಗಳಿಗೆ ಸಾಕ್ಷಿಯಾಗಿ ಹೆಳವರು ಬರೆದಿಡುವ ಒಂದು

ದಾಖಲೆ ನಮಗೆ ದೊರೆಯುತ್ತದೆ. ಸಿಂದಗಿಯಿಂದ- ಆಲಮೇಲ ಊರುಗಳ ನಡುವೆ ಇರುವ ಕಲ್ಲೂರ ಎಂಬ ಗ್ರಾಮದಲ್ಲಿ ಪರಪ್ಪ ಹೆಳವರ ಅವರ ಹತ್ತಿರ ಇರುವ ಕೈಬರಹದ ಹೊತ್ತಿಗೆ ಜಗದೇವ ಅವರ ಮನೆತನದ ವಂಶಾವಳಿಯನ್ನು ಹೇಳುತ್ತದೆ. ಈ ಪರಪ್ಪ ಹೆಳವರನ್ನು ಕಾಣಲು ನಾವು ಹೋದಾಗ (ದಿನಾಂಕ: ೨-೯-೨೦೧೨) ಅವರು ಶಿವಾಧೀನರಾದ ವಿಷಯ ತಿಳಿದುಬಂದಿತು. ನಂತರ ಅವರ ಮನೆಯಲ್ಲಿರುವ ಈ ವಂಶಾವಳಿಯನ್ನು ತರಿಸಿಕೊಂಡು ಪರಿಶೀಲಿಸಿದಾಗ, ಅದರಲ್ಲಿ ಜಗದೇವ ಮತ್ತು ಬೊಮಯ್ಯ ಎಂಬ ಹೆಸರುಗಳು ದಾಖಲಾಯಲ್ಲಿರುವುದು ಕಂಡುಬರುತ್ತದೆ. ಬೊಮ್ಮಣ್ಣ ಅಥವಾ ಬೊಮ್ಮಯ್ಯನ ಹಿಂದೆ ಮೊಲ್ಲೆ ಎಂಬ ಪದ ಕಂಡುಬರುವುದಿಲ್ಲ.

ಜಗದೇವ ಮತ್ತು ಬೊಮ್ಮಯ್ಯ ಇವರ ತಂದೆ ಗುರುಬಸಪ್ಪ. ಇವರಿಗೆ ಜಗದೇವಪ್ಪ, ಹಿರಿಯಬೊಮ್ಮಣ್ಣ, ಕಿರಿಯಜಗದೇವಪ್ಪ, ಕಿರಿಯಬೊಮ್ಮಣ್ಣ ಎಂಬ ಹೆಸರಿನ ನಾಲ್ಕು ಜನ ಮಕ್ಕಳು ಇರುವುದು ಹೆಳವರ ದಾಖಲೆಯಲ್ಲಿ ನಮೂದಾಗಿದೆ. ಬಿಜ್ಜಳನಿಗೆ ಕೊಲೆಮಾಡಿದವರು ಹಿರಿಯಜಗದೇವಪ್ಪ ಮತ್ತು ಹಿರಿಯಬೊಮ್ಮಣ್ಣ ಎನ್ನಲಾಗುತ್ತದೆ. ಈ ದೇಸಾಯರ ಮನೆತನದಲ್ಲಿ ಜಗದೇವ, ಬೊಮ್ಮಯ್ಯ ಎಂಬ ಹೆಸರುಗಳನ್ನು ಇಡುತ್ತ ಬಂದಿರುವುದು ಕಾಣುತ್ತದೆ. ಈಗಲೂ ಒಬ್ಬರ ಹೆಸರು ಜಗದೇವಪ್ಪ ಎಂದಿದೆ.

**'ಮೊಲ್ಲೆಬೊಮ್ಮಯ್ಯಗಳ ಕಾವ್ಯ'** ಎಂಬ ಒಂದು ಕಾವ್ಯ ನಮಗೆ ದೊರೆಯುತ್ತದೆ. ಅದರ ಪ್ರಕಾರ ಮೊಲ್ಲಿಬೊಮ್ಮಯ್ಯ ಈಗಿನ ರಾಯಚೂರು ಜಿಲ್ಲೆಯ ಯಲಬುರ್ಗ ತಾಲೂಕಿನ ರ್‍ಯಾವಣಕಿ ಎಂಬ ಗ್ರಾಮದವನು. ಬೊಮ್ಮಗೌಡ ಕಲ್ಲಮ್ಮ ತಾಯಿತಂದೆಗಳು. ಮುಂದೆ ಶಿವನ ಅಪ್ಪಣೆಯ ಮೇರೆಗೆ ಮೊಲ್ಲಿಬೊಮ್ಮಯ್ಯ ಕಲ್ಯಾಣಕ್ಕೆ ಬಂದು ಜಗದೇವನನ್ನು ಕಂಡನು. ಹರಳಯ್ಯ ಮಧುವಯ್ಯಗಳ ಎಳೆಹೂಟೆ ಆದ ನಂತರ ಜಗದೇವ ಮನೆಗೆ ಬರಲು, 'ತಾಯಿ ಶಿವಭಕ್ತರ ಕೊಂದವರ ಕೊಲ್ಲದೆ ಇರಬಾರದು' ಎಂದಳು. ಜಗದೇವ ಮೂರುವರೆ ತಿಂಗಳಲ್ಲಿ ದ್ರೋಹಿಗಳನ್ನು ಕೊಲ್ಲುವುದಾಗಿ ಪಣತೊಟ್ಟನು. ಅಲ್ಲಿಯವರೆಗೆ ನಾಯಿಯಂತೆ ತಿನ್ನು ಎಂದು ತಾಯಿ ಅವನಿಗೆ ನೆಲದ ಮೇಲೆ ಉಣಬಡಿಸುತ್ತಿದ್ದಳು. ಮೊಲ್ಲಿಬೊಬ್ಬನು ಸ್ನೇಹಿತನಾದ ಜಗದೇವನ ಜೊತೆಗೂಡುವುದಾಗಿ ಹೇಳಿ, ತಾನೂ ನೆಲದ ಮೇಲೆಯೇ ಉಣ್ಣುವುದಾಗಿ ಹೇಳಿದನು. ಜಗದೇವನ ತಾಯಿ ಇಬ್ಬರಿಗೂ ನೆಲದ ಮೇಲೆ ಉಣಬಡಿಸುತ್ತಿದ್ದಳು. ಬಿಜ್ಜಳನ ಆಸ್ಥಾನದಲ್ಲಿ ದೀವಟಿಗೆ ಹಿಡಿಯುವವರಾಗಿ ಸೇವೆಗೆ ಸೇರಿದರು. ದೀವಟಿಗೆಯಲ್ಲಿ ಖಡ್ಗಗಳನ್ನು ಬಚ್ಚಿಟ್ಟುಕೊಂಡು, ಒಂದು ದಿನ ಸಾಧಿಸಿ, ಖಡ್ಗದಿಂದ ಬಿಜ್ಜಳನನ್ನು ಕೊಲೆಗೈದರು. ಇದು ಕಾವ್ಯ ಹೇಳುವ ಕಥೆ.

ರ್‍ಯಾವಣಕಿ ಸಮೀಪದ ಕಲ್ಲೂರಿನಲ್ಲಿ ಕಲ್ಲೇಶ್ವರ ದೇವಸ್ಥಾನದ ಗರ್ಭಗುಡಿಯ ಎಡಬಲದಲ್ಲಿ ಜಗದೇವ ಮೊಲ್ಲೆಬೊಮ್ಮಯ್ಯ ಎಂದು ಎರಡು ಲಿಂಗಗಳು ಪೂಜೆಗೊಳ್ಳುತ್ತಿದ್ದು, ಅವು ಅವರಿಬ್ಬರ ಸಮಾಧಿಗಳೆಂದು ಜನನಂಬಿದ್ದಾರೆಂದು

ತಿಳಿದುಬರುತ್ತದೆ. ಅಲ್ಲದೆ ಅಲ್ಲಿಯ ಮಠವೊಂದರಲ್ಲಿ ಜಗದೇವ ಮಲ್ಲಿಬೊಮ್ಮ ಅವರು ಬಿಜ್ಜಳನ ಕೊಲೆ ಮಾಡಿದ ಎರಡು ಖಡ್ಗಗಳು ಇವೆ ಎಂದು ಹೇಳಲಾಗುತ್ತದೆ.

ಆದರೆ ಈ ಜಗದೇವ ಮೊಲ್ಲಿಬೊಮ್ಮ ಇಬ್ಬರೂ ಸಹೋದರರೇ ಅಲ್ಲವೇ ಎಂಬುದು ಒಂದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಏಕೆಂದರೆ ಹೆಳವರ ದಾಖಲೆಯಲ್ಲಿ ಮೊಲ್ಲೆಬೊಮ್ಮಯ್ಯ ಎಂದಿರದೆ ಕೇವಲ ಬೊಮ್ಮಣ ಎಂದಿರುವುದು ಗಮನಿಸಬೇಕಾದ ಸಂಗತಿ ಎನಿಸುತ್ತದೆ. ಇನ್ನೊಂದು ಮಹತ್ವದ ಸಂಗತಿ ಎಂದರೆ ಸಹೋದರರೆಂದರೆ ಜಗದೇವನ ಜೊತೆ ಮೊಲ್ಲೆಬೊಮ್ಮಯ್ಯ ಬಬಲೇಶ್ವರಕ್ಕೆ ಏಕೆ ಬರಲಿಲ್ಲ? ಅವನೇನಾದರೂ ದಾರಿಯಲ್ಲಿ ಕೊಲೆಯಾದನೇ? ಅಥವಾ ಕಾವ್ಯ ಹೇಳುವಂತೆ ಇಬ್ಬರೂ ಬೇರೆಬೇರೆ ಪ್ರದೇಶದವರಾಗಿದ್ದು, ನಂತರ ಕಲ್ಯಾಣದಲ್ಲಿ ಭೇಟಿಯಾಗಿ ಸ್ನೇಹಿತರಾಗಿರಬಹುದೆ? ಹಾಗಾದರೆ ಜಗದೇವನ ಸಹೋದರ ಬೊಮ್ಮಣ್ಣ ಬಿಜ್ಜಳನನ್ನು ಸಂಹರಿಸುವಲ್ಲಿ ಜೊತೆಯಾದವನಲ್ಲವೆ? ಈ ಕೆಲವು ಸಂಗತಿಗಳು ಉಳಿದುಕೊಳ್ಳುತ್ತವೆ.

ಆದರೆ ಬಿಜ್ಜಳನನ್ನು ಕೊಲೆಗೈದವರು ಜಗದೇವ ಮತ್ತು ಮೊಲ್ಲೆಬೊಮ್ಮ ಎಂಬ ಸಂಗತಿಗಳನ್ನು ಕನ್ನಡದ ಹಳೆಯ ಕಾವ್ಯಗಳು ಉಳಿಸಿಕೊಂಡು ಬಂದಿವೆ. ಕೆಲ



ಜಗದೇವ ಮೊಲ್ಲಿಬೊಮ್ಮರ ಕಾಲ್ಪನಿಕ ಚಿತ್ರ
ಜಗದೇವಪ್ಪನ ಮೈಬಣ್ಣ ಸಾದಗಪ್ಪು ಇತ್ತೆಂದು ಹೇಳುತ್ತಾರೆ
(ಚಿತ್ರ ಕಲಾವಿದ : ವಿಜಯ ಹಾಗರಗುಂಡಗಿ, ಕಲಬುರ್ಗಿ)

ಕೃತಿಗಳು ಜಗದೇವನ ಹೆಸರನ್ನು ಮಾತ್ರ ಉಲ್ಲೇಖಿಸಿದರೆ, ಕೆಲವು ಜಗದೇವ ಮೊಲ್ಲೆಬೊಮ್ಮಯ್ಯ ಇಬ್ಬರ ಹೆಸರುಗಳನ್ನೂ ಉಲ್ಲೇಖಿಸುತ್ತವೆ.


ಬಬಲೇಶ್ವರದಲ್ಲಿ ಕೇವಲ ಜಗದೇವನ ವಂಶಜರೆಂದು ಹೇಳಿಕೊಳ್ಳುವ ದೇಸಾಯಿ ಮನೆತನದವರಿರುವುದು; 'ಮೊಲ್ಲೆಬೊಮ್ಮಯ್ಯಗಳ ಕಾವ್ಯ' ಜಗದೇವ ಮೊಲ್ಲಿಬೊಮ್ಮರು ಕಲ್ಯಾಣದಲ್ಲಿಯೇ ಭೇಟಿಯಾದ ಬಗ್ಗೆ ಹೇಳುತ್ತಿರುವುದನ್ನು ಗಮನಿಸಿದರೆ ಮೊಲ್ಲೆಬೊಮ್ಮ ಜಗದೇವನ ಸಹೋದರನಾಗಿರಲಿಕ್ಕಿಲ್ಲ ಎನಿಸುತ್ತದ. ಜಗದೇವನ ತಮ್ಮ ಬೊಮ್ಮಣ ಬಿಜ್ಜಳನ ಕೊಲೆಯಲ್ಲಿ ಭಾಗಿಯಾಗಿರಲಿಕ್ಕಿಲ್ಲ ಎನಿಸುತ್ತದೆ. ಹೆಳವರ ದಾಖಲೆಯಲ್ಲಿ 'ಮೊಲ್ಲೆಬೊಮ್ಮಯ್ಯ' ಎಂದಿರದೇ ಕೇವಲ 'ಬೊಮ್ಮಣ' ಎಂದು ಇರುವುದು ಕೂಡ ಮಹತ್ವದ ಸಂಗತಿಯೇ. 'ಮೊಲ್ಲೆ' ಎಂಬುದು ಬೊಮ್ಮಯ್ಯನ ಮನೆತನದ ಹೆಸರೆ? ಕಾಯಕದ ಹೆಸರೆ? ಇಂತಹ ಕೆಲ ಸಂದೇಹಗಳು ಉಳಿದುಕೊಳ್ಳುತ್ತವೆ. ಈ ಬಗೆಗೆ ಹೆಚ್ಚಿನ ಶೋಧದ ಅವಶ್ಯಕತೆ ಇದೆ ಎನಿಸುತ್ತದೆ.

ಮಾಹಿತಿ : ಬಾಪುರಾಯ ದೇಸಾಯಿ, ಬಬಲೇಶ್ವರ, ವ. ೮೦

***



ಜಗದೇವ –ಮೊಲ್ಲೆ ಬೊಮ್ಮಯ್ಯಗಳ ವಿರಕ್ತ ಮಠ ಆಲಮೇಲ



ಹೆಳವರ ದಾಖಲೆ ಪ್ರತಿ

## ಸಿಂದಗಿ ತಾಲೂಕು :

### ೩. ಡೋಣಿಕೊಂಡಗುಳಿ :

#### ೧. ಸೋಮಾನಾಥ ದೇವಾಲಯ

ಡೋಣಿ ಕೊಂಡಗೂಳಿ ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿ ಬರುತ್ತದೆ. ಸಿಂದಗಿಯಿಂದ ೧೬ ಕಿ.ಮೀ. ಅಂತರದಲ್ಲಿದೆ. ಕೇಶಿರಾಜ ಈ ಊರಿನಲ್ಲಿ ಜನಿಸಿದರು ಎಂದು ಹೇಳುತ್ತಾರೆ. ಇಂತಹದೇ ಸಂಗತಿ ಜೇವರ್ಗಿ ತಾಲೂಕಿನ ಜಾಡ ಕೊಂಡಗುಳಿಯಲ್ಲೂ ಇದೆ. ಕೊಂಡಗುಳಿ ಪಕ್ಕದಲ್ಲಿ ಡೋಣಿ ನಾಲಾ ಹರಿದಿರುವುದರಿಂದ ಡೋಣಿ ಕೊಂಡಗುಳಿ ಎಂದು ಈ ಊರಿಗೆ ಹೆಸರು ಬಂದಿದೆ. ಕೇಶಿರಾಜ ಆರನೆಯ



ಸೋಮಾನಾಥ ದೇವಾಲಯ



ಸೋಮಾನಾಥ ದೇವಾಲಯದ ಗರ್ಭಗೃಹದ ಮುಂದಿನ ಮಂಟಪ

ವಿಕ್ರಮಾದಿತ್ಯನ ಆಡಳಿತ ವಲಯದಲ್ಲಿ ಮಹಾದಂಡನಾಯಕ ಆಗಿದ್ದರು. ಜನರು ಈ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಕೇಶಿರಾಜ ಕವಿಯಾಗಿದ್ದು, 'ಲಿಂಗಸ್ತೋತ್ರದ ಕಂದ' 'ಶೀಲಮಹತ್ವದ ಕಂದ' 'ಮಂತ್ರ ಮಹತ್ವದ ಕಂದ' 'ನವರತ್ನ ಮಾಲಿಕೆ' 'ಷಡಕ್ಷರ ಮಂತ್ರ ಮಹಿಮೆ' ಎಂಬ ಹಲವು ಕೃತಿಗಳನ್ನು ರಚಿಸಿದ್ದಾನೆ. ಕೇಶಿರಾಜ ಪರಮ ಶಿವಭಕ್ತನಾಗಿದ್ದನು.

ಲಿಂಗಕ್ಕೆ ಅಲ್ಲದೆ ಬೇರೆ ಯಾರಿಗೂ ತಲೆಬಾಗದ ನಿಷ್ಠೆಯನ್ನು ಕೇಶಿರಾಜ ಬೆಳೆಸಿಕೊಂಡು ಬಂದಿದ್ದವನು. ಅದಕ್ಕಾಗಿ ರಾಜನ ಆಡಳಿತದಲ್ಲಿದ್ದ ತನ್ನ ಅಧಿಕಾರವನ್ನೇ ತ್ಯಜಿಸಿ ಹೊರಟ ನಿಷ್ಠಾವಂತನು. ಈ ಸಂಗತಿ ಇನ್ನೂ ಜನರ ಮನದಲ್ಲಿ ಉಳಿದುಕೊಂಡು ಬಂದಿದೆ.

ಕೇಶಿರಾಜನ ಆರಾಧ್ಯದೈವ ಸೋಮನಾಥ. ಸೋಮನಾಥನ ಹೆಸರಿನಲ್ಲಿ ಶ್ರಾವಣದಲ್ಲಿ ಸಪ್ತಾಹ ಹಚ್ಚಿ ಭಜನೆ ಮಾಡಲಾಗುತ್ತದೆ. ಒಂದು ತಿಂಗಳ ಪೂರ್ಣ ಭಜನೆ ನಡೆಯುತ್ತದೆ. ದೇವಾಲಯದ ಚಾಜ ಮಠಪತಿಗೆ ಮೀಸಲಾಗಿದೆ. ಪೂಜೆಗೆ ಅನುಕೂಲವಾಗಲಿ ಎಂದು ದೇವರ ಹೊಲವೊಂದಿದೆ. ಈ ಊರು ಡೋಣಿಯಲ್ಲಿತ್ತು ಎನ್ನುತ್ತಾರೆ. ಆಮೇಲೆ ಡೋಣಿ ತುಂಬಿ ಬಂದಾಗ ಅವರು ಅಲ್ಲಿಂದ ಕಿತ್ತುಕೊಂಡು ಬಂದಿದ್ದಾರೆಂದೂ ಹೇಳುತ್ತಾರೆ.

ಈ ಊರಲ್ಲಿ ಒಂದು ದೊಡ್ಡ ಹಳೆಯ ಬಾವಿ ಇದೆ. ಇದ್ಕಕೆ ಕೇಶಿರಾಜನ ಬಾವಿ ಎಂದು ಕರೆಯುತ್ತಾರೆ. ಊರಗೌಡರಾದ ಬಾಬುಗೌಡರ ಹೊಲದಲ್ಲಿ ಒಂದು ಗದ್ದುಗೆ ಇದ್ದು ಕೇಶಿರಾಜನದೆಂದು ಹೇಳುತ್ತಾರೆ.

ಮಾಹಿತಿ : ಬಿ. ಎಸ್. ಕೆಂಭಾವಿಮಠ.

ನೋಡಿ : ಜಾಡಕೊಂಡಗುಳಿ, ತಾ. ಜೇವರ್ಗಿ, ಜಿ. ಕಲಬುರ್ಗಿ

***



ಕೇಶಿರಾಜನ ಬಾವಿ



ಕೇಶಿರಾಜನ ಗದ್ದುಗೆ

## ೨. ಮಡಿವಾಳೇಶ್ವರ ಮಠ

ವೀರಘಂಟೆಯ ನಾದ ಕೇರಿ ಕೇರಿಗೆ ತಲುಪಿ
ಸಾರಿ ಮಾಚಯ್ಯ ಬರುವನು । ಶರಣರಿಗೆ
ಬೀರಿ ಕಾಯಕದ ಹೊತ್ತನ್ನು

ಡೋಣಿ ಕೊಂಡಗುಳಿಯಲ್ಲಿ ಸೋಮನಾಥ ದೇವಾಲಯದ ಹಿಂಭಾಗದಲ್ಲಿ ಒಂದು ಮಡಿವಾಳೇಶ್ವರ ದೊಡ್ಡ ಗುಡಿ ಇದೆ. ಇದಕ್ಕೆ ಗದ್ದುಗೆಮಠ ಎಂದೂ ಕರೆಯುತ್ತಾರೆ. ಮಡಿವಾಳೇಶ್ವರ, ಮಡಿವಾಳಪ್ಪ ಎಂಬ ಹೆಸರಿನಿಂದ ಕರೆಯುತ್ತಾರೆ. ಕಲಕೇರಿ ಮಡಿವಾಳಪ್ಪನ ಹಾಗೆ ಕೊಂಡಗುಳಿ ಮಡಿವಾಳಪ್ಪನ ಗುಡಿಯೊಳಗೆ ಜೋಡು ಮೂರ್ತಿಗಳಿರುವುದು ವಿಶೇಷ. ಒಂದು ವೀರಗಂಟಿ, ಇನ್ನೊಂದು ಮಡಿವಾಳಪ್ಪ. ಇಬ್ಬರೂ ಶರಣರೆಂದು ಹೇಳಲಾಗುತ್ತದೆ. ಕೊಂಡಗುಳಿಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ತೇರು ಕಲಕೇರಿಗೆ ಹೋಗಿದೆ ಎನ್ನುತ್ತಾರೆ. ಇಲ್ಲಿಂದ ತೇರು ಹೋದ ಮೇಲೆ ಇಲ್ಲಿ (ಕೊಂಡಗುಳಿ) ಮತ್ತೆ ಬಸವಜಯಂತಿಗೆ ತೇರು ಎಳೆಯಲು ಊರವರೆಲ್ಲರೂ ಒಪ್ಪಿಕೊಂಡು ಮತ್ತೆ ತೇರೆಳೆಯುವ ಸಂಪ್ರದಾಯವನ್ನು ಪ್ರಾರಂಭಿಸಿದ್ದಾರೆ.

ಜೀರು, ಹಡಪಿಗರು, ಅಗಸರು, ಸ್ವಾಮಿಗಳು, ಗೌಳಿ ಈ ಐದು ಸಮಾಜಕ್ಕೆ ಸಂಬಂಧಿಸಿದ ಐವರು ಪೂಜೆಗೆ ಕುಳಿತು ಬ್ಯಾಟಿ (ಮಂಸಾಹಾರ) ಉಂಡ ಮೇಲೆ



ಮಡಿವಾಳೇಶ್ವರ ಗುಡಿಯ ಒಳಾಂಗಣ



ಮಡಿವಾಳೇಶ್ವರ ಗುಡಿಯ ಪ್ರವೇಶ ದ್ವಾರ

ಬೇರೆಯವರು ಉಣ್ಣುವ ಸಂಪ್ರದಾಯವಿದೆಯಂತೆ. (ಸ್ವಾಮಿಗಳನ್ನು ಹೊರತುಪಡಿಸಿ ಎಲ್ಲರೂ ಉಣ್ಣುತ್ತಾರೆ). ಉಳಿದದ್ದನ್ನು ಅಲ್ಲಿಯೇ ಮುಚ್ಚಿ ಬಿಡುತ್ತಾರಂತೆ.

ಗದ್ದಿಗಿಮಠ ಅವರ ಮನೆಯ ಜಗುಲಿಯ ಮೇಲೆ ಮಡಿವಾಳಪ್ಪನ ಬೆಳ್ಳಿಯ ಉತ್ಸವ ಮೂರ್ತಿಗಳಿವೆ. ದೊಡ್ಡದು ವೀರಗಂಟಿ ಎಂದೂ ಸಣ್ಣದು ಮಡಿವಾಳೇಶ್ವರ ಎಂದೂ ಮನೆಯವರು ಮಾಹಿತಿ ನೀಡುತ್ತಾರೆ.

***

ಮಾಹಿತಿ: ಬಸಲಿಂಗಯ್ಯ ಕಲ್ಲಯ್ಯ ಗದ್ದಗಿಮಠ

ನೋಡಿ : ದೇವರ ಹಿಪ್ಪರಗಿ, ತಾ. ಸಿಂದಗಿ



ಮಡಿವಾಳೇಶ್ವರ ಗುಡಿಯ ಗರ್ಭಗೃಹದ ಮೂರ್ತಿಗಳು

ಸಿಂದಗಿ ತಾಲೂಕು :

## ೪. ದೇವರ ಹಿಪ್ಪರಗಿ :
## ಮಡಿವಾಳ ಮಾಚಿದೇವರ ಗುಡಿ

ಹಿಪ್ಪರಗಿ ಮೆರೆಯುತಲಿ ಉಪ್ಪರಗಿ ಆಗೆಂದು
ತುಪ್ಪ ಹೊಳೆಯಾಗಿ ಹರಿಯುತಲಿ । ಊರೊಳಗೆ
ಅಪ್ಪ ಮಾಚಣ್ಣ ಜನಿಸಿದನು

ಬಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಒಂದು ಊರು ದೇವರ ಹಿಪ್ಪರಗಿ. ಬಿಜಾಪೂರದಿಂದ ೩೫ ಕಿ. ಮೀ. ದೂರದಲ್ಲಿದೆ. ಮಡಿವಾಳ ಮಾಚಯ್ಯನವರು ಹುಟ್ಟಿದ ಊರು ಈ ಹಿಪ್ಪರಗಿ. ಇವರ ತಂದೆ ಪರ್ವತಯ್ಯ, ತಾಯಿ ಸುಜ್ಞಾನಮ್ಮ,



ಮಡಿವಾಳ ಮಾಚಿದೇವರ ಗುಡಿ



ಮಡಿವಾಳ ಮಾಚಿದೇವರ ಗುಡಿಯ ಗರ್ಭಗೃಹದ
ಶಿವಲಿಂಗದ ಮೇಲಿನ ಮೂರ್ತಿ

ಹೆಂಡತಿ ಹೂವಿನ ಹಿಪ್ಪರಗಿಯ ಮಲ್ಲಿಗೆಮ್ಮ. ಮಡಿವಾಳ ಮಾಚಯ್ಯನಿಗೆ ದೀಕ್ಷೆ ಇತ್ತ ಗುರು ಮಲ್ಲಿಕಾರ್ಜುನ. ಇವರ ಆರಾಧ್ಯದೈವ ಕಲ್ಲಿನಾಥ.


ಈ ಊರಿನಲ್ಲಿ ಮೂಲತಃ ಮಡಿವಾಳ ಮನೆತನ ಒಂದು ಇದೆ. ಅದುವೆ ಮಾಚಯ್ಯನ ಮನೆತನ ಎಂದು ಹೇಳಲಾಗುತ್ತದೆ. ದೇವರ ಹಿಪ್ಪರಗಿಯ ಕಲ್ಲಿನಾಥ ಗುಡಿಯ ಹತ್ತಿರ ಮಡಿವಾಳ ಮಾಚಯ್ಯ ಹುಟ್ಟಿದ ಮನೆ ಇದೆ. ಅದು ಈಗ ಮಠವಾಗಿದೆ. ಅಲ್ಲಿ ಮಡಿವಾಳ ಮಾಚಿದೇವರ ಮೂರ್ತಿಯನ್ನು ಒಂದು ಸಣ್ಣ ಮಂಟಪದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ಈ ಮೂರ್ತಿಯ ಕೆಳಗೆ ಒಂದು ಗವಿ ಇದೆ. ಅದನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಆ ಮನೆಯಲ್ಲಿ ಮಾಚಿದೇವರು ಬಳಸಿದ್ದು ಎಂದು ಹೇಳಲಾಗುವ ಖಡ್ಗ ಒಂದಿದೆ.

ಮಡಿವಾಳ ಮಾಚಿದೇವರ ಮಠದ ಪೀಠಪರಂಪರೆ ಇಂದಿಗೂ ಮುಂದುವರೆದುಕೊಂಡು ಹೊರಟಿದೆ. ಸುಮಾರು ೬೦ ಜನ ಪೀಠಾಧಿಪತಿಗಳು ಆಗಿಹೋಗಿದ್ದಾರೆಂದು ಹೇಳಲಾಗುತ್ತದೆ. ಈ ಮಠದ ಕೆಳಗೆ ಶಿಕ್ಷಣ ಸಂಸ್ಥೆಯೊಂದು ಜಾಲವಾಡದಲ್ಲಿ ಪ್ರಾರಂಭವಾಗಿದೆ. ಒಂದರಿಂದ ಐದನೆಯ ತರಗತಿವರೆಗೆ ಶಾಲೆ ಇದೆ. ಸುಮಾರು ೧೫೦ ವಿದ್ಯಾರ್ಥಿಗಳು ಓದುತ್ತಾರೆ. ಉಚಿತ ವಸತಿ ಮತ್ತು ಪ್ರಸಾದ ವ್ಯವಸ್ಥೆ ಇದೆ.

ಈ ಶರಣನು ಸಿಂದಗಿ ತಾಲೂಕಿನ ಜನರಿಗೆ ಆರಾಧ್ಯದೈವವಾಗಿದ್ದಾನೆ. ಸಿಂದಗಿ ತಾಲೂಕಿನಲ್ಲಿಯೆ ಐದು ಊರುಗಳಲ್ಲಿ ಮಡಿವಾಳ ಮಾಚಯ್ಯನ ಹೆಸರಿನಲ್ಲಿ

ಗುಡಿಗಳಿರುವುದು ಕಂಡುಬರುತ್ತದೆ. ಅವನು ಹುಟ್ಟಿದ ಊರು ದೇವರ ಹಿಪ್ಪರಗಿ, ಕೊಕಟನೂರ, ಡೋಣಿಕೊಂಡಗುಳಿ, ಕಲಕೇರಿ, ಹಾಗೂ ಹೊನ್ನಳ್ಳಿ ಈ ಐದು ಗ್ರಾಮಗಳಲ್ಲಿ ಮಾಚಯ್ಯನ ಗುಡಿಗಳಿವೆ. ಕರ್ನಾಟಕದ ಬೆಳಗಾವ ಜಿಲ್ಲೆ ಗೊಡಚಿಯಲ್ಲಿ, ಕಾರಿಮನಿ, ಪಿಂಪಲಿಪುರ ಹಾಗೂ ಕಾರವಾರ ಜಿಲ್ಲೆಯ ಉಳವಿಯಲ್ಲಿಯೂ ಮಡಿವಾಳ ಮಾಚಿದೇವರ ಸ್ಮಾರಕಗಳಿವೆ.

ಡೋಣಿಕೊಂಡಗುಳಿ ಮತ್ತು ಕಲಕೇರಿ ಗ್ರಾಮಗಳಲ್ಲಿರುವ ಮಾಚಯ್ಯನ ಗುಡಿಯಲ್ಲಿ ಜೋಡು ಮೂರ್ತಿಗಳಿರುವುದು ವಿಶೇಷ. ಮಾಚಯ್ಯನ ಜೊತೆಯಿರುವ ಗಂಟೆಯನ್ನು ವೀರಗಂಟೆ ಎಂದು ಕರೆಯುತ್ತಾರೆ. ವಿಶೇಷಣವೆಂಬಂತೆ ವೀರಗಂಟೆ ಪದವು ಮಾಚಯ್ಯನೊಂದಿಗೆ ಬಳಸಲ್ಪಟ್ಟಿದೆ. ಆದರೆ ಜನರ ಮನಸ್ಸಿನಲ್ಲಿ ವೀರಗಂಟೆ ಒಬ್ಬ ವ್ಯಕ್ತಿ ಎಂಬ ಬಾವನೆ ಉಳಿದಿದೆ. ಹೀಗಾಗಿ ಒಂದು ಸಣ್ಣ ಮೂರ್ತಿ ಒಂದು



ಮಡಿವಾಳ ಮಾಚಿದೇವರು ಬಳಸಿದ ಖಡ್ಗ



ಮಡಿವಾಳ ಮಾಚಿದೇವರ ಮನೆಯಲ್ಲಿಯ ಶಿವಲಿಂಗ

ದೊಡ್ಡ ಮೂರ್ತಿ ಮಾಡಿ, ಒಂದನ್ನು ವೀರಗಂಟೆ ಎಂದೂ ಇನ್ನೊಂದನ್ನು ಮಡಿವಾಳೇಶ್ವರ ಎಂದೂ ಕರೆಯುತ್ತ ಬಂದಿದ್ದಾರೆ.

ಅವನ ವೀರಗಣಾಚಾರದ ಗುಣವಿಶೇಷತೆಯನ್ನು ಗಂಗಾಂಬಿಕೆ ಹೀಗೆ ಹೇಳುತ್ತಾಳೆ:

ಮಡಿವಾಳಣ್ಣಂಗೇಕೆ ಬಾರದವ್ವಾ ಕರುಣಾರಸ?
ಮಡಿವಾಳಣ್ಣಂಗೇಕೆ ಬಾರದವ್ವಾ ಶೌರ್ಯರಸ?
ಮಡಿವಾಳಣ್ಣಂಗೇಕೆ ಬಾರದವ್ವಾ ಅದ್ಭುತರಸ?
ಮಡಿವಾಳಣ್ಣಂಗೇಕೆ ಬಾರದವ್ವಾ
ಗಂಗಾಪ್ರಿಯ ಕೂಡಲಸಂಗನ ಶರಣರ ಪ್ರಾಣದಾನರಸ ಸಿದ್ಧರಾಮಯ್ಯಾ?


ಕಲ್ಯಾಣಕ್ರಾಂತಿ ನಂತರ ಮಡಿವಾಳಯ್ಯನ ಪಾತ್ರ ಹೇಗಿತ್ತು? ಎಂಬುದನ್ನು ತಿಳಿದುಕೊಳ್ಳಲು ಈ ಮೇಲಿನ ವಚನ ಸಹಾಯಮಾಡುತ್ತದೆ. ವೀರಗಂಟೆ ಮಡಿವಾಳೇಶ್ವರನೆಂದು ಹೆಸರು ಬರಲು ಅವನ ವೀರತನದ ಅನೇಕ ಘಟನೆಗಳು ಕಾರಣವಾಗಿರುವಂತೆ ತೋರುತ್ತದೆ. ಮಡಿವಾಳ ಮಾಚಯ್ಯ ಕಲ್ಯಾಣಕ್ಕೆ ಹೋದ ನಂತರ ಅಲ್ಲಿ ತನ್ನ ಮಹತ್ವವನ್ನು, ಭಕ್ತಿಯ ಶಕ್ತಿಯನ್ನು ಎಲ್ಲರಿಗೂ ತೋರಿಸಿಕೊಟ್ಟವನು ಮಾಚಯ್ಯ. ದೇವರ ಹಿಪ್ಪರಗಿಯಲ್ಲಿದ್ದಾಗಲೇ ಕಲ್ಲಿನ ಬಸವಣ್ಣನಿಗೆ ಕಬ್ಬು ತಿನಿಸಿದ ಶರಣ ಎಂಬ ಪ್ರಸಿದ್ಧಿ ಪಡೆದಿದ್ದನು. ಬಸವಕಲ್ಯಾಣದಲ್ಲೂ ಇಂಥ ಅನೇಕ ಘಟನೆಗಳು ನಡೆದಿವೆ ಎಂದು ಹೇಳಲಾಗುತ್ತದೆ.

ಕಲ್ಯಾಣ ಕ್ರಾಂತಿಯ ನಂತರ ವಚನಗಳ ರಕ್ಷಣೆಗಾಗಿ ಮಾಚಯ್ಯ ಚೆನ್ನಬಸವಣ್ಣ ಅವರೊಂದಿಗೆ ಉಳವಿಗೆ ಹೋದರು. ಅಲ್ಲಿಗೆ ಹೋಗುವವರೆಗೂ ಬಿಜ್ಜಳನ ಸೈನ್ಯದೊಂದಿಗೆ ಗಣಾಚಾರಿಯಾಗಿ ಯುದ್ಧ ಮಾಡಿದವ ಮಾಡಿವಾಳ ಮಾಚಿದೇವ. ಅವನ ಸಮಾಧಿ ‘ಕಾರಿಮನೆ’ ಯಲ್ಲಿದೆಯೆಂದೂ ಕೆಲವರು ಹೇಳುತ್ತಾರೆ. ಅಲ್ಲಿ ಅವನ ಗದ್ದುಗೆಯ ಸ್ಮಾರಕ ಇದೆ. ಗೊಡಚಿಯಲ್ಲಿ ಲಿಂಗೈಕ್ಯರಾದರೆಂದೂ ಹೇಳಲಾಗುತ್ತದೆ. ಇನ್ನೂ ಕೆಲವರು ಚೆನ್ನಬಸವಣ್ಣ ಲಿಂಗೈಕ್ಯರಾದ ಮೇಲೆ ಮರಳಿ ದೇವರ ಹಿಪ್ಪರಗಿಗೆ ಬಂದರೆಂದೂ ಕೆಲದಿನಗಳ ನಂತರ ಲಿಂಗೈಕ್ಯರಾದರೆಂದೂ ಹೇಳುತ್ತಾರೆ. ಹಿಪ್ಪರಗಿಯಲ್ಲಿ ಊರ ಹೊರಗೆ ಅವರದೇ ಎಂದು ಹೇಳುವ ಗದ್ದುಗೆ ಇಂದಿಗೂ ಸುಸ್ಥಿತಿಯಲ್ಲಿದೆ. ಈ ಸ್ಥಳದ ಎಡಕ್ಕೆ ಸ್ವಲ್ಪ ದೂರದಲ್ಲಿ ಪ್ರಾಚೀನ ಮಲ್ಲಿಕಾರ್ಜುನ ದೇವಾಲಯ ಇದೆ.

ದೇವರ ಹಿಪ್ಪರಗಿಯಲ್ಲಿ ಯುಗಾದಿ ಅಮವಾಸ್ಯೆ ಆದ ಎಂಟನೆಯ ದಿನಕ್ಕೆ ಮಾಚಯ್ಯನವರ ರಥೋತ್ಸವ ನಡೆಯುತ್ತದೆ. ಯುಗಾದಿ ಪ್ರತಿಪದದಿಂದ ಎಂಟುದಿನಗಳವರೆಗೆ ಮಡಿವಾಳ ಮಾಚಯ್ಯನ ಮನೆಯಿಂದ ಗದ್ದುಗೆವರೆಗೆ ಪಲ್ಲಕ್ಕಿ ಹೋಗುತ್ತದೆ. ಜಾತ್ರಾಮಹೋತ್ಸವ ಪ್ರಾರಂಭವಾಗುವುದಕ್ಕಿಂತ ಮುಂಚೆ ೨೧ ದಿನ ಪ್ರವಚನ ನಡೆಯುತ್ತದೆ. ಈ ಆಚರಣೆಯನ್ನು ಇಂದಿಗೂ ನೆರವೇರಿಸಿಕೊಂಡು ಬರುತ್ತಿದ್ದಾರೆ.



ಕಲ್ಮೇಶ್ವರ ಗುಡಿಯ ದ್ವಾರ



ಕಲ್ಮೇಶ್ವರ ಗುಡಿಯ ನಂದಿಮಂಟಪ

**ಕಲ್ಮೇಶ್ವರ ದೇವಾಲಯ :**

ಹಿಪ್ಪರಗಿಯಲ್ಲಿ ಮಾಚಿದೇವರ ಆರಾಧ್ಯದೈವವಾದ ಕಲ್ಲಿನಾಥ ದೇವಾಲಯವಿದೆ. ಮಡಿವಾಳ ಮಾಚಯ್ಯ ಕಲ್ಲಿನಾಥನ ಗುಡಿಯಲ್ಲಿಯೇ ಓದಿದರೆಂಬ ಪ್ರತೀತಿ ಇದೆ. ಹೀಗಾಗಿ ಮಾಚಿದೇವರು ಕಲಿದೇವರದೇವ, ಕಲಿದೇವ ಎಂಬ ಅಂಕಿತವನ್ನು ತಮ್ಮ ವಚನಗಳಿಗೆ ಬಳಸಿಕೊಂಡಂತೆ ತೋರುತ್ತದೆ. ಅತ್ಯಂತ ವಿಶಾಲವಾದ, ಸುಸ್ಥಿತಿಯಲ್ಲಿರುವ ಸ್ಮಾರಕ ಈ ಕಲ್ಮೇಶ್ವರ ದೇವಾಲಯ. ವಿಜೃಂಭಣೆಯಿಂದ ಜಾತ್ರೆ ಉತ್ಸವಗಳು ನಡೆಯುತ್ತವೆ. ಶ್ರಾವಣ ಮಾಸದಲ್ಲಿ ಪ್ರತಿನಿತ್ಯ ರುದ್ರಾಭಿಷೇಕ ನಡೆಯುತವೆ. ಶ್ರಾವಣ ಮೂರನೆಯ ಸೋಮವಾರದಂದು ಜಾತ್ರೆ, ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಕಲ್ಮೇಶ್ವರನ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆಯಲ್ಲಿ ಸಾಗಿಸಲಾಗುತ್ತದೆ. ನುಲಿಯಚಂದಯ್ಯನು ನುಲಿ ತಯಾರಿಸುವ ಸ್ಥಳವೆಂದು ಹೇಳಲಾಗುವ ರಾಮತೀರ್ಥಕ್ಕೆ ಪಲ್ಲಕ್ಕಿ ಹೋಗುತ್ತದೆ. ಅಲ್ಲಿಯ ರಾಮಮಂದಿರದ ತೀರ್ಥಹೊಂಡದಿಂದ ಉತ್ಸವಮೂರ್ತಿಗೆ ನೀರೆರೆದು ಶುಚಿಗೊಳಿಸುತ್ತಾರಂತೆ.

ಕಲ್ಮೇಶ್ವರ ಪಲ್ಲಕ್ಕಿ, ಕರಿಸಿದ್ದೇಶ್ವರ ಪಲ್ಲಕ್ಕಿ ಎರಡೂ ಪಲ್ಲಕ್ಕಿಗಳು ರಾಮತೀರ್ಥಕ್ಕೆ ಬಂದಿರುತ್ತವೆಯಂತೆ. ನಂತರ ಸಾಯಂಕಾಲ ಶಿವನಹಳ್ಳಿಗೆ ಪಲ್ಲಕ್ಕಿಗಳು ಬರುತ್ತವೆ. ಅಲ್ಲಿ ಊರವರು ತರಿಸಿದ ಹೂ ಮುಡಿಸಿ, ಕಲ್ಮೇಶ್ವರ ದೇವಸ್ಥಾನಕ್ಕೆ ಪಲ್ಲಕ್ಕಿ ಬರುತ್ತದೆ. ಈ ದೇವರ ಹೆಸರಿನಲ್ಲಿಯೇ ಸುಮಾರು ಹದಿನೈದರಿಂದ ಹದಿನೆಂಟು ಪಲ್ಲಕ್ಕಿಗಳು ಬಂದು ಸೇರುತ್ತವೆ. ಪಡಗಾನೂರು, ಶಿವಣಗಿ, ಕಡ್ಲೆವಾಡ, ಇಂಗಳಗಿ, ನಿವ್ವಾಳಖೇಡ,

ಮುಳಸಾವಳಗಿ, ಇಂಗಳೇಶ್ವರ ಮೊದಲಾದ ಸುತ್ತಲ ಹಳ್ಳಿಯವರು ಪಲ್ಲಕ್ಕಿ ತರುತ್ತಾರೆ. ಆಮೇಲೆ ದೇವರ ಹಿಪ್ಪರಗಿಯ ಕಲ್ಮೇಶ್ವರ ದೇವಾಲಯದಲ್ಲಿ ಪಲ್ಲಕ್ಕಿ ಇಟ್ಟು ಪೂಜೆ ಮಾಡಲಾಗುತ್ತದೆ. ಪೂಜಾದಿಗಳೆಲ್ಲ ಮುಗಿದ ಮೇಲೆ ಉತ್ಸವಮೂರ್ತಿ ಬಾಳಾಸಾಬಗೌಡರ ಮನೆಗೆ ಮರಳಿ ಹೋಗುತ್ತದೆ. ಅದು ಅವರ ಮನೆಯಲ್ಲಿಯೇ ಇರುತ್ತದೆ. ಯುಗಾದಿಗೊಮ್ಮೆ ಯಾವುದಾದರೂ ಅನುಕೂಲವಾಗುವ ನದಿಗೆ ಕಲ್ಮೇಶ್ವರ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಹೋಗಿಬರಲಾಗುತ್ತದೆ. ಶ್ರಾವಣ ಮಾಸದಲ್ಲಿ ಖಾಂಡ ಮಾಡಲಾಗುತ್ತದೆ. ಪ್ರತಿ ಅಮವಾಸ್ಯೆಗೆ ಸಜ್ಜಕ ಮಾಡಿ ದಾಸೋಹ ನಡೆಸಲಾಗುತ್ತದೆ. ಈ ಆಚರಣೆ ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

ಮಾಹಿತಿ : ಜಗದೇವಪ್ಪ ಪೂಜಾರಿ
ವಚನಗಳು : ೩೪೬
ಅಂಕಿತ : ಕಲಿದೇವ, ಕಲಿದೇವರ ದೇವ

***

## ಹಿಪ್ಪರಗಿ ಮಾಚಯ್ಯ

ಹಿಪ್ಪರಿಗಿ ಮಾಚಯ್ಯ ಬಲು ಸಿಟ್ಟಿನ ಶರಣ
ಸಾಕ್ಷಾತ ವೀರಭದ್ರನ ಅವತರಣ ॥ ॥ ಪ ॥

ಹುಟ್ಟೂರು ತಾ ಬಿಟ್ಟು ಕಲ್ಯಾಣಕ ತಾ ಬಂದು
ಶರಣರ ಬಟ್ಟೆಯ ಮಡಿಮಾಡ್ಯಾರ ಮಾಚಣ್ಣ ॥ ॥ ೧ ॥

ಹೊಂಡಕ ಬರತಾರ ಬಟ್ಟೆಯು ಒಗಿತಾರ
ದಂಡಿಯ ಮ್ಯಾಲ ಕುಂತು ಪೂಜೆಯು ನಡೆಸ್ಯಾರ ॥ ॥ ೨ ॥

ಶರಣರ ವಸ್ತಗಳು ಮಡಿ ಮಾಡಿ ತರತಾರ
ಮರತರ ಭವಿಗಳ ನೆರಳರ ಬೀಳಲಿಲ್ಲ ॥ ॥ ೩ ॥

ಹೀಂಗೊಮ್ಮೆ ಮಾಚಯ್ಯ ಮಡಿವಸ್ತ್ರ ತರಮುಂದ
ಕೊಂಡೆಯರು ತಾ ಹೋಗಿ ಮುಟ್ಟ್ಯಾರ ವಸ್ತ್ರಗಳ ॥ ॥ ೪ ॥

ಸಿಟ್ಟಿಲಿ ಮಾಚಯ್ಯ ಖಡ್ಗವ ಸೆಳೆದಾನ
ರುಂಡ ಮುಂಡ ಮಾಡಿ ನೆಲಕರ ಒಗಿತಾನ ॥ ॥ ೫ ॥

ಆ ಸುದ್ದಿಯು ತಿಳಿಯಲು ಬಿಜ್ಜಳ ಓಡಿ ಬಂದ
ಮಾಚಯ್ಯನಿಗೆ ಶಿಕ್ಷೆ ಕೊಡಬೇಕೆಂತಂದ ॥ ॥ ೬ ॥

ಬಸವಣ್ಣ ಬಂದಾರ ಬುದ್ಧಿಯ ಹೇಳ್ಯಾರ
ಶರಣರ ಜೊತೆಯಲ್ಲಿ ಸರಸವು ಯಾಕೆಂದಾರೆ ॥ ॥ ೭ ॥

ಬಿಜ್ಜಳ ಶರಣ ಹೋಗ್ಯಾನ ಆವಾಗ
ಮುಂಡಗಳು ಎದ್ದು ನಿಂತಾವ ಗಳಿಗ್ಯಾಗ ॥ ॥ ೮ ॥

ಮಾಚನ ಮಹಿಮೆಯು ಹರಿಯಲಿ ನಾಡಾಗ
ಮಡಿವಸ್ತ್ರದಾಂಗ ಮಡಿಯಾಗಲಿ ಜನುಮ ॥ ॥ ೯ ॥

– ಶ್ರೀಮತಿ ಕಾಡಾದಿ ಗೌರವ್ವ

***



ಮಡಿವಾಳ ಮಾಚಿದೇವರ ತೇರು

ಸಿಂದಗಿ ತಾಲೂಕು :

## ೫. ಕೊಕಟನೂರು:
## ಮಡಿವಾಳ ಮಾಚಿದೇವರ ಗುಡಿ

ಸಿಂದಗಿಯಿಂದ ೧೮ ಕಿ.ಮೀ. ದೂರದಲ್ಲಿ ಕೊಕಟನೂರು ಎಂಬ ಊರಿದೆ. ಈ ಊರಿನ ಹೊರ ವಲಯದಲ್ಲಿ ಗದ್ದುಗೆಮಠ ಇದೆ. ಈ ಮಠದ ಕರ್ತೃದೇವರು ಮಡಿವಾಳ ಮಾಚಿದೇವರು. ಹಿಪ್ಪರಿಗೆಯಿಂದ ಮಾಚಿದೇವರು ಇಲ್ಲಿಗೆ ಬರಲು ಕಾರಣವೆಂದರೆ-ಕೊಕಟನೂರಿನ ಗೌಡರಿಗೆ ಸಂತಾನ ಭಾಗ್ಯ ಇರಲಿಲ್ಲವಂತೆ. ಅವರು ಹಿಪ್ಪರಿಗಿಗೆ ಹೋಗಿ ಮಡಿವಾಳ ಮಾಚೀದೇವರಿಗೆ ನಡೆದುಕೊಂಡರಂತೆ. ಆಗ ಮಡಿವಾಳ ಮಾಚಿದೇವರು ಕೊಕಟನೂರಿಗೆ ಬಂದು ಕೆಲದಿನ ಅನುಷ್ಠಾನ ಮಾಡಿಕೊಂಡು



ಮಡಿವಾಳೇಶ್ವರ ಗುಡಿ



ಮಡಿವಾಳೇಶ್ವರ ಗುಡಿಯ ಗರ್ಭಗೃಹದ ಮೂರ್ತಿ

ಹೋದರಂತೆ. ಅದರ ನೆನಪಿಗಾಗಿ ಮಡಿವಾಳ ಮಾಚಿದೇವರ ಹೆಸರಿನಲ್ಲಿ ಇಲ್ಲಿ ಒಂದು ಗುಡಿಯನ್ನು ಕಟ್ಟಿಸಿದ್ದಾರೆ ಎಂದು ಹೇಳಲಾಗುತ್ತದೆ. ಈ ನಂಬಿಕೆ ಇವತ್ತಿಗೂ ಜನರ ಮನಸ್ಸಿನಲ್ಲಿ ಉಳಿದುಕೊಂಡು ಬಂದಿದೆ.

ಶ್ರಾವಣದಲ್ಲಿ ಪ್ರತಿ ಸೋಮವಾರ ಪಲ್ಲಕ್ಕಿ ಉತ್ಸವ ಆಗುತ್ತದೆ. ಈ ಚಾಜ ಊರ ಗೌಡರಾದ ಮಡಿವಾಳಪ್ಪಗೌಡ ಲಿಂಗನಗೌಡ ಪಾಟೀಲ ಅವರ ಮನೆಗೆ ಮೀಸಲಾಗಿದೆ. ಗೌಡರ ಮನೆಯಿಂದಲೇ ಪಲ್ಲಕ್ಕಿ, ಮಡಿವಾಳೇಶ್ವರರ ಉತ್ಸವಮೂರ್ತಿ, ನಂದಿಕೋಲು ಬಂದು ಹೋಗುತ್ತವೆ. ಅಷ್ಟೇ ಅಲ್ಲ ಪಲ್ಲಕ್ಕಿ ಹೊರುವ ಚಾಜವೂ ಗೌಡರದೇ ಆಗಿರುತ್ತದೆ. ಗೌಡರ ಮನೆದೇವರು ಮಡಿವಾಳಪ್ಪ. ಹೀಗಾಗಿ ಈ ಆಚರಣೆಯ ಉಸ್ತುವಾರಿ ಗೌಡರಿಗೆ ಸೇರಿದ್ದು. ಇಲ್ಲಿ ಬ್ಯಾಟಿ ನಡೆಯುವದಿಲ್ಲ. ಆದರೆ ಕೆಳವರ್ಗದ ಭಕ್ತರು ಮಾತ್ರ ತಾವು ಸೇವಿಸುವ ಆಹಾರ-ಪಾನೀಯಗಳನ್ನು ತಂದು ನೈವೇದ್ಯ ಮಾಡಿ, ಮನೆಗೆ ಒಯ್ದು ಅದನ್ನು ಸೇವಿಸುತ್ತಾರೆ ಎಂದು ತಿಳಿದುಬರುತ್ತದೆ.

ಮಾಹಿತಿ: ಮಡಿವಾಳೇಶ್ವರ ಮಹಾಸ್ವಾಮಿಗಳು, ಮಡಿವಾಳೇಶ್ವರ ಮಠ ಕೋಕಟನೂರ

***

ವಿಜಾಪೂರ ತಾಲೂಕು :

## ೧. ಶಿವಣಗಿ :
## ನುಲಿಯ ಚಂದಯ್ಯನವರ ಸ್ಮಾರಕ

ಬಿಜಾಪೂರ ತಾಲೂಕಿಗೆ ಸೇರಿದ ಊರು ಶಿವಣಗಿ. ಬಿಜಾಪೂರ ಪೂರ್ವಕ್ಕೆ ೧೮ ಕಿ.ಮೀ. ದೂರದಲ್ಲಿದೆ. ಶಿವಣಗಿಯಲ್ಲಿ ಮುಖ್ಯ ರಸ್ತೆಗೆ ಹತ್ತಿಕೊಂಡು ಎರಡು(ಜೋಡು) ಕಲ್ಲಿನ ಮಂಟಪಗಳಿದ್ದು, ಈಗ ಒಂದು ಮಂಟಪ ತೆಗೆದು ನುಲಿಯ ಚಂದಯ್ಯನ ಹೆಸರಿನಲ್ಲಿ ದೇವಾಲಯ ಮಾಡುತ್ತಿದ್ದಾರೆ. ಇನ್ನೊಂದು ಮಂಟಪ ಹಾಗೆ ಉಳಿದಿದೆ. ಮಂಟಪದ ಹಿಂದೆ ಬೀಳುಬಿದ್ದ ಸ್ಥಳ ಇದೆ. ಮುಂದೆ ಹಳೆಯ ಬಾವಿ ಇದೆ. ಕಲ್ಲಿನ ಮಂಟಪದ ಒಳಗೆ ಗದ್ದುಗೆ, ಗದ್ದುಗೆ ಮೇಲೆ ಲಿಂಗ ಇದೆ. ಅಲ್ಲೊಂದು ಕಲ್ಲಿನ ಸುರಂಗಮಾರ್ಗ ಇದೆ ಎಂದು ಹೇಳಲಾಗುತ್ತದೆ. ಈಗಲೂ ಮುಂಬೈ ಹೆಡ್ ಕ್ವಾರ್ಟರ್ ದಾಖಲಾತಿಯಲ್ಲಿ ೧ ಎಕರೆ ೧೧ ಗುಂಟೆ ಜಾಗ ನುಲಿಯ ಚಂದಯ್ಯನ ಹೆಸರಿನಲ್ಲಿದೆಯಂತೆ. ಇದು ನುಲಿಯ ಚಂದಯ್ಯ ಹುಟ್ಟಿದ, ವಾಸಿಸಿದ ಸ್ಥಳ ಎಂದು ಊರವರು ಹೇಳುತ್ತಾರೆ.

ಶಿವಣಗಿಯಿಂದ ನಾಲ್ಕು ಕಿ.ಮೀ. ದೂರದಲ್ಲಿ ರಾಮತೀರ್ಥ ಇದ್ದು, ನುಲಿಯ ಚಂದಯ್ಯ ಅಷ್ಟು ದೂರ ಹೋಗಿ ಹುಲ್ಲು ಕೊಯ್ದು ತರುತ್ತಿದ್ದನೆಂದು ಹೇಳಲಾಗುತ್ತದೆ. ರಾಮತೀರ್ಥದಲ್ಲಿ ಗುಡಿ ಇದೆ. ಯುಗಾದಿಯಂದು ಮಾತ್ರ ಸೂರ್ಯನ ಕಿರಣಗಳು ಲಿಂಗದ ಮೇಲೆ ಬೀಳುತ್ತವೆಯಂತೆ. ದ್ರುವ ನಕ್ಷತ್ರದ ಬೆಳಕೂ ಇದರ ಮೇಲೆ ಬೀಳುತ್ತದೆಯಂತೆ.

ಶಿವಣಗಿಯ ರಾಮತೀರ್ಥದಲ್ಲಿ ಹುಲ್ಲು ಕೊಯ್ಯುವಾಗ ಚಂದಯ್ಯನ ಲಿಂಗ ಜಾರಿ ಕೆಳಗೆ ನೀರಿನಲ್ಲಿ ಬೀಳುತ್ತದೆ. ಆಗ ಚಂದಯ್ಯ ಅದನ್ನು ಹುಡುಕದೆ ಹಾಗೇ ಹೊರಡುತ್ತಾನೆ. ಲಿಂಗವೇ ಅವನನ್ನು ಬೆನ್ನುಹತ್ತಿ ತನ್ನನ್ನು ಮತ್ತೆ ಅಂಗದ ಮೇಲೆ ಧರಿಸಿಕೊಳ್ಳಲು ವಿನಂತಿಸಿಕೊಳ್ಳತ್ತದೆ. ಈಗ ಬಂದು ಕೇಳುವವ ಮೊದಲೇ ಎಚ್ಚರದಿಂದ ಇದ್ದದ್ದೇ ಆಗಿದ್ದರೆ, ನಿನಗೇಕೆ ಈ ಗತಿ ಬರುತ್ತಿತ್ತು? ನಾನು ನಿನಗೇನೂ ಅಂದದ್ದಿಲ್ಲ. ನೀನೇ ಬಿದ್ದು ಹೋದ ಮೇಲೆ ಮತ್ತೆ ಈಗೇಕೆ ಬಂದು ಧರಿಸಿಕೊ ಎಂದು ಬೆನ್ನುಬಿದ್ದಿರುವೆ? ಎಂದು ನಿಷ್ಠುರವಾಗಿ ಹೇಳಿ, ನ್ಯಾಯವನ್ನು ಹತ್ತಿರದ ದೇವರ ಹಿಪ್ಪರಗಿಯಲ್ಲಿರುವ ಮಡಿವಾಳ ಮಾಚಯ್ಯನಲ್ಲಿಗೆ ತೆಗೆದುಕೊಂಡು ಹೋಗುತ್ತಾನೆ. ಚರ್ಚೆ ಆದ ನಂತರ ಆ ಲಿಂಗಕ್ಕೂ ಕಾಯಕ ಕೊಡಬೇಕು ಎಂಬ ತೀರ್ಮಾನಕ್ಕೆ ಬರುತ್ತಾರೆ. ಇಷ್ಟಕ್ಕೂ



ನುಲಿಯ ಚಂದಯ್ಯನವರ ಸ್ಮಾರಕ

ಸಮಾಧಾನವಾಗದೆ ಮಡಿವಾಳ ಮಾಚಯ್ಯ ಮತ್ತು ನುಲಿಯಚಂದಯ್ಯ ಅವರು ಈ ಸಮಸ್ಯೆಯ ಪರಿಹಾರಕ್ಕಾಗಿ ಕಲ್ಯಾಣ ಬಸವಣ್ಣನವರಲ್ಲಿಗೆ ಹೋಗುತ್ತಾರೆ. ಅಲ್ಲಿ ಲಿಂಗವು ಕಾಯಕ ಮಾಡಿ, ಹಗ್ಗ ಮಾರಿ ಹೆಚ್ಚಿನ ಹಣ ತಂದಾಗ ನುಲಿಯ ಚಂದಯ್ಯ ಹೆಚ್ಚಿನ ಹಣವನ್ನು ನಿರಾಕರಿಸಿ, ಆ ಹಗ್ಗಕ್ಕೆ ಎಷ್ಟು ಬರಬೇಕಿತ್ತೊ ಅಷ್ಟೇ ತನಗೆ ಸಾಕು ಎಂದು ಹೇಳುತ್ತಾನೆ. ಇಂಥ ಪ್ರಾಮಾಣಿಕ ಶರಣ ಚಂದಯ್ಯ ಶಿವಣಗಿ ಬಿಟ್ಟು ಕಲ್ಯಾಣಕ್ಕೆ ಹೋಗಲು ಈ ಘಟನೆಯೇ ಕಾರಣ ಎಂದು ಹೇಳುತ್ತಾರೆ.

ವಚನಗಳು : ೪೮.

ವಚನಾಂಕಿತ : 'ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗ'

ಮಾಹಿತಿ : ಯಲ್ಲಪ್ಪ ಮಾಣಿಕಪ್ಪ ದೊಡ್ಡಮನಿ, ವ. ೮೨ ವಷ

***

## ಯಾರಿಗಿ ಯಾರಿಲ್ಲೊ

ಯಾರಿಗೀ ಯಾರಿಲ್ಲೊ ಶರಣರಿಗ । ಸದ್ಗುರುವಿನ್ಹಂಗ
ಯಾರಿಗೀ ಯಾರಿಲ್ಲೋ ಶರಣರಿಗ ॥ ॥ ಪ ॥

ಅನುಭವ ಮಂಟಪ ಕಲ್ಯಾಣದೊಳಗ
ಅಂಗದ ಮೇಲೆ ಲಿಂಗ ಇರಬೇಕೆಲ್ಲರಿಗ
ಲಿಂಗ ಇಲ್ಲದ ಭವಿ ಹನ ಕಟ್ಟಕಡೀಗ ॥ ॥ ೧ ॥

ಶೃಂಗಾರಲಿಂಗ ಶರೀರ ಮೇಲೆ ।
ಈಭೂತಿ ಇರಬೇಕು ಹಣಿಯ ಮೇಲೆ ।
ಅಕ್ಷರ ಲಿಂಗವನ್ನು ಕಟ್ಟಿ ಕೊರಳಿಗೆ ।
ನುಲಿಕಿ ಮಾರುತ್ತಿದ್ದ ತಾ ಬೇಗ ಬೆಳಗ ॥ ॥ ೨ ॥

ನುಲಕಿ ಚಂದಯ್ಯ ಹನ ಸಂತರೊಳಗ
ಲಿಂಗ ಇಲ್ಲರೀ ಅವನ ಕೊರಳಗ
ಜ್ಯೋತಿರ್ಲಿಂಗ ದೃಷ್ಟಿ ಇತ್ತರಿ ಅವನಿಗ
ಕಳದ ಹೋದ ಲಿಂಗ ಯಾತಕ್ರಿ ನಿಮಗ ॥ ೩ ॥

ಲಿಂಗಕ್ಕೆ ನೀರು ಬೆರಸಲೆಂದಿಗ
ಲಿಂಗಪ್ಪ ಬ್ಯಾಸರಾದ ಅವನ ಕೊರಳಿಗ
ಮೆದಿ ಕೊಯ್ಲಿಕ್ಕೆ ಶರಣ್ಹೋದ ಹೊಳಿಗ
ಲಿಂಗಾ ಛಿಡಿದು ಬಿತ್ತೊ ನೀರಿನ ಹೊಳಿಗಾ ॥ ॥ ೪ ॥

ಆ ಮಾತು ಶರಣರಿಗಿ । ಗೊತ್ತಿದ್ದಿಲ್ಲಾಗ
ಹುಲ್ಲಿನ ಹೊರಿ ಹೊತ್ತುಕೊಂಡ ತಲಿಮ್ಯಾಲ
ಲಿಂಗಪ್ಪ ಕರಿತನ ನುಲಕಿ ಚಂದಗ
ನಿನ್ನ ಲಿಂಗವಿದ ತೊಕೊ ಮೈಮ್ಯಾಲ ॥ ॥ ೫ ॥

ಚಂದಯ್ಯ ಅನುತಾನೊ ಆ ಲಿಂಗಪ್ಪಗ
ನನ್ನ ಲಿಂಗವಿದ್ದರ ಬಿಟ್ಹೋದಿ ಹ್ಯಾಂಗ
ಕಡೀಗಾದ ಲಿಂಗ ಕಟ್ಟಲೆಂದಿಗ
ಪಂಚಾಯ್ತಿ ಬಿದ್ದಾಯ್ತ್ರಿ ಶರಣರೊಳಗ ॥ ॥ ೬ ॥



ರಾಮತೀರ್ಥ

ಲಿಂಗಪ್ಪ ಹೇಳುತಾನ ಕರದೆಲ್ಲರಿಗ
ಶರಣ ಅನುತಾರ ಆ ಲಿಂಗಪ್ಪಗ
ಮಂತ್ರದ ಅಧಿಕಾರ ಇಲ್ಲರೀ ನಮಗ ॥ ೭ ॥

ಮುಡಬಿ ಮಠ ಅದಾ ನೋಡು ಕಟ್ಟಕಡಿಗ
ಆನಂದಯ್ಯ ಗುರು ಹೇಳುತಾರೊ ಎಲ್ಲರಿಗ
ಬಂದು ಶಿವಮಂತ್ರ ಓದಿ ಕಿವ್ಯಾಗ
ಘನಲಿಂಗ ಕಟ್ಟ್ಯಾರ ಶರಣನಿಗಾಗ ॥ ೮ ॥

– ಶ್ರೀಮತಿ ಸರಸ್ವತಿ ಗದಗೆಪ್ಪಾ ಧಬಾಲೆ.

***

**ವಿಜಾಪುರ ತಾಲೂಕು :**

## ೨. ದೇವರ ಉಪ್ಪಲದಿನ್ನಿ : ಮುಗ್ಧಸಂಗಯ್ಯನವರ ಸ್ಮಾರಕಗಳು

ಸಂಗಯ್ಯನಿರುವದು ಸಣ್ಣ ಉಪ್ಪಲದಿನ್ನಿ
ಸಂಗಯ್ಯನ ತಮ್ಮ ಗಿರಿಮಲ್ಲ। ಇರುವುದು
ತಂಗಳ ದಾರಿ ಪರವೂತ

ಉಪ್ಪಲದಿನ್ನಿ ಊರ ಪ್ರವೇಶಕ್ಕೆ ಒಂದು ಬಹುದೊಡ್ಡದಾದ ಶಿವದೇವಾಲಯವಿದೆ. ಈ ವಿಸ್ತಾರವಾದ ದೇವಾಲಯದ ಅಂಗಳದಲ್ಲಿ ಸಂಗಯ್ಯನವರ ಸ್ಮಾರಕವಿದೆ. ಬೃಹತ್ತಾದ ದ್ವಾರವನ್ನು ಪ್ರವೇಶಿಸಿದಾಗ ಎದುರಿಗೆ ಇರುವುದು ನಂದಿ ದೇವಾಲಯ. ಅದರ ನಂತರ ಮಲ್ಲಿಕಾರ್ಜುನ ಮಂದಿರ. ಇದರ ಹಿಂದೆ ಇರುವುದು ಮುಗ್ಧಸಂಗಯ್ಯನವರ ಐಕ್ಯಮಂಟಪವೆಂದು ಹೇಳುತ್ತಾರೆ. ಉಪ್ಪಲದಿನ್ನಿಯಲ್ಲಿ ಮತ್ತೆ ಸಂಗಯ್ಯನವರ ಪ್ರತ್ಯೇಕವಾದ ಒಂದು ಮಂದಿರವೇ ಇದ್ದು ಇದು ಅತ್ಯಂತ ವಿಸ್ತಾರವಾದ ದೇವಾಲಯವಾಗಿದೆ. ಅಲ್ಲಿಯ ಭಕ್ತರ ಬಳಗ, ನಡೆಯುವ ಉತ್ಸವಗಳು ಅನೇಕ.



ಮುಗ್ಧಸಂಗಯ್ಯನವರ ಸ್ಮಾರಕ ಇರುವ ಶಿವಮಂದಿರದ ಮಹಾದ್ವಾರ



ಶಿವಮಂದಿರದಲ್ಲಿರುವ ಮುಗ್ಧಸಂಗಯ್ಯನವರ ಸ್ಮಾರಕ

ಈ ಊರಿನಲ್ಲಿ ಮುಗ್ಧಸಂಗಯ್ಯನವರು ಗಾಣಿಗರ ಮನೆಯೊಂದರಲ್ಲಿ ಗಾಣ ಹೊಡೆದರೆಂದೂ ಹೇಳಲಾಗುತ್ತದೆ. ಈ ಮನೆಯೂ ಊರಲ್ಲಿ ಇದೆ.

ವಿಜಾಪೂರ ತಾಲೂಕಿನ ಪ್ರಾಚೀನ ಊರು ದೇವರ ಉಪ್ಪಲದಿನ್ನಿ. ಮುಗ್ಧ ಸಂಗಯ್ಯ ಶಿವಪುರ ಬಿಟ್ಟು ಉಪ್ಪಲದಿನ್ನಿಗೆ ಬಂದಾಗ, ಅವನನ್ನು ಬರಮಾಡಿಕೊಳ್ಳಲು ಅವನಿಗಿಂತ ಮೊದಲೆ ನಂದಿ ಬಂದು ನಿಂತಿದ್ದನಂತೆ. ಹೀಗಾಗಿ ಊರು ಪ್ರವೇಶಿಸುತ್ತಲೇ ಇರುವ ಶಿವಮಂದಿರದಲ್ಲಿ ಒಂದು ದೊಡ್ಡ ನಂದಿಮೂರ್ತಿ ಇದೆ. ನಂದಿ ನಿಂತ ಸ್ಮಾರಕವಾಗಿ ಅದನ್ನು ಬಸವಣ್ಣದೇವರ ಗುಡಿಯೆಂದು ಕರೆಯುವ ರೂಢಿ ಇದೆ. ಮುಗ್ಧ ಸಂಗಯ್ಯ ಭಕ್ತಿಶಿಲೆ ಮುಕ್ತಿಶಿಲೆಯರ ಮಗನೆಂದು ಹೇಳುತ್ತಾರೆ. ಮುಚ್ಚಂಡಿ ಮೂಲದವರಾದ ಮಲ್ಲಮ್ಮ ತೇಲಿ ಉಪ್ಪಲದಿನ್ನಿಗೆ ಬಂದು ಇಲ್ಲಿಯೇ ಉಳಿದಿದ್ದರು. ಇವರು ಅತ್ಯಂತ ಪರಮ ಶಿವಭಕ್ತೆ. ಇದು ಮುಗ್ಧ ಸಂಗಯ್ಯನವರ ಸಂಬಂಧಿಗಳ ಮನೆಯೆಂದು ಹೇಳುತ್ತಾರೆ. ಹೀಗಾಗಿ ಮುಗ್ಧ ಸಂಗಯ್ಯ ಉಪ್ಪಲದಿನ್ನಿಗೆ ಬಂದವನು ನೇರವಾಗಿ ಮಲ್ಲಮ್ಮ ಅವರ ಮನೆಗೆ ಬರುತ್ತಾನೆ. ಇಲ್ಲಿ ಕುಂತುಣ್ಣುವುದು ಸರಿಯಲ್ಲವೆಂದು ಅವರ ಮನೆಯಲ್ಲಿ ಗಾಣ ಮಾಡುವ, ದನಕಾಯುವ ಕಾಯಕವನ್ನು ಮಾಡುತ್ತಾನೆ. ಈ ಕಾಯಕ ಮಾಡುತ್ತಲೇ ಸುಮಾರು ೩೦ ವರ್ಷಗಳ ಕಾಲ ಇವರ ಮನೆಯಲ್ಲಿದ್ದರೆಂದು ಹೇಳಲಾಗುತ್ತದೆ.

ಈ ಉಪ್ಪಲದಿನ್ನಿಯನ್ನು **'ನಡು ಶ್ರೀಶೈಲ'** ಮಾಡಬೇಕೆಂಬ ಕೋರಿಕೆಯನ್ನು ಮಲ್ಲಿಕಾರ್ಜುನನಲ್ಲಿ ಮುಗ್ಧ ಸಂಗಯ್ಯ ಇಡುತ್ತಾನೆ. ಸಂಗಯ್ಯನ ಮುಗ್ಧತೆ ಅರಿಯದ ಜನ ಅವನನ್ನು ಅರೆಹುಚ್ಚನೆಂದು ಅಪಹಾಸ್ಯ ಮಾಡಿದ್ದೇ ಹೆಚ್ಚು. ಕಂಬಿಯವರ ಜೊತೆ ತಾನೂ ಶ್ರೀಶೈಲಕ್ಕೆ ಹೋಗುವ ಆಸೆ ವ್ಯಕ್ತಪಡಿಸಿದಾಗ ಎಲ್ಲ ಕಂಬಿ ಹೊತ್ತ ಜನ ಲೇವಡಿ ಮಾಡಿ ನಗುತ್ತಾರೆ. ಆಗ ತಾನು ಮಲ್ಲಯ್ಯನನ್ನು ಉಪ್ಪಲದಿನ್ನಿಗೆ ಕರೆದು ತರಲೇಬೇಕೆಂಬ ಸಂಕಲ್ಪ ಮಾಡಿ, ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಾನಂತೆ. ಆಗ ಮಲ್ಲಯ್ಯ ಇವನಿದ್ದಲ್ಲಿಗೆ ಬಂದು ಅವನಿಗೆ ಪ್ರತ್ಯಕ್ಷವಾಗಿ ಸಂಗಯ್ಯನಿಗೆ ಹರಸುತ್ತಾನೆ. 'ನಡು ಶ್ರೀಶೈಲ' ವಾಗಬೇಕೆಂಬ ಮುಗ್ಧ ಸಂಗಯ್ಯನ ಕೋರಿಕೆಯನ್ನು ತಾನು ಇಲ್ಲಿ ನೆಲೆಸುವ ಮೂಲಕ ಮಲ್ಲಿಕಾರ್ಜುನ ದಿಟ ಮಾಡಿ ತೋರಿಸುತ್ತಾನೆ.

ಮುಗ್ಧ ಸಂಗಯ್ಯನನ್ನು ಅಪಹಾಸ್ಯ ಮಾಡಿ ಮಾತನಾಡಿದ ಕಂಬಿಯವರು ಇನ್ನೂ ಉಪ್ಪಲದಿನ್ನಿಯಲ್ಲಿಯೇ ಇದ್ದರು. ಮುಗ್ಧ ಸಂಗಯ್ಯ ಮಾತ್ರ ಮಲ್ಲಯ್ಯನ ದರ್ಶನ ಪಡೆದಾಗಿತ್ತು. ಇದಕ್ಕೆ ಕುರುಹೇನು ಎಂದು ನೆರೆದ ಜನ ಕೇಳಿದಾಗ ಶ್ರೀಶೈಲದಿಂದ ಕಂಬಿಯವರು ತರುವ ಮರ, ಸುಪ್ಲಿ, ಬಳಿ, ಗಿರಿಯುಂಡಿ, ದವನ, ಕುಂಕುಮ, ಕೋಲುಗಳನ್ನು ತೋರಿಸುತ್ತಾನೆ. ಮಲ್ಲಮ್ಮನಿಗೆ ನುಚ್ಚು ಆಮ್ರ ಮಾಡಲು ಹೇಳುತ್ತಾನೆ. ಅಲ್ಲಿ ದಾಸೋಹ ನಡೆಯುತ್ತದೆ. ಇದರ ಸ್ಮಾರಕವಾಗಿ ಮಲ್ಲಿಕಾರ್ಜುನನ ದೊಡ್ಡ ದೇವಾಲಯ ಹೊರವಲಯದ ಶಿವಮಂದಿರದಲ್ಲಿ ಇದೆ.



ಊರಲ್ಲಿರುವ ಮುಗ್ಧಸಂಗಯ್ಯನವರ ವಿಸ್ತಾರವಾದ ಗುಡಿ



ಗುಡಿಯ ಗರ್ಭಗೃಹದಲ್ಲಿರುವ ಸಂಗಯ್ಯನವರ ಮೂರ್ತಿ

ಊರೊಳಗಿನ ಮುಗ್ಧ ಸಂಗಯ್ಯನ ಗುಡಿ ಪ್ರವೇಶಿಸಲು ಮೊದಲು ಹತ್ತುವದೇ ಮಲ್ಲಿಕಾರ್ಜುನ ದೇವಾಲಯ. ಆಮೇಲೆ ಮುಗ್ಧ ಸಂಗಯ್ಯನ ಗುಡಿ. ಇದರ ಎದುರು ಸಣ್ಣಬಸವಣ್ಣನ ಗುಡಿ ಇದೆ. ಅಂದರೆ ಊರ ಹೊರಗಿನ ದೇವಾಲಯದಲ್ಲಿ ಇರುವಂತೆ ಊರಲ್ಲಿಯ ದೇವಾಲಯದಲ್ಲಿಯೂ ಮಲ್ಲಿಕಾರ್ಜುನ, ನಂದಿ ಮತ್ತು ಮುಗ್ಧಸಂಗಯ್ಯನ ಗದ್ದುಗೆಗಳು ಇವೆ.

ಮಲ್ಲಮ್ಮ ತೇಲಿ ಅವರ ಮನೆಯಲ್ಲಿ ಮುಗ್ಧಸಂಗಯ್ಯನವರು ಹೊಡೆದ ಗಾಣದ ಸ್ಮಾರಕವನ್ನು ಆ ಮನೆಯವರು ಹಾಗೇ ಉಳಿಸಿಕೊಂಡು ಬಂದಿದ್ದಾರೆ. ಗಾಣದ ಕಲ್ಲಿಗೆ ಕಣಿಯನ್ನು ಸಿಗಿಸುವ ಸ್ಥಳ ಧೂಳಾಗಬಾರದೆಂದು ಲಿಂಗ ಪ್ರತಿಷ್ಠಾಪನೆ ಮಾಡಿದ್ದಾರೆ. ಇನ್ನೊಂದು ಸಣ್ಣ ಮಾಡದಲ್ಲಿ ಮುಗ್ಧ ಸಂಗಯ್ಯನ ಮೂರ್ತಿ ಇದೆ. ಮಲ್ಲಮ್ಮ ತೇಲಿ ಅವರ ವಂಶಜರು ಇಂದಿಗೂ ಮುಗ್ಧಸಂಗಯ್ಯನವರ ಮೂರ್ತಿಯನ್ನೂ ಸಂಗಯ್ಯನವರು ಬಳಸಿದ ಗಾಣ-ಖಣಿಗಳನ್ನು ಇಂದಿಗೂ ಭಕ್ತಿಯಿಂದ ಪೂಜಿಸುತ್ತಾರೆ. ಮುಗ್ಧಸಂಗಯ್ಯ ತಮ್ಮ ಮನೆತನದ ಶರಣ ಎಂದು ಈಶ್ವರ ರಾಜಂಗಳ ಅವರು ಹೇಳಿಕೊಳ್ಳುತ್ತಾರೆ.

ಮಾಹಿತಿ: ಈಶ್ವರ ರಾಜಂಗಳ, ಮಲ್ಲಿಕಾರ್ಜುನ ತೇಜಪ್ಪ ಬಿರಾದಾರ

***




ಸಂಗಯ್ಯ ಹೊಡೆದ ಗಾಣದ ಮನೆ



ಸಂಗಯ್ಯ ಗಾಣಹೊಡೆದ ಗಾಣಬರಿ, ಒಳಗೆ ಗಾಣದ ಕಲ್ಲು ಕಾಣಿಸುತ್ತಿರುವುದು



ಗಾಣದ ಖಣೆ, ಈಗಲೂ
ಪೂಜೆಗೊಳ್ಳುತ್ತಿದೆ



ಗಾಣ ಹೊಡೆದ ಮನೆಯಲ್ಲಿ
ಪೂಜೆಗೊಳ್ಳುತ್ತಿರುವ ಸಂಗಯ್ಯನವರ
ಮೂರ್ತಿ

## ಮುದ್ದೇಬಿಹಾಳ ತಾಲೂಕು :

### ೧. ಬಾವೂರು :

### ಬ್ರಹ್ಮಯ್ಯನ ಗುಡಿ

ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಒಂದು ಗ್ರಾಮ ಬಾವೂರು. ಇದು ಮುದ್ದೇಬಿಹಾಳದಿಂದ ದಕ್ಷಿಣಕ್ಕೆ ೨೦ ಕಿ. ಮೀ. ದೂರದಲ್ಲಿದೆ. ಮುದ್ದೇಬಿಹಾಳದಿಂದ ಹುಲಗಬಾಳ ಬರುತ್ತದೆ. ಹುಲಗಬಾಳದಿಂದ ಎಡಕ್ಕೆ ಬಾವೂರ ಕ್ರಾಸ್ ಬರುತ್ತದೆ. ಅಲ್ಲಿಂದ ೩ ಕಿ.ಮೀ. ದೂರದಲ್ಲಿ ಬಾವೂರು ಗ್ರಾಮ ಇದೆ. ಬ್ರಹ್ಮಯ್ಯ ಎಂಬ ಹೆಸರಿನ ಶರಣ ಈ ಊರಿಗೆ ಸಂಬಂಧಿಸಿದವನು. ಕೃಷಿ ಕಾಯಕದ ಮನೆತನದಲ್ಲಿ ಜನಿಸಿದವನು. ಇವರ ತಾಯಿ-ತಂದೆ ಯಾರೆಂಬುದು ತಿಳಿಯುವುದಿಲ್ಲ. ಬಾಹೂರಿನಲ್ಲಿ ತೋಟಗಾರಿಕೆ ಮಾಡಿಕೊಂಡಿದ್ದನು. ತನ್ನ ತೋಟದಲ್ಲಿ ಬೆಳೆದ ಹೂಗಳಿಂದ ಹಾರಗಳನ್ನು ತಯಾರಿಸಿ, ಭಕ್ತರ ಮನೆಗೆ ತೆಗೆದುಕೊಂಡು ಹೋಗಿ ಕೊಡುವ ಕಾಯಕವನ್ನು ಮಾಡಿಕೊಂಡಿದ್ದನು. ಎಲ್ಲಿಯೇ ಶಿವಾನುಭವ ಚರ್ಚೆ ನಡೆದಿದ್ದರೂ ಅಲ್ಲಿ ಹೋಗಿ ಭಾಗವಹಿಸುವ ಸಾತ್ವಿಕ ಜೀವನ ಅವನದಾಗಿತ್ತು.

ಬಸವಾದಿ ಶರಣರ ಪ್ರಭಾವಕ್ಕೆ ಒಳಗಾಗಿ ಬ್ರಹ್ಮಯ್ಯ ಕಲ್ಯಾಣಕ್ಕೆ ಬರುತ್ತಾನೆ. ಅಲ್ಲಿ ಒಂದು ಘಟನೆ ನಡೆಯುತ್ತದೆ. ಕಲ್ಯಾಣದಲ್ಲಿ ಜೋಳ ತರಲೆಂದು ಪಟ್ಟಣಕ್ಕೆ ಹೋಗುತ್ತಾನೆ. ಜೈನ ವ್ಯಾಪಾರಿಯೊಬ್ಬ ಜೋಳದ ಗುಂಪಿಯನ್ನು ಮುಂದೆ ಹಾಕಿಕೊಂಡು ಮಾರುತ್ತಿದ್ದನು. ಶಿವಭಕ್ತರನ್ನು ಕಂಡರೆ ಅವರಿಗೆ ಹೊಟ್ಟೆಯುರಿ. ಶಿವನ ಹೆಸರು ಬಂದರೆ ಶಿವಭಕ್ತರು ಭಾವನಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ ಎಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ಹೀಗಾಗಿ ಆ ಜೈನ ವ್ಯಾಪಾರಿ "ಈ ಶಂಕರಗಂಡನನ್ನು ಕೊಂಡುಕೊಳ್ಳಿ. ಅವನು ಮಾರಿಸಿಕೊಳ್ಳುತ್ತಾನೆ" ಎಂಬ ಮೂದಲಿಕೆ ಮಾತುಗಳನ್ನಾಡುತ್ತಾನೆ. ಈ ಮಾತನ್ನು ಕೇಳಿದ ಬ್ರಹ್ಮಯ್ಯನೂ ಧೈರ್ಯದಿಂದಲೇ 'ಶಿವನು ಮಾರಲ್ಪಡುವ ಚೈತನ್ಯ ಸ್ವರೂಪಿ ಒಡೆಯನೆ ವಿನಾ ಮಾರಿಸಿಕೊಳ್ಳುವವನಲ್ಲ' ಎಂದು ಹೇಳುತ್ತಾನೆ. 'ಹಾಗೋ, ಶಿವನಲ್ಲಿ ಚೈತನ್ಯವಿದ್ದರೆ ಜೋಳದಲ್ಲೂ ಚೈತನ್ಯವಿದ್ದಂತೆ. ಹಾಗಾದರೆ ಅದರಲ್ಲಿ ಶಿವನನ್ನು ನುಡಿಸು' ಎಂದು ವ್ಯಾಪಾರಿ ಬ್ರಹ್ಮಯ್ಯನಿಗೆ ಸವಾಲು ಹಾಕುವನು. ಶಿವನ ಪರಮಭಕ್ತನಾದ ಬ್ರಹ್ಮಯ್ಯನು ಪರಮಭಕ್ತಿಯಿಂದ ಜೋಳದ ಗುಂಪಿಗೆ ಪ್ರದಕ್ಷಿಣೆ ಹಾಕುತ್ತಾನೆ. 'ಶಂಕರಾ' ಎಂದು ಕರೆಯುತ್ತಾನೆ. 'ನಂಬಿ ಕರೆದರೆ



ಬಾವೂರು ಬ್ರಹ್ಮಯ್ಯನ ಗುಡಿ

ಓ ಎನ್ನನೇ ಶಿವನು'! ನಂಬಿದ ಶರಣ ಕರೆದಾಗ ಶಂಕರ ಓ ಎಂದನಂತೆ. ಜೋಳದ ಗುಂಪಿಂಒಳಗಿಂದ ಓಂಕಾರ ನುಡಿಸಿದನಂತೆ. ಆಗ ಆ ಜೈನ ವ್ಯಾಪಾರಿಯನ್ನೊಳಗೊಂಡು ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಹೀಗೆ ಬ್ರಹ್ಮಯ್ಯ ಶಂಕರನನ್ನು ಜೋಳದ ಗುಂಪಿಯಲ್ಲಿ ನುಡಿಸಿದ ಕಾರಣವಾಗಿ ಶಿವನು ಸರ್ವಾಂತರ್ಯಾಮಿ ಎಂಬುದನ್ನು ಪ್ರತ್ಯಕ್ಷ ಪರಿಚಯಿಸಿಕೊಟ್ಟನು.

ಇನ್ನೊಂದು ಘಟನೆಯೂ ಕಲ್ಯಾಣದಲ್ಲಿಯೇ ನಡೆಯುತ್ತದೆ. ದಿನವೂ ಬ್ರಹ್ಮಯ್ಯ ಕಲ್ಯಾಣದ ತ್ರಿಪುರಾಂತ ದೇವಾಲಯಕ್ಕೆ ಹೋಗುವ ನೇಮವನ್ನಿಟ್ಟುಕೊಂಡಿದ್ದನಂತೆ. ಒಂದು ದಿನ ಇವನು ಗುಡಿಗೆ ಹೋಗುವ ವೇಳೆಗೆ ಸರಿಯಾಗಿ ಗುಡಿಯಲ್ಲಿ ಕಲ್ಯಾಣದೇವಿ ಎಂಬಾಕೆ ನೃತ್ಯ ಮಾಡುತ್ತಿದ್ದಳಂತೆ. ನೆರೆದವರೆಲ್ಲ ಬ್ರಹ್ಮಯ್ಯನ ಬರುವನ್ನು ಕಂಡು ನೃತ್ಯ ನಿಲ್ಲಿಸಿ ಬಿಡಲು ವಿನಂತಿಸಿಕೊಳ್ಳುತ್ತಾರೆ. ಆಕೆ ನಿಲ್ಲಿಸುತ್ತಾಳೆ. ನೆರೆದ ಜನ ಅದನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಪ್ರತಿಯಾಗಿ ಅವನ ಶಿವಭಕ್ತಿಯನ್ನು ಲೇವಡಿ ಮಾಡಿ ನಗುತ್ತಾರೆ. ಅವನೇನು ಕಲ್ಲಿನ ನಂದಿಗೆ ಕಬ್ಬನ್ನು ತಿನಿಸಿರುವನೊ? ಎಂದು ನುಡಿಯುತ್ತಾರೆ. ಈ ಮಾತುಗಳು ಅವನ ಕಿವಿಯ ಮೇಲೆ ಬೀಳುತ್ತವೆ. ಭಕ್ತರ ಭಕ್ತಿಯನ್ನು ಹೀಗೆ ಅವಹೇಳನ ಮಾಡುವವರಿಗೆ ತಕ್ಕ ಪಾಠ ಕಲಿಸಬೇಕು ಎಂಬ ಪ್ರತಿಜ್ಞೆ ಮಾಡುತ್ತಾನೆ. ಕಲ್ಯಾಣ ಪಟ್ಟಣಕ್ಕೆ ಮಾರಲು ಬಂದ ಕಬ್ಬನ್ನೆಲ್ಲ ತರಿಸಿ ಗುಡಿಯ ಮುಂದೆ ಒಟ್ಟಿ, ಶಿವನನ್ನು ಸ್ತುತಿಸುತ್ತ, 'ಭರದಿಂದ ಬಂದು ಕಬ್ಬು ತಿಂದು, ಶಿವನು ಭಕ್ತರನ್ನು ರಕ್ಷಿಸುತ್ತಾನೆ ಎಂಬುದನ್ನು ಪ್ರಮಾಣೀಕರಿಸಿ ತೋರಿಸು' ಎಂದು ನಂದಿಯನ್ನು ಪ್ರಾರ್ಥಿಸಲು, ಕಲ್ಲಿನ ನಂದಿ ಎದ್ದು ಬಂದು ಎಲ್ಲ ಕಬ್ಬನ್ನು ನುರಿಸಿಬಿಟ್ಟಿತಂತೆ. ನಂತರ ತ್ರಿಪರಾಂತ ಕೆರೆಯ ನೀರನ್ನು ಕುಡಿಯಲು ಹೇಳಲು, ಕೆರೆಯ ಅರ್ಧದಷ್ಟು

ನೀರನ್ನು ನಂದಿ ಕುಡಿಯಿತಂತೆ. ಆಗ ಬ್ರಹ್ಮಯ್ಯನೇ ಸಾಕು ಎಂದು ಹೇಳಲು ಅಲ್ಲಿಗೆ ನೀರು ಕುಡಿಯುವುದನ್ನು ನಿಲ್ಲಿಸಿ, ಮತ್ತೆ ಹೋಗಿ ತನ್ನ ಮೂಲ ಸ್ಥಳದಲ್ಲಿ ಕುಳಿತಿತಂತೆ. ವಚನದಲ್ಲಿಯೂ ಈ ವಿಷಯವನ್ನು ಪ್ರಸ್ತಾಪಿಸುತ್ತಾನೆ.

ಕಲ್ಲರೂಪು ಕಬ್ಬ ಮೆಲುವಾಗ
ಎತ್ತಿದ ವಿಮಾನದಲ್ಲಿಪ್ಪ ಸದ್ಗುರು ಬರುವಾಗ
ಹೂಳಿದ ವೃಷಭ ಕಲೆವಾಗ
ಇಂತಿವು ಭಾವದ ಬಲ್ಮೆ, ಸತ್ಯದ ಚಿತ್ತ, ಚಿತ್ತದ ಹೆಚ್ಚುಗೆ,
ಇಂತೀ ಗುಣ ಸಂಗನಬಸವಣ್ಣನ ಉತ್ಸಾಹ
ಬ್ರಹ್ಮೇಶ್ವರಲಿಂಗವನರಿವುದಕ್ಕೆ ನಿಶ್ಚಯದ ವಿಶ್ವಾಸ

ಇಂಥ ಒಂದು ಘಟನೆಯನ್ನು ಬೊಮ್ಮಣ್ಣ ಎದುರಿಸಿರುವ ಸಾಧ್ಯತೆ ಇದೆ ಎನ್ನುವುದಕ್ಕೆ ಈ ವಚನ ಸಾಕ್ಷಿ ಆಗಿ ನಿಲ್ಲುತ್ತದೆ. ಬ್ರಹ್ಮಯ್ಯ (ಬೊಮ್ಮಯ್ಯ) ತನ್ನ ಸ್ವಗ್ರಾಮ ಬಾವೂರಿನಲ್ಲಿರುವಾಗ ಒಂದು ಘಟನೆ ನಡೆದಿರುತ್ತದೆ. ಅಲ್ಲಿ ಪೆರ್ಮಾಡಿರಾಯನ ದಂಡು ಬೀಡುಬಿಟ್ಟಿತ್ತಂತೆ. ರಾಜನ ಆನೆ ತಪ್ಪಿಸಿಕೊಂಡು ಬ್ರಹ್ಮಯ್ಯನ ಹತ್ತಿರ ಬಂದು ಅವನನ್ನು ಸೊಂಡಿಲಿನಿಂದ ಬಾಧಿಸಲು ಪ್ರಯತ್ನಿಸಿತು. ಆಗ ಬ್ರಹ್ಮಯ್ಯ ಅದಕ್ಕೆ ನಿಲ್ಲೆಂದು ಆದೇಶಿಸಲು ಅದು ಹಾಗೆ ನಿಂತುಬಿಟ್ಟಿತಂತೆ. ರಾಜನವರೆಗೆ ಈ ಸುದ್ದಿ ಹೋಯಿತು. ಬ್ರಹ್ಮಯ್ಯನ ಮಾಟ ಮಂತ್ರ ವಿದ್ಯೆಯಿಂದ ಹೀಗಾಗಿರಲು ಸಾಧ್ಯ ಎಂದು ಬ್ರಹ್ಮಯ್ಯನನ್ನು ಮೂದಲಿಸಿದಾಗ, ಬ್ರಹ್ಮಯ್ಯ ಆನೆಯನ್ನು ನುಗಿಸುತ್ತಾನೆ. ಅದು ಸಾವನ್ನಪ್ಪುತ್ತದೆ. ಪೆರ್ಮಾಡಿರಾಯನು ಆಶ್ಚರ್ಯದಿಂದ ಬ್ರಹ್ಮಯ್ಯನ ಭಕ್ತಿಯನ್ನು ಗೌರವಿಸಿ, ಆನೆಗೆ ಪ್ರಾಣದಾನ ಮಾಡಲು ವಿನಂತಿಸಿಕೊಳ್ಳುತ್ತಾನೆ. ಬ್ರಹ್ಮಯ್ಯ ಹಾಗೇ ಮಾಡುತ್ತಾನೆ. ಶಿವಭಕ್ತರ ಭಕ್ತಿಯ ಶಕ್ತಿಯನ್ನು ಎಲ್ಲರಿಗೂ ಪರಿಚಯಿಸುತ್ತಾನೆ. ಬಾವೂರಿನಲ್ಲಿ ಈ ಆನೆ ಸತ್ತ ಸ್ಥಳದಲ್ಲಿ ಒಂದು ಕಟ್ಟೆ ಇತ್ತು, ಅದನ್ನು 'ಆನೆಕಟ್ಟೆ' ಎಂದು ಕರೆಯುತಿದ್ದರಂತೆ. ಇತ್ತೀಚೆಗೆ ಆ ಕಟ್ಟೆಯನ್ನು ಹೊಡೆದು ಹಾಕಿದ್ದಾರೆ ಎಂದು ತಿಳಿದುಬರುತ್ತದೆ.

ಗುಡಿಯು ಮಂಟಪ ಸುಂದರವಾದ ಕಟೆದ ಕಲ್ಲುಗಂಬಗಳಿಂದ ನಿರ್ಮಾಣವಾಗಿದೆ. ಆದರೆ ಸುತ್ತಲೂ ಅಲ್ಲಿ ದೊರೆಯುವ ಮಿಣಜಗಿ ಕಲ್ಲುಗಳಿಂದ ಗೋಡೆ ಕಟ್ಟಿದ್ದಾರೆ. ಗುಡಿ ಕಟ್ಟಡ ಶಿಥಿಲಾವಸ್ಥೆಯಲ್ಲಿದೆ. ಗುಡಿಯ ಕೆಳಗಡೆ ಇನ್ನೊಂದು ಅಂತಸ್ತಿದೆ ಎಂದು ಹೇಳುತ್ತಾರೆ. ಗುಡಿಯ ನೆಲದಲ್ಲಿ ಸಂಪತ್ತಿದೆ ಎಂಬ ದಟ್ಟ ವದಂತಿ ಈ ಗ್ರಾಮದಲ್ಲಿ ಇರುವುದರಿಂದ ಗುಡಿಯ ಜೀರ್ಣೋದ್ಧಾರ ಮಾಡಲು ಕೂಡ ಊರ ಹಿರಿಯರು ಅಡ್ಡಿಮಾಡುತ್ತಿದ್ದಾರೆ ಎಂದು ತಿಳಿದುಬರುತ್ತದೆ. ಗುಡಿಯ ದಕ್ಷಿಣದಿಕ್ಕಿಗೆ ಈ ಗುಡಿಯ ಇನ್ನೊಂದು ಭಾಗ ಇತ್ತೆಂದು ಕೆಲ ಕುರುಹುಗಳನ್ನು ತೋರಿಸುತ್ತಾರೆ. ಆದರೆ ಅದೆಲ್ಲ ಸಂಪೂರ್ಣ ಹಾಳು ಬಿದ್ದಿದ್ದು, ಈಗ ಖಾಲಿ ನಿವೇಶನ ಮಾತ್ರ ಉಳಿದಿದೆ. ಈ ಗುಡಿಯ ಕೆಳಗೆ ಏಳು ಎಕರೆ ಜಮೀನು ಇದೆ ಎಂದು ತಿಳಿದುಬರುತ್ತದೆ.



ಬಾವೂರು ಬ್ರಹ್ಮಯ್ಯನ ಗುಡಿಯ ಗರ್ಭಗೃಹ ಹಾಗೂ ಮಂಟಪ

ಬಾಹೂರಿನಲ್ಲಿ ಬ್ರಹ್ಮಲಿಂಗೇಶ್ವರನಿಗೆ ಹೂಗಾರ ಸಮಾಜದವರು ಪೂಜೆ ಸಲ್ಲಿಸುವ ಕಾಯಕ ಮಾಡುತ್ತಾರೆ. ಈ ಊರಿನ ಜನ ಬ್ರಹ್ಮಯ್ಯನಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಊರಿನ ಅಧಿದೈವವೆಂದು ಪೂಜಿಸುತ್ತಾ ಬಂದಿದ್ದಾರೆ. ಬೆನಕನ ಅಮವಾಸ್ಯೆಗೆ ವಿಶೇಷ ಪೂಜೆ ಇರುತ್ತದೆ. ಶಿವರಾತ್ರಿಗೆ ಮತ್ತು ಶ್ರಾವಣ ಮಾಸದ ಕಡೆಯ ಸೋಮವಾರ ಹೀಗೆ ಬ್ರಹ್ಮಲಿಂಗೇಶ್ವರನ ಜಾತ್ರೆ ವರ್ಷಕ್ಕೆ ಎರಡು ಸಾರೆ ನಡೆಯುತ್ತದೆ. ಪಲ್ಲಕ್ಕಿಯಲ್ಲಿ ಬ್ರಹ್ಮಲಿಂಗೇಶ್ವರನ ಬೆಳ್ಳಿಯ ಉತ್ಸವ ಮೂರ್ತಿಯನ್ನಿಟ್ಟು ಮೆರವಣಿಗೆ ಮಾಡುತ್ತಾರೆ. ಶ್ರಾವಣ ತಿಂಗಳ ಪೂರ್ತಿ ಭಜನೆ ನಡೆಯುತ್ತದೆ. ಶಿವರಾತ್ರಿಯಲ್ಲಿ ಅಗ್ಗಿ ತುಳಿಯುವ ಸಂಪ್ರದಾಯವಿದೆ. ಪುರವಂತರು ಶಸ್ತ್ರ ಹಾಕಿಕೊಂಡು ವೀರಗಾಸೆ ಕುಣಿತ ಮಾಡುತ್ತ ಒಡಪು ಹೇಳುತ್ತಾರೆ. ಸೋಮವಾರಕ್ಕೊಮ್ಮೆ ಗುಡಿಯಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲುತ್ತದೆ. ಊರವರು ತಮ್ಮ ತಮ್ಮ ಶಕ್ತ್ಯಾನುಸಾರ ಹೂ ಹಣ್ಣುಕಾಯಿ ಅರ್ಪಿಸುತ್ತಾರೆ, ನೈವೇದ್ಯ ಕೊಡುತ್ತಾರೆ.

ವಚನಗಳು : ೪೧
ಅಂಕಿತ : ಬ್ರಹ್ಮೇಶ್ವರ ಲಿಂಗ
ಮಾಹಿತಿ : ಶಿವಬಸವಯ್ಯ ಬಸಲಿಂಗಯ್ಯ ಹಿರೇಮಠ

***

## ಮುದ್ದೇಬಿಹಾಳ ತಾಲೂಕು :

### ೨. ತಂಗಡಗಿ :

### ನೀಲಾಂಬಿಕೆಯ ಸ್ಮಾರಕ

ಬೆಳ್ಳನ ಬೆಳಕ ಹರಿದು ಬಿಳಿ ಕುದರಿಗೆ ತಡಿ ಹಾಕಿ
ಎಲ್ಲಿಗೆ ಸಂಗಣ್ಣ ನಿನ ವಸ್ತಿ । ತಂಗಡಗಿ
ತಂಗಿ ನೀಲಮ್ಮನ ಅರಮನಿಗೆ

ನೀಲವ್ವ ನೀ ಬಾರ ನೀಲಲೋಚನೆ ಬಾರ
ನೀನೆನ್ನ ಮನೆಗೆ ಇರಬಾರ । ಸೋಮಾರ
ಹಾಲೀಗೆ ಹೆಪ್ಪ ಕೊಡ ಬಾರ



ನೀಲಾಂಬಿಕೆ

ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಒಂದು ಗ್ರಾಮ ತಂಗಡಗಿ. ನೀಲಾಂಬಿಕೆ ಇಲ್ಲಿ ಬಂದು ತಂಗಿದ್ದರ ನೆನಪಿಗಾಗಿ ತಂಗಡಗಿ ಎಂದು ಈ ಊರಿಗೆ ಹೆಸರು ಬಂದಿದೆ ಎಂದು ಹೇಳುತ್ತಾರೆ. ಕಲ್ಯಾಣಕ್ರಾಂತಿಯ ನಂತರ ನೀಲಾಂಬಿಕೆ ಹಡಪದಪ್ಪಣ್ಣನವರ ಜೊತೆಗೂಡಿ ಇಲ್ಲಿಗೆ ಬಂದಳೆಂಬ ಸಂಗತಿ ಮೊದಲಿನಿಂದಲೂ ಇದೆ.

ನೀಲಮ್ಮ ಬಸವಣ್ಣನವರ ಲಿಂಗೈಕ್ಯದ ನಂತರ ಹೆಚ್ಚುದಿನ ತಂಗಡಗಿಯಲ್ಲಿ ಉಳಿದುಕೊಂಡಿದ್ದಾಳೆ. ಅವರ ಜೊತೆ ಹಡಪದಪ್ಪಣ್ಣ ಶರಣನೂ ತಂಗಡಗಿಯಲ್ಲಿಯೆ ಉಳಿದುಕೊಳ್ಳುತ್ತಾನೆ. ಬಸವಣ್ಣನವರು ಲಿಂಗೈಕ್ಯ ಆದ ನಂತರದ ಅನುಭವಗಳನ್ನು ನೀಲಮ್ಮ ತನ್ನ ವಚನಗಳಲ್ಲಿ ವ್ಯಕ್ತಪಡಿಸಿರುವುದನ್ನು ಇಲ್ಲಿ



ನೀಲಾಂಬಿಕೆಯ ಸ್ಮಾರಕ

ನೆನಪಿಸಿಕೊಳ್ಳಬಹುದಾಗಿದೆ. ನೀಲಮ್ಮ ಅಪ್ಪಣ್ಣ ಅವರು ಇಲ್ಲಿಯೇ ಲಿಂಗೈಕ್ಯರಾಗಿದ್ದಾರೆ. ಅದರ ಸ್ಮಾರಕವಾಗಿಯೆ ನೀಲಮ್ಮ, ಅಪ್ಪಣ್ಣ ಅವರ ಗದ್ದುಗೆಗಳು ಇಲ್ಲಿವೆ. ಹಳೆಯ ಗುಡಿ ನೀರಿನಲ್ಲಿದೆ. ಅದರ ಸಂರಕ್ಷಣೆಗಾಗಿ ಬಸವಣ್ಣನವರ ಐಕ್ಯಮಂಟಪದಂತಹ ಸ್ಮಾರಕವನ್ನು ಈಗ ಇಲ್ಲಿ ನಿರ್ಮಾಣ ಮಾಡಲಾಗಿದೆ. ನೀಲಮ್ಮನ ಗದ್ದುಗೆಯ ಮಗ್ಗುಲಿಗೆ ಒಂದು ಲಿಂಗಕಾಣುತ್ತದೆ. ಅದು ಅವಳು ಐಕ್ಯವಾದ ಮೂಲಸ್ಥಳ ಎನ್ನುತ್ತಾರೆ. ಅಲ್ಲಿ ನದಿಯ ಆ ಕಡೆ ಸಂಗಮನಾಥ, ಬಸವಣ್ಣ; ನದಿಯ ಈಕಡೆ ನೀಲಮ್ಮ, ಹಡಪದ ಅಪ್ಪಣ್ಣ ನೆನೆದಿದ್ದಾರೆ. ಈ ಸ್ಥಳ ಮುಳುಗಡೆಯಾದರೂ ನೀಲಮ್ಮನ ಗುಡಿಯನ್ನು ಉಳಿಸಿಕೊಂಡಿದ್ದಾರೆ. ಆದರೂ ತಂಗಡಗಿಯಲ್ಲಿ ಊರ ಹೊರಗೆ ನೀಲಮ್ಮನ ಹೊಸಗುಡಿಯೊಂದನ್ನು ಕಟ್ಟಿದ್ದಾರೆ. ಕಮಾನುಗಳ ಗುಡಿಯಲ್ಲಿ ನಡುವೆ ನೀಲಮ್ಮನ ಮೂರ್ತಿ ಇದೆ. ಎಡಕ್ಕೆ ಬಸವಣ್ಣನಿದ್ದಾನೆ. ಬಲಕ್ಕೆ ಅಪ್ಪಣ್ಣನ ಮೂರ್ತಿ ಇದೆ. ನೀಲಮ್ಮನ ಈ ಗುಡಿಯ ಎದುರಿನಲ್ಲಿ ಮಡಿವಾಳ ಮಾಚಿದೇವನ ಮೂರ್ತಿ ಇದೆ.


ತಂಗಡಗಿಯ ಸೀಮೆಯಲ್ಲಿ ನೀಲಮ್ಮ ನೆನೆದುದರಿಂದ ತಂಗಡಗಿ ನೀಲಮ್ಮನ ತವರು ಮನೆ ಎಂದೂ, ಸಂಗಮ ಗಂಡನ ಮನೆ ಎಂದೂ, ಸಂಗಮೇಶ್ವರನು ನೀಲಮ್ಮನ ಅಣ್ಣನೆಂದೂ ಈ ಭಾಗದ ಜನಮನದಲ್ಲಿ ಒಂದು ಭಾವನಾತ್ಮಕ ಸಂಬಂಧದ ಅರಿವು ಕಂಡುಬರುತ್ತದೆ.

ತಂಗೀಯ ಕರಿಹೋಗಿ ತಿಂಗಳ ತಡದಾನ
ತಂಗಡಗಿ ಮುಂದ ನೆನದಾನ। ಸಂಗಣ್ಣ
ತಂಗಿ ನೀಲಾನ ಕರಿಹೋಗಿ

ಸಂಗಣ್ಣ ತನ್ನ ತಂಗಿ ನೀಲಮ್ಮನನ್ನು ತನ್ನ ಜಾತ್ರೆಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿಯ ಜಾತ್ರೆ ಮುಗಿದ ನಂತರ ನೀಲಮ್ಮನನ್ನು ತವರಿಗೆ ಕಳಿಸುವ ಕಾರ್ಯಕ್ರಮವೆಂದೇ ಆಚರಿಸುವ ಉತ್ಸವ, ತಂಗಡಗಿಯಲ್ಲಿ ನೀಲಮ್ಮನ ಜಾತ್ರೆಯಾಗಿ ಆಚರಿಸಲ್ಪಡುತ್ತದೆ.

ಸಂಗಣ್ಣನ ತೇರೆಳದ ಮೇಲೆ ಏಳುದಿನಕ್ಕೆ ನೀಲಮ್ಮನನ್ನು ಕಳಿಸುವ ಸಂಪ್ರದಾಯ ಇದೆ. ಆಗ ತಂಗಡಗಿಯಲ್ಲಿ ನಂದಿಕೋಲು ಉತ್ಸವ, ಪಲ್ಲಕ್ಕಿ ಉತ್ಸವ ನಡೆಯುತ್ತದೆ. ನೀಲಮ್ಮನ ಪಲ್ಲಕ್ಕಿ ಸಂಗಮದಿಂದ ಹೊರಟು ಹೊಳೆದಾಟಿ ಬರುತ್ತದೆ. ತಂಗಡಗಿ ಜಮೀನಿನಲ್ಲಿ ಪಲ್ಲಕ್ಕಿ ಇಡುವ ಕಟ್ಟಿಗೆ **'ನೀಲಮ್ಮನ ಕಟ್ಟೆ'** ಎನ್ನುತ್ತಾರೆ. ಇದು ನೇರವಾಗಿ ಸಂಗಮನಾಥನ ಗುಡಿಯಿಂದ ಹೊಳೆಯ ಈಚೆದಂಡೆಯ ಜಮೀನಿನಲ್ಲಿ ಇದೆ. ನೀಲಮ್ಮನಿಗೆ ಉಡಿಯಕ್ಕಿ ಹಾಕಿ, ಮೆರವಣಿಗೆ ಮುಂದೆ ಸಾಗುತ್ತದೆ. ಹಳೆಯ ಗುಡಿಗೆ ಮೆರವಣಿಗೆ ಹೋಗುತ್ತದೆ. ನಂತರ ಉತ್ಸವ ಅಲ್ಲಿಂದ ಹೊರಟು ನಡು ಊರಿನಲ್ಲಿ ಒಮ್ಮೆ ಪಲ್ಲಕ್ಕಿ ಇಳಿಸಲಾಗುತ್ತದೆ. ಮತ್ತೆ ಇಲ್ಲಿಯೂ ಒಂದು **'ನೀಲಮ್ಮನ ಕಟ್ಟೆ'** ಇದೆ. ಈ ಎರಡೂ ಕಡೆಯ ಕಟ್ಟೆಗಳನ್ನು ತಂಗಡಿಯ ಜನ ಪೂಜ್ಯಭಾವನೆಯಿಂದ ಕಾಣುತ್ತಾರೆ. ಈ ಎರಡೂ ಕಟ್ಟೆಗಳು ಮೊದಲಿನಿಂದಲೂ ನೀಲಮ್ಮನ ಕಟ್ಟೆಗಳೆಂದೇ ಪ್ರಸಿದ್ಧವಾಗಿವೆ.

ನೀಲಮ್ಮನ ಉತ್ಸವಕ್ಕೆ ಮುತ್ತೈದೆಯರು ಆರತಿ ತಂದಿರುತ್ತಾರೆ. ಒಬ್ಬೊಬ್ಬರ ಮನೆಯೊಳಗೆ ಒಂದೊಂದು ಬಾಬ (ಚಾಜ) ಇರುತ್ತದೆ. ನಂದಿಕೋಲು ಕುಣಿತ ಹೊಳಿಯವರ ಮನೆತನಕ್ಕಿದೆ. ಡೊಳ್ಳು ಕುಣಿತ ಇದೆ. ಪುರವಂತರ ಕುಣಿತ ಇದೆ.



ನೀಲಾಂಬಿಕೆಯ ಐಕ್ಯಸ್ಥಳ



ನದಿಯ ದಂಡೆಗೆ ಇರುವ ನೀಲಮ್ಮನ ಕಟ್ಟೆ

ನೀಲಮ್ಮನನ್ನು ಕಳಿಸುವ ಸಂಪ್ರದಾಯವನ್ನು ಸುತ್ತಲೂ ಹತ್ತು ಹರದಾರಿ ಜನ ತಮ್ಮ ಮನೆಯಲ್ಲಿ ಈಗಲೂ ಆಚರಿಸಿಕೊಂಡು ಬರುತ್ತಿದ್ದಾರೆ.

ಶ್ರಾವಣಮಾಸದಲ್ಲಿ ಗುಡಿಯ ಮೇಲೆ ಕಳಸ ಏರಿಸುತ್ತಾರೆ. ಕಳಸವನ್ನು ನದಿಗೆ ಒಯ್ದು, ತೊಳೆದು ಪೂಜೆ ಮಾಡಿ ಏರಿಸುತ್ತಾರೆ. ಆಮೇಲೆ ಅದನ್ನು ಇಳಿಸಿ ತಂದು, ಜಂಬಯ್ಯ ರುದ್ರಸ್ವಾಮಿ ಅವರು ತಮ್ಮ ಜಗಲಿಯ ಮೇಲೆ ಇಟ್ಟಿರುತ್ತಾರೆ. ಜಾತ್ರೆ, ಉತ್ಸವದಲ್ಲಿ ಮಾತ್ರ ಕಳಸವನ್ನು ಮೆರವಣಿಗೆಯಲ್ಲಿ ಒಯ್ಯುವ ಸಂಪ್ರದಾಯವಿದೆ.

ವಚನಗಳು : ೨೮೮
ಅಂಕಿತ : ಸಂಗಯ್ಯ
ಮಾಹಿತಿ: ಸುಮಿತ್ರಾ ಸಿದ್ರಾಮಪ್ಪ ಅಂಗಡಿ

***



ತಂಗಡಗಿ ಊರಲ್ಲಿರುವ ನೀಲಮ್ಮನ ಕಟ್ಟೆ



ಊರ ಹೊರಗೆ ಹೊಸದಾಗಿ ನಿರ್ಮಿಸಿದ ನೀಲಮ್ಮನ ಗುಡಿ



ನೀಲಮ್ಮನ ಗುಡಿಯಲ್ಲಿಯ ನೀಲಮ್ಮನ ಶಿಲ್ಪಮೂರ್ತಿ



ನೀಲಮ್ಮನ ಗುಡಿಯಲ್ಲಿಯ ಬಸವಣ್ಣನವರ ಮೂರ್ತಿ



ನೀಲಮ್ಮನ ಗುಡಿಯಲ್ಲಿಯ ಹಡಪದ ಅಪ್ಪಣ್ಣನವರ ಮೂರ್ತಿ



ನೀಲಮ್ಮನ ಗುಡಿಯ ಅಂಗಳದಲ್ಲಿರುವ ಮಡಿವಾಳ ಮಾಚಯ್ಯನವರ ಶಿಲ್ಪ



ನೀಲಮ್ಮನ ಗುಡಿಯ ಅಂಗಳದಲ್ಲಿರುವ ಮಡಿವಾಳ ಮಾಚಯ್ಯನವರ ಸ್ಮಾರಕ

ಇಂಡಿ ತಾಲೂಕು :

## ಹಿರೆ ಮಸಳಿ :


## ರೆಬ್ಬವ್ವೆ ಗುಡಿ

ಮಸಳಿ ಎಂಬ ಊರು ವಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನಲ್ಲಿದೆ. ವಿಜಾಪೂರದಿಂದ ಈಶಾನ್ಯಕ್ಕೆ ೪೦ ಮೈಲು ಅಂತರದಲ್ಲಿದೆ. ಹಿರೇಮಸಳಿ ಚಿಕ್ಕಮಸಳಿ ಎಂಬ ಊರುಗಳು ಎರಡಾಗಲು ಕಾರಣ ನಡುವೆ ಹರಿದ ಒಂದು ಹಳ್ಳ. ಈ ಭಾಗದಲ್ಲಿ ಶರಣ ಪರಿಸರ ಇತ್ತು. ಹೀಗಾಗಿ ಸಹಜವಾಗಿಯೆ ಒಬ್ಬರ ಮೇಲೆ ಇನ್ನೊಬ್ಬರ ಪ್ರಭಾವ ಆಗಿರುವ ಸಾಧ್ಯತೆ ಹೆಚ್ಚು.

ಹಿರೇಮಸಳಿ ಗ್ರಾಮದಲ್ಲಿ 'ರೆಬ್ಬವ್ವೆ' ಹೆಸರಿನ ಅತ್ಯಂತ ಪುರಾತನವಾದ ದೇವಾಲಯ ಒಂದಿದೆ. ಈ ದೇವಾಲಯಕ್ಕೆ ಹೋಗಬೇಕಾದರೆ ಮೊಸಳಿ ಹಳ್ಳವನ್ನು ದಾಟಲೇಬೇಕು. ಈ ಊರಿನ ಶರಣೆ ರೆಬ್ಬವ್ವೆ (ರೆಮ್ಮವ್ವೆ) ಶರಣರ ಪ್ರಭಾವಕ್ಕೆ ಒಳಗಾಗಿ ಕಲ್ಯಾಣಕ್ಕೆ ಹೋದಳೆಂದು ತಿಳಿದು ಬರುತ್ತದೆ. ಅಲ್ಲಿಗೆ ಹೋಗಿ ರಾಟಿಯಿಂದ ನೂಲು



ರೆಬ್ಬವ್ವೆಯ ಗುಡಿ



రೆಬ್ಬವ್ವೆಯ ಗುಡಿಯ ಗರ್ಭಗೃಹದ ದೃಶ್ಯ

ತಗೆಯುವ ಕಾಯಕವನ್ನು ಮಾಡತೊಡಗುತ್ತಾಳೆ. ತನ್ನ ಕಾಯಕದಲ್ಲಿ ಅತ್ಯಂತ ನಿಷ್ಠೆಯನ್ನು ಬೆಳಸಿಕೊಂಡ ಶಿವಶರಣೆ ಈಕೆ. ರೆಬ್ಬವ್ವೆ 'ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ' ಎಂಬ ಅಂಕಿತದಲ್ಲಿ ವಚನ ರಚನೆ ಮಾಡಿದ್ದಾಳೆ. ಕದಿರಕಾಯಕದ ಕಾಳವ್ವೆಯೂ ಈ ಊರಿನ ಶರಣೆ ಆಗಿರಬಹುದು. ಆಕೆಯ ವಚನ ಅಂಕಿತವೂ "ಗುಮ್ಮೇಶ್ವರಾ" ಎಂದಿದೆ.

ರೆಬ್ಬವ್ವೆ ಹೆಸರಿನಲ್ಲಿ ನಡೆಯುವ ಜಾತ್ರೆ ಶ್ರಾವಣದ ಮುಕ್ತಾಯಕ್ಕೆ ಬೆನಕನ ಅಮವಾಸ್ಯೆಯಂದು ಜರಗುತ್ತದೆ. ಜಾತ್ರೆಗೆ ಭಜನೆ ಹಚ್ಚಲಾಗುತ್ತದೆ. ತೇರು, ಪಲ್ಲಕ್ಕಿ ಏನೂ ಇಲ್ಲ. ಈ ಗುಡಿ ದೇವರಮನಿ ಅವರ ಜಮೀನಿನಲ್ಲಿದೆ. ಹೀಗಾಗಿ ಅವರ ಮನೆತನದವರೆ ನಿತ್ಯ ಎರಡು ಹೊತ್ತು ಪೂಜೆ ಮಾಡುತ್ತ ಹೊರಟಿದ್ದಾರೆ. ಇಲ್ಲಿ ವಿಚಿತ್ರ ಸಂಪ್ರದಾಯವೊಂದಿದೆ. ಸಂಕಲ್ಪ ಮಾಡಿಕೊಂಡ ಭಕ್ತರು ಲಿಂಗಕ್ಕೆ ಎಣ್ಣಿ ಹಚ್ಚಿ ಬಿಸಿನೀರು ತಂದು ಲಿಂಗಕ್ಕೆ ಎರೆಯುತ್ತಾರೆ. ನಂತರ ಉಡಿ ತುಂಬುವ ಕಾರ್ಯ ನಡೆಯುತ್ತದೆ. ರೆಬ್ಬವ್ವೆಯ ಬಾಗಿಲು ಸದಾ ತೆರೆದಿರುತ್ತದೆ. ಭಕ್ತರು ಯಾವಾಗಲೂ ಬಂದು ಪೂಜೆ ಮಾಡಬಹುದು. ಇಲ್ಲಿ ಎಲ್ಲ ಜಾತಿ ಜನರೂ ಬರುತ್ತಾರೆ. ಮದುವೆ ಮೊದಲಾದವು ಇಲ್ಲಿ ನಡೆಯುತ್ತವೆ. ಗುಲಬರ್ಗಾ, ಅಕ್ಕಲಕೋಟ, ಸೊಲ್ಲಾಪೂರ, ಬಿಜಾಪೂರ ಭಕ್ತರು ಬರುತ್ತಾರೆ.

**ಮುಕ್ತಾಯಕ್ಕ :**

ಹಿರೆಮಸಳಿಯಲ್ಲಿ ಅನೇಕ ಪ್ರಾಚೀನ ಅವಶೇಷಗಳಿವೆ. ಮುಕ್ತಾಯಕ್ಕ ಇದೇ ಊರಿನವಳಾಗಿರಬಹುದು ಎನ್ನಲಾಗುತ್ತದೆ. ಮುಕ್ತಾಯಕ್ಕ ಅಲ್ಲಮನೊಂದಿಗೆ

ಸಂಚರಿಸಿದ ಸುಳುಹುಗಳು ಈ ಭಾಗದಲ್ಲಿ ಸಿಗುತ್ತವೆ. ಈಗಲೂ ಅಜಗಯ್ಯ, ಅಜಗಣಪ್ಪ, ಅಜಗಣ್ಣ, ಅಜಗಣ್ಣೆವ್ವ, ಮುತ್ತಪ್ಪ, ಮುತ್ತವ್ವ ಮೊದಲಾದ ಹೆಸರುಗಳನ್ನು ಜನ ಇಡುತ್ತಾ ಬಂದಿರುವುದು ಗೊತ್ತಾಗುತ್ತದೆ. ಅಜಗಣ್ಣನ ಹೆಸರಿನ ಮಠವೊಂದು ನಾದ (ಇಂಡಿ ತಾ.) ಎಂಬ ಗ್ರಾಮದಲ್ಲಿ ಇದೆ. ಅಜಗಯ್ಯ ಎಂಬ ಪೀಠಾಧಿಪತಿಯೂ ಇದ್ದಾನೆ. ಸಿಂದಗಿ ತಾಲೂಕಿನ ಆಲಮೇಲದ ಹೊಲವೊಂದರಲ್ಲಿ ಅಜಗಣ್ಣನ ಗದ್ದಿಗೆ ಇದೆ. ಇಂಡಿ ತಾಲೂಕಿನ ನಾದ, ಲಾಳಸಂಗಿ ಹಾಗೂ ಹುನಗುಂದ ತಾಲೂಕಿನ ಅಮೀನಗಡದಲ್ಲಿಯೂ ಅಜಗಣ್ಣನ ಗುಡಿಗಳಿವೆ ಎಂದು ತಿಳಿದುಬರುತ್ತದೆ.

ಹಿರೆಮಸಳಿಯಿಂದ ತೀರ ೪೫ ಮೈಲು ದೂರದಲ್ಲಿ ಲಕ್ಕುಂಡಿ ಎಂಬ ಗ್ರಾಮವಿದೆ. ಈ ಊರಿನ ಒಂದು ಹೊಲದಲ್ಲಿ ಪುರಾತನವಾದ ಒಂದು ದೇವಾಲಯ ಇದೆ ಎಂದು ಹೇಳುತ್ತಾರೆ. ಆದರೆ ಸರಿಯಾದ ಆಕರಗಳು ಸಿಗುವದಿಲ್ಲ. ಆದರೂ ಇದೇ ಅಜಗಣ್ಣನ ಮೂಲಗ್ರಾಮವಾಗಿರಬಹುದು ಎಂಬ ಸಂದೇಹವನ್ನು ೧೯೪೫ ರಲ್ಲಿಯೇ ಡಾ. ಫ.ಗು.ಹಳಕಟ್ಟಿ ಅವರು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಅಜಗಣ್ಣ ಈ ಲಕ್ಕುಂಡಿಯವನಾಗಿರಬಹುದೆ? ಎಂಬ ಜಾಡು ಹಿಡಿದು ಹುಡುಕಾಟ, ಹೆಚ್ಚಿನ ಶೋಧ ನಡೆಯಬೇಕಾಗಿದೆ.

ವಚನಗಳು : ೪

ವಚನಾಂಕಿತ : ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ

ಮಾಹಿತಿ : ಬಸವರಾಜ ಲೋಣಿ

***

**ಇಂಡಿ ತಾಲೂಕು :**

## ೨. ಹಾವಿನಹಾಳ-೨ :

## ಕಲ್ಲಯ್ಯನ ಗುಡಿ

ಇಂಡಿ ತಾಲೂಕಿನ ಹಾವಿನಹಾಳ ಗ್ರಾಮದಲ್ಲಿ ಕಲ್ಲೇಶ್ವರನ ಗುಡಿಯೊಂದಿದೆ. ಈ ಊರಿನಲ್ಲಿ ಶಿವನಯ್ಯ ಸೋಮವ್ವೆ ಅವರ ಮಗನಾಗಿ ಕಲ್ಲಯ್ಯ ಹುಟ್ಟಿದನೆಂದು ಹೇಳುತ್ತಾರೆ. ಕಲ್ಲಯ್ಯ ಇಲ್ಲಿಯ ಸ್ಥಾನಿಕ. ಇಲ್ಲೇ ಹುಟ್ಟಿ ಬೆಳದಿದ್ದಾರೆ. ಇವನು ಪತ್ತಾರ ಸಮಾಜಕ್ಕೆ ಸೇರಿದವನು. ಇವರ ಮನೆತನದ ಕಾಯಕ ಪತ್ತಾರಿಕೆ ಆಗಿತ್ತು. ಈ ಊರಿನಲ್ಲಿ ಮಹಾದೇವನೆಂಬ ರಾಜನು ಆಳುತ್ತಿದ್ದನೆಂದು ಜನ ಹೇಳುತ್ತಾರೆ. ಆದರೆ ಕಾವ್ಯಗಳೆಲ್ಲ ಬಿಜ್ಜಳರಾಜನ ಪ್ರಸ್ತಾಪ ಮಾಡುತ್ತವೆ. ಹಾವಿನಹಾಳದಿಂದ ಕೇವಲ ೧೪ ಮೈಲು ದೂರದಲ್ಲಿ ಮಂಗಳವಾಡ ಇದೆ. ಹೀಗಾಗಿ ಅದು ಬಿಜ್ಜಳನ ಆಡಳಿತಕ್ಕೆ ಒಳಪಟ್ಟಿರಬಹುದು.



ಹಾವಿನಹಾಳ ಕಲ್ಲಯ್ಯನ ಗುಡಿ



ಹಾವಿನಹಾಳ ಕಲ್ಲಯ್ಯನ ಗುಡಿಯ ಗರ್ಭಗೃಹದ ದೃಶ್ಯ

ಅಕ್ಕಸಾಲಿಗ ವೃತ್ತಿಯಲ್ಲಿ ಶಿವನಯ್ಯ ಪ್ರಸಿದ್ಧನಾಗಿದ್ದನು. ಹಾಗೇ ಮಗನಿಗೂ ತರಬೇತಿ ಕೊಟ್ಟು ಬೆಳೆಸಿದ್ದನು. ಆದರೆ ತಮ್ಮ ಕಾಯಕಕ್ಕಿಂತ ಶಿವಭಕ್ತಿಯಲ್ಲೇ ಕಲ್ಲಯ್ಯ ಹೆಚ್ಚು ಸಮಯ ಕಳೆಯುತ್ತಿದ್ದನು. ಎಲ್ಲರೂ ಇವನ ಕುಶಲ ಕಲೆಯನ್ನು, ಸೂಕ್ಷ್ಮ ಕುಸುರಿ ಕೆಲಸವನ್ನು, ಅವನ ಪ್ರಾಮಾಣಿಕತೆಯನ್ನು ಹೊಗಳುವವರೆ. 'ಅಕ್ಕಸಾಲಿ ಅಕ್ಕನ ಬಂಗಾರವನ್ನೂ ಬಿಡನು' ಎಂಬ ಮಾತಿಗೆ ಇವರ ನಡೆ ತದ್ವಿರುದ್ಧವಾಗಿತ್ತು. ಯಾರ ಬಂಗಾರವನ್ನು ಕದಿಯದ ಸತ್ಯ ನೇರ ನಡೆ ಅವರದು. ಹೀಗಾಗಿ ಬಿಜ್ಜಳ ಸಾವಿರ ಚಿನ್ನದ ಗಟ್ಟಿ ಕೊಟ್ಟು, ಅದರಿಂದ ಸುಂದರವಾದ ಉತ್ತರಿಗೆಯನ್ನು ಮಾಡಿಕೊಡಲು ಹೇಳಿಕಳಿಸಿದನಂತೆ. ನಾರಾಯಣನೆಂಬವನು ಈ ಸಮಾಚಾರವನ್ನು ಶಿವನಯ್ಯನಿಗೆ ತಿಳಿಸಿ, ಸಾವಿರ ಚಿನ್ನದ ಗಟ್ಟಿ ಕೊಟ್ಟು ಹೋಗುತ್ತಾನಂತೆ. ಆಗ ಶಿವನಯ್ಯ ತಾನು ಕೆಲಸ ಮಾಡಲು ತೊಡಗಿದಾಗ, ಏಕೋ ಅವನ ಮನಸ್ಸು ಗೊಂದಲಕ್ಕೆ ಗುರಿಯಾಗುತ್ತದೆ. ಈ ಕೆಲಸವನ್ನು ತನ್ನ ಮಗನಿಂದ ಮಾಡಿಸಬೇಕೆಂದು ಸಂಕಲ್ಪ ಮಾಡುತ್ತಾನೆ. ಶಿವನ ಹುಚ್ಚಿನಂತೆ, ಕೆಲಸದ ಹುಚ್ಚನ್ನು ಮಗನು ಹಚ್ಚಿಕೊಳ್ಳಲಿ ಎಂಬುದೇ ತಂದೆಯ ಆಸೆ ಆಗಿತ್ತು.

ಹೀಗಾಗಿ ನಡುರಾತ್ರಿಯೆ ಕಲ್ಲಯ್ಯನನ್ನು ಎಚ್ಚರಗೊಳಿಸಿ, ಸಂಗತಿ ತಿಳಿಸುತ್ತಾನೆ. ಕಾಯಕ ಮಾಡಿ ಬದುಕಬೇಕು. ದೇವರ ಪೂಜೆಯ ಜೊತೆಗೆ ಕಾಯಕವೂ ಬದುಕಲು ಮುಖ್ಯವಾದ ದಾರಿ. ಈಗ ಬಿಜ್ಜಳ ಸಾವಿರ ಚಿನ್ನದ ಗಟ್ಟಿ ಕಳಿಸಿ 'ಉತ್ತರಿಗೆಯನ್ನು' ಮಾಡಲು ಹೇಳಿದ್ದಾನೆ. ನನಗೇಕೋ ಸುಧಾರಿಸುತ್ತಿಲ್ಲ. ನೀನೇ ಮಾಡಿ ಮುಗಿಸು ಎಂದು ಮಗನಿಗೆ ಹೇಳುತ್ತಾನೆ. ದೇವರ ಧ್ಯಾನ ಬಿಟ್ಟು, ಕಲ್ಲೇಶ್ವರನ ಸನ್ನಿಧಿ ಬಿಟ್ಟು ಅವನಿಗೆ ಬೇರೆ ಏನೂ ಬೇಕಿಲ್ಲವಾದ ಕಾರಣ ತಂದೆಯ ಮಾತನ್ನು ನಿರಾಕರಿಸುತ್ತಾನೆ.

ಮಗನ ಹಠಕ್ಕೆ ತಂದೆಗೆ ಕೋಪ ಬಂದು ಮಗನನ್ನು ದಂಡಿಸುತ್ತಾನೆ. ಸೋಮಾರಿ ಮಗನಿಗೆ ಕಟು ಮಾತುಗಳನ್ನಾಡುತ್ತಾನೆ. ಇದೆಲ್ಲ ಕೇಳಿ ಮಗನಿಗೆ ಜೀವನದಲ್ಲಿ ಜಿಗುಪ್ಸೆ ಉಂಟಾಗುತ್ತದೆ. ತನ್ನನ್ನೇ ಇರಿದುಕೊಂಡು ಸಾಯುವ ನಿರ್ಧಾರ ತಗೆದುಕೊಳ್ಳುತ್ತಾನೆ. ಕಲ್ಮೇಶ್ವರನ ಸನ್ನಿಧಿಗೆ ಹೋಗಿ ಹಾಗೇ ಮಾಡಿಕೊಳ್ಳಲು ಮುಂದಾಗುತ್ತಾನೆ. ಆಗ ಕಲ್ಮೇಶ್ವರ ಒಲಿದು, ಹೀಗೆ ಮಾಡಿಕೊಳ್ಳದಿರಲು ಎಚ್ಚರಿಸುತ್ತಾನೆ. ದೇವನ ಮಾತನ್ನು ಗೌರವಿಸುತ್ತಾನೆ.

ಉಳಿದಂತೆ ಹಾವಿನ ಪ್ರಸಂಗ, ರುದ್ರಮುನಿಯಿಂದ ದೀಕ್ಷೆಯಾಗುವ ಸನ್ನಿವೇಶ, ಸೊನ್ನಲಾಪುರಕ್ಕೆ ಪ್ರಯಾಣ, ಮಗಳ ಲಿಂಗನಿಷ್ಠೆ, ನಾಯಿಯಿಂದ ವೇದ ಓದಿಸಿದ್ದು ಎರಡು ಕಡೆಯೂ (ಯಾದಗೀರ ಜಿಲ್ಲೆಯ ಹಾವಿನಹಾಳ, ವಿಜಾಪೂರ ಜಿಲ್ಲೆಯ ಹಾವಿನಹಾಳ) ಜನರಲ್ಲಿ ಒಂದೇ ರೀತಿಯಾಗಿ ಪ್ರಚಲಿತದಲ್ಲಿವೆ.

ಇಂದಿಗೂ ಕಲ್ಮೇಶ್ವರನ ಸತ್ಯ ನಡೆಯುತ್ತದೆ. ಅನೀತಿ, ಅತ್ಯಾಚಾರ, ಕಳ್ಳತನ ಮಾಡಿದವರು ಶಿಕ್ಷೆ ಅನುಭವಿಸುತ್ತಾರೆ. ಈ ಊರಿನಲ್ಲಿ ೫೦೦ ಮನೆಗಳಿದ್ದು, ೩೦೦೦ ಜನಸಂಖ್ಯೆ ಇದೆ. ಆಶ್ಚರ್ಯವೆಂದರೆ ಈ ಊರಿನಲ್ಲಿ ಬ್ರಾಹ್ಮಣರ ಮನೆಗಳಿಲ್ಲ. ಇದಕ್ಕೆ ಕಲ್ಲಯ್ಯನ ಲಿಂಗನಿಷ್ಠೆ ಕಾರಣ ಇರಬಹುದು. ಮೊದಲು ೩೬೦ ಗಾಣ ಇದ್ದವು. ಇವತ್ತು ಗಾಣಗಳೂ ಇಲ್ಲ. ಒಬ್ಬ ಹೆಣ್ಣುಮಗಳ ಶಾಪದಿಂದ ಹೀಗಾಗಿದೆ ಎನ್ನುತ್ತಾರೆ. ಇಲ್ಲಿ ಮದುವೆ, ಜವಳ ಆಗುತ್ತವೆ. ಶ್ರಾವಣಮಾಸದಲ್ಲಿ ವಿಶೇಷ ಪೂಜೆ ನಡೆಸಲಾಗುತ್ತದೆ. ಹಳ್ಳ ಬಂದಾಗ ಕಲ್ಮೇಶ್ವರನನ್ನು ಪೂಜಿಸಲು ಆಗುವದಿಲ್ಲ ಎಂಬ ಕಾರಣಕ್ಕೆ ಊರೊಳಗೆ ಕಾಶಿಲಿಂಗ ಸ್ಥಾಪಿಸಿ ಪೂಜಿಸುತ್ತಿದ್ದಾರೆ. ಈಗ ಸೇತುವೆ ನಿರ್ಮಾಣವಾಗಿದೆ.

ಮಾಹಿತಿ : ಪೋಮಣ್ಣ ಭೀಮಣ್ಣ ಪೋದ್ದಾರ

ನೋಡಿ : ಹಾವಿನಹಾಳ-೧, ತಾ. ಸುರಪುರ, ಜಿ.ಯಾದಗೀರ

***

## ಬಾಗಲಕೋಟ ಜಿಲ್ಲೆ

### ಬಾಗಲಕೋಟ ತಾಲೂಕು :

### ೧. ಇಲಾಳ-೨ :

### ಬೊಮ್ಮಯ್ಯನ ಗುಡಿ

ಮುತ್ತಿನ ಟೊಪ್ಪಿಗೆ ಮೂರುಬಳ್ಳ ವಿಭೂತಿ
ಹೊಳಿಯ ದಂಡೀಲಿ ನೆನದಾನ। ಬೊಮ್ಮಲಿಂಗ
ಕೊಡಕೊಮ್ಮೆ ಕೈಯ್ಯ ಮುಗದೇನ

ಬಾಗಲಕೋಟೆಯಿಂದ ಉತ್ತರಕ್ಕೆ ೧೬ ಕಿ.ಮೀ. ಅಂತರದಲ್ಲಿರುವ ಇಲಾಳದಲ್ಲಿ ಬೊಮ್ಮಯ್ಯ ಒಕ್ಕಲುತನ ಮಾಡಿಕೊಂಡು ಇದ್ದನಂತೆ. ಇವನು ಬಸವಾದಿ ಶರಣರ ಹಿರಿಯ ಸಮಕಾಲೀನ ಎನ್ನುತ್ತಾರೆ. ಪೆರ್ಮಾಡಿರಾಯ ಕಲ್ಯಾಣವನ್ನು ಆಳುವಾಗ ಈ ಭಾಗವು ಅವನ ಆಡಳಿತಕ್ಕೆ ಒಳಪಟ್ಟಿತ್ತು. ಕೃಷಿಕನಾದ ಬೊಮ್ಮಯ್ಯ ರಾಜನಿಂದ ಸುಮಾರು ೫೦೩ ಹೊಲಗಳನ್ನು ಲಾವಣಿ ಹಾಕಿಕೊಂಡು ಕೃಷಿಕಾಯಕ ಮಾಡುತ್ತಿದ್ದನಂತೆ. ಜೊತೆಗೆ ಊರಗೌಡರನ್ನು ಪಾಲುದಾರರಾಗಿರಲು ಕೇಳಿಕೊಂಡಿದ್ದನಂತೆ. ಘಟಪ್ರಭಾ ನದಿ ದಂಡೆಗೆ ಇರುವ ಈ ಊರಿನ ಹೊಲಗಳು ಫಲವತ್ತಾಗಿದ್ದವು. ಬೊಮ್ಮಯ್ಯನ ಕರ್ತವ್ಯವೆಂದರೆ ತಾನು ಬೆಳೆದ ಬೆಳೆಯಲ್ಲಿ ಅರಸನಿಗೆ ಸಲ್ಲಿಸಬೇಕಾದಷ್ಟು ಅರಸನಿಗೆ, ಪಾಲುದಾರರಾದ ಗೌಡರಿಗೆ ಎಷ್ಟು ಪಾಲು ಕೊಡಬೇಕೋ ಅಷ್ಟನ್ನು ಕೊಟ್ಟು, ಉಳಿದ ಪಾಲನ್ನು ದುಡಿದ ತಾನು ತೆಗೆದುಕೊಳ್ಳುತ್ತಿದ್ದನಂತೆ. ತನ್ನ ಪಾಲಿಗೆ ಬಂದದ್ದರಲ್ಲಿ ದಾಸೋಹ ಮಾಡಿ, ತನ್ನ ಮನೆ ನಡೆಸಿಕೊಂಡು ಹೋಗುತ್ತಿದ್ದನಂತೆ. ಹೀಗಾಗಿ ಅವನ ಒಕ್ಕಲುತನದ ನಿಷ್ಠೆಯನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದರಂತೆ. ಬೊಮ್ಮಯ್ಯ ಮೊದಲು ಇಲಾಳ ಗ್ರಮದ ಶ್ರೀ ಭಾಗೋಜಿ ಕುಲಕರ್ಣಿ ಅವರಲ್ಲಿ, ನಂತರ ಶರಣಜೀವಿಗಳಾದ ನಿರ್ವಾಣಪ್ಪ ಅಂಗಡಿ ಅವರ ಮನೆಯಲ್ಲಿ ಕೃಷಿಕಾಯಕ ಮಾಡಿಕೊಂಡಿದ್ದನೆಂದೂ ಊರವರು ಹೇಳುತ್ತಾರೆ.

ಒಂದು ವರ್ಷ ಮಳೆಯಿಲ್ಲದೆ ಜನ ಕಂಗಾಲಾದರಂತೆ. ದನಕರುಗಳಿಗೆ ಮೇವು ಹೇಗೆ? ಜನರ ಉಪಜೀವನ ಹೇಗೆ? ಹೊಲದಲ್ಲಿ ಬಿತ್ತೇನೆಂದರೂ ಕಾಳು ಕೂಡಾ



ಬೊಮ್ಮಯ್ಯನ ಹೊಸ ಗುಡಿ

ಸಿಗದಷ್ಟು ಬರ. ಆದರೂ ಧೈರ್ಯಗೆಡದ ಬೊಮ್ಮಣ್ಣ ಬೇರೆಡೆ ಹೋಗಿ ಹುಡುಕಿ ಐಗೊಳಗದಷ್ಟು ಕಡಲೆ ಬೀಜ ತಂದನಂತೆ. ಬಿತ್ತುವ ಮಿತಿ ಮುಗಿದಿತ್ತು. ಉಪಾಯವಿಲ್ಲದಂತಾಯಿತು. ಆದರೂ ಹಿಮ್ಮೆಟ್ಟದೆ ರಾತ್ರಿ ಕಡಲೆ ನೆನೆಸಿಟ್ಟು ಮರುದಿನ ಹೆಡಿಗೆಯಲ್ಲಿ ತುಂಬಿಕೊಂಡು ಬಿತ್ತಲು ಹೋದನಂತೆ. ಹೋಗುವಾಗ ದಾರಿ ನಡುವೆ ಶ್ರೀಶೈಲಕ್ಕೆ ಹೋಗುವ ದಂಡೊಂದು ಹಸಿವೆಯಿಂದ ಬಳಲುತ್ತ, ಇವನ ತಲೆಯ ಮೇಲಿನ ಹೆಡಿಗೆ ಬುಟ್ಟಿ ನೋಡಿ, ಬುತ್ತಿ ಇರಬಹುದೆಂದು ಭಾವಿಸಿ, ಇವನೆಡೆ ಧಾವಿಸಿದರಂತೆ. ತಮ್ಮ ಹಸಿವನ್ನು ಅವನೆದರು ಹೇಳಿಕೊಂಡಾಗ, ಬೊಮ್ಮಯ್ಯ ಆ ನೆನೆಸಿದ ಕಡಲೆಯನ್ನೇ ಅವರಿಗೆಲ್ಲ ಭಕ್ತಿಯಿಂದ ಸಮರ್ಪಿಸಿ, ಅವರ ಹಸಿವು ಹಿಂಗಿಸಿದನಂತೆ. ತೃಪ್ತರಾದ ಭಕ್ತರು ಇವನನ್ನು ಹರಸಿ ಹೋದರಂತೆ. ಉಳಿದ ಕಾಳುಗಳನ್ನು ಅಲ್ಲಲ್ಲಿ ಬಿತ್ತುತ್ತಾನಂತೆ. ಈ ಸುದ್ದಿ ತಿಳಿದ ಊರ ಗೌಡರು ತಮಗೆ ಹಾನಿ ಆದರೆ ಕೇಳುವವರಲ್ಲ ಎಂದು ಬೊಮ್ಮಯ್ಯನಿಗೆ ಗದರಿಸಿದರಂತೆ. ಶಿವನು ಮಾಡಿದಂತಾಗಲಿ ಎಂಬ ಭಾವದಿಂದ ಬೊಮ್ಮಯ್ಯ ಇದ್ದನು. 'ಭಾವಶುದ್ಧ ಇದ್ದರ ಭಾಗ್ಯಕ್ಕೇನು ಕಡಿಮೆ' ಎನ್ನುವ ಹಾಗೆ ಬೊಮ್ಮಯ್ಯನ ಮುಗ್ಧ ಭಕ್ತಿಭಾವಕ್ಕೆ ಒಲಿದ ಶಿವನು ಹೊಲದ ತುಂಬ ಕಡಲೆ ಬೆಳೆದು ನಿಲ್ಲುವಂತೆ ಮಾಡಿದನಂತೆ. ಆಗ ಬೊಮ್ಮಯ್ಯ ಯಥಾ ಪ್ರಕಾರ ರಾಜನಿಗೆ, ಗೌಡರಿಗೆ ಕೊಡಬೇಕಾದಷ್ಟನ್ನು ಕೊಟ್ಟು ಉಳಿದುದನ್ನು ತಾನು ತಗೆದುಕೊಂಡು, ಎಂದಿನಂತೆ ದಾಸೋಹ ಜೀವನ ನಡೆಸಿದನಂತೆ. ತಮ್ಮ ಊರಾದ ಇಲಾಳದಲ್ಲೇ ಲಿಂಗೈಕ್ಯನಾದನೆಂದೂ, ಅವನ ಹೆಸರಿನ ದೇವಾಲಯ ಇಂದಿಗೂ ಇದೆಯೆಂದೂ, ಅದಕ್ಕೆ ತಾವೆಲ್ಲ ನಡೆದುಕೊಳ್ಳುವುದಾಗಿಯೂ ಜನ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.


ಬೊಮ್ಮಲಿಂಗೇಶ್ವರ ಗುಡಿ ಬಾಗಲಕೋಟ ತಾಲೂಕಿನ ಇಲಾಳ ಊರಿನ ಹೊರಪ್ರದೇಶದಲ್ಲಿದೆ. ಇದನ್ನು ಬೊಮ್ಮಯ್ಯನವರ ಗದ್ದುಗೆ ಎಂದು ಹೇಳುತ್ತಾರೆ. ಈ ಊರಿನ ದೇವತೆ ಎಂಬ ಭಕ್ತಿಭಾವ ಊರವರಲ್ಲಿದೆ. ಮೂಲದ ಇಲಿ(ಳಿ)ಹಾಳ ಊರು, ಬೊಮ್ಮಲಿಂಗಪ್ಪನ ಗುಡಿ ನೀರಿನಲ್ಲಿ ಮುಳುಗಿಹೋಗಿವೆ. ಆ ಗುಡಿಯೊಳಗಿನ ಲಿಂಗವನ್ನು ಸ್ಥಳಾಂತರಿಸಿ, ಲವಳೇಶ್ವರ ತಾಂಡಾ ದಾಟಿ ಇರುವ ೫ ಎಕರೆ ವ್ಯಾಪ್ತಿಯ ಇಲಾಳ ಗ್ರಾಮದ ಜಮೀನಿನಲ್ಲಿ ಈಗ ಸಧ್ಯ ಬಮ್ಮಲಿಂಗಪ್ಪನ ಗುಡಿಯನ್ನು ಹೊಸದಾಗಿ ನಿರ್ಮಿಸಲಾಗಿದೆ. ಅಲ್ಲಿಯೇ ಮೂಲಲಿಂಗವನ್ನು ಪ್ರತಿಷ್ಠಾಪನೆ ಮಾಡಿದ್ದಾರೆ.

ಊರವರೆಲ್ಲ ಭಕ್ತಿಯಿಂದ ಈ ಗುಡಿಗೆ ನಡೆದುಕೊಳ್ಳುತ್ತಾರೆ. ಶ್ರಾವಣಮಾಸ ಪೂರ್ಣ ದೇವರಿಗೆ ಅಭಿಷೇಕ ಮಾಡುತ್ತಾರೆ. ವರ್ಷದಲ್ಲಿ ಮೂರುಸಾರೆ ಜಾತ್ರೆ ನಡೆಯುತ್ತದೆ. ಯುಗಾದಿ ಅಮವಾಸ್ಯೆ ಆದ ೯ನೇ ದಿನಕ್ಕೆ ತೇರು ಎಳೆಯುತ್ತದೆ. ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ಕಳಸ, ನಂದಿಕೋಲು, ಪಲ್ಲಕ್ಕಿ ಮೆರವಣಿಗೆ ಆಗುತ್ತದೆ. ತೇರು ಎಳೆಯುವದಿಲ್ಲ. ಭಕ್ತರು ತಾವೇ ಭಕ್ತಿಯಿಂದ ಪೂಜೆ ಸಲ್ಲಿಸುವ ಸಂಪ್ರದಾಯ ಇಲ್ಲಿದೆ. ಭಕ್ತರ ನಡುವೆ ಪೂಜಾರಿಯ ಪ್ರವೇಶ ಇಲ್ಲಿ ಇಲ್ಲ.

ಯುಗಾದಿ ಆದ ೯ ದಿನಗಳವರೆಗೂ ಒಂದೊಂದು ಬಾಬಿನವರು ಬಂದು ತಮ್ಮ ಚಾಜದಂತೆ ಪೂಜೆ ಸಲ್ಲಿಸುತ್ತಾರೆ. ೯ ಮನೆಯವರಿಗೆ ಈ ಚಾಜ ಇದೆಯಂತೆ. ಮೇಟಿ, ಬಗಲಿ ಅವರು ಗಾಣಿಗರು; ಗೌಡರು, ಬಿಳೆಕುದರಿಯವರು ಕ್ಷತ್ರಿಯರು;



ಬೊಮ್ಮಯ್ಯನ ಗುಡಿಯ ಗರ್ಭಗೃಹದ ಶಿವಲಿಂಗ



ಊರಲ್ಲಿಯ ಹೊಸ ಬೊಮ್ಮಯ್ಯನ ಗುಡಿ

ಕುಲಕರ್ಣಿಯವರು ಬ್ರಾಹ್ಮಣರು, ಚಳಗೇರಿಯವರು ಬಣಜಿಗರು, ಜೋಳದ ಅವರು ಪಂಚಮಸಾಲಿ ಲಿಂಗಾಯತರು, ಪಿಂಜಾರ ಅವರು ಮುಸ್ಲೀಮರು, ಪತ್ತಾರ ಅವರು ಪಂಚಾಳರು. ಈ ಒಂಬತ್ತು ಮನೆತನದವರು ಈ ಗುಡಿಯ ಬಾಬದವರು. ಇಲ್ಲಿ ಒಂಬತ್ತನೇ ದಿನ ಕಂಕಣ ಕಟ್ಟುವ ಸಂಪ್ರದಾಯ ಇದೆ. ಒಂದೊಂದು ದಿನ ಒಂದೊಂದು ಬಾಬನವರು ಬಂದು ಕಂಕಣ ಕಂಬಕ್ಕೆ ಕಂಕಣ ಕಟ್ಟಿ ಹೋಗುತ್ತಾರೆ. ೯ನೇ ದಿನ ಉಚ್ಚಾಯಿ ಎಳೆಯುತ್ತದೆ. ೧೦ನೇ ದಿನ ದೈವದವರೆಲ್ಲ ಸೇರಿ ತೇರು ಎಳೆಯುತ್ತಾರೆ. ನಂದಿಕೋಲು, ಕಳಸ ಹಿರೇಮಠ ಅವರ ಬಾಬ. ಅವರ ಮನೆಯಿಂದ ಪೂಜೆಗೊಂಡು ತೇರಿನ ಮೈದಾನಕ್ಕೆ ನಂದಿಕೋಲು ಮತ್ತು ಕಳಸಗಳು ಬರುತ್ತವೆ. ಯುಗಾದಿ ಅಮವಾಸ್ಯೆಯಿಂದ ರುದ್ರಾಭಿಷೇಕ ನಡೆಯುತ್ತದೆ. ಶ್ರಾವಣದಲ್ಲಿ ಮೂರು ಹೊತ್ತು ಪೂಜೆ ನಡೆಯುತ್ತದೆ. ಕಾರ್ತಿಕದಲ್ಲಿ ಎಲ್ಲ ಬಾಬಿನವರು, ಊರದೈವದವರು ದೀಪೋತ್ಸವ ಮಾಡುತ್ತಾರೆ. ಬೊಮ್ಮಲಿಂಗಪ್ಪನಿಗೆ ನಂದಾದೀಪ ಇಡುತ್ತಾರೆ.

ಇಳಿಹಾಳದ ಜನ ಈ ಶರಣನನ್ನು ಬೊಮ್ಮನಿಂಗಪ್ಪನೆಂದು ಕರೆಯುತ್ತಾರೆ. ಈ ಊರಿನ ನಿರ್ವಾಣಪ್ಪ ಎಂಬವರ ಮನೆಯಲ್ಲಿ ಬೊಮ್ಮಯ್ಯ ಆಳಾಗಿ ಸೇವೆ ಸಲ್ಲಿಸುತ್ತಿದ್ದನಂತೆ. ಬೊಮ್ಮಯ್ಯನೂ ಭಕ್ತನೇ. ನಿರ್ವಾಣಪ್ಪನೂ ಶಿವಭಕ್ತನೇ. ಆದರೆ ಬೊಮ್ಮಯ್ಯನ ಭಕ್ತಿಯಲ್ಲಿ ನಿರ್ಮೋಹ ಇದೆ. ಸಂಪೂರ್ಣ ತನ್ನನ್ನು ಶಿವನಿಗೆ ಸಮರ್ಪಿಸಿಕೊಂಡವನು. ಇಲ್ಲಿ ಒಂದು ಘಟನೆ ನಡೆಯುತ್ತದೆ. ನಿರ್ವಾಣಪ್ಪ ಮಲ್ಲಿಕಾರ್ಜುನನ ಪರಮಭಕ್ತ. ಒಂದು ಸಾರೆ ಶ್ರೀಶೈಲಕ್ಕೆ ಹೋಗಿ ಜಂಗಮದಾಸೋಹ ಮಾಡಬೇಕೆಂಬ ಆಸೆಯಾಗುತ್ತದೆ. ಹೋಳಿಗೆ ಊಟ ಮಾಡಿಸುವ ಇಚ್ಛೆಯಿಂದೇನೋ ನಿರ್ವಾಣಪ್ಪ ಶ್ರೀಶೈಲಕ್ಕೆ ಹೋಗುತ್ತಾನೆ. ಹೋಗುವಾಗ ತುಪ್ಪದ ಬಿಂದಿಗೆಯನ್ನೇ

ಮರೆತು ಶ್ರೀಶೈಲಕ್ಕೆ ಹೋಗಿರುತ್ತಾನಂತೆ. ಅಲ್ಲಿ ಮಮ್ಮಲ ಮರಗುತ್ತಾನೆ. ಇದನ್ನು ತನ್ನ ಅಂತಃಚಕ್ಷುವಿನಿಂದರಿತ ಬೊಮ್ಮಯ್ಯ ತುಪ್ಪದ ಬಿಂದಿಗೆಯನ್ನು ಬೆಳಗಾಗುವುದರಲ್ಲಿ ಮುಟ್ಟಿಸಿದನಂತೆ. ಊರವರಿಗೆಲ್ಲ ಹೋಳಿಗಿ ತುಪ್ಪ ಪ್ರಸಾದದ ವಿತರಣೆ ಮಾಡಿದನಂತೆ. ಊರ ಜನರು ಇವನ ಭಕ್ತಿಯನ್ನು ಹೊಗಳಿದರು.

ಮತ್ತೊಂದು ಸಾರೆ ನಿರ್ವಾಣಪ್ಪ ತನ್ನ ಹೊಲದಲ್ಲಿ ಬಿತ್ತಲು ಗೋದಿ ಕೊಟ್ಟರೆ ಬಂದ ಜಂಗಮರಿಗೆ ಆ ಗೋದಿಯನ್ನು ದಾಸೋಹ ರೂಪದಲ್ಲಿ ಕೊಟ್ಟುಬಿಟ್ಟರಂತೆ. ಇದರಿಂದ ಯಜಮಾನ ನಿರ್ವಾಣಪ್ಪನಿಗೆ ಕೋಪ ಬರುತ್ತದೆ. ಬೊಮ್ಮಯ್ಯ ಸಮಾಧಾನದಿಂದಲೇ ತಾನು ಬಿತ್ತಿಲ್ಲವಾದರೂ ಶಿವನ ಮೇಲಿನ ನಿಷ್ಠೆಯಿಂದಾಗಿ, ಒಂದು ವಾರದಲ್ಲಿ ಗೋದಿ ಸಸಿ ನಾಟದಿದ್ದರೆ ತನಗೆ ಶಿಕ್ಷೆಗೆ ಗುರಿ ಮಾಡಿ ಎಂದು ವಿನಂತಿಸಿಕೊಳ್ಳುತ್ತಾನೆ. ಅವನು ಹೇಳಿದಂತೆ ಬಿತ್ತದೆ ಒಂದು ವಾರದಲ್ಲಿ ಗೋದಿಯ ಸಸಿ ನಾಟಿಗೆ ಆಗಿದ್ದವಂತೆ. ಬೊಮ್ಮಯ್ಯ ಬಿತ್ತದೇ ಬೆಳೆದ ಈ ಗೋದಿ **'ಕರಿಯ ಗೋದಿ'** ಎಂದು ಹೇಳುತ್ತಾರೆ. ಈಗಲೂ ಗೋದಿಯಲ್ಲಿ ಅಕಸ್ಮಾತ್ ಒಂದಾದರೂ ಕರಿಯ ಗೋದಿಕಾಳು ಕಾಣಿಸಿದರೆ ಅದಕ್ಕೆ ಬ್ರಹ್ಮಯ್ಯನ ಗೋದಿ ಎಂದು ಕರೆಯುವ ವಾಡಿಕೆ ಇದೆಯಂತೆ.

ನಿರ್ವಾಣಪ್ಪನಿಗೆ ತನ್ನ ತಪ್ಪಿನ ಅರಿವಾಗಿ, ಬೊಮ್ಮಣ್ಣನಲ್ಲಿ ಕ್ಷಮೆ ಕೇಳಿದನಂತೆ. ಬೊಮ್ಮಯ್ಯ ಲಿಂಗೈಕ್ಯನಾಗಲು ಅವನು ಲಿಂಗೈಕ್ಯನಾದ ಸ್ಥಳದಲ್ಲಿಯೇ ಊರವರು ಗುಡಿ ಕಟ್ಟಿ ಪೂಜಿಸತೊಡಗಿದರೆಂದು ಜನ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಬಾಗಲಕೋಟೆ ಜಿಲ್ಲೆಯ ಬಾಗಲಕೋಟ ತಾಲೂಕಿನ ಇಲಾಳಗ್ರಾಮ ಈಗ ಆಲಮಟ್ಟಿಯ ಆಣೆಕಟ್ಟೆಯ ನೀರಿನಲ್ಲಿ ಮುಳುಗಿ ಹೋಗಿರುವುದರಿಂದ ಹೊಸದಾಗಿ ಆ ಶರಣನ ಗುಡಿಯನ್ನು ಸ್ಥಳಾಂತರದ ಊರಲ್ಲಿ ಕಟ್ಟಿಸಿಕೊಂಡಿದ್ದಾರೆ. ಅಮವಾಸ್ಯೆಗೆ ಸುತ್ತಲೂರಿನವರು ಭಕ್ತಿಯಿಂದ ಬಂದು ಕಾಯಿಕರ್ಪೂರ ಮಾಡಿಸುತ್ತಾರೆ. ಇಲ್ಲಿ ಊರೊಳಗೆ ಊರ ಹೊರಗೆ ಎರಡು ಗುಡಿಗಳಿವೆ. ಇಲ್ಲಿಯವರೆಗೆ ಇವನ ವಚಗಳು ದೊರೆಕಿಲ್ಲ.

ಮಾಹಿತಿ : ಮಲ್ಲಿಕಾರ್ಜುನ ಹಿರೇಮಠ, ಇಳಿಹಾಳ

***

ಬಾಗಿಲಕೋಟಿಯ ಮುಂದ ಬಾಗಿ ಕುಂಬಳನೂರಿ
ಕೂಡಿಗಿ ಮುಂದ ಕುಡಿಸಾಗಿ । ಬ್ರಹ್ಮಲಿಂಗ
ಕಳಸದ ಮ್ಯಾಲ ಹೂಮಗ್ಗಿ

ಮಠವೆಲ್ಲಿ ಮಠವೆಲ್ಲಿ ಮಠದ ಬಾಗಿಲವೆಲ್ಲಿ
ಕಟದ ರುದ್ರಾಕ್ಷಿ ಕದವೆಲ್ಲಿ । ಬ್ರಹ್ಮಲಿಂಗ
ಮಾಯವಿಲ್ಲೇನ ನನ ಮ್ಯಾಗ

***

## ಬಾಗಲಕೋಟ ತಾಲೂಕು :

### ೨. ಗುಡ್ಡದ ಸಿದ್ಧರಾಮೇಶ್ವರ :
### ಸಿದ್ರಾಮೇಶ್ವರ ಗವಿ-ಗುಡಿ

ಗುಡ್ಡದಲ್ಲಿಯೇ ಸಿದ್ರಾಮೇಶ್ವರ ಗುಡಿ ಇರುವುದರಿಂದಾಗಿ ಈ ಗುಡಿಗೆ ಗುಡ್ಡದ ಸಿದ್ರಾಮೇಶ್ವರ ಎಂದೇ ಹೆಸರು ಬಿದ್ದಿದೆ. ಈ ಗುಡಿ ತಾಲೂಕಾ ಬಾಗಲಕೋಟದಲ್ಲಿಯೆ ಬರುತ್ತದೆ. ಇಲ್ಲಿ ನೈಸರ್ಗಿಕ ಕಲ್ಲಿನ ಗವಿಗಳಿವೆ. ನೀರಿನ ಸೌಕರ್ಯ ಇದೆ. ಗರ್ಭಗುಡಿಯಲ್ಲಿ ಎರಡು ಲಿಂಗಗಳಿವೆ. ಒಂದು ಮಲ್ಲಿಕಾರ್ಜುನ ಲಿಂಗ. ಇನ್ನೊಂದು ಸಿದ್ರಾಮೇಶ್ವರ ಲಿಂಗ. ಮಲ್ಲಿಕಾರ್ಜುನ ಲಿಂಗವನ್ನು ಸಿದ್ಧರಾಮನೇ ಸ್ಥಾಪಿಸಿದ್ದಾನೆನ್ನುತ್ತಾರೆ. ಶ್ರೀ ಸಿದ್ಧರಾಮೇಶ್ವರನು ಶ್ರೀಶೈಲದಿಂದ ಬರುವಾಗ ಇಲ್ಲಿ ಕೆಲಕಾಲ ಇದ್ದು ಅನುಷ್ಠಾನ ಮಾಡಿದ್ದಾನೆಂದು ಹೇಳಲಾಗುತ್ತದೆ.



ಗುಡ್ಡದ ಸಿದ್ಧರಾಮೇಶ್ವರ ಗುಡಿ ಹೊರನೋಟ



ಗುಡ್ಡದ ಸಿದ್ಧರಾಮೇಶ್ವರ ಗವಿ-ಗುಡಿಯ ಗರ್ಭಗೃಹ

ಮಲ್ಲಿಕಾರ್ಜುನ ತನಗೆ ಪ್ರತಿಷ್ಠಾಪಿಸಲು ಕೊಟ್ಟ ಲಿಂಗಗಳನ್ನು ಅಲ್ಲಲ್ಲಿ ಪ್ರತಿಷ್ಠಾಪಿಸುತ್ತ ಹೋಗಿದ್ದಾನೆ. ಬೀಳಗಿ ತಾಲೂಕಿನ ಒಂದು ಬೆಟ್ಟಕ್ಕೂ ಸಿದ್ರಾಮೇಶ್ವರ ಬೆಟ್ಟ ಎಂದೇ ಕರೆಯುತ್ತಾರೆ. ಅಲ್ಲಿಯೂ ಸಿದ್ರಾಮೇಶ್ವರನ ದೇವಾಲಯವಿದೆ. ಸೊಲ್ಲಾಪುರದಲ್ಲಿ, ಗುಡ್ಡದ ಸಿದ್ರಾಮೇಶ್ವರ ಎಂದು ಕರೆಯಲ್ಪಡುವ ಈ ಸ್ಥಳದಲ್ಲಿ ಹಾಗೂ ಬೀಳಗಿಯ ಬೆಟ್ಟದಲ್ಲಿ ಗವಿಯಂತಿರುವ ಕೊರೆದ ಸ್ಥಳಗಳ ಒಳಗೆ ಸಿದ್ರಾಮೇಶ್ವರನೇ ಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿದ್ದಾನೆ ಎಂದು ಗುಡಿಯ ಪೂಜಾರಿ ಸಿದ್ದಪ್ಪ ಹೇಳುತ್ತಾರೆ.

ನಂತರದಲ್ಲಿ ಇತ್ತೀಚೆಗೆ ಸೊನ್ನದ ದೇಸಾಯಿ ಅವರು ಈ ಗುಡಿಯನ್ನು ನವೀಕರಿಸಿದ್ದಾರೆ. ಇವತ್ತು ಭಕ್ತರು ಈ ಗುಡಿಯ ರಕ್ಷಣೆಗಾಗಿ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಧನ್ನೂರಿನ ಎಸ್. ಎಸ್. ಅಂಗಡಿ ಅವರ ನಾಲ್ಕು ಜನ ಗಂಡು ಮಕ್ಕಳು ಗುಡಿಯ ರಕ್ಷಣೆಗಾಗಿ ಶೆಡ್ ಹಾಕಿ ಕೊಟ್ಟಿದ್ದಾರೆ.

ಗುಡ್ಡದ ಸಿದ್ರಾಮೇಶ್ವರ ಜಾತ್ರೆ ಹೊಸ್ತಲ ಹುಣ್ಣಿವೆ ಆದ ಮೇಲೆ ಬರುವ ಮಂಗಳವಾರದಂದು ನಡೆಯುತ್ತದೆ. ತೇರು ಎಳೆಯಲಾಗುತ್ತದೆ. ಬೆಣ್ಣೂರು, ಶಿರಗುಪ್ಪಿ, ತಳಗಿಹಾಳ, ಇಲಾಳ, ಹೊಲ್ದೂರು, ಲವಳೇಶ್ವರ ಎಲ್.ಟಿ. ಜಡರಾಮಕುಂಟೆ, ಕಡ್ಲಿಮಟ್ಟಿ, ಮುಡಪಲಜೀವಿ, ಅಚನೂರು, ಭಗವತಿ ಮೊದಲಾದ ಊರವರಿಗೆ ಈ ಜಾತ್ರೆಯ ಬಾಬ ಇದೆ. ತೇರಿನ ಹಗ್ಗ, ನಂದಿಕೋಲು, ಐದು ಕಳಸ, ಬಾಳಿಕಂಬ, ಕಬ್ಬು, ಸೀತನಿ, ಸಿದ್ಧರಾಮೇಶ್ವರರ ಬೆಳ್ಳಿಯ ಉತ್ಸವ ಮೂರ್ತಿಗಳೆಲ್ಲ ಅಲ್ಲಿಗೆ ಬರುತ್ತವೆ. ಸೊನ್ನದ ದೇಸಾಯಿ ಅವರು ಕೊಟ್ಟ ಬೆಳ್ಳಿಯ ಉತ್ಸವ ಮೂರ್ತಿ ಅಯ್ಯಪ್ಪ ಶಿವಯ್ಯ ಮಠಪತಿ ಅವರ ಮನೆಯಲ್ಲಿರುತ್ತದೆಯಂತೆ. ಶ್ರಾವಣ ಕಡೆಯ ಸೋಮವಾರ ನಡೆಯುವ


ಜಾತ್ರೆ, ಪಲ್ಲಕ್ಕಿ ಉತ್ಸವದ್ದಾಗಿರುತ್ತದೆ. ಈ ಪಲ್ಲಕ್ಕಿಯಲ್ಲಿ ಸಿದ್ರಾಮೇಶ್ವರನ ಬೆಳ್ಳಿಯ ಉತ್ಸವಮೂರ್ತಿಯನ್ನು ಇಟ್ಟು ಮೆರೆಸಲಾಗುತ್ತದೆ.

ಎರಡು ದಿನ ಹೊಲ್ದಾರು ಪುರೋಹಿತರಿಗೆ ಗುಡಿಯು ಪೂಜೆ ಬಿಟ್ಟುಕೊಡುತ್ತಾರಂತೆ. ಜನೆವರಿ ೧೩ ರಂದು ಭೋಗಿಯ ಪೂಜೆ ನಡೆದರೆ, ೧೪ ರಂದು ಸಂಕ್ರಮಣದ ವಿಶೇಷ ಅಭಿಷೇಕ ನಡೆಯುತ್ತದೆ. ಭಕ್ತಿಯಿಂದ ನೈವೇದ್ಯ ಅರ್ಪಣೆ ನಡೆಯುತ್ತದೆ.

ಅಪಾರ ಸಂಖ್ಯೆಯ ಭಕ್ತರು ಗುಡ್ಡದ ಸಿದ್ರಾಮೇಶ್ವರನಿಗೆ ನಡೆದುಕೊಳ್ಳುತ್ತಾರೆ. ಮದುವೆ, ಜವಳದಂತಹ ಶುಭ ಕಾರಣಗಳು ಅಲ್ಲಿ ನಡೆಯುತ್ತವೆ. ಹರಕೆ ಹೊತ್ತವರು ದೀಡ ನಮಸ್ಕಾರ ಹಾಕುತ್ತಾರೆ.

ಮಾಹಿತಿ : ಸಿದ್ದಪ್ಪ ಪೂಜಾರಿ

***



ಗುಡ್ಡದ ಸಿದ್ಧರಾಮೇಶ್ವರ ಗುಡಿಯ ಪ್ರವೇಶ ದ್ವಾರ

## ಬೀಳಗಿ ತಾಲೂಕು :

### ಬೀಳಗಿ :
### ಸಿದ್ಧರಾಮನ ಸ್ಮಾರಕ

ಬಾಗಲಕೋಟ ಜಿಲ್ಲೆಯ ಬೀಳಗಿ (ತಾಲೂಕು) ಊರಲ್ಲಿ, ಆ ಊರಿನ ಗ್ರಾಮದೇವತೆಯಾಗಿ ಪೂಜಿಸಿಕೊಳ್ಳಲ್ಪಡುವ ದೈವ ಸಿದ್ಧರಾಮೇಶ್ವರ. ಶರಣರ ಅಂದಿನ ಜಾತ್ಯಾತೀತ ಪರಿಕಲ್ಪನೆಗೆ ಮಾದರಿ ಆಗಿದೆ. ಈ ಪುರಾತನವಾದ ಸಿದ್ಧರಾಮೇಶ್ವರನಿಗೆ ಎಲ್ಲ ಕೋಮಿನವರೂ ನಡೆದುಕೊಳ್ಳುತ್ತಾರೆ. ಈ ದೇವಾಲಯ ಬೀಳಗಿಯ ಪ್ರಕೃತಿಯರಮ್ಯ ತಾಣವಾದ ಬೆಟ್ಟದ ಮೇಲೆ ಇದೆ. ಬಹಳ ವಿಶಾಲವಾದ ದೇವಾಲಯ. ಸಿದ್ಧರಾಮೇಶ್ವರ ದೇವಾಲಯದ ಅಂಗಳದ ತುಂಬಾ ಬೇರೆ ಬೇರೆ ಚಿಕ್ಕ ಚಿಕ್ಕ ದೇವಾಲಯಗಳಿವೆ. ಇಲ್ಲಿ ಆಕಳಭಾವಿ ಎಂಬ ಹೆಸರಿನಿಂದ ಕರೆಯುವ ಒಂದು ಸಣ್ಣ ಗವಿ ಇದೆ. ಅಲ್ಲದೆ ಪ್ರತ್ಯೇಕವಾದ ಮೂರು ಸಣ್ಣ ಸಣ್ಣ ಗುಡಿಗಳಿವೆ. ಒಳಗೆ ಲಿಂಗಗಳಿವೆ. ಈ ಮೂರೂ ಲಿಂಗಗಳೆದರು ಒಬ್ಬನೇ ನಂದಿ ಇರುವುದು ವಿಶೇಷವಾಗಿದೆ.

ಸಿದ್ಧರಾಮೇಶ್ವರ ದೇವಾಲಯದ ಪ್ರಮುಖ ಬಾಗಿಲು ಪೂರ್ವಕ್ಕೆ ಇದೆ. ಬಯಲಿನಲ್ಲಿದ್ದ ಈ ದೇವಾಲಯದ ಈ ಮುಖ್ಯ ದ್ವಾರವನ್ನು ಸೊನ್ನದ ದೇಸಾಯಿ ಅವರು ಕಟ್ಟಿಸಿದ್ದಾರೆ ಎಂದು ಹೇಳಲಾಗುತ್ತದೆ. ಇಲ್ಲಿಂದ ಮತ್ತೆ ಸ್ವಲ್ಪ ದೂರ ಹೋದಾಗ ಸಿದ್ಧರಾಮೇಶ್ವರ ದೇವಾಸ್ಥಾನದ ಮೆಟ್ಟಿಲುಗಳು ಇವೆ. ಮೆಟ್ಟಲೇರಿ ಹೋದಾಗ ಅಲ್ಲಿ ಆಮೆಯ ಉಬ್ಬು ಶಿಲ್ಪ ಮತ್ತು ಚೌಕಾಕಾರ ಕಂಬಗಳಿಂದ ನಿರ್ಮಾಣವಾದ ಒಂದು ಮುಖಮಂಟಪ ಇದೆ. ಮಂಟಪದೊಳಗೆ ನವರಂಗ ಇದೆ. ಅಲ್ಲಿ ನಂದಿ ಇದೆ. ಮೇಲೆ ಏಳು ಹೆಡೆ ಸರ್ಪದ ಚಿತ್ರ ಇದೆ. ಪಂಚಮುಖದ ಗೋವು ಹಾಲು ಕರೆಯುವ ದೃಶ್ಯವೊಂದು ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಉತ್ತರಾಭಿ ಮುಖವಾಗಿ ಹೋಗಿ ಎಡಕ್ಕೆ ತಿರಗಲು ಶ್ರೀ ಸಿದ್ಧರಾಮೇಶ್ವರನ ಮೂರ್ತಿ ಇದೆ. ಲಿಂಗ ಇದೆ. ಇಲ್ಲಿಯ ಇನ್ನೊಂದು ವಿಶೇಷೆಂದರೆ ಒಂದು ಗುಹಾಂತರ ದೇವಾಲಯ. ಈ ದೇವಾಲಯದ ಒಳಗೆ ೧೮ ಲಿಂಗಗಳಿವೆ. ಸಿದ್ಧರಾಮ ಲಿಂಗಗಳನ್ನು ಪ್ರತಿಷ್ಠಾಪನ ಮಾಡಿದ ಸಂಗತಿ ರಾಘವಾಂಕನ 'ಸಿದ್ಧರಾಮ ಚಾರಿತ್ರ' ದಲ್ಲಿ ಬರುತ್ತದೆ. ಅಷ್ಟೇ ಏಕೆ ಅಲ್ಲಮನ ವಚನದಲ್ಲಿಯೇ

ನಿನ್ನ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಲಿಂಗವ
ನಿನ್ನ ಎದೆಯಲ್ಲಿ ಇರಿದುಕೊಳ್ಳಾ (೧೦೪೪)



ಸಿದ್ಧರಾಮೇಶ್ವರ ಗುಡಿ

ಎಂದು ಹೇಳಿರುವುದನ್ನು ಗಮನಿಸಿದಾಗ, ಬೀಳಗಿಯ ದೇವಾಲಯದ ಗುಹೆಯಲ್ಲಿ ೧೮ ಲಿಂಗ ಪ್ರತಿಷ್ಠಾಪನೆ ಮಾಡಿದ್ದು, ಗುಡ್ಡದ ಸಿದ್ಧರಾಮೇಶ್ವರ ದೇವಾಲಯದಲ್ಲಿ ಲಿಂಗ ಸ್ಥಾಪಿಸಿದ್ದು, ಸೊನ್ನಲಾಪೂರದಲ್ಲಿ ಎಲ್ಲಿ ನೋಡಿದಲ್ಲಿ ಲಿಂಗ ಸ್ಥಾಪಿಸಿದ್ದನ್ನು ನೆನಪಿಸಿಕೊಳ್ಳಬೇಕು. ಈ ಗುಡಿ ಲಿಂಗದ ನೆಲೆಯೆ ಆಗಿರುವುದಕ್ಕೆ ಇದು ಕಾರಣವಾಗಿರಬಹುದೇನೋ!

ಬೀಳಗಿಯ ಸಿದ್ಧರಾಮೇಶ್ವರ ದೇವಾಲಯದ ಉತ್ತರಕ್ಕೆ ಇನ್ನೊಂದು ಬಾಗಿಲಿದೆ. ಇದನ್ನು ನಾಗರಾಳ ಮನೆತನದವರು ಕಟ್ಟಿಸಿದರೆಂದು ತಿಳಿದುಬರುತ್ತದೆ. ಇಲ್ಲಿ ಈ ಬಾಗಿಲಿನಿಂದ ಹೊರಬಂದಾಗಲೂ ಕಾಣುವುದು ನಿಸರ್ಗರಮಣೀಯವಾದ ಬೆಟ್ಟ. ಈ ಬೆಟ್ಟದ ಮೇಲೆ ಇನ್ನೊಂದು ದೇವಾಲಯ ಇದ್ದು, ಇದನ್ನು ಮೇಲುಸಿದ್ಧೇಶ್ವರ ಎಂದು ಕರೆಯುತ್ತಾರೆ. ಅಲ್ಲಿ ಒಂದು ಆನೆಯ ಗವಿ ಇದೆ. ಇಲ್ಲಿಯ ಲಿಂಗಗಳಿಗೆ ಶ್ರಾವಣದಲ್ಲಿ ವಿಶೇಷ ಪೂಜೆ ಇರುತ್ತದೆ. ಈ ಗುಡಿ ದಾಟಿ ಇನ್ನೂ ಮುಂದೆ ಬೆಟ್ಟ ಏರಿದರೆ ಅಲ್ಲೊಂದು ಏಕಶಿಲಾ ದೀಪಸ್ತಂಭ ಇದೆ ಎಂದು ಹೇಳುತ್ತಾರೆ.

ಒಟ್ಟಿನಲ್ಲಿ ಸಿದ್ಧರಾಮೇಶ್ವರ ಇಲ್ಲಿ ಬಂದು ತಂಗಿ ಅನುಷ್ಠಾನ ಮಾಡಿ ಹೋಗಿದ್ದಾನೆ ಎಂಬ ನಂಬಿಕೆ ಇಂದಿಗೂ ಜನರಲ್ಲಿದೆ. ಹೀಗೆ ಸಿದ್ಧರಾಮ ಅನುಷ್ಠಾನ ಮಾಡಿದ ಸ್ಥಳದಲ್ಲಿ ಅದರ ಸ್ಮಾರಕವಾಗಿಯೂ ಒಂದು ಲಿಂಗ ಇದೆ. ಆ ಲಿಂಗದ ಮೇಲೆ ಸಿದ್ಧರಾಮ ಹೋದ ನಂತರ ಹುತ್ತ ಬೆಳೆದಿತ್ತಿತ್ತಂತೆ. ಆ ಹುತ್ತಕ್ಕೆ ದಿನವೂ ಒಂದು

ಆಕಳು ಬಂದು ಹಾಲು ಕರೆದು ಹೋಗುತ್ತಿತ್ತಂತೆ. ಆಕಳದ ಯಜಮಾನನಿಗೆ ತನ್ನ ಆಕಳು ಏಕೆ ಹಾಲು ಕೊಡುತ್ತಿಲ್ಲ ಎಂಬ ಚಿಂತೆ ಕಾಡುತ್ತಿತ್ತು. ಆದರೆ ಒಂದು ದಿನ ಅದರ ಹಿಂದಿನ ರಹಸ್ಯ ಬೇಧಿಸಲು ಬೆನ್ನು ಹತ್ತಿ ಹೋಗುತ್ತಾನೆ. ದೃಶ್ಯವನ್ನು ಕಾಣುತ್ತಾನೆ. ಆಶ್ಚರ್ಯವಾಗಿ ಅಲ್ಲೇನಿದೆ ಎಂದು ನೋಡಬೇಕೆಂದು ವಿಚಾರಿಸುತ್ತಾನೆ. ತನ್ನ ಯಜಮಾನನಿಗೆ ತಾನು ಹಾಲೆರೆಯುವುದು ಗೊತ್ತಾಯಿತಲ್ಲ ಎಂದು ಅದು ಅಲ್ಲಿಯೆ ಇದ್ದ ಒಂದು ಗವಿಯೊಳಗೆ ಓಡಿ ಹೋಗುತ್ತದೆಯಂತೆ. ಅದರ ಕುರುಹಾಗಿ ಆಕಳ ಹೆಜ್ಜೆಗಳು ಮೂಡಿವೆ ಎಂದು ತೋರಿಸುತ್ತಾರೆ. ಅಲ್ಲಿ ಸುತ್ತ ನೀರು ಹರಿಯುತ್ತಿದೆಯೆಂದು ಹೇಳುತ್ತಾರೆ. ಹುತ್ತದ ಒಳಗಿರುವುದನ್ನು ಸಿದ್ಧರಾಮೇಶ್ವರ ಲಿಂಗ ಎನ್ನುತ್ತಾರೆ. ಅದನ್ನು ತಮ್ಮೂರಿನ ಆರಾಧ್ಯದೈವವಾಗಿ ಪೂಜಿಸುತ್ತಾರೆ.

ಮೊದಲು ಇಲ್ಲಿಗೆ ಹೋಗುವುದು ಕಷ್ಟದಾಯಕವಾಗಿತ್ತು. ಈಗ ಊರಿನವರಿಗೆ ಅನುಕೂಲವಾಗಲೆಂದು ದಾರಿ ಮಾಡಿದ್ದಾರೆ. ಈ ದೇವಾಲಯದ ಪೂಜೆಯನ್ನು ವರ್ಷದ ಸರತಿ ಪ್ರಕಾರ ಪರಡಿಮಠ ಹಾಗೂ ಕರಬೂಮಠ ಅವರು ಮಾಡಿಕೊಂಡು ಬರುತ್ತಿದ್ದಾರೆ. ದಿನವೂ ಎರಡು ಹೊತ್ತು ಪೂಜೆ ನಡೆಯುತ್ತದೆ. ಅಮವಾಸ್ಯೆಗೊಮ್ಮೆ ವಿಶೇಷ ಪೂಜೆ ನಡೆಯುತ್ತದೆಯಂತೆ. ಸೋಮವಾರಕ್ಕೊಮ್ಮೆಯೂ ವಿಶೇಷ ಪೂಜೆ ನೆರವೇರುತ್ತದೆ. ಇಲ್ಲಿ ಪೂಜೆಗಾಗಿ ನಿತ್ಯವೂ ಹಿರಿಹೊಳೆಯಾದ ಕೃಷ್ಣೆಯ ನೀರನ್ನು ತರುತ್ತಾರಂತೆ. ದಿನವೂ ಸೊನ್ನದ ದೇಸಾಯಿ ಅವರು ತಮ್ಮ ಮನೆಯಿಂದ ನೈವೇದ್ಯ ಕಳಿಸುವ ರೂಢಿಯನ್ನು ಹಾಕಿಕೊಂಡಿದ್ದಾರಂತೆ. ಈ ಸಿದ್ಧರಾಮೇಶ್ವರ ದೇವಾಲಯಕ್ಕೆ ಒಂದು ಹೊಲವನ್ನು ಉಂಬಳಿಯಾಗಿ ಕೊಟ್ಟಿದ್ದಾರಂತೆ. ಅಷ್ಟೇ ಅಲ್ಲ ಅದರ ಉಸ್ತುವಾರಿಗೆ ಒಬ್ಬರನ್ನು ನೇಮಿಸಿದ್ದಾರಂತೆ.

ಬೀಳಗಿ ಊರವರು ಸಿದ್ಧೇಶ್ವರ ಸಂಸ್ಥೆಯೊಂದನ್ನು ಕಟ್ಟಿಕೊಂಡಿದೆ. ಈ ಸಮಿತಿಯವರು ದೇವಸ್ಥಾನದ ಎಲ್ಲ ಮೇಲ್ವಿಚಾರಣೆ ನೋಡಿಕೊಂಡು ಹೋಗುತ್ತಾರಂತೆ. ಸಿದ್ಧರಾಮೇಶ್ವರನ ಎರಡು ಬೆಳ್ಳಿಯ ಮೂರ್ತಿಗಳಿದ್ದು ಒಂದನ್ನು ಸಮಿತಿಯವರು, ಇನ್ನೊಂದನ್ನು ಸೊನ್ನದ ದೇಸಾಯಿಯವರು ಮಾಡಿಸಿರುವರಂತೆ. ದೇಸಾಯಿ ಅವರ ವಾಡೆಯಲ್ಲಿಯೆ ಆ ಬೆಳ್ಳಿಮೂರ್ತಿ ಇರುತ್ತದೆಯಂತೆ. ಶ್ರಾವಣ ಮಾಸದ ಸೋಮವಾರಗಳು, ನಾಗರ ಅಮವಾಸ್ಯೆ, ಬೆನಕನ ಅಮವಾಸ್ಯೆಗಳಂದು ಆ ಮೂರ್ತಿಯನ್ನು ಲಿಂಗದ ಮೇಲೆ ಇಟ್ಟು ಪೂಜೆ ಮಾಡುತ್ತಾರೆ. ಸಮಿತಿಯವರು ಮಾಡಿದ ಮೂರ್ತಿಯನ್ನು ಶ್ರಾವಣ ಮಾಸದಲ್ಲಿ ನಿತ್ಯವೂ ಪೂಜಿಸುತ್ತಾರೆ. ಅಲ್ಲದೆ ಯುಗಾದಿಯ ಪಾಡ್ಯ ದೀಪಾವಳಿ ಪಾಡ್ಯದಂದು ಮಾತ್ರ ದೇವಾಲಯಕ್ಕೆ ಒಯ್ದು ಪೂಜಿಸುತ್ತಾರಂತೆ. ಆಮೇಲೆ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಒಯ್ಯುತ್ತಾರಂತೆ. ಶುಭಕಾರ್ಯಗಳಲ್ಲಿ ಈ ಮೂರ್ತಿ ತಂದು ಪೂಜಿಸುವ ನೇಮ ಇಲ್ಲಿದೆ.

ಸಿದ್ಧರಾಮೇಶ್ವರ ಕಳಸವು ಕಂಚಿನಿಂದ ಮಾಡಲ್ಪಟ್ಟಿದ್ದು, ಇದು ನೀಲಕಂಠೇಶ್ವರ ದೇವಸ್ಥಾನದಲ್ಲಿರುತ್ತದೆ. ಜಾತ್ರೆಯ ದಿನ ಮೆರವಣಿಗೆಯಲ್ಲಿ ಕಳಸ ಒಯ್ಯುತ್ತಾರೆ.

ರಥದ ಮೇಲೆ ಏರಿಸಿ ಪೂಜಿಸುತ್ತಾರೆ. ಜಾತ್ರೆ ಮರುದಿನ ಮತ್ತೆ ಕಳಸವಿರುವ ಸ್ಥಳಕ್ಕೆ ಮುಟ್ಟಿಸುವ ಜವಾಬ್ದಾರಿ ಅವರದೇ ಆಗಿತ್ತು. ಜಾತ್ರೆಯಲ್ಲಿ ಕೆಲ ಮನೆತನಗಳಿಗೆ ವಿಶೇಷ ಬಾಬು ಇರುವುದು ತಿಳಿದುಬರುತ್ತದೆ. ನಂದಿಕೋಲು ಬಾಬ ನಾಗಾರಾಳ ಮನೆತನಕ್ಕೆ, ಬಡಿಗೇರ ಮನೆತನಕ್ಕೆ ರಥದ ಮೇಲೆ ಕಳಸವಿಡುವ, ಯಳಮೇಲಿ ಅವರಿಗೆ ಕಾಯಿ ವಸ್ತ್ರ ಕೊಡುವ, ಮಠಪತಿ ಅವರ ಮನೆಯವರೇ ಕಳಸ ತರುವ, ಕುರುಹಿನಶೆಟ್ಟಿ ಅವರು ಕರಡಿ ಮಜಲನ್ನು ನಡೆಸಿಕೊಡುವ, ರಥೋತ್ಸವ ವ್ಯವಸ್ಥೆ ಮಾಡುವುದನ್ನು ಬೋವಿ ಸಮಾಜದವರು, ಪುಷ್ಪಾಲಂಕಾರದ ವೆಚ್ಚವನ್ನು ಮುಸ್ಲಿಂ ಜನಾಂಗದ ಮಹಾಲಿನಮನಿ ಕುಟುಂಬದವರು ನೆರವೇರಿಸುತ್ತಾರೆ. ಜಾತ್ರೆಗೆ ಎಲ್ಲ ಚಾಲನೆ ಸಿಗುತ್ತದೆ. ಗುರುವಾರದಿಂದ ರವಿವಾರದವರೆಗೆ ಉಚ್ಚಯ್ಯ ಎಳೆಯುತ್ತದೆ. ಸೋಮವಾರ ಜಾತ್ರೆ ಆಗುತ್ತದೆ. ಅಂದು ಆರು ಗಂಟೆಗೆ ತೇರು ಎಳೆಯುತ್ತಾರೆ. ಮದ್ದು ಸುಡುತ್ತಾರೆ. ಅಂದು ಸಿದ್ಧರಾಮೇಶ್ವರನಿಗೆ ಹುಗ್ಗಿ ನೈವೇದ್ಯ. ಮರುದಿನ (ಮಂಗಳವಾರ) ಸಾಯಂಕಾಲ ಸಜ್ಜೆ ಕಡಬು ಮಾಡಿ ಎಲ್ಲ ಬಾಬಿನವರು ತರುತ್ತಾರೆ. ದೇವರಿಗೆ ಅರ್ಪಿಸಿ, ಅದನ್ನು ಒಬ್ಬರಿಗೊಬ್ಬರು ಎಸೆದಾಡುವ ವಿಚಿತ್ರ ಸಂಪ್ರದಾಯವೊಂದಿದೆ ಎಂದು ತಿಳಿದುಬರುತ್ತದೆ. ಇದಕ್ಕೆ ಕಡಬಿನ ಕಾಳಗ ಎಂದು ಕರೆಯುತ್ತಾರೆ. ಈ ಕ್ಷೇತ್ರವನ್ನು ಸಿದ್ಧನಕೊಳ್ಳ ಎಂದು ಕರೆಯುತ್ತಾರೆ.

ಮಾಹಿತಿ : ಡಾ. ಶ್ರೀರಾಮ ಇಟ್ಟಣ್ಣವರ

***



ಸಿದ್ಧರಾಮೇಶ್ವರ ಗುಡಿಯ ಹೊರ ನೋಟ

## ಬಾದಾಮಿ ತಾಲೂಕು :

# ಪಟ್ಟದಕಲ್ಲು :
# ಗೋರಕ್ಷ ಮತ್ತು ಅನಿಮಿಷರು

ಚೆಂದುಳ್ಳ ಪಟ್ಟದಕಲ್ಲು ಇಂಬುಳ್ಳ ಗುಡಿಯಾಗ
ಬಂದಾನ ಬಸವ ಮಲಗ್ಯಾನ । ಗುಡಿಮುಂದ
ಕಂದನ ಬೇಡವರು ಕಡೆಯಿಲ್ಲೊ

### ೧. ಗೋರಕ್ಷನ ಸ್ಮಾರಕ

ಬಾದಾಮಿ ತಾಲೂಕ ಬಾಗಲಕೋಟ ಜಿಲ್ಲೆಯ ಪ್ರಕೃತಿ ಮಡಿಲಿನಲ್ಲಿ ವಾಸ್ತುಶಿಲ್ಪಕ್ಕೆ ಹೆಸರಾದ ಪಟ್ಟದಕಲ್ಲು ಎಂಬ ಗ್ರಾಮ ಇದೆ. ಈ ಸುಂದರ ಗ್ರಾಮದಲ್ಲಿ ಗೋರಕ್ಷ ಹುಟ್ಟಿದನು. ರಾಜನ ಗೋವುಗಳನ್ನು ಕಾಯುವ ಕಾಯಕ ಮಾಡಿಕೊಂಡಿದ್ದ ಕಾರಣ ಅವನಿಗೆ ಗೋರಕ್ಷ ಎಂದು ಕರೆಯುತ್ತ ಬಂದಂತಿದೆ. ಪಟ್ಟದಕಲ್ಲಿನಲ್ಲಿ ಸಿದ್ಧನಾದ ಮತ್ಸ್ಯೇಂದ್ರನಾಥನ ಶಿಷ್ಯನಾಗಿ, ದೇಹವನ್ನು ವಜ್ರದೇಹವನ್ನಾಗಿ ಮಾಡಿಕೊಂಡು ಸಿದ್ಧಯೋಗಿ ಎಂದು ಹೆಸರುವಾಸಿಯಾದನು. ಹೀಗಾಗಲು ಅವನ ಜೀವನದಲ್ಲಿ ಒಂದು ಘಟನೆ ನಡೆಯಿತೆನ್ನಲಾಗುತ್ತದೆ. ಅದೆಂದರೆ ಇವನು ಕೊಲ್ಲಾಪುರಕ್ಕೆ ಬಂದು ನೆಲೆಸುತ್ತಾನೆ. ಅಲ್ಲಿ ಒಂದು ದಿನ ರೇವಣಸಿದ್ಧನು ಗೋರಕ್ಷ ವಾಸವಾಗಿದ್ದ ಮನೆಗೆ ಪ್ರಸಾದ ಕೇಳಲು ಬರುತ್ತಾನೆ. ತಾನು ಯೋಗಸಿದ್ಧಿಯಿಂದ ಉಕ್ಕಿನಂತಾದವನೆಂಬ ಕಾರಣಕ್ಕಾಗಿಯೇನೋ, ಬಂದವರು ಯೋಗಿಗಳು ಸಿದ್ಧರು ಎಂಬುದನ್ನು ಅರಿಯದೇ ತನ್ನ ಹೆಂಡತಿ ಚಿಕ್ಕಲಕ್ಕಾದೇವಿಯಿಂದ ಉಕ್ಕಿನ ಕಠಾರಿಯನ್ನು ನೀಡಿಸುತ್ತಾನಂತೆ. ಇದರಿಂದ ಸಹಜವಾಗಿಯೆ ರೇವಣಸಿದ್ಧರಿಗೆ ಕೋಪ ಬರುತ್ತದೆ. ತನ್ನ ಹಣೆಗಣ್ಣು ತೆರೆದು ಆ ಕಠಾರಿಯನ್ನು ನೋಡಿದರೆ ಅದು ಕರಗಿ ನೀರಾಗಿ ಬಿಡುತ್ತದೆಯಂತೆ. ಆ ನೀರನ್ನು ರೇವಣಸಿದ್ಧ ಕುಡಿದು ಬಿಡುತ್ತಾನಂತೆ. ಆಗ ಆ ಕಠಾರಿ ನೇರವಾಗಿ ಗೋರಕ್ಷನ ಎದೆಗೆ ತಿವಿದು ಘಾಸಿ ಮಾಡಿತಂತೆ. ಈ ವಿಷಯ ತಿಳಿದ ಗೋರಕ್ಷನ ಇನ್ನೊಬ್ಬ ಹೆಂಡತಿ ಹಿರಿಯ ಲಕ್ಕಾದೇವಿ ಆ ಊರಿನ ಲಕ್ಷ್ಮಿಗೆ ಪ್ರಾರ್ಥಿಸಿ, ರೇವಣಸಿದ್ಧರಲ್ಲಿಗೆ ಬಂದು ತನ್ನ ತಂಗಿ, ಗಂಡ ಮಾಡಿದ ತಪ್ಪನ್ನು ಕ್ಷಮಿಸಲು ಪ್ರಾರ್ಥಿಸಿಕೊಳ್ಳುತ್ತಾಳಂತೆ. ಆಗ ರೇವಣಸಿದ್ಧನು ಗೋರಕ್ಷನ ಹೊಟ್ಟೆ ಸೇರಿದ ಕಠಾರಿಯನ್ನು ಉಗುಳಿಸಿದನಂತೆ.



ಪಟ್ಟದಕಲ್ಲು ಮಲ್ಲಿಕಾರ್ಜುನ ದೇವಾಲಯ

ತಾನು ಇಷ್ಟೆಲ್ಲ ಸಿದ್ಧಿ ಮಾಡಿದರೂ ರೇವಣಸಿದ್ಧರಷ್ಟು ಸಿದ್ಧಿ ತನಗೊಲಿದು ಬಂದಿಲ್ಲ ಎಂದು ನೊಂದು, ಶ್ರೀಶೈಲಕ್ಕೆ ಹೋಗಿ ದೇಹವನ್ನು ವಜ್ರದೇಹವನ್ನಾಗಿ ಪರಿವರ್ತಿಸಿಕೊಂಡನಂತೆ. ವಜ್ರಕಾಯದ ಅಹಂ ಮುರಿಯಲೆಂದೇ ಅಲ್ಲಮ ಗೋರಕ್ಷನನ್ನು ಒರೆಗೆ ಹಚ್ಚಿದನೆಂಬ ಸಂಗತಿಯೂ ಜನರ ಮನಸ್ಸಿನಲ್ಲಿ ಉಳಿದುಕೊಂಡು ಬಂದಿದೆ. ಗುರು ಅಲ್ಲಮನಿಂದ ಲಿಂಗದೀಕ್ಷೆ ಪಡೆದು, ಶ್ರೀಶೈಲದಲ್ಲಿಯೆ ಕಾಲ ಕಳೆಯುತ್ತಾನೆ. ಅಲ್ಲಿಯೇ ಲಿಂಗೈಕ್ಯನಾದನೆಂದೂ ಹೇಳುತ್ತಾರೆ. ಇವನು ಮಲ್ಲಿಕಾರ್ಜುನನ ಭಕ್ತನಾಗಿದ್ದು, ಪಟ್ಟದಕಲ್ಲಿನ ಮಲ್ಲಿಕಾರ್ಜುನನ ಗುಡಿಯಲ್ಲಿ ಇರುತ್ತಿದ್ದನೆಂದು ಮಾತ್ರ ತಿಳಿದುಬರುತ್ತದೆ.


**೨. ಅನಿಮಿಷ :**

ಬಾಗಲಕೋಟ ಜಿಲ್ಲಾ ಬಾದಾಮಿ ತಾಲೂಕಿನ ಪಟ್ಟದಕಲ್ಲು ಕಲೆಯ ಬೀಡು. ಈ ಊರನ್ನು ನಂದರು, ಗುಪ್ತರು, ಮೌರ್ಯರು ಆಳಿದರೆಂದೂ ನಂತರ ಸುಮಾರು ೩೪ ತಲೆಮಾರುಗಳವರೆಗೆ ಚಾಲುಕ್ಯರು ರಾಜ್ಯಭಾರ ಮಾಡಿದರು ಎಂದು ತಿಳಿದುಬರುತ್ತದೆ. ಚಾಲುಕ್ಯ ರಾಜರಲ್ಲಿ ತ್ರೈಲೋಕ್ಯ ಚೂಡಾಮಣಿ ಅವನ ಹೆಂಡತಿ ಮಹಾಲೋಕಿಗೆ ಮಗನಾಗಿ ವಸುಧೀಶನು ಹುಟ್ಟಿದನು. ತಾಯಿ-ತಂದೆಯಂತೆ ವಸುಧೀಶನೂ ಪರಮ ಲಿಂಗಭಕ್ತನು. ಶಿವನಮೇಲೆ ಅತ್ಯಂತ ಶ್ರದ್ಧೆ ನಿಷ್ಠೆಯುಳ್ಳವನಾಗಿದ್ದನು. ಮಗನಿಗೆ ಎಲ್ಲ ವಿದ್ಯೆಗಳ ಜೊತೆ, ಶಿವಜ್ಞಾನದ ಭಕ್ತಿಮಾರ್ಗವನ್ನು ಶಿವಸಂಸ್ಕಾರವನ್ನು ಕೊಟ್ಟಿದ್ದನು. ಮಗನು ಪ್ರಾಪ್ತವಯಸ್ಸಿಗೆ ಬರಲು ರಾಜ್ಯಾಡಳಿತದ ಭಾರವನ್ನು ವಸುಧೀಶನಿಗೆ ವಹಿಸಿಕೊಟ್ಟನು.

ರಾಜ್ಯಭಾರಕ್ಕಿಂತ ಶಾಂತವಾದ ಲಿಂಗಧ್ಯಾನವೇ ಅವನಿಗೆ ಹೆಚ್ಚು ಪ್ರಿಯವಾಗಿತ್ತು. ಶಿವನನ್ನು ಪೂಜಿಸದೆ ಅನ್ನವನ್ನು ಸೇವಿಸುತ್ತಿರಲಿಲ್ಲ. ಅದು ಅವನ ನಿತ್ಯ ನೇಮವಾಗಿತ್ತು. ಒಂದು ಸಾರೆ ಅವನು ಕುದುರೆ ಮೇಲೆ ಕಾಡಿಗೆ ಹೋದಾಗ, ದಣಿವಾರಿಸಿಕೊಳ್ಳಲು ನಿದ್ರೆಗೆ ಹೋಗುತ್ತಾನೆ. ವಸುಧೀಶನಿಂದ ಕುದುರೆ ತಪ್ಪಿಸಿಕೊಂಡು ಹೋಗುತ್ತದೆ. ಸುತ್ತೆಲ್ಲೆಲ್ಲೂ ಕುದುರೆ ಕಾಣಲಿಲ್ಲ. ಹಸಿವೆ ಆಯಿತು. ಆದರೆ ಲಿಂಗಪೂಜೆ ಇಲ್ಲದೆ, ಲಿಂಗಕ್ಕೆ ಪ್ರಸಾದ ಅರ್ಪಿಸದೆ ಉಣ್ಣುವಂತಿರಲಿಲ್ಲ. ಕಾನನದಲ್ಲಿ ಎಲ್ಲೂ ಲಿಂಗ ಕಾಣಲಿಲ್ಲ. ರಾಜ ವಸುಧೀಶ ಬರದೇ ಇರಲು ಮಂತ್ರಿಗಳು ಹುಡುಕುತ್ತ ಬಂದರು. ರಾಜ ಸಿಕ್ಕನು. ವಿಷಯ ತಿಳಿಯಿತು. ಲಿಂಗಶೋಧಕ್ಕೆ ಪ್ರಧಾನರು ಪರಿವಾರದವರು ಹೋದರು. ಅಲ್ಲಿ ಲಿಂಗಮುದ್ರೆಯಿದ್ದ ನಂದಿಯು ಸಿಕ್ಕಿತು. ಅರಸನನ್ನು ಮನವೊಲಿಸಿ ಅಲ್ಲಿಗೆ ಕರೆತಂದರು. ಲಿಂಗಮುದ್ರೆಯ ನಂದಿಯನ್ನು ತೋರಿಸಿ ಉಪವಾಸ ಬಿಡಲು ಪ್ರಾರ್ಥಿಸಿಕೊಂಡರು. ಆದರೆ ಅದಕ್ಕೆ ವಸುಧೀಶನ ಮನಸ್ಸು ಸಮ್ಮತಿಸಲಿಲ್ಲ. ಉಪವಾಸ ಮುಂದುವರೆಯಿತು. ಅವನ ಉಗ್ರ ಲಿಂಗನಿಷ್ಠೆ ಪರೀಕ್ಷಿಸಲು ಲಿಂಗಮುದ್ರೆಯ ನಂದಿ ಸಾಕಾರವಾಗಿ ಕಾಣಿಸಿಕೊಂಡು, ವಸುಧೀಶನಿಗೆ ಏನುಬೇಕೆಂದು ಕೇಳಿತಂತೆ. ಆಗ ವಸುಧೀಶನು ನಾನು ಲಿಂಗದರ್ಶನ ಇಲ್ಲದೆ ಪ್ರಸಾದ ಸ್ವೀಕರಿಸುವದಿಲ್ಲ ಎಂಬ ನೇಮವನ್ನು ಹಿಡಿದಿದ್ದೇನೆ. ಅದಕ್ಕಾಗಿ ತಕ್ಷಣ ನನಗೆ ಲಿಂಗದರ್ಶನವಾಗಬೇಕೆಂದು ವಿನಮ್ರವಾಗಿ ಕೇಳಿಕೊಂಡಾಗ, ನಂದೀಶನು ತನ್ನ ಪ್ರಾಣಲಿಂಗವನ್ನೇ ಇಷ್ಟಲಿಂಗವಾಗಿ ಮಾಡಿ ವಸುಧೀಶನಿಗೆ ಕರುಣಿಸಿದನಂತೆ. ಸದಾ ಅಂಗದ ಮೇಲೆ ಲಿಂಗ ಧರಿಸಲು ಹೇಳಿದನಂತೆ. ಹೀಗಾಗಿ ಲಿಂಗದೀಕ್ಷೆ ನೀಡಿದ ನಂದೀಶ್ವರನೇ ವಸುಧೀಶನಿಗೆ ಗುರುವಾದನು. ಅಂದಿನಿಂದ ಆ ಲಿಂಗವನ್ನು ಎವೆಬಡಿಯದೇ ನೋಡುತ್ತ



ಪಟ್ಟದಕಲ್ಲು ಅನಿಮಿಷ ಓಡಾಡಿದ ಸ್ಥಳ



ಅನಿಮಿಷ ಇರುತ್ತಿದ್ದನೆಂದು ಹೇಳುವ ನಂದಿಮಂಟಪ

ಪೂಜಿಸತೊಡಗಿದನು. ಹೀಗಾಗಿ ವಸುಧೀಶ ಎಂಬ ಹೆಸರು ಹೋಗಿ ಅನಿಮಿಷ ಎಂಬ ಹೆಸರು ಬಂದಿತು.

ಈ ಅನಿಮಿಷನು ಲಿಂಗವ್ಯಸನಿಯಾಗಿ ನಿಂತಲ್ಲಿ ನಿಲ್ಲದೆ ಬಳ್ಳಿಗಾವಿಯತ್ತ ಪ್ರಯಾಣ ಬೆಳಿಸಿ, ಅಲ್ಲಿ ಶಿವಯೋಗ ಸಾಧನೆ ಮಾಡುತ್ತ ಇರಲು, ಬರಬರುತ್ತ ಬಾಹ್ಯ ವ್ಯವಹಾರ ದೂರಸ್ಥನಾದನು. ತಮ್ಮ ರಾಜನ ಈ ತೂರ್ಯಸ್ಥಿತಿಯನ್ನರಿಯದ ಅವನ ಮಂತ್ರಿ ಪ್ರಧಾನರೆಲ್ಲ ಅನಿಮಿಷಯ್ಯನ ಸುತ್ತ ಭವ್ಯ ಶಿಲೆಯ ಗುಡಿಯೊಂದನ್ನು ನಿರ್ಮಾಣ ಮಾಡಿದರು. ಅದಕ್ಕೆ ಸುವರ್ಣ ಕಲಶವಿಟ್ಟರು. ಇದೊಂದು ನೆಲಮಾಳಿಗೆಯ ಗುಡಿಯೆಂದು ಹೇಳುತ್ತಾರೆ. ಗುಡಿಯ ಒಳಗೆ ಅನಿಮಿಷನು ಲಿಂಗವನ್ನು ನೋಡುತ್ತ ನೋಡುತ್ತ ಲಿಂಗದಲ್ಲಿಯೆ ಐಕ್ಯವಾದನು. ಮುಂದೆ ಅಲ್ಲಮ ಇದೇ ಅನಿಮಿಷನ ಕರಸ್ಥಲದ ಲಿಂಗಪಡೆದು ಅನಿಮಿಷನ ಶಿಷ್ಯನಾದನೆಂದು ಹೇಳುತ್ತಾರೆ.


ವಸುಧೀಶನಿಗೆ ಲಿಂಗಕೊಟ್ಟ ನಂದಿಕೇಶ್ವರನ ಹೆಸರಿನಲ್ಲಿ ಒಂದು ಊರು ಪಟ್ಟದಕಲ್ಲಿನಿಂದ ೫-೬ ಮೈಲು ದೂರದಲ್ಲಿದೆ ಎಂದು ಹಳಕಟ್ಟಿ ಅವರು ಹೇಳುತ್ತಾರೆ. ಮಹಾಕೂಟದಿಂದ ಒಂದೆರಡು ಮೈಲು ಅಂತರದಲ್ಲಿದೆ ಎನ್ನುತ್ತಾರೆ. ಅಂದರೆ ಅಲ್ಲಿಯೆ ಅನಿಮಿಷನಿಗೆ ಲಿಂಗದೀಕ್ಷೆ ಆಗಿರಬಹುದೆಂಬ ಅವರ ಊಹೆ ನಿಜವಾಗಿರಲೂ ಬಹುದು. ಆದರೆ ಆ ಊರು ಯಾವುದೆಂದು ತಿಳಿಯದು.

ಅನಿಮಿಷನು ಪಟ್ಟದಕಲ್ಲಿಗೆ ಬಂದನಂತರ ಸದಾ ತನ್ನ ಅಂಗದ ಮೇಲೆ ಲಿಂಗಧರಿಸಲು ಕಾರಣನಾದ ಗುರು ನಂದೀಶ್ವರನ (ನಂದಿಕೇಶ್ವರನ) ಸ್ಮರಣಾರ್ಥ ಒಂದು ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸುತ್ತಾನಂತೆ. ಪಟ್ಟದಕಲ್ಲಿನಲ್ಲಿ ಬಸವಣ್ಣನಿಗೆ

ಎಲ್ಲರೂ ನಡೆದುಕೊಳ್ಳುತ್ತಾರೆ. ಬಸವಣ್ಣನ ಹೆಸರಿನಲ್ಲಿ ದೊಡ್ಡ ಜಾತ್ರೆಯೇ ನಡೆಯುತ್ತದೆ. ಈ ಬಸವಣ್ಣನ ಶಿಲ್ಪ ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯ ಮುಂದಿದೆ. ಇಲ್ಲಿ ವಿರೂಪಾಕ್ಷನ ಜಾತ್ರೆ ಆಗುವುದಿಲ್ಲ, ನಂದೀಕೇಶ್ವರನ ಜಾತ್ರೆ ಆಗುತ್ತದೆ ಎಂಬುದು ವಿಶೇಷ ಸಂಗತಿಯಾಗಿದೆ.

ಬಸವಣ್ಣ ಹುಟ್ಟಲಿ ಹೊಸಪ್ಯಾಟಿ ಕಟ್ಟಲಿ
ರಸಬಾಳಿ ಕಬ್ಬು ಚಿಗಿಯಲಿ। ಪಟ್ಟದಕಲ್ಲ
ಬಸವಣ್ಣನ ತೇರ ಎಳಿಯಾಲಿ

ಶಿವರಾತ್ರಿ ಆದ ಮೇಲೆ ದಶಮಿ ತಿಥಿ ಬಂದಾಗ ನಂದಿಯ ತೇರನ್ನು ಎಳೆಯಲಾಗುತ್ತದೆ. ತೇರಿನ ಗಾಲಿಗಳು ಕಲ್ಲಿನವು. ಕಳಸದ ಮೆರವಣಿಗೆ ಆಗುತ್ತದೆ. ರಾತ್ರಿ ಹತ್ತುಗಂಟೆಗೆ ಪ್ರಾರಂಭವಾದ ಮೆರವಣಿಗೆ ಬೆಳಿಗ್ಗೆ ೮ ಗಂಟೆಯವರೆಗೂ ನಡೆಯುತ್ತದೆ. ಕಳಸವು ನಂದಿಗುಡಿಗೆ ಬಂದು ತಲುಪಿದ ಮೇಲೆ, ಇಲ್ಲಿಂದ ಆ ಕಳಸವನ್ನು ತೇರಿರುವ ಸ್ಥಳಕ್ಕೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ತೇರಿಗೆ ಕಳಸವನ್ನು ಏರಿಸಲಾಗುತ್ತದೆ. ಆ ಮೇಲೆ ತೇರನ್ನು ಎಳೆಯುತ್ತಾರೆ. ಮುಂದೆ ಮೂರನೆಯ ದಿನಕ್ಕೆ ತೇರಿನ ಕಳಸವನ್ನು ಇಳಿಸುತ್ತಾರೆ. ಮೂರೂ ದಿನ ನೈವೇದ್ಯ, ದಾಸೋಹ ದೈವದ ವತಿಯಿಂದ ನಡೆಯುತ್ತದೆ. ಪ್ರತಿ ಅಮವಾಸ್ಯೆಗೂ ಪ್ರಸಾದ ಸೇವೆ ಇರುತ್ತದೆ. ಇದು ವಿರೂಪಾಕ್ಷಗುಡಿಯ ಕಮಿಟಿಯಿಂದ ನಡೆಯುತ್ತದೆ. ಆದರೆ ಎಲ್ಲವೂ ಬಸವಣ್ಣನ ಹೆಸರಿನಿಂದಲೇ ನೆರವೇರುತ್ತದೆ ಎಂಬುದು ಇಲ್ಲಿಯ ವಿಶೇಷ.



**ಅನಿಮಿಷ ಇರುತ್ತಿದ್ದನೆಂದು ಹೇಳುವ ನಂದಿಮಂಟಪದ ನಂದಿ**

ಜಾತ್ರೆ ಬಸವಣ್ಣನ ಜಾತ್ರೆ, ತೇರು ಬಸವಣ್ಣನತೇರು ಮತ್ತು ಪ್ರಸಾದ ಬಸವಣ್ಣನ ಪ್ರಸಾದ. ಎಲ್ಲವೂ ಬಸವಮಯವಾಗಿರುತ್ತದೆ. ಈ ಸಂದರ್ಭದಲ್ಲಿ ಮನರಂಜನೆ ಕಾರ್ಯಕ್ರಮಗಳು ನಡೆಯುತ್ತವೆ. ದೈವದ ವತಿಯಿಂದ ರಂಗಮಂಟಪ ಹಾಕಿ, ಮೂರು ದಿನಗಳವರೆಗೆ ನಿರಂತರ ನಾಟಕಗಳು ನಡೆಯುತ್ತವೆ. ಅನಿಮಿಷನ ಗದ್ದುಗೆ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ ಎಂಬ ಸಂಗತಿಯೂ ಇಲ್ಲಿ ಕೇಳಿಬರುತ್ತದೆ. ಆದರೆ ಈ ನಂದಿಮಂಟಪ ಅನಿಮಿಷನಿಗಿಂತ ಪೂರ್ವದ್ದಾಗಿರುವುದರಿಂದ ಅನಿಮಿಷ ಕೆಲದಿನ ಇಲ್ಲಿ ಇದ್ದನೆಂಬ ಸಂಗತಿ ಇಟ್ಟುಕೊಂಡರೆ ಸಾಕೆಂದು ತೋರುತ್ತದೆ.

ವಚನಗಳು : ೧೧
ವಚನಾಂಕಿತ : ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗ
ಮಾಹಿತಿ : ಈರಣ್ಣ ಅಕ್ಕಿ, ಬಸಯ್ಯ ಶಂಕ್ರಯ್ಯ ಹಿರೇಮಠ

***

ಹುನಗುಂದ ತಾಲೂಕು :

## ೧. ಇಲಾಳ-೩ :

## ಬೊಮ್ಮಲಿಂಗೇಶ್ವರ ಗುಡಿ

ಏಳೂತ ನೆನೆದೇನ ಏಳೆಂಟ ದೇವರನ
ಏಳು ಬಾಗಿಲದ ಒಡೆಯನ। ಬ್ರಹ್ಮಲಿಂಗ
ಏಳುತ ನಿನ್ನ ನೆನೆದೇನ



ಬ್ರಹ್ಮಯ್ಯನ ಗುಡಿ



ಬ್ರಹ್ಮಯ್ಯನ ಗುಡಿಯ ಗರ್ಭಗೃಹದ ಶಿವಲಿಂಗ

ಬಾಗಲಕೋಟ ಜಿಲ್ಲೆಯಲ್ಲಿ ಎರಡು ಇಲಾಳಗಳು ಇವೆ. ಒಂದು ಬಾಗಲಕೋಟ ತಾಲೂಕಿನಲ್ಲಿದೆ, ಇನ್ನೊಂದು ಹುನಗುಂದ ತಾಲೂಕಿನಲ್ಲಿದೆ. ಹುನಗುಂದದಿಂದ ೧೬ ಕಿ. ಮೀ. ದೂರದಲ್ಲಿ ಈ ಇಲಾಳ ಇದೆ. ಬೊಮ್ಮಲಿಂಗೇಶ್ವರ ಗುಡಿಗಳು ಎರಡೂ ಊರುಗಳಲ್ಲಿವೆ. ಬಸವಕಲ್ಯಾಣ ತಾಲೂಕಿನ ಇಳಿಹಾಳದಲ್ಲೂ ಬೊಮ್ಮಲಿಂಗೇಶ್ವರ ಗುಡಿ ಇದೆ. ಮೂರೂ ಸ್ಮಾರಕಗಳು ಬೊಮ್ಮಯ್ಯನಿಗೆ ಸಂಬಂಧಿಸಿವೆ.

ಈಗ ದೊರೆಯುವ ಈ ಮೂರು ಊರುಗಳ ಜೊತೆಗೆ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಬಂಕಣಗಿ, ಜೇವೂರ, ಹಂಜಗಿ, ನಾಗೂರ ಮತ್ತು ರೇವೂರ ಎಂಬ ಗ್ರಾಮಗಳಲ್ಲಿ, ಅಲ್ಲದೆ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ನಾಗಣಸೂರ ಗ್ರಾಮದಲ್ಲಿ ಇಳಿಹಾಳ ಬ್ರಹ್ಮಯ್ಯನ ಗುಡಿಗಳಿವೆ ಎಂದು ತಿಳಿದು ಬರುತ್ತದೆ. ಚಿತ್ರದುರ್ಗ ಮತ್ತು ಮಂಡ್ಯ ತಾಲೂಕಿನ ಒಂದೊಂದು ಗ್ರಾಮಗಳಲ್ಲೂ ಬ್ರಹ್ಮಯ್ಯನ ಗುಡಿಗಳಿವೆ ಎನ್ನುತ್ತಾರೆ.

ಬೊಮ್ಮಯ್ಯ ಒಬ್ಬ ಕೃಷಿಕ ಎಂಬ ಸಂಗತಿಯೇ ಎಲ್ಲೆಡೆ ಸಿಗುತ್ತದೆ. ಬೊಮ್ಮಯ್ಯ ಶಿವಭಕ್ತ. ಜಂಗಮದಾಸೋಹಿ. ಇವನ ಭಕ್ತಿ ಎಂತಹದೆಂದರೆ ಬಿತ್ತಲು ಬೀಜ ಇರದಿದ್ದರೂ ಬಿತ್ತದೆಯೇ ಬೆಳೆ ಪಡೆದವನೆಂಬ ಖ್ಯಾತಿಯ ಮಾಹಿತಿ, ಶ್ರೀಶೈಲಕ್ಕೆ ತುಪ್ಪದ ಬಿಂದಿಗೆ ಒಯ್ದ ಕಥೆ, ಬರುವಾಗ ಹೋಳಿಗೆ ಪ್ರಸಾದ ತಂದು ದಾಸೋಹ ನಡೆಸಿದ್ದು, ಕೆರೆಯಲ್ಲಿ ಕರಿ ಗೋದಿ ಬೆಳೆದದ್ದು, ಶ್ರೀಶೈಲಕ್ಕೆ ಹೊರಟವರಿಗೆ ಬಿತ್ತುವ ಬೀಜವನ್ನೇ ಕೊಟ್ಟಿದ್ದು ಈ ಮೊದಲಾದ ಸಂಗತಿಗಳು ಎಲ್ಲೆಡೆ ಸಿಗುತ್ತವೆ. ಹುನುಗುಂದ ತಾಲೂಕಿನ ಇಳಿಹಾಳ ಊರಿನಲ್ಲಿ ಬ್ರಹ್ಮಯ್ಯ ಬಿತ್ತದೆ ಬೆಳೆದ ಹೊಲವೆಂದು, ಬ್ರಹ್ಮಯ್ಯನ

ಗುಡಿಯ ಬೆನ್ನಿಗೆ ಹತ್ತಿಕೊಂಡಿರುವ ಕೆರೆಯನ್ನು ತೋರಿಸುತ್ತಾರೆ. ಇದನ್ನು ಬ್ರಹ್ಮಯ್ಯನ ಹೊಲ ಎಂದೂ ಕರೆಯುತ್ತಾರೆ. ಅಲ್ಲದೆ ಈ ಊರಿನ ಗುಡ್ಡದ ನಡುವೆ ಒಂದು ಬಾವಿ ಇದ್ದು ಅದನ್ನು **'ಬ್ರಹ್ಮಯ್ಯನ ಬಾವಿ'** ಎಂದು ಕರೆಯಲಾಗುತ್ತದೆ. ಅದಕ್ಕಾಗಿ ಬ್ರಹ್ಮಯ್ಯನಿಗೆ ಸಂಬಂಧಿಸಿದ ಹೆಚ್ಚು ಕುರುಹುಗಳು ಇಲ್ಲಿಯೇ ಇರುವುದರಿಂದ ಬ್ರಹ್ಮಯ್ಯ ಈ ಇಳಿಹಾಳದವನೇ ಆಗಿದ್ದಾನೆ ಎಂಬುದು ಇಲ್ಲಿಯ ಜನಗಳ ಭಾವನೆಯಾಗಿದೆ.

ಬ್ರಹ್ಮಪ್ಪನ ಹೆಸರಿನಲ್ಲಿ ಶಿವರಾತ್ರಿಗೆ ಜಾತ್ರೆ ಮಾಡುತ್ತಾರೆ. ಏಳುಲಕ್ಷ ನಾಲ್ಕು ಸಾವಿರ ರೂಪಾಯಿಗಳ ಕಬ್ಬಿಣ ತೇರನ್ನು ಮಾಡಿಸಿದ್ದಾರೆ. ಎಲ್ಲರೂ ಸಂಭ್ರಮದಿಂದ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಜಾತ್ರೆ ನೆಪದಲ್ಲಿ ಸಾಮೂಹಿಕ ವಿವಾಹಗಳನ್ನು ಮಾಡಿಸುತ್ತಾರೆ. ಬ್ರಹ್ಮಯ್ಯ ಸತ್ತ್ಯುಳ್ಳ ಶರಣನೆಂಬ ನಂಬಿಕೆ ಜನರಲ್ಲಿ ಬಲವಾಗಿ ಇದೆ. ಯಾರಾದರು ಸುಳ್ಳು ಹೇಳಿ ಈ ಶರಣನ ಹೆಸರಿನಲ್ಲಿ ಬೇಳೆ ಬೇಯಿಸಿಕೊಳ್ಳಲು ಹೋದರೆ ಅವರಿಗೆ ಕೇಡಾಗುತ್ತದೆ ಎಂಬ ನಂಬಿಕೆ ಇದೆ. ಹೀಗಾಗಿ ಬಮ್ಮಪ್ಪನಲ್ಲಿ ಸತ್ಯ ದರ್ಮ ನ್ಯಾಯ ನೀತಿ ಇದ್ದವರೇ ಬರುತ್ತಾರೆ ಎಂದು ಹಿರಿಯರು ಹೇಳುತ್ತಾರೆ. ನಂಬಿದವರ ಕೈ ಬಿಡದ ಶರಣ ಈತ ಎಂಬ ಧನ್ಯತೆಯ ಭಾವ ಊರವರಲ್ಲಿ ಇದೆ.

ಮಾಹಿತಿ : ಬಸವಂತಪ್ಪ ಗುರುಪಾದಪ್ಪ ಅಂಗಡಿ

ನೋಡಿ : ಇಲಾಳ-೧, ತಾ. ಬಸವಕಲ್ಯಾಣ, ಜಿ. ಬೀದರ
ಇಲಾಳ-೨, ತಾ. ಬಾಗಲಕೋಟ

***



ಬ್ರಹ್ಮಯ್ಯನ ಗುಡಿಯ ಹಿಂದೆ ಇರುವ ಕೆರೆ,
ಇದನ್ನು ಬ್ರಹ್ಮಯ್ಯನ ಹೊಲವೆಂದು ಹೇಳುತ್ತಾರೆ

## ಹುನಗುಂದ ತಾಲೂಕು :

### ೨. ಕಂದಗಲ್ಲು :
### ಶಂಕರದಾಸಿಮಯ್ಯನ ಊರು

ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಆಗ್ನೇಯಕ್ಕೆ ಇರುವ ಊರು ಇಳಕಲ್ಲ (ಇಲಕಲ್ಲ). ಈ ಇಲಕಲ್ಲಿನಿಂದ ಕೇವಲ ೧೫ ಕಿ.ಮೀ. ಅಂತರದಲ್ಲಿ ಇರುವುದೆ ಕಂದಗಲ್ಲು. ನಂದವಾಡಗಿಯಿಂದ ದಕ್ಷಿಣಕ್ಕೆ ೮ ಕಿ.ಮೀ. ದೂರದಲ್ಲಿ ಕಂದಗಲ್ಲು ಇದೆ. ಇದನ್ನು 'ಕಂದಶಿಲೆ' 'ಸ್ಕಂಧಶಿಲೆ' ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಈ ಸ್ಕಂಧಶಿಲೆಯಲ್ಲಿಯೆ ಗೋವಿಂದಭಟ್ಟ (ಶಂಕರದಾಸಿಮಯ್ಯ) ಹುಟ್ಟಿದನು. ಈತನು ಶೈವಬ್ರಾಹ್ಮಣ. ಹೆಂಡತಿ ಉಮ್ಮವ್ವೆ. ಆರಾಧ್ಯದೈವ ಶಂಕರಲಿಂಗ. ಶಂಕರಲಿಂಗನ ಪರಮಭಕ್ತರಾದ ಗೋವಿಂದಭಟ್ಟ ಉಮ್ಮವ್ವೆ ಬಹಳ ವರ್ಷಗಳಾದರೂ ಮಕ್ಕಳಾಗದ ಕಾರಣ ಕಾಶಿ ವಿಶ್ವನಾಥನ ದರ್ಶನ ಪಡೆಯಲು ಹೊರಟರು. ಸ್ಕಂಧಶಿಲೆಯಿಂದ ಉತ್ತರಕ್ಕೆ ೩೦ ಮೈಲು ದೂರದಲ್ಲಿ, ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ನವಿಲೆ ಎಂಬ ಗ್ರಾಮಕ್ಕೆ ಬರುವಷ್ಟರಲ್ಲಿ ಸಂಜೆಯಾಗಿ ಅಂದಿನ ರಾತ್ರಿ ಅಲ್ಲಿಯೇ ಉಳಿದುಕೊಂಡರು.



ಶಂಕರಲಿಂಗ ಗುಡಿಯ ಗರ್ಭಗೃಹದ ಶಿವಲಿಂಗ



ಶಿಥಿಲಾವಸ್ಥೆಯಲ್ಲಿರುವ ಶಂಕರಲಿಂಗ ಗುಡಿಯ ಜೀರ್ಣೋದ್ಧಾರ

ನವಿಲೆಯು ಕೃಷ್ಣಾನದಿ ದಂಡೆಯ ಮೇಲಿರುವ ಊರು. ಈ ನದಿಯ ದಂಡೆಯ ಮೇಲೆಯೇ 'ಜಡೆಶಂಕರಲಿಂಗ' ದೇವಾಲಯ ಇದೆ. ಇದು ಕೂಡಾ ಪುರಾತನವಾದುದು. ಗೋವಿಂದಭಟ್ಟ ಈ ಜಡೆಶಂಕರಲಿಂಗನಿಗೆ ಮಾರು ಹೋಗಿ ಅಲ್ಲಿಯ ಭಕ್ತರ ಭಕ್ತಿ ಸಂಭ್ರಮ ಕಂಡು ಮುಂದಿನ ಪ್ರಯಾಣ ಬೇಡವೆಂದು ನಿರ್ಣಯಿಸಿದನು. ತನ್ನ ಹುಟ್ಟಿದ ಊರು ಕಂದಗಲ್ಲಿಗೆ ಮರಳಿ ಹೋದನು. ದಿನವೂ ತನ್ನ ಊರಿಂದ ಇಲ್ಲಿಗೆ ಬಂದರಾಯಿತು ಎಂದು ನಿಶ್ಚಯಿಸಿಕೊಂಡು ಭಕ್ತಿಜೀವನ ನಡೆಸಿದನೆಂದು ಹೇಳುತ್ತಾರೆ. ದಿನವೂ ತಪ್ಪದೆ ತನ್ನ ಊರು ಕಂದಗಲ್ಲಿನಿಂದ ನವಿಲೆಗೆ ಹೋಗಿ ಜಡೆಶಂಕರಲಿಂಗನಿಗೆ ಪೂಜೆ ಸಲ್ಲಿಸಿ ಬಂದ ಪರಮಭಕ್ತನೀತ ಎಂದು ಈ ಭಾಗದಲ್ಲಿ ಪ್ರಸಿದ್ಧನಾಗಿದ್ದಾನೆ.

ಕಂದಗಲ್ಲಿನ ಜಡೆಶಂಕರಲಿಂಗನ ಗುಡಿ ಪುರಾತನವಾದದ್ದು. ಬಹುಶಃ ಶಂಕರದಾಸಿಮಯ್ಯನ ಕಾಲಕ್ಕೆ ನಿರ್ಮಾಣವಾಗಿರಬೇಕೆನಿಸುತ್ತದೆ. ಅದು ತುಂಬಾ ಜೀರ್ಣಗೊಂಡು ಹಾಳಾಗಿ ಹೋಗಿದ್ದರಿಂದ ಅದನ್ನು ಪುನಃ ಬಿಚ್ಚಿ ಕಟ್ಟಲಾಗುತ್ತಿದೆ. ಗ್ರಾಮದವರ ಈ ಸಾಹಸವನ್ನು ಮೆಚ್ಚಲೇಬೇಕು. ಈ ಗುಡಿಯ ಮಗ್ಗುಲಿಗಿರುವ ಸೋಮನಾಥ ದೇವಾಲಯ ಸಂಪೂರ್ಣವಾಗಿ ಹಾಳಾಗಿದೆ.

ವಚನಗಳು : ೫,
ವಚನಾಂಕಿತ : ನಿಜಗುರು ಶಂಕರದೇವ
ಮಾಹಿತಿ : ವೀರೇಶ ಸಿಂಪಿ, ಮಹಾಂತೇಶ ಮಠ.


***

## ಹುನಗುಂದ ತಾಲೂಕು :

### ೩. ಇಲಕಲ್ಲ :
### ಜಡೆಶಂಕರಲಿಂಗನ ಗುಡಿ

ಬಾಗಲಕೋಟ ಜಿಲ್ಲಾ ಹುನಗುಂದ ತಾಲೂಕಿನ ಇಲಕಲ್ಲ ಗ್ರಾಮದಲ್ಲಿ ಒಂದು ಜಡೆಶಂಕರಲಿಂಗ ಗುಡಿ ಇದೆ. ಇದು ಶಾಸ್ತ್ರೀ ಅವರ ಓಣಿಯಲ್ಲಿ ವಿಜಯಮಹಾಂತೇಸ್ವರ ಮಠದ ಬಲಕ್ಕೆ ಇದೆ. ಜಡೆಯ ಶಂಕರಲಿಮಗನ ಗುಡಿಯ ಬಾಗಿಲು ಉತ್ತರಕ್ಕೆ ಇದೆ. ಬಹಳ ಎತ್ತರದಲ್ಲಿ ಈ ಗುಡಿಯನ್ನು ಕಟ್ಟಲಾಗಿದೆ. ಗುಡಿಯ ಹತ್ತಿರದಲ್ಲೇ ಹಳ್ಳ ಹರಿಯುತ್ತಿರುವುದೂ ಇದಕ್ಕೆ ಕಾರಣವಾಗಿರಬಹುದು.

ಇಲಕಲ್ಲ ಊರು ನೇಕಾರಿಕೆಗೆ ಬಣ್ಣಹಾಕುವುದಕ್ಕೆ ಬಹಳ ಪ್ರಸಿದ್ಧವಾದುದು. ಇಲ್ಲಿ ನೇಕಾರರ, ಬಣಗಾರರ ಸಂಖ್ಯೆ ಹೆಚ್ಚಿಗೆ ಇದೆ. ಬಣಗಾರ ಜನಾಂಗದ ಜನ ಶಂಕರದಾಸಿಮಯ್ಯನ ಆರಾಧ್ಯದೈವವನ್ನೇ ತಮ್ಮ ಆರಾಧ್ಯ ದೈವವೆಂದು ನಮಬಿದವರು. ನವಿಲೆಗೆ ಹೋಗಿ ತಮ್ಮ ಭಕ್ತಿಯನ್ನು ಅರ್ಪಿಸಿ ಬರುವ ಸಂಪ್ರದಾಯವನ್ನು ಹಾಕಿಕೊಂಡಿದ್ದರು. ಆ ಗುಡಿ ಈಗ ಕೃಷ್ಣಾ ನದಿಯ ನಿನ್ನೀರಿನಲ್ಲಿ ಇದೆ. ಅಲ್ಲಿ ಹೋಗಿ ಬರಲು ಅನಾನುಕೂಲ ಹೆಚ್ಚು ಎಂಬ ಕಾರಣಕ್ಕಾಗಿ ಇಲಕಲ್ಲಿನ ಜಡೆಶಂಕರಲಿಂಗನ ಭಕ್ತರಾದ ಶ್ರೀ ಸಮಾಳದ ಅವರ ಹಿರಿಯರು ಕ್ರಿ.ಶ. ೧೯೨೦ ರಲ್ಲಿ ಹಳ್ಳದ ದಂಡೆಗೆ ಗುಡಿಯೊಂದನ್ನು ನಿರ್ಮಾಣ ಮಾಡಿದರು. ಈ ರೀತಿಯಾಗಿ ಶರಣರ ಅಥವಾ ಶರಣರ ಆರಾಧ್ಯದೈವದ ಗುಡಿಗಳು ಹೆಚ್ಚು ಸಂಖ್ಯೆಯಲ್ಲಿ ಸಿಗುವುದು ಸಾಮಾನ್ಯ ಸಂಗತಿಯಾಗಿದೆ.


ಜಡೆಶಂಕರಲಿಂಗನ ಗುಡಿ

ಇಲ್ಲಿ ದಿನವೂ ಎರಡು ಹೊತ್ತು ಪೂಜೆ ನಡೆಯುತ್ತದೆ. ಸೋಮವಾರಕ್ಕೊಮ್ಮೆ ಭಜನೆ ಇರುತ್ತದೆ. ಶಿವರಾತ್ರಿಯಲ್ಲಿ ದೊಡಡ ಪ್ರಮಾಣದಲ್ಲಿ ವಿಶೇಷ

ಪೂಜೆ, ಅಭಿಷೇಕ ನಡೆಯುತ್ತವೆ. ಶ್ರಾವಣ ತಿಂಗಳ ಪೂರ್ಣ ಭಜನೆ ಮಾಡುತ್ತಾರೆ. ಜಡೆಶಂಕರಲಿಂಗನಿಗೆ ಬಣಗಾರರನ್ನು ಒಳಗೊಂಡಂತೆ ಎಲ್ಲ ಜಾತಿ ಜನಾಂಗದವರೂ ನಡೆದುಕೊಳ್ಳುತ್ತರೆ.

ಮಾಹಿತಿ : ಪ್ರೊ. ರವೀಂದ್ರ ಸಿದ್ರಾಮಪ್ಪ ಅಂಗಡಿ,
ಶ್ರೀಮತಿ ಈರಮ್ಮ ಕಕ್ಕಸಗೇರಿ

***




ಜಡೆಶಂಕರಲಿಂಗ ಗರ್ಭಗುಡಿಯ ದೃಶ್ಯ

## ಹುನಗುಂದ ತಾಲೂಕು :

### ೪. ಬೆಳಗಲ್ಲು :
### ಕೂಡಲ ಸಂಗಮೇಶ್ವರ ಗುಡಿಯ ನೀಲನಕ್ಷೆ

ಹುನಗುಂದದಿಂದ ಕೇವಲ ೧೨ ಕಿ.ಮೀ. ದೂರ ಇರುವ ಊರು ಬೆಳಗಲ್ಲು. ಹುನಗುಂದ ತಾಲೂಕಿನಲ್ಲಿ ಈ ಗ್ರಾಮ ಬರುತ್ತದೆ. ಇಲ್ಲಿಂದ ಕೂಡಲಸಂಗಮ ಸುಮಾರು ಐದಾರು ಕಿ.ಮೀ. ಮಾತ್ರ ದೂರದಲ್ಲಿದೆ. ಈ ಊರು ದೊಡ್ಡ ಕಲ್ಲು ಗುಂಪುಗಳ ಮೇಲೆಯೇ ಇದೆ ಎನ್ನುತ್ತಾರೆ. ಬಿಳಿದಾದಕಲ್ಲು>ಬೆಳಗಲ್ಲು ಆಗಿರುವಂತೆ ತೋರುತ್ತದೆ. ಊರಿನ ಮಗ್ಗಲು ದೊಡ್ಡ ಕಲ್ಲುಗಳ ಗುಡ್ಡವೇ ಇತ್ತಂತೆ. ಆದರೆ ಈಗ ಅಲ್ಲಿ ಅಂತಹ ಗುಡ್ಡ ಇತ್ತು ಎಂದು ಅನ್ನಿಸದಷ್ಟು ಅಲ್ಲಿಯ ಕಲ್ಲುಗಳೆಲ್ಲ ಮಾಯವಾಗಿವೆ. ವಿಶೇಷವಾಗಿ ಬೆಳಗಲ್ಲಿನ ಕಲ್ಲು ಬೇಕಾದ ಆಕಾರಕ್ಕೆ ಕೆತ್ತಲು ಕೊರೆಯಲು ಅತ್ಯಂತ ಉತ್ತಮವಾದ ಕಲ್ಲು ಎಂದು ಪ್ರಸಿದ್ಧವಾಗಿದೆ ಎನ್ನುತ್ತಾರೆ. ಹೀಗಾಗಿ ನಿರಂತರವಾಗಿ ಪ್ರಾಚೀನ ಕಾಲದಿಂದ ನಿನ್ನೆಮೊನ್ನೆಯವರೆಗೂ ಇಲ್ಲಿಯ ಕಲ್ಲುಗಳನ್ನು ಜನ ಸಾಗಿಸುತ್ತಲೇ ಹೋಗಿದ್ದಾರೆ. ಹೀಗಾಗಿ ಬೆಳಗಲ್ಲು ಈಗ ಬರಿದಾಗಿದೆ.

ಬೆಳಗಲ್ಲಿನ ಒಂದು ವಿಶೇಷ ಸಂಗತಿ ಎಂದರೆ, ಈ ಗ್ರಾಮದ ಕಲ್ಲುಗಳಿಂದಲೇ ಕೂಡಲ ಸಂಗಮೇಶ್ವರನ ಮಂದಿರವನ್ನು ಕಟ್ಟಲಾಗಿದೆ ಎಂಬುದು. ಅದಕ್ಕೆ ಸಾಕ್ಷಿಯಾಗಿ ನಮಗಿಂದು ಬೆಳಗಲ್ಲಿನ ಹೊರವಲಯದಲ್ಲಿ, ಸರ್ಕಾರಿ ಶಾಲೆಯ ಆವರಣದ ಹಿಮ್ಮಗ್ಗಲು ಒಂದು ಹಾಸುಬಂಡೆಯ ಮೇಲೆ ಒಂದು ನೀಲನಕ್ಷೆ ಕೆತ್ತಿರುವುದು ಕಂಡುಬರುತ್ತದೆ. ಇದು ಕೂಡಲ ಸಂಗಮನಾಥ ದೇವಾಲಯದ ನೀಲನಕ್ಷೆ ಎಂದು ಬೆಳಗಲ್ಲಿನ ಜನ ಹೇಳುತ್ತಾರೆ. ಕೂಡಲ ಸಂಗಮನಾಥನ ಗುಡಿ ಕಟ್ಟಲು ಒಂದು ನೀಲನಕ್ಷೆಯನ್ನು ತಯಾರಿಸಿ, ಅದರಂತೆ ಪ್ರತಿಯೊಂದು ಕಂಬವನ್ನು, ಕಲ್ಲನ್ನು ಇಲ್ಲಿಯೇ ಕೊರೆಯುವ ಕತ್ತರಿಸುವ ಕೆಲಸ ಮುಗಿಸಿ, ನಂತರ ಹೀಗೆ ತಯಾರಿಸಿದ ಕಲ್ಲುಗಳನ್ನು ಕಂಬಗಳನ್ನು ಕೂಡಲ ಸಂಗಮಕ್ಕೆ ಸಾಗಿಸಿ, ಸಂಗಮನಾಥನ ದೇವಾಲಯವನ್ನು ತಯಾರಿಸಲಾಗಿದೆ ಎಂಬುದು ನಮಗೆ ದೊರೆಯುವ ವಿವರಣೆಯಾಗಿದೆ.



ಕೂಡಲ ಸಂಗಮೇಶ್ವರ ಗುಡಿಯ ನೀಲನಕ್ಷೆ

ಹೀಗೆ ಇಲ್ಲಿ ಪ್ರತಿಭಾವಂತ ಶಿಲ್ಪಕಲಾ ತಜ್ಞರು ಮತ್ತು ವಾಸ್ತುಶಿಲ್ಪ ತಜ್ಞರು, ಕಲ್ಲುಗಳ ಕೆತ್ತನೆ ಮತ್ತು ಕೊರೆಯುವ ಕೆಲಸ ಮಾಡಿದ ಕುಶಲಕರ್ಮಿಗಳು ಉಳಿದುಕೊಂಡಿದ್ದ ಸ್ಥಳಗಳೆಂದು ತೋರಿಸುವ ಗವಿಗಳು ಈ ನೀಲನಕ್ಷೆವುಳ್ಳ ಕಲ್ಲಿನ ಸಮೀಪದಲ್ಲಿಯೇ ಇವೆ. ಒಂದು ದೊಡ್ಡ ವಿಶಾಲವಾದ ಚಪ್ಪಟೆಯ ಹಾಸುಗಲ್ಲು ಇವತ್ತಿಗೂ ಇದೆ. ಸುಮಾರು ಇಪ್ಪತ್ತು-ಇಪ್ಪತ್ತೈದು ಅಡಿ ಸುತ್ತಳತೆವುಳ್ಳ ದುಂಡನೆಯ ಹಾಸುಗಲ್ಲಿನ ಕೆಳಗೆ ಒಂದು ಗವಿ ಇದೆ. ನಾವು ನೋಡಿದ ಅನೇಕ ಗವಿಗಳು ಈ ಬಗೆಯಲ್ಲಿ, ಒಂದೇ ಬಂಡೆಯ ಕೆಳಗೆ ಇರುವುದು ನಮ್ಮ ಗಮನಕ್ಕೆ ಬಂದಿಲ್ಲ. ಅಂತಹ ಅಪರೂಪದ ಗವಿ ಇದೊಂದೇ ಆಗಿದೆ. ಈ ಗವಿಯಲ್ಲಿ ಸುಮಾರು ಹತ್ತಿಪ್ಪತ್ತು ಜನ ಸಹಜವಾಗಿ ವಾಸಿಸಬಹುದು. ಈ ಗವಿಯಲ್ಲಿ ನುರಿತ ಶಿಲ್ಪಕಲಾ ತಜ್ಞರು, ವಾಸ್ತುಶಾಸ್ತ್ರ ಪರಿಣಿತರು ಇದ್ದಿರಬಹುದೆಂಬುದು ಊರವರ ಅನುಮಾನ. ಹಾಗೆಯೇ ಪರಂಪರಾಗತ ಮಾಹಿತಿ ಉಳಿದುಬಂದಿದೆ ಎನ್ನುತ್ತಾರೆ. ಇದರ ಎದುರಿನಲ್ಲಿಯೇ ಇಂತಹ ಇನ್ನೊಂದು ಚಪ್ಪಟೆಯ ಹಾಸುಗಲ್ಲು ಕಾಣುತ್ತದೆ. ಅದೂ ಒಂದು ಇಂತಹ ಗವಿಯೇ ಇತ್ತು ಎನ್ನುತ್ತಾರೆ. ಇದನ್ನು 'ಕುಂಬಾರ ಸಾಲಿ' ಎನ್ನುತ್ತಾರೆ. ಆದರೆ ಈಗ ಅದು ನೆಲದಲ್ಲಿ ಮುಚ್ಚಿಹೋಗಿದೆ. ಮೇಲಿರುವ ಕಲ್ಲುಮಾತ್ರ ಕಾಣುತ್ತದೆ. ಈ ಎರಡೂ ಗವಿಗಳ ಮಗ್ಗುಲಿಗೆ ಒಂದು ದಿನ್ನೆ ಇದೆ. ಬಟ್ಟಲಾಕಾರದ ದಿನ್ನೆಯ ಒಳಮಗ್ಗಲು ಅನೇಕ ಸಣ್ಣ ಸಣ್ಣ ಗವಿಗಳಿರುವುದು ಕಾಣುತ್ತದೆ. ಇವು ಕಲ್ಲಿನ ಕೆತ್ತನೆ



ಕೂಡಲ ಸಂಗಮೇಶ್ವರ ಗುಡಿಯ ಕಂಬಗಳನ್ನು, ಸೈಜುಗಲ್ಲುಗಳನ್ನು ತಯಾರಿಸುವ ಜನ ಇರಲು ತಯಾರಿಸಿಕೊಂಡ ಗವಿಯ ಮೇಲಿನ ಬಂಡೆಗಲ್ಲು




ಬಂಡೆಗಲ್ಲಿನ ಕೆಳಗಿರುವ ಗವಿಯ ಬಾಗಿಲು

ಕೆಲಸ ಮಾಡುವ ಕುಶಲಕರ್ಮಿಗಳು ವಾಸವಾಗಿದ್ದ ಗವಿಗಳೆನ್ನುತ್ತಾರೆ. ಈ ಎಲ್ಲ ಜನರ ನಿರಂತರ ಪ್ರಯತ್ನದಿಂದ ತಯಾರಾಗುವ ಕಲ್ಲಿನ ಕಂಬಗಳನ್ನು, ಕೊರೆದು ಕೆತ್ತಿದಕಲ್ಲುಗಳನ್ನು ಇಲ್ಲಿಂದ ಸಾಗಿಸಿ ಕೂಡಲ ಸಂಗಮನಾಥನ ಗುಡಿ ಕಟ್ಟಲಾಗಿದೆ ಎನ್ನುತ್ತಾರೆ.

ಯಾವುದೇ ಕಟ್ಟಡ, ಗುಡಿ-ದೇವಾಲಯ-ಮಂದಿರ ನಿರ್ಮಾಣವಾಗುವ ಪೂರ್ವದಲ್ಲಿ, ಆ ಕಟ್ಟಡಗಳ ನಕ್ಷೆ ತಯಾರಿಸುವುದು ಸಹಜ ಮತ್ತು ಅವಶ್ಯ. ತಮ್ಮ ಕಟ್ಟಡದ ಯೋಜನೆಗಳನ್ನು ಕಲ್ಲಿನ ಮೇಲೆ ಗುರುತುಹಾಕಿಕೊಂಡು ಅದರಂತೆ ಕಟ್ಟುತ್ತಿರಬಹುದು ಎನ್ನುವುದಕ್ಕೆ ಬೆಳಗಲ್ಲಿನಲ್ಲಿರುವ ನೀಲನಕ್ಷೆ ಒಂದು ಉತ್ತಮ ಮಾದರಿಯಾಗಿ ಕಾಣಿಸುತ್ತದೆ.

ಆ ನಕ್ಷೆಯ ಕೆಳಗೆ ಸ್ಪಷ್ಟವಾಗಿ **'ಶ್ರೀ ಸಂ॥ ದೇವಾಲಯದ ನೀಲನಕ್ಷಾ'** ಎಂದು ಕೆತ್ತಲಾಗಿದೆ. ಹೀಗೆ ಹೆಸರು ಕೆತ್ತಿರುವುದು ಇತ್ತೀಚೆಗೆ. ಬಹುಶಃ ಮೊದಲಿನ ಗೆರೆಗಳು ಸವೆದು ಹೋಗುವುದನ್ನು ಗಮನಿಸಿ, ಆ ಗೆರೆಗಳನ್ನು ಪುನಃ ಕೆತ್ತಿಸಿದರೆಂದು ಹೇಳಲಾಗುತ್ತದೆ. ಹೀಗೆ ಪುನಃ ಕೆತ್ತಿದ ದಿನಾಂಕ ೨-೨-೧೯೫೧ ರಂದು ಎಂದು ನಮೂದಿಸಿದ್ದಾರೆ. ಅದರ ಜೊತೆಗೆ ಕೆಳಗೆ **'ಶ್ರೀ ಸಂ॥ ದೇವಾಲಯದ ನೀಲನಕ್ಷಾ'** ಎಂದು ಬರೆದಿದ್ದಾರೆ. ಈ ದಿನಾಂಕಕ್ಕಿಂತ ಮುಂಚೆಯೂ ಈ ನಕ್ಷೆಯನ್ನು ನೋಡಿದ ಜನ ಬೆಳಗಲ್ಲಿನಲ್ಲಿ ಇದ್ದಾರೆ. ಹೀಗಾಗಿ ಇದು ಇತ್ತೀಚೆಗೆ ಕೊರೆದ ನಕ್ಷೆ ಅಲ್ಲ, ಇದು ಪ್ರಾಚೀನ ವಾಸ್ತುಶಿಲ್ಪದ ಯೋಜನೆಯೇ ಆಗಿದೆ ಎಂಬುದು ಬೆಳಗಲ್ಲಿನ ಜನರ ಅಂಬೋಣ.



ಕೂಡಲ ಸಂಗಮೇಶ್ವರ ಗುಡಿಯ ನೀಲನಕ್ಷೆ
(ನಕ್ಷೆಯ ಗೆರೆಗಳಿಗೆ ಬಿಳಿಯ ಹುಡಿಯಿಂದ ತುಂಬಿದ ನಂತರದ ಚಿತ್ರ)

ಮಾಹಿತಿ : ಪ್ರೊ. ಜಿ. ಎಚ್. ಹನ್ನೆರಡುಮಠ,
ಶ್ರೀ ಬಸವರಾಜ ಅಮರಾವತಿ, ಶ್ರೀ ರಾಮಣ್ಣ ಚೌಡಾಪೂರ.

***

## ಹುನಗುಂದ ತಾಲೂಕು :

### ೫. ನಂದವಾಡಗಿ :

### ಉರಿಲಿಂಗದೇವ-ಉರಿಲಿಂಗಪೆದ್ದಿ ಅವರ ಸಮಾಧಿ-ಮಠ

ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಕೊನೆಯ ಊರು ಮತ್ತು ಪ್ರಾಚೀನ ಊರು ನಂದವಾಡಗಿ. ಇಲ್ಲಿ ನಂದರಾಜನ ಸಂಸ್ಥಾನವಿತ್ತು. ಹೀಗಾಗಿ ಈ ಊರಿಗೆ ನಂದವಾಡಗಿ ಎಂದು ಹೆಸರು ಬಂದಿದೆ ಎನ್ನಲಾಗುತ್ತದೆ. ನಂದರಾಜನು ಇಲ್ಲಿ ಆಳಿದನು ಎಂದು ಹೇಳುವ ಹಲವಾರು ಕುರುಹುಗಳು ಈ ಗ್ರಾಮದಲ್ಲಿವೆ. ಈ ಗ್ರಾಮವನ್ನು ಇಲ್ಲಿಯ ಮುಖ್ಯರಸ್ತೆ ದಕ್ಷಿಣ ಉತ್ತರವಾಗಿ ಸೀಳುತ್ತದೆ. ಈಗಲೂ ಉತ್ತರದ ಭಾಗವನ್ನು 'ಕಿಲ್ಲಾ' ಎಂದೇ ಕರೆಯಲಾಗುತ್ತದೆ. ಈ ಭಾಗದಲ್ಲಿಯೇ ಚಾಲುಕ್ಯರ ಕಾಲದ ಎರಡು ಹಳೆಯ ದೇವಾಲಯಗಳು ಇವೆ. ಒಂದು ಕರೆಯೂ ಇದೆ. ನಂದರಾಜನು ಕಟ್ಟಿಸಿರಬಹುದಾದ ಕಿಲ್ಲೆ, ದೇವಾಲಯ ಮತ್ತು ಕೆರೆ ಇವು



ಉರಿಲಿಂಗದೇವ, ಉರಿಲಿಂಗಪೆದ್ದಿ ಅವರ ಗದ್ದುಗೆ ಇರುವ ಮಠ



ಮಠದ ಒಳ ದೃಶ್ಯ

ಇಂದಿಗೂ ನೋಡಲು ಸಿಗುತ್ತವೆ. ರಾಜನು ಸಂಗಮೇಶ್ವರ ಭಕ್ತನು. ಊರಲ್ಲಿ ಧಾರ್ಮಿಕ ಪರಿಸರವನ್ನು ನಿರ್ಮಾಣ ಮಾಡಿದ್ದನು. ಪ್ರಜೆಗಳ ಹಿತದೃಷ್ಟಿಯಿಂದ ತನ್ನ ಕಾರ್ಯಯೋಜನೆಗಳನ್ನು ರೂಪಿಸಿಕೊಳ್ಳುವ ಉತ್ತಮ ಗುಣದ ದೊರೆಯಾಗಿದ್ದನು ಎಂದು ಹೇಳುತ್ತಾರೆ.

ಒಂದು ಸಾರೆ ನಂದರಾಜನು ಕೂಡಲಸಂಗಮಕ್ಕೆ ಸಂಗಮೇಶ್ವರ ದರ್ಶನಕ್ಕಾಗಿ ಹೋಗಿರುತ್ತಾನೆ. ಅದೇ ಸಮಯಕ್ಕೆ ಅಲ್ಲಿಗೆ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಗಂಗಾಖೇಡದಿಂದ ಮಹಾಂತಸ್ವಾಮಿಗಳು, ಅದೇ ನಾಂದೇಡ ಜಿಲ್ಲೆಯ ಅವಸೆ-ಕಂಧಾರದಿಂದ ಉರಿಲಿಂಗದೇವರು ಕೂಡಲಸಂಗಮಕ್ಕೆ ಬಂದಿರುತ್ತಾರೆ. ಈ ಇಬ್ಬರೂ ಮಹಾಜ್ಞಾನಿಗಳನ್ನು, ಶಿವಾನುಭಾವಿಗಳನ್ನು ನೋಡಿ ನಂದರಾಜನಿಗೆ ಸಂತೋಷ ಆಗುತ್ತದೆ. ಅವರಿಬ್ಬರೂ ಹಂಪೆಯ ವಿರೂಪಾಕ್ಷನ ದರ್ಶನ ಮಾಡುವ ಉದ್ದೇಶದಿಂದ ಪ್ರಯಾಣ ಬೆಳಸಿದ್ದರಂತೆ. ಇಬ್ಬರಿಗೂ ತಮ್ಮ ಊರಿಗೆ ಬರಲು ರಾಜ ವಿನಂತಿಸಿಕೊಳ್ಳುತ್ತಾನೆ. ಇವರು ಬಂದರೆ ೨೦ ಎಕರೆ ಜಮೀನು ದಾನ ಕೊಡುವುದಾಗಿಯೂ ಹೇಳುತ್ತಾನೆ. ಉದಾರ ರಾಜನ ವಿನಂತಿಯನ್ನು ಮನ್ನಿಸಿ ಇಬ್ಬರೂ ನಂದವಾಡಗಿಗೆ ಬರುತ್ತಾರೆ.

ಇಂಥ ಯೋಗಿಗಳು ಪ್ರಯಾಣ ಬೆಳೆಸುವಾಗಿನ ಉದ್ದೇಶ ಕ್ಷೇತ್ರದರ್ಶನ ಆಗಿದ್ದರೂ ಅದನ್ನೇ ಮುಖ್ಯವಾಗಿಟ್ಟುಕೊಳ್ಳದೆ, ಜನರ ಮನಸ್ಸನ್ನು ಧಾರ್ಮಿಕವಾಗಿ ಗಟ್ಟಿಗೊಳಿಸುವ ಉದ್ದೇಶವೂ ಆಗಿರುತ್ತಿತ್ತು ಎನಿಸುತ್ತದೆ. ಆಗ ಇಂದಿನಂತೆ ವಾಹನ ಸೌಕರ್ಯಗಳಿರಲಿಲ್ಲ. ಕುದುರೆ ಮೇಲೆ ಪ್ರಯಾಣ ಬೆಳೆಸುತ್ತಿದ್ದರು. ಆಗ ಎಲ್ಲಿ ಕತ್ತಲಾಗುತ್ತಿತ್ತೋ ಅಲ್ಲಿಯೇ ಆ ರಾತ್ರಿ ಕಳೆಯುತ್ತಿದ್ದರು. 'ಪಟ್ಟಣಕ್ಕೆ ಪಂಚರಾತ್ರಿ, ಹಳ್ಳಿಗೆ ಏಕರಾತ್ರಿ'

ಎಂಬ ಪದ್ಧತಿ ಇತ್ತು. ಇದು ನಂದರಾಜನ ಸಂಸ್ಥಾನವಾದ್ದ ರಿಂದ ಐದುರಾತ್ರಿ ಕಳೆದರಾಯಿತು ಎಂದುಕೊಂಡಿರಬಹುದು. ಉರಿಲಿಂಗ ದೇವರ ಜೊತೆಗಿದ್ದ ಮಹಾಂತ ಸ್ವಾಮೀಜಿ ಅವರು ತಾವು ಹಂಪೆಯ ವಿರೂಪಾಕ್ಷನಲ್ಲಿಗೆ ಹೋಗುವುದಾಗಿ ತಿಳಿಸಿ, ಉರಿಲಿಂಗದೇವರಿಗೆ ಇಲ್ಲಿಯೇ ಇರಲು ಹೇಳುತ್ತಾರಂತೆ. ಅವರ ಮಾತನ್ನು ಮನ್ನಿಸಿ ಉರಿಲಿಂಗದೇವರು ನಂದವಾಡಗಿಯಲ್ಲಿ ಉಳಿದುಕೊಳ್ಳು ತ್ತಾರೆ.

ನಂದವಾಡಗಿಯಲ್ಲಿ ಉರಿಲಿಂಗ ದೇವರು ಶಿವಭಕ್ತರನ್ನು ಒಂದೆಡೆ ಸೇರಿಸಿ ಶಿವಾನುಭವಗೋಷ್ಠಿ ನಡೆಸುತ್ತಾರೆ. ಲಿಂಗದಲ್ಲಿ ನಂಬಿಕೆ ಇಡಬೇಕೆಂಬ ಅರಿವನ್ನು ಎಲ್ಲರಲ್ಲಿ ಮೂಡಿಸಲು ಪ್ರಯತ್ನಿಸುತ್ತಾರೆ. ಅವಸೆ-ಕಂಧಾರದ ತಮ್ಮ ಮಠದಲ್ಲಿದ್ದು ಮಾಡುವ ಕಾರ್ಯಗಳನ್ನು ಇಲ್ಲಿಯೂ ಅಷ್ಟೇ ಶ್ರದ್ಧೆಯಿಂದ ಮಾಡುತ್ತಾರೆ.


ಉರಿಲಿಂಗದೇವರ ಗದ್ದುಗೆ ಮಂಟಪ

ಉರಿಲಿಂಗದೇವರ ಲಿಂಗನಿಷ್ಠೆಯ ವಿಚಾರವನ್ನು, ಸಾಧನೆಯನ್ನು ಕಂಡು ಕೇಳಿ ಜನ ಬೆರಗಾಗುತ್ತಾರೆ. ಒಂದು ಸಾರೆ ಕಂಧಾರದಲ್ಲಿದ್ದಾಗ ಮಠವನ್ನು ಬಿಟ್ಟು ಊರ ಹೊರಗೆ ನದಿ ತೀರದ ಮೇಲೆ ಒಂದು ಗುಡಿಸಲನ್ನು ಹಾಕಿಕೊಂಡು ಚಿತ್ತ ಏಕಾಗ್ರತೆಯಿಂದ ಲಿಂಗಪೂಜೆ ಮಾಡಿಕೊಳ್ಳುತ್ತಿದ್ದರಂತೆ. ಇವರ ಲಿಂಗದ ಹುಚ್ಚು ಅರಿಯದ ಜನ ನಿಜವಾಗಿಯೂ ಇವರು ಹುಚ್ಚರಿರಬಹುದೆಂದು ಭಾವಿಸಿ, ಅವರು ಲಿಂಗಪೂಜೆಯಲ್ಲಿ ಮಗ್ನರಾದಾಗ ಗುಡಿಸಲಿಗೆ ಬೆಂಕಿ ಹಚ್ಚಿದರಂತೆ. ಗುಡಿಸಲು ಉರಿದು ಹೋದರೂ ಲಿಂಗಪೂಜೆಮಾಡಿಕೊಳ್ಳುತ್ತಿದ್ದ ಉರಿಲಿಂಗದೇವರ ರೋಮ ಕೂಡ ಕೊಂಕಿರಲಿಲ್ಲ; ಹೇಗಿದ್ದರೋ ಹಾಗೇ ಲಿಂಗಪೂಜಿ ಮಾಡಿಕೊಳ್ಳುತ್ತಿದ್ದರಂತೆ. ತಪ್ಪು ಮಾಡಿದವರು ಪಶ್ಚಾತಾಪ ಪಡುತ್ತಾರೆ. ಕ್ಷಮೆ ಕೇಳುತ್ತಾರೆ. ಈ ಘಟನೆ ಎಲ್ಲೆಡೆ ಪ್ರಸಾರವಾಗಿತ್ತು. ಇಂಥ ಶರಣರಿಂದ ಲಿಂಗದೀಕ್ಷೆ ಪಡೆಯಲು ಎಲ್ಲರೂ ಉತ್ಸುಕರಾಗಿದ್ದರು.



ಉರಿಲಿಂಗದೇವರ ಗದ್ದುಗೆ

ನಂದವಾಡಗಿಯಲ್ಲಿ ಸೂರಪ್ಪ ಎಂಬ ಶ್ರೀಮಂತನು ಉರಿಲಿಂಗದೇವರಿಂದ ದೀಕ್ಷೆ ಪಡೆಯಲು ಎಲ್ಲ ಸಿದ್ಧತೆ ಮಾಡಿಕೊಂಡಿರುತ್ತಾನೆ. ಈ ಸುದ್ದಿ ಊರ ತುಂಬ ಹಬ್ಬಿರುತ್ತದೆ. ಅದು ಪೆದ್ದಣ್ಣನೆಂಬ ಕಳ್ಳನ ಕಿವಿಯನ್ನೂ ತಲುಪಿರುತ್ತದೆ. ಇವನು ಚಲವಾದಿ ಮನೆತನದವನು. ಆದರೆ ಇವನ ಗುಣವೊಂದನ್ನು ಎಲ್ಲರೂ ಮೆಚ್ಚಲೇಬೇಕು. ಅವನ ವೃತ್ತಿ ಕಳ್ಳತನ ಆಗಿದ್ದು ನಿಜ. ಆದರೆ ಅದು ಕೇವಲ ವಸ್ತುಗಳನ್ನು ಕದಿಯುವುದಕ್ಕೆ ಮಾತ್ರ ಸೀಮಿತ ಆಗಿರಲಿಲ್ಲ, ಜ್ಞಾನವನ್ನು ಜ್ಞಾನಿಗಳಿಂದ ಗುಪ್ತವಾಗಿಯೇ ಕದಿಯುತ್ತ ಸಾಗಿರಬಹುದು. ಅಂಥ ಪ್ರಸಂಗವೊಂದು ಪೆದ್ದಣ್ಣನ ಜೀವನದಲ್ಲಿ ನಡೆಯುತ್ತದೆ. ಮಧ್ಯರಾತ್ರಿಯಲ್ಲೂ ದೀಪ ಉರಿಯುವ ಸೂರಪ್ಪನ ಮನೆ ನೋಡಿ ಪೆದ್ದಣ್ಣ ಮಾಳಿಗೆ ಏರುತ್ತಾನೆ. ಬೆಳಕಿಂಡಿಯಿಂದ  ಗುರು ಉರಿಲಿಂಗದೇವರು ಮಂತ್ರೋಪದೇಶದೊಂದಿಗೆ ಸೂರಪ್ಪನಿಗೆ ಲಿಂಗದೀಕ್ಷೆ ಮಾಡುವುದನ್ನು ಕಾಣುತ್ತಾನೆ.  ಆನಂತರ ಇಷ್ಟಲಿಂಗದ ಮಹತ್ವ ಬಣ್ಣಿಸುವುದನ್ನು ಕೇಳುತ್ತಾನೆ.  ಕೇಳಿದ್ದನ್ನೆಲ್ಲ ಕೊಡುವ ಇಷ್ಟಲಿಂಗ ಅಂಗದ ಮೇಲೆ ಇದ್ದಾಗ, ಬೇರೆ ದೈವದ ಆಸೆ ಬೇಡ. ಸದಾಚಾರ ಸದ್ವರ್ತನೆಯೆ ನಮ್ಮನ್ನು ರಕ್ಷಿಸುತ್ತದೆ ಎಂದು ಉಪದೇಶಿಸುತ್ತಾರೆ ಉರಿಲಿಂಗದೇವರು.


ಇದನ್ನೆಲ್ಲ ಗುಪ್ತವಾಗಿ ಕೇಳುತ್ತಿದ್ದ ಪೆದ್ದಣ್ಣನಿಗೆ ರೋಮಾಂಚನ ಆಗುತ್ತದೆ. ಈ ಉರಿಲಿಂಗದೇವರ ಮನವೊಲಿಸಿಕೊಂಡು ತಾನೂ ಲಿಂಗದೀಕ್ಷೆ ಪಡೆಯಬೇಕೆಂದು ನಿಶ್ಚಯಿಸುತ್ತಾನೆ. ಲಿಂಗ ಬೇಡಿದ್ದನ್ನು ಕೊಡುವುದಾದರೆ ಕಳ್ಳತನ ಆದರೂ ಏಕೆ? ಎಂದು ಕಳ್ಳತನವನ್ನು ಅಂದಿನಿಂದಲೇ ಬಿಡುತ್ತಾನೆ. ಗುರುಗಳ ಮನೆಗೆ ಕಟ್ಟಿಗೆ ಕಡಿದು ತಂದು ಹಾಕುವ ಸೇವೆಯಲ್ಲಿ ತೊಡಗುತ್ತಾನೆ. ಗುರುಗಳಿಗೆ ಯಾರು ದಿನವೂ ಕಟ್ಟಿಗೆ ತಂದು ಹಾಕುತ್ತಿದ್ದಾರೆ ಎಂಬುದನ್ನು ತಿಳಿಯುವ ಕುತೂಹಲ ಹೆಚ್ಚುತ್ತದೆ. ಒಂದು ದಿನ ಕಾದು ಅವನನ್ನು ಹಿಡಿಯುತ್ತಾರೆ. ದಿನವೂ ತಂದು ಹಾಕಿದ ಕಟ್ಟಿಗೆಗೆ ಬೆಲೆ

ಕೊಡಲು ಮುಂದಾಗುತ್ತಾರೆ. ಆಗ ಪೆದ್ದಣ್ಣ ತನಗೆ ದುಡ್ಡು ಬೇಡ, ಸೂರಪ್ಪನಂತೆ ನನಗೂ ಲಿಂಗಬೇಕು ಎಂಬ ಬಯಕೆಯನ್ನು ಗುರುಗಳ ಮುಂದೆ ಇಡುತ್ತಾನೆ. ಶಿಷ್ಯನಾಗಲು ಲಿಂಗದೀಕ್ಷೆ ಪಡೆಯಲು ಯೋಗ್ಯನೋ ಅಲ್ಲವೋ ಎಂದು ಪರೀಕ್ಷಿಸದೆ ಲಿಂಗದೀಕ್ಷೆ ಕೊಡಲಾಗದು ಎಂದು ನಿಷ್ಠುರವಾಗಿಯೆ ಪೆದ್ದಣ್ಣನಿಗೆ ಹೇಳುತ್ತಾರೆ. ಆದರೂ ಪೆದ್ದಣ್ಣ ಕಟ್ಟಿಗೆ ಹೊರೆ ಹಾಕುವುದನ್ನು ಮಾತ್ರ ನಿಲ್ಲಿಸುವದಿಲ್ಲ. ಕೊನೆಗೆ ಲಿಂಗಕ್ಕಾಗಿ ಪೀಡಿಸುವ ಪೆದ್ದಣ್ಣನಿಗೆ ಬೇಸರದಿಂದ, ಸಿಟ್ಟಿಗೆ ಬಂದು, ಅಲ್ಲಿಯೆ ಬಿದ್ದ ಕಲ್ಲನ್ನು ತಗೆದುಕೊಂಡು ಪೆದ್ದಣ್ಣನಿಗೆ ಕೊಟ್ಟು 'ಘೇ ದಗಡಿ ಜಾ' (ಕಲ್ಲನ್ನು ತಕ್ಕೊ) ಎಂದು ಹೇಳುತ್ತಾರೆ. ಆ ಕಲ್ಲು ಪೆದ್ದಣ್ಣನ ಪಾಲಿಗೆ ಲಿಂಗವಾಗುತ್ತದೆ. 'ಘೇ ದಗಡಿ ಜಾ' ಎಂಬುದೇ ಮಂತ್ರ ಆಗುತ್ತದೆ. ಭಕ್ತಿಯಿಂದಲೇ ಪೂಜಿಸುತ್ತ ಹೋಗುತ್ತಾನೆ. ತಾನೇ ಲಿಂಗ–ಲಿಂಗವೇ ತಾನು ಎಂಬಂಥ ಅವಿನಾಭಾವ ಸಂಬಂಧ ಲಿಂಗದೊಂದಿಗೆ ಪೆದ್ದಣ್ಣನಿಗೆ ಬೆಳೆಯುತ್ತದೆ.

ಒಂದು ಸಾರೆ ನಂದವಾಡಗಿಯಲ್ಲಿ ನೀರಿನ ಬರ ಕಾಣಿಸಿಕೊಳ್ಳುತ್ತದೆ. ಊರವರೆಲ್ಲ ಸರತಿಯಂತೆ ಕೆರೆ ಕಡಿಯುವ ಕೆಲಸ ಮಾಡಬೇಕೆಂದು ನಿರ್ಣಯ ಆಗುತ್ತದೆ. ಅದರಂತೆ ಉರಿಲಿಂಗದೇವರ ಪಾಳೆಯೂ ಬರುತ್ತದೆ. ಹರಿಜನ ಕೇರಿಯಲ್ಲಿ ಹಾಯ್ದು ಹೋಗುತ್ತಿರುವ ಗುರು ಉರಿಲಿಂಗದೇವರನ್ನು ಕಂಡ ಪೆದ್ದಣ್ಣನು ಗುರುಗಳನ್ನು ನಿಲ್ಲಿಸಿ, ವಿಷಯ ಕೇಳಿ, ತಾನೇ ಹೋಗುವುದಾಗಿ ಹೇಳಿ, ಆಶೀರ್ವಾದ ಪಡೆದುಕೊಂಡು ಹೊರಡುತ್ತಾನೆ. ಅಲ್ಲಿ ಒಂದು ದೊಡ್ಡ ಕಲ್ಲು ಇರುತ್ತದೆ. ಅದನ್ನು ತಗೆದರೆ ನೀರು ಬರುತ್ತದೆ ಎಂಬ ಹೇಳಿಕೆಗಳು ಆಗಿರುತ್ತವೆ. ಜಲ ಶೋಧಕರೂ ಹಾಗೇ ಹೇಳಿರುತ್ತಾರೆ. ಪೆದ್ದಿ ಗುರು ಕೊಟ್ಟ ಲಿಂಗವನ್ನು, ಅವರು ಹೇಳಿದ ಮಂತ್ರ ಪಠಿಸುತ್ತ, 'ಜಾ ದಗಡಿ




ಉರಿಲಿಂಗಪೆದ್ದಿ ಗದ್ದುಗೆ



ಉರಿಲಿಂಗಪೆದ್ದಿ ವಂಶಸ್ಥರು, ತಮ್ಮ ಮನೆಯ ಮುಂದೆ

ಜಾ' (ಕಲ್ಲೇ ಹೋಗು) ಎಂದು ಹೇಳಿ ನೀರಿನ ಜರಿಗೆ ಸೆಲೆ ಅಡ್ಡವಾಗಿರಬಹುದಾದ ದೊಡ್ಡ ಕಲ್ಲುಬಂಡೆಯನ್ನು ಲಿಂಗದ ಸಹಾಯದಿಂದ ಸರಳವಾಗಿ ಪಕ್ಕಕ್ಕೆ ಸರಿಸಿ ಬಿಡುತ್ತಾನೆ. ನೀರಿನ ಬುಗ್ಗೆ ಚಿಮ್ಮಿ ಬರುತ್ತದೆ. ಕೆರೆತುಂಬ ನೀರೆ ನೀರಾಗುತ್ತದೆ. ಎಲ್ಲರೂ ಬೆಕ್ಕಸಬೆರಗಾಗಿ ನೋಡುತ್ತಾರೆ. ಪೆದ್ದಣ್ಣನ ಲಿಂಗ ನಿಷ್ಠೆ, ಶ್ರದ್ಧೆಯನ್ನು ಮೆಚ್ಚಿಕೊಂಡು ಹೊಗಳುತ್ತಾರೆ.

ಊರ ತುಂಬ ಸುದ್ದಿ ಹಬ್ಬುತ್ತದೆ. ನಂದರಾಜನಿಗೆ ಸಂತೋಷವಾಗುತ್ತದೆ. ಗುರುಗಳಾದ ಉರಿಲಿಂಗ ದೇವರಿಗಂತೂ ಶಿಷ್ಯನೆಂದು ಸ್ವೀಕರಿಸದೆ ಇದ್ದರೂ ಕಲ್ಲು ಕೊಟ್ಟರೆ, ಅದನ್ನೇ ಲಿಂಗವೆಂದು, ನನ್ನ ಬಾಯಿಂದ ಉಚ್ಚರಿತವಾದ ಪದಗಳನ್ನೇ ಮಂತ್ರವೆಂದು ಭಾವಿಸಿ ಪೂಜಿಸಿದ ಪರಿಣಾಮವೇ ಹೀಗಿರುವಾಗ, ಉರಿಲಿಂಗಪೆದ್ದಿಗೆ ನಿಜವಾಗಿ ಶಾಸ್ತ್ರೋಕ್ತವಾಗಿ ಲಿಂಗದೀಕ್ಷಾ ಸಂಸ್ಕಾರವನ್ನು ಕೊಟ್ಟಿದ್ದರೆ ಇನ್ನು ಹೇಗಿರುತ್ತಿತ್ತೊ? ಎಂದು ಮನದಲ್ಲಿಯೆ ಮರಗುತ್ತಾರೆ. ಶಿಷ್ಯನ ಮೇಲೆ ಅಭಿಮಾನ ಹೆಚ್ಚುತ್ತದೆ. ಅವನನ್ನು ಪ್ರೀತಿಯಿಂದ ಬರಮಾಡಿಕೊಂಡು, ವಿಧಿವಿಧಾನಗಳೊಂದಿಗೆ ಲಿಂಗದೀಕ್ಷಾ ಸಂಸ್ಕಾರವನ್ನು ಕೊಡುತ್ತಾರೆ. ಅಂದಿನಿಂದ ಪೆದ್ದಣ್ಣ ಹೋಗಿ ಉರಿಲಿಂಗಪೆದ್ದಿ ಎಂದು ಮರುನಾಮಕರಣಗೊಳ್ಳುತ್ತಾನೆ.

ಉರಿಲಿಂಗದೇವರು ತಮ್ಮ ಪೀಠಕ್ಕೆ ಅವನನ್ನು ಕುಳ್ಳಿರಿಸಿ ದೊಡ್ಡ ಸ್ಥಾನ ಕೊಟ್ಟು, ಮಠದ ಅಧಿಪತಿ ಎಂದು ಸಾರುತ್ತಾರೆ. ಗುರುವಿನ ಸಂಪ್ರದಾಯವನ್ನು ನಡೆಸಿಕೊಂಡು ಹೋಗುವ ಪ್ರತಿಜ್ಞೆಯನ್ನು ಶಿಷ್ಯನಿಂದ ಪಡೆಯುತ್ತಾರೆ. ಮುಂದೆ ಅವತ್ತು ಅನಿವಾರ್ಯವಾಗಿದ್ದ ಭಾಷಾಧ್ಯಯನಕ್ಕೆ (ಸಂಸ್ಕೃತ) ಪ್ರೇರಣೆ ಕೊಡುತ್ತಾರೆ. ಉತ್ಸುಕತೆಯಿಂದ ಗುರುವಿನ ಆಜ್ಞೆಯನ್ನು ಪರಿಪಾಲಿಸುತ್ತಾನೆ. ಅವರ

ಮಾರ್ಗದರ್ಶನದಂತೆ ಗಂಭೀರವಾಗಿ ಅಧ್ಯಯನ ಮಾಡುತ್ತಾನೆ. ಕನ್ನಡ-ಸಂಸ್ಕೃತ ಎರಡೂ ಭಾಷೆಗಳಲ್ಲಿ ಸಮಾನ ಪ್ರಭುತ್ವವನ್ನು ಸಂಪಾದಿಸಿಕೊಳ್ಳುತ್ತಾನೆ. ಉರಿಲಿಂಗದೇವರು, ಉರಿಲಿಂಗಪೆದ್ದಿಗಳು ವಾಸಿಸಿದ ಮನೆಯೇ ಇಂದು ಮಠವಾಗಿದೆ.

ಈ ಮಠ ನಿಜವಾಗಿಯೂ ಉರಿಲಿಂಗದೇವ-ಉರಿಲಿಂಗಪೆದ್ದಿಗಳ ಮಠವಾಗಿದೆ. ಆದರೆ ಇದನ್ನು ಈಗ ಮಹಾಂತೇಶ ಮಠವೆಂದು ಕರೆಯಲಾಗುತ್ತಿದೆ. ಈ ಮಠದಲ್ಲಿ ಉರಿಲಿಂಗದೇವರ ಮತ್ತು ಉರಿಲಿಂಗಪೆದ್ದಿಗಳ ಗದ್ದುಗೆಗಳು ಇವೆ. ಉರಿಲಿಂಗದೇವರ ಗದ್ದುಗೆಮೇಲೆ ಇತ್ತೀಚೆಗೆ ಮಂಟಪವೊಂದನ್ನು ನಿರ್ಮಿಸಲಾಗಿದೆ. ಉರಿಲಿಂಗ ಪೆದ್ದಿಯ ಗದ್ದುಗೆಯನ್ನು ಈಗ ಗೋಡೆಯೊಳಗೆ ಹಾಕಿ ಕಟ್ಟಲಾಗಿದೆ. ಗದ್ದುಗೆ ಮೇಲಿನ ಲಿಂಗದ ಗೋಳಕ ಮಾತ್ರ ಒಂದು ಮಾಡದಲ್ಲಿ ಕಾಣುವಂತೆ ಮಾಡಲಾಗಿದೆ. ಈ ಲಿಂಗದ ಎತ್ತರ ಸುಮಾರು ಐದು ಅಡಿಗಿಂತಲೂ ಹೆಚ್ಚಿಗಿದೆ ಎಂದು ಮಠದ ಸ್ವಾಮೀಜಿ ಅವರೇ ಹೇಳುತ್ತಾರೆ. ಆದರೆ ಅದೆಲ್ಲ ಗೋಡೆಯೊಳಗೆ ಮುಚ್ಚಿ ಹೋಗಿದೆ. ಒಂದು ಅಡಿಯಷ್ಟು ಲಿಂಗ ಮಾತ್ರ ಕಾಣುತ್ತದೆ.

ಉರಿಲಿಂಗಪೆದ್ದಿಯ ವಂಶದವರೆಂದು ಹೇಳಿಕೊಳ್ಳುವ ಒಂದು ಕುಟುಂಬ ಈಗಲೂ ನಂದವಾಡಗಿಯ ಹರಿಜನ ಕೇರಿಯಲ್ಲಿದೆ. ಈ ಮನೆತನದವರೇ ಇಂದಿಗೂ ಮಠದ ಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿರುವುದು ಒಂದು ವಿಶೇಷ. ನಿತ್ಯವೂ ಮಠದ ಕಸ ಗುಡಿಸುವುದು, ಅಗತ್ಯವಾದ ಉರುವಲು ಇತ್ಯಾದಿಗಳನ್ನು ಸಜ್ಜುಗೊಳಿಸಿಕೊಡುವುದು ಇವರ ದೈನಂದಿನ ಕೆಲಸವಾಗಿದೆ. ಈ ಮನೆಯ ಮಗ ಗುರುಲಿಂಗ ಎನ್ನುವ ಹೆಸರಿನ ಯುವಕ ಇವತ್ತಿಗೂ ಮಠದಲ್ಲಿಯೇ ಮಲಗುತ್ತಾನೆ. ನಸುಕಿನಲ್ಲಿಯೇ ಮಠವನ್ನು ಕಸಗುಡಿಸಿ ಸ್ವಚ್ಛಗೊಳಿಸುವ ಕೆಲಸಮಾಡುತ್ತಾನೆ. ಮಠದ



ಉರಿಲಿಂಗಪೆದ್ದಿ ನೀರು ಬರಿಸಿದ ಕೆರೆ



ನಂದವಾಡಗಿಯಲ್ಲಿರುವ ಸಂಗಮನಾಥ ದೇವಾಲಯ

ಜಾತ್ರೆಯ ಸಮಯದಲ್ಲಿ ನಡೆಯುವ ದಾಸೋಹಕ್ಕಾಗಿ ಕಟ್ಟಿಗೆ ಕಡಿಯುವ ಕೆಲಸ ಮಾಡುತ್ತಾನೆ. ಈ ಎಲ್ಲ ನೇಮವನ್ನು ೯೦೦ ವರ್ಷಗಳಿಂದ ತಪ್ಪದೆ ಪಾಲಿಸಿಕೊಂಡು ಬರುತ್ತಿರುವುದಾಗಿ ಆ ಮನೆಯ ಹೆಣ್ಣು ಮಗಳು ಅಭಿಮಾನದಿಂದ ಹೇಳುತ್ತಾಳೆ. ಮಠದ ವಿಶೇಷವಾದ ಬಾಬು (ಚಾಜ) ಅವರಿಗಿದೆ. ಹೀಗಾಗಿ ಬೇರೆ ಯಾರೂ ಈ ಕೆಲಸ ಮಾಡುವದಿಲ್ಲ. ಮಠದವರು ಅದಕ್ಕೆ ಪ್ರತಿಯಾಗಿ ಧಾನ್ಯ ಬಟ್ಟೆ-ಬರೆ ಕೊಡುತ್ತಾರೆ. ಚಲವಾದಿ ಮನೆತನದವರೆಂದು ಹೇಳುವ ಉರಿಲಿಂಗಪೆದ್ದಿಯ ವಂಶಿಕರಿಗೆ ಮಠದವರು ಈಗಲೂ ಗೌರವದಿಂದ ಕಾಣುವುದು ವಿಶೇಷವೇ ಸರಿ.

ಶ್ರಾವಣದಲ್ಲಿ ಭಜನೆ, ವಿಶೇಷ ಪೂಜೆ ನಡೆಯುತ್ತದೆ. ಎಲ್ಲ ವರ್ಗ ವರ್ಣದ ಜನ ಮಠಕ್ಕೆ ನಡೆದುಕೊಳ್ಳುತ್ತಾರೆ. ಗೌರಿ ಹುಣ್ಣಿವೆಗೆ ನಂದವಾಡಗಿಯಲ್ಲಿ ಜಾತ್ರೆ ಆಗುತ್ತಧೆ. ಮೂಲದಲ್ಲಿ ಈ ಮಠ ಉರಿಲಿಂಗಪೆದ್ದಿ ಮಠವೆಂದೆ ಪ್ರಸಿದ್ಧಿ ಪಡೆದಿತ್ತು. ಇತ್ತೀಚೆಗೆ ಇದನ್ನು ಮಹಾಂತೇಶ ಮಠ ಎಂದು ಕರೆಯುತ್ತಾರೆ. ಗೌರಿ ಹುಣ್ಣಿವೆಗೆ ನಡೆಯುವ ಜಾತ್ರೆಯನ್ನು ಬಸಲಿಂಗ ಶಿವಯೋಗಿಗಳ ಜಾತ್ರೆ ಎಂದು ಕರೆಯುತ್ತಾರೆ. ಆ ಜಾತ್ರೆಯ ಸಮಯದಲ್ಲಿ ಒಂದು ದಿನ ಉರಿಲಿಂಗದೇವ, ಉರಿಲಿಂಗಪೆದ್ದಿ ಜಾತ್ರಾ ಆಚರಣೆಗಳನ್ನು ಮಾಡಲಾಗುತ್ತದೆ.

ಮಾಹಿತಿ : ಪೂಜ್ಯ ಶ್ರೀ ಮಹಾಂತಲಿಂಗ ಶಿವಾಚಾರ್ಯರು, ಮಹಂತೇಶ್ವರ ಮಠ ನಂದವಾಡಗಿ

***

ಹುನಗುಂದ ತಾಲೂಕು :

## ೬. ಕೂಡಲಸಂಗಮ
## ಕೂಡಲಸಂಗಮನಾಥ ದೇವಾಯಲ

ಹುಟ್ಟಿಬಂದನು ಬಸವ ಕಟ್ಟುದಕೆ ಕಲ್ಯಾಣ
ಬಿಟ್ಟು ಬಾಗೋಡಿ ನಾಗಾಯಿ । ಒಡಗೂಡಿ
ಮೆಟ್ಟು ಮಾಡಿದನು ಸಂಗಮಕೆ

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕ । ಚೆಲ್ಲುದಕ
ಸೊಲ್ಲೆತ್ತಿ ಜನವು ಹಾಡುವುದು

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರು ಬೀಜ । ಶಿವಮತಕೆ
ಬಸವ ಓಂಕಾರ ಶಿವನಾಮ



ಸಂಗಮನಾಥನ ಗರ್ಭಗೃಹದ ಲಿಂಗ



ಬಸವಣ್ಣನವರ ಐಕ್ಯಮಂಟಪ

ಹರ ಹರನೆ ವರಸಂಗ ಗುರು ಎನಗೆ ವರಸಂಗ
ಕರುಣ ನಿಧಿ ಹರನೆ ಸಂಗಮನೆ । ಎಂದೆನುತ
ಕರಮುಗಿದ ಬಸವ ಬಯಲಾದ



ಬಸವಣ್ಣನವರ ಐಕ್ಯಮಂಟಪದ ಒಳದೃಶ್ಯ

ಕೂಡಲಸಂಗಮ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಪವಿತ್ರ ಕ್ಷೇತ್ರ. ಕೃಷ್ಣಾ ಮಲಪ್ರಭಾ ನದಿಗಳ ಸಂಗಮ ಇಲ್ಲಿದೆ. ಹೀಗಾಗಿ ಈ ಊರಿಗೆ ಕೂಡಲಸಂಗಮ ಎಂಬ ಹೆಸರು ಬಂದಿರಬೇಕು. ಪ್ರಾಚೀನ ಕಾಲದಲ್ಲಿ ಶೈವವಿದ್ಯಾಕೇಂದ್ರ ಇದಾಗಿತ್ತು. ಸಂಗಮನಾಥ, ಸಂಗಣ್ಣ, ಸಂಗಮೇಶ್ವರ, ಸಂಗಪ್ಪ ಎಂದೆಲ್ಲ ಭಕ್ತರು ಕರೆಯುತ್ತಾರೆ. ಈತ ಮುಗ್ಧ ಭಕ್ತರ ಭಕ್ತಿಗೆ ಒಲಿದಾತ. ಅವರ ನೋವು ನಲಿವುಗಳಲ್ಲಿ ಒಂದಾದವ. ಭಕ್ತರ ನೋವೇ ತನ್ನ ನೋವೆಂದೂ, ಭಕ್ತರ ಸಂತೋಷವೇ ತನ್ನ ಸಂತೋಷವೆಂದು ಬಗೆದವ ಎಂಬ ನಂಬಿಕೆ ಸಂಗಮನಾಥನ ಭಕ್ತರಲ್ಲಿದೆ. ಈಗಲೂ ಈ ಮಾತು ಸತ್ಯ.

ಹುನಗುಂದ ಊರಿನ ಭಕ್ತರಾದ ನಾಗರಾಳ ದೊಡ್ಡಪ್ಪ ಅವರು ದಿನವೂ ಕೂಡಲ ಸಂಗಣ್ಣನಿಗೆ ನೈವೇದ್ಯ ಕಳಿಸುತ್ತಿದ್ದರು. ಅವರ ಮನೆಯ ಆಳು ಈ ಸೇವೆ ಮಾಡುತ್ತಿದ್ದನು. ಒಂದು ದಿನ ನದಿ ದಂಡೆಯ ಈಚೆಯಲ್ಲಿರುವಾಗ ಅವನಿಗೆ ವಿಪರೀತ ಹಸಿವಾಗುತ್ತದೆ. ಸಂಗಣ್ಣನಿಗೆ ಕ್ಷಮೆ ಕೇಳಿ, ಈಚೆ ದಂಡೆಯಿಂದಲೇ ಸಂಗಣ್ಣನಿಗೆ ಎಡೆತೋರಿಸಿ ಉಂಡುಬಿಟ್ಟನಂತೆ. ಅಂದು ರಾತ್ರಿ ನಾಗರಾಳ ಅವರ ಕನಸಿನಲ್ಲಿ ಬಂದು 'ಇಂದು ನಾನು ತೃಪ್ತನಾದೆ' ಎಂದು ಸಂಗಣ್ಣ ಹೇಳಿದಂತಾಗುತ್ತದೆ. ಮರುದಿನ ಆಳನ್ನು ಕರೆದು ಕೇಳಲು ಅವನು ತನ್ನಿಂದ ತಪ್ಪಾಗಿದೆ, ಹಸಿವೆ ಆಗಿ, ಸಂಗಣ್ಣನಿಗೆ ಈ ದಡದಿಂದಲೇ ನೈವೇದ್ಯ ತೋರಿಸಿ ಉಂಡುಬಿಟ್ಟೆ ಎಂದು



ಸಂಗಮನಾಥನ ದೇವಾಲಯ



ಸಂಗಮನಾಥನ ದೇವಾಲಯದ ನಂದಿ ಮಂಟಪ,
ಇಲ್ಲಿಯೇ ಬಸವಣ್ಣನವರು ಕುಳಿತುಕೊಳ್ಳುತ್ತಿದ್ದರೆಂದು ಹೇಳಲಾಗುತ್ತದೆ

ಹೇಳಿಕೊಳ್ಳುತ್ತಾನೆ. ಆಗ ಸಂಗಣ್ಣನ ಖುಷಿಗೆ ಕಾರಣ ಏನೆಂದು ನಾಗರಾಳವರು ತಿಳಿದು, ಇಷ್ಟುದಿನ ಈ ಜ್ಞಾನ ನನಗೆ ಇರಲಿಲ್ಲ ಎಂದು ಮರುಗಿದರಂತೆ. ಹಾಗೆ ಆ ನಂಬಿಕೆಯಿಂದಲೇ ಬಸವಣ್ಣ ಕೂಡಲಸಂಗಮಕ್ಕೆ ಬಂದದ್ದು. ಕೂಡಲಸಂಗನನ್ನೆ ತಾಯಿ–ತಂದೆ, ಬಂಧು–ಬಳಗ ಎಂದು ನಂಬಿದ್ದು. ಅವನು ತನ್ನನ್ನು ರಕ್ಷಿಸುತ್ತಾನೆ ಎಂಬ ಭರವಸೆಯಲ್ಲಿದ್ದದ್ದು. ಕೂಡಲಸಂಗನೇ ಬಸವನ ಅಂತರಂಗದ ದೇವರು. ಗುರು ಕೂಡ.

ಹಡದವ್ವ ಮಾದವ್ವ ಹಡೆದಪ್ಪ ಮಾದರಸ
ಪಡೆದವ್ವ ಅಕ್ಕನಾಗಾಯಿ । ಬಸವನಿಗೆ
ಬಿಡದೆ ಸಲುಹಿದನು ವರಸಂಗ

ಸಂಗಮನಾಥನ ಗುಡಿ ಚಾಲುಕ್ಯ ಶೈಲಿಯಲ್ಲಿ ಕಟ್ಟಲ್ಪಟ್ಟಿದೆ. ಮುಳುಗಡೆ ಪ್ರದೇಶದಲ್ಲಿ ಸಮಗಮನಾಥ ದೇವಾಲಯವಿರುವುದರಿಂದ ಅದನ್ನು ಸ್ಥಳಾಂತರಿಸಬೇಕೆಂದು ಯೋಚಿಸಿ, ಗುಡಿಯ ಕಲ್ಲುಗಳನ್ನು ನಾಜೂಕಾಗಿ ತಗೆದು ಅವುಗಳಿಗೆ ಕ್ರಮವಾಗಿ ನಂಬರುಗಳನ್ನು ಹಾಕಿಟ್ಟಿದ್ದರು. ಆಮೇಲೆ ಸ್ಥಳಾಂತರ ಬೇಡ ಇದ್ದ ಸ್ಥಳದಲ್ಲೇ ಇರಲಿ ಎಂದು ಹಾಗೆ ಉಳಿಸಿಕೊಂಡು ಆ ಕಲ್ಲುಗಳನ್ನು ಹಾಗೆ ಜೋಡಿಸಿ ಚಾಲುಕ್ಯ ಶಿಲ್ಪಕಲೆ ಕಡೆದಂತೆ ಎಚ್ಚರ ವಹಿಸಿ ಜೋಡಿಸಿದ್ದಾರೆ. ಇದೇ ಆತಂಕ ಬಸವಣ್ಣನ ಐಕ್ಯಮಂಟಪಕ್ಕೂ

ಇರುವುದರಿಂದ ಅದನ್ನು ಅದ್ಭುತ ರೀತಿಯಲ್ಲಿ ಸಂರಕ್ಷಿಸಿದ್ದಾರೆ. ಅಲ್ಲಿಗೆ ಹೋಗಿ ಬರಲು ಸೇತುವೆ ನಿರ್ಮಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ. ಬಸವನ ಐಕ್ಯಮಂಟಪ ನೋಡುವುದೇ ಒಂದು ಪುಣ್ಯ.

ಬಸವಣ್ಣ ತನ್ನ ಬಾಲ್ಯದ ದಿನಗಳನ್ನು ಸಂಗಮನಾಥನ ಪೂಜೆ ಮಾಡುತ್ತ, ಸಂಗಮನಾಥನ ಸನ್ನಿಧಿಯಲ್ಲಿಯೆ ಶಿಕ್ಷಣ ಪಡೆಯುತ್ತ ಕಳೆದಿದ್ದಾನೆ. ಬಸವನು ಸಂಗಮನಾಥನ ಎದುರು ಕುಳಿತುಕೊಳ್ಳುವ ಸ್ಥಳಗಳನ್ನು, ಸಂಗಮನಾಥನ ಪೂಜೆಗೆ ಹೂವು ತರುವ ಸ್ಥಳಗಳನ್ನು ಜನ ಇಂದಿಗೂ ತೋರಿಸುತ್ತಾರೆ. ಸಂಗಮನಾಥನ ಎದುರಿನ ನಂದಿಯ ಜೊತೆಗಿನ ಬಸವಣ್ಣನ ಸಂಬಂಧವೂ ಸಂಗಮನಾಥನ ಸಂಬಂಧದಂತೆ ಅನ್ಯೋನ್ಯವಾಗಿತ್ತು. ಇಲ್ಲಿಯ ನಂದಿಯ ಮುಖದಿಂದಲೇ ಬಸವಣ್ಣನಿಗೆ ದೀಕ್ಷೆಯಾಯಿತೆಂದು ಹರಿಹರ ಹೇಳುವ ಮಾತನ್ನು ಇಲ್ಲಿ ನೆನೆಯಬೇಕು. ಹೀಗೆ ಸಂಗನಮನಾಥ ಮಂದಿರದ ಆ ಮಂಟಪವೇ ಬಸವಣ್ಣನವರಿಗೆ ಆಶ್ರಯತಾಣವಾಗಿತ್ತು. ಇಂಥ ಪವಿತ್ರ ಸ್ಥಳವನ್ನು ಅಗಲಿ ಬಸವಣ್ಣನಿಗೆ ಬೇರೆಲ್ಲಿಯೂ ಇರಲು ಸಾಧ್ಯವಾಗಿಲ್ಲ. ಹೀಗಾಗಿ ಮತ್ತೆ ಮರಳಿ ಸಂಗಣ್ಣನ ಸಮ್ಮುಖದಲ್ಲಿಯೇ ಕೊನೆಯ ದಿನಗಳನ್ನು ಕಳೆಯಲು ಬಂದುಬಿಡುತ್ತಾನೆ. ಎಲ್ಲ ಸಂಬಂಧಗಳಿಗಿಂತ ಅತ್ಯಂತ ಪ್ರಿಯವಾದ ಸಂಬಂಧವನ್ನು ಸಂಗಮನಾಥನ ಜೊತೆ ಬೆಸೆದುಕೊಂಡಿದ್ದರಿಂದಲೇ ಅವನ ಆಪತ್ತು ಸುಖದುಃಖಗಳ ಕಾಲದಲ್ಲಿ ಅವನಿಗೆ ನೆನಪಾದ ಏಕೈಕ ಅಂತರಂಗದ ದೇವನೆಂದರೆ ಸಂಗಮನಾಥನೇ. ಈ ಕಾರಣಕ್ಕಾಗಿ ಎಲ್ಲರಲ್ಲೂ ಬಸವಣ್ಣ ಕೂಡಲಸಂಗನನ್ನೇ ಕಂಡಿದ್ದಾನೆ. ಕೂಡಲಸಂಗನೇ ಅವನಿಗೆ ಎಲ್ಲವೂ.



ಸಂಗಮೇಶ್ವರ ದೇವಾಲಯದ ಮಹಾದ್ವಾರ

ಸಂಗಮನಾಥನ ಗುಡಿಯ ಆವರಣದಲ್ಲಿ ಒಂದೆಡೆ ಬಸವಣ್ಣ ಇನ್ನೊಂದೆಡೆ ನೀಲಾಂಬಿಕೆಯ ಶಿಲ್ಪಗಳಿವೆ. ಬಸವಣ್ಣನವರ ವಿದ್ಯಾಗುರುಗಳ ಚಿಕ್ಕ ಗುಡಿಯಿದ್ದು, ಆ ಗದ್ದುಗೆಯ ಮೇಲೆ ಅವರ ಪಾದುಕೆಗಳನ್ನು ಇಟ್ಟಿದ್ದಾರೆ. ಕೂಡಲಸಂಗಮೇಶ್ವರ ಜಾತ್ರೆ ದವನದ ಹುಣ್ಣಿಮೆ ಆದ ಐದು ದಿನಕ್ಕೆ ಇರುತ್ತದೆ. ಅದಕ್ಕಿಂತ ಒಂಬತ್ತು ದಿನಗಳ ಮೊದಲೇ ಉಚ್ಚಯ್ಯ ತೇರು ಎಳೆಯುತ್ತದೆ. ಜೇಷ್ಠಾ ನಕ್ಷತ್ರ ಹೋಗಿ ಮೂಲಾನಕ್ಷತ್ರ ಕೂಡುವ ಸಮಯಕ್ಕೆ ಸರಿಯಾಗಿ ತೇರು ಎಳೆಯುವುದು ಒಂದು ವಿಶೇಷವೆಂದೇ ಹೇಳಬೇಕು. ಮೂಲಾನಕ್ಷತ್ರವನ್ನು ಎಲ್ಲರೂ ಕೆಟ್ಟದು, ದೋಷಪರಿಹಾರ ಆಗಬೇಕೆನ್ನುವಾಗ ಸಂಗಮನಾಥನ ತೇರು ಈ ನಕ್ಷತ್ರದಲ್ಲಿಯೆ ಸಾಗಬೇಕೆಂದಿರುವುದು ಆಶ್ಚರ್ಯದ ಸಂಗತಿಯೆ.

ಕೂಡಲಸಂಗನ ತೇರಿನ ಕಳಸ ಬಂಗಾರದ್ದು. ಮುಸ್ಲಿಂ ದಾಳಿಯ ಸಂದರ್ಭದಲ್ಲಿ ಎಲ್ಲಿ ಆ ಕಳಸಕ್ಕೆ ಅಪಾಯ ಬರುತ್ತದೆಯೊ ಎಂದು ಭಾವಿಸಿದ ಭಕ್ತರು ಆ ಕಳಸವನ್ನು ಅಳ್ಳಿದಿಂಡಿಯಲ್ಲಿಟ್ಟು ಬಾಗಲಕೋಟೆ ಅಂಗಡಿಗೆ ಕಳಿಸುತ್ತಾರೆ. ಅಲ್ಲಿ ತೂಕಕ್ಕೆ ಹಚ್ಚಿದಾಗ ತಕ್ಕಡಿ ಏಳದೇ ಹೋಗಿ ಅನುಮಾನ ಬಂದು ಅಂಗಡಿಯವರು ನೋಡಲು ಸಂಗಣ್ಣನ ಬಂಗಾರದ ಕಳಸ ಕಾಣಿಸಿತಂತೆ. ಅದನ್ನು ಪೋಲಿಸ ವಶಕ್ಕೆ ಕೊಡುತ್ತಾರೆ. ಪ್ರತಿವರ್ಷ ಜಾತ್ರೆಯ ಹಿಂದಿನ ದಿನ ಬಾಗಲಕೋಟೆ ಕಛೇರಿಯಿಂದ ಸಂಭ್ರಮದೊಂದಿಗೆ ಊದಸ್ತ ಬಾರಿಸ್ತ, ಕೊಂಬು ಕಹಳೆಯೊಂದಿಗೆ ಕಳಸವನ್ನು ಸಂಗಮಕ್ಕೆ ತರಲಾಗುತ್ತದೆ.

ಸಂಗಪ್ಪನ ತೇರು ಸಿಂಗಾರಾಗ್ಯಾವೇನ
ಗಂಧ ಕಸ್ತೂರಿ ರಥವೇರಿ । ಬಾಗಲಕೋಟಿ
ಬಂಗಾರ ಕಳಸ ಬರತಾವ

ಸಂಗಣ್ಣನ ಜಾತ್ರೆ ಬಾಳೆ ಹಣ್ಣಿನ ಜಾತ್ರೆ. ಒಂದು ತಿಂಗಳ ಪರ್ಯಂತ ಜಾತ್ರೆ ನಡೆಯುತ್ತದೆ. ಅಂದರೆ ದವನದ ಹುಣ್ಣಿಮೆ ಆದ ಐದನೆಯ ದಿನಕ್ಕೆ ಪ್ರಾರಂಭವಾದ ಜಾತ್ರೆ ಬಸವಜಯಂತಿಯವರೆಗೂ ಇರುತ್ತದೆ. ಜಾತ್ರೆಯಲ್ಲಿ ಎಲ್ಲ ನಮೂನೆಯ ವಸ್ತುಗಳಿರುತ್ತವೆ. ಜಾತ್ರೆಗೆ ಕೂಡಲ ಸಂಗಣ್ಣನ ತಂಗಿ (ಬಸವಣ್ಣನ ಹೆಂಡತಿ) ನೀಲಮ್ಮನನ್ನು ಕರೆತರುವ, ಕಳಿಸುವ ವಿಶೇಷ ಸಂಪ್ರದಾಯಗಳು ಇಂದಿಗೂ ಉಳಿದುಕೊಂಡು ಬಂದಿವೆ.

ಬಸವಣ್ಣನವರು ಸಂಗಮನಾಥನ ಸನ್ನಿಧಿಯಲ್ಲಿ ನದಿಯ ಆಚೆ ದಡದಲ್ಲಿ ಐಕ್ಯವಾದರೆ, ನದಿಯ ಈಚೆ ದಡದಲ್ಲಿ ನೀಲಮ್ಮ ನೆನೆದಿದ್ದಾಳೆ. ಹೀಗಾಗಿ ತಂಗಡಗಿಯ ಜಮೀನಿನಲ್ಲಿ ನೀಲಮ್ಮ ನೆನೆದಿದ್ದರಿಂದ ತಂಗಡಿಯವರಿಗೆ ಮಗಳಾಗಿ, ಸಂಗಣ್ಣನಿಗೆ ತಂಗಿಯಾಗಿ ಈ ಭಾಗದ ಜನ ಬಾವನಾತ್ಮಕ ಸಂಬಂಧದಲ್ಲಿ ಕಾಣುತ್ತಾರೆ. ಹೀಗಾಗಿ ಸಂಗಣ್ಣನ ಜಾತ್ರೆಗೆ ಬಂದ ತಂಗಿಯನ್ನು ಪುನಃ ತವರಿಗೆ ಕಳಿಸುವ ಉತ್ಸವ, ನೀಲಮ್ಮನ ಜಾತ್ರೆಯಾಗಿ ಆಚರಿಸಲ್ಪಡುತ್ತದೆ. ಇದು ಇಂದಿಗೂ ಮುಂದುವರದುಕೊಂಡು ಬಂದಿದೆ.

ಮಾಹಿತಿ : ಶ್ರೀಮತಿ ಸುಮಿತ್ರಾ ಸಿದ್ರಾಮಪ್ಪ ಅಂಗಡಿ

***



ಅಲ್ಲಮಪ್ರಭುಗಳ ಮುಖ



ಕೂಡಲ ಸಂಗಮೇಶ್ವರನ ಅಂಗಳದ ನೋಟ

ಕೂಡಲಸಂಗಯ್ಯ ಹೊಳೆಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ ಸಣ್ಣ ಮಳಲೊತ್ತಿ ಗಂಗೀಯ
ನೀರೊತ್ತಿ ಲಿಂಗಯ್ಯ ನೆನದಾನ ॥



# ಭಾಗ–೩

# ಹೊರ ರಾಜ್ಯಗಳಲ್ಲಿರುವ ಶರಣ ಸ್ಮಾರಕಗಳು

ಕೂಡಿದರು ಹುರುಪಿನಲಿ ನಾಡ ಬಲ್ಲಿದರೆಲ್ಲ
ಸೂಡ ಕಟ್ಟಿದರು ಶಿವ ನುಡಿಯ । ಕಾಯಕದ
ಗೂಡಾತು ಲೋಕ ಜನ ಹಿಗ್ಗಿ

# ಮಹಾರಾಷ್ಟ್ರ

## ಸೋಲಾಪುರ ಜಿಲ್ಲೆಯ ಸ್ಮಾರಕಗಳು

### ಮಂಗಳವೇಡೆ ತಾಲೂಕು :

## ಮಂಗಳವೇಡೆ

ಮಂಗಳವೇಡೆ ಇಂದು ಮರಾಠಿ ಭಾಷೆಯ ವಾತಾವರಣದಲ್ಲಿದೆ. ೧೨ನೇ ಶತಮಾನದಲ್ಲಿ ಕರ್ನಾಟಕಕ್ಕೆ ಸೇರಿದ ಭಾಗವಾಗಿತ್ತು. ಶಾಸನಗಳು ಹೇಳುವಂತೆ ಮಂಗಳವೇಡೆ ಆಗ ಸೊಲ್ಲಾಪುರ ಜಿಲ್ಲೆಯ ಪಂಡರಾಪುರ ತಾಲೂಕಿನಲ್ಲಿತ್ತು. ಈಗ ಮಂಗಳವೇಡೆಯೇ ತಾಲೂಕು ಸ್ಥಳವಾಗಿದೆ. ಅಂದು ಸೊಲ್ಲಾಪುರ, ಸಾಂಗ್ಲಿ, ವಿಜಾಪೂರ



ರೇವಣಸಿದ್ಧೇಶ್ವರ ದೇವಾಲಯ



ರೇವಣಸಿದ್ಧೇಶ್ವರ ದೇವಾಲಯದ ಗರ್ಭಗೃಹದ ಎದುರಿನ ಮಂಟಪ

ಜಿಲ್ಲೆಯ ಕೆಲಭಾಗಗಳನ್ನು ಒಳಗೊಂಡ ಪ್ರದೇಶಕ್ಕೆ **'ತರಿಕಾಡು ನಾಡು'** ಎಂದು ಕರೆಯಲಾಗುತ್ತಿತ್ತು. ಆದರೆ ವಿಜಾಪೂರ ಹೊರತುಪಡಿಸಿ ಸಾಂಗ್ಲಿ ಸೊಲ್ಲಾಪೂರಗಳು ಈಗ ಮಹಾರಾಷ್ಟ್ರಕ್ಕೆ ಸೇರಿ ಹೋಗಿವೆ

ಕಲ್ಯಾಣದಲ್ಲಿ ಚಾಲುಕ್ಯ ದೊರೆಗಳು ಪ್ರಬಲರಾಗಿದ್ದಾಗ, ಮಂಗಳವೇಡೆಯ ಆಡಳಿತವನ್ನು ನೋಡಿಕೊಂಡು ಹೋಗುವುದಕ್ಕಾಗಿ ಕಲಚೂರಿ ವಂಶದವರನ್ನು ಸಾಮಂತ (ಮಾಂಡಲಿಕ) ದೊರೆಗಳನ್ನಾಗಿ ನೇಮಿಸುತ್ತ ಹೋದ ಇತಿಹಾಸ ನಮಗೆ ದೊರಕುತ್ತದೆ. ರಾಜರ ಮಕ್ಕಳಾದ ಅಮ್ಮರಸ (ಅಮ್ಮುಗಿ), ಸಂಕಮ, ಜೋಗಮರು; ಜೋಗಮರ ಮಗ ಪೆರ್ಮಾಡಿ, ಪೆರ್ಮಾಡಿ ಮಗ ಬಿಜ್ಜಳ, ಬಿಜ್ಜಳನ ಮಗನಾದ ಸೋಯಿ(ವಿ)ದೇವ ಇವೆರೆಲ್ಲ ಆಡಳಿತ ಮಾಡಿದ ಇತಿಹಾಸವಿದೆ.

ಕಲಚೂರಿ ವಂಶದ ಬಿಜ್ಜಳ ಮಹತ್ವಕಾಂಕ್ಷಿ ದೊರೆ. ಸಾಮಂತನಾಗಿದ್ದರೂ ಸ್ವತಂತ್ರರಾಜನಂತೆ ಆಳ್ವಿಕೆ ಮಾಡಿದವನು. ರಾಜನಾಗಿ ಮೆರೆದವನು. ಇವನು ಮಂಗಳವೇಡೆಯ ಸಾಮಂತ ದೊರೆಯಾಗಿದ್ದಾಗ ಬಸವಣ್ಣನ ಸೋದರಮಾವಂದಿರಾದ ಬಲದೇವನು ಮಂತ್ರಿ ಆಗಿಯೂ ಸಿದ್ಧರಸರು ದಣ್ಣಾಯಕರಾಗಿಯೂ ಕರಣಶಾಲೆಯ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಇದೇ ಮಂಗಳವೇಡೆಗೆ ಬಂದ ಬಸವಣ್ಣನವರೂ ಕರಣಿಕರಾಗಿ ಕೆಲಸಕ್ಕೆ ಸೇರಿಕೊಂಡರು. ಬಹುಶಃ ಇಲ್ಲಿ ಬೆಳೆದ ಬಿಜ್ಜಳ ಮತ್ತು ಬಸವಣ್ಣನವರ ಆತ್ಮೀಯತೆಯಿಂದಾಗಿಯೇ ನಂತರ ಬಸವಣ್ಣನವರು ಬಿಜ್ಜಳನ ಜೊತೆ ಬಸವಕಲ್ಯಾಣಕ್ಕೆ ಹೋದಂತೆ ತೋರುತ್ತದೆ.



ಕೋಟೆಯ ಹೂಡೆಗಳಿಗೆ ಏರಿಸಿದ ಕಲ್ಲುಗಳು ಉಚ್ಚಿ ಬಿದ್ದಿದ್ದು,
ಕೋಟೆ ಮಣ್ಣಿನಿಂದ ನಿರ್ಮಾಣವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ

ಮಂಗಳವೇಡೆಯಲ್ಲಿ ಇಂದು ಬಸವಣ್ಣನವರ ಸ್ಮಾರಕಗಳು ಎಂದು ಹೇಳುವ ಯಾವ ಸ್ಮಾರಕಗಳೂ ಉಳಿದಿಲ್ಲ. ಬಸವಣ್ಣನವರ ಹೆಸರೇ ಅಲ್ಲಿಯ ಜನರಿಗೆ ಗೊತ್ತಿಲ್ಲ. ಅಲ್ಲಿ ಒಂದು ಹಳೆಯ ಕೋಟೆ ಇದೆ. ಈಗ ಅದರಲ್ಲಿ ತಹಶೀಲ ಕಛೇರಿ ಇದೆ. ೧೩ನೇ ಶತಮಾನದ ನಂತರ ಬೀದರ ನಗರವನ್ನು ಆಳುತ್ತಿದ್ದ ಅಧಿಕಾರಿಗಳು, ಮಂಗಳವೇಡೆಯಲ್ಲಿದ್ದ ಕೆಲ ಜೈನ ಮಂದಿರಗಳನ್ನು ತೆಗೆದುಹಾಕಿ, ಅಲ್ಲಿಯ ವಸ್ತುಗಳನ್ನು ಕೋಟೆಗೆ ಬಳಸಿದರೆಂದು ತಿಳಿದುಬರುತ್ತದೆ. ಹೊಸ ಕೋಟೆ ಕಟ್ಟಿದರೇ? ಅಥವಾ ಇದ್ದ ಕೋಟೆಯನ್ನು ದುರಸ್ತಿ ಮಾಡಿದರೇ? ಎಂಬುದು ಸ್ಪಷ್ಟವಾಗಿಲ್ಲ. ಈ ಬಗೆಗೆ ಸರಿಯಾದ ಮಾಹಿತಿಗಳು ಸರ್ಕಾರಿ ದಾಖಲೆಗಳಲ್ಲೂ ಉಳಿದುಬಂದಿಲ್ಲ.

ಈ ಕೋಟೆ ತೀರ ಚಿಕ್ಕದು. ಏಕೆಂದರೆ ಮಂಗಳವೇಡೆ ಮಾಂಡಲಿಕರ ಮುಖ್ಯಸ್ಥಳ ಮಾತ್ರ ಆಗಿತ್ತು ಎಂಬುದನ್ನು ಗಮನಿಸಬೇಕು. ಇದರ ಉತ್ತರದ ಗೋಡೆ ಮಾತ್ರ ೧೨೪೫ ಅಡಿ ಉದ್ದವಾಗಿದೆ. ಪೂರ್ವದ ಭಾಗ ೧೨೦೦ ಅಡಿ, ದಕ್ಷಿಣದ ಭಾಗ ೧೧೦೦ ಅಡಿ, ಪಶ್ಚಿಮದ ಭಾಗ ೯೨೦ ಅಡಿ ಮಾತ್ರ ಇದೆ. ಇದನ್ನು ಗಮನಿಸಿದರೆ ಇದರ ಎಲ್ಲ ಭಾಗಗಳು ಒಂದೊಂದು ನಮೂನೆಯ ಅಳತೆಯನ್ನು ಹೊಂದಿವೆ. ೩೫ ಅಡಿ ಎತ್ತರದ ಗೋಡೆಗಳು ೧೩ ಅಡಿ ಅಗಲವಾಗಿವೆ ಎಂದು ದಾಖಲೆಗಳಲ್ಲಿ ನಮೂದಾಗಿರುವುದು ಕಂಡುಬರುತ್ತದೆ.

ಕೋಟೆಯನ್ನು ಪರಿಶೀಲಿಸಿದರೆ, ಅದು ಮೊದಲು ಮಣ್ಣಿನ ಕೋಟೆಯೇ ಆಗಿದ್ದಂತೆ ತೋರುತ್ತದೆ. ನಂತರ ಗೋಡೆಯ ಸುತ್ತಲೂ ಒಳಮಗ್ಗಲು ಮತ್ತು ಹೊರಮಗ್ಗಲು ಎರಡೂ ಕಡೆ ಕಲ್ಲಿನಿಂದ ಥರಗಳನ್ನು ಏರಿಸಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ನಾಲ್ಕೂ ಮೂಲೆಗಳಲ್ಲಿರುವ ಕೋಟೆಯ ಹೂಡೆಗಳಿಗೆ ಸುತ್ತಲೂ ಪೇರಿಸಿದ ಕಲ್ಲಿನ ಥರಗಳು ಬಿದ್ದುಹೋಗಿದ್ದು, ನಾಲ್ಕೂ ಹೂಡೆಗಳ ಮೇಲಿನ ಅರ್ಧಭಾಗಗಳು ತೆರೆದುಕೊಂಡಿವೆ. ಇದಲ್ಲದೆ ಕೆಲವು ಕಡೆ ಉಚ್ಚಿಬಿದ್ದ ಕಲ್ಲುಗಳಿಂದ ಗೋಡೆಗಳ ಒಳಗಿನ ಭಾಗಗಳೂ ಗೋಚರಿಸುತ್ತವೆ. ಎಲ್ಲೆಲ್ಲಿ ಕಲ್ಲುಗಳು ಉಚ್ಚಿಬಿದ್ದಿವೆಯೋ ಅಲ್ಲೆಲ್ಲ ಒಳಗಿನ ಮಣ್ಣು ಸ್ಪಷ್ಟವಾಗಿ ಗೋಚರಿಸುತ್ತದೆ. ಇದರಿಂದ ಈ ಕೋಟೆ ಮೂಲದಲ್ಲಿ ಮಣ್ಣಿನಿಂದಲೇ ನಿರ್ಮಾಣವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕೋಟೆಯ ಈ ಎಲ್ಲ ಲಕ್ಷಣಗಳನ್ನು ಗಮನಿಸಿದರೆ, ಮೂಲತಃ ಮಣ್ಣಿನ ಕೋಟೆ ಹಳೆಯದಾಗಿದ್ದು, ಅದನ್ನು ನಂತರದವರು ೧೩ನೇ ಶತಮಾನದಲ್ಲಿ ದುರಸ್ತಿಗೊಳಿಸಿರಬೇಕೆನಿಸುತ್ತದೆ. ಆದುದರಿಂದ ಕಲಚುರಿ ಮಾಂಡಲಿಕ ವಂಶಸ್ಥರು ಆಡಳಿತ ನಡೆಸಿದ್ದು, ಈ ಮಣ್ಣಿನ ಕೋಟೆಯಿಂದಲೇ ಇರಬೇಕು. ಹೀಗಾಗಿ ಬಸವಣ್ಣನವರು ಮೊದಲು ಕರಣಿಕರಾಗಿ ಸೇರಿಕೊಂಡು ಕೆಲಸ ಮಾಡಿದ ಸ್ಥಳ ಇದಾಗಿದೆ ಎನಿಸುತ್ತದೆ. ಸಧ್ಯಕ್ಕೆ ಇಷ್ಟನ್ನು ಇಟ್ಟುಕೊಳ್ಳಲು ಅಡ್ಡಿಯಿಲ್ಲ. ಈ ಬಗೆಗೆ ಹೆಚ್ಚಿನ ಶೋಧಗಳು ನಡೆಯುವ ಅವಶ್ಯಕತೆ ಇದೆ.



ಕೋಟೆಯ ಗೋಡೆಗೆ ಏರಿಸಿದ ಕಲ್ಲುಗಳು ಉಚ್ಚಿಬಿದ್ದಲ್ಲಿ
ಒಳಗಡೆ ಇರುವ ಮಣ್ಣಿನ ಗೋಡೆ ಸ್ಪಷ್ಟವಾಗಿ ಗೋಚರಿಸುತ್ತದೆ



ಗೈಬಿ ಪೀರ ದರ್ಗಾ, ಪೂರ್ವ ಭಾಗದಿಂದ ತೆಗೆದ ಚಿತ್ರ. ವಿಸ್ತಾರವಾದ ಅಂಗಳ ಇರುವುದನ್ನು ಕಾಣಬಹುದು

ಬಿಜ್ಜಳನು ಆಳಿದ ಕೋಟೆಯ ಸ್ಥಳ ಮಾತ್ರ ಬದಲಾವಣೆ ಆಗಿಲ್ಲವೆನಿಸುತ್ತದೆ. ಇದರ ಎರಡು ಬದಿಯಲ್ಲಿ ದೇವಾಲಯಗಳ ಕಟ್ಟಡಗಳಿವೆ. ಕೋಟೆಗೆ ಹತ್ತಿಕೊಂಡು, ಕೋಟೆಯ ಮುಖ್ಯದ್ವಾರಕ್ಕೆ ಸಮನಾಗಿ ಬಲಗಡೆ ರೇವಣಸಿದ್ಧೇಶ್ವರ ದೇವಸ್ಥಾನವಿದೆ. ಹಿಂದೆ ಎಂಟನೇ ಶತಮಾನಕ್ಕೆ ಸೇರಿದ್ದೆಂದು ಹೇಳುವ ಕಾಶೀವಿಶ್ವನಾಥನ ಗುಡಿ ಇದೆ. ಇದೂ ಶಿವಮಂದಿರವೇ. ಕಾಶೀವಿಶ್ವನಾಥ ಮಂದಿರದ ಮುಂದೆ ದೊಡ್ಡ ಬಾವಿ ಇದೆ. ಇದು ಸುಂದರವಾದ ಕಟ್ಟಡ ಹೊಂದಿತ್ತು ಎನ್ನುತ್ತಾರೆ. ಈಗ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಬಾವಿಯ ಗೋಡೆಗೆ ಆನಿಕೊಂಡು ಒಂದುಕಡೆ ಬ್ರಹ್ಮನ ಶಿಲ್ಪವಿದೆ. ಇದೊಂದು ಅಪರೂಪದ ಸಂಗತಿ.

ಕೋಟೆಯ ಎದುರಿಗೆ ಸ್ವಲ್ಪದೂರದಲ್ಲಿ, ಬಲಮಗ್ಗಲು ಒಂದು ದರ್ಗಾ ಇದ್ದು, ಅದನ್ನು ಗೈಬೀ ಪೀರ ದರ್ಗಾ ಎಂದು ಕರೆಯುತ್ತಾರೆ. ಅದು ಹಿಂದೂ ಕಟ್ಟಡವಾಗಿದ್ದಿತು ಎಂದು ಅರಿಯಲು ಅಲ್ಲಿ ಇಂದಿಗೂ ಕೆಲವು ಕುರುಹುಗಳು ಕಾಣಸಿಗುತ್ತವೆ. ಪೂರ್ವಕ್ಕೆ ಇದ್ದಿರಬಹುದಾದ ದ್ವಾರದ ಕೆಲ ಭಾಗಗಳು ಉಳಿದಿದ್ದು, ಅವು ಮುಸ್ಲೀಮ ರಚನೆಗಳಾಗಿಲ್ಲ ಎಂಬುದನ್ನು ಸಾರಿ ಹೇಳುತ್ತವೆ. ದರ್ಗಾದ ಅಂಗಳದಲ್ಲೂ ಕೆಲ ಕಲ್ಲಿನ ಕಂಬದ ಭಾಗಗಳು ಬಿದ್ದಿವೆ. ಇದನ್ನು ಗಮನಿಸಿದರೆ, ಇದು ಮೂಲ ದರ್ಗಾದ ಸ್ಥಳವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮಜೇರಿ ಇರುವ ದರ್ಗಾದ ಬುರುಜ (ಗುಮ್ಮಟ) ನಂತರ ರಚನೆಯಾಗಿದ್ದು, ಒಳಗಡೆ ಪರಿಶೀಲಿಸಿದರೆ ಒಂದು ದೊಡ್ಡ ಕೋಣೆಯ ಮಾಳಿಗೆಯ ಭಾಗವನ್ನು ತೆಗೆದುಹಾಕಿ ಬುರುಜ ನಿರ್ಮಾಣ



ದರ್ಗಾದ ಮುಂದಿನ ಅಂಗಳದಿಂದ ಪೂರ್ವಕ್ಕೆ ಇಳಿದು ಬರಲು ಇರುವ ದ್ವಾರ.

ಮಾಡಿರಬೇಕೆನಿಸುತ್ತದೆ. ಈ ದರ್ಗಾದ ಅಂಗಳ ವಿಸ್ತಾರವಾಗಿದ್ದು, ಅಂಗಳದಲ್ಲಿ ಪೂರ್ವಕ್ಕೆ ಮುಖಮಾಡಿ ಒಂದು ತೆರೆದ ಚಾವಡಿ ಇದೆ.

ಈ ದರ್ಗಾಕ್ಕೆ ಮುಸ್ಲಿಮರಂತೆ ಹಿಂದೂಗಳೂ ನಡೆದುಕೊಳ್ಳುತ್ತಾರೆ. ದರ್ಗಾದ ಪಂಚಕಮೀಟಿ ಒಂದಿದ್ದು, ಅದರಲ್ಲಿ ಎಲ್ಲ ಜಾತಿ ಜನಾಂಗದವರಿದ್ದಾರೆ. ಮತ್ತು ಪಂಚಕಮಿಟಿಯ ಮುಖ್ಯಸ್ಥರು ಲಿಂಗಾಯತ, ಮರಾಠಾ ಈ ಜನಾಂಗದವರೇ ಇರುತ್ತಾರೆಂದು ತಿಳಿದುಬರುತ್ತದೆ. ಉರುಸ ನಡೆಸಲು ಇರುವ ಒಂದು ಸಮಿತಿಯ ಅಧ್ಯಕ್ಷರಂತೂ ಯಾವಾಗಲೂ ಹಿಂದೂಗಳೇ ಇರುತ್ತಾರಂತೆ. ಇದು ಈ ಊರಿನ, ಈ ದರ್ಗಾದ ವಿಶೇಷತೆಯನ್ನು ಹೇಳುತ್ತದೆ.

ನಾವು ಗಮನಿಸಿದಂತೆ, ಎಲ್ಲೆಲ್ಲಿ ಹಿಂದೂ ದೇವಾಲಯಗಳನ್ನು ವಶಪಡಿಸಿಕೊಂಡು, ಅವುಗಳನ್ನು ಮುಸ್ಲಿಮ ಸಂಸ್ಕೃತಿಗೆ ಅಳವಡಿಸುವ ಪ್ರಯತ್ನಗಳು ನಡೆದಿವೆಯೋ ಅಂಥಲ್ಲಿ ಮಾತ್ರ ಹಿಂದೂಗಳಿಗೆ ಈ ಬಗೆಯ ಪ್ರವೇಶ, ಕೆಲವು ಚಾಜಗಳು ಇರುವುದನ್ನು ಕಾಣುತ್ತೇವೆ. ಬಸವಕಲ್ಯಾಣ ತಾಲೂಕಿನ ನಾರಾಯಣಪುರದ ಒಕ್ಕಲಿಗ ಮುದ್ದಯ್ಯ- ಮೃತ್ಯುಂಜಯ, ಸಕಲೇಶ ಮಾದರಸ, ಬೀದರಿನ ಹತ್ತಿರದ ಅಷ್ಟೂರಿನ ಅಲ್ಲಮನ ಹೆಸರಿನ ಗುಮ್ಮಟದ ಮಂದಿರ- ಈ ಗುಡಿಗಳೂ ದರ್ಗಾಗಳಾಗಿ ಪರಿವರ್ತನೆ ಹೊಂದಿದ್ದು ಅಲ್ಲಿ ಹಿಂದೂ ಮುಸ್ಲಿಮ ಎರಡೂ ಸಮಾಜದವರು ಪೂಜೆಯ ಅವಕಾಶ ಹೊಂದಿದ್ದಾರೆ. ಈ ದೇವಾಲಯಗಳಿಗೆ ಸಂಬಂಧಿಸಿದ ವಿಶೇಷ ಉತ್ಸವಗಳಲ್ಲಿ ಹಿಂದೂಗಳಿಗೆ ಕೆಲ ಚಾಜಗಳಿರುವುದನ್ನೂ ಕಾಣಬಹುದಾಗಿದೆ. ಶುದ್ಧ ಮುಸ್ಲಿಮ

ದರ್ಗಾಗಳಿದ್ದಲ್ಲಿ ಬೇರೆ ಜನಾಂಗದವರಿಗೆ ಯಾವುದೇ ಅಧಿಕಾರ, ಚಾಜ, ಭಾಗಿದಾರಿಕೆ ಇರುವುದು ನಮ್ಮ ಗಮನಕ್ಕೆ ಬಂದಿಲ್ಲ. ಹೀಗಾಗಿ ಗೈಬಿ ಪೀರ ದರ್ಗಾ ಅದು ಮೊದಲು ಹಿಂದೂ ವಿಶೇಷವಾಗಿ ಶೈವ ಸಂಸ್ಕೃತಿಗೆ ಸಂಬಂಧಿಸಿದ ಸ್ಥಳವೇ ಆಗಿದ್ದು, ನಂತರ ಮುಸ್ಲೀಮ ಆಳ್ವಿಕೆಯಲ್ಲಿ ಅದನ್ನು ವಶಪಡಿಸಿಕೊಂಡು, ದರ್ಗಾ ಆಗಿ ಪರಿವರ್ತನೆ ಮಾಡಿದರೂ ಜನಾಂಗೀಯ ಸೌಹಾರ್ದತೆಗಾಗಿ ಅಲ್ಲಿಯ ಆಚರಣೆಗಳಲ್ಲಿ ಹಿಂದೂಗಳಿಗೆ ಚಾಜ ಕೊಟ್ಟಿರುವಂತೆ ತೋರುತ್ತದೆ. ಸ್ಥಳೀಯರು ಹೇಳುವಂತೆ ಈ ದರ್ಗಾ ಮೂಲದಲ್ಲಿ ಮಂಗಳಾದೇವಿ ಗುಡಿ ಆಗಿರಬಹುದಾಗಿದೆ.

ಗೈಬಿ ಪೀರ ದರ್ಗಾದ ಅಂಗಳದಿಂದ ಪೂರ್ವಕ್ಕೆ ಇಳಿದು ಬರಲು ಒಂದು ಬಾಗಿಲಿದೆ. ಬಾಗಿಲಿನ ಎರಡೂ ಮಗ್ಗಲೂ ಮತ್ತೆ ಎರಡು ಭಾಗಗಳಿವೆ. ಇಲ್ಲೆಲ್ಲ ಹಳೆಯ ಕಟ್ಟಡದ ಗುರುತುಗಳು ಉಳಿದುಕೊಂಡಿವೆ. ಈ ಬಾಗಿಲಿನ ಎದುರಿಗೆ ವಿಸ್ತಾರವಾದ ಅಂಗಳವಿದೆ. ಅಂಗಳದ ಕೊನೆಯಲ್ಲಿ ಮನೆಗಳಿದ್ದು, ಅಲ್ಲಿ ಒಂದು ಹಳೆಯ ಗೋಡೆ ಉಳಿದಿರುವುದು ಗೋಚರಿಸುತ್ತದೆ. ಇದನ್ನು ಗಮನಿಸಿದರೆ, ಈ ವಿಸ್ತಾರವಾದ ಅಂಗಳದಲ್ಲಿ ಆಡಳಿತಗಾರರು ವಾಸಿಸುವ ಮನೆ ಇದ್ದ ಸಾಧ್ಯತೆ ಇದೆ. ಅರಮನೆಯ ಅಂಗಳದಲ್ಲಿ ಅರಸರ ಆರಾಧ್ಯದೈವದ ಗುಡಿಗಳಿರುವುದು ಸಹಜ. ಹೀಗಾಗಿ ಅರಮನೆಯ ಅಂಗಳದಲ್ಲಿ ಮಂಗಳಾದೇವಿ ಗುಡಿ ಇತ್ತೆಂದು ಹೇಳಲು ಅವಕಾಶವಿದೆ. ಹೀಗಾಗಿ ಈ ಸ್ಥಳದಲ್ಲಿ ಬಸವಣನನವರು ಅಡ್ಡಾಡಿದ ಸಾಧ್ಯತೆ ಸ್ಪಷ್ಟವಾಗಿದೆ.



ಪೂರ್ವಕ್ಕೆ ಇಳಿದುಬರಲು ಇರುವ ದ್ವಾರ
ಈ ದ್ವಾರದ ಮುಂದೆ ವಿಸ್ತಾರವಾದ ಅಂಗಳವಿದೆ

ಮಾಹಿತಿ : ಸಂತೋಷ ಮೊಗಲೆ.



ಪೂರ್ವದ ದ್ವಾರದ ಮಗ್ಗುಲಿನ ಒಂದು ಭಾಗ



ಪೂರ್ವದ ದ್ವಾರದ ಮಗ್ಗುಲಿನ ಇನ್ನೊಂದು ಭಾಗ
ಇಲ್ಲಿರುವ ಮೂರೂ ಭಾಗಗಳನ್ನು ನೋಡಿದರೆ
ಚಾಲುಕ್ಯರ ರಚನಾ ವಿಧಾನ ಕಾಣುತ್ತದೆ

## ಮಂಗಳವೇಡೆ ತಾಲೂಕು :

### ಮಾಸನೂರು :
### ರೇವಣಸಿದ್ಧೇಶ್ವರ ಮಂದಿರ

ಸೊಲ್ಲಾಪೂರ ಜಿಲ್ಲೆಯ ಮಾಸನೂರು ಸೋಲಾಪೂರದಿಂದ ೪೨ ಕಿ.ಮಿ. ದೂರದಲ್ಲಿ ಇರುವ ಒಂದು ಗ್ರಾಮ. ಈ ಊರಲ್ಲಿ ಬಹಳ ವಿಶಾಲವಾದ ಪ್ರಾಚೀನ ಮಂದಿರ ಇದೆ. ಇಲ್ಲಿರುವುದು ಸ್ವಯಂಭುಲಿಂಗ. ಈ ಗುಡಿ ಇರುವುದು ಭೀಮಾನದಿಯ ದಡದಲ್ಲಿಯೇ. ಭೀಮಾನದಿಯ ನೀರು ಹರಿದು ಇಲ್ಲಿ ಒಂದು ಮಡುವು ನಿರ್ಮಾಣವಾಗಿದೆ. ಅದನ್ನು 'ಮಾಸನೂರು ಮಡುವು' ಎಂದು ಕರೆಯುತ್ತಾರೆ. ರೇವಣಸಿದ್ಧರು ಮಡುವಿನ ಮೇಲಿರುವ ಶಿವದೇವಾಲಯಕ್ಕೆ ಬಂದು ಕೆಲದಿನ ಇದ್ದು ಹೋದ ಕಾರಣಕ್ಕಾಗಿ ಇದನ್ನು ರೇವಣಸಿದ್ಧೇಶ್ವರ ಮಂದಿರ ಎಂದು ಕರೆಯುತ್ತಿರುವರಂತೆ. ಮಡುವಿನ ನಡುವೆ ಇರುವ ಜಟಾಶಂಕರ ಎಂಬ ಮಂದಿರ ರೇವಣಸಿದ್ಧರ ಪವಾಡದಿಂದ ನಿರ್ಮಾಣವಾದುದೆಂಬ ನಂಬಿಕೆ ಅಲ್ಲಿದೆ. ಈ ವಿಷಯವಾಗಿ ಎರಡು



ರೇವಣಸಿದ್ಧೇಶ್ವರ ಮಂದಿರದ ಗರ್ಭಗೃಹದ ಶಿವಲಿಂಗ




ರೇವಣಸಿದ್ಧೇಶ್ವರ ಮಂದಿರ

ರೀತಿಯ ಘಟನೆಗಳ ಮಾಹಿತಿ ಪ್ರಚಾರದಲ್ಲಿದೆ. ಒಂದು ರೇವಣಸಿದ್ಧರಿಂದಲೇ ನಡೆಯಿತ್ತೆನ್ನುವ ಘಟನೆಯಾದರೆ, ಇನ್ನೊಂದು ಔರಂಗಜೇಬನ ಕಾಲದಲ್ಲಿ ನಡೆಯಿತೆಂಬ ಘಟನೆ ಇದೆ.

ರೇವಣಸಿದ್ಧರಲ್ಲಿ ಒಂದು ಖಡ್ಗ ಇತ್ತು. ಅದನ್ನು ಮಾಸನೂರು ಮಡುವಿನಲ್ಲಿ ಒಗೆದರೆಂದು ಹೇಳಿ ಅದರ ಸ್ಮಾರಕವಾಗಿ ಮಡುವಿನಲ್ಲಿ ಜಟಾಶಂಕರ ಮಂದಿರ ನಿರ್ಮಿಸಲಾಗಿದೆ ಎನ್ನುತ್ತಾರೆ. ಈ ಪ್ರಸಂಗವನ್ನೇ ಇನ್ನೊಂದು ರೀತಿಯಲ್ಲೂ ಹೇಳುತ್ತಾರೆ. ಮಾಸನೂರಿನ ಶಿವದೇವಾಲಯದ ಆವರಣದಲ್ಲಿ ಒಂದು ದೊಡ್ಡ ವಟವೃಕ್ಷ ಇದ್ದು, ಅದರ ಪೊಟರೆಯಲ್ಲಿ ರಕ್ಕಸ ಮಿಥುನಗಳು ಸೇರಿದ್ದವಂತೆ. ಮಂದಿರಕ್ಕೆ ಬರುವ ಭಕ್ತರನ್ನು ಅವು ನಿತ್ಯ ಬಾಧಿಸುತಿದ್ದವಂತೆ. ಇದರಿಂದಾಗಿ ದೇವಾಲಯಕ್ಕೆ ಬರುವವರು ಹೆದರಿಕೊಳ್ಳತೊಡಗಿದರಂತೆ. ಈ ಮಿಥುನಗಳ ಪೂರ್ವಜೀವನ ತಿಳಿದ ರೇವಣಸಿದ್ಧರು, ಭಕ್ತರ ಭಾವನೆಗೆ ಕಟ್ಟು ಬಿದ್ದು ಅವೆರಡು ಯಕ್ಷ ಮಿಥುನಗಳನ್ನು ತನ್ನ ಹಣೆಗಣ್ಣಿನಿಂದ ದಗ್ಧಮಾಡಿದರಂತೆ. ಅವು ಬಹಳ ಪ್ರಬಲವಾಗಿದ್ದ ಮಿಥುನಗಳಾದ್ದರಿಂದ, ದಗ್ಧವಾದ ಅವುಗಳನ್ನು ಎರಡು ಉಕ್ಕಿನಗುಂಡುಗಳಾಗುವಂತೆ ಮಾಡುತ್ತಾರಂತೆ. ಎರಡೂ ಗುಂಡುಗಳನ್ನು ಕಮ್ಮಾರನ ಕೈಗೆ ಕೊಟ್ಟು ಸುರಗಿ ಮಾಡಿಕೊಡಲು ಹೇಳುತ್ತಾರೆ. ಕಮ್ಮಾರ ಒಂದು ಗುಂಡಿನಿಂದ ಮಾತ್ರ ಸುರಗಿ ಮಾಡುವಲ್ಲಿ ಯಶಸ್ವಿಯಾಗುತ್ತಾನೆ. ಇನ್ನೊಂದು ಗುಂಡಿನಿಂದ ಸುರಗಿ ಮಾಡಲು ಸಾಧ್ಯವಾಗುವದಿಲ್ಲ. ತನ್ನ ಎಲ್ಲ ತಂತ್ರ ಬಳಸಿಯೂ ಅಸಹಾಯಕನಾದನು. ಈ ಸಂಗತಿಯನ್ನು ರೇವಣಸಿದ್ಧರ ಗಮನಕ್ಕೆ

ತರುತ್ತಾನೆ. ರೇವಣಸಿದ್ಧರು ಕಮ್ಮಾರನಿಗೆ ಉಕ್ಕಿನ ಗುಂಡನ್ನು ಕಾಯಿಸಲು ಹೇಳುತ್ತಾರೆ. ಅದರ ಮುಂದೆ ದಾಸವಾಳ ಹೂವನ್ನು ಹಿಡಿಯುತ್ತಾರೆ. ಆ ರಕ್ಕಸ ಮಿಥುನವು ಕೆಂಪು ದಾಸವಾಳವನ್ನು ಮಾಂಸವೇ ಎಂದು ಬಗೆದು ಹೊರಚಾಚಿಕೊಂಡಿತಂತೆ. ಆಗ ರೇವಣಸಿದ್ಧರು ಅದನ್ನು ಕೈವಶ ಮಾಡಿಕೊಂಡು, ಕಮ್ಮಾರನಿಗೆ ಸುರಿಗೆ ಮಾಡಲು ಕೊಡುತ್ತಾರೆ. ಆ ಸುರಗಿಯಿಂದ ಭಯಂಕರವಾದ ಸದ್ದು ಕೇಳಿಬರುತ್ತಿತ್ತು. ಹೀಗಾಗಿ ರೇವಣಸಿದ್ಧರು ಮಾಸನೂರು ಮಡುವಿನಲ್ಲಿ ಅದನ್ನು ಚುಚ್ಚಿ ಅದು ಚಲಿಸದಂತೆ ಮಾಡುತ್ತಾರೆ. ಮತ್ತೊಂದು ಸುರಗಿಯನ್ನು ಉಜ್ಜಯನಿಯ ವಿಕ್ರಮಾದಿತ್ಯನಿಗೆ ಕೊಡುತ್ತಾರೆಂದು ಪ್ರತೀತಿ ಇದೆ. ಅವನ ಮರಣಾನಂತರವೆ ಅದು ಶಾಪದಿಂದ ಮುಕ್ತಿ ಹೊಂದಿತೆಂಬ ನಂಬಿಕೆಯೂ ಇದೆ.

ಉಜ್ಜಯನಿಯ ವಿಕ್ರಮಾದಿತ್ಯನಿಗೆ ಖಡ್ಗ ಕೊಟ್ಟ ಸಂಗತಿ, ಮಾಸನೂರ ಮಡುವಿನಲ್ಲಿ ಬಲಶಾಲಿಯಾದ ಅಪರೂಪದ ಖಡ್ಗವನ್ನು ಒಗೆದ ಸಂಗತಿ ಹತ್ತಿರದ ಮಂಗಳವೇಡೆಯಲ್ಲಿದ್ದ ಬಿಜ್ಜಳನಿಗೆ ತಿಳಿಯಿತು. ಹೇಗಾದರೂ ಮಾಡಿ ಮಡುವಿನಲ್ಲಿ ಒಗೆದ ಖಡ್ಗವನ್ನು ತನ್ನ ಕೈವಶ ಮಾಡಿಕೊಳ್ಳಬೇಕೆಂದು ಸಂಕಲ್ಪ ಮಾಡಿದನು. ಆದರೆ ಅದು ಚಲಿಸದಂತೆ ರೇವಣಸಿದ್ಧನು ಆಜ್ಞೆ ಮಾಡಿದ್ದರಿಂದ ಬಿಜ್ಜಳನ ಪ್ರಯತ್ನವೆಲ್ಲ ವ್ಯರ್ಥವಾಯಿತು. ಅವುಗಳನ್ನು ಮುಟ್ಟಿದರೇ ಖಡ್ಗಗಳು ಸರ್ಪದಂತೆ ಕಾಣುತ್ತಿದ್ದವಂತೆ. ಯಾರು ಆ ಖಡ್ಗ ತೆಗೆಯುವವರು ಎಂದು ಬಿಜ್ಜಳ ಶೋಧ ನಡೆಸುತ್ತಾನೆ. ಕರ್ಪರ



ರೇವಣಸಿದ್ಧೇಶ್ವರ ಮಂದಿರದ ಮಂಟಪದ ಎದುರಿನಲ್ಲಿರುವ ನಂದಿ



ರೇವಣಸಿದ್ಧೇಶ್ವರ ಮಂದಿರದ ಮುಂದಿರುವ ಭೀಮಾನದಿಯಲ್ಲಿ
ರೇವಣಸಿದ್ಧರು ಸುರಗಿ ಪವಾಡ ಮೆರೆದ ಸ್ಥಳದಲ್ಲಿರುವ ಜಟಾಶಂಕರ ಗುಡಿ

ಎಂಬ ಯೋಗಿ ತಾನು ತೆಗೆದುಕೊಡುವುದಾಗಿ ಹೇಳುತ್ತಾನೆ. ಆದರೆ ಅದಕ್ಕೆ ಒಂದು ಕರಾರು ಹಾಕುತ್ತಾನೆ. ಇಂತಿಷ್ಟು ಜನ ಹೆಣ್ಣುಮಕ್ಕಳನ್ನು ಬಲಿಕೊಟ್ಟರೆ ಮಾತ್ರ ಖಡ್ಗ ಹೊರತಗೆಯಲು ಸಾಧ್ಯವಾಗುತ್ತದೆ ಎಂದು ಬಿಜ್ಜಳನಿಗೆ ಹೇಳುತ್ತಾನೆ. ರಾಜನಿಗೆ ಇದೇನು ದೊಡ್ಡ ಕೆಲಸವಲ್ಲ. ಹೆಣ್ಣುಮಕ್ಕಳನ್ನು ಹಿಡಿದೆಳೆದು ತರಿಸುತ್ತಾನೆ. ಲೆಕ್ಕಕ್ಕೆ ಒಬ್ಬಳು ಮಾತ್ರ ಕಡಿಮೆ ಬೀಳತೊಡಗಲು, ಅಲ್ಲಿ ಕಂಡವಳು ರೇವಣಸಿದ್ಧರ ಶಿಷ್ಯಯ ಮಗಳು. ಆಕೆಯನ್ನು ಹಿಡಿದು ತರುತ್ತಾರೆ. ಈ ವಿಷಯ ತಿಳಿದ ರೇವಣಸಿದ್ಧರು ಬಂದು ಆ ಹೆಣ್ಣುಮಗಳನ್ನು, ಜೊತೆಗೆ ಉಳಿದ ಎಲ್ಲ ಹೆಣ್ಣುಮಕ್ಕಳನ್ನು ಅಪಾಯದಿಂದ ತಪ್ಪಿಸಿ, ಬಿಜ್ಜಳನಿಗೆ ಖಡ್ಗ ತಗೆದುಕೊಡುವ ಮೂಲಕ ಅವನಾಸೆಯನ್ನು ಈಡೇರಿಸಿದರಂತೆ. ಹೀಗಾಗಿ ಆ ಮಡುವಿನಲ್ಲಿ ಖಡ್ಗ ಇದ್ದ ಸ್ಥಳದಲ್ಲಿ ಈಗ ಲಿಂಗವಿದೆ, ಅದರ ಸುತ್ತಲೂ ಗುಡಿ ಕಟ್ಟಿದ್ದಾರೆ. ಈ ಗುಡಿಯನ್ನು ಜಟಾಶಂಕರ ಗುಡಿಯೆಂದು ಕರೆಯುತ್ತಾರೆ.

ಔರಂಗಜೇಬನ ಕಾಲದಲ್ಲಿ ರಾಜಮನೆತನದವರು ಈ ಲಿಂಗಕ್ಕೆ ದಿನವೂ ಮಾಂಸದ ಎಡೆ ತರುತ್ತಿದ್ದರಂತೆ. ಲಿಂಗಕ್ಕೆ ಅರ್ಪಿಸಿದ ಮಾಂಸ ಹೂವಾಗಿ ಪರಿವರ್ತನೆ ಹೊಂದಿರುತ್ತಿತ್ತಂತೆ. ಹೀಗಾಗಿ ಮಾಚನೂರು ಹೋಗಿ 'ಮಾಸನೂರು' ಎಂಬ ಹೆಸರು ವಾಡಿಕೆಯಲ್ಲಿ ಬಂದಿತೆನ್ನುತ್ತಾರೆ. 'ಮಾಸನೂರು ಎಂದರೆ ಮಾಂಸ ಹೋಗಿ ಹೂವಾದ ಊರು' ಎಂದು ಅದಕ್ಕೆ ಅಲ್ಲಿಯ ಪೂಜಾರಿ ಅಣ್ಣಸಾಹೇಬ ವಿವರಣೆ ನೀಡುತ್ತಾನೆ.

ಈ ದೇವಾಸ್ಥಾನ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಪುರಾತನವಾದ ಈ ದೇವಾಲಯವನ್ನು ಯಥಾವತ್ತಾಗಿ ಉಳಿಸಿಕೊಂಡು ಬರುತ್ತಿದ್ದಾರೆ. ಮೊದಲು ಈ ಪ್ರದೇಶ ಪೂರ್ಣ ಕಾಡಾಗಿತ್ತು. ದಿನಕ್ಕೆ ಎರಡು ಸಾರೆ ಮಂದಿರಕ್ಕೆ ಬಂದು ಪೂಜೆ ನೆರವೇರಿಸುವುದೂ ತೊಂದರೆದಾಯಕವಾಗಿತ್ತು. ಪೂಜೆಯ ಮೂರ್ತಿ ತಾಮ್ರದ್ದು ಇತ್ತಂತೆ. ಪೂಜಾರಿ ಸಂಜೆಗೆ ಬರಲು ಹೆದರಿ ತನ್ನ ಮನೆಯಲ್ಲಿಯೇ ಮೂರ್ತಿಯನ್ನಿಟ್ಟು ಪೂಜಿಸತೊಡಗಿದನಂತೆ. ಅದೇ ಮೂರ್ತಿಯನ್ನು ಅವರ ಮನೆಯಿಂದ ಜಾತ್ರೆಯ ಸಮಯದಲ್ಲಿ ಮೆರವಣಿಗೆಯಲ್ಲಿ ತಂದು ಪೂಜಿಸುತ್ತಾರಂತೆ.

ಮಹಾಶಿವರಾತ್ರಿಯಂದು ಐದುದಿನ ಜಾತ್ರೆ ನಡೆಯುತ್ತದೆ. ಶ್ರಾವಣ ಮಾಸಪೂರ್ಣ ಅಭಿಷೇಕ ನಡೆಯುತ್ತದೆಯಂತೆ. ನಂದಾದೀಪ ಇಡಲಾಗುತ್ತದೆ. ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಊರೆಲ್ಲ ಪಲ್ಲಕ್ಕಿ ಮೆರವಣಿಗೆ ಮಾಡಿ ನಂತರ ದೇವಾಲಯಕ್ಕೆ ಉತ್ಸವ ಮೂರ್ತಿ ತಂದು ಇಟ್ಟು ಪೂಜಿಸುತ್ತಾರೆ.

ಈ ಗುಡಿಯ ಪೂಜಾರಿಯ ಊರು ಬ್ರಹ್ಮಪುರ. ಬ್ರಹ್ಮಪುರವು ಗುಡಿಯಿಂದ ೧ ಕಿ.ಮಿ. ದೂರ ಇದೆ. ೫೨ ಎಕರೆ ಇನಾಮು ಕೊಟ್ಟ ಸ್ಥಳದಲ್ಲಿ ದೇವಾಲಯ ಇದೆ. ಇಲ್ಲಿ ಪೂಜಾರಿ ಇದ್ದಾಗಲೂ ಭಕ್ತರು ಲಿಂಗಭೇದ ಇಲ್ಲದೆ ಗರ್ಭಗುಡಿಯೊಳಗೆ ಹೋಗಿ ತಾವೇ ಲಿಂಗಕ್ಕೆ ಹೂ ಪತ್ರಿ ಏರಿಸಿ ಕುಳಿತು ಪೂಜೆ ಮಾಡುತ್ತಾರೆ. ಯಾವ ಗುಡಿಯಲ್ಲೂ ಕಾಣದ ವಿಶೇಷತೆ ಇಲ್ಲಿ ಉಳಿದುಕೊಂಡು ಬಂದಿದೆ.



ರೇವಣಸಿದ್ಧೇಶ್ವರ ಮಂದಿರದ ಪ್ರವೇಶ ದ್ವಾರದ ಅಂಗಳದ
ದಿಬ್ಬದ ಮೇಲಿರುವುದು ಮಲ್ಲಿಕಾರ್ಜುನ ದೇವಾಲಯ



ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹದ ಎದುರಿನ ಮಂಟಪ

ರೇವಣಸಿದ್ಧೇಶ್ವರ ದೇವಸ್ಥಾನವನ್ನು ಇಲ್ಲಿಯ ಜನ ಸಿದ್ಧೇಶ್ವರ ದೇವಸ್ಥಾನವೆಂದೇ ಕರೆಯುತ್ತಾರೆ. ಈ ರೇವಣಸಿದ್ಧೇಶ್ವರ ದೇವಸ್ಥಾನದ ಅಂಗಳದ ಎಡಗಡೆಯ ದಿಬ್ಬದ ಮೇಲೆ ತೀರ ಪುರಾತನವೆನಿಸುವ ಮಲ್ಲಿಕಾರ್ಜುನ ದೇವಾಲಯವಿದೆ. ಇವೆರಡೂ ದೇವಸ್ಥಾನಗಳು ಜೋಡಿ ದೇವಸ್ಥಾನಗಳಾಗಿವೆ. ಎರಡೂ ಗುಡಿಗಳನ್ನು ಒಳಗೊಂಡಂತೆಯೇ ವಿಸ್ತಾರವಾದ ಆವಾರ ಗೋಡೆ ಇದೆ. ಉತ್ತರದ ಗೋಡೆಗೆ ಭೀಮಾನದಿಗೆ ಇಳಿದು ಹೋಗಲು ಬೃಹತ್ತಾದ ಮತ್ತೊಂದು ದ್ವಾರವಿದೆ. ಈ ದ್ವಾರದ ಎದುರಿಗೆಯೇ ಜಟಾಶಂಕರ ಗುಡಿ ಭೀಮಾನದಿಯಲ್ಲಿ ಇರುವುದು.

ಈ ಊರಿನಿಂದ ಸುಮಾರು ೧೫ ಕಿ.ಮೀ.ದೂರದಲ್ಲಿ ಸಿದ್ಧನಕೆರೆ ಎಂಬ ಗ್ರಾಮವಿದೆ. ಇಲ್ಲಿಯೂ ತ್ರಿಕೂಟ ಗರ್ಭಗೃಹಗಳಿಂದ ಕೂಡಿದ ರೇವಣಸಿದ್ಧೇಶ್ವರ ಮಂದಿರವಿದೆ. ಸಿದ್ಧನಕೆರೆಯಲ್ಲಿಯೇ ರೇವಣಸಿದ್ಧನ ಮಗ ರುದ್ರಮುನಿ ಜನಿಸಿದನೆಂದು ಹೇಳಲಾಗುತ್ತದೆ. ಹೀಗೆ ಮಂಗಳವೇಡೆ, ಮಾಚನೂರು, ಸಿದ್ಧನಕೆರೆ ಹಾಗೂ ಸೋಲ್ಲಾಪುರಗಳು ಮುಖ್ಯವಾಗಿ ರೇವಣಸಿದ್ಧ ಓಡಾಡಿಕೊಂಡಿರುವ ಪ್ರಸಿದ್ಧ ಊರುಗಳೆನಿಸುತ್ತವೆ.

ಮಾಹಿತಿ : ಅಣ್ಣಾಸಾಹೇಬ ಕೇಶವ ಚೌಗುಲೆ,
ಗುರುವ ಪೂಜಾರಿ, ಮಾಸನೂರು

***

ಪಂಢರಪೂರ ತಾಲೂಕು :

## ಪುಳಜೆ :

## ಅಮುಗಿದೇವ-ವರದಾನಿ

ಅಮುಗಯ್ಯ ನಿನ್ನಾಡ ನಮಗಾಯ್ತು ಶಿವಮಂತ್ರ
ಯಮಗಾಯ್ತು ಕುತ್ತು ಶಿವಜೀವ । ಎತ್ತುದಕೆ
ಅಮರಾಯ್ತು ಜನಕೆ ಹೊಸಮತವು

ಶರಣರಾದ ಅಮುಗಿದೇವ ಮತ್ತು ವರದಾನಿ ದಂಪತಿಗಳು ಕಲ್ಯಾಣದ ಕ್ರಾಂತಿಯ ನಂತರ ನೆಲೆನಿಂತ ಊರು ಪುಳಜೆ. ಇದು ವಿಠ್ಠಲನ ಪಂಢರಪೂರ ಸಮೀಪದ ಊರು. ಆಗಿನ ಕಾಲಕ್ಕೆ ಕನ್ನಡದ ನೆಲೆವೀಡಾದ ಈ ಊರಿನ ಪ್ರಸಿದ್ಧ ದೈವ



ಸಿದ್ಧಸೋಮನಾಥ ದೇವಾಲಯದ ಪ್ರವೇಶ ದ್ವಾರ



ಸಿದ್ಧಸೋಮನಾಥ ದೇವಾಲಯದ ಒಳಾಂಗಣದ ಒಂದು ಮಗ್ಗಲು ದೃಶ್ಯ


ಸೋಮನಾಥಲಿಂಗ. ಈಗ ಅಲ್ಲಿರುವ ಪೂಜಾರಿಗಳಿಗೆ ಈ ದೇವಸ್ಥಾನದ ಹೆಸರು ಕೂಡ ಸರಿಯಾಗಿ ತಿಳಿದಿಲ್ಲ. ಆ ಊರಿನವರೆಲ್ಲ ಇದು ಯಾವ ದೇವರ ಮಂದಿರವೆಂದರೆ ಲಿಂಗೇಶ್ವರ ಮಂದಿರ ಎನ್ನುತ್ತಾರೆ. ಸೋಮನಾಥ ಎಲ್ಲಿ ಎಂದು ಕೇಳಿದರೆ ಸೋಮನಾಥ ದೇವಾಲಯದ ಗರ್ಭಗುಡಿಯ ಹಿಂದಿರುವ ಒಂದು ಸಮಾಧಿ ಗುಡಿಯನ್ನು ತೋರಿಸುತ್ತಾರೆ. ಈ ಗುಡಿಯಲ್ಲಿ ಎರಡು ಪ್ರತ್ಯೇಕವಾದ ಸಮಾಧಿಗಳಿವೆ. ಬಹುಶಃ ಈ ಸಮಾಧಿಗಳು ಅಮುಗಯ್ಯ ಮತ್ತು ವರದಾನಿ ಅವರವಾಗಿರುವ ಸಾಧ್ಯತೆ ಇದೆ. ಏಕೆಂದರೆ ಅಮುಗಯ್ಯ ಅವರು ಕಲ್ಯಾಣದಿಂದ ಹಿಂತಿರುಗಿ ಬಂದು ಉಳಿದುಕೊಂಡದ್ದು, ಪುಳಜೆಯ ಈ ಸೋಮನಾಥ ದೇವಾಲಯದಲ್ಲಿಯೇ. ಈ ದೈವ ಅಮುಗಯ್ಯನ ಮನೆಯ ದೇವರು, ಆರಾಧ್ಯ ದೈವ.

ಇಷ್ಟಲಿಂಗದ ಮೇಲೆ ಇಟ್ಟ ಭಕ್ತಿಯು ಮಿಗಿಲು  
ಕಟ್ಟಾಲಿಂಗಿಗಳ ಮನೆದೇವ । ಹೂಳಜೆಯ  
ಶಿಷ್ಟ ಸೋಮೇಶ ದಯಮಾಡಿ

ಅಮುಗಯ್ಯನವರು ಇಲ್ಲಿಯ ಆಚಾರ್ಯರಾಗಿರುವಂತೆ ಈ ಮಂದಿರದಲ್ಲಿರುವ ಕನ್ನಡದ ಶಾಸನ ಹೇಳುತ್ತದೆ. ಆದರೆ ಅಮುಗಯ್ಯ ಮತ್ತು ವರದಾನಿ ಅವರ ಪರಿಚಯ ಈ ದೇವಾಲಯದ ಸುತ್ತಲಿರುವ ಜನರಿಗೆ ಏನೇನೂ ತಿಳಿದಿಲ್ಲ. ಇದೊಂದು ಇಲ್ಲಿರುವ ಖೇದದ ಸಮಾಚಾರವಾಗಿದೆ.

ಇಲ್ಲಿಯ ಪೂಜಾರಿಗಳು ಲಿಂಗಾಯತರಾಗಿದ್ದಾರೆ. ಅಚ್ಚಗನ್ನಡದ ನೆಲ ಈಗ ಅಚ್ಚ ಮರಾಠಿಮಯವಾಗಿದೆ. ಈ ಗುಡಿಯಲ್ಲಿರುವ ಪೂಜಾರಿಗಳಿಗೆ ಕನ್ನಡ ಬರುವುದಿಲ್ಲ. ಆದರೆ ಇಲ್ಲಿರುವ ಕನ್ನಡದ ಶಾಸನವನ್ನು ಅತ್ಯಂತ ಸಂತೋಷದಿಂದ ತೋರಿಸುತ್ತಾರೆ. ಅದನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಸೋಮನಾಥ ದೇವಾಲಯವಂತೂ ತುಂಬಾ ವಿಸ್ತಾರವಾಗಿದೆ, ಸುಂದರವಾಗಿದೆ, ಭವ್ಯವಾಗಿದೆ. ಗರ್ಭಗೃಹ, ಅಂತರಾಳ, ನವರಂಗ, ಮಂಟಪ, ತರೆದ ಮಂಟಪ ಹೀಗೆ ಐದು ಭಾಗಗಳುಳ್ಳ ಅತ್ಯಂತ ದೊಡ್ಡ ಮಂದಿರ ಇದು. ನಾವು ನೋಡಿದ ದೇವರ ಹಿಪ್ಪರಗಿಯ ಕಲ್ಲಿನಾಥ ಮಂದಿರ, ಬಸವಕಲ್ಯಾಣ ಸಮೀಪದ ಚಿಟ್ಟಾ (ಕೆ) ಗ್ರಾಮದಲ್ಲಿರುವ ಕಲ್ಮೇಶ್ವರ ಮಂದಿರ, ಉಪ್ಪಲದಿನ್ನಿಯ ಮುಗ್ಧಸಂಗಯ್ಯನ ಮಂದಿರ, ಅಲ್ಲಿರುವ ಶಿವಮಂದಿರ ಇವೆಲ್ಲವುಗಳಿಗಿಂತ ಭವ್ಯವಾಗಿದೆ ಈ ಸೋಮನಾಥ ದೇವಾಲಯ. ಬಹುಶಃ ಶರಣರಿಗೆ ಸಂಬಂಧಿಸಿದ ದೇವಾಲಯಗಳಲ್ಲಿ ಬಸವನಬಾಗೇವಾಡಿಯ ಬಸವೇಶ್ವರ ಮಂದಿರದ ನಂತರ ಎರಡನೇ ಸ್ಥಾನವನ್ನು ಪುಳಜೆಯ ಸೋಮನಾಥ ದೇವಾಲಯಕ್ಕೆ ಕೊಡಬೇಕಾಗುತ್ತದೆ. ಇವೆಲ್ಲವುಗಳಿಗಿಂತ ಭವ್ಯವಾದುದು ಸೊಲ್ಲಾಪುರ ಸಿದ್ಧರಾಮೇಶ್ವರ ದೇವಾಲಯ.

ಶರಣರಾದ ಅಮುಗಿದೇವ ಮತ್ತು ವರದಾನಿ ದಂಪತಿಗಳು ಪ್ರಾರಂಭದಲ್ಲಿ ಸೊನ್ನಲಗಿಯಲ್ಲಿ ಇರುತ್ತಾರೆ. ಇವರು ಸೊನ್ನಲಿಗೆಯವರು ಎಂದು ತಿಳಿದುಬರುತ್ತದೆ.



ಸಿದ್ಧಸೋಮನಾಥ ದೇವಾಲಯದ ಮಂಟಪ



ಸಿದ್ಧಸೋಮನಾಥ ದೇವಾಲಯದ ಗರ್ಭಗೃಹದ ಶಿವಲಿಂಗ

ಕುರುಸೆಟ್ಟಿ ಲಿಂಗಿಗಳು ಹರಮತದ ಸೇವಕರು
ನೆರುವಾಗಿ ನೇಗಿ ಕಾಯಕವು । ಸೊನ್ನಲಗಿ
ಶರಣ ಅಮುಗಯ್ಯ ಹುಟ್ಟಿದ್ದು

ಈಗಿನ ಸೊಲ್ಲಾಪೂರಕ್ಕೆ ಸಿದ್ಧರಾಮನ ಕಾಲದಲ್ಲಿ ಸೊನ್ನಲಗಿ, ಸೊನ್ನಲಾಪುರ ಎಂದು ಕರೆಯುತ್ತಿದ್ದರು. ಆ ಹಳೆಯ ಊರು ಇಂದಿಗೂ ತನ್ನ ಹೆಸರನ್ನು ಉಳಿಸಿಕೊಂಡಿದೆ. ಈಗ ಹೊಸದಾಗಿ ಬೆಳೆಯುತ್ತ ಹೋದ ಊರು ಸೊಲ್ಲಾಪೂರ ಎಂದು ಪ್ರಸಿದ್ಧವಾಗಿದೆ.

ಸೊನ್ನಲಗಿಯಲ್ಲಿಯ ಈ ದಂಪತಿಗಳ ಲಿಂಗನಿಷ್ಠೆ ಯಾರಿಗೂ ಹೋಲಿಕೆಯಾಗ ದಂತಹದು. ಇಂಥ ಲಿಂಗನಿಷ್ಠರ ಮನೆಗೆ ಎಲ್ಲರಿಗೂ ಕಳಿಸುವಂತೆ ಮಲ್ಲಿಕಾರ್ಜುನನ ಪರ್ವಕ್ಕೆ ಕೊಟ್ಟಣ ಕುಟ್ಟಿಕೊಡಲು ಸಿದ್ಧರಾಮ ಕಳಿಸಿರುತ್ತಾನೆ. ಆಗ ಧಾನ್ಯ ತಂದವರಿಗೆ ಅತ್ಯಂತ ನಿಷ್ಠುರವಾಗಿಯೆ ಅಮುಗಿದೇವ ತಮ್ಮಿಂದ ಕುಟ್ಟಿಕೊಡಲಾಗದು ಎಂದು ಹೇಳಿಬಿಡುತ್ತಾನೆ. ಅಲ್ಲಿ ದೊಡ್ಡ ವಾಗ್ವಾದವೇ ಏರ್ಪಡುತ್ತದೆ. ಸಿದ್ಧರಾಮನ ಅಂಗದ ಮೇಲೆ ಲಿಂಗವಿಲ್ಲದ ಕಾರಣ ನಾವು ಈ ಧಾನ್ಯ ಕುಟ್ಟಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆಗಲೂ ಕೇಳದೇ ಹೋದಾಗ ಆ ಧಾನ್ಯವನ್ನು ತಿಪ್ಪೆಗೆ ಹಾಕುತ್ತಾರೆ. ಇದರಿಂದ ಕೋಪಗೊಂಡ ಸಿದ್ಧರಾಮ ಅವರಿಗೆ ಊರು ಬಿಟ್ಟು ಹೋಗಲು ಆಜ್ಞೆ ಮಾಡುತ್ತಾನೆ.

ಅಮುಗಿದೇವನಿಗೆ ಒಂದು ಕ್ಷಣವೂ ಅಲ್ಲಿ ನಿಲ್ಲಲು ಆಗುವುದಿಲ್ಲ. ತನ್ನ ಮನೆಯ ವಸ್ತುಗಳನ್ನು ಮೂರು ಗಂಟಿನಲ್ಲಿ ಕಟ್ಟುತ್ತಾನೆ. ತಾನೊಂದು, ತನ್ನ ಹೆಂಡತಿ ವರದಾನಿಯೊಂದು ಗಂಟನ್ನು ಹೊತ್ತು ಬಸವ ಕಲ್ಯಾಣದತ್ತ ಪ್ರಯಾಣ ಬೆಳೆಸುತ್ತಾರೆ. ಆಗ ಮಲ್ಲಿಕಾರ್ಜುನನು ಉಳಿದ ಇನ್ನೊಂದು ಗಂಟನ್ನು ಹೊತ್ತುಕೊಂಡು ಬಸವಕಲ್ಯಾಣದ ಹತ್ತಿರ ಇರುವ ಶಿವಪುರದ ಕೆರೆಯ ದಂಡೆಯ ಮೇಲಿರುವ ಗುಡಿಯಲ್ಲಿ ಇಳಿಸುತ್ತಾನೆ. ಅಮುಗಿದೇವ ದಂಪತಿಗಳು ಅಲ್ಲಿಗೆ ಬರುವಂತೆ ಮಾಡುತ್ತಾನೆ. ಅವರು ಅಲ್ಲಿಯೇ ಬಂದು ಉಳಿದುಕೊಳ್ಳುತ್ತಾರೆ.

ಮರುದಿನ ಬೆಳಿಗ್ಗೆ ಮಲ್ಲಿಕಾರ್ಜುನನಿಗೆ ಎಣ್ಣೆಮಜ್ಜನ ಮಾಡಿಸಲು ಸಿದ್ಧರಾಮ ಲಿಂಗಕ್ಕೆ ಎಣ್ಣೆ ಹಚ್ಚುವಾಗ ಲಿಂಗದೊಳಗಿಂದ ಮಲ್ಲಿಕಾರ್ಜುನನು 'ಎಲೊ ಸಿದ್ಧರಾಮ ಸಾವಕಾಶ ಎಣ್ಣೆ ಹಚ್ಚು, ಅಮುಗಿದೇವನ ಹೊರೆಹೊತ್ತು ತಲೆ ನೋವಾಗಿದೆ' ಎನ್ನುತ್ತಾನಂತೆ. ಅದನ್ನು ಕೇಳಿದ ಸಿದ್ಧರಾಮನಿಗೆ ಆಶ್ಚರ್ಯವಾಗುತ್ತದೆ. ಆ ಭಕ್ತ ಹೋದ ಸ್ಥಳ ಕೇಳಿ, ತಪ್ಪನ್ನು ತಿದ್ದಿಕೊಳ್ಳಲು ಪ್ರಯತ್ನಿಸುತ್ತಾನೆ. ನೇರವಾಗಿ ಶಿವಪುರಕ್ಕೆ ಬರುತ್ತಾನೆ. ಅಮುಗಿದೇವನಲ್ಲಿ ಕ್ಷಮೆ ಕೇಳುತ್ತಾನೆ. ಮರಳಿ ಸೊನ್ನಲಗಿಗೆ ಬರಲು ವಿನಂತಿಸಿಕೊಳ್ಳುತ್ತಾನೆ. ಆದರೆ ಅಮುಗಿದೇವಯ್ಯ ಅವನ ವಿನಂತಿಯನ್ನು ಒಪ್ಪಿಕೊಳ್ಳುವದಿಲ್ಲ. 'ನೀನು ಅಂಗದ



ಸಿದ್ಧಸೋಮನಾಥಲಿಂಗ ದೇವಾಲಯದ ಗರ್ಭಗೃಹದ ಹಿಂದೆ ಇರುವ ಸಮಾಧಿ ಮಂದಿರ. ಅಮುಗಯ್ಯ- ವರದಾನಿ ಸಮಾಧಿಗಳಾಗಿರಬಹುದು?



ಅಮುಗೆಯ್ಯ ವರದಾನಿ ಸಮಾಧಿ?

ಮೇಲೆ ಲಿಂಗಧರಿಸದ ಹೊರತು ನಿನ್ನ ಮಾತನ್ನು ಕೇಳಲಾರೆ' ಎನ್ನುತ್ತಾನೆ. ಕಲ್ಯಾಣದ ಬಸವಣ್ಣನವರನ್ನು ಕಂಡು ಲಿಂಗದೀಕ್ಷೆ ಪಡೆ ಎಂಬ ಸಲಹೆ ಕೊಡುತ್ತಾನೆ.

ಗಂಡ-ಹೆಂಡತಿ ಶಿವಪುರದ ಹೊರವಲಯದ ಕೆರೆಯ ದಂಡೆಯ ಮೇಲಿನ ಶಿವಲಿಂಗವಿರುವ ದೇವಸ್ಥಾನದಲ್ಲಿಯೆ ಉಳಿದುಕೊಳ್ಳುತ್ತಾರೆ. ಶಿವಪುರ ಕಲ್ಯಾಣಕ್ಕೆ ಕೇವಲ ೨ ಕಿ.ಮೀ. ಅಂತರದಲ್ಲಿ ಇರುವುದರಿಂದ ಕಲ್ಯಾಣಕ್ಕೆ ಹೋಗಿ ಬಂದು ಮಾಡಲು ಅನುಕೂಲವಾದ ಸ್ಥಳ. ಇಬ್ಬರೂ ವಚನ ರಚನೆ ಮಾಡುತ್ತಾರೆ. ಉಪಜೀವನಕ್ಕಾಗಿ ನೇಯ್ಗೆ ಕಾಯಕವನ್ನೇ ಮುಂದುವರೆಸಿಕೊಂಡು ಹೋಗಿರಬಹುದು. ಕಲ್ಯಾಣ ಕ್ರಾಂತಿಯವರೆಗೆ ಶಿವಪುರದಲ್ಲಿಯೇ ನೆಲೆಸಿದ್ದು, ಕ್ರಾಂತಿ ಪ್ರಾರಂಭವಾದ ನಂತರ, ತನ್ನ ಆರಾಧ್ಯ ದೈವವಾದ ಸಿದ್ಧಸೋಮನಾಥನಲ್ಲಿಗೆ ಹೊರಟು, ಪುಳಜೆಗೆ ಬಂದಂತೆ ತೋರುತ್ತದೆ.

ಪುಳಜೆ ಸೊಲ್ಲಾಪೂರದಿಂದ ಪಶ್ಚಿಮಕ್ಕೆ ೪೨ ಕಿ.ಮೀ. ದೂರದಲ್ಲಿದೆ. ಈ ಊರಿಗೆ ಪುಳೂಜ, ಪುಳಜ, ಹುಳಜ ಎಂದು ಕರೆಯುತ್ತಾರೆ. ಈ ಊರಿನ ಆರಾಧ್ಯ ದೈವ ಸಿದ್ಧಸೋಮನಾಥಲಿಂಗ. ಈ ಗುಡಿ ಅತ್ಯಂತ ಪ್ರಾಚೀನವಾಗಿದೆ. ಭೀಮಾನದಿ ತೀರದ ಮೇಲೆ ಇದೆ. ಅಮುಗಿದೇವ ಪುಳಜ ಗ್ರಾಮಕ್ಕೆ ಬಂದಿರುವ ಸಾಧ್ಯತೆಯೇ ಹೆಚ್ಚು ಎನ್ನುವುದಕ್ಕೆ ಶಾಸನ ಆಧಾರಗಳು ಸಿಗುತ್ತವೆ. ಕಲಚುರಿಗಳ ನಂತರ ಚಾಲುಕ್ಯರು, ಚಾಲುಕ್ಯರ ಅಲ್ಪಾವಧಿ ಆಡಳಿತದ ನಂತರ ದೇವಗಿರಿಯ ಯಾದವರು ಈ ಭಾಗವನ್ನು ಆಳಿದಂತೆ ತೋರುತ್ತದೆ.

ದೇವಗಿರಿಯ ಯಾದವರ ಮಗ ಸಿಂಘಣನು ಮಹತ್ವಾಕಾಂಕ್ಷಿ ದೊರೆ. ಅಷ್ಟೇ ಆತ್ಮವಿಶ್ವಾಸ, ಶೌರ್ಯವುಳ್ಳ ದೊರೆ. ಹೀಗಾಗಿ ಇಡೀ ಉತ್ತರ ಕರ್ನಾಟಕವನ್ನು ತನ್ನ ಸುಪರ್ದಿಗೆ ತೆಗೆದುಕೊಂಡನು. ಅವನು ಕ್ರಿ.ಶ. ೧೯೪೯ ರಲ್ಲಿ ವಿಜಾಪೂರ ಪ್ರಾಂತಕ್ಕೆ ಬಂದಾಗ, ಶರಣರಲ್ಲಿ ಕ್ರಾಂತಿಯ ನಂತರ ಪುಳಜದಲ್ಲಿ ಉಳಿದುಕೊಂಡು, ಅದೇ ಲಿಂಗನಿಷ್ಠೆಯನ್ನು ಉಳಿಸಿಕೊಂಡು, ಶರಣರ ತತ್ವಗಳನ್ನು ಶಿವಾನುಭವದ ಮೂಲಕ ಜನರಿಗೆ ಪ್ರಸಾರ ಮಾಡುತ್ತಿದ್ದವನು ಅಮುಗಯ್ಯ ಎಂಬ ಸಂಗತಿ ಸಿಂಘಣನಿಗೆ ತಿಳಿದು ಬರುತ್ತದೆ. ಆಗ ಆ ಅಮುಗಯ್ಯ ಶರಣನನ್ನು ನೋಡುವ ಹಂಬಲದಿಂದ ಸೈನ್ಯ ಸಮೇತನಾಗಿ ಪುಳಜಕ್ಕೆ ಬರುತ್ತಾನಂತೆ. ಶರಣ ಅಮುಗಯ್ಯನನ್ನು ಕಂಡು ಹರ್ಷಗೊಂಡು, ಅವನ ದಾಸೋಹ ಜೀವನಕ್ಕೆ ಇನ್ನಷ್ಟು ಅನುಕೂಲ ಆಗಲಿ ಎಂಬ ಕಾರಣಕ್ಕಾಗಿ ಅವನಿಗೆ 'ಇಥ್ಥೆ' ಎಂಬ ಗ್ರಾಮವನ್ನೇ ಉಂಬಳಿ ಹಾಕಿಕೊಟ್ಟನಂತೆ. 'ಇಟೆ' ಗ್ರಾಮವು ಪುಳಜದ ಪಶ್ಚಿಮಕ್ಕೆ ಎರಡು ಮೈಲು ದೂರದಲ್ಲಿದೆ. ಇದಕ್ಕೀಗ 'ಇಟ' ಎಂದು ಕರೆಯುತ್ತಾರೆ. ಶಾಸನದಲ್ಲಿ "ಶ್ರೀಸ್ವಯಂಭು ಸಿದ್ಧಸೋಮನಾಥ ದೇವರ್ಗೆಂದಾ ಯಿಥ್ಥೆಯವನು ಸರ್ವನಮಶಯವಾಗಿ ಅಮ್ಮುಗಿದೇವರಸರ್ಗೆ ಅಕರ ಪರಿಹಾರವಾಗಿ ಧಾರಾಪೂರ್ವಕಂ ಮಾಡಿಕೊಟ್ಟರು" ಎಂದು ಬರುತ್ತದೆ. ಅಲ್ಲದೆ 'ಸಿದ್ಧಸೋಮನಾಥ ಲಿಂಗ' (ಈಗ ಜನರ ಬಾಯಲ್ಲಿ ಉಳಿದಿರುವ ಲಿಂಗೇಶ್ವರ) ದೇವಾಲಯಕ್ಕೆ ಬಹಳಷ್ಟು ಬೂಮಿಯನ್ನು ದಾನರೂಪದಲ್ಲಿ ಕೊಟ್ಟನೆಂದು ಶಾಸನ ಹೇಳುತ್ತದೆ.



ಅಮುಗೆಯ್ಯ ವರದಾನಿ ಸಮಾಧಿ?

ಈ ಊರಿನ ಹೆಸರು 'ಪೂರ್ಣಜಾ' ಎಂದೂ 'ಹೂಳಜೆ' ಎಂದೂ ಇರುವಂತೆ ಶಾಸನ ಉಲ್ಲೇಖಿಸುತ್ತದೆ. ಅಲ್ಲದೆ ಸಿಂಘಣನ ಆಡಳಿತದಲ್ಲಿ ಕಾರ್ಯ ನಿರ್ವಹಿಸುವ ಆಡಳಿತಾಧಿಕಾರಿಗಳಾದ ಸಾಹಣಿಕುಮಾರ, ಸೋಯಿದೇವ, ಗಂಗಿದೇವ, ಸಂಕಮದೇವ, ಬಿಜ್ಜನಾಣ, ರವಿಯದೇವ, ಜೋಯಿದೇವ ಇವರೆಲ್ಲರೂ ಕೂಡ ದೇವಾಲಯಕ್ಕೆ ದಾನ ಕೊಟ್ಟ ವಿಷಯ ಶಾಸನದಲ್ಲಿ ದೊರಕುತ್ತದೆ. ಈ ಶಾಸನದ ವರ್ಷ ಕ್ರಿ.ಶ. ೧೨೨೯. ಈ ಶಾಸನದಲ್ಲಿ ಅಮುಗಿದೇವನು– 'ಶಿವಾಚಾರೈಕನಿರತ, ಲಿಂಗೈಕ್ಯ ಲಿಂಗವೇದಕ' ಎಂದು, 'ಮಾಹೇಶ್ವರಗಣ ಕುಲಾನ್ವಯ ದಿವಾಕರ', 'ಭಕ್ತಜನ ಚಿಂತಾಮಣಿ', 'ಶ್ರೀ ಸಿದ್ಧಸೋಮನಾಥದೇವ ಶ್ರೀ ಪಾದಪಂಕಜ ಭ್ರಮರ ಲಿಂಗೈಕ್ಯದೇಹಿ', 'ಶರಣಸಂತಾನ' ಎಂದೆಲ್ಲ ಸಿಂಘಣನಿಂದ ಬಣ್ಣಿಸಲ್ಪಟ್ಟಿದ್ದಾನೆ. ಹೀಗಾಗಿ ಅಮುಗಿದೇವ ಕಲ್ಯಾಣ ಕ್ರಾಂತಿಯ ನಂತರ ಸುಮಾರು ೩೦ ವರ್ಷಗಳವರೆಗೆ ಬದುಕಿರಬಹುದು ಎಂದು ಡಾ। ಫ. ಗು. ಹಳಕಟ್ಟಿ ಅವರು ಅಭಿಪ್ರಾಯ ಪಡುತ್ತಾರೆ.

ಇಲ್ಲಿ ಕಾರ್ತಿಕ ಹುಣ್ಣಿವೆಗೆ ೯ ದಿನ ನಿರಂತರ ಜಾತ್ರೆ ನಡೆಯುತ್ತದೆ. ತೇರನ್ನು ಎಳೆಯುವದಿಲ್ಲ, ಪಲ್ಲಕ್ಕಿ ಉತ್ಸವ ನಡೆಯುತ್ತದೆ. ದೇವರ ಪೂಜೆ ವಿಶೇಷವಾಗಿ ನಡೆಯುತ್ತದೆ. ಭಕ್ತರು ಏಳುದಿನ ಉಪವಾಸ ಇರುತ್ತಾರೆ. ಒಂಭತ್ತು ದಿನವೂ ಲಿಂಗಕ್ಕೆ ಹಾರ ಹಾಕುವ ಸಂಪ್ರದಾಯ ಇದೆ. ಎರಡನೆಯ ದಿನ ಪಲ್ಲಕ್ಕಿಯಲ್ಲಿ ಲಿಂಗೇಶ್ವರ (ಸಿದ್ಧಸೋಮನಾಥಲಿಂಗ) ಮೂರ್ತಿ ಇಟ್ಟು ಉತ್ಸವ ನೆರವೇರಿಸುತ್ತಾರೆ. ಏಳನೇ ದಿನ ಘಟಸ್ಥಾಪನ ನಡೆಯುತ್ತದೆ. ಹತ್ತನೆಯ ದಿನ ಮೊಸರು ಗಡಿಗೆ ಒಡಿಯುವ ಆಚರಣೆ ನಡೆಯುತ್ತದೆ. ಒಡೆದ ಮೇಲೆ ಹೊರಚಲ್ಲುವ ಮೊಸರನ್ನೇ ಪ್ರಸಾದವೆಂದು ವಿತರಣೆ ಮಾಡುವ ಸಂಪ್ರದಾಯವೊಂದು ಇಲ್ಲಿ ಇದೆ ಎಂದು ಭಕ್ತರು ಹೇಳುತ್ತಾರೆ. ಇವತ್ತಿಗೂ ಇದೊಂದು ಜಾಗ್ರತ ಕ್ಷೇತ್ರವಾಗಿ ಜನಮಾನಸದಲ್ಲಿ ನೆಲೆನಿಂತಿದೆ. ಉಂಬಳಿಯಾಗಿ ಅಮುಗಯ್ಯನಿಗೆ ಬಿಟ್ಟ 'ಇಥ್ಥೆ' (ಇಟೆ) ಊರಿನಲ್ಲಿ ಯಾವುದೇ ಸ್ಮಾರಕ ಉಳಿದುಕೊಂಡಂತೆ ಕಾಣಿಸುವುದಿಲ್ಲ.

ಅಮುಗಿದೇವನ ವಚನ : ೩೦
ಅಂಕಿತನಾಮ : ಸಿದ್ಧಸೋಮನಾಥಲಿಂಗ
ಅಮುಗಿರಾಯಮ್ಮ :೧೧೬
ಅಂಕಿತ : ಅಮುಗೇಶ್ವರಲಿಂಗ
ಮಾಹಿತಿ : ರಾಮದಾಸ, ಭುಜಂಗರಾವ ಸಾತಲಿಂಗ ಮಹಾಮನಿ ಪುಳಜ

***

## ಸೊಲ್ಲಾಪುರ ತಾಲೂಕು :

### ಸೊನ್ನಲಿಗೆ :

### ಸಿದ್ಧರಾಮನ ಊರು

ಊರ ಸುತ್ತ ಲಿಂಗ ಕೇರಿ ಸುತ್ತ ಲಿಂಗ
ಬಾಜಾರ ಸುತ್ತ ಬಸವಣ್ಣ । ಸೋಲಾಪುರ
ಸಿದ್ಧರಾಮನ ಸುತ್ತ ಸಿರಿಗಂಗಿ

ಹಾದಿಹಾದಿಗೆ ಗುಡಿಯ ಬೀದಿಬೀದಿಗಿ ಕೆರಿಯ
ಸಾಧಿಸಿದ ಕಟ್ಟಿ ಸಿದ್ಧರಾಮ । ಸೊನ್ನಲಿಗೆ
ಸಾಧುಸಿದ್ಧನಿಗೆ ಮನೆಯಾತು



ಸೊನ್ನಲಗಿ ಎಂಬ ಗಲ್ಲಿಯಲ್ಲಿಯ ಸಿದ್ಧರಾಮ ಹುಟ್ಟಿದ ಮನೆ ಈಗ ಮಂದಿರ



ಮಹಾರಾಷ್ಟ್ರದ ಪ್ರಸಿದ್ಧ ಜಿಲ್ಲೆ ಸೊನ್ನಲಿಗೆ; ಈಗಿನ ಸೊಲ್ಲಾಪುರ. ಹನ್ನೆರಡನೆಯ ಶತಮಾನದಲ್ಲಿ ಸೊನ್ನಲಿಗೆ ಕರ್ನಾಟಕದ ಪ್ರದೇಶವಾಗಿತ್ತು. ಈಗಲೂ ಅಲ್ಲಿ ಕನ್ನಡ ಭಾಷಿಕರ ಸಂಖ್ಯೆಗೇನು ಕೊರತೆಯಿಲ್ಲ. ಆದರೆ ಕನ್ನಡ ಪರಿಸರವನ್ನು ಉಳಿಸಿಕೊಳ್ಳುವುದು ಕಠಿಣವಾಗಿದೆ. ಸಿದ್ಧರಾಮನು ಶಿವನ ಅಣತಿಯಂತೆ ಮರ್ತ್ಯದಲ್ಲಿ ಜನನ ತಾಳಿದ, ಮುದ್ದುಗೌಡ ಸುಗ್ಗಲದೇವಿಯರ ಮಗ. ಈ ಮಗನ ಜನನ ಆಗುತ್ತದೆಯೆಂದು ಸೂಚನೆಯನ್ನು ಕೊಟ್ಟವರು ಆಗ ಮಂಗಳವೇಡೆಯಲ್ಲಿದ್ದ ರೇವಣಸಿದ್ಧರು.

### ಹುಟ್ಟಿದ ಮನೆ ಸ್ಮಾರಕ :

ಸೊಲ್ಲಾಪುರದಲ್ಲಿ ಸೊನ್ನಲಿಗೆ ಅಥವಾ ಸೊನ್ನಲಾಪುರ ಎಂದು ಕರೆಯುವ ಒಂದು ಭಾಗ ಇದೆ. ಇದೇ ಪ್ರಾಚೀನ ಸೊನ್ನಲಾಪುರ ಎಂದು ಹೇಳಲಾಗುತ್ತದೆ. ಸೊಲ್ಲಾಪುರದ ಈ ಭಾಗದಲ್ಲಿ ಒಂದು ಸಿದ್ಧರಾಮೇಶ್ವರ ಮಂದಿರ ಇದೆ. ಇದು ಸಿದ್ಧರಾಮ ಹುಟ್ಟಿದ ಮನೆ ಎಂದೂ ಅದನ್ನೇ ಒಂದು ಮಂದಿರವಾಗಿ ಪರಿವರ್ತಿಸಿ, ಉಳಿಸಿದ್ದಾರೆಂದೂ ಹೇಳಲಾಗುತ್ತದೆ. ಹೀಗೆ ಸಿದ್ಧರಾಮ ಹುಟ್ಟಿದ ಮನೆ ಸ್ಮಾರಕವಾಗಿ ಉಳಿದಿರುವುದು ಅಪರೂಪದ ಸಂಗತಿ.




ಒಂದು ಸಾರೆ ರೇವಣಸಿದ್ಧರು ಮಂಗಳವೇಡೆಯಿಂದ ತಮ್ಮ ಶಿಷ್ಯರೊಂದಿಗೆ ಪಲ್ಲಕ್ಕಿಯಲ್ಲಿ ಕುಳಿತು ಸೊನ್ನಲಿಗೆಗೆ ಬಂದರಂತೆ. ಪುರಪ್ರವೇಶಿಸುತ್ತಲೆ ಪಲ್ಲಕ್ಕಿಯಿಂದ ಇಳಿದು ಕಾಲಲ್ಲಿಯ ಹಾವುಗೆ ಬಿಚ್ಚಿ ನೆಲಕ್ಕೆ ಕೈಹಚ್ಚಿ ಹಣೆಹಚ್ಚಿ ನಮಸ್ಕರಿಸಿದರಂತೆ. ತಾವು ಇಳಿದ ಆ ಸ್ಥಳದಲ್ಲಿ ಪೂಜೆ ಅನುಷ್ಠಾನ ಮಾಡಿದರಂತೆ. ಅದರ ಸ್ಮಾರಕವಾಗಿ ಅಲ್ಲಿ ರೇವಣಸಿದ್ಧರ ಗುಡಿ ಸ್ಥಾಪನೆಯಾಗಿದೆ. ಅಲ್ಲಿ ನಿತ್ಯ ಪೂಜೆ ನಡೆಯುತ್ತದೆ. ಶ್ರಾವಣದಲ್ಲಿ ರವಿವಾರ ವಿಶೇಷ ಪೂಜೆ ಇರುತ್ತದೆ. ರೇವಣಸಿದ್ಧೇಶ್ವರರ ಉತ್ಸವಮೂರ್ತಿ ಮತ್ತು ಪಾದುಕೆಗಳನ್ನು ಪಲ್ಲಕ್ಕಿಯಲ್ಲಿ ಇಟ್ಟು

ಮೆರಸುತ್ತಾರೆ. ಅದನ್ನೇ ಜಾತ್ರೆ ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ಭಜನೆಯೂ ಇರುತ್ತದೆ. ತಮ್ಮ ಗುರುಗಳ ವರ್ತನೆ ಶಿಷ್ಯರಲ್ಲಿ ಕುತೂಹಲ ಕೆರಳಿಸುತ್ತದೆ. ಗುರುಗಳು ಹೀಗೆ ಮಾಡಲು ಏನಾದರೂ ಕಾರಣ ಇರಲೇಬೇಕೆಂದು ಕೊಂಡು ಕೇಳಿಯೇ ಬಿಡುತ್ತಾರೆ. ಆಗ ನೇರವಾಗಿ ಸೊನ್ನಲಿಗೆಗೆ ನಡೆಯಿರಿ ಎಂದು ರೇವಣಸಿದ್ಧರು ಅಲ್ಲಿಗೆ ಬರುತ್ತಾರೆ. ಮನೆಗೆ ಬಂದು, ತಾಯಿ ಸುಗ್ಗಲದೇವಿಯ ಉದರವನ್ನು ಮುಟ್ಟಿ, ನಿನ್ನ ಮಗುವಿನ ಜನನ ಆದಮೇಲೆ ಆ ಮಗುವಿಗೆ ಸಿದ್ಧರಾಮನೆಂದು ನಾಮಕರಣ ಮಾಡು ಎಂದು ಹೇಳಿ ಹರಸಿ ಹೋಗುತ್ತಾರೆ.

ರೇವಣಸಿದ್ಧರ ಸಿದ್ಧವಾಣಿ ದಿಟವಾಗುತ್ತದೆ. ಮುದ್ದುಗೌಡ ಸುಗ್ಗಲದೇವಿ ಅವರಿಗೆ ಅಪರೂಪದ ನೊಸಲ್ಗಣ್ಣಿನ, ತೇಜಪುಂಜವಾದ ಮಗು ಹುಟ್ಟುತ್ತದೆ. ಹುಟ್ಟುತ್ತಲೆ ಶಬ್ದಮುಗ್ಧ ವಾದವನು ಸಿದ್ಧರಾಮ. ಮನಮಗ್ನಯೋಗ ಸಿದ್ಧಿಯನ್ನು ಜನನದೊಂದಿಗೆ ಸಂಪಾದಿಸಿ ಕೊಂಡವನೆಂಬಂತೆ ಬೆಳೆಯುತ್ತಾನೆ. ಆದರೆ ಇದನ್ನು ಜನ ಬೇರೆ ರೀತಿಯಲ್ಲಿಯೇ ಅರ್ಥೈಸಿಕೊಂಡಂತಿದೆ.ಕಾವ್ಯಗಳು ಹಾಗೆಯೆ ಹೇಳುತ್ತವೆ. ರೇವಣಸಿದ್ಧರು ಹೇಳಿದಂತೆ ಮಗುವಿಗೆ ಸಿದ್ಧರಾಮ ಎಂದು ನಾಮಕರಣ ಮಾಡುವ ಬದಲು ಮನೆಯ ದೈವವಾದ ಧೂಳಿಮಹಾಕಾಳ ಎಂದು ಹೆಸರಿಟ್ಟಿದ್ದೇ ಅವನು ತನ್ನೊಳಗೆ ತಾನು ಏನೂ ಅರಿಯದ ಅರೆಮರುಳನಂತೆ ಇರಲು ಕಾರಣ ಎಂದು ನಂಬುತ್ತಾರೆ.

ಇಂಥ ಮೂಗ ಮಗನಿಗಾಗಿ ಹೆತ್ತವರು ಮರಗುತ್ತಾರೆ. ಊಟ, ಮಾತು ಏನೂ ಇಲ್ಲದ ಮಗನ ಮೇಲೆ ಅತಿಯಾದ ಅಕ್ಕರತೆ. ಶಾಲೆಗೆ ಕಳಿಸಿ ನೋಡುತ್ತಾರೆ. ಹೊಲಕ್ಕೆ ಕಳಿಸುತ್ತಾರೆ. ಒಂಟಿ ಆಗಿರುವದಕ್ಕಿಂತ ಹಿಂಡುಮಕ್ಕಳೊಂದಿಗಿರಲೆಂದು ದನಕಾಯಲು ಕಳಿಸುತ್ತಾರೆ. ಇದರಿಂದ ಸಿದ್ಧರಾಮನ ಏಕಾಂತ ಧ್ಯಾನಕ್ಕೆ ಪ್ರಯೋಜನ ಆಯಿತೇ ವಿನಾ, ತಾಯಿ ತಂದೆಗಳ ಉದ್ದೇಶ ಈಡೇರಲಿಲ್ಲ.

**ಗುರುಬೇಟ ಸ್ಮಾರಕ :**

ದನಕಾಯುವ ಹುಡುಗರೊಂದಿಗೆ ಸಿದ್ಧರಾಮ ತನ್ನ ದನಗಳನ್ನು ಕಾಯುತ್ತ, ವಾರಿಗೆಯ ಹುಡುಗರೊಂದಿಗೆ ಆಟವಾಡುತ್ತ ಇರುತ್ತಾನೆ. ಒಂದೊಂದು ಸಲ ತನ್ನಷ್ಟಕ್ಕೆ ತಾನು ಗಿಡದ ಕೆಳಗಿನ ಲಿಂಗಪೂಜೆಯಲ್ಲಿ ತೊಡಗಿರುತ್ತಾನೆ. ತನ್ನ ಜೊತೆಗೆ ಬಂದ ಮಕ್ಕಳನ್ನು ಕರೆದುಕೊಂಡು, ಅವರ ಆಟಗಳನ್ನು ಬಿಡಿಸಿ ಪೂಜೆ ಭಜನೆ ಮಾಡಲು ಪ್ರೇರೇಪಿಸುತ್ತಾನೆ. ತಾನು ನಿರ್ಮಾಣ ಮಾಡಿದ ಸಾಕ್ಷಿಪುರುಷ ಧೂಳಿಮಹಾಕಾಳನಿಗೆ ದನ ಕಾಯಲು ನೇಮಿಸುತ್ತಾನೆ. ಈ ಕ್ರಮವನ್ನು ನಿತ್ಯದ ರೂಢಿಯನ್ನಾಗಿ ಮಾಡಿಕೊಳ್ಳುತ್ತಾನೆ.

ಇದೆಲ್ಲ ಸರಿ. ಆದರೆ ಅವನು ಉಣ್ಣದೆ ಮೌನಿ ಆಗಿರುವುದನ್ನು ಕಂಡು ತಾಯಿ-ತಂದೆಗೆ ಅತೀವ ಸಂಕಟ. ಮಗನನ್ನು ನುಡಿಸಲು ಅವನಿಗೆ ಉಣ್ಣಿಸಲು ಅವರು ಮಾಡಿದ ಪ್ರಯತ್ನಕ್ಕೆ, ಶ್ರಮಕ್ಕೆ ಹೋಲಿಕೆಯೇ ಇರಲಿಲ್ಲ. ಹೀಗಿರಲು ಒಂದು ದಿನ



ಗುರುಭೇಟ, ಸಿದ್ಧರಾಮೇಶ್ವರ ಮಲ್ಲಿಕಾರ್ಜುನ ಭೇಟಿಯಾದ ಸ್ಥಳ-ಸ್ಮಾರಕ

ಘಟನೆಯೊಂದು ಜರುಗುತ್ತದೆ. ಸಿದ್ಧರಾಮ ಹೊಲದಲ್ಲಿ ದನಕಾಯುವ ಸಮಯ ನೋಡಿ ಮಲ್ಲಿಕಾರ್ಜುನ ವೃದ್ಧ ಜಂಗಮವೇಷ ಧರಿಸಿ ಬರುತ್ತಾನೆ. ತನ್ನ ಕಂಬಳಿ ಹಾಸಿ ಅದರ ಮೇಲೆ ಬಂದ ವೃದ್ಧ ಜಂಗಮನನ್ನು ಕುಳ್ಳಿರಿಸಿ, ಅವನಿಗೆ ಸೀತನಿ ಸುಟ್ಟು ಕೊಡುತ್ತಾನೆ. ಆದರೂ ವೃದ್ಧ ಜಂಗಮನ ಹಸಿವೆ ಹಿಂಗುವದಿಲ್ಲ. ಸುಡು ಸುಡು ಸೀತನಿಯನ್ನು ತಿನಿಸಿದೆ; ಇದರಿಂದಾಗಿ ಒಳಗೆ ಧಗೆಯಾಗುತ್ತಿದೆ, ನನಗೆ ತಂಪು ಮಾಡಿಕೊಳ್ಳಲು ಮೇಲೆ ಮೊಸರು ಬುತ್ತಿ (ಮೊಸರನ್ನ) ಬೇಕು ಎಂದು ಕೇಳುತ್ತಾನೆ ಜಂಗಮ. ಸಿದ್ಧರಾಮನಿಗೆ ಸಂತೋಷವೋ ಸಂತೋಷ. ಆ ಜಂಗಮನರನ್ನು ಅಲ್ಲಿಯೆ ಕೂಡಿಸುತ್ತಾನೆ. ತಾನು ಇಲ್ಲದಾಗ ಕಾಡುಮೃಗಳು ಬಂದು ವೃದ್ಧನಿಗೆ ತಿನಬಾರದೆಂದು ಜಂಗಮನನ್ನು ಒಂದೆಡೆ ಕುಳ್ಳಿರಿಸಿ, ಒಂದು ಮಂಡಲ ಬರೆಯುತ್ತಾನೆ. ಜಂಗಮನಿಗೆ ಬುತ್ತಿ ತರಲು ಮನೆಗೆ ಓಡುತ್ತಾನೆ.

ಮಾತನಾಡದ ಮಗ, ಮನೆಗೆ ಓಡಿಬಂದು ಮೊಸರನ್ನ ಬುತ್ತಿ ಬೇಕೆಂದು ತಾಯಿ ಸುಗ್ಗವ್ವೆಗೆ ಕೇಳುತ್ತಾನೆ. ತಾಯಿಗೂ ಹಿಂದೆ ಮುಂದೆ ಏನೂ ಗೊತ್ತಿಲ್ಲ. ಮಗ ಮಾತನಾಡಿದನಲ್ಲ ಎಂಬ ಸಂತೋಷ ಮನಸ್ಸನ್ನು ತುಂಬಿಕೊಳ್ಳುತ್ತದೆ. ಮಗನನ್ನು ಮುದ್ದಾಡಿ ಅಡಿಗೆ ಸಂಭ್ರಮದಲ್ಲಿ ನಿರತಳಾಗಿ, ಮಗ ಕೇಳಿದ ಮೊಸರು ಬುತ್ತಿಯನ್ನು ಆನಂದದಿಂದ ಮಾಡಿ ಉಣಿಸಲು ಹೋಗುತ್ತಾಳೆ. ಸಿದ್ಧರಾಮ ಕಟ್ಟಿಕೊಂಡು ಹೊಲಕ್ಕೆ ಹೋಗಿ ಉಣ್ಣುವುದಾಗಿ ಹೇಳುತ್ತಾನೆ. ಒಂದೇ ಓಟದಲ್ಲಿ ಜಂಗಮ ತಂಗಿದ ಸ್ಥಳಕ್ಕೆ ಧಾವಿಸುತ್ತಾನೆ. ನೋಡಿದರೆ ಅಲ್ಲಿ ಜಂಗಮನಿಲ್ಲ. ಒಮ್ಮಿಲೆ ಬರಸಿಡಿಲು ಬಡಿದಂತಾಗುತ್ತದೆ.



ಗುರುಭೇಟ, ಸಿದ್ಧರಾಮೇಶ್ವರ ಮಲ್ಲಿಕಾರ್ಜುನ ಭೇಟಿಯಾದ ಸ್ಥಳ-ಸ್ಮಾರಕದ ಲಿಂಗ

ಕಂಗಲಾಗಿ ಬಂದ ಜಂಗಮನ ಹೆಸರ್ಹಿಡಿದು ಮಲ್ಲಯ್ಯ ಮಲ್ಲಿನಾಥ ಮಲ್ಲಿಕಾರ್ಜುನ ಎಂದು ಕೂಗುತ್ತಾನೆ. ಆಲ್ಪರಿಯುತ್ತಾನೆ. ದಿಕ್ಕುಗಾಣದೇ ಅಳ್ಳುತ್ತಾ ಕೂಡುತ್ತಾನೆ.

ಹೀಗೆ ಮಲ್ಲಯ್ಯನನ್ನು ಸಿದ್ಧರಾಮನು ಕಂಡ ಸ್ಥಳವನ್ನು ಇಂದು 'ಗುರುಬೇಟ' ಎಂದು ಕರೆಯುತ್ತಾರೆ. ಆ ಸ್ಮಾರಕವನ್ನು ರಕ್ಷಿಸಿಕೊಂಡು ಬಂದಿದ್ದಾರೆ. ಅಲ್ಲಿರುವ ಲಿಂಗದ ಆಕಾರ ಎಲ್ಲ ಲಿಂಗಗಳಂತೆ ಇಲ್ಲ. ಈ ಸ್ಥಳಕ್ಕೆ ನಿತ್ಯ ಭಕ್ತಜನ ಬರುತ್ತಾರೆ. ಭಕ್ತಿ ಸಮರ್ಪಿಸುತ್ತಾರೆ. ಅಂದು ಹೊಲವಾಗಿದ್ದ ಈ ಸ್ಥಳ ಇಂದು ಕಟ್ಟಡಗಳಿಂದ ತುಂಬಿ ಹೋಗಿದೆ. ಬಹಳ ದೊಡ್ಡ ಆವರಣದಲ್ಲಿ ಈ ಲಿಂಗವಿದೆ. ಈ ಲಿಂಗವನ್ನು ಪೂಜೆ ಮಾಡುವವರು ಅಲ್ಲಿಯೆ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ.

**ಕೆರೆಯ ಹತ್ತಿರ ಅಲ್ಲಮ-ಸಿದ್ಧರಾಮ ಬೇಟಿಯಾದ ಸ್ಮಾರಕ :**

ಸಿದ್ಧರಾಮನ ಬಿಮ್ಮು ಬಿದ್ದು ಹೋಯಿತು ಕರಗಿ
ಬುದ್ಧಪ್ರಭುದೇವ ತಿಳಿಹೇಳಿ । ಸೊನ್ನಲಿಗಿ
ಸಿದ್ಧಶರಣಾದ ಶಿವಮತಕೆ

ಸಿದ್ಧರಾಮ ಶ್ರೀಶೈಲಕ್ಕೆ ಹೋಗಿ ಬಂದ ನಂತರ, ಲಿಂಗ ಪ್ರತಿಷ್ಠಾಪನೆ ಮಾಡುವುದರ ಜೊತೆಗೆ ಸಮಾಜಕಲ್ಯಾಣ ಕಾರ್ಯದಲ್ಲಿ ತನ್ನನ್ನು ಸತತ ತೊಡಗಿಸಿಕೊಳ್ಳುತ್ತಾನೆ. ಸಿದ್ಧರಾಮ ಸಣ್ಣವಯಸ್ಸಿನಲ್ಲಿಯೆ ಚೆನ್ನಮಲ್ಲಿಕಾರ್ಜುನನ್ನು ಒಲಿಸಿಕೊಂಡ ಸಂಗತಿ ಎಲ್ಲೆಡೆ ಪ್ರಚಾರವಾಗಿತ್ತು. ಅದನ್ನು ಕೇಳಿ ತಿಳಿದ ಅಲ್ಲಮ ಸಿದ್ಧರಾಮನನ್ನು ಕಾಣಲು ಸೊನ್ನಲಗಿಗೆ

ಬರುತ್ತಾನೆ. ಅಲ್ಲಿಯ ಗುಡ್ಡರು ಕೆರೆಕಟ್ಟುವ ಕೆಲಸದಲ್ಲಿ ತೊಡಗಿರುತ್ತಾರೆ. ಆಗ ಅಲ್ಲಮ ಅವರೆದುರು 'ಒಡ್ಡರಲ್ಲಿ ಒಡ್ಡ ಹಿರಿಒಡ್ಡ' ಎಲ್ಲಿದ್ದಾನೆ ಎಂದು ಕೇಳುತ್ತಾನಂತೆ. ತಮ್ಮ ಯಜಮಾನನಿಗೆ ಹೀಗೆ ಹಿಯಾಳಿಸಿ ಮಾತನಾಡುತ್ತಾನಲ್ಲ ಎಂದು ಎಲ್ಲರೂ ಸಿಟ್ಟಿಗೆ ಬರುತ್ತಾರೆ. ಗುಡ್ಡರು ಕಲ್ಲೆಸೆದು ಅಲ್ಲಮನನ್ನು ನೋಯಿಸಲು ಪ್ರಯತ್ನಿಸಿ, ತಾವೇ ನೋವನ್ನು ಅನುಭವಿಸಬೇಕಾಗುತ್ತದೆ. ತನ್ನ ಕಾರ್ಮಿಕರು ಘಾಸಿಯಾದದ್ದನ್ನು ಸಹಿಸಿಕೊಳ್ಳಲು ಸಾಧ್ಯವಾಗದೆ ಅಲ್ಲಮನೊಂದಿಗೆ ವಾದಕ್ಕೆ ಇಳಿಯುತ್ತಾನೆ. ಇಬ್ಬರ ನಡುವೆ ಸುಧೀರ್ಘ ಚರ್ಚೆ ನಡೆಯುತ್ತದೆ. ತನ್ನ ಹಣೆಗಣ್ಣನ್ನು ತೆರೆದು ಅಲ್ಲಮನನ್ನು ಸುಟ್ಟುಹಾಕಲು ಸಿದ್ಧರಾಮ ನೋಡುತ್ತಾನೆ. ಆಗ ಅಲ್ಲಮ ಅವನ ಮರಳುತನಕ್ಕೆ ಮರುಗಿ ಆ ಅಗ್ನಿಯನ್ನು ತನ್ನ ಕಾಲಿನ ಹೆಬ್ಬೆರಳಿನಲ್ಲಿ ಗುಪ್ತವಾಗಿದ್ದ ಕಣ್ಣಿನಲ್ಲಿ ಅಡಗಿಸಿ, ಶಾಂತ ಮಾಡುತ್ತಾನೆ. ಆಗ ತನ್ನಲ್ಲಿಗೆ ಬಂದವನು ಅಸಾಮಾನ್ಯ ಶರಣ ಎಂದು ಸಿದ್ಧರಾಮನಿಗೆ ತಿಳಿಯುತ್ತದೆ. ಅವನೊಂದಿಗೆ ರಾಜಿಯಾಗುತ್ತಾನೆ. ಅಮುಗಯ್ಯನೂ ಅಂಗದ ಮೇಲೆ ಲಿಂಗಬೇಕೆನ್ನುವುದಕ್ಕಾಗಿ ಊರನ್ನು ಬಿಟ್ಟು ಹೋಗಿದ್ದನು. ಈಗ ಅಲ್ಲಮನು ಬಂದು ಲಿಂಗದ ಬಗ್ಗೆಯೇ ಹೇಳುತ್ತಾನೆ. ಆಗ ಸಿದ್ಧರಾಮ ಇಷ್ಟಲಿಂಗವನ್ನು ಪಡೆಯಬೇಕೆಂದು ಅಲ್ಲಮನೊಂದಿಗೆ ಕಲ್ಯಾಣಕ್ಕೆ ಪ್ರಯಾಣ ಬೆಳೆಸುತ್ತಾನೆ. ಹೀಗೆ ಅಲ್ಲಮ ಮತ್ತು ಸಿದ್ಧರಾಮ ಬೇಟಿಯಾದ ಸ್ಥಳವನ್ನು, ಅಲ್ಲಮನ ಹೆಸರಿನಲ್ಲಿ ಕೆರೆಯ ದಂಡೆಯ ಮೇಲೆ ಸ್ಮಾರಕ ಗುಡಿಯಾಗಿ ನಿರ್ಮಿಸಲಾಗಿದೆ.



ಅಲ್ಲಮಪ್ರಭು ಸಿದ್ಧರಾಮ ಬೇಟಿಯಾದ ಸ್ಥಳ-ಸ್ಮಾರಕ



ಅಲ್ಲಮಪ್ರಭು ಸಿದ್ಧರಾಮ ಬೇಟಿಯಾದ ಸ್ಥಳ-ಸ್ಮಾರಕದ ಗರ್ಭಗೃಹದ ಶಿವಲಿಂಗ

ಸಿದ್ಧಪುರುಷನು ಎಂದು ಸಿದ್ಧರಾಮಗೆ ಬಿಮ್ಮು
ಉದ್ದಂಡನಾಗಿ ಆಳಿದನು । ಪ್ರಭುದೇವ
ಸಿದ್ಧಶರಣಾದ ಶಿವಮತಕೆ



ಬೊಮ್ಮಣ್ಣನ ಸ್ಮಾರಕದಲ್ಲಿರುವ ಶಿವಲಿಂಗ

### ಬೊಮ್ಮಣ್ಣನ ಸ್ಮಾರಕ :

ಬೊಮ್ಮಣ್ಣ ಸಿದ್ಧರಾಮನ ಒಡಹುಟ್ಟಿದ ಅಣ್ಣನೆಂದು ಜನ ಹೇಳುತ್ತಾರೆ. ಆದರೆ ಅವನು ಮುದ್ದುಗೌಡ, ಸುಗ್ಗಲೆಯರ ಸಾಕುಮಗ. ಶ್ರೀಶೈಲಕ್ಕೆ ಹೋದ ಸಿದ್ಧರಾಮನನ್ನು ಕರೆದುಕೊಂಡು ಬಂದು ಹೆತ್ತವರಿಗೆ ಒಪ್ಪಿಸುವ ಪುಣ್ಯದ ಕೆಲಸವನ್ನು ಮಾಡಿದವನು ಈ ಬೊಮ್ಮಣ್ಣ. ಸಿದ್ಧರಾಮನ ಜೊತೆಗೆ ಕೊನೆವರೆಗೂ ಇದ್ದವನು. ಸಿದ್ಧರಾಮನು ಮಾಡುವ ಎಲ್ಲ ಕೆಲಸಕಾರ್ಯಗಳಿಗೆ ಶಕ್ತಿಯಾಗಿ ನಿಂತವನು. ಸಿದ್ಧರಾಮನಿಗೆ ಅಂತರಂಗದ ಬಂಧು-ದೇವರು ಮಲ್ಲಿಕಾರ್ಜುನ ಆದರೆ ಸ್ನೇಹಿತ-ಬಂಧುವಾಗಿ ಜೊತೆಗಿದ್ದವನು ಬೊಮ್ಮಣ್ಣ. ಇವರಿಗೆ ಬೇಕಾದ ಆರ್ಥಿಕ ಸಹಾಯ ನೀಡಲು ಸದಾಸಿದ್ಧಳಾಗಿದ್ದವಳು ಚಾಮಲದೇವಿ.

ಬೊಮ್ಮಣ್ಣನು ಪುಣ್ಯ ಕ್ಷೇತ್ರದರ್ಶನ ಮಾಡಬೇಕೆಂದು ಬಯಸಿ ಕೇದಾರಕ್ಕೆ ಹೋಗಲು ನಿಂತಿರುತ್ತಾನೆ. ಆಗ ಸಿದ್ಧರಾಮ ಅವನನ್ನು ತಡೆದು, ಈ ಕ್ಷೇತ್ರಕ್ಕಿಂತ ಪವಿತ್ರವಾದ ಪುಣ್ಯಕ್ಷೇತ್ರ ಇನ್ನೊಂದು ಇರಲು ಸಾಧ್ಯವಿಲ್ಲ ಎಂದು ಬೊಮ್ಮಣ್ಣನಿಗೆ ಮನವರಿಕೆ ಮಾಡಿಕೊಡುತ್ತಾನೆ. ಆಗ ಬೊಮ್ಮಣ್ಣ ತನ್ನ ಮನಸ್ಸು ಬದಲಾಯಿಸಿಕೊಂಡು ಇಲ್ಲಿಯೇ ಉಳಿದುಕೊಳ್ಳುತ್ತಾನೆ. ಹೀಗಾಗಿ ಬೊಮ್ಮಣ್ಣನ ಹೆಸರಿನ ಸ್ಮಾರಕವೊಂದು ಕೆರೆಯ ದಂಡೆಯ ಮೇಲೆ ಉಳಿದುಕೊಂಡು ಬಂದಿದೆ.

### ಕಪಿಲಸಿದ್ಧಮಲ್ಲಿಕಾರ್ಜುನನ ಗುಡಿ :

ಸೊನ್ನಲಿಗೆಯಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನನ ಗುಡಿ ಇದೆ. ಶ್ರೀಶೈಲದಲ್ಲಿ ಮಲ್ಲಿಕಾರ್ಜುನನನ್ನು ಅಗಲಿರಲು ಸಾಧ್ಯವಾಗದೇ ಅವನೊಂದಿಗೆಯೆ ಇರಲು ಸಿದ್ಧರಾಮ



ಕೋಟೆಯಲ್ಲಿರುವ ಸಿದ್ಧರಾಮ ಕಟ್ಟಿಸಿದ ಮಲ್ಲಿಕಾರ್ಜುನ ಗುಡಿ




**ಕೋಟೆಯಲ್ಲಿದ್ದ ಮೂಲ ಮಲ್ಲಿಕಾರ್ಜುನ ದೇವಾಲಯವನ್ನು ಕಿತ್ತು ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯ**

ಹಠ ಮಾಡಿದಾಗ, ಮಲ್ಲಿಕಾರ್ಜುನ ಸೊನ್ನಲಿಗೆಗೆ ಬರುವ ಭರವಸೆ ಕೊಟ್ಟು ಕಳಿಸಿರುತ್ತಾನೆ. ತಾನು ಬರುವ ಸೂಚನೆಯನ್ನು ತಿಳಿದುಕೊಳ್ಳಲು ಕೆಲಸುಳುಹುಗಳನ್ನು ಮಲ್ಲಿಕಾರ್ಜುನ ಸಿದ್ಧರಾಮನಿಗೆ ಹೇಳಿರುತ್ತಾನೆ. ಗುಡುಗು ಮಿಂಚು ಸಮೇತ ಆಲಿಕಲ್ಲ ಮಳೆ ಆದಾಗ, ಸೊನ್ನಲಿಗೆಯ ಕಕ್ಕೆಯ ಗಿಡದ ಕೆಳಗೆ ತಾನು ಕಾಣಿಸಿಕೊಳ್ಳುವುದಾಗಿ ಹೇಳಿ ಕಳಿಸಿರುತ್ತಾನೆ. ಸೊನ್ನಲಿಗೆಗೆ ಬಂದ ಮೇಲೆ ಏಳನೆಯ ದಿನಕ್ಕೆ ಈ ಸೂಚನೆಗಳೆಲ್ಲ ಕಾಣಿಸಿಕೊಳ್ಳುತ್ತವೆ. ಮಲ್ಲಿಕಾರ್ಜುನ ಹೇಳಿದಂತೆ ಗುಡುಗು ಮಿಂಚು ಸಮೇತವಾದ ಆಲಿಕಲ್ಲಿನ ಮಳೆ ಆಗುತ್ತದೆ. ಸಿದ್ಧರಾಮನ ಆನಂದಕ್ಕೆ ಪಾರವೇ ಇಲ್ಲ. ಮಲ್ಲಿಕಾರ್ಜುನ ಹೇಳಿದ ಕಕ್ಕೆಯ ಮರದ ಹತ್ತಿರ ಬರುತ್ತಾನೆ. ಅಲ್ಲಿ ಕಂಡುಬಂದ ಲಿಂಗವನ್ನು ಸಿದ್ಧರಾಮ ಭಕ್ತಿಯಿಂದ ಪೂಜಿಸುತ್ತಾನೆ. ದಿನವೂ ಲಿಂಗಕ್ಕೆ ಪೂಜಿಸುತ್ತ ಹೋಗುತ್ತಾನೆ. ಆದರೆ ಒಂದು ದಿನ ಸಿದ್ಧರಾಮನು ಬರುವ ಹೊತ್ತಿಗೆ ಲಿಂಗದ ಮೇಲೆ ಒಂದು ಗೊಡ್ಡು ಆಕಳು ತನ್ನ ತಾನೆ ಹಾಲು ಸುರಿಸುತ್ತಿರುತ್ತದೆ. ಇದನ್ನು ಕಂಡು ಸಿದ್ಧರಾಮ ಬೆರಗಾಗುತ್ತಾನೆ. ಹೀಗಾಗಿಯೇ ಆ ಲಿಂಗವನ್ನು 'ಕಪಿಲಸಿದ್ಧಮಲ್ಲಿಕಾರ್ಜುನ' ಎಂಬ ಹೆಸರಿನಿಂದ ಕರೆಯುವ ರೂಢಿ ಬಿತ್ತೆಂದು ಜನ ಹೇಳುತ್ತ ಬಂದಿದ್ದಾರೆ. ಸಿದ್ಧರಾಮನ ಆರಾಧ್ಯ ದೈವವನ್ನು ದೈವದವರೆಲ್ಲ ಒಪ್ಪಿಕೊಂಡು, ತಮ್ಮೂರಿನ ದೇವತೆಯೆಂದು ಮಲ್ಲಯ್ಯನನ್ನು ಪೂಜಿಸತೊಡಗಿದರು ಎಂದು ಹೇಳುತ್ತಾರೆ.

ಸಿದ್ಧರಾಮ ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯ ಇರುವುದು ಕೋಟೆಯಲ್ಲಿ. ಮುಸ್ಲಿಮ ಅರಸರು ಈ ಕೋಟೆಯನ್ನು ವಶಪಡಿಸಿಕೊಂಡಾಗ, ಈ ಗುಡಿಯನ್ನು ಕೋಟೆಯಿಂದ ಸ್ಥಳಾಂತರಿಸಲು ಸೂಚಿಸಿದರಂತೆ. ಅದರಂತೆ ಈ ಗುಡಿಯನ್ನು ಕಿತ್ತು



ಮೂಲ ಮಲ್ಲಿಕಾರ್ಜುನ



ಸಿದ್ಧರಾಮೇಶ್ವರ ಮಂದಿರದ ಹೊರನೋಟ

ಬೇರೆಡೆ ಮಲ್ಲಿಕಾರ್ಜುನನ ಗುಡಿಯನ್ನು ಕಟ್ಟಿಸಿ, ಅಲ್ಲಿ ಸಿದ್ಧರಾಮ ಸ್ಥಾಪಿಸಿದ ಮಲ್ಲಿಕಾರ್ಜುನ ಲಿಂಗವನ್ನು ಸ್ಥಾಪಿಸಲಾಗಿದೆ. ಅದಕ್ಕಾಗಿ ಈ ದೇವಾಲಯದ ಕೆಳಗಿನ ಅರ್ಧ ಭಾಗ ಮಾತ್ರ ಉಳಿದಿದೆ.

### ಸಿದ್ಧರಾಮೇಶ್ವರ ಗುಡಿ :

ಮಾನವರ ನಡುವೆ ಇರಬೇಡ ಎಂದ ಅಲ್ಲಮರ ಮಾತನ್ನು ಸಿದ್ಧರಾಮ ನಡೆಸಿಕೊಡುತ್ತಾನೆ. ಮಲ್ಲಿಕಾರ್ಜುನನು ಚಾಮಲದೇವಿಯ ಕನಸಿನಲ್ಲಿ ಬಂದು ಸಿದ್ಧರಾಮನಿಗೆ ಲಿಂಗಮುದ್ರೆ ಇರುವ ಒಂದು ಕ್ರೋಶ ಭೂಮಿಯನ್ನು ಕೊಡಲು ಮತ್ತು ಅವನಿಗೆ ಬೇಕಾದ ಎಲ್ಲ ಆರ್ಥಿಕ ನೆರವು ನೀಡಲು ಹೇಳಿದಂತಾಗುತ್ತದೆ. ಚಾಮಲದೇವಿ ಕನಸಿನಲ್ಲಿಯೆ ಮಲ್ಲಿಕಾರ್ಜುನನಿಗೆ ಭರವಸೆ ಕೊಡುತ್ತಾಳೆ. ಪ್ರಮಾಣ ಮಾಡುತ್ತಾಳೆ. ಮರುದಿನ ಹಾಗೇ ಮಾಡುತ್ತಾಳೆ. ಸಿದ್ಧರಾಮನಲ್ಲಿಗೆ ಬಂದು ಮಲ್ಲಿಕಾರ್ಜುನನ ಆಜ್ಞೆ ಆಗಿದೆ ಈ ಸ್ಥಳ ನಿನ್ನದು ಎಂದು ಸಿದ್ಧರಾಮನ ವಶಕ್ಕೆ ಒಪ್ಪಿಸುತ್ತಾಳೆ. ಸಿದ್ಧರಾಮ ಅದನ್ನು ಸರಿಯಾಗಿ ಬಳಸಿಕೊಳ್ಳುತ್ತಾನೆ.

ಒಂದು ದಿನ ಆ ಸ್ಥಳವನ್ನು ಅಗಿಯುತ್ತಿರುವಾಗ ಹೊನ್ನಿನ ಕೊಪ್ಪರಿಗೆ ಸಿಗುತ್ತದೆ. ಆಗ ಪ್ರಾಮಾಣಿಕತೆಯಿಂದ ಅದನ್ನು ಚಾಮಲದೇವಿಗೆ ಒಪ್ಪಿಸಲು ನಿರ್ಣಯಿಸುತ್ತಾರೆ. ಆಗ ಚಾಮಲದೇವಿಯೂ ಅಷ್ಟೇ ಪ್ರಾಮಾಣಿಕತೆಯಿಂದ ಪ್ರತಿಕ್ರಿಯೆ ನೀಡುತ್ತಾಳೆ. ಒಂದು ಸಾರೆ ಆ ಭೂಮಿಯನ್ನು ನಿಮಗೆ ಕೊಟ್ಟಾದ ಮೇಲೆ, ಅಲ್ಲಿ ಏನೇ ಸಿಕ್ಕರೂ



ದೇಶಮುಖರ ಮನೆಯ ಜಗಲಿ ಮೇಲಿರುವ ಸಿದ್ಧರಾಮ ಕೊಟ್ಟ ಯೋಗದಂಡ

ಅದೆಲ್ಲ ನಿಮ್ಮದೆ. ನೀವೆ ಅದಕ್ಕೆ ಒಡೆಯರು ಎಂದು ಹೇಳುತ್ತಾಳೆ. ಆಗ ಅವರಿಗೆ ಆರ್ಥಿಕ ಬಲವೂ ಸಿಕ್ಕಂತೆ ಆಗುತ್ತದೆ. ಸಿದ್ಧರಾಮ ತಾನು ಮಾಡಬೇಕೆಂದುಕೊಂಡಿದ್ದ ಕೆಲಸಗಳನ್ನು ಭರದಿಂದ ಮಾಡಿ ಮುಗಿಸುತ್ತಾನೆ. ಇದಕ್ಕೆಲ್ಲ ಕಾರಣಳಾದ ಚಾಮಲದೇವಿಯ ಬಗ್ಗೆ ಅತೀವ ಗೌರವಭಾವವುಳ್ಳವನಾಗಿ ಸಿದ್ಧರಾಮ ಕಾಣಿಸುತ್ತಾನೆ.

### ಚಾಮಲದೇವಿಯ ವಂಶಸ್ಥರು :

ಸೊಲ್ಲಾಪುರದ ಒಳಗ ಸೆಲ್ಲೆಲ್ಲ ಮಲ್ಲಿಗಿ
ಹಾಸುಮಂಚೆಲ್ಲ ಹವಳಾವ । ಸಿದ್ಧರಾಮ
ದುಂಡು ಕೋಲೆಲ್ಲ ದವನವ

ಈಗ ಸೊಲ್ಲಾಪುರದಲ್ಲಿರುವ ಅತ್ಯಂತ ಹಳೆಯ ಕುಟುಂಬವೆಂದರೆ ಇಲ್ಲಿಯ ದೇಶಮುಖ ಮನೆತನ. ಚಾಮಲದೇವಿ ಆ ದೇಶಮುಖ ಮನೆತನದ ಹೆಣ್ಣುಮಗಳು. ಅವರ ವಂಶಸ್ಥರು ಇನ್ನೂ ಸೊಲ್ಲಾಪುರದಲ್ಲಿ ಇದ್ದಾರೆ. ಇಷ್ಟೆಲ್ಲ ಸಹಕರಿಸಿದ ಚಾಮಲದೇವಿಗೆ ಸಿದ್ಧರಾಮ ತನ್ನ ಸ್ಮರಣೆಗಾಗಿ ತಾನು ಬಳಸಿದ ಯೋಗದಂಡವನ್ನು ಕೊಟ್ಟಿದ್ದಾನಂತೆ. ಅದನ್ನು ಈ ಮನೆತನದವರು ಇಂದಿಗೂ ಕಾಪಾಡಿಕೊಂಡು ಬಂದಿದ್ದಾರೆ. ಅದನ್ನು ಜಗಲಿಯ ಮೇಲೆ ಇಟ್ಟು ಪೂಜಿಸುತ್ತಾರೆ. ಯೋಗದಂಡ ಸವೆಯಹತ್ತಲು, ನೀರು ಹತ್ತಿ ಹಾಳಾಗಹತ್ತಲು ಅದಕ್ಕೆ ಬೆಳ್ಳಿಯ ಕವಚ ಹಾಕಿದ್ದಾರೆ. ಅದರ ಬಗ್ಗೆ ಹೆಮ್ಮೆ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.



ಸಿದ್ಧರಾಮೇಶ್ವರ ಸಮಾಧಿ, ಹಿಂದೆ ಮಂದಿರ

ಅವರ ಮನೆಯಲ್ಲಿ ವಿಶಿಷ್ಟ ರೀತಿಯ ಮಲ್ಲಯ್ಯನ ಕಂಬಿಯೊಂದಿದೆ. ಆ ಕಂಬಿ ಸಿದ್ಧರಾಮನ ಕಾಲದಿಂದಲೂ, ಶ್ರೀಶೈಲಕ್ಕೆ ಹೋಗಿಬರುತ್ತದೆಯಂತೆ. ಶ್ರೀಶೈಲದಲ್ಲಿ ಅಗ್ರ ಪೂಜೆ ಇದಕ್ಕೆ ಸಲ್ಲುತ್ತದೆ ಎನ್ನುತ್ತಾರೆ. ಅವರ ಮನೆಯಲ್ಲಿ ಕಿರೀಟೇಶ್ವರರ ರುದ್ರಾಕ್ಷಿ ಕಿರೀಟವೂ ಇದೆ. ಇದನ್ನೆಲ್ಲ ಗಮನಿಸಿದಾಗ, ಈ ಮನೆತನವು ಭಕ್ತಿಗೆ ದಾಸೋಹಕ್ಕೆ ಹೆಸರಾದ ಮನೆತನ ಎನಿಸುತ್ತದೆ. ಹಿಂದಿನ ಭವ್ಯಪರಂಪರೆಗೆ ಅದೊಂದು ಸಾಕ್ಷಿ ಆಗಿ ನಿಂತಿದೆ. ಆ ಸಂಸ್ಕೃತಿಯನ್ನು ಈಗಲೂ ಆ ಮನೆತನದವರು ಮುಂದುವರೆಸಿಕೊಂಡು ಹೊರಟಿದ್ದಾರೆ.

### ಯೋಗ ರಮಣೀಯ ಸ್ಥಾನ :

ಸಿದ್ಧರಾಮನ ಯೋಗ ಸಿದ್ಧಿಯ ಸ್ಥಳವನ್ನು 'ಯೋಗ ರಮಣೀಯ ಸ್ಥಾನ' ಎಂದು ಕರೆಯುತ್ತಾರೆ. ಈ ಸ್ಥಳ ನೋಡಲು ಸುಂದರವಾಗಿದ್ದು ಮಾರ್ಬಲ್ ಕಲ್ಲಿನಿಂದ ಎತ್ತರವಾದ ಕಟ್ಟೆಯೊಂದನ್ನು ಕಟ್ಟಿದ್ದಾರೆ. ಇದರ ಮೇಲೆ ಎರಡು ಪಾಣಿಪೀಠಗಳು ಪ್ರತ್ಯೇಕವಾಗಿದ್ದು, ಎರಡರ ಮೇಲೂ ಲಿಂಗಗಳಿವೆ. ಇವನ್ನು ಗುರುಶಿಷ್ಯರ ಸ್ಮಾರಕವೆಂದೇ ಹೇಳುತ್ತಾರೆ. ಗುರು ಸಿದ್ಧರಾಮ, ಶಿಷ್ಯ ಹಾವಿನಹಾಳ ಕಲ್ಲಯ್ಯ ಇವರನ್ನು ಕೂಡಿಯೇ ಪೂಜಿಸುವ ಸ್ಥಳ ಇದು. ಹಾವಿನಹಾಳ ಕಲ್ಲಯ್ಯ ಸಿದ್ಧರಾಮರ ಶಿಷ್ಯನಾಗಿದ್ದು, ಕೊನೆಗಾಲವನ್ನು ಇಲ್ಲಿಯೇ ಕಳೆದರೆಂಬ ಪ್ರತೀತಿ ಇದೆ.



ಸಿದ್ಧರಾಮೇಶ್ವರ ಗುಡಿ

ಸಿದ್ಧರಾಮ ಮೂರ್ತಿ ಇರುವ ಗರ್ಭಗುಡಿಯಲ್ಲಿ ನಿತ್ಯವೂ ಮೂರು ಹೊತ್ತು ಪೂಜೆ ನಡೆಯುತ್ತದೆ. ಬೆಳಿಗ್ಗೆ ನಸುಕಿನ ೫-೬ಂಕ್ಕೆ ಕಾಕಡಾರತಿ, ಅಂದರೆ ಧೂಪ ಬೆಳಗುವ ಪೂಜೆ ಆಗುತ್ತದೆ. ಬೆಳಿಗ್ಗೆ ಒಂಬತ್ತು ಗಂಟೆಗೆ ಮಹಾಪೂಜೆ ಜರಗುತ್ತದೆ. ಸಾಯಂಕಾಲ ಭಕ್ತರೆಲ್ಲ ಬಂದು ಹೋದ ತರುವಾಯ ಬೆಳಗಿನ ಪೂಜೆ ಇಳಿಸಿ ಮತ್ತೆ ಪೂಜೆ ಮಾಡುತ್ತಾರೆ.

ಅಲ್ಲಿ ಒಳಗೆ ಗವಿ ಇದೆ ಎಂದೂ ಸಿದ್ಧರಾಮ ಜೀವಂತ ಸಮಾಧಿ ಆಗಿದ್ದಾರೆಂದೂ ಹೇಳುತ್ತಾರೆ. ಸಿದ್ಧರಾಮ ಇನ್ನೂ ಒಳಗೆ ಜೀವಂತವಾಗಿ ಇದ್ದಾರೆಂಬ ನಂಬಿಕೆ ಭಕ್ತರಲ್ಲಿದೆ. ಯಾರು ಭಕ್ತಿಯಿಂದ ಸಿದ್ಧರಾಮನ ಈ ಸ್ಥಳಕ್ಕೆ ಬಂದು ಪ್ರದಕ್ಷಿಣೆ ಹಾಕುತ್ತಾರೋ ಅವರ ಹಿಂದೆ ಯಾರೋ ಇದ್ದಾರೆಂಬ ಅನುಭವ ವಾಗುತ್ತದೆಯಂತೆ. ಹಾಗೆ ಹಿಂದೆ ಇರುವವ ಬೇರೆ ಯಾರೂ ಅಲ್ಲ ಸಿದ್ಧರಾಮನೇ ಎಂಬುದು ಆ ಭಕ್ತರ ನಂಬಿಕೆ. ಈಗಲೂ ಸೊಲ್ಲಾಪುರದಲ್ಲಿ ಪ್ರತಿಯೊಂದು ಮನೆಯ ಗಂಡುಮಕ್ಕಳು ತಪ್ಪದೇ ದಿನವೂ ಸಿದ್ಧರಾಮೇಶ್ವರ ಗುಡಿಗೆ ಬರುತ್ತಾರೆ. ಬೆಳಿಗ್ಗೆತಪ್ಪಿದರೆ ಎಷ್ಟೇ ಹೊತ್ತಾದರೂ ರಾತ್ರಿ ಗುಡಿಗೆ ಹೋಗಿಬರಲೇಬೇಕು ಎಂಬ ನೇಮ ಇಲ್ಲಿದೆ ಎಂದು ತಿಳಿದುಬರುತ್ತದೆ. ಅಷ್ಟು ಜಾಗ್ರತ ಸ್ಥಳ ಸಿದ್ಧರಾಮೇಶ್ವರ ಗುಡಿ.

ಸಿದ್ರಾಮೇಶ್ವರ ಗುಡಿಯ ಹೊರ ಒಳ ಆವರಣದಲ್ಲಿ ಲಿಂಗಗಳು ತುಂಬಿ ಹೋಗಿವೆ. ಸಿದ್ಧರಾಮ ೬೮ ಲಿಂಗಗಳನ್ನು ಸ್ಥಾಪಿಸಿದನೆಂದು ಹೇಳುತ್ತಾರೆ. ಆದರೆ ಕಾವ್ಯಗಳು, ಲಿಖಿತ ಮೂಲದ ದಾಖಲೆಗಳು ಒಂದು ಲಕ್ಷದ ಒಂಬತ್ತು ಸಾವಿರ ಲಿಂಗಗಳನ್ನು ತನ್ನ ಗುಡಿಯ ಆವರಣದಲ್ಲಿ ಪ್ರತಿಷ್ಠಾಪಿಸಿದನೆಂದು ಹೇಳುತ್ತವೆ.



ಸಿದ್ಧರಾಮನ ಗುಡಿಯ ಗರ್ಭಗೃಹದಲ್ಲಿರುವ ಅಲಂಕರಣಗೊಂಡ ಸಿದ್ಧರಾಮ

ವರ್ಷಕ್ಕೆ ಒಂದು ಸಾರೆ ಜನವರಿ ೧೪ ರಂದು ಜಾತ್ರೆ ನಡೆಯುತ್ತದೆ. ಈ ಜಾತ್ರೆ ತೀರ ವಿಶೇಷವೆನಿಸುತ್ತದೆ. ಇಲ್ಲಿಯ ಸಂಪ್ರದಾಯ, ಆಚರಣೆಗಳು ಎಲ್ಲ ಭಾಗಗಳಂತೆ ಅಲ್ಲ. ಜನೆವರಿ ೧೨ರಿಂದಲೇ ಜಾತ್ರಾ ಸಂಪ್ರದಾಯಗಳು ಪ್ರಾರಂಭವಾಗುತ್ತವೆ. ೧೨ ರಿಂದ ಮೂರು ದಿನ ಸತತ ನಂದಿಕೋಲ ಮೆರವಣಿಗೆ ಇರುತ್ತದೆ. ನಂದಿಕೋಲನ್ನು ನೂರೊಂದು ಉತ್ತತ್ತಿ, ನೂರೊಂದು ಕೊಬ್ಬರಿ, ನೂರೊಂದು ಲಿಂಬಿಹಣ್ಣುಗಳ ಹಾರದಿಂದ ಶೃಂಗಾರ ಮಾಡಲಾಗಿರುತ್ತದೆ. ಈ ನಂದಿಕೋ ಪೂಜೆಯ ಮಾನ ಕೆಲ ಮನೆತನಗಳಿಗೆ ಮೀಸಲಾಗಿದೆ. ಅಲ್ಲದೆ ಆಯ್ದ ಮುಖ್ಯ ಭಾಗದಲ್ಲಿ ಮಾತ್ರ ಮೆರವಣಿಗೆ ಸಾಗುತ್ತದೆ. ದೇಶಮುಖ, ಲಿಗಾಡೆ,



ಕೋಟೆಯಲ್ಲಿರುವ ಮಲ್ಲಿಕಾರ್ಜುನ ಗುಡಿಯನ್ನು ಕಿತ್ತುತಂದು ಕಟ್ಟಿದ ಗುಡಿ

ಹಬ್ಬ ಇವರ ಮನೆಗಳಲ್ಲಿ ಹಾಗೂ ಮಲ್ಲಿಕಾರ್ಜುನ ಗುಡಿಯಲ್ಲಿ ಪೂಜೆ ಮಾಡಲಾಗುತ್ತದೆ. ಪಾದಯಾತ್ರೆಯೊಂದಿಗೆ ನಂದಿಕೋಲ ಮೆರವಣಿಗೆ ಮಂಗಳವಾದ್ಯಗಳ ಜೊತೆಗೆ ನಡೆಯುತ್ತದೆ.

ಜನೇವರಿ ೧೨ ರಂದು ಅರಿಶಿನ ಹಚ್ಚುವ ಸಂಪ್ರದಾಯ ಇರುತ್ತದೆ. ೧೩ ರಂದು ಅಕ್ಷತೆ. ಇದಕ್ಕೆ ಬಾಸಿಂಗ ಕಟ್ಟುವುದು ಎಂದು ಹೇಳುತ್ತಾರೆ. ಅರಿಶಿಣ ಹಚ್ಚಿ, ಬಾಸಿಂಗ ಕಟ್ಟಿ, ಅಕ್ಷತಾ ಆದ ಮೇಲೆ ಸಿದ್ಧರಾಮನಿಗೆ ಆಹೇರಿ ಮಾಡುವ ಆಚರಣೆ ಇರುತ್ತದೆ. ದಂಟಿನಿಂದ ಇಲ್ಲವೆ ಕಣಕದಿಂದ ತಯಾರಿಸಿದ ಕುಂಬಾರ ಕನ್ಯಯನ್ನು ಹೋಮಕುಂಡದಲ್ಲಿ ಪ್ರತಿಷ್ಠಾಪಿಸಿರುತ್ತಾರೆ. ಆಕೆಗೆ ಸುಮಂಗಲೆಗೆ ಹಾಕುವ ಎಲ್ಲ ಒಡವೆಗಳನ್ನು ಹಾಕುತ್ತಾರೆ. ಹಸಿರು ಸೀರೆ, ಕುಪ್ಪಸ ಉಡಿಸಿ ನತ್ತು, ತಾಳಿ, ಬಳೆ ತೊಡಿಸಿ ಸಂಭ್ರಮಿಸುತ್ತಾರೆ. ಹೋಮ ಸುಡುವ ಆಚರಣೆಯೆಂದೆ ಮಾಡುತ್ತಾರೆ. ಈ ಹೋಮದಲ್ಲಿ ತುಪ್ಪ, ಸೀತ್ನಿ, ಬಾರಿಹಣ್ಣು, ಪೇರುಹಣ್ಣು, ಕಬ್ಬು ಮೊದಲಾದವನ್ನು ಹಾಕುತ್ತಾರೆ. ವರ್ಷಕ್ಕೆ ಒಂದುಸಾರೆ ಈ ಆಚರಣೆ ನಡೆದೇ ನಡೆಯುತ್ತದೆ. ಹೋಮ ಸುಟ್ಟಾದ ಮೇಲೆ ತಿಳಗೋಳ ಕೊಡುವ ಸಂಪ್ರದಾಯ ಇದೆ.

ಅಲ್ಲದೆ ಇನ್ನೊಂದು ಆಚರಣೆಯು ಕಾಣಿಸುತ್ತದೆ. ಚಾಮಲೆಯ ವಂಶಸ್ಥರಾದದೇಶಮುಖರ ಮನೆಯ ಒಂದು ಕರುವನ್ನು ವಿಶೇಷ ಪೂಜೆಗೆಂದು ಹಿಂದಿನ ದಿನದಿಂದಲೇ ಉಪವಾಸವಿಟ್ಟಿರುತ್ತಾರೆ. ಎಲ್ಲ ಧಾನ್ಯ, ಹಣ್ಣು-ಹಂಪಲು, ತರಕಾರಿ, ಬೆಲ್ಲ ಕಬ್ಬು ಮೊದಲಾದವುಗಳನ್ನು ಗಂಟು ಕಟ್ಟುತ್ತಾರೆ. ಆ ಗಂಟನ್ನು ಕರುವಿನ ಮುಂದೆ ಬಿಚ್ಚುತ್ತಾರೆ. ಆಗ ಆ ಕರು ಮೊದಲು ಯಾವ ಕಾಳಿಗೆ ಬಾಯಿ

ಹಾಕುವುದೋ ಆ ಧಾನ್ಯದ ಧಾರಣಿ ಚೆನ್ನಾಗಿರುತ್ತದೆಯೆಂದೂ ಹೆಂಡಿ ಹಾಕಿದರೆ ಸಮೃದ್ಧಿ ಇರುತ್ತದೆ ಎಂದೂ ಗಂಜಳ ಹಾಕಿದರೆ ಮಳೆ ಚೆನ್ನಾಗಿ ಬರುತ್ತದೆಂದೂ ನಂಬಲಾಗುತ್ತದೆ. ಸಿದ್ಧರಾಮನ ಮೂರ್ತಿ, ಪಾದುಕೆಗಳನ್ನು ಪಲ್ಲಕ್ಕಿಯಲ್ಲಿಟ್ಟು ಮೆರೆಸುತ್ತಾರೆ.

ಸಿದ್ಧರಾಮೇಶ್ವರನಿಗೆ ಭೋಗಿಯ ದಿನದಂದು ಭಕ್ತರು ಅರ್ಪಿಸುವ ನೈವೇದ್ಯದ ಜೊತೆ ಸೀತ್ನಿ, ಕುಸರೆಳ್ಳು, ಕಬ್ಬನ್ನು ಒಯ್ಯುತ್ತಾರೆ. ಜಾತ್ರೆ ದಿನ ಮದ್ದು ಸುಡುವ ಸಂಪ್ರದಾಯ ವಿಶೇಷವಾಗಿ ಕಾಣಿಸುತ್ತದೆ.

ಮಾಹಿತಿ : ಶ್ರೀಮತಿ ಲಲಿತಾ ಸಿದ್ರಾಮಪ್ಪ ದೇಶಮುಖ, ವರ್ಷ : ೭೫,
ಡಾ. ಮಧುಮಾಲಾ ಬಸವರಾಜ ಲಿಗಾಡೆ
ಶ್ರೀಮತಿ ಅಂಬಿಕಾ ಲಿಗಾಡೆ

***




ಜಾತ್ರೆಯ ವೇಳೆಗೆ ವಿಶೇಷ ಕಾರ್ಯಕ್ರಮಗಳು ನಡೆಯುವ ಕಟ್ಟೆ



ರೇವಣಸಿದ್ಧನ ಗುಡಿ
ರೇವಣಸಿದ್ಧರು ಸೋಲಾಪುರ ಪ್ರವೇಶಿಸಿದ ಕೂಡಲೆ ಭೂಮಿಗೆ ನಮಸ್ಕರಿಸಿ,
ಸಿದ್ಧರಾಮನ ಜನನದ ಭವಿಷ್ಯ ನುಡಿದ ಸ್ಥಳ



ರೇವಣಸಿದ್ಧನ ಗರ್ಭಗೃಹದ ಗುಡಿ



ರೇವಣಸಿದ್ಧರ ಗರ್ಭಗೃಹದಲ್ಲಿರುವ ಲಿಂಗ



ರೇವಣಸಿದ್ಧರ ಗರ್ಭಗೃಹದ ಎದುರಿನಲ್ಲಿರುವ ಲಿಂಗ

## ಅಕ್ಕಲಕೋಟ ತಾಲೂಕು :

### ನೀಲಗಾರ ಕರ್ಜಗಿ :
### ಗಜೇಶ್ವರ ದೇವಾಲಯ

ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಮುನವಳ್ಳಿ ಎಂಬ ಗ್ರಾಮದಲ್ಲಿ ಶರಣ ಗಜೇಶ ಮಸಣಯ್ಯ ಹಾಗೂ ಅವರ ಧರ್ಮಪತ್ನಿ ಮಸಣಮ್ಮ ಇವರ ಜೊತೆಗೆ ಇಬ್ಬರು ಮಕ್ಕಳ ಮತ್ತು ಗುರುವಿನ ಸಮಾಧಿಗಳು ಇವೆ. ಗಜೇಶ ಮಸಣಯ್ಯನವರು ಮೂಲತಃ ಮಹಾರಾಷ್ಟ್ರ ರಾಜ್ಯದ ಸೋಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ಒಂದು ಹಳ್ಳಿ 'ನೀಲಗಾರ ಕರ್ಜಗಿ' ಗ್ರಾಮದವರೆಂದು ಗುರುತಿಸಲ್ಪಟ್ಟಿದ್ದಾರೆ. ಈ ಗ್ರಾಮ ಅಕ್ಕಲಕೋಟದಿಂದ ೧೬ ಕಿ.ಮೀ. ದೂರದಲ್ಲಿದೆ. ಈಗ ಈ ಗ್ರಾಮದ ಜನಸಂಖ್ಯೆ ಸುಮಾರು ಹತ್ತು ಸಾವಿರ.


ಕರ್ಜಗಿಯಲ್ಲಿ ಗಜೇಶ್ವರ ಎಂಬ ದೇವತೆಯ ಗುಡಿ ಇದೆ. ಶಾಸನಗಳಲ್ಲಿ ಇದರ ಹೆಸರು ಸಿದ್ಧಗಜೇಶ್ವರ ದೇವರು ಎಂದು ಉಲ್ಲೇಖಿಸಲಾಗಿದೆ. ಊರಿನ



ಗಜೇಶ್ವರ ಗುಡಿಯ ಗರ್ಭಗೃಹದ ಶಿವಲಿಂಗ




ಗಜೇಶ್ವರ ಗುಡಿ




ಗಜೇಶ್ವರ ಗುಡಿಯ ಅಂಗಳದಲ್ಲಿರುವ ಭಗ್ನಗೊಂಡ ಅವಶೇಷಗಳು

ಜನರ ಬಾಯಿಯಲ್ಲಿ 'ಗಜನಂದೇವರು' ಎಂಬ ಹೆಸರು ಪ್ರಚಲಿತದಲ್ಲಿದೆ. ಮಸಣಯ್ಯ ಅವರು ಈ ದೈವದ ಆರಾಧಕರು. ಅವರು ತಮ್ಮ ವಚನಾಂಕಿತವಾಗಿ 'ಮಹಾಲಿಂಗ ಗಜೇಶ್ವರ' ಎಂದು ಬಳಸುತ್ತಾರೆ. ಗಜೇಶ ಮಸಣಯ್ಯ ಎಂದು ಪ್ರಸಿದ್ಧರಾದ ಈ ಶರಣನ ಹೆಸರಿನ ಜೊತೆಗೆ ಗಜೇಶ ಎಂಬ ಹೆಸರು ಸೇರಿಕೊಂಡಿರುವುದೂ ಈ ಗಜೇಶ್ವರ ದೇವರ ಹೆಸರಾಗಿದೆ.

ಕರ್ಜಗಿಯಲ್ಲಿ ಗಜೇಶ್ವರ ಗುಡಿಯ ಹತ್ತಿರ ಮಾಲಗಾರ ಸಮಾಜದ ಐದಾರು ಕುಟುಂಬಗಳಿದ್ದು, ಅವರ ಮನೆತನದ ಹೆಸರು ಗಜಾ ಎಂದಿದೆ ಎಂದು ತಿಳಿದುಬರುತ್ತದೆ. ಹೀಗಾಗಿ ಗಜೇಶ ಮಸಣಯ್ಯನವರೇನಾದರೂ ಈ ಕುಟುಂಬಗಳಿಗೆ ಸಂಬಂಧಿಸಿದವರು ಇರಬಹುದೇನೋ ಎಂಬ ಅನುಮಾನ ಉಳಿದುಕೊಳ್ಳುತ್ತದೆ. ಆದರೆ ಈಗಿರುವ ಗಜಾ ಹೆಸರಿನ ಕುಟುಂಬಗಳಿಗೆ ಮಸಣಯ್ಯನ ಪರಿಚಯವೇ ಇಲ್ಲ.

ಈ ಗುಡಿ ಈಗ ಹಾಳುಬಿದ್ದ ದೇಗುಲದಂತಾಗಿದೆ. ಸುತ್ತಮುತ್ತ ವಿಸ್ತಾರವಾದ ಸ್ಥಳವಿದ್ದರೂ ಉಪಯೋಗವಿಲ್ಲ. ಗುಡಿಯ ಕೆಳಗೆ ಒಂದಿಷ್ಟು ಜಮೀನು ಇದ್ದಬಗ್ಗೆಯೂ ತಿಳಿದುಬರುತ್ತದೆ. ಆದರೆ ಅದೆಲ್ಲ ಈಗ ಯಾರ್‍ಯಾರದೋ ಪಾಲಾಗಿರುವಂತೆ ತೋರುತ್ತದೆ. ಈ ಮಂದಿರದ ಜೀರ್ಣೋದ್ಧಾರಕ್ಕಾಗಿ ಮಹಾರಾಷ್ಟ್ರ ಸರ್ಕಾರದಿಂದ ೧ ಕೋಟಿ, ೯ ಲಕ್ಷ ರೂಪಾಯಿ ಮಂಜೂರಾಗಿ ಬಂದಿತ್ತಂತೆ. ಆದರೆ ಅದನ್ನು ಬಳಸಲು ಸಾಧ್ಯವಾಗದ ಸ್ಥಿತಿವುಂಟಾಗಿದ್ದರಿಂದ ಹಣ ಸರ್ಕಾರಕ್ಕೆ ತಿರುಗಿ ಹೋಗಿದೆ ಎಂದು ತಿಳಿದುಬರುತ್ತದೆ.

ಮನೆತನದ ಹೆಸರು ಗಜಾ ಎಂದಿರುವ ಮಾಲಗಾರರ ಕುಟುಂಬದವರು ಕೂಡಿ, ಶ್ರಾವಣ ಮಾಸದ ಕೊನೆಯಲ್ಲಿ ಪರ್ವ (ಖಾಂಡ) ಮಾಡುತ್ತಾರೆ. ಆದರೆ ಭಜನೆ ಇತ್ಯಾದಿ ಯಾವ ಸಾಂಸ್ಕೃತಿಕ ಕಾರ್ಯಕ್ರಮಗಳೂ ಇಲ್ಲಿ ನಡೆಸುವುದಿಲ್ಲ. ಮೊದಲು ಈ ಊರಿನಿಂದ ಶ್ರೀಶೈಲಕ್ಕೆ ಹೋಗುವ ಮಲ್ಲಯ್ಯನ ಕಂಬಿಗಳು ಹೋಗುವಾಗ ಈ ಗುಡಿಯ ಕಟ್ಟೆಗೆ ಬಂದು, ಕೂಡಿ ಹೋಗುತ್ತಿದ್ದವಂತೆ. ತಿರುಗಿ ಬರುವಾಗ ಈ ಗುಡಿಗೆ ಬಂದು, ಎಲ್ಲ ಕಂಬಿಗಳ ಮೆರವಣಿಗೆ ಇಲ್ಲಿಂದಲೇ ಪ್ರಾರಂಭವಾಗುತ್ತಿತ್ತಂತೆ. ಈಗ ಅಂತಹ ಯಾವ ಸಂಭ್ರಮಗಳೂ ಉಳಿದುಕೊಂಡಿಲ್ಲ. ಸರ್ಕಾರಿ ದಾಖಲೆಗಳಲ್ಲಿ ಗಜೇಶ್ವರ ಗುಡಿಯನ್ನು 'ದನದ ಕೊಟ್ಟಿಗೆ' ಎಂದು ನಮೂದಿಸಲಾಗಿದೆ ಎಂದು ತಿಳಿದುಬರುತ್ತದೆ. ಭಕ್ತರಿಲ್ಲದ ದೇವರು ಗತಿ, ಅವನ ಗುಡಿಯ ಸ್ಥಿತಿ ಹೇಗಾಗುತ್ತದೆ ಎಂಬುದಕ್ಕೆ ಗಜೇಶ್ವರನ ಗುಡಿ ಒಂದು ಉತ್ತಮ ನಿದರ್ಶನವಾಗಿದೆ. ನಾವು ನೋಡಿದ ಸುಮಾರು ೨೦೦ ಸ್ಥಳಗಳಲ್ಲಿ ಇಂತಹ ದುಸ್ಥಿತಿಯಲ್ಲಿರುವ ಗುಡಿ ಎಂದರೆ ಕರ್ಜಗಿಯ ಈ ಗಜೇಶ್ವರನ ಗುಡಿಯೇ ಆಗಿದೆ. ಅದೂ ಮಹಾರಾಷ್ಟ್ರದಲ್ಲಿ ನಾವು ನೋಡಿದ ಎಲ್ಲ ಶರಣರ ಸ್ಥಳಗಳು ಅದ್ಭುತ ಎನ್ನುವ ರೀತಿಯಲ್ಲಿ ಸುಧಾರಣೆಗೊಂಡಿವೆ. ಭಕ್ತರ ಸಮೂಹಕ್ಕೆ ಕೂಡ ಯಾವ ಕೊರತೆಯೂ ಇಲ್ಲ. ಆದರೆ ಗಜೇಶ ಮಸಣಯ್ಯನವರ ಆರಾಧ್ಯ ದೈವದ ಸ್ಥಿತಿ ಹೀಗಾಗಿರುವುದು ಸೋಚನೀಯ ಸಂಗತಿಯಾಗಿದೆ.

ಮಾಹಿತಿ : ಎಸ್.ಜಿ.ಸ್ವಾಮಿ, ಡಾ. ಗುರುಲಿಂಗಪ್ಪ ಧಪಾಲೆ

***




**ಗಜೇಶ್ವರ ಗುಡಿಯ ಮುಂದಿರುವ ಭಗ್ನಗೊಂಡ ಜೋಡು ನಂದಿಗಳು**

## ನಿಲಂಗಾ ತಾಲೂಕು :

# ಹಾಲಳ್ಳಿ (ದೇವರ ಹಾಲಳ್ಳಿ)
# ಚನ್ನಬಸವಣ್ಣನವರ ಸ್ಮಾರಕ ಗವಿ-ಗುಡಿ

ಲಾತೂರ್ ಜಿಲ್ಲಾ ನಿಲಂಗಾ ತಾಲೂಕಿನಲ್ಲಿ ಹಾಲಳ್ಳಿ ಅಥವಾ 'ದೇವರ ಹಾಲಳ್ಳಿ' (ಸರ್ಕಾರಿ ದಾಖಲೆಗಳಲ್ಲಿ ಹಲ್ಲಳ್ಳಿ) ಎಂಬ ಊರಿದೆ. ಇದಕ್ಕೆ ಹಾಲಹಳ್ಳಿ, ಹಲ್ಲನಹಲ್ಲಿ, ಹಲ್ಲಹಲ್ಲಳ್ಳಿ, ದೇವಿ ಹಲ್ಲಾಳಿ ಎಂದೂ ಕರೆಯುಲಾಗುತ್ತದೆ. ಈ ಊರಿನ ಬೆನ್ನಿಗೆ (ಪಶ್ಚಿಮ ದಿಕ್ಕಿಗೆ) ತಗುಲಿಕೊಂಡಿರುವ ಬೆಟ್ಟದ ಮೇಲೆ ಒಂದು ಗವಿ ಇದೆ. ಅದನ್ನು ಚೆನ್ನಬಸವಣ್ಣನವರು ಅನುಷ್ಠಾನ ಮಾಡಿದ ಗವಿ ಎಂದು ಜನರು ಹೇಳುತ್ತಾರೆ. ಈ



ಚೆನ್ನಬಸವಣ್ಣನವರ ಗವಿ ಇರುವ ಬೆಟ್ಟದ ಸ್ಮಾರಕ



ಚೆನ್ನಬಸವಣ್ಣನವರ ಗವಿ – ಗುಡಿ (ಎಡಕಿನದು ಗವಿ, ಬಲಕಿನದು ಗುಡಿ)

ಊರು, ಊರಿಗೆ ತಗುಲಿಕೊಂಡಿರುವ ಬೆಟ್ಟ, ಬೆಟ್ಟದ ಮೇಲೆ ಚೆನ್ನಬಸವಣ್ಣನವರು ಅನುಷ್ಠಾನ ಮಾಡಿದ ಸ್ಥಳ ಇವನ್ನು ನೋಡಿದರೆ, ಥಟ್ಟನೆ ಕಿನ್ನರಿ ಬ್ರಹ್ಮಯ್ಯ ನೆಲೆನಿಂತಿರುವ ಹಳ್ಳಿಖೇಡ ಗ್ರಾಮದ ಪರಿಸರ ನೆನಪಾಗುತ್ತದೆ. ಕಿನ್ನರಯ್ಯ ವಾಸವಾಗಿದ್ದ ಗುಡ್ಡದ ವಾರೆಯಲ್ಲಿ ಜನವಸತಿ ಬೆಳೆದು ಹಳ್ಳಿಖೇಡ ನಿರ್ಮಾಣವಾಗಿರುವಂತೆ, ಇಲ್ಲೂ ಚೆನ್ನಬಸವಣ್ಣನವರ ಸ್ಮಾರಕವಿರುವ ಗುಡ್ಡದ ವಾರಿಯಲ್ಲಿ ಜನವಸತಿ ಉಂಟಾಗಿ ಅದು **ದೇವರ ಹಾಲಳ್ಳಿ** ಎಂದು ಪ್ರಸಿದ್ಧವಾದಂತೆ ತೋರುತ್ತದೆ.

ಗುಡ್ಡದ ಮೇಲೆ ಏರಿ ಹೋಗಲು ಮೆಟ್ಟಲುಗಳನ್ನು ನಿರ್ಮಿಸಿದ್ದಾರೆ. ಅಲ್ಲಿರುವ ಗವಿಯ ಒಳಗೆ ಪಕ್ಕಕ್ಕೆ ಸಣ್ಣ ಬಾವಿ ಇದೆ. ಇದು ಅಪಾಯವೆಂದು ಕಲ್ಲಿನಿಂದ ಮುಚ್ಚಲಾಗಿದೆ. ಇನ್ನೊಂದು ಪಕ್ಕಕ್ಕೆ ಅಕ್ಕಮಹಾದೇವಿ ಗುಡಿ ಇದೆ. ಮುಂದೆ–ಪೂಜೆಗೆ ಅನುಕೂಲವಾಗಲೆಂದು ಚೆನ್ನಬಸವಣ್ಣನ ಗುಡಿ ಕಟ್ಟಿದ್ದಾರೆ. ಒಬ್ಬರು ಕುಳಿತುಕೊಂಡು ಪೂಜೆಮಾಡಿಕೊಳ್ಳಲು ಅನುಕೂಲವಾಗುವಂತೆ ಇರುವ ಚಿಕ್ಕ ಬಾಗಿಲುಳ್ಳ, ಕುಳಿತುಕೊಂಡೆ ಒಳಪ್ರವೇಶಿಸಲು ಸಾಧ್ಯವಾಗಬಹುದಾದ ಚಿಕ್ಕ ಗುಡಿ ಅದು.

ಚೆನ್ನಬಸವಣ್ಣನ ಗವಿ ಮೊದಲಿಗೆ ಒಂದಿಷ್ಟು ವಿಸ್ತಾರವಾಗಿದ್ದು, ಎಂಟ್ಹತ್ತು ಜನ ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿದೆ. ಇಲ್ಲಿಯೇ ಶಿವಲಿಂಗಸ್ಥಾಪಿಸಿದ್ದಾರೆ. ಇಲ್ಲಿಂದ ಮತ್ತೆ ಕೆಳಗಡೆ ಒಂದು ಸಣ್ಣ ಗವಿ ಇದೆ. ಅಲ್ಲಿ ಇಳಿದು ಹೋಗಲು ತುಂಬ ಇಕ್ಕಟ್ಟಾದ ಮಾರ್ಗವಿದೆ. ಕುಳಿತು ಬಗ್ಗಿ ಜರಿದು ಹೋಗಬಹುದಾದಷ್ಟು ಚಿಕ್ಕ ಸುರಂಗ ಮಾರ್ಗ ಅದು. ಎಡಭಾಗದಿಂದ ಇಳಿದು ಹೋಗಿ ಬಲಭಾಗದಿಂದ ಏರಿ ಮೇಲೆ ಬರಲು


ಅನುಕೂಲವಾಗುವಂತೆ ಗವಿಯಲ್ಲಿ ಸುರಂಗ ಮಾರ್ಗವನ್ನು ಕೊರೆಯಲಾಗಿದೆ. ಕೆಳಗೆ ಇಳಿದು ಹೋಗಿ ನೋಡಿದಾಗ ಅಲ್ಲಿ ಚೆನ್ನಬಸವಣ್ಣನವರು ಪೂಜಿಸಿದ ಲಿಂಗವೆಂದು ಹೇಳುವ ಒಂದು ಚಿಕ್ಕದಾದ, ಪಾನವಾಟವಿಲ್ಲದ ಬರಿ ಲಿಂಗ ಮಾತ್ರ ಇದೆ. ಅದೂ ಇರುವುದು ಒಂದು ಇಕ್ಕಟ್ಟಾದ, ಆಳವಾದ ಗವಿಯ ಮಾಡದಲ್ಲಿ. ಅದನ್ನು ಬಗ್ಗಿ ನೋಡಿ, ಕೈಚಾಚಿ ಪೂಜೆ ಮಾಡಬೇಕಾಗುತ್ತದೆ.

ಶರಣಯ್ಯ ಸಿದ್ರಾಮಯ್ಯ ಸ್ವಾಮಿ ಅವರು ನಸುಕಿನ ೪ ಗಂಟೆಗೆ ಆ ಲಿಂಗವನ್ನು ಪೂಜಿಸುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಈ ಗವಿ ಹಾಲಹಳ್ಳಿ ಗ್ರಾಮ ಸ್ಥಾಪನೆ ಆಗುವುದಕ್ಕಿಂತ ಮುಂಚೆ ಇತ್ತು ಎನ್ನಲಾಗುತ್ತದೆ. ಬಹಳ ಪುರಾತನವಾದುದು ಎಂದು ಹೇಳುತ್ತಾರೆ. ನಾವು ಇದಕ್ಕೆ ಏನೂ ಕೈ ಹಚ್ಚಲು ಹೋಗಿಲ್ಲ, ಆದರೂ ಲಿಂಗವು ಮಾಡದ ಒಳಗೊಳಗೇ ಹಿಂದಕ್ಕೆ ಸರಿದು ಹೋದಂತೆ ಅನಿಸುತ್ತಿದೆ ಎಂದು ತಮ್ಮ ಅನುಭವಗಳನ್ನು ಪೂಜಾರಿಗಳು ಹೇಳುತ್ತಾರೆ.

ದನ ಕಾಯುತ್ತ ಬಂದಾಗ ಈ ಗವಿಯಲ್ಲಿ ಪಂಜು ಹಿಡಿದು ಒಳಗೆ ಓಡಾಡುತ್ತ ಇದ್ದೆವು ಎಂದು ನಾಗನಾಥ ಮಾಧು ಬಿರಾದಾರ ಅವರು ಹೇಳುತ್ತಾರೆ. ಇತ್ತೀಚೆಗೆ ೩೦ ವರ್ಷದಿಂದ ಹೊರಗೆ ಕಟ್ಟೆಯನ್ನು ಕಟ್ಟಿ ಬಾಗಿಲನ್ನು ಮಾಡಲಾಗಿದೆ. ನಿರಂತರ ಆರಾಧಾನೆ ಮಾಡುತ್ತ ಬರುತ್ತಿದ್ದೇವೆ. ಆರಾಧನೆ ಸಂದರ್ಭದಲ್ಲಿ ಇಡೀ ಊರಿಗೆ ಊಟ ಕೊಡಲಾಗುತ್ತದೆ.



ಚನ್ನಬಸವಣ್ಣನವರ ಗವಿ



ಚನ್ನಬಸವಣ್ಣನವರ ಗವಿಯ ಕೆಳಗಿನ ಗವಿ

ಇಲ್ಲಿ ಹರಕೆ ಹೊರುವ ದೊಡ್ಡ ಸಂಪ್ರದಾಯ ಇದೆ. ಅದು ಯಾವುದೆ ವಿಷಯಕ್ಕೆ ಸಂಬಂಧಿಸಿದ್ದು ಆಗಿರಬಹುದು. ತಮ್ಮ ಬಯಕೆ ಈಡೇರಿದ ಮೇಲೆ ಬಂದು ಹರಕೆ ತೀರಿಸಿಕೊಂಡು ಹೋಗುತ್ತಾರೆ ಎಂದು ಮಾಧವರಾವ ಸರ್ಜೆ ಅವರು ಹೇಳುತ್ತಾರೆ.

ಈ ಊರಿನಲ್ಲಿ ೩೫೦ ಮನೆಗಳಿವೆ. ಲಿಂಗಾಯತ ಹಾಗೂ ಮರಾಠ ಸಮಾಜದ ಜನರು ಇಲ್ಲಿದ್ದಾರೆ. ಗೋಸಾಯಿಗಳ ಒಂದೆರಡು ಮನೆಗಳಿವೆ. ನಾವು ಎಲ್ಲೆಲ್ಲಿ ಶರಣರ ಸ್ಮಾರಕಗಳನ್ನು ಗಮನಿಸುತ್ತಿದ್ದೇವೆಯೋ ಆ ಊರುಗಳಲ್ಲಿ ಒಂದೆರೆಡು ಗೋಸಾಯಿಗಳ ಮನೆಗಳಿರುವುದು ಕಂಡುಬರುತ್ತಿದೆ. ಹೀಗಾಗಿ ಗೋಸಾಯಿಗಳು ಶರಣರ ಅನುಯಾಯಿಗಳಾಗಿರಬೇಕೆಂಬ ಅನುಮಾನ ಗಟ್ಟಿಯಾಗುತ್ತದೆ. ಚನ್ನಬಸವಣ್ಣನವರ ಹೆಸರಿನಲ್ಲಿ ನಡೆಯುವ ಆರಾಧನಾ ಸಮಯದಲ್ಲಿ ಲಿಂಗಾಯತ ಸಮಾಜದವರೆ ಅಡಿಗೆ ಮಾಡುತ್ತಾರೆ. ಉಳಿದವರು ಅದಕ್ಕೆ ಸಹಕರಿಸುತ್ತೇವೆ ಎನ್ನುತ್ತಾರೆ.

ಈ ಗವಿಯ ಹೊರಗಿನ ಆವರಣದಲ್ಲಿ ಕೆಲವು ಸಮಾಧಿಗಳಿದ್ದು ಇವು ಚನ್ನಬಸವಣ್ಣನವರ ಆಪ್ತ ಸೇವಕರವು ಆಗಿರಬಹುದು ಎನ್ನುತ್ತಾರೆ.

ಮಾಹಿತಿ: ಶರಣಯ್ಯ ಸಿದ್ರಾಮಯ್ಯ ಸ್ವಾಮಿ, ನಾಗನಾಥ ಬಿರಾದಾರ,
ಮಾಧವರಾವ ಸರ್ಜೆ

***

## ಸಾಂಗ್ಲಿ ಜಿಲ್ಲೆಯ ಶರಣಸ್ಮಾರಕಗಳು

### ಜತ್ತ ತಾಲೂಕು :

### ಉಮ್ರಾಣಿ :

### ಗುಡ್ಡಾಪುರ ದಾನಮ್ಮನ ಜನ್ಮಸ್ಥಳ

ಸಾಂಗ್ಲಿ ಜಿಲ್ಲೆಯ ಜತ್ತ ತಾಲೂಕಿನ ಒಂದು ಊರು ಉಮ್ರಾಣಿ. ಶರಣಿ ದಾನಮ್ಮನ ಜನ್ಮಸ್ಥಳವಾಗಿ ಇಂದು ಪವಿತ್ರ ಯಾತ್ರಾ ಕ್ಷೇತ್ರವಾಗಿ ನೆಲೆನಿಂತಿದೆ. ಅನಂತರಾಯ-ಶಿರಸಮ್ಮ ಅವರ ಮಗಳು ಲಿಂಗಮ್ಮ. ಈ ದಂಪತಿಗಳಿಗೆ ಬಹುದಿನಗಳಿಂದ ಮಕ್ಕಳಾಗಿರುವುದಿಲ್ಲ. ಉಮ್ರಾಣಿಯ ಮಲ್ಲಿಕಾರ್ಜುನ ದೇವರಿಗೆ ಬೇಡಿಕೊಂಡು ಈ ಮಗಳನ್ನು ಅವರು ಪಡೆಯುತ್ತಾರೆ.



ದಾನಮ್ಮಳ ಗುಡಿ, ಉಮ್ರಾಣಿ

ಈ ದಂಪತಿಗಳು ಪಂಚಾಳ ಸಮಾಜಕ್ಕೆ ಸಂಬಂಧಿಸಿದವರು. ಶಿರಸಮ್ಮ ದಿನತುಂಬಿ ಮಗಳನ್ನೇನೋ ಹೆತ್ತಳು. ಆದರೆ ಆ ಕೂಸು ೩ ದಿನ ತಾಯಿ ಹಾಲನ್ನೇ ಕುಡಿಯಲಿಲ್ಲವಂತೆ. ಮತ್ತೆ ಮಲ್ಲಿಕಾರ್ಜುನನಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಆಗ ಮಲ್ಲಿಕಾರ್ಜುನ (ಜಂಗಮ ವೇಷದಲ್ಲಿದ್ದ) ಅವಳಿಗೆ ಲಿಂಗಧಾರಣೆ ಆಗದೆ ಹಾಲು ಕುಡಿಯಲಾರಳೆಂದು ಹೇಳುತ್ತಾರೆ. ತಮ್ಮ ಮನೆಯ ಬಾಗಿಲಲ್ಲಿ ಹಾದುಹೋಗುವ ಜಂಗಮನಿಂದಲೇ ಲಿಂಗಮ್ಮನಿಗೆ ಲಿಂಗದೀಕ್ಷೆ ಆಗಲಿ ಎಂದು ಹೇಳುತ್ತಾನೆ. ಮಗುವಿಗೆ ಲಿಂಗಮ್ಮ ಎಂದು ಹೆಸರಿಡಲು ಸೂಚಿಸುತ್ತಾನೆ. ಈ ಮಗು ಸಾಮಾನ್ಯವಾದುದಲ್ಲ ಜಗನ್ಮಾತೆ ಎಂದು ಅರುಹುತ್ತಾನೆ. ಮಲ್ಲಿಕಾರ್ಜುನ ಹೇಳಿದಂತೆ ಮಗುವಿಗೆ ಜಂಗಮನಿಂದ ಲಿಂಗದೀಕ್ಷೆ ಮಾಡಿಸುತ್ತಾರೆ. ಬಹುಶಃ ಆ ಜಂಗಮ ಮಲ್ಲಿಕಾರ್ಜುನನೇ ಆಗಿರುತ್ತಾನೆ.

ಈಗಲೂ ಉಮ್ರಾಣಿಯಲ್ಲಿ ಲಿಂಗಮ್ಮ ಹುಟ್ಟಿದ ಮನೆ ಇದೆ. ಸಂಪೂರ್ಣವಾಗಿ ಬಿದ್ದು ಹಾಳಾಗಿ ಹೋಗಿದೆ. ಅದೇ ಸ್ಥಳದಲ್ಲಿ ಹೊಸದಾಗಿ ಒಂದು ಸಣ್ಣ ಕೋಣೆಯನ್ನು ಕಟ್ಟಿಸಿ, ಅಲ್ಲಿ ಒಂದು ಮೂಲೆಯಲ್ಲಿ ಜಗಲಿಕಟ್ಟೆಯನ್ನು ನಿರ್ಮಿಸಿ, ಶಿವಲಿಂಗವನ್ನಿಟ್ಟಿದ್ದಾರೆ. ಅದನ್ನೇ ಇಂದು ದಾನಮ್ಮನ ಪ್ರತೀಕವಾಗಿ ಪೂಜಿಸುತ್ತಿದ್ದಾರೆ.



ಗುಡಿಯ ಗರ್ಭಗೃಹದಲ್ಲಿರುವ ದಾನಮ್ಮನ ಮೂರ್ತಿ



ದಾನಮ್ಮ ಹುಟ್ಟಿದ ಹಳೆಯ ಮನೆ,
ಆ ಸ್ಥಳದಲ್ಲಿ ಒಂದು ಹೊಸ ಕೋಣೆ ನಿರ್ಮಿಸಲಾಗಿದೆ.

ಲಿಂಗಮ್ಮಳು ಗಿರಿಜಮ್ಮ ಎನ್ನುವ ಗೆಳತಿಯೊಂದಿಗೆ ಆಧ್ಯಾತ್ಮದ ಒಲವಿನೊಂದಿಗೆ ಬೆಳೆಯುತ್ತಾಳೆ. ಊರವರ ಮನೆಯವರ ವಿಚಾರಗಳು, ಮದುವೆಯ ಒತ್ತಡ ಇವೆಲ್ಲವನ್ನು ಆಕೆಗೆ ಒಪ್ಪಿಕೊಳ್ಳಲು ಸಾಧ್ಯವಾಗುವದಿಲ್ಲ. ಹೀಗಾಗಿ ತಾಯಿ-ತಂದೆಗೆ ಗೊತ್ತಾಗದಂತೆ ಮನೆ ಬಿಡಬೇಕೆಂದು ನಿರ್ಣಯಿಸುತ್ತಾಳೆ. ತನ್ನ ಸಂಕಲ್ಪವನ್ನು ಆತ್ಮೀಯ ಗೆಳತಿ ಗಿರಿಜೆಗೆ ಹೇಳುತ್ತಾಳೆ. ಆದರೆ ಆಕೆಯೂ ಲಿಂಗಮ್ಮನ ಜೊತೆ ಹೊರಡಲು ಸಿದ್ಧಳಾದಾಗ ಬೇಡವೆಂದು ಹೇಳಿ, ತನ್ನ ನೆನಪಾದಾಗಲೆಲ್ಲ ಪೂಜಿಸಲು ಲಿಂಗವೊಂದನ್ನು ಕೊಟ್ಟು ಬೇರೆ ಯಾರಿಗೂ ಗೊತ್ತಾಗದಂತೆ ಉಮ್ರಾಣಿಯನ್ನು ಬಿಟ್ಟು, ಕಲ್ಯಾಣಕ್ಕೆ ಹೊರಡುತ್ತಾಳೆ.

ಉಮ್ರಾಣಿಯಲ್ಲಿ ಗೆಳತಿ ಗಿರಿಜಮ್ಮಳಿಗೆ ಕೊಟ್ಟುಹೋದ ಲಿಂಗವನ್ನು ಆ ಮನೆತನದವರು ಜೋಪಾನದಿಂದ ಗದ್ದುಗೆ ಮೇಲಿಟ್ಟು ಇಂದಿಗೂ ಪೂಜಿಸುತ್ತ ಬಂದಿದ್ದಾರೆ. ಗಿರಿಜಮ್ಮ ಗೌಡತಿ (ಲಿಂಗಾಯತ) ಯದು ದೊಡ್ಡ ವಾಡೆಯ ಮನೆ. ಗಿರಿಜವ್ವನಿಗೆ ದಾನಮ್ಮ ಮರಳಿ ಬರುವುದಾಗಿ ಭರವಸೆ ಕೊಟ್ಟಿದ್ದಳು. ತಾನು ಕೊಟ್ಟ ಲಿಂಗವನ್ನು ಪೂಜಿಸಲು ಹೇಳಿದ್ದಳು. ಅದನ್ನು ಗಿರಿಜವ್ವ ಪಾಲಿಸಿಕೊಂಡು ಬಂದಳು. ಆದರೆ ಅದು ಅಲ್ಲಿಗೆ ನಿಲ್ಲದೇ ತಲೆಮಾರಿನಿಂದಲೂ ಆ ಲಿಂಗಮ್ಮನ ಲಿಂಗದ ಗದ್ದುಗೆಗೆ ನಿತ್ಯ ಪೂಜೆ ಸಲ್ಲುತ್ತಲೇ ಇದೆ.

ಇತ್ತೀಚೆಗೆ ದಾನಮ್ಮದೇವಿ ಗಿರಿಜವ್ವನ ಮನೆಯವರ ಕನಸಿನಲ್ಲಿ ಬಂದು ಗುಡಿ ಕಟ್ಟಿಸಲು ಹೇಳಿದಂತಾಗಲು ಇಡೀ ವಾಡೆ ಮನೆಯನ್ನು ಗುಡಿಗಾಗಿ ಬಿಟ್ಟುಕೊಟ್ಟಿದ್ದೇವೆ,

ದಾನಮ್ಮದೇವಿಯ ಶಿಲಾಮೂರ್ತಿಯನ್ನು ಸ್ಥಾಪಿಸಿದ್ದೇವೆ, ಮಗ್ಗಲು ಅಕ್ಕಮಹಾದೇವಿ ಮೂರ್ತಿ ಸ್ಥಾಪಿಸಿದ್ದೇವೆ. ಆದರೆ ಇನ್ನೊಂದು ಪಕ್ಕದಲ್ಲಿರುವ ಮಲ್ಲಿಕಾರ್ಜುನ ಗದ್ದುಗೆ ಮೊದಲಾದವು ಈಗ ಸ್ಥಾಪಿಸಲ್ಪಟ್ಟವು. ಆದರೆ ಒಂದು ದಂಡೆಗೆ ಇರುವ ಲಿಂಗದ ಗದ್ದುಗೆ ಮಾತ್ರ ದಾನಮ್ಮನವರ ಕಾಲದ್ದು. ಅವರೇ ಗೆಳತಿಗೆ ಕೊಟ್ಟ ಲಿಂಗದ ಗದ್ದುಗೆ ಎಂದು ಹೇಳುತ್ತಾರೆ.

ಈಗ ಉಮ್ರಾಣಿಯಲ್ಲಿ ದಾನಮ್ಮನ ವಂಶಿಕರು ಎಂದು ಹೇಳಲು ಯಾರೂ ಉಳಿದಿಲ್ಲ. ಬಿದ್ದುಹೋದ ಹಾಳು ಮನೆ ಮಾತ್ರ ಇದೆ. ದವನದ ಹುಣ್ಣಿವೆಗೆ ಕ್ಷತ್ರಿಯ ತೃತಿಯ ೩ ದಿನ ಇರಲಿಕ್ಕೆ ಜಾತ್ರೆ ಮುಕ್ತಾಯ ಆಗುತ್ತದೆ. ಯಾರೂ ಬೇಡದೇ ಇದ್ದರೂ ದಾನಮ್ಮನ ಜಾತ್ರೆಗಾಗಿ ಊರವರು, ಸುತ್ತಲೂರವರು, ತಮ್ಮ ತಮ್ಮ ಶಕ್ತ್ಯಾನುಸಾರ ತಾವೇ ದಾಸೋಹಕ್ಕೆ ಧನದಾನ್ಯ ಮೊದಲಾದವನ್ನು ಕೊಡುತ್ತಾರೆ. ಪಲ್ಲಕ್ಕಿಯಲ್ಲಿ ಕೇವಲ ೫ ಕಾಯಿ ಐದು ವಿಭೂತಿ ಉಂಡಿ ಇಟ್ಟಿರುತ್ತೇವೆ. ಅವನ್ನು ಭಕ್ತಿಯಿಂದ ಜನ ದೊಡ್ಡಮೌಲ್ಯಕ್ಕೆ ಕೊಂಡುಕೊಳ್ಳುತ್ತಾರೆ. ಆ ಧನವನ್ನು ಗುಡಿಯ ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತದೆ ಎನ್ನುತ್ತಾರೆ.

ಮಾಹಿತಿ : ದಾನಪ್ಪ ಶಿವಪ್ಪ ಬಿರಾದಾರ



ಹೊಸಕೋಣೆಯಲ್ಲಿ ನಿರ್ಮಿಸಿರುವ ಜಗಲಿ

## ೧. ಬೆಳಗುವೆನಾರುತಿಯಾ ದಾನಮ್ಮ ತಾಯಿಗೆ

ಬೆಳಗುವೆನಾರುತಿಯಾ ದಾನಮ್ಮ ತಾಯಿಗೆ
ದಾನಮ್ಮ ತಾಯಿಗೆ ಸೋಮೇಶನ ಸತಿಯಳಿಗೆ
ಪ್ರೇಮದಿಂದಲಿ ನಾವು ನೀವೆಲ್ಲರು ಕೂಡಿಕೊಂಡು । ಪಲ್ಲ।

ಉಮರಾಣಿಯಲ್ಲಿ ಜನಿಸಿ ಬಾಲಲೀಲೆಯ ಮಾಡಿ
ಅನಂತರಾಯ ಸಿರಸಮ್ಮನ ಉದರದಲ್ಲಿ ಜನಿಸಿ।
ಉಮರಾಣಿಯನು ಬಿಟ್ಟು ಕಪ್ಪಡಿಸಂಗಮಕ ಹೋಗಿ
ಸಂಗಮನಾಥನ ಕೂಡಿಕೊಂಡು ದೇಶಸಂಚಾರ ಮಾಡಿದ ದೇವಿಗಿ।

ಕಪ್ಪಡಿ ಸಂಗಮನ ಬಿಟ್ಟು ಬಾಗೇವಾಡಿಗೆ ಹೋಗಿ
ಕಲ್ಲುಬಸವೇಶಗ ಕಬ್ಬ ಮೆಲಸಿದ ತಾಯಿ।
ಬಾಗೇವಾಡಿಯನು ಬಿಟ್ಟು ಕಲ್ಯಾಣ ಪಟ್ಟಣಕ್ಹೋಗಿ
ಬಸವನ ಬಾಳಿವನದಲಿ ದಾಸೋಹ ಮಾಡಿದ ತಾಯಿ।



ಮಲ್ಲಿಕಾರ್ಜುನ ದೇವಾಲಯ



ಮಲ್ಲಿಕಾರ್ಜುನ ದೇವಾಲಯದ ಗರ್ಭಗೃಹ–ಎದುರಿನ ಮಂಟಪ

ದಾನ ಧರ್ಮವ ಮಾಡಿ ಜ್ಞಾನದ ಮಾರ್ಗವ ಹಿಡಿದು
ದಾನಮ್ಮನೆಂದು ಹೆಸರಿಟ್ಟುಕೊಂಡ ತಾಯಿಗೆ।
ಕಲ್ಯಾಣ ಪಟ್ಟಣ ಬಿಟ್ಟು ಸಂಕತೀರ್ಥಕೆ ಬಂದು
ತಂದಿ ತಾಯಿನ ಕರಕೊಂಡು ಗುಡ್ಡಾಪುರಕೆ ಹೋದ ತಾಯಿ।

ದೇಶಕಧಿಕವಾದ ವಾಸುಳ್ಳ ಉಮರಾಣಿ
ಸೋಮಲಿಂಗನ ಸತಿ ಶರಣಿ ದಾನಮ್ಮ ತಾಯಿಗೆ ।

ಹಾಡಿದವರು : ದಾನಪ್ಪ ಶಿವಪ್ಪ ಬಿರಾದಾರ

***

## ೨. ಅತ್ತಲಿತ್ತ ತಿರುಗುವುದ್ಯಾಕೊ

ಅತ್ತಲಿತ್ತ ತಿರುಗುವುದ್ಯಾಕೊ ಮುತ್ತಿನಂಥ ಮನಸಿರಬೇಕೊ।
ಸತ್ಯವಂತಿ ದಾನಮ್ಮನೆಂದು ನಿತ್ಯದಲಿ ನೆನಿಯಬೇಕೊ ।ಪ।

ಉಮರಾಣಿ ಗ್ರಾಮದಲ್ಲಿ ಸತ್ಯವಂತಿ ಶರಣರಲ್ಲಿ
ಹುಟ್ಟಿಬಂದ ದಾನಮ್ಮನೆಂದು ನಿತ್ಯದಲಿ ನೆನಿಯಬೇಕೊ।
ಅಂಗೈಯಲ್ಲಿ ಲಿಂಗವ ಹಿಡಿದು ಲಿಂಗವಂತ ಧರ್ಮವ ಬೆಳೆಸಿ
ಮಾತಾಯಿ ದಾನಮ್ಮನೆಂದು ನಿತ್ಯದಲಿ ನೆನಿಯಲಿ ಬೇಕೊ।

ಕುರುಡ ಕುಂಟರಿಗೆಲ್ಲ ಬಂಜಿಗೆ ಮಕ್ಕಳ ಕೊಡುವ
ಪಾರ್ವತಿದೇವಿನ ನಿತ್ಯದಲಿ ನೆನಿಯಬೆಕೊ।
ಕಾಡಿನಲ್ಲಿ ಕಾಡಿನ ಮಲಿಯನುಂಡು
ಅಡಿಗಡಿಗೆ ನೆನೆದರೆ ಒಡೆದು ಕಾಣು ತಾಯಿ।

ಕರನಾಟ ರಾಜ್ಯದಲ್ಲಿ ಹುಬ್ಬಳ್ಳಿ ಶಾರದಲ್ಲಿ
ಜಂಬಗಿ ಗುರುಮನೆತನಕ ಒಲದಮ್ಮ ತಾಯಿಗೆ ।
ದೇಶಕಧಿಕವಾದ ವಾಸುಳ್ಳ ಉಮರಾಣಿ
ಸೋಮಲಿಂಗನ ಸತಿ ಶರಣಿ ದಾನಮ್ಮ ತಾಯಿ ।

ಹಾಡಿದವರು : ದಾನಪ್ಪ ಶಿವಪ್ಪ ಬಿರಾದಾರ

***



ದಾನಮ್ಮ ತನ್ನ ಗೆಳತಿಗೆ ಕೊಟ್ಟ ಇಷ್ಟಲಿಂಗವನ್ನು ಗುಡಿಯಲ್ಲಿ ಇಡಲಾಗಿದೆ

## ಜತ್ತ ತಾಲೂಕು :

### ಸಂಕತೀರ್ಥ :
### ಗುಡ್ಡಾಪುರ ದಾನಮ್ಮನ ಮದುವೆ ನಡೆದ ಸ್ಥಳ

ಕಲ್ಯಾಣದಲ್ಲಿ ಶರಣರೆಲ್ಲರಿಗೆ ತನ್ನ ವಿವಾಹಕ್ಕೆ ಬರಲು ಪ್ರಾರ್ಥಿಸಿಕೊಂಡು ದಾನಮ್ಮ ಮರಳಿ ತನ್ನ ಜನ್ಮಸ್ಥಳ ಉಮ್ರಾಣಿಗೆ ಬರುತ್ತಾಳೆ. ತಾಯಿ-ತಂದೆಯರಿಗೆ ತಾನು ವಿವಾಹವಾಗುವುದಾಗಿ ಹೇಳುತ್ತಾಳೆ. ಸಂಕ ಎಂಬ ಗ್ರಾಮದ ಮಹಾಭಕ್ತ ಸೋಮನಾಥರೊಂದಿಗೆ ಮದುವೆ ನಿಶ್ಚಯ ಆಗುತ್ತದೆ. ಮದುವೆ ಶಂಖತೀರ್ಥ ಎಂಬ ಸ್ಥಳದಲ್ಲಿ ನಡೆಯಬೇಕೆಂದು ಹಿರಿಯರು ನಿಶ್ಚಯಿಸುತ್ತಾರೆ. ಆಗಲೂ ದಾನಮ್ಮ ತಾನೊಬ್ಬಳೇ ವಿವಾಹವಾಗುವದಕ್ಕಿಂತ ಈ ಮದುವೆ ಸಮಾರಂಭದಲ್ಲಿ ಇನ್ನುಳಿದ



ದಾನಮ್ಮನ ಮದುವೆ ನಡೆದ ಸ್ಥಳ



ದಾನಮ್ಮನ ಮದುವೆ ನಡೆದ ಸ್ಥಳದಲ್ಲಿರುವ ತೀರ್ಥ ಗುಂಡ

ಇಚ್ಛಿತರು ವಿವಾಹವಾಗಬಹುದೆಂದು ಹೇಳಿ, ೫೫೧ ಜೋಡಿ ಮದುವೆಯ ಸಿದ್ಧತೆ ಮಾಡಲು ಜತ್ತ ಸಂಸ್ಥಾನದ ರಾಜನ ಕನಸಿನಲ್ಲಿ ಹೋಗಿ ಹೇಳಿದಳೆಂದೂ, ರಾಜನು ಅಷ್ಟೆಲ್ಲ ಜೋಡಿಗಳ ಮದುವೆಯ ವ್ಯವಸ್ಥೆ ಮಾಡಿದನೆಂದೂ ಜನ ಹೇಳುತ್ತಾರೆ.

ಶಂಖತೀರ್ಥ (ಸಂಕತೀರ್ಥ) ಇದು ಊರಲ್ಲ. ದಾನಮ್ಮ ಮದುವೆಯಾದಳೆಂದು ಹೇಳುವ ಒಂದು ಸ್ಥಳ ಮಾತ್ರ. ಜತ್ತ ತಾಲೂಕಿನ ಸಾಂಗ್ಲಿ ಜಿಲ್ಲೆಯಲ್ಲಿ ಬರುವ ಪ್ರದೇಶ. ದಾನಮ್ಮ ಈಗ ನೆಲೆದಿರುವ ಗುಡ್ಡಾಪುರದಿಂದ ಅವಳ ಜನ್ಮಸ್ಥಳ ಉಮ್ರಾಣಿಗೆ ಹೋಗುವ ದಾರಿಯಲ್ಲಿ ಇರುವ ಒಂದು ಸ್ಥಳ. ಇಂದು ದಾನಮ್ಮಳ ಹೆಸರಿನಲ್ಲಿ ಯಾತ್ರಾಸ್ಥಳವೇ ಆಗಿದೆ. ಇಲ್ಲಿ ದಾನಮ್ಮಳು ಮದುವೆಯಾದಳೆಂದು ಹೇಳುವ ಸ್ಥಳದಲ್ಲಿ ದಾನಮ್ಮಳ ಮೂರ್ತಿಯನ್ನು ಸ್ಥಾಪಿಸಿದ ಒಂದು ಸಣ್ಣ ಮಂದಿರ ಮಾತ್ರ ಇದೆ.

ಈ ಸ್ಥಳಕ್ಕೆ ಸಂಕತೀರ್ಥ ಎಂದು ಹೆಸರು ಬರಲು ಕಾರಣವೆಂದರೆ ಮದುವೆ ದಿನ ಸೋಮನಾಥನು ಒಂದು ಶಂಖವನ್ನು ಭೂಮಿಯ ಮೇಲೆ ಇಟ್ಟು ತಿರುವುತ್ತಾನಂತೆ. ಲಿಂಗಮ್ಮ ಆ ಭೂಮಿ ಮೇಲೆ ಕೈಯೆಳೆಯುತ್ತಾಳಂತೆ. ಆಗ ಅಲ್ಲಿ ೫ ನೀರಿನ ಝರಿಗಳು ಬಂದುವಂತೆ. ಇಲ್ಲಿ ನೀರು ಬರುವ ಸ್ಥಳ ಸ್ಪಷ್ಟವಾಗಿ ತೋರುವುದಿಲ್ಲ. ಆದರೆ ಒಂದು ಅಡಿಯಷ್ಟು ಸ್ಥಳದಲ್ಲಿ ಒಂದಿಷ್ಟು ನೀರು ಸದಾ ಜಿನುಗುತ್ತಲೇ ಇರುತ್ತದೆ. ಅದು ಇಲ್ಲಿಯವರೆಗೂ ಬತ್ತಿದ್ದೇ ಇಲ್ಲ ಎನ್ನುತ್ತಾರೆ. ಅದಕ್ಕಾಗಿ ಈ ಸ್ಥಳಕ್ಕೆ 'ಶಂಖತೀರ್ಥ' ಎಂದು ಹೆಸರಾಯಿತೆಂದು ಹೇಳುತ್ತಾರೆ. 'ಶಂಖತೀರ್ಥ' ಜನರ ಬಾಯಿಯಲ್ಲಿ 'ಸಂಕತೀರ್ಥ' ಆಗಿದೆ.

ತೀರ್ಥಗುಂಡದಿಂದಾಗಿ ಇಲ್ಲಿ ಬರುಹೋಗುವವರಿಗೆ ನೀರಿನ ಅನುಕೂಲ ಆಗಿದೆ. ದಾನಮ್ಮನೇ ಹಚ್ಚಿದ್ದು ಎಂದು ಹೇಳುವ ಗಿಡವೊಂದಿದೆ. ಆ ಗಿಡಕ್ಕೆ ತಾವು ಮಾಡಿಕೊಂಡ ಸಂಕಲ್ಪದ ವಸ್ತುಗಳನ್ನು ಕಟ್ಟಿಹೋದರೆ ಅವರ ಮನಸ್ಸಿನ ಬಯಕೆಗಳು ಕೈಗೂಡುತ್ತವೆ ಎಂದು ಹೇಳುತ್ತಾರೆ. ತೊಟ್ಟಿಲು ಕಟ್ಟಿ ಸಂತಾನ ಭಾಗ್ಯವಾಗಲೆಂದು ಪ್ರಾರ್ಥಿಸಿಕೊಳ್ಳುತ್ತಾರಂತೆ. ಹಾಗೆ ಗಿಡಕ್ಕೆ ಕಟ್ಟಿದ ತೊಟ್ಟಿಲುಗಳು ಕಾಣಿಸುತ್ತಿದ್ದವು.

ಈಗಲೂ ಶ್ರಾವಣ ಮಾಸದ ಮೂರನೆಯ ಸೋಮವಾರದಂದು ದಾನಮ್ಮ ಅವರ ಮದುವೆ ಮಾಡುವ ಆಚರಣೆ ನಡೆಯುತ್ತದೆಯಂತೆ. ಚಟ್ಟಿ ಅಮವಾಸ್ಯೆಗೆ ಜಾತ್ರೆ ಆಗುತ್ತದೆ. ಆದರೆ ತೇರಿಲ್ಲ. ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಜನರು ನಿತ್ಯವೂ ಇಲ್ಲಿಗೆ ದರ್ಶನಕ್ಕೆ ಬರುತ್ತಿರುತ್ತಾರೆ. ಭಜನೆ ಕೀರ್ತನೆಗಳು ನಡೆಯುತ್ತವೆ.

ಮಾಹಿತಿ: ದಾನಪ್ಪ ಶಿವಪ್ಪ ಬಿರಾದಾರ



ಶಂಖತೀರ್ಥದ ಗುಡಿಯ ಗರ್ಭಗೃಹದ ದೃಶ್ಯ

## ಜತ್ತ ತಾಲೂಕು :

# ಗುಡ್ಡಾಪುರ :
# ದಾನಮ್ಮದೇವಿ ಗುಡಿ

ಹುಟ್ಟಿದ್ದು ಉಮ್ರಾಣಿಯಲ್ಲಿ. ಮದುವೆ ಆದದ್ದು ಸಂಕತೀರ್ಥದಲ್ಲಿ. ನೆಲೆಸಿದ್ದು ಗುಡ್ಡಾಪುರದಲ್ಲಿ. ಈ ಮೂರೂ ಜತ್ತ ತಾಲೂಕು ಸಾಂಗ್ಲಿ ಜಿಲ್ಲೆಯಲ್ಲಿರುವ ಸ್ಥಳಗಳು. ಅಲ್ಲಮನಂತೆ ಇಡೀ ದೇಶವನ್ನು ಸುತ್ತಿದವಳು ದಾನಮ್ಮ. ಅಲ್ಲಮ ಮಾಡಿದ ತತ್ವಪ್ರಚಾರ ಕಾರ್ಯವನ್ನು ದಾನಮ್ಮಳೂ ಮಾಡಿದ್ದಾಳೆ. ಆಕೆಯ ವಚನಗಳು ಇಲ್ಲಿಯವರೆಗೆ ದೊರೆತಿಲ್ಲ. ಆದರೆ ಆಕೆ ಬಸವಾದಿ ಶರಣರ ತತ್ತ್ವಗಳನ್ನು ಪ್ರಚಾರ ಮಾಡುತ್ತ ತಿರುಗಾಡಿದ ಸ್ಥಳಗಳು ದೊರೆಯುತ್ತವೆ.

ದಾನಮ್ಮ ಬಸವಾದಿ ಶರಣರ ತತ್ತ್ವಗಳನ್ನು ಪ್ರಚಾರ ಮಾಡುತ್ತ, ಸಂಚಾರ ಮಾಡಿ ಒಂದು ಸಲ ಉಮ್ರಾಣಿಗೆ ಬರುವಷ್ಟೊತ್ತಿಗೆ ತಾಯಿ-ತಂದೆಯರು ಲಿಂಗೈಕ್ಯರಾಗಿದ್ದರು. ತಂದೆ-ತಾಯಿಯ ಸಮಾಧಿಗೆ ನಮಸ್ಕರಿಸಿದ ದಾನಮ್ಮ ಗುಡ್ಡಾಪುರಕ್ಕೆ ಬಂದಳೆಂದೂ ಗುಡ್ಡಾಪುರದಲ್ಲಿ ಕೆಲದಿನ ಇದ್ದು, ಮತ್ತೆ ಶರಣ ತತ್ವ ಪ್ರಸಾರ ಮಾಡಲು ಹೊರಟು ಹೋದಳೆಂದು ಹೇಳುತ್ತಾರೆ. ನಂತರ ದಾನಮ್ಮ ತನ್ನ ಮೂರ್ತಿಯಲ್ಲೇ ತಾನು ಒಂದಾದಳೆಂದು, ಸೋಮನಾಥನು ತನ್ನ ಲಿಂಗದಲ್ಲಿ ತಾನು ಐಕ್ಯನಾದನೆಂದು ಹೇಳುತ್ತಾರೆ.

ಈಗ ಗುಡ್ಡಾಪುರದಲ್ಲಿರುವ ಕರ್ತೃಗದ್ದುಗೆ ಜಾಗ್ರತ ಸ್ಥಳವಾಗಿದೆ. ನೊಂದವರ ನೋವನ್ನು ಹಿಂಗಿಸುವ, ಒಳ್ಳೆಯವರ ಒಳ್ಳೆಯ ಬೇಡಿಕೆಗಳನ್ನು ಪೂರೈಸುವ ಶಕ್ತಿ ಆ ದೇವಿಗೆ ಇದೆ ಎಂಬ ನಂಬಿಕೆ ಜನರಲ್ಲಿದೆ. ದಾನಮ್ಮನಿಗೆ ಹೋಳಿಗೆ ನೈವೇದ್ಯ ಮಾಡಲಾಗುತ್ತದೆ. ಇಲ್ಲಿಗೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡಿನಿಂದ ಭಕ್ತರು ದಿನನಿತ್ಯವೂ ಹರಿದುಬರುತ್ತಾರೆ.

ಪ್ರತಿ ಸೋಮವಾರಕ್ಕೊಮ್ಮೆ ಸಾಯಂಕಾಲ ಎಂಟು ಗಂಟೆಗೆ ದಾನಮ್ಮನವರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಅಮವಾಸ್ಯೆಯಂದೂ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಒಂದು ವಿಶೇಷ ಎಂದರೆ ಯಾವ ಸಮಯಕ್ಕೆ ಅಮವಾಸ್ಯೆ ಪ್ರವೇಶ ಆಗುತ್ತದೆಯೋ ಅದೇ ಸಮಯಕ್ಕೆ ಪಲ್ಲಕ್ಕಿ ಉತ್ಸವ ಮತ್ತು ಪೂಜೆ ನೆರವೇರುವುದು. ಒಂದು ತಿಂಗಳು



ದಾನಮ್ಮನ ಗುಡಿ

ದಾನಮ್ಮ ದೇವಿಯ ಪ್ರವಚನ ನಡೆಯುತ್ತದೆ. ಗದುಗಿನ ಪುಟ್ಟರಾಜ ಗವಾಯಿಗಳು ದಾನಮ್ಮನ ಪುರಾಣ ಬರೆದಿದ್ದಾರೆ. ಛಟ್ಟಿ ಅಮವಾಸ್ಯೆಗೂ ಪಲ್ಲಕ್ಕಿ ಉತ್ಸವ ವಿಶೇಷವಾಗಿರುತ್ತದೆ.

೨೦೧೦ ರಲ್ಲಿ ಐದು ಬಗೆಯಗಿಡದ ಕಟ್ಟಿಗೆಗಳಿಂದ (ಸಾಗವಾನಿ, ಹೊನ್ನಿ, ನಾನಾ, ಶ್ರೀಗಂಧ, ಮತ್ತಿ ಗಿಡಗಳ ಕಟ್ಟಿಗೆ) ವಿಶೇಷವಾದ ಸಣ್ಣ ತೇರೊಂದನ್ನು ಮಾಡಿಸಲಾಗಿದ್ದು, ಅದನ್ನು ಛಟ್ಟಿ ಅಮವಾಸ್ಯೆಗೆ ಎಳೆಯಲಾಗುತ್ತಿದೆ. ಹೀಗಾಗಿ ಇದು ವಿಶೇಷ. ಗುರುವಾರ, ಸೋಮವಾರ, ರವಿವಾರ ದೇವಿಗೆ ವಿಶೇಷ ಪೂಜೆ ನಡೆಯುತ್ತದೆ. ದಾಸೋಹವೂ ವಿಶೇಷವಾಗಿರುತ್ತದೆ. ದಾಸೋಹಕ್ಕಾಗಿ ಸಜ್ಜಕ, ಚಪಾತಿ–ಪಲ್ಲೆ, ಅನ್ನ–ಸಾರು ಮಾಡಿಸುತ್ತಾರೆ.

ಸೂಕ್ಷ್ಮವಾಗಿ ಗಮನಿಸಿದಾಗ ಹೆಣ್ಣುಮಕ್ಕಳು ಹರಕೆ ಹೊರುವುದೆ ಹೆಚ್ಚೆನಿಸುತ್ತದೆ. ಹೆಣ್ಣುಮಕ್ಕಳನ್ನು ಮುಂದು ಮಾಡಿಕೊಂಡೇ ಎಲ್ಲ ಆಚರಣೆಗಳು ನಡೆಯುತ್ತವೆ. ದಾನಮ್ಮನಿಗೆ ಸೀರೆ ಉಡಿಸುವದು, ಬೆಳ್ಳಿ ಬಂಗಾರ ತೊಡಿಸುವುದು, ಉಡಿ ತುಂಬುವದು ಸಾಮಾನ್ಯವಾಗಿ ಕಂಡುಬರುವ ಚಿತ್ರವಾಗಿತ್ತು.

ಮದುವೆ ಆಗದವರು, ಮಕ್ಕಳಾಗದವರು, ಏನೋ ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡವರು ದೇವಿ ಸನ್ನಿಧಿಯಲ್ಲಿ ಕಂಕಣ ಕಟ್ಟಿಸಿಕೊಂಡು ಹೋಗುತ್ತಾರೆ. ಒಳ್ಳೆಯದಾದ ಮೇಲೆ ಅದನ್ನು ದಾನಮ್ಮನಲ್ಲಿಗೆ ತಂದು ಮುಟ್ಟಿಸಿ ಹೋಗುತ್ತಾರೆ. ಬರಲಿಕ್ಕಾಗದವರು ಕಂಕಣವನ್ನು ಪೂಜಿಸಿ ಹೊಳೆಯಲ್ಲಿ ಬಿಡುತ್ತಾರೆ.

ಇವತ್ತಿಗೂ ದಾನಮ್ಮ ತಾಯಿಯ ಶಕ್ತಿಯ ಬಗ್ಗೆ ಭಕ್ತರಲ್ಲಿ ವಿಶ್ವಾಸವಿದೆ. ಆಕೆಯ ನಾಮಸ್ಮರಣೆಯಿಂದ ಬಂದ ಕಂಟಕಗಳೆಲ್ಲ ದೂರ ಆಗುತ್ತವೆ ಎಂಬ ನಂಬಿಕೆ ಇದೆ. ಇದೇ ಐವತ್ತು ವರ್ಷದ ಹಿಂದೆ ಒಂದು ಘಟನೆ ನಡೆದಿರುವುದನ್ನು ಜನ ನೆನಪಿಸಿಕೊಳ್ಳುತ್ತಾರೆ. ಒಬ್ಬ ಬಾಲಕ ಬಾವಿಯಲ್ಲಿ ಬೀಳುತ್ತಾನೆ. ೩ ದಿನ ಬಾವಿಯಲ್ಲೇ ಇದ್ದರೂ ಏನೂ ಆಗಿರುವದಿಲ್ಲ. ಇದಕ್ಕೆ ಕಾರಣ ದಾನಮ್ಮನ ನಾಮಸ್ಮರಣೆ. ಆಮೇಲೆ ಊರವರಿಗೆ ತಿಳಿದು ಅವನನ್ನು ಹೊರಗೆ ತೆಗೆಯಲು, ಆ ಹುಡುಗ ಹೇಳಿದನಂತೆ 'ನಾನು ದಾನಮ್ಮ ದಾನಮ್ಮ ಅನ್ನುತ್ತ ಕುಳಿತಿದ್ದೆ, ಒಬ್ಬ ಮುದುಕಿ ಬಂದು ನನ್ನನ್ನು ಎತ್ತಿಹಿಡಿದಿದ್ದಳು' ಎಂದು. ಈ ವ್ಯಕ್ತಿ ಈಗಲೂ ಬದುಕಿದ್ದು, ಅವನಿಗೀಗ ಎಪ್ಪತ್ತು ವರ್ಷ ಇರಬಹುದು. ಈ ಕಾರಣಕ್ಕಾಗಿ ಆ ಬಾವಿಗೆ ಹೆಚ್ಚು ಮಹತ್ವ ಇದೆ. ಅದನ್ನು ದೇವಸ್ಥಾನ ಬಾವಿಯೆಂದು ಜನ ಕರೆಯುತ್ತಾರೆ. ದೇವಸ್ಥಾನದ ಸಮೀಪ, ಊರ ಹೊರವಲಯದಲ್ಲಿ ಆ ಬಾವಿ ಇದೆ.

ಮಾಹಿತಿ : ಶಂಕರ ಕುರಿ

***



ಗರ್ಭಗೃಹದ ದಾನಮ್ಮನ ಮೂರ್ತಿ



ದಾನಮ್ಮನ ಬಾವಿ

## ಗುಡ್ಡಾಪುರದ ದಾನಮ್ಮನ

ಆರುತಿ ಬೆಳಗುವೆನು ದಾನಮ್ಮ ತಾಯಿಗೆ
ಆರುತಿ ಬೆಳಗುವೆನು ॥ ಪ ॥

ಆರುತಿ ಬೆಳಗುವೆ ಪಾದಕೆ ಎರಗುವೆ
ಬಂದ ಕಂಟಕವೆಲ್ಲ ಬಯಲು ಮಾಡುವ ತಾಯಿಗೆ ॥ ೧ ॥

ಗಂಧ ಕಸ್ತೂರಿ ಧರಿಸಿ ಹಣೆಗೆ ಕುಂಕುಮ ಹಚ್ಚಿ
ಚಾಜ ಗುರುವಿಗೆ ಕೊಟ್ಟು ಪತ್ತಲ ಉಡುವವಳಿಗಾರುತಿಬೆಳಗುವೆನು॥ ೨ ॥

ಮೂರು ಹೊತ್ತಿನ ಪೂಜೆ ಮುಡಿವ ಮಲ್ಲಿಗೆ ದಂಡಿ
ಎಲಿತಾಟು ಒಳಗಿಟ್ಟು ಊದು ಕರ್ಪುರ ಬೆಳಗಿ ॥ ೩ ॥

ಉಡಿಯಕ್ಕಿ ಸಾಮಾನು ಬಗಡಿರುವ ನೆಲ್ಲಕ್ಕಿ
ಎಲಿತಾಟು ಒಳಗಿಟ್ಟು ಊದು ಕರ್ಪುರ ಬೆಳಗಿ ॥ ೪ ॥

ಶರಣೆ ದಾನಮ್ಮ ನಿಮಗೆ ಕರುಣದಿಂದ ಅರ್ಪಿಸುವೆ
ಬಂದ ಭಕ್ತರನೆಲ್ಲ ಚಂದಾಗಿ ಸಲಹುವಾಕೆಗೆ ಆರುತಿ ಬೆಳಗುವೆ ॥ ೫ ॥

– ಶ್ರೀಮತಿ ಸುಮಿತ್ರಾದೇವಿ ಅಂಗಡಿ

***

## ಆಂಧ್ರ ಪ್ರದೇಶ

### ಕರ್ನೂಲು ಜಿಲ್ಲೆ

**ಆತ್ಮಕೂರು ತಾಲೂಕು :**

### ಶ್ರೀಶೈಲ

ಕಲ್ಲೀಗಿ ಮುಕ್ಹಾಕಿ ಎಲ್ಲ ದೇವರ ನೆನೆದೆ
ಅಕ್ಕಮಹಾದೇವಿಯ ಅರಸರ । ಮಲ್ಲಯ್ಯನ
ಮುಕ್ಹಾಕು ಮೊದಲೆ ನೆನೆದೇನ

ನಂಬಿದರೆ ನಂಬೇನ ನಂಬಿಗುಳ್ಳಯ್ಯನ
ಕಂಬಿಕಾವಡಿ ಒಡಿಯಾನ । ಮಲ್ಲಯ್ಯ
ನಂಬೀನೆ ಬಹಳ ದ್ರುಡದಿಂದ



ಶ್ರೀಶೈಲದ ಕೃಷ್ಣಾ ನದಿ ಕಣಿವೆಯಲ್ಲಿರುವ ಅಕ್ಕನ ಗವಿ

ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಲಿಂಗವೂ ಒಂದು. ಈ ಕ್ಷೇತ್ರದ ತುಂಬ ಎಲ್ಲಿ ನೋಡಿದಲ್ಲಿ ಲಿಂಗಗಳು ತುಂಬಿಹೋಗಿವೆ. ಇಂಥ ಪುಣ್ಯಕ್ಷೇತ್ರವಾದ ಶ್ರೀಶೈಲವು ಆಂಧ್ರಪ್ರದೇಶದ ಕರ್ನೂಲ ಜಿಲ್ಲೆಯ ಆತ್ಮಕೂರು ತಾಲೂಕಿನ 'ನಲ್ಲಮಲ' ಎಂಬ ಬೆಟ್ಟಪ್ರದೇಶದಲ್ಲಿದೆ. ಪರ್ವತ ಶ್ರೇಣಿಗಳ ನಡುವೆ ಕಂಗೊಳಿಸುವ ಈ ಕ್ಷೇತ್ರದಲ್ಲಿ ಕೃಷ್ಣಾನದಿ ಹರಿದಿದೆ. ಇದನ್ನು ಪಾತಾಳಗಂಗೆ ಎಂದು ಕರೆಯುತ್ತಾರೆ. ಈ ಬೆಟ್ಟದ ತುಂಬಾ ದಿವ್ಯೌಷಧಗಳು ತುಂಬಿ ತುಳುಕುತ್ತಿವೆ. ಅಲ್ಲಿಯ ಜನ ಎಲ್ಲರೋಗಗಳಿಗೂ ಒಂದೊಂದು ಗಿಡಮೂಲಿಕೆಯನ್ನು ಕೊಡುತ್ತಾರೆ. ಸಕಲ ಸಂಪತ್ತಿಗೆ ಶ್ರೀಶೈಲ ತಾಯ್ನೆಲ ಎಂದು ಕರೆಯುತ್ತಾರೆ. ಇಲ್ಲಿ ೪೪ ನದಿಗಳು, ೬೦ ಕೋಟಿ ತೀರ್ಥಜಲಗಳು ಪಾತಾಳಗಂಗೆಗೆ (ಕೃಷ್ಣೆಗೆ) ಬಂದು ಸೇರಿವೆ ಎಂಬ ನಂಬಿಕೆ ಇದೆ. ಹಲವಾರು ಜನ ಋಷಿ ಮುನಿಗಳಿಂದ, ತಪೋವನಗಳಿಂದ ಕೂಡಿದ ಈ ಕ್ಷೇತ್ರ ೧೨ನೇ ಶತಮಾನದಲ್ಲಿ ಒಂದು ಶೈವ ವಿದ್ಯಾಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆದಿತ್ತು. ಈಗಲೂ ಉಳಿದೆಲ್ಲ ಕ್ಷೇತ್ರಗಳಿಗಿಂತ ಶ್ರೀಶೈಲಕ್ಕೆ ತನ್ನದೇ ಆದ ವಿಶೇಷತೆ ಇದೆ. ಒಂದು ಸಾರೆ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನ ಮಾಡಿದರೂ ಸಾಕು ಅನಂತ ಪುಣ್ಯ ಸಿಗುತ್ತದೆ ಎಂಬ ನಂಬಿಕೆ ಜನರಲ್ಲಿ ಉಳಿದುಕೊಂಡು ಬಂದಿದೆ. ಮಲ್ಲಿಕಾರ್ಜುನ ಲಿಂಗಕ್ಕೆ ಹಣೆಹಚ್ಚಿ ನಮಸ್ಕಾರ ಮಾಡಿದರೆ ಸಾಕು ಜನ್ಮಪಾವನ ಎನ್ನುತ್ತಾರೆ.



ಶ್ರೀಶೈಲದ ವಿಸ್ತಾರ ಬಹಳ ದೊಡ್ಡದು. ಇದಕ್ಕೆ ನಾಲ್ಕು ಮುಖ್ಯ ದ್ವಾರಗಳಿವೆಯೆಂದೂ ಅವು ಸುಮಾರು ೩೮೪ ಕಿ.ಮೀ. ವ್ಯಾಪ್ತಿಯಲ್ಲಿವೆ ಎನ್ನುತ್ತಾರೆ. ಅಂದರೆ ೩೮೪ ಕಿ.ಮೀ. ಉದ್ದ, ಅಷ್ಟೆ ಕಿ.ಮಿ. ಅಗಲವಾದ ಕ್ಷೇತ್ರವಿದು. ಪ್ರಕಾಶಂ ಜಿಲ್ಲೆಯಲ್ಲಿ 'ತ್ರಿಪುರಾಂತಕಂ' ಎಂಬುದು ಪೂರ್ವದ್ವಾರ, ಕಡಪಾ ಜಿಲ್ಲೆಯಲ್ಲಿ 'ಸಿದ್ಧವಠಂ' ಎಂಬುದು ದಕ್ಷಿಣದ್ವಾರ, ಮಹಬೂಬ ನಗರ ಜಿಲ್ಲೆಯಲ್ಲಿ

ಶ್ರೀಶೈಲ ಮಲ್ಲಿಕಾರ್ಜುನ
ದೇವಾಲಯದ ಆವರಣದಲ್ಲಿ
ನಿಲ್ಲಿಸಲಾದ ಅಕ್ಕನ ಕಂಚಿನ ಪ್ರತಿಮೆ

‘ಆಲಂಪೂರ’ ಎಂಬುದು ಪಶ್ಚಿಮ ದ್ವಾರ, ಉಮಾಮೇಶ್ವರ ಉತ್ತರದ್ವಾರವಾಗಿದೆ. ಇವುಗಳಿಗೆ ಮತ್ತೆ ನಾಲ್ಕು ಉಪದ್ವಾರಗಳಿವೆ ಎಂದೂ ಹೇಳಲಾಗುತ್ತದೆ. ಆಗ್ನೇಯ ದ್ವಾರವನ್ನು ಪುಷ್ಪಗಿರಿ ಕ್ಷೇತ್ರವೆಂದು, ನೈರುತ್ಯ ದ್ವಾರವನ್ನು ಸೋಮಶಿಲೆ ಕ್ಷೇತ್ರವೆಂದು, ವಾಯುವ್ಯದ್ವಾರವನ್ನು ಸಂಗಮೇಶ್ವರ ಕ್ಷೇತ್ರವೆಂದು, ಈಶ್ಯಾನ್ಯದ್ವಾರವನ್ನು ಏಲೇಶ್ವರ ಕ್ಷೇತ್ರವೆಂದು ಕರೆಯಲಾಗುತ್ತದೆ. ಹೀಗಾಗಿ ಮಲ್ಲಿಕಾರ್ಜುನ ಸರ್ವಾಂತರ್ಯಾಮಿ. ಅವನನ್ನು ಪೂಜಿಸಲು ದರ್ಶಿಸಲು ಇದೇ ದಿಕ್ಕು ವಾಸ್ತು ಪ್ರಕಾರ ಹೀಗೆಯೇ ಎಂಬ ಕಟ್ಟಳೆ ಇಲ್ಲವೆನ್ನಲಾಗುತ್ತದೆ.

ಶ್ರೀಶೈಲ ಚೆನ್ನಮಲ್ಲಿಕಾರ್ಜುನನ ಗುಡಿಯನ್ನು ನೋಡುವುದರಿಂದ ಒಂದು ಭವ್ಯತೆಯ ಅನುಭವವಾಗುತ್ತದೆ. ಈ ಗುಡಿಯ ವಿಶಾಲವಾದ ಆವರಣದಲ್ಲಿ ಶ್ರೀಶೈಲ ಮಹಾಸಂಸ್ಥಾನಮಠ ಇದೆ. ಭ್ರಮರಾಂಬಾ ದೇವಾಲಯವಿದೆ. ಅಕ್ಕಮಹಾದೇವಿ, ಹೇಮರಡ್ಡಿ ಮಲ್ಲಮ್ಮನ ವಿಗ್ರಹಗಳನ್ನೊಳಗೊಂಡ ಗುಡಿ ಇದೆ. ಅದಕ್ಕೆ ಮಂಟಪವೆಂತಲೂ ಕರೆಯುತ್ತಾರೆ. ಮಲ್ಲಿಕಾರ್ಜುನನ ಗರ್ಭಗುಡಿಯ ಒಳಪ್ರಾಕಾರದಲ್ಲಿಯೂ ಅಕ್ಕಮಹಾದೇವಿ, ಹೇಮರಡ್ಡಿ ಮಲ್ಲಮ್ಮನಂಥ ಭಕ್ತೆಯರ ಶಿಲಾಮೂರ್ತಿಗಳಿವೆ. ಅಲ್ಲದೆ ಅಕ್ಕನ ಐದುವರೆ ಅಡಿ ಎತ್ತರದ ಕಂಚಿನ ಪ್ರತಿಮೆಯೊಂದು ದೇವಾಲಯದ ಕಲ್ಯಾಣಮಂಟಪದ ಎದುರಿನ ಸುಂದರವಾದ ತೋಟದಲ್ಲಿ ಸ್ಥಾಪಿಸಲಾಗಿದೆ. ಪ್ರತಿಮೆ ಸುತ್ತಲೂ ಮಹಾದೇವಿಯಕ್ಕನ




ಅಕ್ಕನ ಗವಿಗೆ ಕೃಷ್ಣಾ ನದಿಯ ನೀರಿನಲ್ಲಿ ೨೨ ಕಿ.ಮೀ.
ಬೋಟಿನಲ್ಲಿ ಪ್ರಯಾಣ ಮಾಡಬೇಕು




**ಅಕ್ಕಮಹಾದೇವಿ ಶಿಲಾಮೂರ್ತಿ ಮಲ್ಲಿಕಾರ್ಜುನ ದೇವಾಲಯದ ಆವರಣ**


ಸಂಕ್ಷಿಪ್ತ ಜೀವನ ಚರಿತ್ರೆ, ಅಕ್ಕನ ವಚನಗಳನ್ನು ಮೂರು ಭಾಷೆಗಳಲ್ಲಿ ಬರೆಯಿಸಿ, ಕೆತ್ತನೆಯಲ್ಲಿ ಜೋಡಿಸಲಾಗಿದೆ. ಗುಡಿಯ ಹೊರ ಆವರಣದಲ್ಲಿ ವೃದ್ಧಮಲ್ಲಿಕಾರ್ಜುನನ ದೇವಸ್ಥಾನವು ಇದೆ.

ಮಲ್ಲಿಕಾರ್ಜುನ ಇಂದಿನ ಶ್ರೀಮಂತ ದೇವರಾದ ವೆಂಕಟರಮಣ ನಿಗೆ ಅಂದು ಏಳುಕೋಟಿರೂ. ಸಾಲ ಕೊಟ್ಟಿದ್ದನಂತೆ. ಅದನ್ನು ಇನ್ನೂ ಅವನಿಂದ ತೀರಿಸಲು ಸಾಧ್ಯವಾಗಿಲ್ಲ ವಂತೆ. ಅದಕ್ಕೊಂದು ಭಿತೀಯ  ಕತೆಯನ್ನೇ ವರ್ತಮಾನದಲ್ಲಿ ಹೇಳುತ್ತಿದ್ದಾರೆ. ಯಾವ ದಿನ ವೆಂಕಟರಮಣನ ಸಾಲ ತೀರುತ್ತೋ ಅಂದಿಗೆ ಕಲಿಯುಗದ ಅಂತ್ಯವಾಗುತ್ತದೆ ಎಂದು.


ಶ್ರೀಶೈಲ ಮಲ್ಲಿಕಾರ್ಜುನನ ಗುಡಿಯ ಸುತ್ತಲೂ ರುದ್ರಾಕ್ಷಿಮಠ, ವಿಭೂತಿಮಠ, ಸಾರಂಗಮಠಗಳಿವೆ. ಹೇಮರಡ್ಡಿ ಮಲ್ಲಮ್ಮ ಮಲ್ಲಿಕಾರ್ಜುನನ ಪರಮಭಕ್ತೆ. ಮಲ್ಲಿಕಾರ್ಜುನನ ಮೇಲೆ ಭಾರ ಹಾಕಿ ತನ್ನ ಸಂಸಾರಿಕ ಜೀವನದ ತಾಪತ್ರಯಗಳನ್ನು ದೂರಮಾಡಿಕೊಂಡಾಕೆ. ಮಲ್ಲಿಕಾರ್ಜುನನನ್ನು  ನೆನೆಯುತ್ತ ನೆನೆಯುತ್ತ ಆಯಾಸವನ್ನೇ ಕಳೆದುಕೊಂಡಾಕೆ. ಆಕೆ ಸುರಿಸಿದ ಕಣ್ಣೀರಿಗೆ ಕೊನೆಯೇ ಇರಲಿಲ್ಲವೆಂದುಕೊಂಡ ಭಕ್ತರು 'ಹೇಮರಡ್ಡಿ ಮಲ್ಲಮ್ಮನ ಕಣ್ಣೀರು ಸ್ಥಳ' ಎಂದು ಕರೆಯುವಲ್ಲಿ  ಇತ್ತೀಚೆಗೆ

ನಿರ್ಮಾಣವಾದ ಸ್ಮಾರಕದಲ್ಲಿ ಆಕೆಯ ಜೀವನದ ಕಥೆಯನ್ನು ದೃಶ್ಯಾವಳಿ ಮೂಲಕ ಪರಿಚಯಿಸುವ ಶಿಲ್ಪಗಳಿವೆ. ಆಕೆ ಬೀಸಿದ್ದೆನ್ನಲಾದ ಬೀಸುಕಲ್ಲು, ಆಕೆ ಕುಟ್ಟಲು, ಥಳಿಸಲು ಬಳಸಿದ ಒರಲು ಒನಕೆಗಳಿವೆ.  ಒಳ್ಳಿನಲ್ಲಿ ಒಣಕೆ ನಿಲ್ಲಿಸಿದರೆ, ಮನಸ್ಸಿನಲ್ಲಿ ಅಂದುಕೊಂಡ ಕೆಲಸಗಳು ಕೈಗೂಡುತ್ತವೆ ಎಂಬ ನಂಬಿಕೆ ಜನಮನದಲ್ಲಿದೆ. ಭವ್ಯವಾದ ಮಲ್ಲಮ್ಮನ ಮಂದಿರ ನಿರ್ಮಾಣವಾಗಿದೆ. ಶ್ರೀಕೃಷ್ಣದೇವರಾಯ, ಛತ್ರಪತಿ ಶಿವಾಜಿ ಅವರೂ ಬಂದು ಭ್ರಮರಾಂಬ ಮಲ್ಲಿಕಾರ್ಜುನರನ್ನು ಪೂಜಿಸಿದ್ದರೆಂದು ಹೇಳುವ ಕುರುಹುಗಳಿವೆ.

ಮುಗ್ಧ ಭಕ್ತರ ಭಕ್ತಿಗೆ ಒಲಿದವ ಮಲ್ಲಿಕಾರ್ಜುನ. ತನ್ನ ಸರಳ ಪೂಜಾವಿಧಿಯಿಂದಾಗಿ ಎಲ್ಲರನ್ನು ಸೆಳೆದುಕೊಂಡವನು. ಈಗ ಆ ವಿಧಾನ ಮಾಯವಾಗಿ ಎಲ್ಲವೂ ವ್ಯವಹಾರಿಕವಾಗಿಬಿಟ್ಟಿದೆ. ಹನ್ನೆರಡನೆಯ ಶತಮಾನದ ಶರಣರಲ್ಲಿ ಜೇಡರದಾಸಿಮಯ್ಯ ಇಲ್ಲಿ ಅಕ್ಷರಭ್ಯಾಸ ಮಾಡಿದ್ದಾನೆ. ಸಿದ್ಧರಾಮ ಬಾಲ್ಯದಲ್ಲಿಯೇ ಮಲ್ಲಿಕಾರ್ಜುನನ ಹುಚ್ಚು ಹಿಡಿಸಿಕೊಂಡು ಕಂಬಿಯವರ ಬೆನ್ನು ಹತ್ತಿ ಬಂದು ಮಲ್ಲಯ್ಯ ತನಗೆ ದರ್ಶನ ಕೊಡಲಿಲ್ಲವೆಂದು ತನ್ನನ್ನೇ ಅರ್ಪಿಸಿಕೊಳ್ಳಲು ಸಿದ್ಧನಾದಾಗ ಮಲ್ಲಯ್ಯ ಪ್ರತ್ಯಕ್ಷನಾಗಿ ಅವನನ್ನು ಎತ್ತಿ ಹಿಡಿದು, ಅವನಿಗೆ ಲಿಂಗವನ್ನು ಕೊಟ್ಟು ಸೊನ್ನಲಾಪುರದಲ್ಲಿ ಪ್ರತಿಷ್ಠಾಪಿಸಲು ಹೇಳಿ, ಹರಸಿ ಕಳಿಸುತ್ತಾನೆ. ಸಿದ್ಧರಾಮ ಹಾರಲು ಹೋದ




ಅಕ್ಕನ ಗವಿಯ ಹೊರನೋಟ




ಅಕ್ಕನ ಗವಿಯ ಪ್ರವೇಶ

ಕಮರಿಯನ್ನು, ಮಲ್ಲಿಕಾರ್ಜುನ ಅವನನ್ನು ಹಿಡಿದ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ತೋರಿಸುವ ಸ್ಥಳ, ಚಿತ್ರಗಳಿವೆ. ಸಕಲೇಶ ಮಾದರಸನ ತಂದೆ ಮಲ್ಲಿಕಾರ್ಜುನ ಮಗನಿಗೆ ರಾಜ್ಯಭಾರವಹಿಸಿ ಶ್ರೀಶೈಲಕ್ಕೆ ಬಂದನೆಂದು, ನಂತರ ಸಕಲೇಶ ಮಾದರಸನೂ ಶ್ರೀಶೈಲಕ್ಕೆ ಬಂದು ಹೋದನೆಂಬ ಸಂಗತಿ ಇದೆ. ಗೊಲ್ಲಾಳ, ಇಳಿಹಾಳ ಬೊಮ್ಮಯ್ಯ, ದಾನಮ್ಮ, ಮುಗ್ಧಸಂಗಯ್ಯ, ಸಿದ್ಧರಾಮನ ಸಹೋದರ ಬೊಮ್ಮಣ್ಣ ಇವರೆಲ್ಲ ಶ್ರೀಶೈಲಕ್ಕೆ ಪ್ರಯಾಣ ಮಾಡಿದವರು. ಬಸವಣ್ಣನವರ ಮನೆಯಿಂದಲೇ ಎಲ್ಲ ಕಂಬಿಗಳೂ ಶ್ರೀಶೈಲಕ್ಕೆ ಬರುತ್ತಿದ್ದವೆಂದು ಬಸವಣ್ಣನವರ ಮನೆಯ ಕಂಬಿಗೆ ಅಗ್ರಪೂಜೆ ಶ್ರೀಶೈಲದಲ್ಲಿ ಸಲ್ಲುತ್ತದೆಂದೂ, ಬಸವಣ್ಣ ಬಾಲಕನಾಗಿದ್ದಾಗ ಅವರ ತಾಯಿತಂದೆಯರು, ಸಹೋದರಿ ಅಕ್ಕನಾಗಮ್ಮ ಜೊತೆ ಶ್ರೀಶೈಲಕ್ಕೆ ಹೋಗಿಬಂದಿದ್ದಾರೆ ಎಂದು ಜನ ಹೇಳುತ್ತಾರೆ. ಅಲ್ಲಮಪ್ರಭು ಇಲ್ಲಿಯೇ ಐಕ್ಯರಾದರೆಂದೂ ಅವರ ಜೊತೆ ಮುಕ್ತಾಯಕ್ಕ, ಸತ್ಯಕ್ಕ ಬಂದಿದ್ದರೆಂದೂ ಹೇಳಲಾಗುತ್ತದೆ.

ಅಕ್ಕಮಹಾದೇವಿಯಂತೂ ಹುಟ್ಟಿನೊಂದಿಗೆ ಮಲ್ಲಿಕಾರ್ಜುನನೊಂದಿಗೆ ಮಧುರಭಕ್ತಿಭಾವದ ಸಂಬಂಧವನ್ನು ಇಟ್ಟುಕೊಂಡಾಕೆ. ಜಾಗ್ರತ್ ಸ್ವಪ್ನ ಸುಷುಪ್ತಾವಸ್ಥೆಗಳಲ್ಲೂ ಮಲ್ಲಿಕಾರ್ಜುನನನ್ನೆ ತನು ಮನ ಭಾವದ ತುಂಬ ತುಂಬಿಕೊಂಡಾಕೆ.




ಅಕ್ಕನ ಗವಿಯ ಮುಂದೆ ನಿಂತು ನೋಡಿದಾಗ



ಅಕ್ಕಮಹಾದೇವಿ ಪೂಜಿಸಿದ ಅಕ್ಕನ ಗವಿಯಲ್ಲಿರುವ ಲಿಂಗ

ತನ್ನ ಲೌಕಿಕ ವೈವಾಹಿಕ ಸಂಬಂಧವನ್ನು ನಿರಾಕರಿಸಿ ಅಲೌಕಿಕ ಗಂಡ ಚನ್ನಮಲ್ಲಿಕಾರ್ಜುನ ಎಂದು ಹೇಳಿ, ವೀರವಿರಕ್ತಿಯನ್ನು ಮೆರೆದಾಕೆ. ಉಡುತಡಿಯಲ್ಲಿಯ ಮಲ್ಲಿಕಾರ್ಜುನನನ್ನು ಪೂಜಿಸುತ್ತ ಶ್ರೀಶೈಲ ಮಲ್ಲಿಕಾರ್ಜುನಲ್ಲಿಗೆ ಬಂದು ಐಕ್ಯ ಆದಾಕೆ.

ಮೊದಲು ಪಾತಾಳಗಂಗೆಗೆ ಇಳಿಯುವುದೇ ಕಷ್ಟ ಇತ್ತು. ಸುಮಾರು ೬೦೦ ಮೆಟ್ಟಲುಗಳನ್ನು ಇಳಿದುಕೊಂಡು ಬರಬೇಕಿತ್ತು. ಆದರೀಗ ಆ ಕಷ್ಟವಿಲ್ಲ. ರೋಪ ವೇ (Roap Way) ವ್ಯವಸ್ಥೆ ಮಾಡಲಾಗಿದೆ. ಶ್ರೀಶೈಲದ ಪಾತಾಳಗಂಗೆಯ (ಕೃಷ್ಣಾನದಿ) ಲ್ಲಿ ಡೋಣಿ (ನಾವು)ಯಲ್ಲಿ ಕುಳಿತು ೨೨ ಕಿ.ಮೀ. ದೂರ ಕ್ರಮಿಸಿದಾಗ ಅಲ್ಲೊಂದು ದೊಡ್ಡ ಗವಿ ಸಿಗುತ್ತದೆ. ನೀರಿನ ಕೊರೆತದಿಂದ ಪ್ರಕೃತಿದತ್ತವಾಗಿಯೇ ನಿರ್ಮಾಣವಾದ ಗವಿ ಅದು. ಅಂದರೆ ಇದು ಬೆಟ್ಟದ ಕಲ್ಲಿನಿಂದ ನೈಸರ್ಗಿಕವಾಗಿಯೆ ಸೃಷ್ಟಿಗೊಂಡ ಬೃಹತ್ ಮಂಟಪ. ಈ ಮಂಟಪ ಪ್ರವೇಶಿಸುತ್ತಲೇ ಒಂದು ಪುರಾತನ ಲಿಂಗ, ನಂದಿ ಇದೆ. ಅದರ ಹಿಮ್ಮಗ್ಗಲು ಗವಿ ಇದೆ. ಈ ಗವಿಗೆ ಹೋಗುವ ದಾರಿ ಕೂಡಾ ಕಡಿದಾದುದು. ಬಹಳ ಎಚ್ಚರದಿಂದ ತೂಕತಪ್ಪದಂತೆ ಹೋಗಬೇಕು. ಗವಿಗೆ ಆಧಾರವಾಗಿ ನಿಂತ ಕಂಬಗಳು, ಅಲ್ಲಿ ಚಿತ್ತಾರದ ಪುಟ್ಟ ಪುಟ್ಟ ಗವಿಗಳು ನೋಡುಗರ ಕಣ್ಮನ ಸೆಳೆಯುತ್ತವೆ. ಗವಿಯ ಒಳಗೆ ಹೋಗಲು ದೀಪದ ಸಹಾಯಬೇಕು. ಏಕೆಂದರೆ ಒಳಗೆ ಕತ್ತಲೆ ಆವರಿಸಿರುತ್ತದೆ. ಪ್ರಕೃತಿದತ್ತವಾಗಿಯೆ ಇದ್ದ ಲಿಂಗವನ್ನು ಪೂಜಿಸಿ, ಆ ಗವಿಯಲ್ಲಿ ಅಕ್ಕಮಹಾದೇವಿ ಅನುಷ್ಠಾನಗೈದಳೆಂದು ಅಲ್ಲಿಯ ಹೇಳುತ್ತಾರೆ. ಈ ಗವಿಯೊಳಗೆ ಹೋಗುತ್ತ ಹೋಗುತ್ತ ಹಾದಿ ವ್ಯಾಪ್ತಿಯಲ್ಲಿ ಚಿಕ್ಕದಾಗುತ್ತ ಹೋಗುತ್ತದೆ.

ಅಂಬೆಗಾಲಿಟ್ಟು ಒಬ್ಬರೆ ಹೋಗಬಹುದಾದಷ್ಟು ಸ್ಥಳ ಇದೆ. ದಪ್ಪ ದೇಹದವರು ಹೋಗಲು ಸಾಧ್ಯವಾಗುವದಿಲ್ಲ. ಲಿಂಗದ ಮುಂದೆ ನಿಂತುಕೊಳ್ಳಲು ಆಗುವಷ್ಟು ಎತ್ತರ ಮಾತ್ರ ಆ ಗವಿಯಲ್ಲಿದೆ.

ಉಸಿರುಗಟ್ಟಿ ಹೋಗುವಷ್ಟು ಇಕ್ಕಟ್ಟಾದ ಈ ಗವಿಯಲ್ಲಿ ಅಕ್ಕ ಹೇಗೆ ಅನುಷ್ಠಾನ ಮಾಡಿದಳೆಂಬುದು ಬೆರಗನ್ನು ಹುಟ್ಟಿಸುತ್ತದೆ. ಅಕ್ಕಮಹಾದೇವಿ ಮುಟ್ಟಿಪೂಜಿಸಿದ ಆ ಲಿಂಗ ದರ್ಶನ ಮಾಡುವುದೇ ಭಾಗ್ಯ ಎಂಬ ಭಾವ ಜನಮನದಲ್ಲಿದೆ. ಲೋಕಾಂತದಲ್ಲಿರುವವಳಿಗೆ ಏಕಾಂತದ ಹಂಗೇಕೆ? ಎಂದು ಅಕ್ಕ ಎಲ್ಲರೊಡನೆಯೇ ಹೆಚ್ಚು ಸಮಯ ಕಳೆದಾಕೆ. ಆದರೂ ಚೆನ್ನಮಲ್ಲಿಕಾರ್ಜುನ ಸದಾ ಆಕೆಗೆ ಆತ್ಮಸಂಗಾತಿ. ಹೀಗಾಗಿ ಆ ಮಾತನ್ನು ಹೇಳಿರಲೂಬಹುದು. ಆದರೆ ಇಲ್ಲಿ ಆಕೆ ಗೈದ ಧ್ಯಾನಸ್ಥ ದಿನಗಳನ್ನು ನೆನೆದುಕೊಂಡರೆ ರೋಮಾಂಚನ ಆಗದೇ ಇರದು. ಎಂಥದ್ದೋ ಅನಿರ್ವಚನೀಯ ಗೆಲವು ಮನವನ್ನು ತುಂಬಿಕೊಂಡು, ಮಾತು ಮೌನವಾಗುತ್ತದೆ. ಇದೇ ಬೆಟ್ಟದಲ್ಲಿ ಇನ್ನೂ ಐದು ಭವ್ಯ ಗವಿಗಳಿವೆ ಎಂದು ಹೇಳುತ್ತಾರೆ.

ಕದಳಿಯ ಬನ ನೋಡುವುದಂತೂ ಪುನರ್ಜನ್ಮ ಬಂದಂತೆಯೆ ಸರಿ. ಅಕ್ಕಮಹಾದೇವಿ ಪಾದಯಾತ್ರೆಯಿಂದಲೇ ಈ ಸ್ಥಳಕ್ಕೆ ಬಂದು ಮುಟ್ಟಿದ್ದು ನಿಜವಾಗಿಯೂ ಆಶ್ಚರ್ಯದ ಸಂಗತಿ. ಆಕೆಗೆ ಜೊತೆಗಾರ ಮಲ್ಲಿಕಾರ್ಜುನನನ್ನು ಬಿಟ್ಟು ಯಾರೂ ಇಲ್ಲ. ಅಕ್ಕ ಹೇಗೆ ಬಂದಿರಬೇಕು? ಎಂಬ ಪ್ರಶ್ನೆಯೆ ಮತ್ತೆ ಮತ್ತೆ ಎದುರಾಗಿ ನಿಲ್ಲುತ್ತದೆ.



ಮಲ್ಲಿಕಾರ್ಜುನ ದೇವಾಲಯ



ಸಿದ್ಧರಾಮನ ಕೊಳ್ಳ-ಕಮರಿ ಕೊಳ್ಳ

ನಿಸರ್ಗ ನಿರ್ಮಿತ ಅಕ್ಕಮಹಾದೇವಿ ಗುಹೆಯಿಂದ ಮತ್ತೆ ಕೃಷ್ಣೆಯ ಇನ್ನೊಂದು ದಡಕ್ಕೆ ಹೋಗಬೇಕು. ಸುಮಾರು ೮ ಕಿ.ಮಿ. ದೂರ ಕ್ರಮಿಸಬೇಕು. ಅಕ್ಕನ ಕದಳಿಯನ್ನು ನೋಡಲೇಬೇಕೆಂಬ ದೃಢಸಂಕಲ್ಪವಿದ್ದವರಿಗೆ ಯಾವುದೇ ತೆರನಾದ ಭಯ ಇರಲಾರದು. ಅಲ್ಲಿಯೇ ಗುಡ್ಡ ಬೆಟ್ಟಗಳಲ್ಲಿ ವಾಸವಾದ ಚೆಂಚರ ಸಹಾಯವನ್ನು ಇಲ್ಲವೇ ಆಂಧ್ರಪ್ರದೇಶದ 'ನಲ್ಲಮಲ' ಅರಣ್ಯ ಇಲಾಖೆಯವರ ಅನುಮತಿ ಪಡೆದು ಅವರ ಗನ್‌ಮನ್‌ನೊಂದಿಗೆ ಹೋಗಬಹುದು. ಅದೂ ಸಾಧ್ಯವಾಗದಿದ್ದರೆ ಹೇಮರಡ್ಡಿ ಮಲ್ಲಮ್ಮನ ದೇವಸ್ಥಾನದ ಪೂಜೆ ಮಾಡುವ ಪೂಜಾರಿಗಳೊಂದಿಗೆ ಹೋಗಬಹುದು. ಹೋಗುವವರು ಕೈಯಲ್ಲಿ ಕೋಲು ಹಿಡಿದೇ ಹೋಗುವದು ಅಲ್ಲಿಯ ಸಂಪ್ರದಾಯ. ವಯಸ್ಸಾದ ಮುದುಕರು, ಸಕ್ಕರೆ ಕಾಯಿಲೆ, ಹೃದಯ ತೊಂದರೆ ಇರುವವರು, ವಿಪರೀತ ದೇಹತೂಕ ಇದ್ದವರಿಗೆ ಸ್ವಲ್ಪ ಕಷ್ಟವೇ ಸರಿ. ಏಕೆಂದರೆ ಅಲ್ಲಿ ವಾಹನಗಳು ಹೋಗುವುವಂತಿಲ್ಲ. ನಡೆದುಕೊಂಡೆ ಬೆಟ್ಟ ಏರಿ ಹೋಗಬೇಕು. ಬೆಟ್ಟವನ್ನು ಹತ್ತಬೇಕು ಇಳಿಯಬೇಕು. ಪ್ರಾರಂಭದಲ್ಲಿ ೫ ಕಿ.ಮಿ ದೂರದಷ್ಟು ಬೆಟ್ಟ ಏರುತ್ತಲೇ ಸಾಗಬೇಕು. ಆಮೇಲೆ ಅರ್ಧ ಕಿ.ಮಿ. ಇನ್ನೂ ಕಷ್ಟಪಟ್ಟು ಹತ್ತಬೇಕಾಗುತ್ತದೆ. ಹೀಗೆ ಸಾಗಿಯಾದ ನಂತರ ಸುಮಾರು ಎರಡ್ಮೂರು ಕಿ.ಮೀ. ನಷ್ಟು ಸಮತಟ್ಟಾದ ಭೂಮಿ ಇದೆ. ಇಲ್ಲೇನೂ ತೊಂದರೆ ಆಗುವುದಿಲ್ಲ.

ಅಷ್ಟು ದಾರಿ ಸಾಗಿದ ನಂತರ ಮತ್ತೆ ಬೆಟ್ಟವನ್ನು ಇಳಿದುಕೊಂಡು ಹೋಗಬೇಕು. ಸ್ವಲ್ಪದೂರ ಹೋದಾಗ ಸಿಗುವುದೆ ಅತ್ಯಂತ ರಹಸ್ಯಮಯವಾದ ಕದಳಿಯವನ. ಇದು ಕೂಡಾ ನಿಸರ್ಗದ ಕೊಡುಗೆಯೇ ಸರಿ. ಇಲ್ಲಿ ನಮಗಾಗಿ ಇನ್ನೊಂದು

ನೈಸರ್ಗಿಕ ವಿಸ್ಮಯ ಕಾದಿರುತ್ತದೆ. ಅಲ್ಲಿ ಒಂದು ದೊಡ್ಡ ಬಂಡೆಯ ಬಿಲವು ಕಾಣಿಸುತ್ತದೆ. ಇದು ಕೂಡಾ ನೈಸರ್ಗಿಕವಾಗಿಯೆ ರೂಪುಗೊಂಡ ದೊಡ್ಡಮಂಟಪ. ಇದು ಎರಡು ದೊಡ್ಡ ದೊಡ್ಡ ಬೆಟ್ಟಗಳ ನಡುವೆ ಇರುವ ಪ್ರದೇಶ. ಈ ಪ್ರದೇಶ ಏಕಕಾಲಕ್ಕೆ ಸುಮಾರು ಸಾವಿರಾರು ಜನ ಧ್ಯಾನಕ್ಕೆ ಕುಳಿತುಕೊಳ್ಳಬಹುದಾದಷ್ಟು ವಿಶಾಲವಾಗಿದೆ. ಬೆಟ್ಟಗಳ ನಡುವೆ ಆಳವಾದ ಕೊಳದಲ್ಲಿ ತ್ರಿಕೂಟ ಪರ್ವತದವರೆಗೆ ಪ್ರಕೃತಿ ರಮಣೀಯವಾದ, ಹೆಸರೇ ಗೊತ್ತಿರದ ಎಷ್ಟೋ ಗಿಡ-ಗಂಟೆ ತರುಲತೆಗಳಿಂದ ಈ ಪ್ರದೇಶ ಕಂಗೊಳಿಸುತ್ತದೆ. ಅಕ್ಕ ಅಲ್ಲಿಗೆ ಬಂದ ಕಾಲದಲ್ಲಿ ಇದೊಂದು ದೊಡ್ಡ ಕದಳಿವನ ಆಗಿತ್ತಂತೆ. ಗುಡ್ಡದ ಎರಡೂ ಬದಿಗೂ ನೀರು ಹರಿಯುತ್ತದೆ. ಈ ಕದಳಿವನದ ಪ್ರದೇಶದಲ್ಲಿ ಒಂದು ಲಿಂಗವಿದೆ. ಅಕ್ಕಮಹಾದೇವಿಯ ಎರಡು ಮೂರ್ತಿಗಳನ್ನು ಅಲ್ಲಿ ಪ್ರತಿಷ್ಠಾಪಿಸಲ್ಪಟ್ಟಿವೆ. ಧ್ಯಾನ ಮೌನ ತಪೋನುಷ್ಠಾನಕ್ಕೆ ಹೇಳಿಮಾಡಿಸಿದ ಸ್ಥಳ. ಇಂಥ ಕಡಿದಾದ ಕದಳಿವನಕ್ಕೆ ಬಂದು, ಅಲ್ಲಿಯ ಮಲ್ಲಿಕಾರ್ಜುನ ಲಿಂಗದಲ್ಲಿ ಅಕ್ಕ ಐಕ್ಯ ಆದಳು ಎಂದು ಹೇಳಲಾಗುತ್ತದೆ.

ಕದಳಿಗೆ ಹೋಗಿಬರಲು ಅನುಕೂಲವಾಗುವಂತೆ ರಸ್ತೆ ನಿರ್ಮಾಣವಾದರೆ ಅನುಕೂಲವಾಗುತ್ತದೆ. ಇದೊಂದು ಅಪರೂಪದ ಸ್ಮಾರಕವೆಂದೆ ಹೇಳಬೇಕು. ಇಲ್ಲಿ ಮಲ್ಲಿಕಾರ್ಜುನನ ಸಂಪ್ರದಾಯ, ಆಚರಣೆಗಳು ಉಳಿದುಕೊಂಡು ಬಂದಿವೆ. ವರ್ಷದಲ್ಲಿ ಶಿವರಾತ್ರಿ ಮತ್ತು ಯುಗಾದಿಗೆ ಎರಡು ಸಾರೆ ಜಾತ್ರೆ ಅಗುತ್ತದೆ. ಆದರೆ ಅಕ್ಕಮಹಾದೇವಿ,



ಕದಳಿ ಗವಿಯ ಹೊರನೋಟ



ಕದಳಿ ಗವಿಯ ಒಳನೋಟ– ಅಕ್ಕನ ಐಕ್ಯ ಸ್ಥಳ

ಅಲ್ಲಮಪ್ರಭುಗಳ ಹೆಸರಿನಲ್ಲಿ ಯಾವುದೇ ಆಚರಣೆಗಳು ಇಲ್ಲಿ ನಡೆಯುವುದು ಕಂಡುಬರುವದಿಲ್ಲ. ಇಬ್ಬರೂ ಇಲ್ಲಿ ಐಕ್ಯರಾದರೆಂಬ ಸಂಗತಿ ಮಾತ್ರ ಸ್ಪಷ್ಟವಾಗಿ ಕೇಳಿಬರುತ್ತದೆ.

***

# ಗ್ರಂಥಋಣ

ಅನುಪಮ ಶರಣರು
ಬಿ. ಮಹಾದೇವಪ್ಪ
ಅರಿವು ಆಚಾರ ಪ್ರಕಟನಾಲಯ, ಯಾದಗಿರಿ, ೨೦೦೦

ಇಳಿಹಾಳ ಬೊಮ್ಮಯ್ಯ,
ಚೆನ್ನಕ್ಕ ಯಲಿಗಾರ,
ಮಲ್ಲಿಕಾರ್ಜುನ ಜೋಳದ, ಇಲಾಳ, ತಾ.ಜಿ. ಬಾಗಲಕೋಟ, ೧೯೭೮

ಉಪ್ಪಲದಿನ್ನಿ ಮುಗ್ಧ ಸಂಗಮೇಶ್ವರ ಪುರಾಣ,
ಸಂ. ಡಾ. ವಿ. ಶಿವಾನಂದ
ಬಸವತತ್ವ ಪ್ರಚಾರ ಗ್ರಂಥಮಾಲೆ ಶ್ರೀ ವಿರಕ್ತಮಠ
ಬಸವನ ಬಾಗೇವಾಡಿ, ೨೦೦೦

ಕನ್ನಡ ಜಾನಪದ ಗೀತಗಳು
ಡಾ. ಬಿ.ಎಸ್. ಗದ್ದಗಿಮಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (ದ್ವಿ.ಮು.) ೧೯೬೯

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೬
ಮಹಾರಾಷ್ಟ್ರದ ಕನ್ನಡ ಶಾಸನಗಳು
ಡಾ. ಜಿ. ಎನ್. ಉಪಾಧ್ಯ ಡಾ. ದೇವರಕೊಂಡಾರಡ್ಡಿ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೧

ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು
ಡಾ. ಜೆ. ಎಂ.ನಾಗಯ್ಯ
ಶ್ರೀ ಚನ್ನಬಸವೇಶ್ವರ ಸಂಸ್ಥಾನಮಠ, ಹಾರಕೂಡ, ೨೦೦೪

ಕಾಯಕವೀರ ಮೋಳಿಗೆ ಮಾರಯ್ಯ
ಎಚ್. ಕಾಶೀನಾಥರಡ್ಡಿ
ಬಸವತೀರ್ಥ ಪ್ರಕಾಶನ, ಹುಮನಾಬಾದ-೨೦೦೪

ಕೂಡಲ ಸಂಗಮ- ಬಸವಕಲ್ಯಾಣ ಪುನರುತ್ಥಾನ ಪಕ್ಷಿನೋಟ
ಡಾ. ಎಸ್.ಎಂ.ಜಾಮದಾರ,
ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೦೬

ಕೆಂಭಾವಿ ಭೋಗಣ್ಣ
ಶ್ರೀಮತಿ ಕಾಶೀಬಾಯಿ ಎಸ್. ಭೋಗಶೆಟ್ಟಿ
ವೈಷ್ಣವಿ ಪ್ರಕಾಶನ, ಗುಲಬರ್ಗಾ, ೨೦೧೨

ಕೆಂಭಾವಿ ಶ್ರೀ ಭೋಗೇಶ್ವರ ಪುರಾಣ
ಸಿ. ಕೆ. ಎಚ್. ಶಾಸ್ತ್ರಿ
ಕೈಲಾಸರತ್ನಂ ಪ್ರಕಾಶನ, ಪಂಚಾಕ್ಷರಿ ನಗರ, ಗದಗ, ೨೦೦೯

ಕೊಂಡಗುಳಿ ಕೇಶಿರಾಜ
ಡಾ. ಎಸ್. ಎಂ. ಹಿರೇಮಠ
ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು-೨೦೦೨

ಗಜೇಶ ಮಸಣಯ್ಯ
ಶ್ರೀ ಆರ್. ಎಸ್. ಸ್ವಾಮಿ
ಬಸವಾದಿ ಶರಣ ಸಾಹಿತ್ಯ ಕೇಂದ್ರ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೮

ಗೊಬ್ಬುರು ಶ್ರೀ ಬಿಬ್ಬಿ ಬಾಚರಸರು
ಬಸವಲಿಂಗ ಸೊಪ್ಪಿಮಠ
ಶ್ರೀ ಗಾಂಜಿಗುಡಿಮಠ ಪ್ರಕಾಶನ ಗೊಬ್ಬೂರು, ತಾ. ದೇವದುರ್ಗ, ೧೯೯೭

ಜಾನಪದ ಸಾಹಿತ್ಯದಲ್ಲಿ ಶರಣರು
ಶಾಂತಾದೇವಿ ಮಾಳವಾಡ,
ಕದಳಿ-ಮಹಿಳಾ ವೇದಿಕೆ, ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತು,
ಬೆಂಗಳೂರು, ೨೦೦೦

ನಾರಾಯಣಪೂರ
ವೀರಶೆಟ್ಟಿ ಎಂ.ಪಾಟೀಲ
ಪ್ರತಿಮಾ ಪ್ರಕಾಶನ, ಹುಣಸಗೇರಾ, ೨೦೧೧

ನೀಲಮ್ಮನ ನಿಲುವು
ನದಾಫ ಎಂ.ಎಚ್.
ಎಸ್.ಎಸ್.ಪಾಟೀಲ, ಶ್ರೀ ನೀಲಗಂಗಾ ಪ್ರಕಾಶನ, ತಂಗಡಗಿ, ೧೯೯೯

ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೧೦
ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪೂರ,೨೦೦೭

ಬಸವ ಕಲ್ಯಾಣ ತಾಲ್ಲೂಕು ದರ್ಶನ
ಡಾ. ಶಂಕರ ಡಿ. ಮೂಗಿ
ಐಬಿಎಚ್ ಪ್ರಕಾಶನ, ಗಾಂಧಿನಗರ ಬೆಂಗಳೂರು, ೧೯೮೫

ಬಸವ ಪರಿವಾರ
ಡಾ.ಜಯಶ್ರೀ ದಂಡೆ, ಡಾ. ವೀರಣ್ಣ ದಂಡೆ (ಸಂ.)
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ,೨೦೧೨

ಬಸವನ ಬಾಗೇವಾಡಿಯ ಕ್ಷೇತ್ರದರ್ಶನ
ಲ.ಅ.ಶಿರಹಟ್ಟಿ,
ಬಸವೇಶ್ವರ ದೇವಾಲಯ ಸಂಸ್ಥೆ, ಬಸವನಬಾಗೇವಾಡಿ, ೧೯೭೪

ಬಸವನ ಬಾಗೇವಾಡಿ ಮಂಗಳವಾಡ
ಡಾ. ಜಯಶ್ರೀ ದಂಡೆ
ಶ್ರೀ ಸಿದ್ಧಗಂಗಾ ಪ್ರಕಾಶನ ಸಿದ್ಧಗಂಗಾಮಠ, ತುಮಕೂರು, ೨೦೦೮

ಬಸವೇಶ್ವರರ ಸಮಾಕಾಲೀನರು (೪ನೇ ಮುದ್ರಣ)
ಬಸವ ಸಮಿತಿ,
ಬೆಂಗಳೂರು, ೨೦೦೭

ಬೀದರ ಜಿಲ್ಲೆಯ ಶರಣ ಸ್ಮಾರಕಗಳು
ಡಾ. ಸೋಮನಾಥ ಯಾಳವಾರ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,-೨೦೦೬

ಭೋಜಪ್ಪದೇಸಾಯಿ
ಸಿದ್ಧರಾಮ ಉಪ್ಪಿನ, ಬಸವರಾಜ ದೇಸಾಯಿ
ರಂಗ ಪರಿಕರ ಪ್ರಕಾಶನ, ಶಹಪೂರ, ೨೦೦೦

ಮಂಗಳವಾಡ ಮತ್ತು ಇತರ ಲೇಖನಗಳು
ಶಿವಕುಮಾರ ಪಾವಟೆ
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು
ಮೈಸೂರು, ೨೦೦೯

ಮಹಾದೇವಿಯಕ್ಕನ ಕ್ಷೇತ್ರಗಳು
ಲೀಲಾದೇವಿ ಆರ್. ಪ್ರಸಾದ
ಅಕ್ಕಮಹಾದೇವಿ ಸಮಿತಿ ಉಡುತಡಿ
ಜಿಲ್ಲಾ ಶಿವಮೊಗ್ಗ, ೨೦೧೨

ಮಾರ್ಗ ಸಂಪುಟಗಳು(೧-೬)
ಡಾ. ಎಂ. ಎಂ. ಕಲಬುರ್ಗಿ
ಸಪ್ನ ಬುಕ್ ಹೌಸ್ ಬೆಂಗಳೂರು, ೨೦೧೦

ಮೊಲ್ಲೆಬೊಮ್ಮಯ್ಯಗಳ ಕಾವ್ಯ
ಡಾ. ಬಿ. ವಿ. ಶಿರೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು
ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೭

ನುಲಿಯ ಚಂದಯ್ಯ
ಡಾ. ವ್ಹಿ. ಜಿ. ಪೂಜಾರ
ಬಸವಾದಿ ಶರಣ ಸಾಹಿತ್ಯ ಕೇಂದ್ರ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೦

ರಾಯಚೂರು ಜಿಲ್ಲೆಯ ಶರಣರು
ಡಾ. ಚನ್ನಬಸವ ಹಿರೇಮಠ, ಸಿದ್ಧರಾಮಯ್ಯ ಹಿರೇಮಠ
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು
ಜಿಲ್ಲಾ ಘಟಕ ರಾಯಚೂರು, ೨೦೦೦

ಲದ್ದೆಯ ಸೋಮಣ್ಣ
ಡಾ. ಎಚ್. ಚಂದ್ರಶೇಖರ
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು
ಮೈಸೂರು, ೨೦೦೧

ಶಂಕರದಾಸಿಮಯ್ಯ ಪುರಾಣ: ಒಂದು ಅಧ್ಯಯನ
ಡಾ. ಅನ್ನಪೂರ್ಣ ಜಾಲವಾದಿ
ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೯

ಶಬ್ದ ಸೋಪಾನ
ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ
ಶ್ರೀ ಗಳಂಗಳಪ್ಪ ಪಾಟೀಲ (ಮೆ। ಎಸ್.ಬಿ.ಪಾಟೀಲ)
ಬಸವಾದಿ ಶರಣಸಾಹಿತ್ಯ ಕೇಂದ್ರ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೯

ಶರಣ ಅಂಬಿಗರ ಚೌಡಯ್ಯ
ಗುರುಲಿಂಗಪ್ಪ ಧಬಾಲೆ
ಬಸವಾದಿ ಶರಣ ಸಾಹಿತ್ಯ ಕೇಂದ್ರ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೯

ಶರಣ ಗೊಲ್ಲಾಳ
ಡಾ. ಶಕುಂತಲಾ ಸಿದ್ಧರಾಮ ದುರಗಿ
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೦೯

ಶರಣ ಕ್ಷೇತ್ರಗಳು
ಪ್ರಧಾನ ಸಂಪಾದಕರು : ಗೊ.ರು.ಚನ್ನಬಸಪ್ಪ
ಸಂಪಾದಕರು : ಡಾ. ಬಸವರಾಜ ಮಲಶೆಟ್ಟಿ
ಅಖಿಲಭಾರತ ಶರಣಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦

ಶರಣಕ್ಷೇತ್ರ ಮುದನೂರು
ಪ್ರೊ. ಆರ್. ರಾಚಪ್ಪ
ಬಸವಾದಿ ಶರಣ ಸಾಹಿತ್ಯ ಕೇಂದ್ರ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೯

ಶರಣ ಚರಿತಾಮೃತ
ಸಿದ್ಧಯ್ಯ ಪುರಾಣಿಕ,
ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೭೭(ದ್ವಿ.ಮು.)

ಶರಣ ಜೀವನ
ಡಾ. ಜಯಶ್ರೀ ದಂಡೆ
ಕವಿಮಾರ್ಗ ಪ್ರಕಾಶನ, 'ತೇಜಸ್ವಿನಿ', ಸರಸ್ವತಿಪುರ
ವಿಶ್ವವಿದ್ಯಾಲಯ ಅಂಚೆ, ಕಲಬುರ್ಗಿ, ೨೦೦೮

ಶರಣ ಪರಿವಾರ
ಡಾ. ವೀರಣ್ಣ ದಂಡೆ, ಡಾ. ಜಯಶ್ರೀ ದಂಡೆ (ಸಂ.)
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೨

ಶಾಸನಗಳಲ್ಲಿ ಶಿವಶರಣರು
ಡಾ. ಎಂ. ಎಂ. ಕಲಬುರ್ಗಿ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯಮಠ, ಗದಗ, ೧೯೭೮

ಶಿವಯೋಗಿ ಸಿದ್ಧರಾಮ
ಡಾ. ಎಂ.ಬಿ.ಕೊಟ್ರಶೆಟ್ಟಿ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

ಶಿವಶರಣ ಕಥಾರತ್ನ ಕೋಶ
ತ.ಸು.ಶಾಮರಾವ
ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೭

ಶಿವಶರಣ ಹರಳಯ್ಯ
ಚಂದ್ರಶೇಖರ ಎಸ್. ಹರಸೂರ
ವಿಶ್ವಪ್ರಚಾರ ಸಮಿತಿ, ಗುಲಬರ್ಗಾ, ೨೦೦೮

ಶ್ರೀ ಬಸವೇಶ್ವರ ದೇವಸ್ಥಾನ ಬಸವಕಲ್ಯಾಣ
ಶ್ರೀ ಬಾಬಾಸಾಹೇಬ ವಾರದ, ಸೋಲಾಪೂರ
ಶ್ರೀ ಬಸವೇಶ್ವರ ದೇವಸ್ಥಾನ ಪಂಚಕಮಿಟಿ
ಬಸವಕಲ್ಯಾಣ, ೧೯೬೭

ಶ್ರೀಶೈಲ ಪರಿಸರ : ಸಾಂಸ್ಕೃತಿಕ ಅಧ್ಯಯನ
ತೆಲುಗಿನಿಂದ ಕನ್ನಡಕ್ಕೆ : ಡಾ. ಜಾಜಿ ದೇವೇಂದ್ರಪ್ಪ
ಪ್ರಭುದೇವರ ಜನಕಲ್ಯಾಣ ಸಂಸ್ಥೆ
ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸಂಡೂರು, ೨೦೦೯

ಶ್ರೀ ಭೋಗೇಶ್ವರ ಪುರಾಣ
ಸಂ. ಎಸ್.ಎಸ್.ಬಾಣದ
ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೨

ಸಮಗ್ರ ವಚನ ಸಂಪುಟಗಳು (ದ್ವಿ.ಮು.)
ಸಂಪಾದಕರು, ಡಾ. ಎಂ.ಎಂ.ಕಲಬುರ್ಗಿ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧

ಹಂತಿ ಹಾಡುಗಳು
ಡಾ. ದೇವೇಂದ್ರಕುಮಾರ ಹಕಾರಿ (ಸಂ.)
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

Basavesvara and his Times
Dr. P. B. Desai
Basava samithi, Basava Bhavan
Bangalore, 2006

***

**ಗ್ಯಾಸೆಟ್ಟಿಯರ್‌ಗಳು :**

ವಿಜಾಪುರ ಜಿಲ್ಲೆ (ಬಾಗಲಕೋಟ ಜಿಲ್ಲೆಯೂ ಸೇರಿದಂತೆ)
ಮುಖ್ಯಸಂಪಾದಕರು, ಡಾ. ಆರ್. ಮುನಿಸ್ವಾಮಿ
ಕರ್ನಾಟಕ ಸರ್ಕಾರ, ೧೯೯೯

ಗುಲಬರ್ಗಾ ಜಿಲ್ಲೆ
ಮುಖ್ಯಸಂಪಾದಕರು, ಎಂ.ಬಿ.ಪಾಟೀಲ
ಕರ್ನಾಟಕ ಸರ್ಕಾರ, ೧೯೯೭

Gazetteer of India karnataka state
Bidar District
k. Abhishankar, chief editor
Government of karnataka publication, 1977

***

## ಲೇಖನಗಳು

**ಕೋಟೆಗಳು,** ಎಸ್.ಕೆ. ಅರುಣಿ,
– ಕನ್ನಡ ವಿಷಯ ವಿಶ್ವಕೋಶ: ಇತಿಹಾಸ ಮತ್ತು ಪುರಾತತ್ತ್ವ
ಮೈಸೂರು ವಿಶ್ವವಿದ್ಯಾಲಯ, ಮೈಸೂರು,

**ಬಸವಕಲ್ಯಾಣದ ಕೋಟೆ,** ಡಾ. ರು.ಮ.ಷಡಕ್ಷರಯ್ಯ,
–ನಾಗಾಭಿನಂದನ, ಎಂ.ಜಿ.ನಾರಗರಾಜ ಅಭಿನಂದನ ಗ್ರಂಥ,
ಸಂ. ಎಚ್.ಎಸ್. ಗೋಪಾಲರಾವ, ೧೯೯೪.

**ಮಹಾಮಹಿಮ ಕೆಂಭಾವಿ ಭೋಗಣ್ಣನವರು,** ನಿಂಗನಗೌಡ ದೇಸಾಯಿ,
–ಸಗರನಾಡ ದರ್ಶನ, ಸಂ. ಎ. ಕೃಷ್ಣ ಸುರಪುರ, ೧೯೮೫

**ವಚನಕಾರ ಚಿಕ್ಕಯ್ಯ ಮತ್ತು ಚಿಕ್ಕಯ್ಯ ಪಂಡಿತ : ಒಂದು ಮರುಪರಿಶೀಲನೆ,**
–ಎಚ್. ಚಂದ್ರಶೇಖರ, ಬಸವ ಪಥ ೨೫–೧೧, ಫೆಬ್ರುವರಿ ೨೦೦೪

**ಸುರಪುರ ಪ್ರಾದೇಶಿಕ ಕಲೆ,** (ಅಪ್ರಕಟಿತ), ನಿಂಗನಗೌಡ ದೇಸಾಯಿ, ಪರಸನಹಳ್ಳಿ

***

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

"ಶರಣ ಸ್ಮಾರಕಗಳ ಕ್ಷೇತ್ರಕಾರ್ಯ ಯೋಜನೆ" (ಬಸವಾದಿ ಶರಣರ, ಶರಣ ಸ್ಥಳಗಳ ಬಗೆಗಿನ ಮೌಖಿಕ ಸಾಹಿತ್ಯ / ಮಾಹಿತಿಗಳ ಸಂಗ್ರಹ ಮತ್ತು ದಾಖಲೀಕರಣ) ಎಂಬ ಸಂಶೋಧನ ಯೋಜನೆಯನ್ನು ಕೈಕೊಂಡವರು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳಾದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರು. ಈ ಯೋಜನೆಯಡಿ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ೧೨ನೇ ಶತಮಾನದ ಶರಣರ ಹಾಗೂ ಶರಣ ಸ್ಮಾರಕಗಳಿಗೆ ಸಂಬಂಧಿಸಿದ ಮೌಖಿಕ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಜೊತೆಗೆ ಶರಣ ಸ್ಮಾರಕಗಳಿಗೆ ಸಂಬಂಧಿಸಿದ ಸುಮಾರು ೫೦೦ ಛಾಯಾಚಿತ್ರಗಳನ್ನು ಈ ಸಂಪುಟದಲ್ಲಿ ಅಳವಡಿಸಿದ್ದಾರೆ. ಇದರಿಂದ ಮೌಖಿಕ ಮಾಹಿತಿ ಮತ್ತು ಸಾಹಿತ್ಯ ಪರಂಪರೆಗಳೆರಡನ್ನೂ ಎದುರಿಗೆ ಇಟ್ಟು-ಕೊಂಡು ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

ಇಂತಹ ಮಹತ್ವದ ಯೋಜನೆಯನ್ನು ಕೈಕೊಂಡು ಈ ಸಂಪುಟವನ್ನು ಹೊರತರುತ್ತಿರುವ ಸಂಶೋಧಕರೂ ಸಂಪಾದಕರೂ ಆದ ಡಾ। ಜಯಶ್ರೀ ದಂಡೆ ಹಾಗೂ ಡಾ। ವೀರಣ್ಣ ದಂಡೆ ಅವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.೫೮೫೧೦೬